ದಲಿತ ಮಹಿಳಾ ಸಂಕಥನ

(ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕಿ
ನೇತ್ರಾವತಿ ಕೆ.ವಿ.

ಮಾರ್ಗದರ್ಶಕರು
ಡಾ. ಮಂಜುನಾಥ ಬೇವಿನಕಟ್ಟಿ
ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬
೨೦೦೭

ದಲಿತ ಮಹಿಳಾ ಸಂಕಥನ

(ಪಿಹೆಚ್. ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾ ಪ್ರಬಂಧ)

ಸಂಶೋಧಕಿ

ನೇತ್ರಾವತಿ ಕೆ.ವಿ.

ಮಾರ್ಗದರ್ಶಕರು

ಡಾ. ಮಂಜುನಾಥ ಬೇವಿನಕಟ್ಟಿ

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩೨೭೬

೨೦೦೭

ಕೃತಜ್ಞತೆ

ಕನ್ನಡ ವಿಶ್ವವಿದ್ಯಾಲಯದಲ್ಲಿ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟ ಕುಲಪತಿಗಳಾಗಿದ್ದ ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಬಿ.ಎ. ವಿವೇಕ್ ರೈ, ಪ್ರಸ್ತುತ ಕುಲಪತಿಗಳಾಗಿರುವ ಡಾ. ಕೆ.ವಿ. ನಾರಾಯಣ, ಕುಲಸಚಿವರಾಗಿದ್ದ ಡಾ. ಕರೀಗೌಡ ಬೀಚನಹಳ್ಳಿ, ಪ್ರಸ್ತುತ ಕುಲಸಚಿವರಾದ ವಿ.ಶಂಕರ್, ಅಧ್ಯಯನಾಂಗದ ನಿರ್ದೇಶಕರಾದ ಡಾ. ಪಾಂಡುರಂಗ ಬಾಬು ಅವರುಗಳಿಗೆ ಕೃತಜ್ಞತೆಗಳು.

ಸಲಹೆ, ಸಹಕಾರಗಳನ್ನು ನೀಡಿ ಪ್ರೋತ್ಸಾಹಿಸಿ ಮಾರ್ಗದರ್ಶನ ನೀಡಿದ ಡಾ. ಮಂಜುನಾಥ ಬೇವಿನಕಟ್ಟಿ ಅವರು ನನ್ನ ಈ ಪ್ರಬಂಧ ರಚನೆಗೆ ಮುಖ್ಯ ಕಾರಣಕರ್ತರು ಅವರಿಗೆ ತುಂಬು ಹೃದಯದ ವಂದನೆಗಳು. ವಿಭಾಗದ ಗುರುಗಳಾದ ಪ್ರೊ. ಸ.ಚಿ. ರಮೇಶ್, ಪ್ರವಾಚಕರಾದ ಡಾ. ಮೊಗಳ್ಳಿ ಗಣೇಶ್, ಮುಖ್ಯಸ್ಥರಾದ ಡಾ. ಹೆಬ್ಬಾಲೆ ಕೆ ನಾಗೇಶ್, ಡಾ. ಸಿ.ಟಿ. ಗುರುಪ್ರಸಾದ್, ಡಾ. ಹರಿಶ್ಚಂದ್ರ ದಿಗ್ಸಂಗಿಕರ್, ಸಿಬ್ಬಂದಿ ವರ್ಗದವರಾದ ಬಸವರಾಜ್ ಮತ್ತು ನಬಿ ಇವರುಗಳಿಗೆ ನನ್ನ ಕೃತಜ್ಞತೆಗಳು.

ನನ್ನ ಅಧ್ಯಯನ ವಿಷಯದ ಆಯ್ಕೆಗೆ ಹಾಗೂ ನನ್ನ ಬೌದ್ಧಿಕ ಆಲೋಚನೆಗಳು ವಿಸ್ತಾರವಾಗುವುದಕ್ಕೆ ಮುಖ್ಯ ಕಾರಣವಾದ ನನ್ನ ಸಖಿಗೆ ಹಾಗೂ ಸಖಿ ಬಳಗಕ್ಕೆ ತುಂಬು ಹೃದಯದ ವಂದನೆಗಳು. ನನ್ನ ಅಧ್ಯಯನಕ್ಕೆ ಸಲಹೆ, ಸಹಕಾರ ನೀಡಿದ ಡಾ. ಬಿ.ಎಂ. ಪುಟ್ಟಯ್ಯ, ಶೈಲಜಾ ಹಿರೇಮಠ, ಡಾ. ಎಂ. ಭಾಗ್ಯಲಕ್ಷ್ಮಿ, ಅಶೋಕ್ ಕುಮಾರ್ ರಂಜೇರೆ, ಡಾ. ಎಂ. ಉಷಾ, ಡಾ. ಎ.ಎಸ್. ಪ್ರಭಾಕರ್, ಡಾ. ಹಿ.ಚಿ. ರಾಮಚಂದ್ರೇಗೌಡ, ಅಶೋಕ್ ಸಾಲಪ್ಪ, ಮೈಸೂರು ರಘು, ದು. ಸರಸ್ವತಿ, ಡಾ. ಸಿ.ಜಿ. ಲಕ್ಷ್ಮೀಪತಿ, ಚನ್ನಣ್ಣ ವಾಲೀಕಾರ, ಬಂಜೆಗೆರೆ ಜಯಪ್ರಕಾಶ್, ಸಿ. ದಾನಪ್ಪ ಇವರುಗಳಿಗೆ ನನ್ನ ವಂದನೆಗಳು.

ನನ್ನ ವಿದ್ಯಾಭ್ಯಾಸಕ್ಕಾಗಿ ಶ್ರಮಿಸಿದ ಅಪ್ಪ, ಅಮ್ಮ, ಅಣ್ಣ ಅವರುಗಳಿಗೆ, ಸಹಕಾರ ನೀಡಿ ಪ್ರೋತ್ಸಾಹಿಸಿದ ಗೆಳೆಯ ಅಮರ್‌ನಾಥ್, ಅತ್ತೆ, ಮಾವ, ಅರ್ಜುನ್, ರವಿ, ಸುಧಾ ಅವರುಗಳಿಗೆ ಸ್ನೇಹಿತರಾದ ಅರುಣ್ ಕುಮಾರ್ ಜಿ, ಸುಮಂಗಲ, ಸುಧಾ, ತಾರಾ, ಸವಿತ, ವಿಜಯಲಕ್ಷ್ಮಿ, ಕೃಷ್ಣವೇಣಿ, ಜಗದೀಶ್, ಚಂದ್ರಪ್ಪ, ನಿಂಗಪ್ಪ, ಯರ್ರಿಸ್ವಾಮಿ, ಜಬ್ಬೀರ್, ಓಬಯ್ಯ, ಮಾರ್ಕಂಡೇಯ, ವಿಶಾಲಾಕ್ಷಿ ಮತ್ತು ಕ್ಷೇತ್ರಕಾರ್ಯದಲ್ಲಿ ಸಹಕರಿಸಿ ಮಾಹಿತಿ ನೀಡಿದ ಎಲ್ಲಾ ವಕ್ತೃಗಳಿಗೆ, ಅಧ್ಯಯನಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಅಂದವಾಗಿ ಡಿ.ಟಿ.ಪಿ ಮಾಡಿಕೊಟ್ಟ ಕೆ.ವಿ.ಆಂಜನೇಯ ಅವರಿಗೆ ನನ್ನ ಪ್ರೀತಿಯ ವಂದನೆಗಳು ಸಲ್ಲುತ್ತವೆ.

ನೇತ್ರಾವತಿ ಕೆ.ವಿ.

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಜಾನಪದ ಅಧ್ಯಯನ ವಿಭಾಗದಲ್ಲಿ ಪ್ರವಾಚಕರಾಗಿರುವ ಡಾ. ಮಂಜುನಾಥ ಬೇವಿನಕಟ್ಟಿ ಅವರ ಮಾರ್ಗದರ್ಶನದಲ್ಲಿ 'ದಲಿತ ಮಹಿಳಾ ಸಂಕಥನ' ಎಂಬ ವಿಷಯದಲ್ಲಿ ಪಿಎಚ್.ಡಿ ಪದವಿಗಾಗಿ ಸಂಶೋಧನೆ ಮಾಡಿದುದರ ಫಲ ಈ ಮಹಾ ಪ್ರಬಂಧ. ಈ ಮೊದಲು ಈ ಮಹಾ ಪ್ರಬಂಧವನ್ನು ಯಾವುದೇ ವಿಶ್ವವಿದ್ಯಾನಿಲಯದ ಯಾವುದೇ ಪದವಿ ಅಥವಾ ಡಿಪ್ಲೊಮಗಾಗಿ ಸಲ್ಲಿಸಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : 22.10.07

ಸ್ಥಳ : ವಿದ್ಯಾರಣ್ಯ.

ಸಂಶೋಧಕಿ

(ನೇತ್ರಾವತಿ ಕೆ.ವಿ)

ಸಂಶೋಧನಾ ವಿದ್ಯಾರ್ಥಿನಿ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿ.ವಿ, ಹಂಪಿ,

ವಿದ್ಯಾರಣ್ಯ-೫೮೩೨೭೬.

ಮಾರ್ಗದರ್ಶಕರ ಪ್ರಮಾಣ ಪತ್ರ

ಶ್ರೀಮತಿ ನೇತ್ರಾವತಿ ಕೆ.ವಿ ಇವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ **'ದಲಿತ ಮಹಿಳಾ ಸಂಕಥನ'** ಎಂಬ ಮಹಾ ಪ್ರಬಂಧವನ್ನು ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಈ ಮಹಾ ಪ್ರಬಂಧವನ್ನು ಭಾಗಶಃ ಆಗಲಿ, ಪೂರ್ಣವಾಗಿ ಆಗಲಿ ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಪದವಿಗಾಗಿ ಈ ಹಿಂದೆ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೨೨/೧೦/೨೦೦೭

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು


(ಡಾ. ಮಂಜುನಾಥ ಬೇವಿನಕಟ್ಟಿ)

ಪ್ರಾಧ್ಯಾಪಕರು

ಕನ್ನಡ ವಿ.ವಿ, ಹಂಪಿ,

ವಿದ್ಯಾರಣ್ಯ-೫೮೩೨೭೬.

ದಲಿತ ಮಹಿಳಾ ಸಂಕಥನ



ಸ್ತ್ರೀ ಜಗತ್ತು ಸಂಪುಟ-6 ಸಂಚಿಕೆ.7 ಮಾರ್ಚ್ ೨೦೦7,

ಕೈಯಲ್ಲಿ ಕಸಪೊರಕೆ ನೆತ್ತಿಲಿ ಮಕ್ಕರಿ
ಹೊತ್ತು ಮೂಡುವ ಮೊದಲೇ
ಕಸಬಾಚಿ ಕಸವಾದ ಓ ಅಕ್ಕ ತಂಗಿಯರೇ
ನೀವೇನೇ ಈ ಲೋಕ ಬೆಳಗುವ ಚುಕ್ಕೆ
ನೀವಿಲ್ದೆ ಹೋದರೆ ಈ ನಗರ ಒಂದು ತಿಪ್ಪೆ

ಮುಂಜಾನೆ ಮಂಜಲ್ಲಿ ಮಾಗಿಯ ಚಳಿಯಲ್ಲಿ
ನಗರ ನಿದ್ರಿಸುವಾಗ ಕನಸು ಕರಗುವಾಗ
ತಬ್ಬೀದ ಕಂದನ್ನ ಒಬ್ಬಂಟಿ ಬಿಟ್ಟು
ಕವಿದ ಮಬ್ಬಿನಲ್ಲಿ ಕರಗಿ ಹೋಗುತ್ತೀರಿ
ಬೀದಿ ಬೀದಿ ಗುಡಿಸಿ ಬೆವರು ಹನಿಗಳ ಚೆಲ್ಲಿ
ಸೂರ್ಯನ ತೇರನ್ನು ಭೂಮಿಗಿಳಿಸಿ ತರುತ್ತೀರಿ

ಕಸದ ರಾಶಿಯನ್ನೇ ಕೈ ಹಾಕಿ ಬಾಚುವಿರಿ
ಕೊಚ್ಚೆ ಬಚ್ಚಲಿಗಿಳಿದು ಬರಿಗೈಲೆ ಬಳಿಯುವಿರಿ
ಬಾಚಿ ಬಳಿಯುವಾಗ ಎತ್ತಿ ಒಯ್ಯುವಾಗ
ಒಡೆದ ಗಾಜಿನ ಚೂರು ಅಂಗೈ ಅಂಗಾಲೊಕ್ಕು
ನೆಲಕೆ ಸುರಿದ ರಕ್ತ ರಂಗೋಲಿ ಬರೆದಿತ್ತು
ನೋವು ನೆತ್ತಿಗೇರಿ ಪ್ರಾಣವನೆ ಹಿಂಡಿತ್ತು

ಕೈ ಹಿಡಿದ ಗಂಡ ಮ್ಯಾನ್ ಹೋಲ್ ಪಾಲಾದ
ಕೈಗೆ ಬಂದ ಮಗ ಕರೆಂಟಿಗೆ ಬಲಿಯಾದ
ಕಣ್ಣೀನ ಕನಸೆಲ್ಲಾ ಹಿಂಗಿಂಗಿ ಬತ್ತೀತು
ಬಾಳಿನ ಕತೆಯಲ್ಲಿ ಕಣ್ಣೀರ ಹೊಳೆಯಾಯ್ತು
ದೇಹಾದ ಕಸವೆಲ್ಲಾ ದುಡಿಮೆಗೆ ಮುಡಿಪಾಯ್ತು
ಕುಲದಲ್ಲಿ ಕೀಳೆಂಬ ಹಣೆ ಪಟ್ಟಿ ನಿನಗಾಯ್ತು

ವರ್ಷಗಳೇ ಉರುಳಿದರೂ ನೀನಿನ್ನೂ ಕಂಕ್ರೇಟು ಕೂಲಿ
ಎಷ್ಟೇ ದುಡಿದರೂ ಕೂಡ ನಿನ್ನ ತುತ್ತಿನ ಚೀಲ ಖಾಲಿ ಖಾಲಿ
ನಿನ್ನ ಎಂಜಲು ತಿಂದು ಕಂಟ್ರ್ಯಾಕ್ಟರ್ ಕೊಬ್ಬಿದ
ನಿನ್ನ ನಿತ್ಯ ಕಾಯಕದಿಂದ ಈ ನಗರ ಸಿಂಗಾರ
ನಿನ್ನ ಬೆವರಿನ ಬೆಲೆಯ ಇನ್ನಾದ್ರೂ ತಿಳಿಯಮ್ಮ
ಪೊರಕೆ ಬಾವುಟ ಹಿಡಿದು ಹೋರಾಡಿ ನೀಗೆಲ್ಲು

ಕೆ. ರಾಮಯ್ಯ

ಅಧ್ಯಾಯ ೧. ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಮಹತ್ವ

೧.೧ ಹಿನ್ನೆಲೆ

೧.೨ ಅಧ್ಯಯನದ ಉದ್ದೇಶ

೧.೩ ಅಧ್ಯಯನದ ವ್ಯಾಪ್ತಿ

೧.೪ ಅಧ್ಯಯನದ ಮಹತ್ವ ಮತ್ತು ಸ್ವರೂಪ

೧.೫ ಅಧ್ಯಯನದ ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ

೧.೬ ಅಧ್ಯಯನದ ವಿಧಿ ವಿಧಾನಗಳು

೧.೭ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ - ೧
ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ಮಹತ್ವ

೧.೧ ಹಿನ್ನೆಲೆ

ಏಷ್ಯಾದಲ್ಲಿ ಐಡೆಂಟಿಟಿಯ ಚರ್ಚೆ ಎಪ್ಪತ್ತರ ದಶಕದಲ್ಲಿ ಶುರುವಾಯಿತು. ಈ ಸಂದರ್ಭದಲ್ಲಿ ಹಲವಾರು ಐಡೆಂಟಿಟಿಗಳ ಬಗ್ಗೆ ಚರ್ಚಿಸಲಾಯಿತು. ಭಾಷೆ, ಜನಾಂಗ, ಜಾತಿ, ಎಥ್ನಿಕ್, ಲಿಂಗ, ವರ್ಗ, ಸಂಸ್ಕೃತಿ, ವೃತ್ತಿ, ಆಚರಣೆ, ಆಹಾರ ಪದ್ಧತಿ, ಕಲೆ, ಸಾಹಿತ್ಯ ಮುಂತಾದವುಗಳು ಐಡೆಂಟಿಟಿಯ ಹಿನ್ನೆಲೆಯಲ್ಲಿ ಚರ್ಚೆಗೆ ಒಳಪಟ್ಟವು.

ಈ ಎಲ್ಲಾ ಚರ್ಚೆಗಳು ಉಪೇಕ್ಷಿತ ವಲಯಗಳ ಅಧ್ಯಯನ ಅಥವಾ ನಿರ್ಲಕ್ಷಿತ ವಲಯಗಳ ಅಧ್ಯಯನದ ಹಿನ್ನೆಲೆಯಲ್ಲಿ ಚರ್ಚಿಸಲ್ಪಟ್ಟಿದ್ದು ಪ್ರೊ. ಬರಗೂರರ ಉಪ ಸಂಸ್ಕೃತಿಮಾಲೆಯು ಇದರ ದಟ್ಟವಾದ ನೆರಳಿನ ಪಡಿಯಚ್ಚು. ಈ ಸಂದರ್ಭದಲ್ಲಿಯೇ ಹೆಚ್ಚು ಶೋಷಣೆಗೆ ಒಳಗಾದ ತಿರಸ್ಕೃತಕ್ಕೆ ಒಳಗಾದ ದಲಿತ ಸಮುದಾಯಗಳ ಬಗ್ಗೆ ಅಧ್ಯಯವಗಳು ಪ್ರಾರಂಭವಾದವು. ದಲಿತರ ಬಗ್ಗೆ ಅಧ್ಯಯನಗಳು ಪ್ರಾರಂಭವಾಗುವುದಕ್ಕಿಂತ ಮೊದಲು ಶೋಷಣೆಗೆ ಒಳಗಾದ ಅಪಮಾನಕ್ಕೊಳಗಾದ ದಲಿತ ಸಮುದಾಯಗಳ ಪ್ರಜ್ಞಾವಂತ ಯುವಕರೆಲ್ಲಾ ಸೇರಿ ಶೋಷಣೆಯ ಅರಿವನ್ನು ಜನಕ್ಕೆ ಮೂಡಿಸುವ ಸಲುವಾಗಿ ದಲಿತ ಸಂಘರ್ಷ ಸಮಿತಿ ಎಂಬ ಸಂಘಟನೆಯನ್ನು ಕಟ್ಟಿಕೊಂಡು ಹೋರಾಟ ಮಾಡಲು ಪ್ರಾರಂಭಿಸಿದವು. ಈ ಸಂದರ್ಭದಲ್ಲಿಯೇ ದಲಿತರ ಹಸಿವು, ನೋವು, ಶೋಷಣೆಯನ್ನು ತಿಳಿಸುವ ಸಲುವಾಗಿ ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಬಿ. ಕೃಷ್ಣಪ್ಪ, ದೇವಯ್ಯಹರವೆ, ಅರವಿಂದ ಮಾಲಗತ್ತಿ ಮುಂತಾದ ಪ್ರಸಿದ್ಧ ಸಾಹಿತ್ಯ ವಿದ್ವಾಂಸರೆಲ್ಲಾ ಸೇರಿಕೊಂಡು ದಲಿತ ಶೋಷಣೆಯ ಕುರಿತು ಕಥೆ, ಕವನ, ಕಾದಂಬರಿಗಳನ್ನು ಬರೆದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸುತ್ತಾ 'ಖಡ್ಗವಾಗಲಿ ಕಾವ್ಯ ಮಿಡಿವ ಜನರ ಪ್ರಾಣ ಮಿತ್ರ' ಎಂಬ ಘೋಷಣೆಯೊಂದಿಗೆ ಹೋರಾಟವನ್ನು ಸೃಜನಶೀಲ ರೀತಿಯಲ್ಲಿ ಅರಿವನ್ನು ಮೂಡಿಸುವ, ಶೋಷಣೆಯ ವಿರುದ್ಧ, ಶೋಷಣೆಗೆ ಪರಿಹಾರವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ತಮ್ಮ ಕಾರ್ಯವನ್ನು ನಿರ್ವಹಿಸಿದರು.

ಇದರ ದಟ್ಟ ಪ್ರಭಾವದಿಂದಲೇ ಶೋಷಣೆಗೆ ಒಳಗಾದ ಮಹಿಳೆ ಮತ್ತು ದಲಿತರ ಕುರಿತು ಅನೇಕ ಅಧ್ಯಯನಗಳು ನಡೆಯುತ್ತಿವೆ.

ನಮ್ಮ ಸಮಾಜದಲ್ಲಿ ದಲಿತರಿಗೆ ಸುದೀರ್ಘವಾದ ಇತಿಹಾಸವಿದೆ. ಆದರೆ ಅದು ಮೇಲುನೋಟಕ್ಕೆ ಕಾಣಿಸುವುದಿಲ್ಲ. ದಲಿತ ಸಂಸ್ಕೃತಿಯನ್ನು ಮೌಖಿಕ ಸಾಹಿತ್ಯದಲ್ಲಿ ಆಚರಣಾತ್ಮಕ ಕಲೆಗಳಾದ ಹಬ್ಬ, ಜಾತ್ರೆ, ಉತ್ಸವ, ಜೀವನಾವರ್ತನ ಆಚರಣೆಗಳಾದ ಹುಟ್ಟು, ಯೌವ್ವನ, ಮದುವೆ, ಸಾವುಗಳ ಸಂದರ್ಭದಲ್ಲಿ ಮಾಡುವ ವಿಧಿ-ವಿಧಾನಗಳಲ್ಲಿ ಅವರ ಸುಧೀರ್ಘ ಇತಿಹಾಸವನ್ನು ಗುರುತಿಸಿಕೊಳ್ಳಬಹುದು. ಇವುಗಳೆಲ್ಲವುಗಳಲ್ಲಿಯೂ ದೇಶೀ ಸಂಸ್ಕೃತಿಯ ಅಭಿವ್ಯಕ್ತಿಯು ಮೇಳೈಸಿರುತ್ತದೆ. ಆ ಎಲ್ಲಾ ಅಭಿವ್ಯಕ್ತಿಗಳು ಅಲಿಖಿತ ಮಾಧ್ಯಮದಿಂದಲೇ ಕೂಡಿರುವಂತಹದು. ಇಡೀ ಜಾನಪದ ಇಂತಹ ಅಭಿವ್ಯಕ್ತಿಯಿಂದ ಕೂಡಿರುವಂತಹದು.

ದಲಿತರ ಎಲ್ಲಾ ಸಂಸ್ಕೃತಿಗಳಲ್ಲಿಯೂ ನಮಗೆ ಕಾಣುವುದು, ವೈದಿಕರು ದಲಿತರಿಗೆ ಹಾಕಿಕೊಟ್ಟ ಎಲ್ಲಾ ಪರದೆಗಳನ್ನು ಸೀಳಿ ತಮ್ಮ ಲೋಕದ ನಿಜವಾದ ಜೀವನ ಪ್ರೀತಿಯನ್ನು ಲೋಕಕ್ಕೆ ಪರಿಚಯಿಸುವುದನ್ನು

ಕಾಣಬಹುದು. ಇಂತಹ ಎಲ್ಲಾ ವೈಚಾರಿಕತೆಗಳನ್ನು ಸಾಂಸ್ಕೃತಿಕವಾಗಿಯೇ ಕಟ್ಟಿಕೊಡಲಾಗುತ್ತದೆ. ಈ ಕಾರಣದಿಂದಲೇ ಇವರ ಸಮುದಾಯಗಳಿಗಿಂತ ದಲಿತ ಸಮುದಾಯ ಭಿನ್ನವಾಗಿ ನಿಲ್ಲುತ್ತದೆ.

ದಲಿತರ ಎಲ್ಲಾ ಪ್ರಾಚೀನ ಪರಂಪರೆಗಳು ಅಡಕವಾಗಿರುವ, ದಲಿತರ ಸಂಸ್ಕೃತಿಯಾಭಿವ್ಯಕ್ತಿಯಾಗಿರುವ ದಲಿತರ ಎಲ್ಲಾ ಜೀವನ ವಿಧಾನಗಳನ್ನು ಮರು ಅರ್ಥೈಸಿಕೊಳ್ಳಬೇಕಾಗಿದೆ. ಇದು ಈ ಸಂದರ್ಭದ ಅನಿವಾರ್ಯ ಕೂಡ ಆಗಿದೆ.

ದಲಿತರನ್ನು ನಾವು ಮುಖ್ಯವಾಗಿ ಗುರುತಿಸಬೇಕಾಗಿರುವುದು ಭೂಮಿ ಮತ್ತು ಶ್ರಮದ ನಡುವಿನ ಸಂಬಂಧದಲ್ಲಿ. ಇದನ್ನು ಬಸವಣ್ಣನವರು 'ಕಾಯಕವೇ ಕೈಲಾಸ' ಎಂಬ ತತ್ವದ ಮೂಲಕವೇ ವಿಸ್ತರಿಸಿದ್ದಾರೆ. ಬಸವಣ್ಣನವರು ದಲಿತ ಸಂಸ್ಕೃತಿಯಿಂದಲೇ ಇದನ್ನು ಪಡೆದುಕೊಂಡಿದ್ದಾರೆ. ದಲಿತರಲ್ಲಿ ಆಚರಣೆಯಲ್ಲಿರುವ ಕೃಷಿ ಮತ್ತು ಭೂಮಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಇದರ ಪಡಿಯಚ್ಚು ದಟ್ಟವಾಗಿರುವುದನ್ನು ನೋಡಬಹುದು. ಇಂತಹ ನಿಸರ್ಗ ನಿಷ್ಠ ತತ್ವವನ್ನೇ ಜೀವವಾಗಿಸಿಕೊಂಡ ದಲಿತರ ಸ್ಥಿತಿ ಏಕೆ ಕಾಲಾಂತರದಲ್ಲಿ ನಿಕೃಷ್ಟ ಸ್ಥಿತಿಗೆ ಇಳಿಯಿತು. ಕಾಲ ಘಟ್ಟಗಳಲ್ಲಿ ಹಂತ- ಹಂತದಲ್ಲಿ ದಲಿತರ ಮೇಲೆ ಜರುಗಿದ ಶೋಷಣೆಯ ಸ್ವರೂಪವನ್ನು ಅಂಬೇಡ್ಕರವರು ಸುದೀರ್ಘವಾಗಿ ವಿವರಿಸುತ್ತಾರೆ. ಆಧುನಿಕ ಸಂದರ್ಭದಲ್ಲಿ ದಲಿತರ ಇಂದಿನ ಸ್ಥಿತಿಗತಿಗಳಿಗೆ ಕಾರಣವಾದ ಪುರೋಹಿತಶಾಹಿ ವ್ಯವಸ್ಥೆ ಹಾಗೂ ಊಳಿಗಮಾನ್ಯಶಾಹಿ ವ್ಯವಸ್ಥೆಯು ದಲಿತರ ಮೇಲೆ ನಡೆಸಿರುವ ನಿಕೃಷ್ಟ ಘೋರ ಹಲ್ಲೆಗಳನ್ನು ಮೊದಲ ಬಾರಿಗೆ ಅಂಬೇಡ್ಕರವರು ಸುದೀರ್ಘ ವಿಶ್ಲೇಷಣೆಗೆ ಒಳಪಡಿಸಿ ಅದನ್ನು ಭಾರತೀಯ ದಲಿತರಿಗೆ ತಿಳಿಸಿಕೊಡಲು ಮುಂದಾದರು. ಅದಾದ ನಂತರ ನಡೆದ ದಲಿತ ಚಿಂತನೆಗಳೆಲ್ಲವೂ ಅಂಬೇಡ್ಕರವರ ವಾದದ ಆಶಯಗಳನ್ನು ಇಟ್ಟುಕೊಂಡೇ ಮುಂದುವರೆದಿರುವುದನ್ನು ನೋಡಬಹುದು.

ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ಚರಿತ್ರೆಯಲ್ಲಿ ದಲಿತರ ಬಗ್ಗೆ, ದಲಿತರ ಸ್ಥಿತಿಗತಿಯ ಬಗ್ಗೆ ತಿಳಿದುಕೊಳ್ಳಲು ನಮಗೆ ಲಭ್ಯವಿರುವ ಆಕರಗಳು ಕೆಲವೇ ಕೆಲವು. ಇವುಗಳನ್ನು ಇಟ್ಟುಕೊಂಡೇ ಇವು ಅಸ್ಪಷ್ಟ ಹಾಗೂ ಸ್ಥೂಲವಾಗಿರುವುದರಿಂದ ಇವುಗಳ ಮೂಲಕ ದಲಿತರ ಚರಿತ್ರೆಯನ್ನು ಗುರುತಿಸುವುದು ದೊಡ್ಡ ಸಾಹಸವೇ ಸರಿ ಎಂದು ದಲಿತ ಚರಿತ್ರೆಯನ್ನು ಶೋಧಿಸುವ ಇತಿಹಾಸಕಾರರು ಹೇಳುತ್ತಾರೆ.

ಪ್ರಾಚೀನ ಗ್ರಂಥಗಳಾದ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣ ವೇದಗಳಲ್ಲಿ ಮಹಿಳೆ ಕುರಿತಾದ ಅನೇಕ ಹೇಳಿಕೆಗಳು ಕಾಣಿಸಿಕೊಳ್ಳುತ್ತವೆ. ಋಗ್ವೇದದಲ್ಲಿ ಮಹಿಳೆಗೆ ಪುರುಷನಷ್ಟೇ ಸಮಾನ ಅವಕಾಶವಿತ್ತೆಂದು ಹೇಳಲಾಗಿದೆ. ಆದರೆ ಯಾವ ಮಹಿಳೆಗೆ? ಯಾವ ವರ್ಗದ ಮಹಿಳೆ? ಯಾವ ಜಾತಿಯ ಮಹಿಳೆ? ಎಂದು ಯೋಚಿಸಿದಾಗ ಅದು ದೊಡ್ಡ ಪ್ರಶ್ನೆಯಾಗುತ್ತದೆ. ಆದಕಾರಣ ದಲಿತ ಮಹಿಳೆ ಪ್ರಾಚೀನ ಕಾಲದಿಂದ ಇಂದಿನವರೆಗಿನ ದಲಿತ ಮಹಿಳೆಯನ್ನು ನಿರ್ವಚನ ಮಾಡಬೇಕಾಗಿದೆ. ದಲಿತ ಮಹಿಳೆಯರ ಸ್ಥಿತಿ ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗೆ ಯಾವ ಸ್ಥಿತಿಯಲ್ಲಿತ್ತೆಂದು ತಿಳಿಯಲು ಲಿಖಿತ ದಾಖಲೆಗಳಿಗಿಂತಲೂ ಪ್ರಮುಖವಾಗಿ 'ಕಾಲ'ವೆಂಬುದು ದಾಖಲೆಯಾಗಿ ನಿಲ್ಲುತ್ತದೆ. ಏಕೆಂದರೆ ಯಾವುದೇ ವಿಷಯದ ಆಳವಾದ ಅಧ್ಯಯನಕ್ಕೆ ಇಂದಿನ ವರ್ತಮಾನದ ಆಚರಣೆಗಳು, ಜನರ ಬದುಕು, ಅವರ ಸ್ಥಿತಿ ನಮಗೆ ಪ್ರಸ್ತುತದಲ್ಲಿ ದೊರಕುವ ನಿಜವಾದ ದೊಡ್ಡ ದಾಖಲೆ. ಈ ಸಂದರ್ಭದಲ್ಲಿಯೇ 'ಕಾಲ'ವೆಂಬುವುದು ಮಹತ್ವವಾದದ್ದು ಎಂದಿರುವುದು. ಇದಂತು ಒಂದರ್ಥದಲ್ಲಿ ಪ್ರಾಚೀನ ಮಧ್ಯಕಾಲೀನ ಮತ್ತು ಸಮಕಾಲೀನ

ಸಂದರ್ಭಗಳು ಒಟ್ಟಿಗೆ ಕಾಡಿಸುತ್ತಿರುವ ಕಾಲವಾಗಿದೆ. ಏಕೆಂದರೆ ಕಾಲ ಮತ್ತು ಮನುಷ್ಯರ ಸಂಬಂಧ ವಿಶಿಷ್ಟವಾದದ್ದು. ಕಾಲದೊಳಗೆ ಮನುಷ್ಯ, ಮನುಷ್ಯನೊಳಗೆ ಕಾಲ ನೆಲೆಯೂರಲು ನಡೆಸುವ ಪ್ರಯತ್ನಗಳ ಪ್ರಕ್ರಿಯಾ ರೂಪವೇ ಬದುಕು. ಯಾವುದೇ ಕಾಲವಾಗಲಿ ಮೇಲ್ನೋಟಕ್ಕೆ ಸ್ವಾತಂತ್ರ್ಯ ಪ್ರತ್ಯೇಕ ಘಟಕದಂತೆ ಕಂಡರೂ ಸಹಪ್ರಧಾನ ಗುಣಲಕ್ಷಣಗಳ ದೃಷ್ಟಿಯಿಂದ ಇದು ನಿಜವಾಗಿರುತ್ತದೆ. ಆದರೆ ಭೂತಕಾಲವು ವರ್ತಮಾನದ ದೃಷ್ಟಿಯಿಂದ ಭೂತದ ಲಕ್ಷಣಗಳನ್ನು ಹೊಂದಿರುತ್ತದೆ. ಆದರೆ ಈ ಭೂತಕಾಲವೂ ಒಂದು ಕಾಲದಲ್ಲಿ ವರ್ತಮಾನವೇ ಆಗಿರುತ್ತದೆ. ವರ್ತಮಾನ ಎನ್ನುವುದು ಪ್ರಧಾನ ಗುಣಲಕ್ಷಣಗಳ ದೃಷ್ಟಿಯಿಂದ 'ವರ್ತಮಾನ'ವೆಂದಾಗಿದ್ದರೂ ಅದರೊಳಗೆ ಭೂತಕಾಲವೂ ಸೇರಿಕೊಂಡಿರುತ್ತದೆ. ಆದರೆ ವರ್ತಮಾನವು ಭೂತದೊಳಗಿಂದ ಹೊರ ಬರುವಾಗ ಬರಿಗೈಲಿ ಬರುವುದಿಲ್ಲ, ಜೊತೆಗೆ ಭೂತದ ಬುತ್ತಿಯನ್ನು ಹೊತ್ತು ತರುತ್ತದೆ ಎನ್ನುವ ಪ್ರೊ. ಬರಗೂರು ರಾಮಚಂದ್ರಪ್ಪನವರ ಮಾತು ಈ ಅಧ್ಯಯನಕ್ಕೆ ಪ್ರಸ್ತುತವೆನಿಸುತ್ತದೆ.

ಈ ಹಿನ್ನೆಲೆಯಲ್ಲಿ ದಲಿತ ಮಹಿಳೆಯ ಸ್ಥಿತಿಗತಿಯನ್ನು ವರ್ತಮಾನದ ಆಧಾರಗಳಲ್ಲಿ ಸಿಗುವ ಅವಳ ಆತ್ಮಕಥನದ ಮೂಲಕ ಅವಳ 'ತಿಳುವಳಿಕೆ'ಯನ್ನು ಆಕರವಾಗಿ ಸ್ವೀಕರಿಸಿ ದಲಿತ ಮಹಿಳಾ ಅನನ್ಯತೆಯನ್ನು ಕಟ್ಟಿಕೊಡಬೇಕಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ. ಪ್ರಸ್ತುತ ಪ್ರಬಂಧದಲ್ಲಿ ದಲಿತ ಎಂಬುವುದನ್ನು ಅಸ್ಪೃಶ್ಯ ಎನ್ನುವ ಅರ್ಥದಲ್ಲಿ ಬಳಕೆ ಮಾಡಿದ್ದೇನೆ.

೧.೨ ಅಧ್ಯಯನದ ಉದ್ದೇಶ

ಇದು ಸಮಾಜೋ- ಸಾಂಸ್ಕೃತಿಕ ಅಧ್ಯಯನ, ಸಾಮಾಜಿಕತೆ ಸಂಸ್ಕೃತಿಯಲ್ಲಿ ಬರುವುದರಿಂದ ಹಾಗೂ ಸಂಸ್ಕೃತಿ ಸಾಮಾಜಿಕತೆಯಲ್ಲಿಯೂ ಬರುವುದರಿಂದ ಈ ಅಧ್ಯಯನವನ್ನು ಸಂಸ್ಕೃತಿ ಅಧ್ಯಯನವೆಂದು ಕರೆಯಬಹುದು.

ಸಂಸ್ಕೃತಿಯನ್ನು ಅತ್ಯಂತ ಸ್ಥೂಲವಾಗಿ ಸರಳೀಕರಿಸಿ ಹೇಳುವುದಾದರೆ 'ಜೀವನ ಕ್ರಮ, ಬದುಕುವ ರೀತಿ' ಎನ್ನಬಹುದು. ಒಟ್ಟಾರೆ ಸಂಸ್ಕೃತಿಯನ್ನು ಕುರಿತ ಅಧ್ಯಯನ, ಬದುಕನ್ನು ಕುರಿತು ಅಧ್ಯಯನವೇ ಆಗಿದೆ.

ಭಾರತೀಯ ಸಮಾಜ ಎನ್ನುವುದು ಹೇಗೆ? ಏಕೆ? ಎಂದು ಹೇಳಲು ಬರುವುದಿಲ್ಲವೋ ಹಾಗೆಯೇ ಭಾರತೀಯ ಸಂಸ್ಕೃತಿ ಎಲ್ಲವನ್ನು ಒಂದೇ ಎಂದು ಹೇಳಲು ಆಗುವುದಿಲ್ಲ. ಉತ್ಪಾದನಾ ಶಕ್ತಿಗಳು, ಸಾಧನ ಸಲಕರಣೆಗಳು, ವಿಧಾನಗಳು ನಮ್ಮ ಸಮಾಜದಲ್ಲಿ ಅಸಮಾನತೆಯನ್ನು ಸೃಷ್ಟಿ ಮಾಡಿವೆ. ಇಂಥ ಘಟಕಗಳು ತಮ್ಮ ತಮ್ಮ ಉತ್ಪಾದನಾ ವಿಧಾನಗಳಿಗೆ ಅನುಗುಣವಾಗಿ ಸಂಸ್ಕೃತಿಯನ್ನು ಹೊಂದಿವೆ. ಅಂದರೆ ಹಲವು ಚಿಂತನಾಕ್ರಮಗಳು ಇರುವಂತೆಯೇ ಹಲವು ಸಂಸ್ಕೃತಿಗಳೂ ಇವೆ. ಚಾರಿತ್ರಿಕ ಗಡಿಯಲ್ಲಿ ಯಾರ ಜೀವನಕ್ರಮ ಪ್ರಬಲವೂ, ಸಮರ್ಥವೂ ಇರುತ್ತದೆಯೋ ಅಂಥ ಸಂಸ್ಕೃತಿ ಮುಖ್ಯವಾದುದಾಗುತ್ತಾ ಬರುತ್ತದೆ. ಅಥವಾ ಮುಖ್ಯವೆಂದು ಪರಿಗಣಿಸಲ್ಪಡುತ್ತದೆ. ಇದಕ್ಕೆ ವಿರುದ್ಧವಾಗಿ ಯಾವ ಸಂಸ್ಕೃತಿಗಳು ಅಮುಖ್ಯವೆಂದು ಪರಿಗಣಿಸಲ್ಪಟ್ಟಿವೆಯೋ ಅಂತವರ ಬದುಕು ಪ್ರಬಲವಾಗಿರುವುದಿಲ್ಲ (ಬಿ.ಎಂ. ಪುಟ್ಟಯ್ಯ, ೧೯೯೭, ಪು.). ಶ್ರೀಮಂತ ಸಂಸ್ಕೃತಿಗಳೇ ಯಾಕೆ ಅಮುಖ್ಯವೆಂದು ಕಡೆಗಣಿಸಲ್ಪಡುತ್ತವೆ? ಎಂಬ ದಾರಿಯಲ್ಲಿ ಅಧ್ಯಯನ ಸಾಗುತ್ತದೆ.

ದಲಿತ ಮಹಿಳಾ ಸಂಕಥನಾ ಎಂಬ ಪ್ರಸ್ತುತ ಅಧ್ಯಯನವು ಈ ಕೆಳಕಂಡ ಉದ್ದೇಶಗಳನ್ನು ಹೊಂದಿದೆ.

೧. ಮುಖ್ಯವಾಗಿ ದಲಿತ ಮಹಿಳೆಯ ಕುರಿತ ಚಿಂತನೆ ಇಲ್ಲಿನ ಪ್ರಧಾನ ಉದ್ದೇಶವಾಗಿದೆ. ಇದನ್ನು

ಸಾಮಾಜಿಕ ಸಾಂಸ್ಕೃತಿಕ ಅಧ್ಯಯನದ ಪರಧಿಯಲ್ಲಿಟ್ಟು ಚರ್ಚಿಸಲಾಗುವುದು. ದಲಿತ ಮಹಿಳೆಯರ ಸಾಮಾಜಿಕ, ಸಾಂಸ್ಕೃತಿಕ ಭೂಮಿಕೆಯ ಚಿಂತನೆಯ ಮೂಲಕ ಇದುವರೆಗಿನ ದಲಿತ ಮಹಿಳಾ ಗ್ರಹಿಕೆಯಲ್ಲಿ ಇರುವ ಮಾದರಿಗಳನ್ನು ಕಂಡುಕೊಳ್ಳುವುದು. ಈ ವಿಭಿನ್ನ ಮಾದರಿಗಳ ನಡುವಿನ ಸಾಮರಸ್ಯ, ವೈರುದ್ಯಗಳ ನೆಲೆಗಳನ್ನು ಗುರುತಿಸುವುದು. ಜೊತೆಯಲ್ಲೇ ಆಯಾ ಮಾದರಿಯೊಳಗೆ ಇರಬಹುದಾದ ಆಂತರಿಕ ವೈರುದ್ಯದ ಲಕ್ಷಣಗಳನ್ನು ಗಮನಕ್ಕೆ ತಂದುಕೊಳ್ಳುವುದು. ಈ ಬಾಹ್ಯ ವೈರುದ್ಯಗಳು ಹಾಗೂ ಆಂತರಿಕ ವೈರುದ್ಯಗಳ ವಿನ್ಯಾಸ ಸ್ವರೂಪವನ್ನು ಸಮಕಾಲೀನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ನೆಲೆಗಳಲ್ಲಿ ಗ್ರಹಿಸುವುದು ಇಲ್ಲಿನ ಉದ್ದೇಶವಾಗಿದೆ.

೨. ಅಧ್ಯಯನದ ಅನುಕೂಲಕ್ಕಾಗಿ ದಲಿತ ಮಹಿಳೆ ಎಂದರೆ ಯಾರು? ಎಂಬುವುದನ್ನು ಗುರುತಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಸಮಾಜದಿಂದ ಬಹಿಷ್ಕೃತರೆನಿಸಿಕೊಂಡವರು, ಕಟ್ಟಕಡೆಯವರು, ಅಸ್ಪೃಶ್ಯರೆನಿಸಿಕೊಂಡ ಹೊಲೆಮಾದಿಗ, ಜಾಡಮಾಲಿ ಮಹಿಳೆಯರು. ಅದರಲ್ಲಿಯೂ ದಿನಗೂಲಿ ಕೃಷಿ ಕಾರ್ಮಿಕ ಮಹಿಳೆ, ಜಾಡಮಾಲಿ ಮಹಿಳೆಯರೇ ನಿಜವಾದ ದಲಿತ ಮಹಿಳೆಯರು ಎಂಬುವುದಕ್ಕೆ ಆಧಾರಗಳನ್ನು ಹುಡುಕುವ ಉದ್ದೇಶವು ಪ್ರಸ್ತುತ ಅಧ್ಯಯನಕ್ಕಿದೆ.

೩. ಸಂಸ್ಕೃತಿಗೆ ಅದ್ವಿತೀಯ ಕಾಣಿಕೆ ಸಲ್ಲಿಸಿದ ಇಂತಹ ದಲಿತ ಮಹಿಳೆಯರ ಶಕ್ತಿಗಳ ಕಾಣಿಕೆ, ಪಾತ್ರಗಳನ್ನು ಹೊಲೆಮಾದಿಗ ಮಹಿಳೆಯರ ಹಿನ್ನೆಲೆಯಲ್ಲಿ ತೌಲನಿಕವಾಗಿ ಚರ್ಚಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೪. ಸಮಾಜಕ್ಕೆ ದಲಿತ ಮಹಿಳೆಯರ ಕೊಡುಗೆ ಅಖಂಡವೂ, ಅದ್ಭುತವೂ, ಅಭೂತಪೂರ್ವವೂ ಆಗಿದೆ. ಪ್ರಸ್ತುತ ಅಧ್ಯಯನವು ಬಳ್ಳಾರಿ ಜಿಲ್ಲೆಯ ದಲಿತ ಮಹಿಳೆಯರ ಪ್ರಾದೇಶಿಕ ಸ್ವರೂಪವನ್ನು ಗುರುತಿಸುವ ಉದ್ದೇಶವನ್ನು ಇರಿಸಿಕೊಂಡಿದೆ.

೫. ದಲಿತ ಮಹಿಳೆಯರಿಗೆ ಮಾತ್ರ ಮೀಸಲಾಗಿರಿಸಿದ ಅಮಾನುಷ ಪದ್ಧತಿಗಳಾದ ದೇವದಾಸಿ, ಬಸವಿ, ಬೆತ್ತಲೆ ಸೇವೆ ಇವುಗಳನ್ನು ಕೆಳ ಜಾತಿಗಳೇ ಯಾಕೆ ಮಾಡುತ್ತವೆ ಎಂಬುದರ ಹಿಂದಿರುವ ಸಾಂಸ್ಕೃತಿಕ ಸ್ವರೂಪದ ತಾಂತ್ರಿಕತೆಯನ್ನು ಅರ್ಥಮಾಡಿಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

೬. ದಲಿತ ಕುಟುಂಬದಲ್ಲಿ ಹಾಗೂ ಸಮಾಜದಲ್ಲಿ ದಲಿತ ಮಹಿಳೆಯರ ಪಾತ್ರದ ಸ್ವರೂಪವನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸುವುದು ಅಧ್ಯಯನದ ಉದ್ದೇಶವಾಗಿದೆ.

೭. ವಿಭಿನ್ನ ಸಮುದಾಯಗಳ ನಡುವೆ ಕೊಡು ಕೊಳ್ಳುವ ಸಂಬಂಧ ಮೊದಲಿನಿಂದಲೂ ನಡೆದುಕೊಂಡು ಬಂದಿದೆ. ಇದಕ್ಕೆ ಪಾರಂಪರಿಕ ಚಿಂತನೆಯ ಹಲವು ಧಾರೆಗಳು, ಪುರಾವೆಗಳನ್ನು ಒದಗಿಸುತ್ತವೆ. ಈ ರೀತಿ ಸಂಬಂಧ ಹೊಲೆಯಮಾದಿಗ, ಜಾಡಮಾಲಿ ಮಹಿಳೆಯರಲ್ಲಿ ಹೇಗಿದೆ ಎಂಬುದನ್ನು ತಿಳಿಯುವುದಾಗಿದೆ.

೮. ಸಂಸ್ಕೃತಿಗೆ ದಲಿತ ಮಹಿಳಾ ಕೊಡುಗೆಯನ್ನು ವಿಶ್ಲೇಷಿಸುವುದು ಅಧ್ಯಯನದ ಉದ್ದೇಶವಾಗಿದೆ.

೯. ಪುರೋಹಿತಶಾಹಿ ವ್ಯವಸ್ಥೆ ಹಾಗೂ ಊಳಿಗಮಾನ್ಯಶಾಹಿ ವ್ಯವಸ್ಥೆ ದಲಿತ ಮಹಿಳೆಯನ್ನು ಹೇಗೆ ನಡೆಸಿಕೊಂಡಿದೆ ಎಂಬುವುದನ್ನು ಅರ್ಥ ಮಾಡಿಕೊಳ್ಳುವುದು.

೧೦. ದಲಿತ ಚಳುವಳಿಗೆ ಸಂಬಂಧಿಸಿದ ಘಟನೆ- ಪ್ರಸಂಗ- ಪ್ರಕರಣಗಳ ವಿವರಗಳಲ್ಲಿ ದಲಿತ ಮಹಿಳೆಯ ಪಾತ್ರವನ್ನು ಗುರುತಿಸುವ ಪ್ರಯತ್ನವೂ ಈ ಅಧ್ಯಯನದ ಉದ್ದೇಶವಾಗಿದೆ.

೧೧. ದಲಿತ ಚಳುವಳಿಯ ಜೊತೆಯಲ್ಲಿಯೇ ದಲಿತ ಮಹಿಳೆ ನಡೆಯಬೇಕೋ? ಅಥವಾ ದಲಿತ ಮಹಿಳೆ ತನಗೆ ಪ್ರತ್ಯೇಕವಾದ ಚಳುವಳಿಯನ್ನು ಮಾಡಿಕೊಳ್ಳಬೇಕೋ? ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ಇದ್ದಿದ್ದೇ ಆದರೆ ಅದು ಯಾವ ಸ್ವರೂಪದಲ್ಲಿರಬೇಕು? ಯಾವ ಬಗೆಯದಾಗಿರಬೇಕು? ಮುಂತಾದ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವುದು ಅಧ್ಯಯನದ ಉದ್ದೇಶವಾಗಿದೆ.

೧೨. ದಲಿತ ಚಳುವಳಿಯಲ್ಲಿ ಬಳ್ಳಾರಿ ಜಿಲ್ಲೆ ಪಾತ್ರವನ್ನು ಗುರುತಿಸುತ್ತಾ ಅದರಲ್ಲಿ ದಲಿತ ಮಹಿಳೆಯ ಪಾತ್ರವನ್ನು ಗುರುತಿಸುವುದು ಅಧ್ಯಯನದ ಉದ್ದೇಶವಾಗಿದೆ.

೧೩. ದಲಿತ ಚಳುವಳಿಗಾರರು ದಲಿತ ಚಳುವಳಿಯನ್ನು ರೂಪಿಸಿದಾಗ ಅವರಿಗೆ ಅನೇಕ ಕನಸುಗಳಿದ್ದವು ಹಾಗೆಯೇ ಅನೇಕ ಸವಾಲುಗಳಿದ್ದವು. ಅವರ ಆ ಕನಸುಗಳು, ಸವಾಲುಗಳು ಈಡೇರಿದೆಯೋ? ಇಲ್ಲದಿದ್ದರೆ ಯಾಕಿಲ್ಲ? ದಲಿತ ಚಳುವಳಿ ಈಗ ಏನಾಗಿದೆ? ಏನು ಕೆಲಸ ಮಾಡುತ್ತಿದೆ? ನಮ್ಮೊಂದಿಗಿರುವ ದಲಿತ ಚಳುವಳಿಗಾರರಿಗೆ ದಲಿತ ಚಳುವಳಿಯಲ್ಲಿ ದಲಿತ ಮಹಿಳೆಯ ಪಾತ್ರದ ಬಗ್ಗೆ ಇರುವ ಅಭಿಪ್ರಾಯವೇನು? ಈ ಸಂಗತಿಗಳನ್ನು ಕಲೆ ಹಾಕುವ ಹಾಗೂ ಚರ್ಚಿಸುವ ಉದ್ದೇಶವೂ ನನ್ನ ಅಧ್ಯಯನಕ್ಕಿದೆ.

೧.೩ ಅಧ್ಯಯನದ ವ್ಯಾಪ್ತಿ

ಪ್ರತಿಯೊಂದು ಅಧ್ಯಯನವೂ ತನ್ನ ವ್ಯಾಪ್ತಿಯನ್ನು ಮೊದಲೇ ಗುರುತಿಸಿಕೊಳ್ಳಬೇಕಾಗುತ್ತದೆ. ಇದರಿಂದ ಪೂರ್ಣ ಪ್ರಮಾಣದ ಅಧ್ಯಯನ ಕೈಗೊಳ್ಳಲು ಸಾಧ್ಯವಾಗುತ್ತದೆ. ಅಧ್ಯಯನದ ವಸ್ತು ವಿಷಯಕ್ಕೆ ಇರುವ ಮಹತ್ವದ ಹಿನ್ನೆಲೆಯಲ್ಲಿ ಅದರ ವ್ಯಾಪ್ತಿಯನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಅಧ್ಯಯನದ ಅನುಕೂಲಕ್ಕೆ ಚೌಕಟ್ಟನ್ನು ನಿರ್ಮಿಸಿಕೊಂಡು ಪರಿಪೂರ್ಣ ಮತ್ತು ಸಮಗ್ರ ಅಧ್ಯಯನ ಕೈಗೊಳ್ಳಬೇಕೆಂಬ ದೃಷ್ಟಿಯಿಂದ ಬಳ್ಳಾರಿ ಜಿಲ್ಲೆ ಪ್ರದೇಶದಲ್ಲಿ ನೆಲೆಸಿರುವ ಹೊಲೆಯ, ಮಾದಿಗ, ಜಾಡಮಾಲಿ ಮಹಿಳೆಯರನ್ನು ಅಧ್ಯಯನದ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

ಕೆಲವು ಸಂದರ್ಭಗಳಲ್ಲಿ ಈ ಮಿತಿಯನ್ನು ಮೀರಿರುವ ಸಾಧ್ಯತೆಗಳಿದ್ದರೂ ಅದು ಅಧ್ಯಯನದ ವಿಷಯಕ್ಕೆ ಪೂರಕ ಮಾಹಿತಿಯನ್ನು ಒದಗಿಸುವಲ್ಲಿ ಸಹಕಾರಿಯಾಗುತ್ತದೆ. ಹಾಗೂ ತೌಲನಿಕವಾಗಿ ಕೆಲವೊಂದು ವಿಷಯಗಳನ್ನು ಚರ್ಚಿಸುವುದರಿಂದ ವಿಷಯ ವಸ್ತುವಿಗೆ ಇನ್ನಷ್ಟು ಸ್ಪಷ್ಟತೆ ದೊರೆಯುತ್ತದೆ.

೧.೪ ಅಧ್ಯಯನದ ಮಹತ್ವ ಮತ್ತು ಸ್ವರೂಪ

ದಲಿತ ಮಹಿಳೆಯರನ್ನು ಕುರಿತಂತೆ ಕನ್ನಡದಲ್ಲಿ ಅಷ್ಟು ದೀರ್ಘವಾದ ಚರ್ಚೆಗಳು ಕಾಣಿಸಿಕೊಂಡಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ಸ್ವರೂಪದ ಹಿನ್ನೆಲೆಯಲ್ಲಿ ದಲಿತ ಮಹಿಳಾ ಸ್ಥಿತಿಗತಿಯನ್ನು ಗ್ರಹಿಸಿ ದೇಶೀ ಸಂಶೋಧನಾ ವಿಧಾನದ ಮೂಲಕ ಅವಳ ಸಾಂಸ್ಕೃತಿಕವಾದ, ವೈಚಾರಿಕವಾದ ಆತ್ಮಕಥನವನ್ನು ಅಂತರ್‌ಶಿಸ್ತೀಯ ಅಧ್ಯಯನಕ್ಕೊಳಪಡಿಸಿ ವಿಶ್ಲೇಷಿಸುವುದು.

ಇಲ್ಲಿ ದಲಿತ ಮಹಿಳೆಯ 'ತಿಳುವಳಿಕೆ'ಯನ್ನು ಮುಖ್ಯ ಆಕರವಾಗಿ ಪರಿಗಣಿಸಲಾಗುವುದು. ಬಳ್ಳಾರಿ ಜಿಲ್ಲೆಯ ಹೊಲೆಯ, ಮಾದಿಗ, ಜಾಡಮಾಲಿ ಮಹಿಳೆಯರ ಹಿನ್ನೆಲೆಯನ್ನು ನೋಡಿದಾಗ ನಿಜವಾದ ದಲಿತ ಮಹಿಳೆಯರೆಂದು ಪರಿಗಣಿಸುವುದು ಅಧ್ಯಯನದ ಮಹತ್ವದಾಗುತ್ತದೆ. ದಲಿತ ಮಹಿಳೆ ತನ್ನ ಆಂತರಿಕ ಸತ್ವ ಚೈತನ್ಯಗಳನ್ನು ಅಭಿವ್ಯಕ್ತಿಸುವ ಹಾಗೂ ತನ್ನ ಮೂಲ ಬೇರುಗಳನ್ನು ಕಂಡುಕೊಳ್ಳುವ ಪ್ರಯತ್ನದಲ್ಲಿ ಮತ್ತೆ ಮತ್ತೆ ನೋವನ್ನೂ, ಸೋಲನ್ನೂ ಅನುಭವಿಸುತ್ತಿರುವುದಕ್ಕೆ ಕಾರಣವೇನು? ದಲಿತ ಮಹಿಳೆ ಸಂಘರ್ಷಿಸುತ್ತಲೇ ತನ್ನ ಸಾಂಸ್ಕೃತಿಕ ಜೀವಂತಿಕೆಯನ್ನು ಕ್ರಿಯಾತ್ಮಕ ಅಭಿವ್ಯಕ್ತಿಗೆ ತರುವಲ್ಲಿ ಅವಳ ಪ್ರಯತ್ನ ಯಾವ ರೀತಿಯದು ಎಂಬುವುದನ್ನು ತಿಳಿಯಲಾಗುವುದು.

ಆಳುವ ಶಕ್ತಿಯ ಪ್ರಭಾವ ಬಹುಮುಖಿಯಾದುದು. ಆಳುವ ವರ್ಗವು ರಾಜಕೀಯ, ಧಾರ್ಮಿಕ, ಆರ್ಥಿಕ, ನೈತಿಕ, ಭಾಷಿಕ ಪ್ರಭಾವಳಿಗಳ ಮೂಲಕ ಇವೆಲ್ಲವನ್ನು ನಿಯಂತ್ರಿಸುತ್ತದೆಂಬುವುದು ವಿಧಿತವಾದ ಸಂಗತಿ. ಸಾಂಸ್ಕೃತಿಕ, ರಾಜಕೀಯಶಾಹಿಯು ದಲಿತ ಮಹಿಳೆಯ ಮೇಲೆ ನಿರ್ದಿಷ್ಟ ಮಾದರಿಯನ್ನು ಹೇರಿದಾಗ ಅದಕ್ಕೆ ಅವಳ ಪ್ರತಿಭಟನೆ ಯಾವ ಸ್ವರೂಪದ್ದು? ಎಂಬುವುದನ್ನು ದಲಿತ ಮಹಿಳಾ ಚಳುವಳಿಯ ಹಿನ್ನೆಲೆಯಲ್ಲಿ ಪರಿಭಾವಿಸುವುದು.

ಕ್ಷೇತ್ರಕಾರ್ಯಾಧಾರಿತವಾದ ಈ ಅಧ್ಯಯನವು ದಲಿತ ಮಹಿಳಾ ದೃಷ್ಟಿಕೋನವನ್ನು ತನ್ನ ತಾತ್ವಿಕತೆಯಾಗಿ ಗುರುತಿಸಿಕೊಂಡಿದೆ. ಅಂತರ್‌ಶಿಸ್ತಿಯ ಹಿನ್ನೆಲೆಯಲ್ಲಿ ನಾವು ಚರ್ಚಿಸಿದ ಮುಖ್ಯ ತಾತ್ವಿಕ ನೆಲೆಗಳನ್ನು ಪುನರ್ ನಿರ್ವಚನಕ್ಕೆ ಒಳಪಡಿಸುವುದು. ದಲಿತ ಮಹಿಳಾ ಸಾಂಸ್ಕೃತಿಕ ಅನನ್ಯತೆಯನ್ನು ಕಟ್ಟಿಕೊಡುವುದು ಮುಖ್ಯವಾಗಿದೆ.

ದಲಿತ ಮಹಿಳೆ ನೈತಿಕತೆಯನ್ನು ಸವಾಲಾಗಿ ಸ್ವೀಕರಿಸಿ ಜಾಗೃತಳಾಗಿ ದಲಿತ ಮಹಿಳಾ ಸಂಘಟನೆಗಳನ್ನು ಕಟ್ಟಿಕೊಳ್ಳುವಂತೆ ಪ್ರೇರೇಪಿಸಬಹುದಾದ ವಿಧಾನಗಳನ್ನು ಚರ್ಚಿಸುವುದು.

ದಲಿತ ಮಹಿಳೆಯನ್ನು ವರ್ಗಸಂಬಂಧಗಳು, ಜಾತಿ, ಲಿಂಗ ಈ ಮುಂತಾದ ಸಂಬಂಧಗಳೊಂದಿಗೆ ಹೊಂದಿಸಿ ಚರ್ಚಿಸುವುದು ಈ ಅಧ್ಯಯನದ ಪ್ರಮುಖ ಅಂಶವಾಗಿದೆ. ಇವೆಲ್ಲವೂ ಪ್ರಸ್ತುತ ಅಧ್ಯಯನದ ಮಹತ್ವ ಮತ್ತು ಸ್ವರೂಪವಾಗಿವೆ.

೧.೫ ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆ

ಕರ್ನಾಟಕದ ರಾಜಧಾನಿಯಿಂದ ಸುಮಾರು ೩೫೦ ಕಿ.ಮೀ ದೂರದಲ್ಲಿರುವ ಒಂದು ಜಿಲ್ಲೆಯಾಗಿದೆ. ಬಳ್ಳಾರಿಯು ಅನೇಕ ರಾಜಮನೆತನಗಳು ಆಳಿದ ಮಹತ್ವದ ಸಾಂಸ್ಕೃತಿಕ ಕೇಂದ್ರವಾಗಿದೆ. ೧೯೫೩ ರವರೆಗೆ ಬಳ್ಳಾರಿ ಜಿಲ್ಲೆ ಮದ್ರಾಸ್ ಪ್ರಾಂತ್ಯದ ಒಂದು ಜಿಲ್ಲೆಯಾಗಿತ್ತು. ಕರ್ನಾಟಕದಲ್ಲಿ ಅತಿ ಹೆಚ್ಚು ಕಾಲ ಬ್ರಿಟೀಷರ ಆಳ್ವಿಕೆಯಲ್ಲಿದ್ದ ಬಳ್ಳಾರಿಯು ಹೈದರಾಬಾದ್ ನಿಜಾಮ್‌ನ ಆಳ್ವಿಕೆಗೂ ಕೆಲಕಾಲ ಒಳಪಟ್ಟಿತ್ತು. ಹೀಗಾಗಿ ಬಳ್ಳಾರಿಯು ಬ್ರಿಟೀಷ್ ವಸಾಹತುಶಾಹಿಯ ಮದ್ರಾಸ್ ಪ್ರಾಂತ್ಯಕ್ಕೂ ಇತ್ತ ಹೈದರಾಬಾದ್ ನಿಜಾಮನ ಸಂಸ್ಥಾನದ ಅಧಿಕಾರ ವ್ಯಾಪ್ತಿಗೂ ಸೇರಿಕೊಂಡಿದ್ದರಿಂದ ಇದರ ಚರಿತ್ರೆ ಸಂಕೀರ್ಣ ಸ್ವರೂಪದಲ್ಲಿ ಸಾಗಿ ಬಂದಿದೆ.

ಬಳ್ಳಾರಿಯು ಪೂರ್ವಭಾಗ ಸಂಪೂರ್ಣ ಆಂಧ್ರಪ್ರದೇಶದ ಗಡಿಯನ್ನು ಹೊಂದಿದೆ. ಈ ಜಿಲ್ಲೆಯು ೧೫° ೩೦° ಕರ್ನಾಟಕದ ಪೂರ್ವಭಾಗ ಮಧ್ಯದಲ್ಲಿ ದಕ್ಷಿಣೋತ್ತರವಾಗಿ ಹಬ್ಬಿದೆ. ಈ ಜಿಲ್ಲೆಯು ಉತ್ತರದಲ್ಲಿ ರಾಯಚೂರು ಜಿಲ್ಲೆ, ಪಶ್ಚಿಮದಲ್ಲಿ ಗದಗ ಜಿಲ್ಲೆ, ದಕ್ಷಿಣದಲ್ಲಿ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆ

ಹಾಗೂ ಪೂರ್ವದಲ್ಲಿ ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆ ಮತ್ತು ಅನಂತಪುರ ಜಿಲ್ಲೆಗಳಿಂದ ಸುತ್ತುವರೆದಿದೆ. ತುಂಗಭದ್ರಾ ನದಿಯು ಜಿಲ್ಲೆಯ ಪೂರ್ವ ಮತ್ತು ಉತ್ತರಾಭಿಮುಖವಾಗಿ ಹರಿಯುತ್ತದೆ. ಇದರ ಉಪನದಿಗಳು ಹಗರಿ ಮತ್ತು ಚಿಕ್ಕಹಗರಿ. ಈ ಜಿಲ್ಲೆಯಲ್ಲಿ ಬೋಸುಕಲ್ಲುಗಳಿಂದ ಕೂಡಿದ ಕಪ್ಪುಮಣ್ಣಿನ ಭೂಮಿ ಹೆಚ್ಚಾಗಿದೆ (ಎಲ್.ಎನ್.ಶೇಷಗಿರಿರಾವ್, ೧೯೯೪, ಪು.೩೪೬).

ಈ ಜಿಲ್ಲೆ ರಾಜ್ಯದ ಅಧಿಕ ಉಷ್ಣಾಂಶ ಇರುವ ಜಿಲ್ಲೆಗಳಲ್ಲಿ ಒಂದಾಗಿದೆ. ಚಳಿಗಾಲದಲ್ಲಿ ಕೆಲವೊಮ್ಮೆ ೧೫° ಸೆಲ್ಸಿಯಸ್‌ನಷ್ಟು ಕನಿಷ್ಟ ಉಷ್ಣಾಂಶವನ್ನು ಹೊಂದಿರುವುದನ್ನು ಬಿಟ್ಟರೆ ವರ್ಷದ ಹೆಚ್ಚಿನ ಅವಧಿಯಲ್ಲಿ ಅಧಿಕ ಉಷ್ಣಾಂಶ ಇರುತ್ತದೆ. ಜಿಲ್ಲೆಯ ವಿಸ್ತೀರ್ಣ ೯,೮೮೫ ಚದರ ಕಿ.ಮೀ ಗಳಷ್ಟಿದೆ. ಇದು ರಾಜ್ಯದ ಒಟ್ಟು ವಿಸ್ತೀರ್ಣದ ಶೇ. ೫.೧೬ ರಷ್ಟಿದ್ದು ೧೧ನೇ ಸ್ಥಾನದಲ್ಲಿದೆ. ಇಲ್ಲಿ ಸಿಗುವ ಕಬ್ಬಿಣ ಮತ್ತು ಮ್ಯಾಂಗನೀಸ್ ಖನಿಜಗಳಿಗೆ ವಿಶ್ವಮಾರುಕಟ್ಟೆಯಲ್ಲಿ ಉತ್ತಮ ಸ್ಥಾನವಿದೆ. ಇದರ ಜೊತೆಗೆ ಇನ್ನೂ ಅನೇಕ ಲೋಹ ಮತ್ತು ಅಲೋಹೇತರ ಖನಿಜಗಳೂ ದೊರೆಯುತ್ತವೆ. ಇತ್ತೀಚಿಗಿನ ವರದಿಗಳ ಪ್ರಕಾರ ಇಲ್ಲಿನ ಕಬ್ಬಿಣದ ಅದಿರಿನ ನಿಕ್ಷೇಪ ಪ್ರಮಾಣ ೧೮ : ೮೧ ದಶಲಕ್ಷ ಟನ್‌ಗಳೆಂದು ಅಂದಾಜು ಮಾಡಲಾಗಿದೆ. ಇಲ್ಲಿ ಉತ್ಪಾದನೆಯಾಗುವ ಕಬ್ಬಿಣದ ಅದಿರಿನ ಅರ್ಧಕ್ಕಿಂತ ಹೆಚ್ಚು ಭಾಗವು ವಿದೇಶಗಳಿಗೆ ರಫ್ತಾಗುತ್ತದೆ (ಬಿ. ಶೇಷಾದ್ರಿ, ೧೯೯೮, ಪು.೦೧). ಅತಿ ಹೆಚ್ಚು ಖನಿಜ ಸಂಪತ್ತನ್ನು ಹೊಂದಿರುವ ಪ್ರದೇಶವು ಹೆಚ್ಚಿನ ಉದ್ಯೋಗವನ್ನು ಸೃಷ್ಟಿಸಿರುವುದರಿಂದ ಬೇರೆ ಬೇರೆ ಪ್ರದೇಶಗಳಿಂದ ಉದ್ಯೋಗವನ್ನರಸಿ ಬರುವವರ ಸಂಖ್ಯೆ ಹೆಚ್ಚಾಗಿದೆ.

ಗಣಿಗಾರಿಕೆಯಿಂದ ಇಡೀ ಕೃಷಿ ಹಾಳಾಗಿ ಕೃಷಿ ಕೂಲಿಕಾರ್ಮಿಕರೆಲ್ಲಾ ಕೃಷಿ ಪದ್ಧತಿಯಿಂದ ವಂಚಿತರಾಗಿ ಗಣಿಕೂಲಿಕಾರ್ಮಿಕರಾಗಿ ಪಲ್ಲಟಗೊಂಡಿದ್ದಾರೆ.

ಇಲ್ಲಿನ ಮುಖ್ಯ ಬೆಳೆಗಳೆಂದರೆ ಭತ್ತ, ಜೋಳ, ಕಬ್ಬು, ಸಜ್ಜೆ, ನವಣೆ, ಮೆಣಸಿನಕಾಯಿ, ಹತ್ತಿ, ಶೇಂಗಾ, ತೊಗರಿ. ೧೯೫೩ ರಲ್ಲಿ ತುಂಗಭದ್ರಾ ಜಲಾಶಯ ಯೋಜನೆ ಕಾರ್ಯಗತವಾದಾಗ ಈ ಜಿಲ್ಲೆಯಲ್ಲಿ ಹಸಿರುಕ್ರಾಂತಿ ಪ್ರಾರಂಭವಾಯಿತು. ಇಂದು ಅಧಿಕ ಪ್ರಮಾಣದಲ್ಲಿ ನೀರಾವರಿ ಸೌಕರ್ಯ ಪಡೆದಿರುವ ಜಿಲ್ಲೆಗಳಲ್ಲಿ ಇದೂ ಒಂದು.

ಜಿಲ್ಲೆಯ ಇತಿಹಾಸ ಮೌರ್ಯರ ಕಾಲದಿಂದ ಪ್ರಾರಂಭವಾಗುತ್ತದೆ. ಇವರ ನಂತರ ಕ್ರಮವಾಗಿ ಶಾತವಾಹನರು, ಬನವಾಸಿ ಕದಂಬರು, ಬಾದಾಮಿ ಚಾಲುಕ್ಯರು, ನೊಳಂಬರು ಮತ್ತು ಗಂಗರ ಅಧೀನದಲ್ಲಿ ಈ ಜಿಲ್ಲೆಯ ಕೆಲವು ಭಾಗಗಳು ಇದ್ದವೆಂದು ಚಾರಿತ್ರಿಕ ದಾಖಲೆಗಳಿಂದ ತಿಳಿದು ಬರುತ್ತದೆ. ೧೧-೧೨ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದ ಉಚ್ಚಂಗಿಯ ಪಾಂಡ್ಯರು ಈ ಪ್ರದೇಶದಲ್ಲಿ ಆಳುತ್ತಿದ್ದು ಮೊಹಮದ್‌ಬಿನ್ ತುಘಲಕ್‌ನ ಕಾಲದಲ್ಲಿ ಅಂತಿಮವಾಗಿ ಇದು ಪತನವಾಯಿತು. ಮುಂದೆ ಸುಮಾರು ಮುನ್ನೂರು ವರ್ಷಗಳ ಕಾಲ ಇಡೀ ದಕ್ಷಿಣ ಭಾರತವನ್ನು ಒಳಗೊಂಡು ಆಳಿದ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿ ನೆಲೆಗೊಂಡಿದ್ದುದು ಈ ಜಿಲ್ಲೆಯ ಹಂಪಿಯಲ್ಲೇ.

ಪ್ರಪಂಚದಲ್ಲೇ ಹಂಪಿಯನ್ನು ಐತಿಹಾಸಿಕವಾಗಿ ಹೊಗಳಲಾಗುತ್ತಿದೆ. ಆದರೆ ಅಲ್ಲಿನ ದಲಿತರ ಸ್ಥಿತಿಗತಿಯನ್ನು ಕುರಿತು ಯಾರು ಯೋಚಿಸುವುದಿಲ್ಲ. ಇದರ ಕುರಿತು ಪುರುಷೋತ್ತಮ ಬಿಳಿಮಲೆ ಹಾಗೂ ಚಲುವರಾಜು ಅವರು ವಿಜಯನಗರ ಕಾಲದಲ್ಲಿ ಜನಸಾಮಾನ್ಯರ ಸ್ಥಿತಿಗತಿ ತುಂಬಾ ನಿಸ್ಪೃಷ್ಟ ಸ್ಥಿತಿಯಲ್ಲಿ ಇರುವುದನ್ನು ಆಧಾರಗಳ ಸಹಿತ 'ಹಂಪಿ ಜಾನಪದ' ಎಂಬ ಗ್ರಂಥದಲ್ಲಿ ದಾಖಲಿಸಿದ್ದಾರೆ.

೧೫೬೫ ರ 'ರಕ್ಕಸತಂಗಡಿ' ಕದನದಲ್ಲಿ ವಿಜಯನಗರದ ಅರಸರು ಸೋತ ಮೇಲೆ ವಿಜಯನಗರ ಹಾಳು ಹಂಪೆಯಾಯಿತು. ಕದನದ ಅನಂತರದಲ್ಲಿ ಈ ಜಿಲ್ಲೆ ಆದಿಲ್‌ಶಾಹಿ ಸುಲ್ತಾನರ ಮತ್ತು ಹಲವು ಪಾಳೇಗಾರರ ಆಳ್ವಿಕೆಗೆ ಒಳಪಟ್ಟಿತು. ತರುವಾಯ ಮರಾಠರು ಮತ್ತು ಮೊಘಲರು ಇಲ್ಲಿ ಅಧಿಪತ್ಯ ನಡೆಸಿದರು.

೧೮ನೇ ಶತಮಾನದ ಕೊನೆಯ ಭಾಗದಲ್ಲಿ ಮೈಸೂರಿನ ಹೈದರಾಲಿ ಮತ್ತು ಟಿಪ್ಪುಸುಲ್ತಾನ ಈ ಜಿಲ್ಲೆಯನ್ನು ಸಂಪೂರ್ಣವಾಗಿ ತಮ್ಮ ಅಧೀನಗೊಳಿಸಿಕೊಂಡರು. ೧೯೭೨ರ ಒಪ್ಪಂದದ ಪ್ರಕಾರ ಈ ಜಿಲ್ಲೆಯ ಕೆಲವು ಭಾಗಗಳನ್ನು ಟಿಪ್ಪು ಹೈದರಾಬಾದಿನ ನಿಜಾಮನಿಗೆ ಬಿಟ್ಟುಕೊಟ್ಟ. ಶ್ರೀರಂಗಪಟ್ಟಣದ ಪತನ ನಂತರ ೧೮೦೦ ರ ಹೊತ್ತಿಗೆ ಈ ಜಿಲ್ಲೆ ಬ್ರಿಟೀಷರಿಗೆ ಸೇರಿ ಮದರಾಸು ಪ್ರಾಂತ್ಯದ ಭಾಗವಾಯಿತು (ಕನ್ನಡ ವಿಶ್ವಕೋಶ, ೧೯೮೩, ಪು. ೯೪೬). ೧೯೫೩ ರಲ್ಲಿ ವಾಂಛುರವರ ವರದಿಯ ಪ್ರಕಾರ ಆಂಧ್ರಪ್ರದೇಶವೆಂದು ಕರೆಯಲಾದ ರಾಜ್ಯದಲ್ಲಿ ಅಂದಿನ ಬಳ್ಳಾರಿ ಜಿಲ್ಲೆಯ ಆದೋನಿ, ಆಲೂರು ಮತ್ತು ರಾಯದುರ್ಗ ತಾಲ್ಲೂಕುಗಳು ವಿನಾಃ ಮಿಕ್ಕ ಭಾಗ ಮೈಸೂರು ಸಂಸ್ಥಾನಕ್ಕೆ ಸೇರಿತು. ಹೀಗೆ ಕಳೆದ ಇನ್ನೂರು ಮುನ್ನೂರು ವರ್ಷಗಳ ಕಾಲಾವಧಿಯಲ್ಲಿ ಬಳ್ಳಾರಿ ಜಿಲ್ಲೆಯ ಗಡಿರೇಖೆಗಳನ್ನು ಪುನರ್‌ರಚಿಸಲಾಗಿದೆ. ಅನೇಕ ಅಧಿಪತ್ಯಗಳ ಆಳ್ವಿಕೆಯಲ್ಲಿ ಜನಸಾಮಾನ್ಯರು ಹೆಚ್ಚು ಶೋಷಣೆಗೆ ಒಳಪಟ್ಟರು. ಈ ಜಿಲ್ಲೆಯನ್ನು ಅಧಿಪತ್ಯಕ್ಕೆ ಒಳಪಡಿಸಿಕೊಂಡಾಗ ಮೊದಲ ಅಧಿಪತ್ಯದ ಪರಿಣಾಮವನ್ನು ಅನುಭವಿಸುವವರು ಮಹಿಳೆಯರು. ಮಹಿಳೆಯರನ್ನು ನಿಕೃಷ್ಟವಾಗಿ ಈ ಅಧಿಪತಿಗಳೆಲ್ಲರೂ ಬಳಸಿಕೊಳ್ಳುತ್ತಿದ್ದರು. ಇನ್ನೂ ದಲಿತ ಮಹಿಳೆ ಪಾಡನ್ನು ಪ್ರತ್ಯೇಕವಾಗಿ ಹೇಳುವ ಅಗತ್ಯವಿಲ್ಲ ಎನಿಸುತ್ತದೆ.

ಈ ಜಿಲ್ಲೆ ೭ ತಾಲ್ಲೂಕುಗಳನ್ನು ಒಳಗೊಂಡಿದೆ. ಅವುಗಳೆಂದರೆ ಬಳ್ಳಾರಿ, ಹೊಸಪೇಟೆ, ಹಡಗಲಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿ, ಸಂಡೂರು ಹಾಗೂ ಸಿರುಗುಪ್ಪ.

ಬಳ್ಳಾರಿ ಜಿಲ್ಲೆಯಲ್ಲಿರುವ ಸಿರುಗುಪ್ಪ, ಬಳ್ಳಾರಿ, ಸಂಡೂರು ಮತ್ತು ಹೊಸಪೇಟೆ ತಾಲ್ಲೂಕುಗಳನ್ನು ಪೂರ್ವಭಾಗದ ತಾಲ್ಲೂಕುಗಳೆಂದೂ, ಹಡಗಲಿ, ಕೂಡ್ಲಿಗಿ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳನ್ನು ಪಶ್ಚಿಮ ಭಾಗದ ತಾಲ್ಲೂಕುಗಳೆಂದು ಕರೆಯುವುದು ರೂಢಿಯಲ್ಲಿದೆ. ಪ್ರಾಕೃತಿಕವಾಗಿ ಹಾಗೂ ಆರ್ಥಿಕವಾಗಿ ಜಿಲ್ಲೆಯ ಪೂರ್ವಭಾಗವು ಸಮೃದ್ಧಿಯಾಗಿದ್ದರೆ, ಪಶ್ಚಿಮ ಭಾಗವು ಅಭಾವದ ಪ್ರದೇಶವಾಗಿದೆ. ಕೃಷಿಯನ್ನು ಬದುಕನ್ನಾಗಿ ಮಾಡಿಕೊಂಡಿರುವ ಜನರ ಪ್ರಮಾಣದ ದೃಷ್ಟಿಯಿಂದ ಈ ಜಿಲ್ಲೆಯ ಪಶ್ಚಿಮ ಭಾಗದ ತಾಲ್ಲೂಕುಗಳು ಮೊದಲ ಮೂರು ಸ್ಥಾನಗಳಲ್ಲಿವೆ. ಅಂದರೆ ಕೃಷಿಯೇತರ ಚಟುವಟಿಕೆಗಳು ಇಲ್ಲವೇ ಇಲ್ಲ. ಇದರಿಂದಾಗಿ ಆರ್ಥಿಕವಾಗಿ ಮತ್ತು ಪ್ರಾಕೃತಿಕವಾಗಿ ಸಮೃದ್ಧಿಯಾಗಿರುವ ಜಿಲ್ಲೆಯ ಪೂರ್ವ ಭಾಗದಲ್ಲೇ ಹೆಚ್ಚು ಔದ್ಯಮೀಕರಣ ಪ್ರಕ್ರಿಯೆಯು ನೆಲೆಗೊಂಡಿದೆ.

ಕರ್ನಾಟಕದಲ್ಲಿ ಉಳುಮೆಗಾರರಿಗಿಂತ ಕೃಷಿಕಾರ್ಮಿಕರು ಅಧಿಕವಾಗಿರುವ ಜಿಲ್ಲೆಗಳಲ್ಲಿ ಬಳ್ಳಾರಿಯೂ ಒಂದಾಗಿದೆ. ಇಲ್ಲಿನ ಸಾಕ್ಷರತೆ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಈ ಜಿಲ್ಲೆಯ ಅಂಕಿಅಂಶಗಳು ಈ ರೀತಿಯಾಗಿವೆ.

ಜಿಲ್ಲೆಯ ಜನಸಂಖ್ಯೆ- ೧೬.೫೦ ಲಕ್ಷ. ರಾಜ್ಯದ ಆರನೇ ಸ್ಥಾನದಲ್ಲಿದೆ. ಒಟ್ಟು ಪುರುಷರ ಸಂಖ್ಯೆ- ೦೮೪೨೩೦೦, ಒಟ್ಟು ಮಹಿಳೆಯರ ಸಂಖ್ಯೆ- ೦೮೧೩೭೦೦, ಪರಿಶಿಷ್ಟ ಜಾತಿಯಲ್ಲಿನ- ಮಹಿಳೆಯರ ಸಂಖ್ಯೆ- ೧೫೪೩೦೮ ಆದರೆ ಪುರುಷರ ಸಂಖ್ಯೆ- ೦೧೫೬೯೪೪, ಪರಿಶಿಷ್ಟ ಜಾತಿಯಲ್ಲಿನ- ಅಕ್ಷರ ಸಂಖ್ಯೆ ಮಹಿಳೆಯರು

೨೦೮೯೨, ಪುರುಷರು ೫೧೫೫೯, ಪರಿಶಿಷ್ಟ ಪಂಗಡ ಜನಸಂಖ್ಯೆ ಮಹಿಳೆಯರು ೭೩೬೪೯, ಪುರುಷರು ೭೪೪೦೨, ಪರಿಶಿಷ್ಟ ಪಂಗಡದ ಅಕ್ಷರಸ್ಥರ ಸಂಖ್ಯೆ ಮಹಿಳೆಯರು- ೦೮೭೪೦, ಪುರುಷರು- ೨೨೪೪೯ ಒಟ್ಟು ಜಿಲ್ಲೆಯಲ್ಲಿ ಲಿಂಗವಾರು ಸಾಕ್ಷರತೆ ಸಂಖ್ಯೆ ಪುರುಷರು ೫೯೧೧ ಮಹಿಳೆಯು ೩.೨೨೪. (ಜನಗಣತಿ ೨೦೦೦-೨೦೦೧ ರ ವರದಿ).

ಈ ಮೇಲಿನ ಅಂಕಿಅಂಶಗಳನ್ನು ಗಮನಿಸಿದರೆ ಪರಿಶಿಷ್ಟ ಜಾತಿ ಮಹಿಳೆಯರ ಸಾಕ್ಷರತೆ ಪ್ರಮಾಣ ಉಳಿದವರಿಗಿಂತ ತುಂಬಾ ಕಡಿಮೆ ಇದೆ. ಇದರ ಆಧಾರದ ಮೇಲೆಯೇ ಈ ಜಿಲ್ಲೆಯ ದಲಿತ ಮಹಿಳೆಯ ಪರಿಸ್ಥಿತಿಯನ್ನು ಊಹಿಸಬಹುದಲ್ಲವೇ?

೧.೬ ಅಧ್ಯಯನದ ವಿಧಿ ವಿಧಾನಗಳು

ಯಾವುದೇ ಅಧ್ಯಯನಕ್ಕೆ ಇಂತಹದ್ದೇ ವಿಧಾನವನ್ನು ಅನುಸರಿಸಬೇಕು ಎಂದು ಕಡಾಖಂಡಿತವಾಗಿ ಹೇಳಲು ಬರುವುದಿಲ್ಲ. ಯಾಕೆಂದರೆ ಬೇರೆ ಬೇರೆ ಕ್ಷೇತ್ರಗಳ ಅಧ್ಯಯನಗಳು ಅವುಗಳದೇ ಆದ ಅಧ್ಯಯನದ ವಿಧಾನಗಳನ್ನು ಒಳಗೊಂಡಿರುತ್ತವೆ. ಎಷ್ಟು ಅಧ್ಯಯನಗಳಿರುತ್ತವೆಯೋ ಅಷ್ಟೂ ಬಗೆಯ ಅಧ್ಯಯನದ ವಿಧಾನಗಳೂ ಇರುತ್ತವೆ. ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ವಿಧಾನಗಳನ್ನು ರೂಪಿಸಿ, ರೂಢಿಸಿಕೊಳ್ಳಬೇಕಾಗುತ್ತದೆ.

ಈ ಅಧ್ಯಯನವನ್ನು ಕೈಗೊಳ್ಳಬೇಕು ಎಂದು ಯೋಚಿಸುವ ಮೊದಲು ಹೊಸಪೇಟೆಯ (ಬಳ್ಳಾರಿ ಜಿಲ್ಲೆ) ಸರ್ಕಾರೇತರ ಸಂಸ್ಥೆಯೊಂದರಲ್ಲಿ 'ಹೈದರಾಬಾದ್ ಕರ್ನಾಟಕದ ದಲಿತ ಯುವತಿಯರೊಂದಿಗೆ ಮುಕ್ತ ಮಾತುಕತೆ' ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಮೂರು ವರ್ಷಗಳ ಕಾಲ ಕೆಲಸ ಮಾಡುವ ಸಂದರ್ಭದಲ್ಲಿ ನನಗೆ ದಲಿತ ಮಹಿಳೆಯರಿಗೆ ಇರುವ ಅನುಭವಗಳು ದಟ್ಟವಾದವು. ದಲಿತ ಯುವತಿಯರ ಮನೆಗಳಿಗೆ ಭೇಟಿ ಕೊಡುತ್ತಿದ್ದರಿಂದ ಅವರ ತಾಯಿ, ಅಜ್ಜಿ, ದೊಡ್ಡಮ್ಮ, ಚಿಕ್ಕಮ್ಮ ಇವರ ಎಲ್ಲರ ಕತೆಗಳೂ ಇಡೀ ದಲಿತ ಪರಂಪರೆಯನ್ನೇ ಬಿಚ್ಚಿಡುತ್ತಿದ್ದವು. ನಾನೂ ಸಹ ದಲಿತ ಕುಟುಂಬದಿಂದಲೇ ಬಂದಿರುವವಳಾಗಿದ್ದರಿಂದ ಆ ಅನುಭವಗಳು ನನ್ನ ಅನುಭವಗಳೊಂದಿಗೆ ಸೇರಿ ಇನ್ನಷ್ಟು ವಿಸ್ತರಿಸಿಕೊಂಡವು. ಹೀಗೆ ೩-೪ ತಲೆಮಾರುಗಳಲ್ಲಿ ಸಂಭವಿಸುವ ತಲ್ಲಣಗಳನ್ನು ಹಿಡಿದಿಡಬೇಕೆನಿಸಿತು. ಅದರ ಅಂಗವಾಗಿ ಹೈದರಾಬಾದ್ ಕರ್ನಾಟಕದ ಜಿಲ್ಲೆ ಬಳ್ಳಾರಿಯ ದಲಿತ ಮಹಿಳೆಯನ್ನು ಅಧ್ಯಯನಕ್ಕೊಳಪಡಿಸಲು ಸಾಧ್ಯವಾಯಿತು.

ಆದರೂ ಪ್ರಾದೇಶಿಕವಾಗಿ ಸಮಸ್ಯೆಗಳನ್ನು ಬೇರೆ ಬೇರೆಯಾಗಿಯೇ ನೋಡಬೇಕಾಗುತ್ತದೆ. ಅಕ್ಕಪಕ್ಕದ ಹಳ್ಳಿಗಳಲ್ಲಿನ ದಲಿತ ಮಹಿಳೆಯಲ್ಲಿಯೂ ವ್ಯತ್ಯಾಸಗಳು ಕಂಡುಬರುತ್ತವೆ. ಆದುದರಿಂದ ಇಲ್ಲಿ ಬಳ್ಳಾರಿಯ ದಲಿತ ಮಹಿಳೆಯರ ಸಾರ್ವತ್ರಿಕ ಸಮಸ್ಯೆಗಳನ್ನು ಚರ್ಚಿಸಲಾಗಿದೆ.

ಕ್ಷೇತ್ರಕಾರ್ಯ ಆಧಾರಿತವಾದ ಈ ಅಧ್ಯಯನದಲ್ಲಿ ದಲಿತ ಮಹಿಳೆಯರ 'ತಿಳುವಳಿಕೆ'ಯನ್ನೇ ಮುಖ್ಯ ಆಕರವಾಗಿ ಪರಿಗಣಿಸಲಾಗಿದೆ. ಹಾಗೂ ದೇಶೀ ಸಂಶೋಧನಾ ವಿಧಾನದ ಮೂಲಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಈ ಕಾರಣಕ್ಕಾಗಿಯೇ ಅಂಕಿಅಂಶಗಳನ್ನು ಮುಖ್ಯ ಎಂದು ಪರಿಗಣಿಸಿಲ್ಲ. ನನ್ನ ಸಂಶೋಧನೆಯ ವಿಧಿ-ವಿಧಾನಗಳನ್ನು ಮೂರು ಹಂತಗಳಾಗಿ ವಿಭಾಗಿಸಿಕೊಳ್ಳಬಹುದು ಎನಿಸುತ್ತದೆ.

೧. **ಮೊದಲ ಹಂತ:** ಬಳ್ಳಾರಿಯ ದಲಿತ ಮಹಿಳೆಯರಿಗೂ ಇತರ ದಲಿತ ಮಹಿಳೆಯರಿಗೂ ವ್ಯತ್ಯಾಸಗಳೇನಿವೆ ಎಂಬುವುದನ್ನು ತಿಳಿದುಕೊಳ್ಳುವ ಸಲುವಾಗಿಯೇ ಕೋಲಾರ ನಗರ, ಹಳ್ಳಿ, ಬೆಂಗಳೂರು, ಮೈಸೂರು ಸ್ಲಮ್‌ಗಳಲ್ಲಿ ಕ್ಷೇತ್ರಕಾರ್ಯವನ್ನು ಕೈಗೊಂಡು ಸಾರ್ವತ್ರಿಕ ಅಂಶಗಳನ್ನು ಪಟ್ಟಿ ಮಾಡಿಕೊಳ್ಳಲಾಯಿತು. ಅದಕ್ಕಿಂತಲೂ ಭಿನ್ನವಾದ ಅನುಭವಗಳು ಬಳ್ಳಾರಿಯ ದಲಿತ ಮಹಿಳೆಯರಲ್ಲಿ ಕಂಡುಬಂದಿದ್ದರಿಂದ ಪ್ರಾದೇಶಿಕ ಅಧ್ಯಯನವನ್ನು ಕೈಗೊಳ್ಳುವ ಸಲುವಾಗಿ ಬಳ್ಳಾರಿ ಜಿಲ್ಲೆಯನ್ನು ಅಧ್ಯಯನದ ವ್ಯಾಪ್ತಿಯಾಗಿ ಮಾಡಿಕೊಳ್ಳಲಾಯಿತು. ದಲಿತಾನುಭವಗಳು ಘಾತವಾಗಿರುವ ಕೃಷಿಕೂಲಿಕಾರ್ಮಿಕ, ಜಾಡಮಾಲಿ ಮಹಿಳೆಯರನ್ನು ಜಿಲ್ಲೆಯಾದ್ಯಂತ ಗುರುತಿಸಿ ಕಾರ್ಡು ಮೂಲಕ ಪಟ್ಟಿ ಮಾಡಿಕೊಳ್ಳಲಾಯಿತು. ಇದಕ್ಕೆ ಪೂರಕವಾದ ಓದಿಗಾಗಿ ಪುಸ್ತಕ ಪಟ್ಟಿಯನ್ನು ತಯಾರಿಸಿ ಅಧ್ಯಯನದಲ್ಲಿ ತೊಡಗಲಾಯಿತು.

೨. **ಎರಡನೇ ಹಂತ:** ಹಿಂದೆ ಪಟ್ಟಿ ಮಾಡಿಕೊಂಡ ದಲಿತ ಮಹಿಳೆಯರ ಆತ್ಮಕಥನಗಳನ್ನು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಲಾಯಿತು. ಬೆಳಗಿನ ಸಮಯ ಎಲ್ಲಾ ದಲಿತ ಮಹಿಳೆಯರು ಕೆಲಸದಲ್ಲಿ ನಿರತರಾಗಿರುವ ಕಾರಣ ಬೆಳಗಿನ ವೇಳೆ ಕ್ಷೇತ್ರಕಾರ್ಯ ಮಾಡಲು ತೊಂದರೆಯಾಯಿತು.

ಈ ಅಧ್ಯಯನದ ಪ್ರಶ್ನಾವಳಿ ಕೇವಲ ಪ್ರಶ್ನೆಗೆ ಉತ್ತರ (ಟಿಕ್‌ಮಾರ್ಕ್ ಪ್ರಶ್ನೆಯಲ್ಲ) ಅಲ್ಲ ಅವು ನಿಮ್ಮ ಹೆಸರೇನು? ನಿಮ್ಮ ಹೆಸರನ್ನು ಯಾಕೆ ಹೀಗೆ ಇಟ್ಟಿದ್ದಾರೆ? ನಿಮ್ಮ ಅಜ್ಜಿ, ಅಮ್ಮ ಹೇಗೆ ಜೀವನ ಮಾಡಿದರು? ಆಗಿನ ಪರಿಸ್ಥಿತಿ ಹೇಗಿತ್ತು? (ಜಾತಿ, ಲಿಂಗ, ವರ್ಗದ ಹಿನ್ನೆಲೆಯಲ್ಲಿ) ವರ್ತಮಾನದಲ್ಲಿ ವರ್ಗ, ಜಾತಿ, ಲಿಂಗಕ್ಕೆ ಸಂಬಂಧಿಸಿದಂತೆ ನಿಮ್ಮ ಅನುಭವ ಏನು? ಏನನಿಸುತ್ತೆ...? ಹೀಗೆ ಪ್ರಶ್ನಾವಳಿ ಸಾಗುತ್ತದೆ. ಸಂದರ್ಭಕ್ಕೆ ತಕ್ಕಂತೆ ಪಟ್ಟಿಯಲ್ಲಿ ಇಲ್ಲದ ಪ್ರಶ್ನೆಗಳನ್ನು ಕೇಳಲಾಗುತ್ತಿತ್ತು. ಪ್ರಶ್ನೆಗಳನ್ನು ಪಠ್ಯ ಭಾಷೆಯಲ್ಲಿ ಬರೆದುಕೊಂಡು ಅವರಿಗೆ ಪ್ರಶ್ನೆ ಕೇಳುವಾಗ ದೇಶೀ ಭಾಷೆ (ಬಳ್ಳಾರಿ ಭಾಷೆ)ಯಲ್ಲಿ ಪ್ರಶ್ನೆ ಕೇಳಬೇಕಾಗುತ್ತಿತ್ತು. ಆಗ ಮಾತ್ರ ಅವರಿಂದ ಸರಾಗವಾಗಿ ಉತ್ತರ ಬರುತ್ತಿತ್ತು. ಹೀಗೆ ಪ್ರಶ್ನೆಗಳು ದೀರ್ಘವಾದ ಉತ್ತರವನ್ನು ಬಯಸುವ ಪ್ರಶ್ನೆಗಳಾಗಿದ್ದವು. ಅವರ ಬಿಡುವಿನ ಸಮಯದಲ್ಲಿ ರಾತ್ರಿವೇಳೆ ಕ್ಷೇತ್ರಕಾರ್ಯವನ್ನು ಮಾಡುವ ನಿರ್ಧಾರ ಮಾಡಲಾಯಿತು. ಅದಕ್ಕೆ ಅವರ ಒಪ್ಪಿಗೆಯನ್ನು ಪಡೆದುಕೊಳ್ಳಲಾಯಿತು. ಸಾಮಾನ್ಯವಾಗಿ ಎಲ್ಲರೂ ಒಪ್ಪುತ್ತಿದ್ದರು. ಒಬ್ಬರು, ಇಬ್ಬರನ್ನು ಬಿಟ್ಟು ಹೀಗೆ ಮೂರು ತಲೆಮಾರುಗಳ ಕಥೆಯನ್ನು ಸಂಗ್ರಹಿಸಲಾಯಿತು. ಒಂದೇ ಮನೆಯಲ್ಲಿ ಎರಡು ಮೂರು ರಾತ್ರಿ ಇರಬೇಕಾಗಿ ಬರುತ್ತಿತ್ತು.

ರಾತ್ರಿಯ ಅದ್ಭುತ ಲೋಕದಲ್ಲಿ ಜನಪದರ ಕಾವ್ಯಗಳು, ಗೀತೆಗಳು, ಗಾಢಾಂಧಕಾರದ ಕತ್ತಲೆಯಲ್ಲಿ ತೇಲಿ ಹೋಗುವ ರಾಜಕುಮಾರಿಯ ಕತೆಗಳು ಇವೆಲ್ಲವೂ ಅಭಿವ್ಯಕ್ತಿಸಲ್ಪಡುವುದು ರಾತ್ರಿಯ ಕತ್ತಲಲ್ಲಿಯೇ. ರಾತ್ರಿಯ ನೀರವತೆ ಜನಪದರ ಪಠ್ಯದ ಸಂದರ್ಭವಾಗಿರುವುದರಿಂದ ತಮ್ಮ ತಾಯಿ, ಅಜ್ಜಿ, ಮುತ್ತಜ್ಜಿ ತನ್ನ ಕತೆಯನ್ನು ಸುದೀರ್ಘವಾಗಿ ಹೇಳುತ್ತಿದ್ದರು. ಅದನ್ನು ಟೇಪ್‌ರೆಕಾರ್ಡ್‌ರ್ ಮೂಲಕ ರೆಕಾರ್ಡ್ ಮಾಡಿಕೊಳ್ಳುತ್ತಿದ್ದೆ. ಅದೇ ರೆಕಾರ್ಡ್‌ನಿಂದ ಅವರ ಕಥೆಯನ್ನು ಅವರಿಗೇ ಹಾಕಿ ಕೇಳಿಸಿದಾಗ ಅವರಿಗೆ ಖುಷಿಯಾಗುತ್ತಿತ್ತು. ಪೂರ್ಣ ಪ್ರಮಾಣವಾಗಿ ಅವರಲ್ಲಿಯೇ ಒಬ್ಬಳಾಗಿ ಬೆರೆತು ಹೋಗಬೇಕಾಗಿತ್ತು. ಇದರಿಂದ ಅವರು ಇನ್ನಷ್ಟು ಚರಿತ್ರೆ ಬಿಚ್ಚಿಡುತ್ತಿದ್ದರು. ಆ ಸಂದರ್ಭದಲ್ಲಿ ಆ ಪಠ್ಯಕ್ಕೆ ಸಂಭವಿಸುವ ಇತರ ಅಂಶಗಳನ್ನು ನೋಟ್ ಮಾಡಿಕೊಳ್ಳಲಾಗುತ್ತಿತ್ತು.

ಆ ಸಂದರ್ಭದಲ್ಲಿ ಸಮಸ್ಯೆ ಎನಿಸಿದ್ದನ್ನು ಕುರಿತು ನುರಿತ ವಿದ್ವಾಂಸರೊಂದಿಗೆ ಚರ್ಚಿಸಲಾಗುತ್ತಿತ್ತು. ಹಾಗೂ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಗುತ್ತಿತ್ತು. ವಾರ್ಷಿಕಾವರ್ತನ ಹಾಗೂ ಜೀವನಾವರ್ತನ ಆಚರಣೆಗಳ ವಿಧಿ-ವಿಧಾನಗಳನ್ನು ಫೋಟೋ ಮೂಲಕ ಸೆರೆ ಹಿಡಿದುಕೊಳ್ಳಲಾಯಿತು. ಹಾಗೂ ಎಲ್ಲಾ ವಿಧಾನಗಳನ್ನು ಹಾಗೂ ಅದಕ್ಕೆ ಪೂರಕವಾದ ಇತರ ಅಂಶಗಳನ್ನು ನೋಟ್ ಮಾಡಿಕೊಳ್ಳಲಾಯಿತು.

ದಲಿತ ಚಳುವಳಿಯಲ್ಲಿ ದಲಿತ ಮಹಿಳೆ ಪಾತ್ರದ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಯನ್ನು ತಯಾರಿಸಿ ದಲಿತ ಚಿಂತಕರನ್ನು ಸಂದರ್ಶಿಸಿ ಪ್ರಶ್ನೆಗೆ ಉತ್ತರವನ್ನು ಪಡೆದುಕೊಂಡು ಅದನ್ನು ಹಾಗೆಯೇ ಬರೆದುಕೊಳ್ಳಲಾಯಿತು, ಆ ಪ್ರಶ್ನೆಗಳು ಈ ರೀತಿಯಾಗಿದ್ದವು.

* ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು? ಅದು ಯಾವ ರೀತಿಯದು?
* ದಲಿತ ಚಳುವಳಿಯು ದಲಿತ ಮಹಿಳೆಯನ್ನು ಯಾವ ರೀತಿ ನೋಡಿದೆ?
* ದಲಿತ ನಾಯಕರಂತೆ ದಲಿತ ನಾಯಕಿಯರೂ ಚಳುವಳಿಯಲ್ಲಿ ಇದ್ದಾರೆಯೇ? ಅವರು ಯಾರು? ಏನಾಗಿದ್ದರು? ಏನಾಗಿದ್ದಾರೆ?
* ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆಯ ಬಗ್ಗೆ ನಿಮಗೇನನಿಸುತ್ತದೆ?

೩. ಮೂರನೇ ಹಂತ: ಇದು ಓದು, ಕ್ಷೇತ್ರಕಾರ್ಯ, ನುರಿತ ವಿದ್ವಾಂಸರ ಚರ್ಚೆ, ವಿಶ್ಲೇಷಣೆ/ವಿಮರ್ಶೆ/ ವಿವರಣೆಗಳ ಪರಿಶೀಲನೆ ಹಾಗೂ ಬರವಣಿಗೆಯ ಹಂತ. ಬರವಣಿಗೆಯಲ್ಲಿ ಕೆಲವು ಕಡೆ ಸಮಸ್ಯೆಗಳು ಎದುರಾದಾಗ ಕ್ಷೇತ್ರಕ್ಕೆ ಹೋಗಿ ಮತ್ತೊಮ್ಮೆ ಸಮಸ್ಯೆಯನ್ನು ಪರಿಶೀಲಿಸಲಾಯಿತು. ಮತ್ತು ಅದರ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲಾಯಿತು.

ಹೀಗೆ ದಲಿತ ಮಹಿಳಾ ಸಂಕಥನವನ್ನು ರೂಪುಗೊಳಿಸಲಾಗಿದೆ. ದಲಿತ ಮಹಿಳಾ ಆತ್ಮಕಥನ ಎಲ್ಲಾ ಅಂಕಿಅಂಶಗಳನ್ನು ಮೀರಿದ್ದು ಇಲ್ಲಿ ದಲಿತ ಮಹಿಳೆಯನ್ನು ನಿರ್ವಚಿಸಲು ಅವಳ ಆತ್ಮಕಥೆಯೇ ಮುಖ್ಯ ಆಕರವಾಗಿ ನಿಲ್ಲುತ್ತದೆ. ಮುಂದಿನ ವಿವರಣೆ, ವಿಶ್ಲೇಷಣೆ ಏನಿದ್ದರೂ ಆತ್ಮಕಥೆಯ ಮುಂದುವರಿಕೆ ಅಥವಾ ಅದಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಈ ರೀತಿಯಾಗಿ ಪ್ರಸ್ತುತ ಅಧ್ಯಯನದ ವಿಧಿ-ವಿಧಾನಗಳು ಇವೆ.

೧.೭ ಇದುವರೆವಿಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ

ಇಡೀ ಭಾರತದ ಯಾವುದೇ ಪ್ರದೇಶದಲ್ಲಿನ ಅಸ್ಪೃಶ್ಯ ಜನವರ್ಗದವರ ಬಹುತೇಕ ಸಮಸ್ಯೆಗಳು, ಜೀವನ ವಿಧಾನ, ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳು ಹೆಚ್ಚುಕಡಿಮೆ ಒಂದೇ ರೀತಿಯದ್ದಾಗಿರುತ್ತವೆ ಎಂದು ಹೇಳುವಾಗಲೂ ಪಂಚಮ ಸಮುದಾಯಗಳ ಸಂಸ್ಕೃತಿಯಂತಹ ಭಿನ್ನ ವಿಷಯಗಳನ್ನು ಕುರಿತು ಆಳವಾದ ಅಧ್ಯಯನದಲ್ಲಿ ತೊಡಗಿದಾಗ ಅನೇಕ ರೀತಿಯ ಸೂಕ್ಷ್ಮ ವ್ಯತ್ಯಾಸಗಳು ಕಂಡು ಬರುವುದು ಸಹಜ.

ಬಳ್ಳಾರಿಯ ಮಟ್ಟಿಗೆ ಈ ಮಾತು ಇನ್ನಷ್ಟು ಸತ್ಯ. ನಿರ್ದಿಷ್ಟವಾಗಿ ಅಸ್ಪೃಶ್ಯ ಮಹಿಳೆಗೆ ಸಂಬಂಧಿಸಿದಂತೆ ಸಮಗ್ರವಾದ ಯಾವ ಅಧ್ಯಯನಗಳೂ ಇದುವರೆಗೂ ನಡೆದಿಲ್ಲ.

ಅಸ್ಪೃಶ್ಯ ಜನವರ್ಗವನ್ನು ಕುರಿತು ಅಧ್ಯಯನ ಪ್ರಾರಂಭವಾಗಿದ್ದು ೧೮ ನೇ ಶತಮಾನದಲ್ಲಿ ಈ ಸಮುದಾಯಗಳನ್ನು ಮೊದಲಿಗೆ ಅಧ್ಯಯನ ಮಾಡಿದವರೆಂದರೆ ಥರ್ಸ್ಟನ್. ಕ್ಯಾಸ್ಟ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯಾದಲ್ಲಿ. ಇದು ಹೊಲೆಮಾದಿಗರನ್ನು ಕುರಿತು ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ.

ಎಲ್.ಕೆ.ಎ. ಅಯ್ಯರ್ ಅವರ 'ದಿ ಮೈಸೂರು ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್' ಕೆ.ಎಸ್. ಸಿಂಗ್ ಅವರ 'ಇಂಡಿಯನ್ ಕಮ್ಯುನಿಟೀಸ್' ಎಂಬ ಗ್ರಂಥಗಳು ಹೊಲೆಮಾದಿಗರ ಬಗ್ಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತವೆ.

ಕನ್ನಡದ ಸಂದರ್ಭದಲ್ಲಿ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಯಾವುದೇ ಅಧ್ಯಯನಗಳು ನಡೆದಿರುವುದಿಲ್ಲ. ಆದರೆ ಅದಕ್ಕೆ ಪೂರಕವೆಂಬಂತೆ ನಡೆದಿರುವ ಅಧ್ಯಯನಗಳು ಈ ರೀತಿ ಇವೆ.

ಡಾ. ಮೈಲಹಳ್ಳಿ ರೇವಣ್ಣರವರು 'ಚಿತ್ರದುರ್ಗ ಜಿಲ್ಲೆಯ ಮಾದರ ಜನಾಂಗದ ಜಾನಪದ ಕಾವ್ಯಗಳು' ಎಂಬುವುದರಲ್ಲಿ ಮಾದಿಗ ಮಹಿಳೆಯರಿಂದಲೇ ಹೆಚ್ಚು ಸಂಗ್ರಹವಾಗಿರುವ ಕಾವ್ಯಗಳಲ್ಲಿ ಮಾದಿಗರ ಸಂಸ್ಕೃತಿಯಲ್ಲಿ ಅಡಗಿರುವ ಭಾಷೆ, ಆಹಾರ, ಪದ್ಧತಿ, ನಂಬಿಕೆ ಮುಂತಾದ ಸಂಪ್ರದಾಯಗಳನ್ನು ಕುರಿತು ವಿವರಿಸಿದ್ದಾರೆ. ಉಪಸಂಸ್ಕೃತಿ ಮಾಲೆಯ ಸರಣಿಯಲ್ಲಿ ಬಂದಿರುವ ಕೋಟಗಾನಹಳ್ಳಿರಾಮಯ್ಯರವರ 'ಸಿಂಧ್ ಮಾದಿಗರ ಸಂಸ್ಕೃತಿ', ನಾಗರಾಜರವರ 'ಕೆಂಬಟ್ಟೆ ಹೊಲೆಯರ ಸಂಸ್ಕೃತಿ', ಗುಲ್ಬರ್ಗ ವಿ.ವಿಯಲ್ಲಿ ಅಧ್ಯಯನ ಕೈಗೊಂಡ ಬುದ್ಧ ಕಾಶಪ್ಪನವರ 'ಹೈದ್ರಾಬಾದ್ ಕರ್ನಾಟಕದ ಮಾದಿಗರ ಸಾಂಸ್ಕೃತಿಕ ಅಧ್ಯಯನ', ಕನ್ನಡ ವಿ.ವಿಯಲ್ಲಿ ಅಧ್ಯಯನ ಮಾಡಿರುವ ಕೆ.ಆರ್.ಜೆ. ರಾಜಕುಮಾರ್ ಅವರ 'ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಮಾದಿಗರು: ಚಾರಿತ್ರಿಕ ಅಧ್ಯಯನ', ಸುಭಾಷ್ ಭರಣಿಯವರು ಕನ್ನಡ ವಿ.ವಿಯಲ್ಲಿ ಡಿ.ಲಿಟ್‌ಗಾಗಿ ಸಲ್ಲಿಸಿದ ಮಹಾಪ್ರಬಂಧವಾದ 'ಮೈಸೂರು ಜಿಲ್ಲೆಯ ಆದಿ ಕರ್ನಾಟಕರ ಅಭಿವೃದ್ಧಿ- ಒಂದು ಅಧ್ಯಯನ' ಇವೆಲ್ಲವೂ ಹೊಲೆಮಾದಿಗರ ಸಂಸ್ಕೃತಿಯನ್ನು ಒಟ್ಟಾಗಿಯೇ ಹೇಳಿ ಮುಗಿಸುತ್ತವೆಯೇ ಹೊರತು ಪ್ರತ್ಯೇಕವಾಗಿ ದಲಿತ ಮಹಿಳೆಯನ್ನು ಕುರಿತು ಯಾವ ವಿಷಯವನ್ನು ಪ್ರಸ್ತಾಪಿಸುವುದಿಲ್ಲ. ಇಂತಹ ಅಧ್ಯಯನಗಳನ್ನು ಓದುವಾಗ ಓದುಗರೆ ದಲಿತ ಮಹಿಳೆಯು ಎಲ್ಲಿದ್ದಾಳೆ ಎಂದು ಹುಡುಕಿಕೊಳ್ಳಬೇಕಾಗುತ್ತದೆ. ಇಲ್ಲಿನ ಕಥೆ, ಗೀತೆ, ಕಾವ್ಯಗಳಲ್ಲಿ ದಲಿತ ಮಹಿಳೆ ಇದ್ದಾಳೆ ಎಂಬುದನ್ನು ಮರೆಯುವಂತಿಲ್ಲ.

ಕನ್ನಡದ ಸಂದರ್ಭದಲ್ಲಿ ದಲಿತ ಮಹಿಳೆಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳು ಈ ರೀತಿ ಇವೆ. ಡಾ. ಜೋಗನ್‌ಶಂಕರ್‌ರವರ ಪಿಎಚ್.ಡಿ ಮಹಾಪ್ರಬಂಧ 'ದೇವದಾಸಿ ಸಂಪ್ರದಾಯ'ದಲ್ಲಿ ಹೊಲೆಮಾದಿಗ ಮಹಿಳೆಯರಲ್ಲಿಯೇ ಹೆಚ್ಚಾಗಿ ಕಂಡುಬರುವ ದೇವದಾಸಿ ಸಂಪ್ರದಾಯವನ್ನು ವಿಸ್ತಾರವಾಗಿ ವಿಶ್ಲೇಷಿಸಿದ್ದಾರೆ. ಇದರಿಂದ ಹೊಲೆಮಾದಿಗ ದೇವದಾಸಿ ಮಹಿಳೆಯರ ಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ಇದು ಉಪಯುಕ್ತ ಗ್ರಂಥವಾಗಿದೆ. ಡಾ. ಸಿದ್ಧಲಿಂಗಯ್ಯರವರ 'ಗ್ರಾಮದೇವತೆಗಳು', ಚೆನ್ನಣ್ಣವಾಲಿಕರರವರ 'ದೇವದಾಸಿ ಪದ್ಧತಿ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ ಸ್ಥಿತಿಗತಿಗಳ ಅಧ್ಯಯನ'ವು ದೇವದಾಸಿ ಸಂಪ್ರದಾಯವನ್ನು ಕುರಿತಂತೆ ಐತಿಹಾಸಿಕ ವಿಶ್ಲೇಷಣೆಯಿಂದ ಹಿಡಿದು ಪ್ರಸ್ತುತದ ಸ್ಥಿತಿಗತಿಗಳವರೆಗೆ ಚರ್ಚಿಸಲಾಗಿದೆ.

ಎಸ್.ಎಸ್. ಹಿರೇಮಠರವರ ಹಬ್ಬಗಳು ಭಾಗ - ೧, ಜಾತ್ರೆಗಳು ಭಾಗ - ೨ ಎಂಬ ಕೃತಿಗಳಲ್ಲಿ ಕರ್ನಾಟಕದ ದಲಿತ ಸಂಸ್ಕೃತಿಯ ಪರಂಪರೆಯ ಶೋಧವನ್ನು ಕೈಗೊಂಡಿದ್ದಾರೆ. ಶಾಸನಗಳು, ಸ್ಮಾರಕಗಳು, ದಲಿತ ಸಮುದಾಯಗಳು, ಗ್ರಾಮದೇವತೆಗಳು ಕುರಿತಿರುವ ಕಥೆಗಳು, ಅವರ ವಾರ್ಷಿಕಾವರ್ತನ ವಿಧಾನ, ಜೀವನಾವರ್ತನ ವಿಧಾನಗಳ ಆಧಾರದ ಮೇಲೆ ಹೊಲೆಮಾದಿಗ ಮಹಿಳೆಯರೇ ಈ ನೆಲದ ಮೊದಲ ಕೃಷಿಕರೆಂಬುದನ್ನು ಸಾಬೀತುಪಡಿಸಿದ್ದಾರೆ. ಇದು ದಲಿತ ಮಹಿಳೆಯನ್ನು ಕುರಿತು ಅಧ್ಯಯನವನ್ನು ಮಾಡುವವರೆಗೆ ಸಾಕಷ್ಟು ಮಾಹಿತಿಯನ್ನು ಒದಗಿಸುತ್ತದೆ. ಕರ್ನಾಟಕದ ದಲಿತ ಸಂಸ್ಕೃತಿಯನ್ನು ಕುರಿತು

ಅಧ್ಯಯನ ಮಾಡುವವರು ಈ ಗ್ರಂಥವನ್ನು ಪರಿಶೀಲಿಸದೆ ಮುಂದೆ ಹೋಗುವ ಹಾಗಿಲ್ಲ. ಇದೇ ನಿಟ್ಟಿನಲ್ಲಿ ಮೊಗಳ್ಳಿ ಗಣೇಶಯವರ 'ಆದಿಮ' ಸಂಶೋಧನಾ ಗ್ರಂಥವು ಸಾಗುತ್ತದೆ. ಇದರಲ್ಲಿ ದಲಿತ ಸಂಸ್ಕೃತಿಯಲ್ಲಿಯೇ ಪ್ರಧಾನವಾಗಿರುವ ಮಾತೃಪ್ರಧಾನ ಪರಿಕಲ್ಪನೆಗಳನ್ನು ಭಿನ್ನವಾಗಿ ಅರ್ಥೈಸಿದ್ದಾರೆ. ದಲಿತ ಮಹಾಳಾ ಶೋಧನೆಗೆ ಇದು ಸಹ ತುಂಬಾ ಉಪಯುಕ್ತ ಗ್ರಂಥವಾಗಿದೆ. ಮೈಸೂರು ವಿ.ವಿಯಲ್ಲಿ ಅಧ್ಯಯನ ಕೈಗೊಂಡ ಸಮತಾ ದೇಶಮಾನೆಯವರ 'ದಲಿತ ಮಹಿಳೆ: ಸಮಾಜ ಶಾಸ್ತ್ರೀಯ ಅಧ್ಯಯನ'ವು ಗುಲ್ಬರ್ಗಾ ಜಿಲ್ಲೆಯನ್ನು ವ್ಯಾಪ್ತಿಯಾಗಿರಿಸಿಕೊಂಡು ಸಮಾಜ ಶಾಸ್ತ್ರೀಯ ಹಿನ್ನೆಲೆಯಲ್ಲಿ ಪ್ರಶ್ನಾವಳಿ ವಿಧಾನವನ್ನು ಅನುಸರಿಸಿ ದಲಿತ ಮಹಿಳೆಯ ಅಧ್ಯಯನವನ್ನು ಕೈಗೊಂಡಿದ್ದಾರೆ. ಇದು ದಲಿತ ಮಹಿಳೆಯ ಸಾಂಸ್ಕೃತಿಕ ಸ್ಥಿತಿಯ ಮೇಲೆ ಅಷ್ಟು ಬೆಳಕು ಬೀರುವುದಿಲ್ಲ. ಅರವಿಂದ್ ಮಾಲಗತ್ತಿಯವರ ದಲಿತವಾದ ಸ್ತ್ರೀವಾದದಿಂದ ದಲಿತ ಸ್ತ್ರೀವಾದದೆಡೆಗೆ (ಲೇಖನ) ಲೇಖನವು ದಲಿತ ಸ್ತ್ರೀವಾದವು ದಲಿತವಾದವನ್ನು, ಸ್ತ್ರೀವಾದವನ್ನು ಒಳಗೊಂಡಂತೆ ದೇಶೀ ನೆಲೆಯಲ್ಲಿ ಹೇಗೆ ರೂಪಗೊಳ್ಳಬೇಕೆಂಬುವುದನ್ನು ವಿವೇಚಿಸಿದ್ದಾರೆ. ಮೊಗಳ್ಳಿ ಗಣೇಶರವರ ದಲಿತರು ಮತ್ತು ಜಾಗತೀಕರಣದಲ್ಲಿರುವ ಒಂದು ಅಧ್ಯಾಯವಾದ ದಲಿತ ಮಹಿಳಾ ಸಂವೇದನೆ ಹಾಗೂ ಅವರ 'ದಲಿತ ಕಥನ'ದಲ್ಲಿರುವ ದಲಿತ ಮಹಿಳಾ ಪರಿಕಲ್ಪನೆ ಲೇಖನವು ದಲಿತ ಸ್ತ್ರೀವಾದವು ಪಾಶ್ಚಾತ್ಯಾ ಸ್ತ್ರೀವಾದವುಗಳಿಗೆ ಜೋತುಬೀಳದೆ ದೇಶೀ ಪರಿಕಲ್ಪನೆ ನೆಲೆಯಲ್ಲಿ ಹೇಗೆ ರೂಪಗೊಳ್ಳಬೇಕೆಂಬುದನ್ನು ತಿಳಿಸುತ್ತಾರೆ.

ಶೈಲಜಾ ಹಿರೇಮಠರವರ 'ಸ್ತ್ರೀಕಥನ'ದಲ್ಲಿನ ಒಂದು ಲೇಖನವಾದ 'ದಲಿತ ಸ್ತ್ರೀವಾದದ ಅಗತ್ಯತೆ ಮತ್ತು ಪ್ರಸ್ತುತತೆ' ಎಂಬುದರಲ್ಲಿ ದಲಿತ ಸ್ತ್ರೀವಾದ, ಸ್ತ್ರೀವಾದಗಳನ್ನು ಒಳಗೊಂಡಂತೆ ದೇಶೀ ಸಮಸ್ಯೆಗಳನ್ನು ಮುಖ್ಯವಾಗಿಸುವ ಕಡೆ ಮುಖ ಮಾಡಬೇಕೆಂಬುದನ್ನು ತಿಳಿಸಿದ್ದಾರೆ. ಬಿ.ಎಮ್.ಪುಟ್ಟಯ್ಯರವರ ದಲಿತ ಚಳುವಳಿಯಲ್ಲಿ ದಲಿತ ಪಾತ್ರ ಎಂಬ ಲೇಖನದಲ್ಲಿ ದಲಿತ ಚಳುವಳಿಯಲ್ಲಿ ದಲಿತ ಮಹಿಳೆಯು ಪ್ರತ್ಯಕ್ಷವಾಗಿ ಅಲ್ಲದೆ ಪರೋಕ್ಷವಾಗಿಯೂ ಜಾನಪದ ಗೀತೆಗಳ ಮೂಲಕ ಬಾಗಿಯಾಗಿರುವುದನ್ನು ಗುರುತಿಸುತ್ತಾರೆ.

ಆರ್. ರಘುರವರ ಸಂಪಾದಕತ್ವದಲ್ಲಿ 'ಭಂಗಿ ಬಂಧು' ಎಂಬ ಮಾಸ ಪತ್ರಿಕೆ - ಜಾಡಮಾಲಿ ಮಹಿಳೆಯ ಇಡೀ ಚಿತ್ರಣವನ್ನು ಚಿತ್ರಿಸುತ್ತದೆ. ಬಳ್ಳಾರಿಯ ಹೊಸಪೇಟೆಯ ಸರ್ಕಾರೇತರ ಸಂಸ್ಥೆಯಾದ 'ಸಖಿ'ಯು ತನ್ನ ತ್ರೈಮಾಸಿಕ ಪತ್ರಿಕೆಯಲ್ಲಿ ಜಿಲ್ಲೆಯ ದಲಿತ ಮಹಿಳೆಯರ ಮೂರು ತಲೆಮಾರುಗಳ ಚಿತ್ರಣವನ್ನು ನಿರೂಪಿಸುತ್ತದೆ. ದಲಿತ ಮಹಿಳೆಯರ ಅಧ್ಯಯನದ ದೃಷ್ಟಿಯಿಂದ ಇದು ತುಂಬಾ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ.

ಇತ್ತೀಚೆಗೆ ಇತಿಹಾಸದ ಮರು ಓದು ಪರಿಕಲ್ಪನೆಯ ಹಿನ್ನೆಲೆಯಲ್ಲಿ ಬಂದಿರುವ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಕೃತಿಗಳು ಇತಿಹಾಸದಲ್ಲಿ ಜನಸಾಮಾನ್ಯರ ಹಾಗೂ ದಲಿತ ಮಹಿಳೆಯರ ಸ್ಥಿತಿಗತಿಯನ್ನು ಕುರಿತು ವಿಫಲ ಮಾಹಿತಿಯನ್ನು ಒದಗಿಸುತ್ತವೆ. ಆದರೆ ಅವು ಬೆರಳೆಣಿಕೆ ಮಾತ್ರ. ಕನ್ನಡದಲ್ಲಂತೂ ಇಲ್ಲವೇ ಇಲ್ಲ ಎಂದರೆ ತಪ್ಪಾಗಲಾರದು.

ಈ ಹಿನ್ನೆಲೆಯಲ್ಲಿ ಪರಿಶೀಲಿಸಿ ನೋಡುವುದಾದರೆ ದಲಿತ ಮಹಿಳೆಗೆ ಸಂಬಂಧಿಸಿದಂತೆ ಸಾಮಾಜಿಕ, ಸಾಂಸ್ಕೃತಿಕ ಅಧ್ಯಯನಗಳು ಕರ್ನಾಟಕದ ಮಟ್ಟದಲ್ಲಿ ಇದುವರೆಗೂ ನಡೆದಿರುವುದಿಲ್ಲ. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನವು ದಲಿತ ಮಹಿಳೆಯ ಸಾಮಾಜಿಕ, ಸಾಂಸ್ಕೃತಿಕ ನೆಲೆಗಳ ಮೊದಲ ಅಧ್ಯಯನ ಎನ್ನುವುದರಲ್ಲಿ ಸಂದೇಹವಿಲ್ಲ ಎಂಬುವುದು ಇದರ ಮಹತ್ವವನ್ನು ತಿಳಿಸುತ್ತದೆ.

ಅಧ್ಯಾಯ ೨. ದಲಿತ ಮಹಿಳಾ ಪರಿಕಲ್ಪನೆ

ಅಧ್ಯಾಯ - ೨
ದಲಿತ ಮಹಿಳಾ ಪರಿಕಲ್ಪನೆ

೨.೧ ಪೀಠಿಕೆ

ಸಂಸ್ಕೃತಿ ಅಧ್ಯಯನಗಳು ಇಂದು ಬೇರೆ ಬೇರೆ ಆಯಾಮಗಳನ್ನು ಪಡೆದುಕೊಳ್ಳುತ್ತಿವೆ. ಒಂದು ಪ್ರದೇಶವನ್ನು ಸೀಮಿತವಾಗಿರಿಸಿಕೊಂಡು ಅಲ್ಲಿನ ಒಟ್ಟಾರೆ ಜನ ಜೀವನ ಪದ್ಧತಿಯನ್ನು ಅಧ್ಯಯನ ಮಾಡುವುದು ಪ್ರಾದೇಶಿಕ ಸಂಸ್ಕೃತಿ ಎನಿಸಿಕೊಳ್ಳುತ್ತದೆ. ಜಾತಿಯನ್ನು ಲಕ್ಷ್ಯಕ್ಕಿರಿಸಿಕೊಂಡು ಅಧ್ಯಯನ ಮಾಡುವುದು ಸಮುದಾಯ ಅಧ್ಯಯನವೆನಿಸಿದರೂ ಅದು ಕೂಡ ಪ್ರಾದೇಶಿಕ ವೈಫಲ್ಯಗಳನ್ನು ಪರಿಚಯಿಸುತ್ತದೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸಾಂಸ್ಕೃತಿಕ ವ್ಯತ್ಯಾಸಗಳು ತಲೆದೋರುವಂತೆಯೇ ಒಂದು ಪ್ರದೇಶದ ಜಾತಿಯೊಂದರ ಸಂಸ್ಕೃತಿಯು ಅದೇ ಸಮುದಾಯದ ಬೇರೊಂದು ಪ್ರದೇಶದ ಸಂಸ್ಕೃತಿಗಿಂತ ಭಿನ್ನತೆಗಳನ್ನು ಹೊಂದಿರಬಹುದು. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ಜಾತಿಯು ತಾನು ಜೀವಿಸುವ ಪ್ರದೇಶದ ಸಂಸ್ಕೃತಿಯಲ್ಲಿ ಅನನ್ಯತೆಯನ್ನು ಪಡೆದಿರುತ್ತದೆ. ನಮ್ಮ ಸಾಮಾಜಿಕ ಸಂದರ್ಭವನ್ನು ಗಮನಿಸಿ ಹೇಳುವುದಾದರೆ ಪ್ರತಿಯೊಂದು ಜಾತಿಯೂ ತಾನು ಪ್ರತ್ಯೇಕ ಅಸ್ತಿತ್ವದೊಂದಿಗೆ ಬದುಕುವುದರಿಂದ ಬೇರೊಂದು ಜಾತಿಗಿಂತ ಕೆಲವು ವಿಶಿಷ್ಟ ಲಕ್ಷಣಗಳನ್ನು ಹೊಂದಿರಬಹುದು.

ಬಳ್ಳಾರಿ ಜಿಲ್ಲೆಯಲ್ಲಿ ಮಾದಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರ ನಂತರ ಹೊಲೆಯರ ಸಂಖ್ಯೆ ಇದೆ. ಹೊಲೆಯರಿಗೆ ಈ ಜಿಲ್ಲೆಯಲ್ಲಿ ಬ್ಯಾಗಾರ (ಬೇಹುಗಾರ) ಚಲುವಾದಿ ಎಂಬ ಹೆಸರಿನಿಂದ ಕರೆಯುತ್ತಾರೆ. ಬಳ್ಳಾರಿಯಲ್ಲಿನ ಮಾದಿಗರನ್ನು ಎರಡು ರೀತಿಯಲ್ಲಿ ಗುರುತಿಸಬಹುದು.

೧. ಜಿಲ್ಲೆಯಲ್ಲಿ ಮೂಲದಿಂದ ಇರುವ ಮಾದಿಗರು

೨. ಆಂಧ್ರದಿಂದ ವಲಸೆ ಬಂದ ಮಾದಿಗರು

ಚಲುವಾದಿಗಳು ಮೂಲದವರಾದರೆ, ಮಾದಿಗರು ಆಂಧ್ರದಿಂದ ವಲಸೆ ಬಂದವರು. ಅವರ ಮನೆ ಮಾತು ತೆಲುಗು. ಜಿಲ್ಲೆಯಲ್ಲಿ ಮೂಲದಿಂದ ಇರುವ ಮಾದಿಗರ ಮನೆ ಮಾತು ಕನ್ನಡ. ಚಲುವಾದಿಗಳ ಮನೆಯ ಮಾತು ಕೂಡ ಕನ್ನಡವೆ. ವ್ಯವಹಾರಿಕವಾಗಿ ತೆಲುಗು, ಕನ್ನಡ ಎರಡೂ ಮಾತನಾಡುತ್ತಾರೆ. 'ಹೊಲೆಯ' ಎಂಬ ಪದವು ಕರ್ನಾಟಕದ ಸಂದರ್ಭದಲ್ಲಿ ಹೆಚ್ಚು ಪ್ರಚಾರದಲ್ಲಿರುವ ಪದವಾಗಿರುವುದರಿಂದ 'ಹೊಲೆಯ' ಎಂಬ ಈ ಪದವನ್ನೆ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಹೊಲೆಯ ಮತ್ತು ಮಾದಿಗರು ಇಂದು ಅತ್ಯಂತ ಕೆಳವರ್ಗದ ಜನಗಳೆಂದು ಗುರುತಿಸಲ್ಪಟ್ಟಿದ್ದಾರೆ. ಅವರ ಬಗೆಗಿನ ಇತಿಹಾಸ ಅನೇಕ ಮಹತ್ವದ ಸಂಗತಿಗಳನ್ನು ಒಳಗೊಂಡಿದೆ. ತೆಲುಗಿನಲ್ಲಿ 'ಮಾಲರು', ಕನ್ನಡದಲ್ಲಿ 'ಹೊಲೆಯರು', ತಮಿಳುನಾಡಿನ 'ಪರೈಯನರು' ಮೂಲದಲ್ಲಿ ಪೂಜಾರಿಗಳಾಗಿದ್ದವರು. ಈ ಜನ ವಾದ್ಯಗಾರರಾಗಿ ದೇವರುಗಳನ್ನು ರಕ್ಷಿಸುವವರಾಗಿ ಬಲಗೈ ಜಾತಿಗಳ ಬಿರುದುಗಳನ್ನು ರಕ್ಷಿಸುವವರಾಗಿ ಒಟ್ಟಾರೆ ಭೂಮಿ ಸಂಬಂಧವನ್ನು ದೂರ ಮಾಡುವ ವೃತ್ತಿಗಳಿಗೆ ಅಂಟಿಸಲ್ಪಟ್ಟರೆ, ಎಡಗೈ ಮಾದಿಗರು ಭೂಮಿಗೆ ಅಂಟಿಕೊಂಡು 'ಹುಟ್ಟಾಳು' ಮೂಲದ 'ಆಳು' ಅನುವಂಶಿಕ ಎಂಬ ಹೆಸರುಗಳಿಂದ ಜೀತಗಾರರಾಗಿ ಉಳಿದರು ಮತ್ತು ಕೃಷಿಗೆ ಅನಿವಾರ್ಯವಾಗುವ ಚರ್ಮದ ವಸ್ತುಗಳನ್ನು ಮಾಡಿ ಕೊಡುವ ವೃತ್ತಿಯವರಾದರು. ಒಟ್ಟಾರೆ

ಭೂಮಿಗೆ ಅಂಟಿಕೊಂಡಿದ್ದ ಇವರು ತಮ್ಮ ಮಾತೃ ಪ್ರಧಾನ ಪದ್ಧತಿಗಳನ್ನು ಅಮ್ಮನ ಆರಾಧನೆಯಲ್ಲಿ ಉಳಿಸಿಕೊಂಡರು. ಜಾತಿ ವ್ಯವಸ್ಥೆ ಹೀನ ಸ್ಥಿತಿಗೆ ಬಲಗೈ ಹೊಲೆಯರು ಹೊಂದಾಣಿಕೆ ಮಾಡಿಕೊಳ್ಳುವ ಲಕ್ಷಣವನ್ನು ತೋರ್ಪಡಿಸಿದರೆ, ಎಡಗೈ ಮಾದಿಗರು ತಮ್ಮ ಮೂಲದ ಲಕ್ಷಣಗಳಿಗೆ ಹೆಚ್ಚು ಅಂಟಿಕೊಂಡಿರಲು ಸಾಧ್ಯವಾಯಿತು (ಎಸ್.ಎಸ್. ಹಿರೇಮಠ, ೧೯೯೩, ಪು. ೩೪೫).

ಗ್ರಾಮೀಣ ಪ್ರದೇಶದ ಹೊಲೆಯ ಮತ್ತು ಮಾದಿಗರನ್ನು ಅಸ್ಪೃಶ್ಯರೆಂದೇ ಇಂದಿಗೂ ನಡೆಸಿಕೊಳ್ಳಲಾಗುತ್ತಿದೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ, ಕಂಪ್ಲಿ, ಶಿರುಗುಪ್ಪ, ಶಿರಿಗೇರಿ, ಬಳ್ಳಾರಿ, ಸಂಗನಕಲ್ಲು, ಕೊಟ್ಟೂರು ಮತ್ತು ಹಡಗಲಿಗಳಂಥ ಪಟ್ಟಣಗಳಲ್ಲೂ ಹೊಲೆಯರು, ಮಾದಿಗರು ಸಮ-ಸಮ ಸಂಖ್ಯೆಯಲ್ಲಿದ್ದಾರೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಮಾದಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಕೆಲವು ಊರುಗಳಲ್ಲಿ ಮಾದಿಗರ ಮನೆಗಳು ಮಾತ್ರವಿದ್ದು, ಹೊಲೆಯರವು ಒಂದೋ, ಎರಡೋ ಇರುವುದುಂಟು. ಕಲ್ಲುಕಂಬ, ಬುಕ್ಕಸಾಗರ, ವೆಂಕಟಾಪುರ, ಕಮಲಾಪುರ, ಮಲಪನಗುಡಿ, ಅನಂತಶಯನಗುಡಿ, ಬೈಲು ಒದ್ದಿಗೇರಿ, ಗೆಣಿಕೆಹಾಳು ಈ ಹಳ್ಳಿಗಳಲ್ಲಿ ಹೊಲೆಯರ ಮನೆಗಳೇ ಇಲ್ಲ. ಪ್ರತಿ ಊರಿನಲ್ಲಿ ಸರಾಸರಿ ಐವತ್ತರಿಂದ ನೂರು ಮನೆಗಳೆಂದು ಲೆಕ್ಕ ಹಾಕಿದರೆ ಬಳ್ಳಾರಿ ಜಿಲ್ಲೆಯಲ್ಲಿ ಮಾದಿಗರ ಜನಸಂಖ್ಯೆ ಒಂದುವರೆ ಲಕ್ಷವನ್ನು ಸಮೀಪಿಸಬಹುದು. ಹೊಲೆಯರು ಈ ಜಿಲ್ಲೆಯಲ್ಲಿ ಅರ್ಧದಷ್ಟು ಅಂದರೆ ಎಪ್ಪತ್ತೈದು ಸಾವಿರದಿಂದ ಒಂದು ಲಕ್ಷದ ಸಮೀಪ ಬರಬಹುದು.

ಊರಿನವರು ಈ ಎರಡೂ ಜಾತಿಗಳ ಮೇಲೆ ವಿಧಿಸಿರುವ ಕಟ್ಟುಪಾಡುಗಳು ಮತ್ತು ಹಲವಾರು ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳ ನಡುವೆ ಈ ಜಾತಿ ಜನರು ಇದೂವರೆಗೆ ಉಳಿದುಕೊಂಡು ಬಂದಿರುವುದೇ ಆಶ್ಚರ್ಯಕರ ಸಂಗತಿಯಾಗಿದೆ. ಈ ಜಾತಿ ಜನಗಳು ಕೇವಲ ಹೊಟ್ಟೆಪಾಡಿಗಾಗಿ ಬದುಕುವುದೇ ಸಮಸ್ಯೆಯಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಹೊಲೆ ಮತ್ತು ಮಾದಿಗ ಮಹಿಳೆಯರು ಕೃಷಿಕೂಲಿಕಾರ್ಮಿಕರಾಗಿಯೂ, ಜಾಡಮಾಲಿಗಳಾಗಿಯೂ, ಗಣಿಕೂಲಿ ಕಾರ್ಮಿಕರಾಗಿಯೂ ಕೆಲಸ ಮಾಡುತ್ತಿದ್ದಾರೆ.

ಇಂತಹ ದಲಿತ ಮಹಿಳಾ ಸಮಸ್ಯೆಗಳನ್ನು ನಮ್ಮ ಮಹಿಳಾ ಅಧ್ಯಯನಗಳು ಹೇಗೆ ಪರಿಗಣಿಸಿವೆ? ಎಂಬುವುದನ್ನು ನೋಡಿದರೆ ವಿಷಾದವಾಗುತ್ತದೆ. ಭಾರತದ ಮಹಿಳಾ ಅಧ್ಯಯನಗಳಲ್ಲಿ ಎಲ್ಲಾ ಮಹಿಳೆಯರನ್ನು ಸೇರಿಸಿಕೊಳ್ಳಲಾಗಿದೆ ಎಂದು ಹೇಳಲಾಗುತ್ತದೆ. ಆದರೆ ಮುಖ್ಯವಾಗಿ ನಿಜವಾದ ಅಸ್ಪೃಶ್ಯತೆಯನ್ನು ಅನುಭವಿಸುತ್ತಿರುವ ದಲಿತ ಮಹಿಳೆಯರನ್ನು ಇಂತಹ ಅಧ್ಯಯನ ಮತ್ತು ಚಳುವಳಿಗಳು ಪರಿಗಣಿಸಿಯೇ ಇಲ್ಲ. ಇದಕ್ಕೆ ಕಾರಣಗಳೇನು? ಅದಕ್ಕಿರುವ ತೊಡಕುಗಳೇನು? ಎಂಬುವುದನ್ನು ತಿಳಿಯಬೇಕಾಗಿದೆ. ಈ ನಿಟ್ಟಿನಲ್ಲಿ ಸ್ತ್ರೀವಾದವನ್ನು ವಿಭಿನ್ನ ಸ್ತ್ರೀವಾದಗಳ ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿ ದಲಿತ ಸ್ತ್ರೀವಾದವನ್ನು ಕಟ್ಟಿಕೊಳ್ಳಲು ಪ್ರಯತ್ನಿಸೋಣ.

೨.೨ ಸ್ತ್ರೀವಾದ

ಮಾನವ ವಿಕಾಸ ಚರಿತ್ರೆಯನ್ನು ಗಮನಿಸಿದರೆ ಹೆಣ್ಣು, ಗಂಡಿನ ನಡುವೆ ಅನೇಕ ಸಂಘರ್ಷಗಳು ನಡೆದಿರುವುದು ಕಾಣುತ್ತದೆ. ನಾಗರೀಕ ಸಮಾಜ ರೂಢಿಗೆ ಬರುವ ಪೂರ್ವದಲ್ಲಿ ಮಹಿಳೆಯ ಮೇಲೆ ಯಾವ ಕಟ್ಟುಪಾಡುಗಳು ಇರಲಿಲ್ಲ. ಗಂಡಿಗೂ ಯಾವ ವಿಶೇಷ ಹಕ್ಕು- ಅಧಿಕಾರಗಳು ಇರಲಿಲ್ಲ. ಸ್ವಂತ ಶ್ರಮಪಟ್ಟು, ಆಹಾರ ಸಂಗ್ರಹಣೆ ಮಾಡಿ ಬದುಕಬೇಕಾದ ಆ ಕಾಲದಲ್ಲಿ ಪುರುಷನಂತೆ ಮಹಿಳೆಯು ಬೇಟೆ, ಕ್ರೀಡೆ,

ವಿನೋದಗಳಲ್ಲಿ ಬಾಗಿಯಾಗುತ್ತಿದ್ದಳು. ಮುಂದೆ ವ್ಯವಸಾಯ ಪದ್ಧತಿ ಶೋಧಿತವಾದಾಗಲೂ ಕುಟುಂಬದಲ್ಲಿ, ಸಮಾಜದಲ್ಲಿ, ಮಹಿಳೆಯ ಸ್ಥಾನಮಾನಗಳು ಸಾಕಷ್ಟು ಉನ್ನತವಾಗಿದ್ದವು. ಆದರೆ ಕಾಲಕ್ರಮೇಣ ಖಾಸಗೀ ಆಸ್ತಿ ಹಾಗೂ ಅದರ ಒಡೆತನಗಳ ಕಲ್ಪನೆ ಬೆಳೆದಂತೆ ಪುರುಷನು ಮಹಿಳೆಯ ಮೇಲೆ ನಿಯಂತ್ರಣ ಸಾಧಿಸಿದಂತೆ ತೋರುತ್ತದೆ. ಮಹಾ ಮೇಧಾವಿ ಆಗಸ್ಟ್ ಬೆಬೋ "ಮಹಿಳೆ ಭೂತ, ವರ್ತಮಾನ ಮತ್ತು ಭವಿಷ್ಯ" ಎಂಬ ತನ್ನ ಕೃತಿಯಲ್ಲಿ ಹೇಳಿರುವಂತೆ ಮಹಿಳೆ ಬಂಧನಕ್ಕೊಳಗಾದ ಪ್ರಪಂಚದ ಮೊದಲ ಮಾನವ ಜೀವಿ. ಪುರುಷ ಗುಲಾಮಗಿರಿ ಅಸ್ತಿತ್ವಕ್ಕೆ ಬರುವುದಕ್ಕಿಂತ ಮುಂಚೆಯೇ ಅವಳು ಗುಲಾಮಗಿರಿಗೆ ಬಲಿಯಾಗಿದ್ದಳು ಎಂದು ಹೇಳುತ್ತಾರೆ.

ಈ ಹಿನ್ನೆಲೆಯಲ್ಲಿ ಸಮಾಜದ ವ್ಯವಸ್ಥೆಯಲ್ಲಿ ಲಿಂಗಾಧಾರಿತ ಅಸಮಾನತೆ ಇದೆ ಎಂಬುವುದು ಎಲ್ಲರಿಗೂ ತಿಳಿದಿರುವ ಸಂಗತಿ. ಅಂತೆಯೇ ಸ್ತ್ರೀಯರು ಎದುರಿಸುತ್ತಿರುವ ತಾರತಮ್ಯ, ದೌರ್ಜನ್ಯ ಹಾಗೂ ಶೋಷಣೆಗಳನ್ನು ಮನಗೊಂಡು ಈ ಪ್ರವೃತ್ತಿಗಳನ್ನು ವಿಮುಕ್ತಿಗೊಳಿಸಲು ಮಾಡುವ ಎಲ್ಲಾ ಉದ್ದೇಶಿತ ಪ್ರಾಮಾಣಿಕ ಪ್ರಯತ್ನಗಳೆಲ್ಲವುಗಳ ಒಟ್ಟಾರೆ ಮೊತ್ತಕ್ಕೆ ಸ್ತ್ರೀವಾದ ಎಂದು ಹೇಳಬಹುದು. ನಿಷ್ಠೆಯಿಂದ, ಕಾಳಜಿಯಿಂದ ಹೊಂದಿರುವ ಮತ್ತು ಸ್ತ್ರೀಗೆ ಸಂಬಂಧಿಸುವ ಯಾವುದೇ ವಿಚಾರಗಳಿಗೆ ಸ್ಪಂದಿಸುವ ಮನೋಭಾವವನ್ನು ಬೆಳೆಸಿಕೊಂಡಿರುವವರನ್ನು ಸ್ತ್ರೀವಾದಿಗಳೆಂದು ಅವರ ದೃಷ್ಟಿಕೋನವನ್ನು ಸ್ತ್ರೀವಾದವೆಂದು ಕರೆಯಬಹುದು. ಇದನ್ನು ವಿಭಿನ್ನ ಸ್ತ್ರೀವಾದಗಳಲ್ಲಿ ಸಂಕ್ಷಿಪ್ತವಾಗಿ ಅರ್ಥೈಸಿಕೊಳ್ಳೋಣ.

೨.೩ ವಿಭಿನ್ನ ಸ್ತ್ರೀವಾದಗಳು

ಸ್ತ್ರೀವಾದಿ ನಿಲುವುಗಳಲ್ಲಿ ಪ್ರಮುಖವಾಗಿ ಏಳು ವಿಧಗಳನ್ನು ಕಾಣಬಹುದಾಗಿದೆ.

೧. ಉದಾರವಾದಿ ಸ್ತ್ರೀವಾದ (Liberal Feminism)

೨. ಮಾರ್ಕ್ಸ್‌ವಾದಿ ಸ್ತ್ರೀವಾದ (Marxist Feminism)

೩. ತೀವ್ರಗಾಮಿ ಸ್ತ್ರೀವಾದ (Radical Feminism)

೪. ಮನೋವಿಶ್ಲೇಷಣಾತ್ಮಕ ಸ್ತ್ರೀವಾದ (Psychoanalytical Feminism)

೫. ಅಸ್ತಿತ್ವವಾದಿ ಸ್ತ್ರೀವಾದಿ (Existentialist Feminism)

೬. ಸಮಾಜವಾದಿ ಸ್ತ್ರೀವಾದ (Socialist Feminism)

೭. ಆಧುನಿಕೋತ್ತರ ಸ್ತ್ರೀವಾದ (Post modern Feminism)

೧. ಉದಾರವಾದಿ ಸ್ತ್ರೀವಾದ: ಹೋಲ್‌ಸ್ಟನ್ ಕ್ರಾಪ್ಟ್ ಇದರ ಪ್ರತಿಪಾದಕರು. ಈವರೆಗೂ ಜಾರಿಯಲ್ಲಿರುವ ನಿಷ್ಠುರ ಸಾಮಾಜಿಕ ನಿಯಮಗಳಲ್ಲಿ ಪರಿವರ್ತನೆ ಬಂದರೆ ಅಸಮಾನತೆಯ ಪ್ರಶ್ನೆ ನಿವಾರಣೆಯಾಗಿಬಿಡುತ್ತದೆ ಎಂಬ ನೇರ ಹಾಗೂ ಸರಳ ರೀತಿಯ ಚಿಂತನೆಯಲ್ಲಿ ಮಹಿಳೆಯರು ಪುರುಷ ಪ್ರಧಾನ ಸಮಾಜದ ಎದುರು ಕೋರಿಕೆ, ಅಹವಾಲುಗಳನ್ನು ಮಂಡಿಸತೊಡಗಿದರು. ಪುರುಷರು ಮಹಿಳೆಯರನ್ನು ಉದಾರವಾಗಿ ನಡೆಸಿಕೊಳ್ಳಬೇಕೆಂಬ ವಿನಯಪೂರ್ವಕ ಆಗ್ರಹವಷ್ಟೇ ಇಲ್ಲಿದ್ದಿದ್ದು. ಆದರೆ ಮಹಿಳಾ ಬದುಕಿಗೆ

ಎದುರಾಗಿ ಪುರುಷ ಸಮಾಜವು ನಡೆಸುತ್ತಿದ್ದ ರಾಜಕಾರಣದ ಹುನ್ನಾರ ಇಷ್ಟು ಸರಳವಾದುದ್ದಲ್ಲ ಎಂಬುವುದು ಬಹಳ ಬೇಗನೆ ಮಹಿಳೆಯರಿಗೆ ಅರ್ಥವಾಗತೊಡಗಿತು. ಈ ಹಿನ್ನೆಲೆಯಲ್ಲಿ ಮಹಿಳೆಯರು ವೈಚಾರಿಕವಾಗಿ ಯೋಚಿಸಿ, ಸ್ವಯಂ ಅಧಿಕಾರ ಮುಂತಾದ ಗುಣಗಳಿಗೆ ಮಹತ್ವ ನೀಡಬೇಕು ಹಾಗೆಯೇ ಭಾವುಕತೆಯಿಂದ ಮಹಿಳೆಯರು ದೂರವಿರಬೇಕೆಂದು ಹೇಳಿತು.

೨. **ಮಾರ್ಕ್ಸ್‌ವಾದಿ ಸ್ತ್ರೀವಾದ:** ಸ್ತ್ರೀ ಶೋಷಣೆಯು ಯಾವುದೇ ವ್ಯಕ್ತಿಯ ಉದ್ದೇಶಿತ ಕ್ರಿಯೆಯಾಗಿರದೆ ಕೆಲವು ಬಂಡವಾಳಶಾಹಿಯ ವ್ಯವಸ್ಥೆಯ ದ್ಯೋತಕವಾದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ರಚನೆಗಳಿಂದ ಸೃಷ್ಟಿಯಾದಂತಹ ಒಂದು ವ್ಯವಸ್ಥೆ ಎಂಬುವುದನ್ನು ಎಲ್ಲಾ ವರ್ಗಗಳ ಸ್ತ್ರೀಯರು ಅರಿತುಕೊಳ್ಳಬೇಕೆಂಬುದೇ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ ಒಳತಿರುಳಾಗಿದೆ. ಈ ವಾದದಲ್ಲಿ ಕುಟುಂಬ, ಮನೆಕೆಲಸ, ವಿವಾಹದ ಪರಿಕಲ್ಪನೆಗಳೇ ಪ್ರಮುಖವಾಗಿವೆ.

೩. **ತೀವ್ರಗಾಮಿ ಸ್ತ್ರೀವಾದ:** ಸ್ತ್ರೀ, ಪುರುಷ ಅಸಮಾನತೆಯ ಮೂಲವಾದ ಭಿನ್ನ ಜೈವಿಕತೆಯ ತತ್ವವನ್ನು ಸ್ತ್ರೀವಾದಿ ತೀವ್ರಗಾಮಿಗಳು ನಿರಾಕರಿಸುತ್ತಾರೆ. ಸ್ತ್ರೀಯನ್ನು ಮೂಲಭೂತವಾಗಿ ಮಕ್ಕಳನ್ನು ಹೆರುವ, ಹೊರುವ ಹಾಗೂ ಪೋಷಿಸುವ ಯಂತ್ರದಂತೆ ಕಾಣುವುದೇ ಆಕೆಯ ಶೋಷಣೆಗೆ ಮೂಲ. ಅವರವರ ದೇಹರಚನೆಯಲ್ಲಿಯೂ ವ್ಯತ್ಯಾಸವಿದೆ. ಜೈವಿಕ ತಾಯ್ತನದ ನಿರ್ಮೂಲವನ್ನು ಕುರಿತಂತೆ ತೀವ್ರಗಾಮಿ ಸ್ತ್ರೀವಾದ ಧೋರಣೆಯು ಪ್ರಬಲ ವಿಚಾರವಾಗಿದೆ.

೪. **ಮನೋವಿಶ್ಲೇಷಣಾತ್ಮಕ ಸ್ತ್ರೀವಾದ:** ಲಿಂಗವ್ಯವಸ್ಥೆ ಎಂಬುವುದು ಲೈಂಗಿಕ ಪಕ್ವತೆಯ ಒಂದು ಸೃಷ್ಟಿ. ಜೈವಿಕತೆಯೇ ಸ್ತ್ರೀಯ ವಿಧಿಯನ್ನು ನಿರ್ಧರಿಸುವ ಏಕೈಕ ಸಾಧನ. ಮನೋವಿಶ್ಲೇಷಣಾತ್ಮಕ ಸ್ತ್ರೀವಾದದ ಸಿದ್ಧಾಂತವು ಲೈಂಗಿಕತೆಯ ಪರಿಕಲ್ಪನೆಗೆ ಹೆಣೆದಿರುವ ಒಂದು ಸ್ತ್ರೀವಾದ ಧೋರಣೆಯಾಗಿದೆ. ಈ ಅಧ್ಯಯನದ ಮೂಲ ಪುರುಷ ಫ್ರಾಯ್ಡ್.

೫. **ಅಸ್ತಿತ್ವವಾದಿ ಸ್ತ್ರೀವಾದ:** ಇಪ್ಪತ್ತನೆಯ ಶತಮಾನದ ಸ್ತ್ರೀವಾದಿ ಚಿಂತನೆಗೆ ಅತ್ಯಂತ ಪ್ರಭಾವಶಾಲಿ ಕೊಡುಗೆ ಎಂದು ಪರಿಗಣಿಸಲ್ಪಟ್ಟಿರುವ ಫ್ರೆಂಚ್‌ಚಿಂತಕಿ ಸಿಮೋನ್‌ದ ಬೋವ ರಚಿಸಿದ 'ದಿ ಸೆಕೆಂಡ್ ಸೆಕ್ಸ್' ೧೯೭೪ ರಲ್ಲಿ ಅಸ್ತಿತ್ವವಾದಿ ಸ್ತ್ರೀವಾದದ ಪ್ರಮುಖ ಅಂಶಗಳನ್ನು ತಿಳಿಸುತ್ತಾರೆ. ಸ್ತ್ರೀಯರನ್ನು ಕುರಿತು ಇರುವ ಮಿಥ್‌ಗಳೇ ಅವಳ ಶೋಷಣೆಗೆ ಕಾರಣ. ಈ ಪರಿಸ್ಥಿತಿಯಿಂದ ಹೊರಬರಬಹುದು ಎಂಬುವುದನ್ನು ಸಹ ತಿಳಿಸುತ್ತಾಳೆ.

೬. **ಸಮಾಜವಾದಿ ಸ್ತ್ರೀವಾದ:** ಈ ವಾದದ ಚಿಂತಕಿಯಾದ ಹಾಯ್ಡ್ ಹಾರ್ಟ್‌ಮನ್‌ರವರು ಸ್ತ್ರೀಯ ಮಾನಸಿಕ ಸ್ಥಿತಿಯು ಹೇಗೆ ಸಾಮಾಜಿಕ ಅಂಶಗಳಿಂದ ಪ್ರಭಾವಿತವಾಗುತ್ತದೆಂಬುವುದನ್ನು ವಿಶ್ಲೇಷಿಸಿದ್ದಾರೆ. ಅವಳ ದೃಷ್ಟಿಯಲ್ಲಿ ಎಲ್ಲಾ ಸಮಾಜಗಳು ಪುರುಷ ಪ್ರಧಾನ ಸಮಾಜಗಳೇ ಆಗಿರುವುದರಿಂದ ಸ್ತ್ರೀ ಎಲ್ಲೇ ಇರಲಿ ಅವಳ ಪರಿಸ್ಥಿತಿ ಒಂದೇ ಆಗಿರುತ್ತದೆ. ಪುರುಷರು ಮಹಿಳೆಯರ ಬದಲಾವಣೆಗೆ ಅವಕಾಶ ನೀಡಲಾರರು ಎಂಬುವುದನ್ನು ಹೇಳುತ್ತಾರೆ.

ಇವೆಲ್ಲವೂ ಲಿಂಗ, ವರ್ಗವನ್ನು ಮಾತ್ರ ಕೇಂದ್ರವನ್ನಾಗಿರಿಸಿಕೊಂಡು ನಡೆಸಿದಂತಹ ಚಿಂತನೆಗಳಾಗಿವೆ. ಮಹಿಳೆ ಎನ್ನುವ ಸಾಮಾನ್ಯ ಪರಿಕಲ್ಪನೆಯಿಂದ ಹೊರಡುವ ಚಿಂತನೆಗಳು ಎಲ್ಲಾ ಸಮುದಾಯದ ಮಹಿಳೆಯರ

ಹಿತಾಸಕ್ತಿಗಳನ್ನು ಪರಿಗಣಿಸುತ್ತವೆ ಎಂದು ಹೇಳಲಾಗುವುದಿಲ್ಲ (ಶೈಲಜಾ ಹಿರೇಮಠ, ೨೦೦೪, ಪು. ೫೨). ೨೦ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಕಾಣಿಸಿಕೊಂಡ ಇಂತಹ ಮಹಿಳಾ ಪರ ಚಿಂತನೆಗಳು ಈ ನೆಲದ ಸಮಸ್ಯೆಯನ್ನು ಕುರಿತಾಗಲಿ ಅದಕ್ಕೆ ಪ್ರತಿಕ್ರಿಯಿಸುವ ರೀತಿಯಲ್ಲಾಗಲಿ ಮೂಡಿ ಬಂದುದಲ್ಲ. ಅದು ಪಶ್ಚಿಮದಿಂದ ಆಮದಾದುದು. ಪಶ್ಚಿಮದಲ್ಲಿ ಹುಟ್ಟಿಕೊಂಡಂತಹ ಸ್ತ್ರೀವಾದಿಗಳಂತಹ ಚಿಂತನೆಯನ್ನು ನಮ್ಮ ನೆಲದ ಅಗತ್ಯಕ್ಕೆ ಹೋಲಿಸಲು ಬರುವುದಿಲ್ಲ. ಪಶ್ಚಿಮದಲ್ಲಿ ಹುಟ್ಟಿಕೊಂಡ ಸ್ತ್ರೀವಾದಿ ಚಳುವಳಿ ಸಿದ್ಧಾಂತ ಮುಂತಾದವುಗಳು ಸಮಾಜದ ತಳ ಸಮುದಾಯಗಳ ಮಹಿಳಾ ಸಂಕಥನವನ್ನು ಅರಿಯದೇ ಗಮನಿಸದೇ ಮೇಲ್‌ಸ್ತರದ ಸ್ತ್ರೀ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಮಾತನಾಡುತ್ತವೆ. ಭಾರತೀಯ ಮಹಿಳೆ ಎಂದರೆ ಬ್ರಾಹ್ಮಣ ಮಹಿಳೆ ರಾಷ್ಟ್ರೀಯ ನಾಯಕರು ತಮ್ಮ ಸಮುದಾಯ, ಕುಟುಂಬ ಸಂಬಂಧಿ ಮಹಿಳಾ ಸಮಸ್ಯೆಗಳನ್ನು ಅಖಂಡ ಭಾರತೀಯ ಮಹಿಳೆಯರ ಸಮಸ್ಯೆಗಳೆಂಬಂತೆ ಚಿತ್ರೀಕರಿಸುತ್ತಾ ಮಹಿಳೆಯರ ಸಮಸ್ಯೆ ಎಂದ ತಕ್ಷಣವೇ ಸತಿಸಹಗಮನ, ವರದಕ್ಷಿಣೆ, ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳನ್ನು ಇಟ್ಟುಕೊಂಡು ಮಾತನಾಡುತ್ತಾರೆ. ಇದು ಅಷ್ಟು ಸೂಕ್ತವಲ್ಲ ಎನಿಸುತ್ತದೆ. ಏಕೆಂದರೆ ಭಾರತೀಯ ಸ್ತ್ರೀವಾದಕ್ಕೆ ಏಕರೂಪವಿಲ್ಲ. ಇದರೊಳಗೆ ಬೇರೆ ಬೇರೆ ಜಾತಿಗಳ, ಬೇರೆ ಬೇರೆ ವರ್ಗಗಳ ವಿಭಿನ್ನ ಮಾದರಿಗಳಿವೆ. ಈ ಹಿನ್ನೆಲೆಯಲ್ಲಿ ಆಯಾ ಜಾತಿ, ಲಿಂಗ, ವರ್ಗ, ಸಮಾಜ, ಸಂದರ್ಭಗಳನ್ನಿಟ್ಟುಕೊಂಡೇ ಮಹಿಳೆಯರನ್ನು ನಿರ್ವಚಿಸಬೇಕಾಗುತ್ತದೆ.

ಆದರೆ ಜಾತಿ ಮತ್ತು ವರ್ಗ ಕಾರಣದಿಂದ ತಳ ಸಮುದಾಯಗಳ ದಲಿತ ಮಹಿಳೆ ತೀವ್ರವಾದ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಳೆ. ಮೇಲ್ವರ್ಗದ ಮಹಿಳೆಗೆ ಶಿಕ್ಷಣವಿದ್ದು, ದುಡಿಯಲು ಕೆಲಸವಿದ್ದು, ಕೆಲಸ ಮಾಡುವ ಸ್ಥಿತಿಯಲ್ಲಿ ಸಮಸ್ಯೆಗಳಾದರೆ ಅವರಿಗೆ ಅದೇ ದೊಡ್ಡದಾಗಿ ಕಾಣಬಹುದು. ಆದರೆ ದಲಿತ ಮಹಿಳೆ ಶಿಕ್ಷಣ ಇಲ್ಲದೇ ಯಾರೋ ಮನೆಯ ಚಾಕರಿ ಮಾಡಿ ಅವರಿಂದಲೇ ದೌರ್ಜನ್ಯಕ್ಕೆ ಒಳಗಾಗುತ್ತಿರುತ್ತಾಳೆ. ಆ ಶೋಷಣೆಯನ್ನು ಅಭಿವ್ಯಕ್ತಿಸುವ ಸ್ವಾತಂತ್ರ್ಯವೂ ಕೂಡ ಆ ಮಹಿಳೆಗೆ ಇರುವುದಿಲ್ಲ. ಅವಳು ಹಾಗೆ ಮಾಡಕೂಡದೂ ಸಹ. ಯಾಕೆಂದರೆ ಕೆಲಸವಿಲ್ಲದ ಆಕೆಯಿಂದಾಗಿ ತನ್ನ ಹಾಗೂ ತನ್ನ ಕುಟುಂಬದ ಮೇಲೆ ಅದು ಗಾಢ ಪರಿಣಾಮವನ್ನು ಬೀರುತ್ತದೆ. ಇಲ್ಲಿ ಊರಿನ ಗೌಡನ ಹೇಳಿಕೆಯೇ ನಿರ್ಣಾಯಕವಾಗಿರುವುದರಿಂದ ಅವನ ಇಚ್ಛೆಗನುಗುಣವಾಗಿಯೇ ಅವಳು ನಡೆದುಕೊಳ್ಳಬೇಕಾಗುತ್ತದೆ.

ಆಧುನಿಕ ಸ್ತ್ರೀವಾದ ಪ್ರತಿಪಾದಿಸುತ್ತಿರುವ ಹೆಣ್ಣಿನ ಸ್ವಾಂತಂತ್ರ್ಯ ಆಯ್ಕೆಯ ಹಕ್ಕು 'ಸಿಂಗಲ್ ಪೇರೆಂಟ್'ದಂತಹ ಈ ಹೊತ್ತಿನ ಕ್ರಾಂತಿಕಾರಕ ಸಂಗತಿಗಳೆಲ್ಲಾ ನಮ್ಮ ತಳಸಮುದಾಯಗಳಲ್ಲಿ ಜೀವಂತವಾಗಿವೆ. ಲೇಸಿ, ದೇವದಾಸಿ, ಬಸವಿಯರು ಅವಮಾನಗಳಿಂದಲೂ ಸಿಂಗಲ್ ಪೇರೆಂಟ್ ಆಗಿಯೇ ಬಾಳಿ ಬಂದವರು. ಮಕ್ಕಳು, ಕುಟುಂಬ, ಕೆಲಸ, ಸಾಂಸ್ಕೃತಿಕವಾಗಿ ಊಳಿಗಮಾನ್ಯ ಪುರುಷ ಪ್ರಧಾನ ಸಂಸ್ಕೃತಿಯ ಕಾರ್ಯಗಳಿಗೆ ಒಳಗಾಗಿಯೇ ಅವಳು ಬದುಕು ನಡೆಸಬೇಕಾಗಿತ್ತು. ಇದು ಅವಳಿಗೆ ಅನಿವಾರ್ಯ ಕೂಡ ಆಗಿತ್ತು.

ಮೇಲ್ಜಾತಿ ಮಹಿಳೆಯನ್ನು ನೀವು ಏನು ಮಾಡುತ್ತಿದ್ದೀರೆಂದು ಕೇಳಿದರೆ 'ಹೌಸ್‌ವೈಫ್' ಎಂದು ಬಿಂಕದಿಂದ, ಬಿಗುಮಾನದಿಂದ ಇಲ್ಲವೆ ಕೀಳರಿಮೆಯಿಂದ ಹೇಳುವುದನ್ನೆಲ್ಲ ಕೇಳುವಾಗಲೆಲ್ಲಾ ಅವರು ಅವರಾಗಿಲ್ಲವೆಂಬುದು ನಿಚ್ಚಳವಾಗಿ ಕಾಣಿಸುತ್ತದೆ. ಐಡೆಂಟಿಟಿ ಬಿಕ್ಕಟ್ಟು ಎಂಬುವುದು ಇಂತಲ್ಲಿ ನರಳುತ್ತಿರುತ್ತದೆ. ಆದರೆ ಅದೇ ದುಡಿಯುವ ವರ್ಗದ ಮಹಿಳೆಯನ್ನು ಮಾತನಾಡಿಸಿ ನೋಡಿರಿ, ಏನು ಮಾಡುತ್ತೀರೆಂದರೆ 'ಹೊಲಮನ್ಯಾಗ ದುಡಿತೀನಿ', 'ಕೂಲಿನಾಲಿಮಾಡ್ತೀನಿ' ಎನ್ನುವ ಉತ್ತರದಲ್ಲಿಯೇ ಆಕೆಯ ಬದುಕಿನ ದೃಢತೆಯ

ಧ್ವನಿ ಅಡಗಿರುತ್ತದೆ (ಮಲ್ಲಿಕಾ ಘಂಟಿ, ಪು. ೭೯). ಧೃಡತೆ ಇದ್ದ ಮಾತ್ರಕ್ಕೆ ಅಲ್ಲಿ ಕಷ್ಟಗಳಿಲ್ಲ ಎಂದಲ್ಲ, ಕಷ್ಟದ ಸ್ಥಿತಿಯಲ್ಲಿಯೂ ಅವಳ ಆತ್ಮವಿಶ್ವಾಸ ಅಲ್ಲಿ ಮುಖ್ಯವಾಗಿರುತ್ತದೆ. ಈ ಕಾರಣಕ್ಕಾಗಿಯೇ ದಲಿತ ಮಹಿಳೆಯ ಅನನ್ಯತೆ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ದಲಿತ ಸ್ತ್ರೀವಾದವನ್ನು ಕಟ್ಟಿಕೊಳ್ಳಬೇಕಾಗುತ್ತದೆ.

೨.೪ ದಲಿತ ಸ್ತ್ರೀವಾದ

ದಲಿತ ಸ್ತ್ರೀವಾದ ಎನ್ನುವುದು ತಮ್ಮನ್ನು ತಾವು ಅರಿಯಲು ಬೇರೆಯವರನ್ನು ಅರಿತುಕೊಳ್ಳಲು ಹಾಗೂ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದರ ಜೊತೆಗೆ ಬಂಧನದಿಂದ ಬಿಡುಗಡೆಗೊಳಿಸುವಲ್ಲಿ ಸಹಕರಿಸುತ್ತಾ, ತಾನು ಬೆಳೆಯುವುದು ಮತ್ತು ಇತರರನ್ನು ಬೆಳೆಸುವಂತದ್ದಾಗಿದೆ (ಅರವಿಂದ ಮಾಲಗತ್ತಿ, ೨೦೦೪, ಪು. ೧೩೯). ದೇಶೀ ನೆಲೆಯಲ್ಲಿ ಪುರುಷರನ್ನು, ಮಹಿಳೆಯರನ್ನು ನಿರ್ವಚಿಸಿಕೊಳ್ಳುತ್ತಲೆ ದಲಿತ ಮಹಿಳೆಯನ್ನು ನಿರ್ವಚಿಸಿದರೆ ಮಾತ್ರ ಅದಕ್ಕೆ ನಿಜವಾದ ಅರ್ಥ ಸಿಗಲು ಸಾಧ್ಯವಾಗುತ್ತದೆ. ಈ ದೇಶದಲ್ಲಿ ದಲಿತ ಮಹಿಳೆ ಜಾತಿ ಅಸಮಾನತೆಯನ್ನು ಅಷ್ಟೇ ಅಲ್ಲದೆ, ಲಿಂಗ ಅಸಮಾನತೆಯನ್ನು, ವರ್ಗ ಅಸಮಾನತೆಯನ್ನು ಎದುರಿಸುತ್ತಿದ್ದಾಳೆ. ಈ ಹಿನ್ನೆಲೆಯಲ್ಲಿ ದಲಿತ ಮಹಿಳೆಯನ್ನು ವ್ಯಾಖ್ಯಾನಿಸಿಕೊಳ್ಳಬೇಕಿದೆ.

ದಲಿತ ಮಹಿಳೆ ಇದು ಮಹಿಳೆಯನ್ನು ಕುರಿತಾದ ಪ್ರಶ್ನೆಯಾಗಿರುವುದರಿಂದ;

೧. ಮಹಿಳೆಯನ್ನು ಕುರಿತು ಆಲೋಚಿಸಬೇಕಾಗಿದೆ.
೨. ದಲಿತ ಮಹಿಳೆಯನ್ನು ಕುರಿತು ಆಲೋಚಿಸಬೇಕಾಗಿದೆ.

ಇವುಗಳನ್ನು ಅರ್ಥಮಾಡಿಕೊಳ್ಳುವುದಕ್ಕಿಂತ ಮುಂಚೆ ಪುರುಷ ಮತ್ತು ಮಹಿಳೆಯರ ನಡುವಿನ ವ್ಯತ್ಯಾಸವನ್ನು ಗುರುತಿಸಬೇಕಾಗಿದೆ. ಅವುಗಳಲ್ಲಿ ಎರಡು ಪ್ರಧಾನವಾದ ಅಂಶಗಳನ್ನು ನಾವು ಪರಿಗಣಿಸುತ್ತೇವೆ. ಅವುಗಳೆಂದರೆ;

೧. ಜೈವಿಕ ಅಂಶಗಳು
೨. ಸಾಮಾಜಿಕ ಅಂಶಗಳು

ಜೈವಿಕ ಅಂಶಗಳು ಗಂಡಿನ, ಹೆಣ್ಣಿನ ದೇಹದ ಪ್ರಕೃತಿಗೆ ಸಂಬಂಧಿಸಿರುವಂತಹದ್ದು. ಇದು ಜಗತ್ತಿನ ಎಲ್ಲಾ ಭಾಗದಲ್ಲಿ ಬಹುಶಃ ಸಮಾನ ಅಂಶಗಳಿರುತ್ತವೆ. ಗಂಡಿನ ಜೈವಿಕ ಬೆಳವಣಿಗೆ ಮತ್ತು ಹೆಣ್ಣಿನ ಜೈವಿಕ ಬೆಳವಣಿಗೆ ಜೈವಿಕತೆಯನ್ನೇ ಪ್ರಧಾನವಾಗಿಟ್ಟುಕೊಂಡರೆ ದೇಶದಿಂದ ದೇಶಕ್ಕೆ, ಜಾತಿಯಿಂದ ಜಾತಿಗೆ, ಧರ್ಮದಿಂದ ಧರ್ಮಕ್ಕೆ, ಊರಿನಿಂದ ಊರಿಗೆ, ಬಡವರೂ, ಶ್ರೀಮಂತರು, ಮಧ್ಯಮ ವರ್ಗದವರು, ಕೂಲಿ ಮಾಡುವವರು, ಕೂಲಿ ಮಾಡಿಸಿಕೊಳ್ಳುವವರು ಅಥವಾ ಒಡೆಯರು ಈ ಎಲ್ಲಾ ವಲಯಗಳಲ್ಲಿರುವ ಗಂಡಸರು ಮತ್ತು ಹೆಂಗಸರ ನಡುವಿನ ಜೈವಿಕ ವ್ಯತ್ಯಾಸ ಅಷ್ಟೊಂದು ಪ್ರಮಾಣದಲ್ಲಿ ಇರಲಾರದು. ಹೀಗಿದ್ದಾಗ ಜೈವಿಕವಾಗಿ ಗಂಡಸಿಗೂ ಮತ್ತು ಹೆಂಗಸಿಗೂ ಎಲ್ಲಿ ವ್ಯತ್ಯಾಸ ಬರುತ್ತದೆ ಎಂದರೆ ಹೆಂಗಸು ಮಾತ್ರವೇ ಗರ್ಭಿಣಿಯಾಗುವುದರಿಂದ ಮತ್ತು ಹೆಂಗಸು ಮಾತ್ರವೇ ಬಾಣಂತಿಯಾಗುವುದರಿಂದ. ಗರ್ಭಿಣಿ ಸಮಯ ಹಾಗೂ ಬಾಣಂತಿ ಸಮಯಗಳನ್ನು ಹೊರತುಪಡಿಸಿದ ದಿನಗಳಲ್ಲಿ ಹೆಣ್ಣು ದೈಹಿಕವಾಗಿ ಕುಶಲಳಾಗಿರುತ್ತಾಳೆ. ಗರ್ಭಿಣಿ ಬಾಣಂತಿ ಸಮಯದಲ್ಲಿ ಕೆಲವು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕೆಲ ಸಮಯವನ್ನು ಹೇಳಬಹುದು. ಕೆಲವರಿಗೆ ಆರು ತಿಂಗಳು, ಕೆಲವರಿಗೆ ಮೂರು ತಿಂಗಳು ಇತ್ಯಾದಿ. ಜೈವಿಕವಾಗಿ ಈ ಸಂದರ್ಭದಲ್ಲಿ ಮಾತ್ರ ಅವಳು ಕುಗ್ಗಿರುತ್ತಾಳೆ.

ಈ ಸಂದರ್ಭವನ್ನು ಸಾಮಾಜಿಕ ಆಯಾಮಕ್ಕೆ ತಂದು ನೋಡಿದರೆ ಈ ಜಾತಿ ಆಧಾರಿತ ಸಮಾಜದಲ್ಲಿ ಹಾಗೂ ಬಡವ ಶ್ರೀಮಂತ ಆಧಾರಿತ ಸಮಾಜದಲ್ಲಿ ಬಹುಶಃ ಬೇಗ ಎಚ್ಚೆತ್ತುಕೊಂಡು ಕೆಲಸ ಮಾಡುವವರು ಕೂಲಿ ಕಾರ್ಮಿಕ ಮಹಿಳೆಯರು. ಶ್ರೀಮಂತ ಮಹಿಳೆಯರು ಗರ್ಭಿಣಿಯರಾಗಿದ್ದಾಗ ಇನ್ನೊಬ್ಬರ ಮೇಲೆ ಅವಲಂಬಿತರಾಗಿರುತ್ತಾರೆ. ಆದರೆ ಕೂಲಿಕಾರ್ಮಿಕ ಮಹಿಳೆಯ ಸಮಸ್ಯೆ ಏನೆಂದರೆ ಹೆರಿಗೆಯಾಗುವವರೆಗೆ ಇನ್ನೊಬ್ಬರ ಹೊಲದಲ್ಲಿ ಕೂಲಿ ಮಾಡುವ ಇಲ್ಲವೆ ಮನೆಯಲ್ಲಿ ಕೆಲಸ ಮಾಡುವ ಪರಿಸ್ಥಿತಿಯನ್ನು ಕಾಣುತ್ತೇವೆ. ಅದೇ ರೀತಿ ಹೆರಿಗೆಯಾದ ಬಾಣಂತಿಯ ಪರಿಸ್ಥಿತಿಯೂ ಕೂಡ. ಕಾರ್ಮಿಕಮಹಿಳೆ ಹೆರಿಗೆಯಾದ ದಿನದಿಂದಲೇ ಕೆಲಸ ಶುರು ಮಾಡಬೇಕು. ಅವರ ದೈಹಿಕ ಪರಿಸ್ಥಿತಿ, ಅವರ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ ಕೂಲಿ ಕೆಲಸಕ್ಕೂ ಹೋಗಬಹುದು. ಜೈವಿಕ ವ್ಯತ್ಯಾಸಗಳಿದ್ದರೂ ಅವರು ಮಾಡುವ ದುಡಿಮೆಗೆ ಸಂಬಂಧಿಸಿ ಬಡತನ ಮತ್ತು ಶ್ರೀಮಂತ ಮಹಿಳೆಯರಲ್ಲಿ ಕೆಲವು ಭಿನ್ನತೆಗಳನ್ನು ಕಾಣುತ್ತೇವೆ. ಹೀಗೆ ಜೈವಿಕ ಅಂಶದ ಆಧಾರದ ಮೇಲೆ ಇರುವ ವ್ಯತ್ಯಾಸಗಳನ್ನು ಗುರುತಿಸಬಹುದು.

ಇದರ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಶ್ರೀಮತಿಯವರು 'ಗರ್ಭಾಶಯ ಕೇಂದ್ರಶಕ್ತಿ' ಎಂಬ ಪುಸ್ತಕದಲ್ಲಿ ಹೆಣ್ಣು ಯಾವ ಸಂದರ್ಭದಲ್ಲಿ ಹೇರಿಕೆಯನ್ನು ಅನುಭವಿಸುತ್ತಾಳೆ ಎಂಬುವುದನ್ನು ಕುರಿತು ಚರ್ಚಿಸುತ್ತಾರೆ. ಗಂಡಸಿನದು ಗರ್ಭ ಆಗುವವರೆಗೆ ಅವನ ಪಾತ್ರವಿರುತ್ತದೆ. ಆಮೇಲೆ ಹೆಣ್ಣೇ ಅದನ್ನು ನಿಭಾಯಿಸಬೇಕು. ಮಗುವನ್ನು ಹೆತ್ತು ಹೊತ್ತು ಬೆಳೆಸುವ ಸಂಪೂರ್ಣ ಜವಾಬ್ದಾರಿ ಹೆಣ್ಣಿನ ಮೇಲೆ ಇದೆ ಎಂದು ನಿರ್ದಿಷ್ಟ ವರ್ಗ, ಜಾತಿ ಮಹಿಳೆಯನ್ನು ಕುರಿತು ಮಾತನಾಡದೆ ಸಾರ್ವತ್ರೀಕರಿಸಿ ಚರ್ಚಿಸಿದ್ದಾರೆ. ಮೇಲ್ವರ್ಗದ ಮಹಿಳೆಯರಿಗೂ, ಮಧ್ಯಮವರ್ಗದ ಮಹಿಳೆಯರಿಗೂ, ಕೂಲಿಕಾರ್ಮಿಕ ಮಹಿಳೆಯರಿಗೂ, ಜಾಡಮಾಲಿ ಮಹಿಳೆಯರಿಗೂ ಇರಬಹುದಾದ ಯಾವುದೇ ವ್ಯತ್ಯಾಸ ಇಂತಹ ಅಧ್ಯಯನಗಳಲ್ಲಿ ಕಾಣುವುದಿಲ್ಲ. ಜೈವಿಕ ಅಂಶವನ್ನೇ ಪ್ರಧಾನವಾಗಿ ಇಟ್ಟುಕೊಂಡು ಅಧ್ಯಯನ ಮಾಡಿದಾಗ ಹೆಂಗುಸು ಮತ್ತು ಗಂಡಸಿನ ನಡುವೆ ಜೈವಿಕ ವ್ಯತ್ಯಾಸದಿಂದ ಭಿನ್ನತೆ ಕಾಣುತ್ತದೆ. ಅದನ್ನು ಏಕಾಕಾರವಾಗಿ ನೋಡುವಂತಹ ಅಧ್ಯಯನಗಳೂ ನಡೆದಿವೆ. ಅಂದರೆ ಗಂಡಸಿನ ವಿರುದ್ಧ ಹೆಂಗಸನ್ನು ಇಟ್ಟು, ಹೆಂಗಸಿನ ವಿರುದ್ಧ ಗಂಡಸನ್ನು ಇಟ್ಟು ನೋಡುವಂತಹ ಮತ್ತೆ ಅದರೊಳಗೆ ಬಡವರು, ಶ್ರೀಮಂತರು ಎನ್ನುವಂತಹ ಭಾಗ ಮಾಡಿಕೊಂಡು ಬಡವರ ವಿರುದ್ಧ ಶ್ರೀಮಂತರು, ಶ್ರೀಮಂತರ ವಿರುದ್ಧ ಬಡವರು ಎಂಬಂತೆ ನೋಡುವುದು.

ಹೆಣ್ಣು ಮತ್ತು ಗಂಡಿನ ನಡುವಿನ ವ್ಯತ್ಯಾಸವನ್ನು ಗುರುತಿಸಲಿಕ್ಕೆ ಬಹಳ ಮುಖ್ಯವಾಗಿರುವ ಅಂಶವೆಂದರೆ ಸಾಮಾಜಿಕ ಅಂಶ. ಸಾಮಾಜಿಕ ಅಂಶವೆಂಬುವುದು ಕೇವಲ ಜಾತಿ, ಧರ್ಮ, ಭಾಷೆಗೆ ಸಂಬಂಧಿಸಿದ್ದಲ್ಲ. ಅದು;

೧. ಆರ್ಥಿಕತೆಗೆ ಸಂಬಂಧಿಸಿದ್ದು

೨. ಅಧಿಕಾರಕ್ಕೆ ಸಂಬಂಧಿಸಿದ್ದು

೩. ಸಂಪತ್ತಿನ ವಿತರಣೆಗೆ ಸಂಬಂಧಿಸಿದ್ದು

೪. ಆಸ್ತಿ ಒಡೆತನಕ್ಕೆ ಸಂಬಂಧಿಸಿದ್ದು

ಹೆಣ್ಣು ಮತ್ತು ಗಂಡಿನ ನಡುವೆ ವ್ಯತ್ಯಾಸವನ್ನು ಜೈವಿಕ ಆಧಾರದ ಮೇಲೆ, ಉಡುಪಿನ ಆಧಾರದ ಮೇಲೆ, ಆಹಾರದ ಆಧಾರದ ಮೇಲೆ, ಆಭರಣಗಳನ್ನು ತೊಡುವುದರ ಆಧಾರದ ಮೇಲೆ ಗುರುತಿಸುವುದು. ಇದು

ಜನಪ್ರಿಯವಾದ ವಿಧಾನ. ಆದರೆ ಜನಪ್ರಿಯ ವಿಧಾನವನ್ನು ನಾವು ಎಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಿಕೊಂಡು ಯಾವುದು ಜನಪ್ರಿಯವಲ್ಲವೋ, ಯಾವುದು ಮೂಲಭೂತ ಪ್ರಶ್ನೆ ಅಲ್ಲವೋ ಅದನ್ನು ಮುಖ್ಯ ಮಾಡಿಕೊಂಡು ಹೆಣ್ಣು ಮತ್ತು ಗಂಡಿನ ನಡುವೆ ವ್ಯತ್ಯಾಸವನ್ನು ಗುರುತಿಸಿಕೊಳ್ಳಬಹುದು. ಉದಾಹರಣೆಗೆ ಎಲ್ಲಾ ಬ್ಯಾಂಕುಗಳಲ್ಲಿ ಹೆಚ್ಚಾಗಿ ಯಾರ ಹೆಸರಿನಲ್ಲಿ ಖಾತೆ ಇದೆ ಎಂದು ಹುಡುಕಿದರೆ ಶೇಕಡ ತೊಂಬತ್ತೊಂಬತ್ತು ಪುರಷರದೇ ಆಗಿರುತ್ತದೆ. ಹೆಣ್ಣಿನ ಹೆಸರಿನಲ್ಲಿ ಖಾತೆ ಇದೆ ಎಂದರೆ ಆ ಮಹಿಳೆಯರು ನೌಕರಸ್ಥ ಮಹಿಳೆಯರು. ಬ್ಯಾಂಕಿನ ಮೂಲಕ ವ್ಯವಹಾರ ನಡೆಸುವವರು ಮಾತ್ರ. ದಲಿತ ಕೂಲಿಕಾರ್ಮಿಕರಲ್ಲಿ ಸಣ್ಣಪುಟ್ಟ ಕೆಲಸಗಳಲ್ಲಿ ನಗದು ರೂಪದಲ್ಲಿ ಹಣ ಕೊಡಬಹುದಾದ್ದರಿಂದ ಅವರದು ಬ್ಯಾಂಕಿನಲ್ಲಿ ಖಾತೆ ಇರುವುದಿಲ್ಲ. ರೆವಿನ್ಯೂ ದಾಖಲಾತಿಗಳನ್ನು ತೆಗೆದು ನೋಡಿದರೆ ಆಸ್ತಿಯ ಮಾಲಿಕರು, ಒಡೆಯರು ಯಾರಾಗಿದ್ದಾರೆಂದರೆ ಬಹುತೇಕ ಪುರುಷರೇ. ಮಹಿಳೆಯರ ಹೆಸರಿನಲ್ಲಿ ಆಸ್ತಿ ಇದೆ ಎಂದರೆ ಅದು ಅಪವಾದವಾಗುತ್ತದೆ. ಇದಕ್ಕೆ ಉದಾಹರಣೆಯಾಗಿ ಜಯಲಲಿತ, ಸುಶ್ಮಸ್ವರಾಜ್ ಹೀಗೆ ಕೆಲವೇ ಮಹಿಳೆಯರನ್ನು ತೋರಿಸಬಹುದು. ಇವು ಅಪವಾದ ಅಷ್ಟೇ. ಇದು ಶ್ರೀಮಂತ ಬಡವರಿಗೆ ನೇರವಾಗಿ ಅನ್ವಯಿಸುವ ಪ್ರಶ್ನೆ. ಶ್ರೀಮಂತರಲ್ಲೂ ಕೂಡ ಬಾರೀ ಪ್ರಮಾಣದ ಆಸ್ತಿ ಗಂಡಸರ ಹೆಸರಿನಲ್ಲಿಯೇ ಇದೆ. ಖಾತೆಗಳೂ ಗಂಡಸಿನ ಹೆಸರಿನಲ್ಲಿಯೇ ಇದೆ. ಪೆಟ್ರೋಲ್ ಬಂಕ್, ಅಂಗಡಿ, ಹೋಟೆಲ್ ಇನ್ನಾವುದೇ ವ್ಯವಹಾರಗಳಿರಬಹುದು; ಮಾರುಕಟ್ಟೆಯ ಕೇಂದ್ರಗಳೂ ಎಲ್ಲಾ ಬಗೆಯ ಬಂಡವಾಳಗಳು ಇರಬಹುದು. ಇದರ ಇಡೀ ಆಸ್ತಿ ಸಂಪತ್ತಿನ ಮಾಲಿಕತ್ವ ಮೇಲ್ಜಾತಿಯ ಪುರುಷರ ಕೈಯಲ್ಲಿದೆ.

ಇದಕ್ಕೆ ಸಮಾನಾಂತರವಾಗಿ ಅಧಿಕಾರದ ಒಡೆತನವನ್ನು ನೋಡಬಹುದು. ಗ್ರಾಮಪಂಚಾಯಿತಿಯಿಂದ ಮೇಲಿನ ರಾಷ್ಟ್ರಪತಿಯವರಿಗೂ ಅಧಿಕಾರ ಪುರುಷರ ಕಪಿಮುಷ್ಟಿಯಲ್ಲಿಯೇ ಇದೆ. ಪ್ರತೀಭಾ ಪಾಟೀಲ್, ಇಂದಿರಾಗಾಂದಿ, ಜಯಲಲಿತಾ, ಸುಶ್ಮಸ್ವರಾಜ್, ಉಮಾಭಾರತಿ ಅವರನ್ನು ಈ ಕ್ಷೇತ್ರದಲ್ಲಿ ಗುರುತಿಸಿಕೊಂಡರೂ ಅವರು ಪುರುಷರು ನಡೆಸಬಹುದಾದ ಅಧಿಕಾರದ ಭಾಗವಾಗಿಯೇ ಇರುತ್ತಾರೆಯೇ ಹೊರತು ಅವರಿಗೆ ಪ್ರತ್ಯೇಕವಾದ ಅಸ್ಥಿತ್ವವಿರುವುದಿಲ್ಲ.

ಜೈವಿಕ ಆಯಾಮವನ್ನೇ ಪ್ರಧಾನವಾದ ಅಂಶವೆಂದು ಪರಿಗಣಿಸಿದರೆ ಸಂಪತ್ತಿಗೆ ಸಂಬಂಧಿಸಿದ, ಆಸ್ತಿಗೆ ಸಂಬಂಧಿಸಿದ, ಹಣಕಾಸಿಗೆ ಸಂಬಂಧಿಸಿದ, ಬಂಡವಾಳ ಮಾಲಿಕತ್ವಕ್ಕೆ ಸಂಬಂಧಿಸಿದ ಅಂಶಗಳು ಗೌಣವಾಗುತ್ತಾ ಹೋಗುತ್ತವೆ. ಕಳೆದ ಐವತ್ತು ವರ್ಷಗಳಿಂದ ಸ್ತ್ರೀಯರ ಬಗ್ಗೆ ನಡೆದಿರುವ ಎಲ್ಲಾ ಅಧ್ಯಯನಗಳು ಸಂಪತ್ತು ಮತ್ತು ಅಧಿಕಾರದ ಅಸಮಾನ ಹಂಚಿಕೆಯನ್ನು ಒಂದು ರೀತಿಯಲ್ಲಿ ಮುಂಚೂಣಿಯಲ್ಲಿಟ್ಟುಕೊಂಡು ಇನ್ನೊಂದು ರೀತಿಯಲ್ಲಿ ಮುಚ್ಚಿಟ್ಟುಕೊಂಡಿದೆ. ಈ ರೀತಿಯ ಎರಡು ಬಗೆಯ ಅಧ್ಯಯನಗಳು ನಡೆದಿರುವುದನ್ನು ಕಾಣಬಹುದು. ಯಾರು ಸಂಪತ್ತು ಮತ್ತು ಅಧಿಕಾರದ ಅಸಮಾನತೆಯ ನೆಲೆಯಲ್ಲಿ ನಿಂತು ಸ್ತ್ರೀಯರನ್ನು ಕುರಿತು ಅಧ್ಯಯನ ಮಾಡಿರುವರೋ ಅವರನ್ನು ತೀವ್ರಗಾಮಿ ಅಥವಾ ಕ್ರಾಂತಿಕಾರಿ ಚಿಂತಕಿಯರು ಎಂದು ಕರೆಯುತ್ತಾರೆ. ಸಂಪತ್ತು ಮತ್ತು ಅಧಿಕಾರದ ಅಸಮಾನತೆಯನ್ನು ಮೂಲವಾಗಿ ಎದುರಿಸುತ್ತಿರುವವರು ತಳ ಸಮುದಾಯಗಳು. ಅದು ವ್ಯವಸ್ಥೆ ಸೃಷ್ಟಿಸಿದ ಜಾತಿಯ ಕಾರಣಕ್ಕೆ ಎಂಬುವುದನ್ನು ಮರೆಯುವಂತಿಲ್ಲ.

ನಿರ್ಧಿಷ್ಟವಾಗಿ ದಲಿತ ಮಹಿಳೆಯನ್ನು ಕುರಿತು ಚರ್ಚಿಸುವುದಾದರೆ ದಲಿತ ಮಹಿಳೆಯನ್ನು ಯಾವ ಆಯಾಮದಲ್ಲಿ ನಿಂತು ಚರ್ಚೆ ಮಾಡಬೇಕು. ಮೇಲೆ ಚರ್ಚಿಸಿದ ಪುರುಷರ ಮತ್ತು ಮಹಿಳೆಯರ ನಡುವಿನ ವ್ಯತ್ಯಾಸಗಳು ದಲಿತ ಮಹಿಳೆಗೆ ಸಾರಾಸಗಟಾಗಿ ಅನ್ವಯಿಸುತ್ತವೆ. ದಲಿತೇತರ ಮಹಿಳೆಗೆ ಬ್ಯಾಂಕಿನಲ್ಲಿ ಖಾತೆ

ಹೇಗೆ ಇಲ್ಲವೋ ಹಾಗೆಯೇ ದಲಿತ ಮಹಿಳೆಗೂ ಇಲ್ಲ. ಆಸ್ತಿ ಒಡೆತನ, ಆಸ್ತಿ ಮಾಲಿಕತ್ವವಂತೂ ದಲಿತ ಪುರುಷರಿಗೇ ಇಲ್ಲದಿರುವಾಗ ದಲಿತ ಮಹಿಳೆಯರಿಗೆ ಇಲ್ಲವೇ ಇಲ್ಲ. ಯಾರಿಗೂ ಇದು ವಿಶೇಷವಾಗಿ ಕಾಣಿಸುವುದಿಲ್ಲ. ಹಾಗಾದರೆ ದಲಿತ ಮಹಿಳೆಯನ್ನು ಯಾವ ವಿಧಾನದಲ್ಲಿ ಚರ್ಚೆ ಮಾಡಬೇಕು ಎಂಬುದು ಮುಖ್ಯವಾದ ಪ್ರಶ್ನೆಯಾಗುತ್ತದೆ.

ಮೊದಲು ಚರ್ಚಿಸಿದ ದಲಿತೇತರ ಮಹಿಳೆಯ ನೆಲೆಯಲ್ಲಿಯೇ ದಲಿತ ಮಹಿಳೆಯನ್ನು ಚರ್ಚೆ ಮಾಡಬೇಕೋ? ಅಥವಾ ಅದಕ್ಕಿಂತಲೂ ಭಿನ್ನವಾದ ನೆಲೆ ನಮ್ಮ ಮುಂದಿದೆಯೇ? ಆಲೋಚಿಸಬೇಕಾಗಿದೆ. ಸಮಾಜದಲ್ಲಿ ದಲಿತ ಮಹಿಳೆಯರು ಎಲ್ಲಿ ಇದ್ದಾರೆ? ಏನು ಮಾಡುತ್ತಿದ್ದಾರೆ? ಹೇಗೆ ಇದ್ದಾರೆ? ಎಂಬುವುದನ್ನು ನೋಡುವುದಾದರೆ ಕೆಲವರು ಸಣ್ಣಪುಟ್ಟ ನೌಕರಿಗಳಲ್ಲಿ, ಅಂಗನವಾಡಿಗಳಲ್ಲಿ, ಬಳ್ಳಾರಿ, ಬೆಂಗಳೂರು, ಹುಬ್ಬಳ್ಳಿ, ಮೈಸೂರು ಇಂತಹ ಕೇಂದ್ರಗಳಲ್ಲಿ, ಎಸ್.ಟಿ.ಡಿ ಬೂತ್‌ಗಳಲ್ಲಿ, ಗಾರ್ಮೆಂಟ್ಸ್‌ಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಇನ್ನೂ ಕೆಲವರು ಜಾಡಮಾಲಿಗಳಾಗಿದ್ದಾರೆ. ಕೆಲವರು ಗಣಿಕೂಲಿ ಕಾರ್ಮಿಕರಾಗಿದ್ದಾರೆ. ಇನ್ನೂ ಕೆಲವರು ಹೊಲ ಗದ್ದೆಗಳಲ್ಲಿ ದುಡಿಯುತ್ತಿದ್ದಾರೆ. ಅಂದರೆ ಪ್ರಧಾನವಾಗಿ ಭೂಮಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಜಮೀನುದಾರರ ಜಮೀನುಗಳಲ್ಲಿ ಕೂಲಿ ಆಳುಗಳಾಗಿ ಕೆಲಸ ಮಾಡುತ್ತಿದ್ದಾರೆ. ದಲಿತರ ದುಡಿಮೆಗೆ ಅನುಗುಣವಾಗಿ ಹೇಳುವುದಾದರೆ ಅವರು ಕೃಷಿಕೂಲಿ ಕಾರ್ಮಿಕರು. ಇದು ದಲಿತ ಪುರುಷರಿಗೂ ಅನ್ವಯಿಸುತ್ತದೆ, ದಲಿತ ಮಹಿಳೆಯರಿಗೂ ಅನ್ವಯಿಸುತ್ತದೆ.

ದಲಿತ ಮಹಿಳೆಯನ್ನು ನಿರ್ಧಿಷ್ಟವಾಗಿ ಗುರುತಿಸಬೇಕಾಗಿರುವುದು ಕೃಷಿವಲಯದಲ್ಲಿ, ನಗರಗಳಲ್ಲಿ ಕೆಲಸ ಮಾಡುವ ಜಾಡಮಾಲಿತನದಲ್ಲಿ. ದಲಿತ ಮಹಿಳೆ ಕರ್ನಾಟಕದಾದ್ಯಂತ ವಿವಿಧ ಪ್ರದೇಶಗಳಲ್ಲಿ, ವಿವಿಧ ಬೆಳೆಗಳಲ್ಲಿ ಕೆಲಸ ಮಾಡುವುದನ್ನು ಕಾಣುತ್ತೇವೆ. ಹೈದ್ರಾಬಾದ್ ಕರ್ನಾಟಕದ ಬಳ್ಳಾರಿಯಲ್ಲಿ ಕೆಲವು ಕಡೆ ಒಣಭೂಮಿ ಇದ್ದರೆ, ಕೆಲವು ಕಡೆ ನೀರಾವರಿ ಇದೆ. ಅಲ್ಲಿ ಭತ್ತ, ಕಬ್ಬು, ಬಾಳೆ ಬೆಳೆಯುತ್ತಾರೆ. ಭತ್ತ, ಕಬ್ಬು, ಬಾಳೆ ಬೆಳೆಯುವ ಕೃಷಿಯಲ್ಲಿ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ದಕ್ಷಿಣ ಕರ್ನಾಟಕದಲ್ಲಿ ಭತ್ತದ ಗದ್ದೆ, ಕಾಫಿ ತೋಟ, ಯಾಲಕ್ಕಿ ತೋಟದಲ್ಲಿ ದಲಿತ ಮಹಿಳೆಯರು ಕೆಲಸ ಮಾಡುತ್ತಾರೆ. ಇದರ ಅರ್ಥ ಕೃಷಿ ವಲಯದಲ್ಲಿ ಯಾವ ರೀತಿಯ ಉತ್ಪಾದನೆ ನಡೆಯುತ್ತಿದೆಯೋ ಯಾವ ಬಗೆಯ ಬೆಳೆಯನ್ನು ಬೆಳೆಯುತ್ತಿರುವರೋ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಯಾವ ಜಮೀನಿನಲ್ಲಿ ಕೆಲಸ ಮಾಡುತ್ತಿರುವರೋ ಆ ಜಮೀನಿನ ಒಡೆತನ ಇವರಿಗಿಲ್ಲ. ಮತ್ತು ಯಾವ ಕೆಲಸವನ್ನು ಮಾಡುವುದಕ್ಕೆ ಉಪಕರಣಗಳನ್ನು ಬಳಸುತ್ತಿರುವರೋ ಆ ಉಪಕರಣಗಳ ಒಡೆಯರೂ ಇವರಲ್ಲ. ಇವರು ಬೆಳಿಗ್ಗೆ ೬ ಕ್ಕೆ ಕೆಲಸ ಪ್ರಾರಂಭಿಸಿದರೆ, ಸಂಜೆ ೬ ಕ್ಕೆ ಕೆಲಸ ಮುಗಿಸುತ್ತಾರೆ. ಇನ್ನೂ ಕೆಲವೆಡೆ ಬೆಳಿಗ್ಗೆ ೯ ಕ್ಕೆ ಪ್ರಾರಂಭಿಸಿದರೆ ಸಂಜೆ ೫ ಕ್ಕೆ ಮುಗಿಸುತ್ತಾರೆ. ಆಯಾ ಕೆಲಸಕ್ಕೆ ಅನುಗುಣವಾಗಿ ಆಯಾ ಭೂಪ್ರದೇಶಕ್ಕೆ ಅನುಗುಣವಾಗಿ ಕೆಲಸ ಅವಧಿಯಲ್ಲಿ ವ್ಯತ್ಯಾಸವಿದೆ. ಆದರೆ ನಾವು ಮೂಲಭೂತವಾಗಿ ಗುರುತಿಸಲೇಬೇಕಾದ ಅಂಶವೆಂದರೆ, ದಲಿತ ಮಹಿಳೆಯರೆಂದರೆ ಕೇವಲ ಎಸ್.ಸಿ, ಎಸ್.ಟಿ ಹಾಸ್ಟೆಲ್‌ನಲ್ಲಿರುವ ವಿದ್ಯಾರ್ಥಿನಿಯರಲ್ಲ, ಕವನ, ಕಥೆ, ಕಾವ್ಯ ಬರೆಯುವ ದಲಿತ ಲೇಖಕಿಯರಲ್ಲ. ದಲಿತ ಡಾಕ್ಟರ್, ಇಂಜಿನಿಯರ್ ಮಹಿಳೆಯರಲ್ಲ, ದಲಿತ ರಾಜಕಾರಣೀಯರ ಮಕ್ಕಳಲ್ಲ, ದಲಿತ ಸಾಹಿತಿಗಳ ಮಕ್ಕಳೂ ಅಲ್ಲ. ದಲಿತ ಮಹಿಳೆಯರ ಬಹು ಪ್ರಮಾಣ ಕೃಷಿವಲಯದಲ್ಲಿ ಕೃಷಿಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ. ನಗರ ಪ್ರದೇಶದಲ್ಲಿ, ಹಳ್ಳಿಗಾಡಿನಲ್ಲಿ ಜಾಡಮಾಲಿಗಳಾಗಿ ಕೆಲಸ ಮಾಡುವವರಾಗಿದ್ದಾರೆ. ಗಣಿಗಳಲ್ಲಿ ಗಣಿಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದಾರೆ.

ಬಹುಸಂಖ್ಯೆಯನ್ನು ಪರಿಗಣಿಸಿ ಬಹುಸಂಖ್ಯೆಯನ್ನು ಚರ್ಚೆಯ ಮುಂಚೂಣಿಗೆ ತರಬೇಕೆಂಬುವುದು ಪ್ರಜಾತಾಂತ್ರಿಕ ವಿಧಾನ. ಇದೊಂದು ಪ್ರಕೃತಿದತ್ತ ನಿಯಮ. ಬಹುಸಂಖ್ಯೆಯ ಜಾಡಮಾಲಿ ಹಾಗೂ ಕೃಷಿ ವಲಯದಲ್ಲಿರುವ ದಿನಗೂಲಿ ಕಾರ್ಮಿಕ ದಲಿತ ಮಹಿಳೆಯರನ್ನು ಹೊರತುಪಡಿಸಿ ಅತ್ಯಂತ ಅಲ್ಪಸಂಖ್ಯೆಯ ದಲಿತ ಮಹಿಳೆಯರನ್ನು ಅಂದರೆ ಅದೊಂದು ಶೈಕ್ಷಣಿಕ ವಲಯವಿರಬಹುದು, ಇನ್ನಿತರ ಸಣ್ಣಪುಟ್ಟ ಸೇವಾವಲಯವಿರಬಹುದು ಅಥವಾ ನೌಕರಸ್ಥ ವಲಯವಿರಬಹುದು. ಇಂತಹ ಮಹಿಳೆಯರ ಸ್ಥಿತಿಗತಿಯನ್ನಿಟ್ಟುಕೊಂಡು ಅಧ್ಯಯನ ಮಾಡಿದರೆ ಅದು ಇಡೀ ದಲಿತ ಮಹಿಳಾ ಲೋಕದ ಒಂದು ಭಾಗ ಮಾತ್ರವಾಗುತ್ತದೆ. ಇದನ್ನು ಶೇಕಡಾವಾರು ಹೇಳಿಕೊಳ್ಳಬಹುದು ಆದರೆ ನಮ್ಮ ಕಣ್ಣಮುಂದಿರುವ ವಸ್ತುಸ್ಥಿತಿ ದಲಿತ ಮಹಿಳೆ ಎಲ್ಲಾ ಬಗೆಯ ಉತ್ಪಾದನೆಯಲ್ಲಿ ತೊಡಗಿದ್ದಾಳೆ. ಬಹಳ ಮುಖ್ಯವಾಗಿ ಜಮೀನಿನಲ್ಲಿ ಕೃಷಿವಲಯದಲ್ಲಿ ಅವಳು ದುಡಿಮೆಯಲ್ಲಿ ತೊಡಗಿದ್ದಾಳೆ. ಹಾಗಾದರೆ ಅವಳು ತಾನು ಮಾಡುವ ದುಡಿಮೆಗೆ ಹೇಗೆ ಪ್ರತಿಫಲ ಪಡೆಯುತ್ತಿದ್ದಾಳೆ? ಪ್ರತ್ಯೇಕವಾಗಿ ದಲಿತ ಮಹಿಳೆಯನ್ನು ಗುರುತಿಸಲಿಕ್ಕೆ ವಸ್ತುಸ್ಥಿತಿ ಏನಿದೆ? ಯಾವುದು ಮೂಲಭೂತ ಮಾನದಂಡ? ಯಾವ ಆಯಾಮದಲ್ಲಿ ದಲಿತ ಮಹಿಳೆಯನ್ನು ನಿರ್ವಚನ ಮಾಡಬೇಕು? ಎಂಬುವುದು ಮುಖ್ಯವಾಗುತ್ತದೆ. ಈವರೆಗಿನ ಅಧ್ಯಯನಗಳು ಯಾವ ಅಂಶವನ್ನು ಪ್ರಧಾನವಾಗಿ ಪರಿಗಣಿಸಿಲ್ಲವೋ ಆ ಅಂಶವನ್ನು ಪ್ರಧಾನವಾಗಿ ಗಮನಿಸಬೇಕಾಗುತ್ತದೆ.

ಎಲ್ಲರಿಗೂ ತಿಳಿದಿರುವ ಹಾಗೆ ಪ್ರತಿಯೊಂದು ದುಡಿಮೆಗೆ ಒಂದು ಪ್ರತಿಫಲವಿರುತ್ತದೆ. ಅದನ್ನು ಸಂಬಳ ಎನ್ನುತ್ತಾರೆ. ಕೆಲವು ಕಡೆ ಕೂಲಿ ಎಂದು ಹೇಳುತ್ತಾರೆ. ಇಂಗ್ಲೀಷ್‌ನಲ್ಲಿ ವೇಜ್, ಸ್ಯಾಲರಿ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ನೌಕರಸ್ಥರು ಪಡೆಯುವ ಪ್ರತಿಫಲವನ್ನು ಸಂಬಳವೆಂತಲೂ ಕೃಷಿ ಕೆಲಸ, ಇತರ ಕೆಲಸ ಮಾಡುವವರು ಪಡೆಯುವ ಪ್ರತಿಫಲವನ್ನು ಕೂಲಿ ಎಂದು ಕರೆಯುತ್ತಾರೆ. ನೌಕರಸ್ಥರಿರಬಹುದು, ಸರ್ಕಾರಿ ವಲಯವಿರಬಹುದು, ಖಾಸಗೀವಲಯವಿರಬಹುದು, ಖಾಸಗೀ ವಲಯವಲ್ಲದೆ ಇರುವ ಜಮೀನ್ದಾರಿ ಸಮಾಜದಲ್ಲಿ ಜಮೀನುಗಳಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿರಬಹುದು. ಮನೆಗಳಲ್ಲಿ ಕೆಲಸ ಮಾಡುವ ಮನೆಗೆಲಸದವರಿರಬಹುದು ಇವರು ಮಾಡುವ ದುಡಿಮೆಗೆ ಪ್ರತಿಫಲವಾಗಿ ಪಡೆಯುವ ಕೂಲಿ ಅಥವಾ ಸಂಬಳದಲ್ಲಿ ಪುರುಷ ಮತ್ತು ಮಹಿಳೆಯರಿಗೆ ವ್ಯತ್ಯಾಸ ಇದೆಯೋ ಇಲ್ಲವೋ ಎನ್ನುವಂತಹ ಪ್ರಶ್ನೆಯನ್ನು ನಾವು ಮಾಡಬೇಕಾಗುತ್ತದೆ.

ಪುರುಷರು, ಮಹಿಳೆಯರು ಇಬ್ಬರೂ ಕೆಲಸ ಮಾಡುತ್ತಾರೆ. ಕೆಲವು ಸಮಯದಲ್ಲಿ ಕೆಲವು ಕೆಲಸಗಳನ್ನು ಪುರುಷ-ಮಹಿಳೆಯರು ಒಟ್ಟಿಗೆ ಮಾಡುತ್ತಾರೆ. ಇನ್ನೂ ಕೆಲವು ಕೆಲಸವನ್ನು ಮಹಿಳೆಯರು ಮಾತ್ರ ಮಾಡುತ್ತಾರೆ. ಕೆಲವು ಕೆಲಸಗಳನ್ನು ಪುರುಷರು ಮಾತ್ರ ಮಾಡುತ್ತಾರೆ. ಉದಾಹರಣೆಗೆ ದೊಡ್ಡ ದೊಡ್ಡ ಮರವನ್ನು ಎತ್ತಲು ಮಹಿಳೆಯರಿಂದ ಆಗುವುದಿಲ್ಲ ಅದನ್ನು ಪುರುಷರೇ ಮಾಡುತ್ತಾರೆ. ನಗರವಲ್ಲಿ ಕಸವನ್ನು ಲಾರಿಗಳಿಗೆ ಮಹಿಳೆಯರೂ ಸಹ ತುಂಬುತ್ತಾರೆ. ಸಸಿ ಕೀಳುವುದನ್ನು, ಕಳೆ ಕೀಳುವುದನ್ನು, ನಾಟಿ ಮಾಡುವುದನ್ನು ಕೃಷಿ ವಲಯದಲ್ಲಿ ಮಹಿಳೆಯರೇ ಮಾಡುತ್ತಾರೆ. ಮುನಿಸಿಪಾಲ್ಟಿಗಳಲ್ಲಿ ಕಸಗೂಡಿಸುವುದನ್ನು ಹೆಚ್ಚಾಗಿ ಮಹಿಳೆಯರೇ ಮಾಡುತ್ತಾರೆ. ಈ ಕೆಲಸ ಪುರುಷರಿಗೆ ಬಂದರೂ ಮಾಡುವುದಿಲ್ಲ. ಇಲ್ಲಿ ಬಹಳ ಮುಖ್ಯವಾಗಿ ಶೋಷಣೆ ಎಲ್ಲಿ ಕಾಣಿಸುತ್ತದೆ ಎಂದರೆ ಪುರುಷರು ಮತ್ತು ಮಹಿಳೆಯರು ಸಮಾನ ಪ್ರಮಾಣದಲ್ಲಿ ಕೆಲಸ ಮಾಡುತ್ತಾರೆ. ಅಂದರೆ ಒಂದೇ ಪ್ರಮಾಣದ ಅವಧಿ ಕೆಲಸ ಮಾಡುತ್ತಾರೆ. ಕೆಲಸ ಮಾಡುವ ಅವಧಿಯಲ್ಲಿ ಪುರುಷ ಮತ್ತು ಮಹಿಳೆಯರಿಗೆ ವ್ಯತ್ಯಾಸವಿಲ್ಲ. ಆಯಾ ಪ್ರದೇಶಕ್ಕೆ ಅನುಗುಣವಾಗಿ ಕೆಲಸ ಪ್ರಾರಂಭವಾಗುವ, ಮುಗಿಯುವ

ಅವಧಿ ಬೇರೆ ಬೇರೆಯಾಗಿರಬಹುದು. ಆದರೆ ಇಲ್ಲಿ ಪಡೆಯುವ ಕೂಲಿಯಲ್ಲಿ ಪುರುಷರಿಗೂ ಮತ್ತು ಮಹಿಳೆಯರಿಗೂ ವ್ಯತ್ಯಾಸವಿದೆ ಎಂಬುವುದು ಬಹಳ ಮುಖ್ಯ.

ಉತ್ತರಕರ್ನಾಟಕದ ಬಳ್ಳಾರಿ ಜಿಲ್ಲೆಯಲ್ಲಿ ಪುರುಷರಿಗೆ ರೂ. ೪೫ ಕೂಲಿ ಇದ್ದರೆ, ಮಹಿಳೆಯರಿಗೆ ರೂ. ೨೫ ರಿಂದ ೨೦ ರೂಪಾಯಿ ಕೂಲಿ ಇದೆ. ಅಂದರೆ ಎಲ್ಲಾ ಕಡೆಗೂ ಕೂಲಿಯಲ್ಲಿ ಪ್ರಮಾಣವಾರು ವ್ಯತ್ಯಾಸವನ್ನು ಕಾಣಬಹುದು. ಕೆಲವು ಕಡೆಗೆ ಗಂಡಸರು ಪಡೆಯುವ ಕೂಲಿಗಿಂತ ರೂ. ೧೫, ೨೦ ಕಡಿಮೆ, ಇನ್ನೂ ಕೆಲವು ಕಡೆ ಗಂಡಸರು ಪಡೆಯುವ ಕೂಲಿಗಿಂತ ರೂ. ೨೦, ೩೦ ಕಡಿಮೆ ಇದೆ. ಬಹುಶಃ ಇಡೀ ಕರ್ನಾಟಕದಲ್ಲಿ ದಿನಕ್ಕೆ ೫೦, ೬೦, ೭೦ ರೂಗಳನ್ನು ಪಡೆಯುವ ಯಾವ ಕೂಲಿಕಾರ್ಮಿಕ ಮಹಿಳೆಯೂ ಇಲ್ಲ. ಕೇಂದ್ರ ಸರ್ಕಾರ ಸುಪ್ರೀಮ್‌ಕೋರ್ಟ್ ೭೩.೫೦ ಪೈಸೆ, ಸಂಬಳವನ್ನು ಕೂಲಿಕಾರ್ಮಿಕರಿಗೆ ನಿಗದಿಪಡಿಸಿದೆ ಎಂದು ಹೇಳಿದೆ. ಇದು ಪುರುಷರಿಗೆ ಬೇರೆ, ಮಹಿಳೆಯರಿಗೆ ಬೇರೆ ಎಂಬುವುದು ಇಲ್ಲ. ಇಬ್ಬರಿಗೂ ಸಮಾನವಾಗಿ ಕೊಡಬೇಕೆಂದು ಹೇಳುತ್ತದೆ. ಆದರೆ ಇದುವರೆಗೂ ಯಾವುದೇ ಜಮೀನು, ಕೈಗಾರಿಕೆ ಮಾಲೀಕರಾಗಲಿ ಕೊಟ್ಟಿಲ್ಲ. ೭೦.೫೦ ಪೈಸೆಗಿಂತ ಹೆಚ್ಚಾಗಿ ಕೆಲವು ಕೆಲಸಗಳಿಗಾಗಿ ಕೆಲವು ಪುರುಷರು ಪಡೆಯುತ್ತಿದ್ದಾರೆ. ಅದು ಗಾರೆ ಕೆಲಸವಿರಬಹುದು, ಮರ ಕಡಿಯುವುದು ಇರಬಹುದು, ಮೈನಿಂಗ್‌ನಲ್ಲಿರಬಹುದು ಮುಂತಾದ ಕೆಲಸಗಳಿಗಾಗಿ ಹೆಚ್ಚಿನ ಕೂಲಿಯನ್ನು ದಲಿತ ಪುರುಷರೇ ಪಡೆಯುತ್ತಿದ್ದಾರೆ. ಆದರೆ ದಲಿತ ಮಹಿಳೆಯರು ಮಾತ್ರ ಈ ಗಡಿಯನ್ನು ಮೀರಲಿಕ್ಕೆ ಸಾಧ್ಯವಾಗಿಲ್ಲ. ಅಂದರೆ ಅವರಿಗೆ ಕೊಟ್ಟಿಲ್ಲ ಅಷ್ಟೇ. ಬಹುಶಃ ಕರ್ನಾಟಕದ ಯಾವ ಭಾಗದಲ್ಲಿಯೂ ದಲಿತ ಮಹಿಳೆಯರಿಗೆ ಕೃಷಿಕೂಲಿ ಸಂದರ್ಭದಲ್ಲಿ ೭೦ ರೂ.ಗಿಂತ ಹೆಚ್ಚು ಕೂಲಿ ಕೊಟ್ಟಿಲ್ಲ. ಕಡಿಮೆ ಕೂಲಿನೇ ಕೊಡುತ್ತಿದ್ದಾರೆ. ದಲಿತ ಮಹಿಳೆಯರು ಕರ್ನಾಟಕದ ಬೇರೆ ಬೇರೆ ಜಮೀನುಗಳಲ್ಲಿ ತಮಗೆ ಜಮೀನು ಇಲ್ಲದೆ ಇರುವ ಕಾರಣಕ್ಕೆ ಇನ್ನೊಬ್ಬರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾರೆ. ತಮಗೆ ಸ್ವಾವಲಂಬಿ ಆರ್ಥಿಕ ಜೀವನವನ್ನು ನಡೆಸಲಿಕ್ಕೆ ಆಸ್ತಿ, ಸಂಪತ್ತು ಇಲ್ಲದೇ ಇರುವ ಕಾರಣಕ್ಕಾಗಿ ಇನ್ನೊಬ್ಬರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರನ್ನೇ ನಾವು ಕೂಲಿಕಾರ್ಮಿಕ ದಲಿತ ಮಹಿಳೆಯರು ಎಂದು ಕರೆಯುತ್ತೇವೆ.

ಈ ಕೆಳಗಿನ ಮಾನದಂಡಗಳ ಮೂಲಕ ದಲಿತ ಮಹಿಳಾವಾದವನ್ನು ಮಂಡಿಸಬಹುದು ಎನಿಸುತ್ತದೆ;

೧. ಕೂಲಿಯಲ್ಲಿ ತಾರತಮ್ಯ

೨. ಮನೆಯ ಒಳ ಹಾಗೂ ಹೊರಗಿನ ದುಡಿಮೆ

೩. ಜಾತಿಯ ಕಾರಣಕ್ಕೆ

೪. ಲಿಂಗದ ಕಾರಣಕ್ಕೆ

೧. ಕೂಲಿಯಲ್ಲಿ ತಾರತಮ್ಯ: ಇನ್ನೊಬ್ಬರ ಜಮೀನಿನಲ್ಲಿ ಕೆಲಸ ಮಾಡುವ ದಲಿತ ಮಹಿಳೆಯರು ದಲಿತ ಪುರುಷರಿಗಿಂತ ಕಡಿಮೆ ಪ್ರಮಾಣದಲ್ಲಿ ಕೂಲಿ ಪಡೆಯುತ್ತಿದ್ದಾರೆ. ಅವರಿಗೆ ಕಡಿಮೆ ಪ್ರಮಾಣದಲ್ಲಿ ಕೂಲಿಯನ್ನು ಕೊಡಲಾಗುತ್ತಿದೆ ಎನ್ನುವಂತಹದ್ದನ್ನು ಮುಖ್ಯವಾಗಿ ಗುರುತಿಸಬೇಕಾಗಿದೆ. ಇದು ದಲಿತ ಮಹಿಳೆಯನ್ನು ಗುರುತಿಸಲಿಕ್ಕೆ ಬಹುಮುಖ್ಯವಾದ ಮಾನದಂಡವಾಗಿದೆ. ಇವರು ಪಡೆಯುವ ಕೂಲಿಯಲ್ಲಿಯೇ ವ್ಯವಸ್ಥೆ ತಾರತಮ್ಯ ಮಾಡಿದೆ.

ಒಂದು ಕುಟುಂಬದಲ್ಲಿ ದಲಿತ ಪುರುಷ ಮತ್ತು ದಲಿತ ಮಹಿಳೆ ಇಬ್ಬರೂ ಕೂಲಿಗೆ ಹೋಗುತ್ತಾರೆ. ಒಂದು ವಾರಕ್ಕೆ ಆರು ದಿನ ಕೆಲಸವಾದರೆ ಒಬ್ಬ ಪುರುಷ ದಿನಕ್ಕೆ ನೂರು ರೂಪಾಯಿ ದುಡಿಯಬಲ್ಲ. ಅಂದರೆ ಅವನಿಗೆ ವಾರಕ್ಕೆ ಆರುನೂರು ರೂಪಾಯಿಗಳು ಬರುತ್ತದೆ. ದಲಿತ ಮಹಿಳೆಗೆ ನೂರು ರೂಪಾಯಿ ಕೂಲಿಯನ್ನು ಎಲ್ಲಿಯೂ ಕೊಡುವುದಿಲ್ಲ. ಹೈದ್ರಾಬಾದ್‌ಕರ್ನಾಟಕದಲ್ಲಿ ಇಪ್ಪತ್ತು ರೂಪಾಯಿ, ದಕ್ಷಿಣ ಕರ್ನಾಟಕದಲ್ಲಿ ಹೆಚ್ಚೆಂದರೆ ಐವತ್ತು ರೂಪಾಯಿ ಕೊಡಬಹುದು. ವಾರಕ್ಕೆ ಮುನ್ನೂರು ರೂಪಾಯಿ ಬರುತ್ತದೆ. ಅಂದರೆ ದಲಿತ ಪುರುಷ ಪಡೆಯುವ ಕೂಲಿ, ದಲಿತ ಮಹಿಳೆಯ ಕೂಲಿಗಿಂತ ಹೆಚ್ಚಾಗಿರುವುದು ಆರ್ಥಿಕ ಅಸಮಾನತೆಯನ್ನು ಒಂದು ಕೌಟಂಬಿಕ ನೆಲೆಯೊಳಗಡೆಯೇ ದಲಿತ ಮಹಿಳೆ ಅನುಭವಿಸುತ್ತಿದ್ದಾಳೆ. ದಲಿತ ಪುರುಷ, ದಲಿತ ಮಹಿಳೆಯ ಕೂಲಿಯ ಅಸಮಾನತೆಯಿಂದ ದಲಿತ ಮಹಿಳೆ ಹೆಚ್ಚುವರಿ ಶೋಷಣೆಗೆ ಒಳಗಾಗಿದ್ದಾಳೆ. ದಲಿತ ಮಹಿಳೆಯನ್ನು ಗುರುತಿಸಲಿಕ್ಕೆ ಇರಬಹುದಾದ ಬಹಳ ಮುಖ್ಯ ಸಾಮಾಜಿಕ ಅಂಶ ಇದಾಗಿದೆ ಎಂದು ಹೇಳಬಹುದು.

೨. ಮನೆಯ ಒಳ ಹಾಗೂ ಹೊರಗಿನ ದುಡಿಮೆ: ದಲಿತ ಪುರುಷ ದುಡಿದು ಆರ್ಥಿಕವಾಗಿ ಮನೆಗೆ ನೆರವಾಗುವ ಒಂದೇ ಪಾತ್ರವನ್ನು ಮಾತ್ರ ನಿರ್ವಹಿಸುತ್ತಾನೆ. ಇದು ಕೇವಲ ಕೆಲವೇ ಕುಟುಂಬಗಳಲ್ಲಿ ಮಾತ್ರ. ದಲಿತ ಕುಟುಂಬದಲ್ಲಿ ಮನೆಯ ಇಡೀ ಜವಾಬ್ದಾರಿಯನ್ನು ಮಹಿಳೆಯೇ ನಿರ್ವಹಿಸುತ್ತಿರುತ್ತಾಳೆ. ಮನೆಯ ಒಳಗಡೆಯೂ ದುಡಿದು, ಹೊರಗಡೆಯೂ ದುಡಿದು ಮನೆಯ ಸಂಸಾರಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ನೋಡಿಕೊಳ್ಳುವ ವಿವಿಧ ಪಾತ್ರಗಳನ್ನು ಅವಳು ನಿರ್ವಹಿಸುತ್ತಾಳೆ. 'ದಲಿತ ಮಹಿಳೆಗೆ ಆರ್ಥಿಕ ಸ್ವಾತಂತ್ರ್ಯ ದಲಿತ ಗಂಡಿನ ದೌರ್ಬಲ್ಯದಿಂದ ಬಂದಿದ್ದು. ದಲಿತ ಗಂಡಿನ ದೌರ್ಬಲ್ಯಕ್ಕೆ ಮೂಲ ಕಾರಣ ದಲಿತೇತರ ವರ್ಗ ಅಥವಾ ವ್ಯವಸ್ಥೆ. ದಲಿತೇತರ ಪುರುಷ ವರ್ಗಕ್ಕೆ ಇರುವ ಅಧಿಕಾರ, ಸ್ವಾತಂತ್ರ್ಯ ಹಾಗೂ ಸ್ವಾಯುತ್ತತೆ ದಲಿತನಿಗೆ ಇಲ್ಲದಿರುವಿಕೆಯ ಪ್ರತ್ಯುತ್ಪನ್ನವಾಗಿ ಮಹಿಳೆಗೆ ತಕ್ಕಮಟ್ಟಿಗೆ **ಆರ್ಥಿಕ ಸ್ವಾತಂತ್ರ್ಯವೆಂಬ** ಚಾಕರಿ ಕೆಲಸ ದೊರೆತಿದೆ. ಇದೂ ಕೂಡ ಜಾತಿ ಮೂಲದಿಂದ ಬಂದದ್ದು. ಮತ್ತು ವೃತ್ತಿ ಕೇಂದ್ರಿತವಾದುದ್ದು. ಈ ವೃತ್ತಿ ಕೇಂದ್ರಿತ ಆರ್ಥಿಕ ನೆಲೆಗೆ ಶ್ರಮವನ್ನು ಹೊಡೆದು ಹಾಕಿದ ಗುಲಾಮಗಿರಿಯ ನೆಲೆಯಿಂದ ಬಂದುದು. ಮತ್ತು ಬೌದ್ಧಿಕ ಹಾಗೂ ಮಾನಸಿಕ ಸ್ವಾತಂತ್ರ್ಯವಿಲ್ಲದಿರುವುದು. ಈ ಕುಲ ಕಸುಬುಗಳಿಂದ ಮುಕ್ತಿ ಪಡೆಯುವುದನ್ನು ಕುರಿತು ದಲಿತ ಮಹಿಳೆ ಚಿಂತಿಸುತ್ತಾಳೆ. ಇದನ್ನೇ ಮಹಿಳೆಯ ಆರ್ಥಿಕ ಸ್ವಾತಂತ್ರ್ಯವೆಂದು ಗ್ರಹಿಸುವುದು ಮೂಲಭೂತವಾದಿಗಳ ಲಕ್ಷಣಗಳಾಗುತ್ತವೆ' (ಅರವಿಂದ್ ಮಾಲಗತ್ತಿ, ೨೦೦೪, ಪು. ೧೨೮) ಎಂಬುವುದನ್ನು ತಿಳಿಯಬೇಕಾಗಿದೆ.

೩. ಜಾತಿಯ ಕಾರಣದಿಂದ: ಕೆಳ ಜಾತಿಯವಳಾಗಿರುವುದರಿಂದ ದಲಿತ ಮಹಿಳೆ ಹೆಚ್ಚು ಶೋಷಣೆಗೆ ಒಳಗಾಗುತ್ತಿದ್ದಾಳೆ. ಜಮೀನ್ದಾರ, ಮೇಲ್ಜಾತಿಯ ಮನೆಗಳಲ್ಲಿ ಕೆಲಸ ಮಾಡುವುದು, ಊರಿನ ಚಾಕರಿ, ಜೀತದ ಕೆಲಸದಿಂದ ದಲಿತ ಮಹಿಳೆಯೇ ದಲಿತ ಪುರುಷನಿಗಿಂತಲೂ ಅಧಿಕವಾಗಿ ಅಸ್ಪೃಶ್ಯತೆಯನ್ನು ಮೇಲ್ಜಾತಿಯ ಪುರುಷರಿಂದ, ಮೇಲ್ಜಾತಿಯ ಮಹಿಳೆಯರಿಂದ ದಲಿತ ಮಹಿಳೆಯೇ ಅನುಭವಿಸುತ್ತಿದ್ದಾಳೆ. 'ಸ್ತ್ರೀವಾದಿಗಳಲ್ಲಿ ಕೆಳಜಾತಿಯ ಹೆಂಗಸರ ಬಗ್ಗೆ ಒಂದು ಮಿಥ್ಯೆವಿದೆ. ಮೇಲ್ಜಾತಿಯ ಮತ್ತು ಮೇಲ್ವರ್ಗದ ಹೆಂಗಸರು ನಮಗೆ ಮನೆಯಿಂದ ಹೊರಗೆ ಹೋಗುವುದು ತುಂಬಾ ಕಷ್ಟ. ಕೆಳಜಾತಿಯ ಮತ್ತು ಕೆಳವರ್ಗದ ಈ ಹೆಂಗಸರಿಗೆ ಅನುಕೂಲ. ಅವರ ಧ್ವನಿ ಚೆನ್ನಾಗಿ ಕೇಳಿಸುತ್ತದೆ. ಅವರ ಜಗಳಗಳನ್ನು ರಸ್ತೆಗಳಲ್ಲಿಯೂ ನೋಡಬಹುದು. ಮನೆಯಿಂದ ಹೊರಗೆ ಹೋಗುವುದು ಅವರಿಗೆ ತುಂಬಾ ಸುಲಭ ಎನ್ನುತ್ತಾರೆ. ಆದರೆ ದಲಿತ ಮಹಿಳೆಯರ

ಅನುಭವಗಳನ್ನು ಕೇಳಿಸಿಕೊಂಡಾಗ, ನೋಡಿದಾಗ, ಮನೆಯಿಂದ ಹೊರಗೆ ಹೋಗುವುದು ಮೇಲ್ಜಾತಿಯ ಹೆಂಗಸರಂತೆ ದಲಿತ ಹೆಂಗಸರಿಗೂ ಕಷ್ಟ ಎಂಬುವುದನ್ನು ತಿಳಿಯಬೇಕು. ವಾಸ್ತವವಾಗಿ ಈ ಹೆಂಗಸರಿಗೆ ಇದು ಹೆಚ್ಚು ಕಷ್ಟ. ಈ ಹೆಂಗಸರು ಕಾಲಿಗೆ ಮರದ ತುಂಡು ಕಟ್ಟಿಕೊಂಡು ಬದುಕುತ್ತಿದ್ದಾರೆಂದರೆ ಅವರು ಬಹಳಷ್ಟು ಸಹಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ದಲಿತ ಹೆಂಗಸರು ತಮ್ಮ ಮೇಲಿನ ದಬ್ಬಾಳಿಕೆಯನ್ನು ಸುಲಭದಲ್ಲೇ ಎದುರಿಸಬಲ್ಲವರೆಂಬುದು ಕೇವಲ ಮಿಥ್ಯೆಯೇ ಸರಿ. ಅವರಿಗೆ ಬೇಗ ವಿಚ್ಛೇದನ ಸಿಗುವುದಾಗಲಿ ಅಥವಾ ಮನೆಯಿಂದ ಓಡಿ ಹೋಗುವುದಾಗಲಿ ಸಾಧ್ಯವಿಲ್ಲ. ಅಷ್ಟು ಸ್ವಾತಂತ್ರ್ಯವಾಗಲಿ, ಆತ್ಮ ಸಂಕಲ್ಪವಾಗಲಿ ಅವಳಲ್ಲಿ ಇಲ್ಲ' (ಸಂ. ತುಳಸಿ ವೇಣುಗೋಪಾಲ್, ಪು. ೭೧). ಆದರೆ ದಲಿತ ಮಹಿಳೆಯರಿಗೆ ಲೈಂಗಿಕ ಸ್ವಾತಂತ್ರ್ಯವಿದೆ ಎಂದು ಅಕಾಡೆಮಿಕ್ ಕ್ಷೇತ್ರ ಹಾಗೂ ಸರ್ಕಾರೇತರ ಸಂಸ್ಥೆಗಳು ವೈಭವೀಕರಿಸಿ ಮಾತನಾಡುತ್ತವೆ. ಆದರೆ ಅದು ತಪ್ಪು. ದಲಿತ ಮಹಿಳೆಯರ ಲೈಂಗಿಕತೆಯ ಹಿಂದಿರುವ ಪುರೋಹಿತಶಾಹಿ ವ್ಯವಸ್ಥೆಯ ಕುತಂತ್ರವನ್ನು ಅರಿಯದೇ ಈ ರೀತಿ ಯೋಚಿಸುವುದು ಅಪರಾಧವೇ ಸರಿ.

ರಾತ್ರಿ ಸ್ಪೃಶ್ಯಳಾಗಿ, ಹಗಲು ಅಸ್ಪೃಶ್ಯಳಾಗಿ ದಲಿತ ಮಹಿಳೆ

ದೇವದಾಸಿ ಮಹಿಳೆಯರು ಕೆಳಜಾತಿಗಳಲ್ಲಿ ಮಾತ್ರ ಇದ್ದಾರೆ. ಇವರನ್ನು ಮೇಲ್ಜಾತಿಗಳಲ್ಲಿ ಕಾಣಲು ಸಾಧ್ಯವಿಲ್ಲ. ದೇವದಾಸಿ ಮಹಿಳೆಯರ ದೈಹಿಕ ಸಂಬಂಧವನ್ನು ಬೆಳೆಸುವ ಮೇಲ್ಜಾತಿಯ ಪುರುಷರಿಗೆ ರಾತ್ರಿಯ ಸಮಯದಲ್ಲಿ ಯಾವುದೇ ಜಾತಿ ಇರುವುದಿಲ್ಲ. ಮೇಲ್ಜಾತಿಯ ಪುರುಷರಿಗೆ ದೇವದಾಸಿ ಆಗ ಸ್ಪೃಶ್ಯಳಾಗಿಯೇ ಇರುತ್ತಾಳೆ. ಬೆಳಗಾಗುವುದರೊಳಗಾಗಿ ಅದೇ ಮಹಿಳೆ ಅವರಿಗೆ ಅಸ್ಪೃಶ್ಯಳಾಗುತ್ತಾಳೆ. ವ್ಯವಸ್ಥೆಯ ಈ ಸಂಚನ್ನು ಹೇಗೆ ಅರ್ಥಮಾಡಿಕೊಳ್ಳಬೇಕು? ವ್ಯವಸ್ಥೆಯು ಇಂತಹ ಪದ್ಧತಿಗಳಿಗೆ ಸಂಬಂಧಿಸಿದಂತೆ ಯಾವುದೇ ಸುಳಿವು ಸಿಗದ ಹಾಗೆ ಗಟ್ಟಿಯಾದ ಬಲೆ ನೇದಿದೆ. ಇಂತಹ ಬಲೆಯನ್ನು ಬಿಡಿಸಿ ನೋಡಿದಾಗ ಮಾತ್ರ ಅದರ ನಿಜಾರ್ಥವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಲೇಸಿ, ದೇವದಾಸಿ, ಬಸವಿ ಎಂಬ ಕಾರಣಕ್ಕೆ ದಲಿತ ಪುರುಷನಿಂದಲೇ ದಲಿತ ಮಹಿಳೆ ಶೋಷಣೆಗೊಳಗಾಗುತ್ತಿದ್ದಾಳೆ. ಎಲ್ಲಾ ಮಹಿಳೆಯರಂತೆ ದೇವದಾಸಿ ಮಹಿಳೆ ತನ್ನ ಬದುಕನ್ನು ಹಸನುಗೊಳಿಸಿಕೊಳ್ಳುವ ನಿರ್ಮಲ ವಾತಾವರಣ ಈ ಸಮಾಜದಲ್ಲಿ ಇಲ್ಲ.

೪. **ಲಿಂಗದ ಕಾರಣಕ್ಕೆ:** ದಲಿತ ಮಹಿಳೆಯು ಮಹಿಳೆಯೇ ಆಗಿರುವುದರಿಂದ ಇತರೆ ಮಹಿಳೆಯರಂತೆ ತನ್ನ ಮನೆಯ ಗಂಡಸಿನಿಂದಲೇ ಶೋಷಣೆಗೆ ಒಳಗಾಗುತ್ತಿದ್ದಾಳೆ. ದಲಿತ ಮಹಿಳೆ ಎಂಬ ಕಾರಣದಿಂದ ಮೇಲ್ಜಾತಿ ಮಹಿಳೆಯರಿಂದಲೂ, ಮೇಲ್ಜಾತಿ ಪುರುಷರಿಂದಲೂ ಶೋಷಣೆಗೆ ಒಳಗಾಗುತ್ತಿದ್ದಾಳೆ. ಕೆಲಸ ಮಾಡುವ ಸ್ಥಳಗಳಲ್ಲಿ ಇವಳನ್ನು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ಅವಳೇನ್ ಬಿಡು ಮಾದ್ರು ಹುಡ್ಗಿ ಕರದ್ರೆ ಬರ್‍ತಾಳ. ಲೇಸಿ ಇರುವುದೇ ಲೇಸಿತನ ಮಾಡೋಕೆ ಎಂಬುವುದು ಪುರುಷರಾಡುವ ಮಾತು. ಜಾತಿ ಲಿಂಗದ ಕಾರಣದಿಂದಲೇ ಸೂಳೆ, ವೇಶ್ಯೆ, ದೇವದಾಸಿ, ಬಸವಿ, ರಂಡೆ, ಮುಂಡೆ ಪಾತ್ರಗಳಲ್ಲಿ ಇವಳಿಗಾಗುವ ಶೋಷಣೆ ಇಡೀ ವ್ಯವಸ್ಥೆಯಲ್ಲಿಯೇ ಭೀಕರವಾಗಿರುವಂತಹದ್ದು.

ದಲಿತ ಸಮುದಾಯದಲ್ಲಿ ಬೈಗುಳಗಳು ಏನು ಹೊಸದಲ್ಲ. ಬೆಳಗಾಗುವುದು, ಮುಗಿಯುವುದು ಎಲ್ಲಾ ಬೈಗುಳದಿಂದಲೆ. ಅವರು ಬೈದುಕೊಳ್ಳುತ್ತಾರೆ ಮತ್ತು ಬೈದುಕೊಳ್ಳುವುದೇ ಒಂದು ರೀತಿಯ ಭಾಷೆ. ಮಾತು, ದಲಿತ ಮಹಿಳೆ ಹೆಚ್ಚಾಗಿ ಮಾತನಾಡುತ್ತಾಳೆ ಎಂಬುವುದು ಶುದ್ಧ ಸುಳ್ಳು ಯಾರೋ ಒಬ್ಬರು ಮಾತನಾಡಿದರೂ ಎಂದರೆ ಅವಳಿಗೆ ಹೆಚ್ಚಿನ ಒತ್ತಡಗಳಿರುವುದರಿಂದ, ಮನೆ ಕೆಲಸ, ಜವಾಬ್ದಾರಿ, ಹೊರಗಿನ ಕೆಲಸ,

ವ್ಯವಸ್ಥೆಯೊಂದಿಗಿನ ಗುದ್ದಾಟ, ತಮ್ಮ ಭಾವನೆಗಳನ್ನು ಸಹಕಾರಗೊಳಿಸಿಕೊಳ್ಳುವ ನೆಲೆಯಿಂದ, ಯೋಚಿಸುವ ದಲಿತ ಮಹಿಳೆ ತನ್ನ ಮನಃಸ್ಥಿತಿಯ ಸಮತೋಲನವನ್ನು ಕಾಯ್ದುಕೊಳ್ಳಲು ಹುಡುಕಿಕೊಂಡಿರುವ ಒಂದು ಮಂತ್ರ ಎಂದರೆ ಅದು ಮಾತು. ತನ್ನ ಮನಃಸ್ಥಿತಿಯ ಸಮತೋಲನ ಕಾಯ್ದುಕೊಳ್ಳುವಲ್ಲಿ ಅವಳ ಸ್ಥಿತಿ ಮೀರಿದ ಕ್ಷಣದಲ್ಲಿ ಅವಳು ಗಾಡ ಮೌನಕ್ಕೆ ಗುರಿಯಾಗುತ್ತಾಳೆ. ಗರಿಷ್ಠ ಮಹಿಳೆಯರು ಈ ದಾರಿಯನ್ನೇ ಆಯ್ದುಕೊಂಡಿದ್ದಾರೆ. ದಲಿತ ಮಹಿಳೆ ಈ ಎರಡೂ ನೆಲೆಯಿಂದ ಪಾರಾಗಲು ತನ್ನ ಕಷ್ಟಪರಿಹಾರಕ್ಕೆ ಉಪಾಯವನ್ನು ಹುಡುಕಿಕೊಂಡಿರುವ ದಾರಿ ಎಂದರೆ ಮೌಖಿಕ ಸಾಹಿತ್ಯ. ತನ್ನ ಕಷ್ಟ, ಸುಖ, ದುಃಖ ಎಲ್ಲವುಗಳನ್ನು ಕಥೆಯಾಗಿಸಿಯೋ, ಕಥನ ಗೀತೆಯಾಗಿಯೋ, ಕಾವ್ಯವಾಗಿಯೋ ಕಟ್ಟಿ ಹಾಡಿ ತನ್ನ ಎಲ್ಲಾ ನೋವನ್ನು ಹೊರ ಹಾಕಿ ನಿರ್ಮಲಳಾಗುತ್ತಾಳೆ. ಇದನ್ನು ವ್ಯವಸ್ಥೆ ಕಲಿಸಿದ ಪಾಠಕ್ಕೆ ಪಾಠ ಹೇಳುವ ಸ್ಥಿತಿಯಲ್ಲಿಯೋ ಕರೆದೊಯ್ಯುತ್ತಾಳೆ. ಆ ನೆಲೆಯಲ್ಲಿ ಇವಳಿಗೆ ಸೋಲುಂಟಾದಾಗ ಮೈಮೇಲೆ ದೆವ್ವವನ್ನು, ದೇವರನ್ನು ಆಹ್ವಾನಿಸಿಕೊಂಡು ತನ್ನ ಸಿಟ್ಟು ತೀರಿಸಿಕೊಳ್ಳುತ್ತಾಳೆ. ಅಸಾಹಯಕಳಾಗಿ ಸುಮ್ಮನಾಗುತ್ತಾಳೆ.

ದಲಿತ ಕುಟುಂಬಗಳಲ್ಲಿ ಬೈಗುಳಗಳನ್ನು, ಜೋರು ಜೋರಾಗಿ ಬೈದುಕೊಳ್ಳುವುದನ್ನು ನೋಡಬಹುದು. ದಲಿತ ಮಹಿಳೆ ಗಂಡನ ಜೊತೆ ಜಗಳವಾಡಬೇಕಾದರೆ ಎಲ್ಲರಿಗೂ ಕೇಳಿಸುವಂತೆ ಬೀದಿಗೆ ಬಂದು ಜಗಳವಾಡುತ್ತಾಳೆ. ಅವಳು ಯಾರ ರಕ್ಷಣೆಯನ್ನು ಬಯಸುವುದಿಲ್ಲ. ಅವಳಿಗೆ ಗೊತ್ತಿದೆ ತಾನು ಯಾರ ರಕ್ಷಣೆಯನ್ನು ಬಯಸಿದರೂ ಅದು ನನಗೆ ಸಿಗುವುದಿಲ್ಲವೆಂದು. ಕುಟುಂಬ, ಮನೆ, ಮಕ್ಕಳು, ಚಾಕರಿ, ಹೊರಗಿನ ದುಡಿಮೆ, ಗಂಡನ ಹೊಡೆತ ಎಲ್ಲವುಗಳನ್ನು ಸಹಿಸಿಕೊಳ್ಳುವ ಶಕ್ತಿ ಬರುವುದು ಅವಳು ಜೋರಾಗಿ ಕಿರಿಚಿ ಮಾತನಾಡಿ ತನ್ನ ಮನಃಸ್ಥಿತಿಯನ್ನು ಅಭಿವ್ಯಕ್ತಿಸಿದಾಗ ಮಾತ್ರ. ದಲಿತ ಮಹಿಳೆ ಪರಾವಲಂಭಿಯಲ್ಲ. ತಾನು ದುಡಿದು ಮಕ್ಕಳನ್ನು, ಕುಡಕ ಗಂಡನನ್ನು ಸಾಕುತ್ತಾಳೆ. ಇಡೀ ಕುಟುಂಬದ ಹೊಣೆಯನ್ನು ಸಾಯುವವರಿಗೂ ಹೊರುತ್ತಾಳೆ. ಈ ನೆಲೆಯಲ್ಲಿಯೇ ದಲಿತ ಮಹಿಳೆ ಇತರೆ ಮಹಿಳೆಗಿಂತ ಭಿನ್ನವಾಗಿ ನಿಲ್ಲುತ್ತಾಳೆ.

ಎಲ್ಲಾ ದಲಿತರಿಗೂ ಸುಸಜ್ಜಿತವಾದ, ಸಾಮಾನ್ಯವಾದ ಮನೆಗಳಿಲ್ಲ. ದಲಿತರ ಎಲ್ಲಾ ಮನೆಗಳಲ್ಲಿಯೂ ಸ್ನಾನದ ಮನೆ, ಟಾಯಲೆಟ್, ಬಾತ್‌ರೂಮ್ ಇದು ಯಾವುದೂ ಇರುವುದಿಲ್ಲ. ದಲಿತರಿಗೆ ಒಂದು ಮನೆ ಎಂದರೆ ನಾಲ್ಕು ಗೋಡೆ ಅಷ್ಟೆ. ಕೆಲವು ದಲಿತರಿಗೆ ಗೋಡೆಯನ್ನು ಕಲ್ಪನೆ ಮಾಡಿಕೊಳ್ಳುವುದು ಕಷ್ಟವಾಗಬಹುದು. ಮನೆಯಿಂದ ಹೊರಗೆ ಹೋದರೆ ಅದು ಹೊರಗಡೆಯೇ, ಒಳಗ್ಗಿನ ಪ್ರಶ್ನೆಯೇ ಇಲ್ಲ. ಮನೆಯ ಒಳಗೆ ಬಾ ಎಂದರೆ ಒಂದೇ ಕೋಣೆ ಇರಬಹುದು, ಹೆಚ್ಚೆಂದರೆ ಎರಡು ಕೋಣೆ. ಅಡುಗೆ ಕೋಣೆ ಒಂದು, ಮಲಗುವ ಕೋಣೆ ಇನ್ನೊಂದು. ಹೆಚ್ಚಾಗಿ ಗುಡಿಸಿಲಲ್ಲಿ ಇದ್ದಾರೆ. ಇನ್ನೂ ಕೆಲವರು ನಿರಾಶ್ರಿತತೆಯನ್ನು ಅನುಭವಿಸುತ್ತಿದ್ದಾರೆ.

ಮಹಿಳೆಯರು ಮುಟ್ಟಾದಾಗ ಕೆಲವು ಕಡೆ ಮೂರು, ನಾಲ್ಕು ದಿವಸ ಮನೆಯಿಂದ ಹೊರಗೆ ಇರುತ್ತಾರೆ. ಪ್ರತಿದಿನವೂ ನೀರು ಹಾಕಿಕೊಳ್ಳಬೇಕು ಮತ್ತು ಹೊರಗೆ ಇರಬೇಕು. ಅವರು ಒಳಗೆ ಬರುವ ಹಾಗಿಲ್ಲ ಅದಕ್ಕೆ ಅನೇಕ ಕಾರಣಗಳಿವೆ. ನಾಲ್ಕು ಗೋಡೆಗಳಿರುವ ಒಂದೇ ಕೋಣೆ ಇರುವವರು ಮೂಲಭೂತ ಅಗತ್ಯಗಳು ಸಹಾ ಇಲ್ಲದಿರುವವರು ತಿಂಗಳಿಗೆ ಮೂರು ದಿವಸ ಮನೆಯ ಹೊರಗೆ ಇರಬೇಕು ಎಂದು ಹೇಳಿದರೆ ಅವರು ಎಲ್ಲಿ ಇರಬೇಕು? ಇದನ್ನು ದುಡಿಯುವ ವರ್ಗದ ದಲಿತ ಮಹಿಳೆಯು ಬಹಳ ಕ್ರೂರವಾಗಿ ವಿಕೃತವಾಗಿ ಅನುಭವಿಸುತ್ತಿದ್ದಾಳೆ. ಈ ಜೈವಿಕ ಬದಲಾವಣೆ ಹೆಣ್ಣಿಗೆ ಅದರಲ್ಲೂ ದಲಿತ ಮಹಿಳೆಗೆ ಕ್ರೂರವಾಗಿ

ಕಾಡುತ್ತಿರುವಂತಹದ್ದು ಎಂದು ಹೇಳಬಹುದು. ತಿಂಗಳಿಗೆ ಮೂರು ದಿವಸ ಇಂತಹ ಸಮಸ್ಯೆಯಿಂದ ನರಳಿಕೊಂಡೇ ಗೌಡರ ಜಮೀನಿನಲ್ಲಿ ಮೈಮುರಿದು ದುಡಿಯಬೇಕಾದ ಅನಿವಾರ್ಯತೆ ದಲಿತ ಮಹಿಳೆಗೆ ಇರುವುದನ್ನು ಕಾಣಬಹುದು.

ದಲಿತ ಮಹಿಳೆಯ ಸಾಮಾನ್ಯ ಆರೋಗ್ಯ, ಸಾಮಾನ್ಯ ಶುಚಿತ್ವವನ್ನು ಆಕೆ ಕಾಪಾಡಿಕೊಂಡು ಹೋಗಲು ಆಗುವುದಿಲ್ಲ. ಆದರೆ ದಲಿತ ಪುರುಷನಿಗೆ ಈ ಸಮಸ್ಯೆ ಇಲ್ಲ. ಇದು ಮುಂದಿನ ಅವಳ ಜೈವಿಕ, ಮಾನಸಿಕ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರಬಹುದು. ಆದರೂ ಕೂಡ ಅವಳು ದುಡಿಯುವ ಮಹಿಳೆಯಾಗಿರುವುದರಿಂದ, ಪ್ರತಿರೋಧದ ಶಕ್ತಿಯಿರುವುದರಿಂದ ಅದನ್ನು ನಿಭಾಯಿಸುತ್ತಾಳೆ. ದಲಿತ ಮಹಿಳೆಯರಿಗೂ, ದಲಿತ ಪುರುಷರಿಗೂ ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಕೆಲವು ರೋಗದ ಲಕ್ಷಣಗಳನ್ನು ಗಮನಿಸಿದರೆ ದಲಿತ ಪುರುಷರಿಗಿಂತ, ದಲಿತ ಮಹಿಳೆಯರಿಗೆ ಬಾರಿ ಪ್ರಮಾಣದ ಖಾಯಿಲೆಗಳಿವೆ. ಇತ್ತೀಚೆಗೆ ನಲವತ್ತು ವರ್ಷವಾದ ದಲಿತ ಮಹಿಳೆಗೆ ಗರ್ಭಕೋಶದ ಖಾಯಿಲೆ ಯಾಕೆ ಬರುತ್ತದೆ ಎಂದರೆ ಆಗಿನ ದಿನಗಳಲ್ಲಿ ಮುಟ್ಟಿನ ಸಂದರ್ಭದಲ್ಲಿ ಶುಚಿತ್ವವನ್ನು ಕಾಪಾಡಿಕೊಳ್ಳದೆ ಇದ್ದದ್ದು ಕಾರಣ ಎಂದು ಹೇಳಬಹುದು. ಇದಕ್ಕೆ ಸರಿಯಾದ ಚಿಕಿತ್ಸೆಯನ್ನು ಪಡೆಯಲಿಕ್ಕೆ ಅವಳಿಂದ ಆಗುತ್ತಿಲ್ಲ. ಕಾರಣ ಅವಳ ಆರ್ಥಿಕ ಪರಿಸ್ಥಿತಿ ಅಧೋಗತಿಯಿಂದ ಕೂಡಿರುವಂತಹದ್ದು. ಬೆಳಗಾಂ, ಬಳ್ಳಾರಿ, ಬಾಗಲಕೋಟೆ, ರಾಯಚೂರು, ಗುಲ್ಬರ್ಗಾ, ಬೆಂಗಳೂರು ಮುಂತಾದ ಪ್ರದೇಶಗಳಲ್ಲಿ ದಲಿತ ಮಹಿಳೆಯರೇ ಹೆಚ್ಚಾಗಿ ಏಡ್ಸ್‌ಗೆ ಗುರಿಯಾಗಿದ್ದಾರೆ. ಅವರ ಆರ್ಥಿಕ ಪರಿಸ್ಥಿತಿ ದುಃಸ್ಥಿತಿಗೆ ಇಳಿದಿರುವ ಕಾರಣ ಅನಿವಾರ್ಯವಾಗಿ ವೇಶ್ಯಾವಾಟಿಕೆಗೆ ಮೊರೆ ಹೋಗಿ ಇಂತಹ ಖಾಯಿಲೆಗಳಿಗೆ ಗುರಿಯಾಗುತ್ತಿದ್ದಾರೆ.

ದಲಿತರು ಮಾಡುವ ದುಡಿಮೆಗೆ ಹೆಚ್ಚು ಲಾಭ ಬರುವುದಾಗಿದ್ದರೆ ವೃತ್ತಿಯ ಕಾರಣಕ್ಕಾಗಿ ಹುಟ್ಟಿರುವ ಜಾತಿಯ ಹೆಸರನ್ನು ಸಾಮಾಜಿಕವಾಗಿ ಒಂದು ಗೌರವಾನ್ವಿತವಾದ ಪರಿಭಾಷೆಯೆಂದು ಖುಷಿಪಡಬಹುದಿತ್ತು. ಸರಕಾರಿ ಉದ್ಯೋಗದಲ್ಲಿ ಮೇಲಿನ ಅಧಿಕಾರಿಗಳಿಗೆ ಸಾಹೇಬರೆ ಎಂದರೆ ಖುಷಿಯಾಗುತ್ತದೆ. ಅಲ್ಲಿ ಕಸ ಗುಡಿಸುವವರಿಗೆ ಸರಕಾರದ ಪರಿಭಾಷೆಯಲ್ಲಿ ಜವಾನ ಎಂದು ಕರೆಯುತ್ತಾರೆ. ಅವಳನ್ನು ಕಸಗುಡಿಸುವವಳೆ ಎಂದು ಕರೆದರೆ ಅವಳಿಗೆ ನೋವಾಗುತ್ತದೆ. ಅವಳು ಮಾಡುವುದು ಒಂದು ದುಡಿಮೆಯೇ ಅಲ್ಲವೇ? ಯಾವ ದುಡಿಮೆಗೆ ಅಧಿಕಾರವಿದ್ದು ಸಂಬಳ ಹೆಚ್ಚಾಗಿದ್ದರೆ ಅದಕ್ಕೆ ಸಾಮಾಜಿಕ ಗೌರವ ಸಿಗುತ್ತದೆ. ದಲಿತರು ದನ ಕೊಯ್ಯುವ, ಚಪ್ಪಲಿ ಹೊಲಿಯುವ ಕೆಲಸ ಮಾಡುತ್ತಿದ್ದರೆ ಆ ಉದ್ದಿಮೆಯಲ್ಲಿ ಹೆಚ್ಚು ಲಾಭ ಇರುವುದಿಲ್ಲ. ಈ ವೃತ್ತಿ ಅಪಮಾನಕ್ಕೆ ಒಳಗಾಗಿದೆ. ಯಾಕೆಂದರೆ ಅದರಿಂದ ಭಾರೀ ಲಾಭ ಬರುತ್ತಿಲ್ಲ ಮತ್ತು ಆ ವೃತ್ತಿಗೆ ಅಧಿಕಾರದ ಬೆಂಬಲ ಕೂಡ ಇಲ್ಲ. ಅಂತಹ ಕೆಲಸಗಳು ಕೊಳಕು, ಹೊಲಸು, ಕೆಳಜಾತಿಗಳು ಮಾತ್ರ ಅಂತಪ ಕೆಲಸಗಳನ್ನು ಮಾಡಬೇಕೆಂಬ ಸಾಂಪ್ರದಾಯಿಕ ಬಿಕ್ಕಟ್ಟು ಇದಕ್ಕೆ ಕಾರಣ.

ಯಾವ ದುಡಿಮೆಗೆ ಸಂಪಾದನೆ ಕಡಿಮೆ ಇರುತ್ತದೋ ಅದು ಸಾಮಾಜಿಕ ಅಪಮಾನವನ್ನು ಅನುಭವಿಸುತ್ತಿರುತ್ತದೆ. ಇಲ್ಲಿ ವಿಕೃತ ಸತ್ಯ ಎಲ್ಲಿದೆ ಎಂದು ನೋಡುವುದಾದರೆ ಸಾಮಾಜಿಕವಾಗಿ ನಾವು ಯಾವುದು ಮೇಲಿನ ಹುದ್ದೆ ಎಂದು ಗೌರವಿಸುತ್ತೇವೆಯೋ ಅಲ್ಲಿ ಹೆಚ್ಚು ಲಂಪಟತನ, ಶೋಷಕತನ, ಕ್ರೌರ್ಯವಿರುತ್ತದೆ. ಭೂಮಾಲಿಕರು ಶ್ರಮಜೀವಿಗಳ ಬೆವರು, ಕಣ್ಣೀರಿನಲ್ಲಿಯೇ ತಮ್ಮ ಮನೆಗಳನ್ನು ಕಟ್ಟಿಕೊಳ್ಳುತ್ತಾರೆ. ಸಂಪತ್ತು ಮತ್ತು ಅಧಿಕಾರದ ಒಡೆಯರು ಅವರಾಗಿರುವುದರಿಂದ ಸಾಮಾಜಿಕ ಅಭಿಪ್ರಾಯ ಅವರ ಪರವಾಗಿದೆ. ಕೆಳಜಾತಿಗಳು ಮಾಡುವ ವೃತ್ತಿ ಎಷ್ಟೇ ಅಭಿಮಾನದಿಂದ ಸಾಮಾಜಿಕವಾಗಿ

ನ್ಯಾಯೋಚಿತದಿಂದ ಕೂಡಿದರೂ ಅದಕ್ಕೆ ಪ್ರತಿಫಲ ಕಡಿಮೆ ಇರುವುದರಿಂದ ಮತ್ತು ಸಂಪತ್ತು ಕಡಿಮೆ ಇರುವುದರಿಂದ, ಅಧಿಕಾರದ ಬೆಂಬಲ ಇಲ್ಲದೇ ಇರುವುದರಿಂದ ಅದು ಅಪಮಾನಕ್ಕೆ ಗುರಿಯಾಗಿದೆ.

ಪರಂಪರೆಯಿಂದ ಮಾಡಿಕೊಂಡು ಬಂದಂತಹ ಹುದ್ದೆ ಹೆಚ್ಚು ಲಾಭದ ಹುದ್ದೆಯಾಗಿ ಮಾರ್ಪಟ್ಟಾಗ ಅದಕ್ಕೆ ಸಾಮಾಜಿಕ ಮನ್ನಣೆ ಹಾಗೂ ಸಾಮಾಜಿಕ ಸ್ಥಾನಮಾನಗಳು ಜಾಸ್ತಿಯಾಗುತ್ತವೆ. ಉದಾಹರಣೆಗೆ ಚಪ್ಪಲಿಯನ್ನು ಮಾದಿಗರು ಸತ್ತಂತಹ ಕೋಣದ ಚರ್ಮದಿಂದ ಮಾಡುತ್ತಾರೆ. ಅವರನ್ನು ಮಾದಿಗರು, ಚಮ್ಮಾರರು ಇತ್ಯಾದಿಯಾಗಿ ಕರೆಯುತ್ತಾರೆ. ಅದು ಸಾಮಾಜಿಕವಾಗಿ ಅತ್ಯಂತ ಕಡಿಮೆ ಉತ್ಪಾದನೆಯನ್ನು, ಲಾಭವನ್ನು ಕೊಡುವಂತಹದ್ದಾಗಿದೆ. ಆ ಕಾರಣಕ್ಕಾಗಿ ಅದಕ್ಕೆ ಅದರದೇ ಆದ ಸ್ಥಾನಮಾನವಿದೆ. ಇದನ್ನು ಕೆಲವರು ಅಭಿಮಾನದಿಂದ ಹೇಳಿಕೊಂಡರೆ ಇನ್ನು ಕೆಲವರು ಅಪಮಾನದಿಂದ ಹೇಳಿಕೊಳ್ಳುತ್ತಾರೆ. ಆದರೆ ಅದು ಒಂದು ಕೈಗಾರಿಕೆಯಾಗಿ ಮಾರ್ಪಟ್ಟಾಗ ಅದಕ್ಕೆ ಯಾರು ಬೇಕಾದರೂ ಮಾಲೀಕರಾಗುತ್ತಾರೆ. ಈ ರೀತಿ ಕಂಪನಿಗಳು ಪ್ರಪಂಚದಲ್ಲಿ ಅನೇಕವು ಇವೆ.

ಆರ್ಥಿಕ ಅಸಮಾನತೆ ಎಲ್ಲಾ ಜಾತಿಯ ಬಡವರಲ್ಲಿಯೂ ಇರಬಹುದು 'ಮೇಲ್ಜಾತಿಯ ಬಡವಿ/ವ ಬದುಕು ಕಟ್ಟಿಕೊಳ್ಳುವುದಕ್ಕೂ, ತಳಸಮುದಾಯದ ಬಡವಿ/ವ ಬದುಕು ಕಟ್ಟಿಕೊಳ್ಳುವುದಕ್ಕೂ ವ್ಯತ್ಯಾಸವಿದೆ' (ಸಖಿ, ೨೦೦೬, ಪು. ೨). ಸಾಮಾಜಿಕ ಅಪಮಾನದಲ್ಲಿ ಪ್ರಮಾಣವಾರು ವ್ಯತ್ಯಾಸವಿದೆ. ಈ ಪ್ರಮಾಣವಾರು ವ್ಯತ್ಯಾಸವಿರುವುದರಿಂದ ಮತ್ತು ಸಾಮಾಜಿಕ ಅಸಮಾನತೆಯನ್ನು ಅನುಭವಿಸುತ್ತಿದ್ದೇವೆ ಎಂದು ಎಲ್ಲರೂ ಹೇಳಿಕೊಳ್ಳಲು ಆಗುವುದಿಲ್ಲ. ದಲಿತರೇ ನಾವು ಅಪಮಾನ ಹಸಿವುಗಳಿಂದ ಅಸಮಾನತೆಗೆ ಒಳಗಾಗಿದ್ದೇವೆ ಎಂದು ಹೇಳಿಕೊಳ್ಳುವುದಿಲ್ಲ. ವಸ್ತು ಸ್ಥಿತಿ ಹೀಗಿರುವಾಗ ಇನ್ನು ಕೆಲವರು ಮೌಖಿಕವಾಗಿ ಹಾಗೂ ಲಿಖಿತದಲ್ಲಿ ಶೋಷಣೆಯ ನೆಲೆಗಳನ್ನು ದಾಖಲಿಸಿದ್ದಾರೆ. ದಲಿತ ಪುರುಷರು ಒಂದು ರೀತಿ ತಮ್ಮ ಅಪಮಾನವನ್ನು ದಾಖಲಿಸಿದರೆ ದಲಿತ ಮಹಿಳೆಯರು ಇನ್ನೊಂದು ರೀತಿಯಲ್ಲಿ ತಮ್ಮ ಅಪಮಾನವನ್ನು ದಾಖಲಿಸಿದ್ದಾರೆ. ದಲಿತ ಪುರುಷರಿಗಿಂತ, ದಲಿತ ಮಹಿಳೆಯರೇ ಮೌಖಿಕ ಸಾಹಿತ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಮ್ಮ ಅಪಮಾನಗಳನ್ನು ದಾಖಲಿಸುತ್ತಾ ಬಂದಿದ್ದಾರೆ. ಇವುಗಳನ್ನು ಗಮನಿಸಿದರೆ ದಲಿತ ಮಹಿಳೆಯರು ಅತ್ಯಂತ ಅಮೂರ್ತ, ಅತ್ಯಂತ ಸಂಕೀರ್ಣ ಕೂಡ. ಅವರೆಲ್ಲರೂ ನಮಗೆ ನೇರವಾಗಿ ಅಸಮಾನತೆ, ಅಪಮಾನ, ನೋವು ಆಗಿದೆ ಎಂದು ಹೇಳಿಕೊಳ್ಳುವ ಸಾಮಾಜಿಕ ವಾತಾವರಣವನ್ನು ಈ ಸಮಾಜ ನೀಡಿಲ್ಲ.

ಈ ಸ್ಥಿತಿಯನ್ನೇ ಕೆಲವು ಎನ್.ಜಿ.ಓ ಗಳು ಬಂಡವಾಳವಾಗಿ ಸ್ವೀಕರಿಸಿ ದಲಿತ ಮಹಿಳೆಯರ ಹೆಸರಿನಲ್ಲಿ ಅವರ ಉದ್ಧಾರ ಮಾಡುತ್ತೇವೆ ಎಂದು ಹೇಳುತ್ತಲೇ ಸಾಕಷ್ಟು ಹಣವನ್ನು ಲಪಟಾಯಿಸುತ್ತಿವೆ. ಇಂತಹ ಎನ್.ಜಿ.ಓ ಗಳು ಕರ್ನಾಟಕದಲ್ಲಿ ಸಾಕಷ್ಟು ಇವೆ. (ಪ್ರಾಮಾಣಿಕವಾಗಿ ಕೆಲವು ಎನ್.ಜಿ.ಓ ಗಳು ಕೆಲಸ ಮಾಡುತ್ತಿವೆ. ಎಲ್ಲಾ ಎನ್.ಜಿ.ಓ ಗಳನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗುವುದು ಸರಿಯಲ್ಲ ಎಂಬುವುದು ಕೂಡ ಮನಸ್ಸಿನಲ್ಲಿರಬೇಕು).

ಈ ಹಿನ್ನೆಲೆಯಲ್ಲಿ ದಲಿತ ಮಹಿಳೆಯ ಸಾಮಾಜಿಕ ಪ್ರಜ್ಞೆಯನ್ನು ತಳಹದಿಯಾಗಿಟ್ಟುಕೊಂಡು ಸಂಕೀರ್ಣ ಚರ್ಚೆಗಳಾಗಲಿ, ಚಳುವಳಿಗಳಾಗಲಿ ಕರ್ನಾಟಕದಲ್ಲಿ ಇನ್ನೂ ಗಂಭೀರವಾಗಿ ಸಜ್ಜಾಗಿಲ್ಲ. ಹೋರಾಟದಲ್ಲಿ ಮಾತ್ರ ಚಳುವಳಿಯನ್ನು ಕಾಣಬಹುದು. ಅಲ್ಲಿ ಮಾತ್ರ ಅಪಮಾನವನ್ನು ಹೇಳಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ ಕೆಲವರು ಅಧ್ಯಯನ ಮಾಡಿ ಬರವಣಿಗೆ ಮಾಡಿದ್ದರೂ ತುಂಬಾ ಹಿಂಜರಿಕೆಯಿಂದ

ಬರೆದಿರುವುದನ್ನು ನಾವು ನೋಡಬಹುದು. ನಮಗೆ ಆದ ಅಪಮಾನವನ್ನು, ಅವಮಾನವನ್ನು, ಶೋಷಣೆಯನ್ನು ಹೇಳಬೇಕೋ, ಹೇಳಬಾರದೋ ಎಂಬ ದ್ವಂದ್ವ ಮನಃಸ್ಥಿತಿಯಿಂದ ಬರೆದಿರುವವರೇ ಹೆಚ್ಚು.

ಅಪಮಾನಕ್ಕೆ ಒಳಗಾಗಿರುವ ದಲಿತ ಮಹಿಳೆ, ಅಪಮಾನವನ್ನು ನೇರವಾಗಿ ಹೇಳಿಕೊಳ್ಳಲಿಕ್ಕೆ ವೈಯಕ್ತಿಕವಾಗಿ ಬಹಳಷ್ಟು ಸಮಸ್ಯೆಗಳಿವೆ. ಒಂದು ಸಂಘಟಕ ನೆಲೆಯಲ್ಲಿ ಅದಕ್ಕೊಂದು ಶಕ್ತಿ ಬರುತ್ತದೆ. ಅಪಮಾನ ಶೋಷಣೆ ಎಂಬುವುದು ವೈಯಕ್ತಿಕ ನೆಲೆಯಲ್ಲಿ ಅನುಭವಿಸದೇ ಇದ್ದರೂ ಸಾಮಾಜಿಕವಾಗಿ ಶೋಷಣೆ ಸಾಮುದಾಯಿಕವಾದುದು, ವಿಶಾಲವಾದುದು. ಉದಾಹರಣೆಗೆ ಕೋಲಾರದ ದಲಿತ ಮಹಿಳೆ ಅನುಭವಿಸುವ ಶೋಷಣೆಗೂ, ಬಳ್ಳಾರಿ ದಲಿತ ಮಹಿಳೆ ಅನುಭವಿಸುವ ಶೋಷಣೆಗೂ ವ್ಯತ್ಯಾಸವಿಲ್ಲ. ಅವರು ಒಬ್ಬರು ಇದ್ದಾಗ ಹೇಳಿಕೊಳ್ಳಲಾಗುವುದಿಲ್ಲ. ಎಲ್ಲಾ ದಲಿತ ಮಹಿಳೆಯರು ಒಟ್ಟಾಗಿ ಸೇರಿದರೆ ಅವರಿಗೆ ಸಾಮುದಾಯಿಕವಾದ ನೈತಿಕ ಬೆಂಬಲ ದೊರೆಯುತ್ತದೆ. ಹಾಗೆಯೇ ರಾಜಕೀಯ ಶಕ್ತಿ ಬರುತ್ತದೆ ಎಂದು ಹೇಳಬಹುದು.

ದಲಿತ ಮಹಿಳೆಯ ಸಾಮುದಾಯಿಕ ಶಕ್ತಿಗೆ ತನ್ನ, ತನ್ನ ಸಾಮುದಾಯಿಕ ಸಾಂಸ್ಕೃತಿಕ ಅರಿವು, ಸಾಮಾಜಿಕ ಅರಿವು ಹಾಗೂ ಸಮಾಜದ ಅರಿವು ಮುಖ್ಯವಾಗಿ ಬೇಕಾಗುತ್ತದೆ. ಆ ಮೂಲಕ ತನ್ನ ಅನನ್ಯತೆಯನ್ನು ಗುರುತಿಸಿಕೊಂಡು ಮುನ್ನಡೆಯಬೇಕಾಗುತ್ತದೆ ಹಾಗೂ ಅದರ ನೆರಳಿನಲ್ಲಿಯೇ ತನ್ನ ಹೋರಾಟದ ಹಾದಿಗೆ ಬಾಗಿಲು ತೆರೆದುಕೊಂಡು ಪ್ರವೇಶಿಸಬೇಕಾಗುತ್ತದೆ. ದಲಿತ ಮಹಿಳೆ ಎಷ್ಟೋ ಶತಮಾನಗಳಿಂದ ಶಾಶ್ವತವಾಗಿ ಮುಚ್ಚಿ ಹೋಗಿರುವ ತನ್ನ ಬದುಕಿನ ಕರಾಳದ ಬಾಗಿಲುಗಳನ್ನು ತೆಗೆಯುವುದಕ್ಕೆ ಸಾಕಷ್ಟು ಶಕ್ತಿ ಬೇಕಾಗುತ್ತದೆ. ಈ ಶಕ್ತಿಯನ್ನು ಹುಡುಕಲು ಅವಳು ಪರದಾಡಬೇಕಾಗಿಲ್ಲ. ಯಾಕೆಂದರೆ ಆ ಎಲ್ಲಾ ವಿಧದ ಶಕ್ತಿಗಳು ಅವಳಲ್ಲಿಯೇ ಇವೆ. ಆದರೆ ಅವುಗಳನ್ನು ಅವಳು ಪ್ರಜ್ಞಾಪೂರ್ವಕವಾಗಿ ಸೃಜನಶೀಲತೆಯಿಂದಲೇ ಗುರುತಿಸಿಕೊಳ್ಳಬೇಕಾಗುತ್ತದೆ.

ಈ ಹಿನ್ನೆಲೆಯಲ್ಲಿಯೇ ಪರಿಶೀಲಿಸುತ್ತಾ ದಲಿತ/ ದಲಿತ ಮಹಿಳೆಯರ ಅರ್ಥವ್ಯಾಖ್ಯಾನಗಳನ್ನು ವಿಶ್ಲೇಷಣೆಗೊಳಪಡಿಸುತ್ತಾ, ಭಿನ್ನ ವೃತ್ತಿಗಳನ್ನು ಆಶ್ರಯಿಸಿದ ದಲಿತ ಮಹಿಳೆಯರ ಸ್ಥಿತಿಗತಿಗಳನ್ನು ಅವಲೋಕಿಸೋಣ.

೨.೫ ದಲಿತ ಪದದ ಅರ್ಥ ವಿವೇಚನೆ

'ದಲಿತ' ಎಂಬುವುದು ಅಕಾಡೆಮಿಕ್ ಪರಿಭಾಷೆ. ಇದು ಜಾತಿವಾಚಕ ಪದವಲ್ಲ. ಹಾಗೆಯೇ ವೃತ್ತಿ ವಾಚಕ ಪದವೂ ಅಲ್ಲ. 'ದಲಿತ' ಎಂಬುವುದನ್ನು ಮೊದಲಿಗೆ ಅಂಬೇಡ್ಕರವರು ಬಳಸಿದರು. ೧೯೬೭ರ ನವ್ಹೆಂಬರ್‌ನಲ್ಲಿ ಔರಂಗಾಬಾದಿನಲ್ಲಿ ನಡೆದ ಒಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದ ಸಾಹಿತಿಗಳು 'ದಲಿತ' ಎಂಬುವುದನ್ನು ಸಾಹಿತ್ಯದ ಜೊತೆಗೆ ಗುರುತಿಸಲು ಪ್ರಾರಂಭಿಸಿದರು. ಸಾಹಿತ್ಯದಲ್ಲಿ ಇದರ ಚರ್ಚೆ ಪ್ರಮುಖವಾಗಿತ್ತೆ ಹೊರತು ಮಾನವ ಶಾಸ್ತ್ರೀಯ ಹಿನ್ನೆಲೆಯಿಂದ ಇದನ್ನು ಗುರುತಿಸಲು ಪ್ರಯತ್ನಿಸಲಿಲ್ಲ.

'ದಲಿತ' ಎಂಬುವುದನ್ನು 'ಬಲಿತ' ಪದಕ್ಕೆ ವಿರುದ್ಧವಾಗಿ ರೂಪಿಸಲಾಗಿದೆ. 'ದಲಿತ' ದಮನಕ್ಕೆ ಒಳಗಾದವರು, ಶೋಷಣೆಗೆ ಒಳಗಾದವರೆಲ್ಲರೂ 'ದಲಿತರು' ಎಂದು ಕೆಲವರು ಹೇಳಿದರೆ ಅದನ್ನು ಪ್ರಜ್ಞಾವಂತ ದಲಿತ ಲೇಖಕರು ಒಪ್ಪಲಿಲ್ಲ. ಎಲ್ಲೆಲ್ಲಿ ದೌರ್ಜನ್ಯಕ್ಕೆ ಒಳಗಾದ ಶ್ರಮ ಜೀವಿಗಳಿದ್ದಾರೋ ಅವರೆಲ್ಲ

ದಲಿತರೆಂದರೆ ಅಸ್ಪೃಶ್ಯರಿಗೆ ಅನ್ಯಾಯವಾಗುತ್ತದೆಂದು ಅವರ ವಾದ. ಜಾತಿ ವ್ಯವಸ್ಥೆ ಒಪ್ಪಿಕೊಂಡವರನ್ನು ಜಾತಿಯಿಂದ ತುಳಿತಕ್ಕೆ ಒಳಗಾದವರನ್ನು ಒಂದೇ ವರ್ಗಕ್ಕೆ ಸೇರಿಸುವುದು ಸಮ್ಮತವಲ್ಲ. ಇದರಿಂದ ಅನ್ಯಾಯ ಮಾಡುವ ಮತ್ತು ಅನ್ಯಾಯಕ್ಕೆ ಬಲಿಯಾದವರನ್ನೆಲ್ಲ ಒಂದೇ ಸೂತ್ರಕ್ಕೆ ಒಳಪಡಿಸಿದಂತಾಗುತ್ತದೆಂಬ ವಾದಗಳು ತಲೆ ಎತ್ತಿದವು (ಸಂ. ಡಾ. ಅರವಿಂದಮಾಲಗತ್ತಿ, ೨೦೦೨, ಪು. ೫).

ದಲಿತ ಎಂದರೆ 'ದಳ', 'ಗುಂಪು', 'ಸೈನ್ಯ', 'ಶೋಷಿತ' ದಮನಕ್ಕೆ ಒಳಗಾದವರು ಎಂದು ಶಬ್ದಕೋಶಗಳಲ್ಲಿ ಅರ್ಥೈಸಲಾಗಿದೆ. ಮರಾಠಿ ದಲಿತ ಸಾಹಿತ್ಯದ ಪ್ರೇರಣೆಯಿಂದ ಇದು ಕನ್ನಡದಲ್ಲೂ ಹೆಚ್ಚು ಚರ್ಚೆಗೆ ಒಳಗಾಯಿತು. ೧೯೭೮ರ ಡಿಸೆಂಬರ್ ತಿಂಗಳಿನಲ್ಲಿ ಬೆಂಗಳೂರಿನಲ್ಲಿ ಸೇರಿದ ದಲಿತರ ಪ್ರಥಮ ಸಮಾವೇಶದಲ್ಲಿ ದಲಿತರೆಂದರೆ 'ಅಸ್ಪೃಶ್ಯರು' ಅಥವಾ 'ಬಹಿಷ್ಕೃತರು' ಎಂದು ಬಲವಾಗಿ ವಾದಿಸಲಾಯಿತು. ಒಟ್ಟಿನಲ್ಲಿ 'ದಲಿತ' ಪದ ಅಸ್ಪೃಶ್ಯರ ಅಭಿಮಾನದ ಪದವಾಗಿ ಜನಪ್ರಿಯವಾಗತೊಡಗಿತು. ಅದನ್ನು ಎಲ್ಲರೂ ಒಪ್ಪಿಕೊಂಡಿದ್ದರಿಂದ ಬಳಕೆಗೂ ಬಂದಿತು.

'ದಲಿತ' ಪದವನ್ನು ಕ್ಷೇತ್ರದಲ್ಲಿ ಪ್ರಯೋಗ ಮಾಡೋಣ ಎಂದು ತಿಳಿದು ಒಬ್ಬ ಹಳ್ಳಿಗಾಡಿನ ಮಾದಿಗ ಮಹಿಳೆಯನ್ನು ಕುರಿತು ನೀವು ದಲಿತರಾಗಿರುವುದರಿಂದ ನೀವು ದಲಿತ ಅನುಭವವನ್ನು ತಿಳಿಸಿ ಎಂದರೆ ಅವರಿಗೆ ಏನೂ ಅರ್ಥವಾಗಲಿಲ್ಲ. ಕಕ್ಕಬಿಕ್ಕಿಯಾಗಿ ಏನಿದು 'ದಲಿತ', ಬೈಗುಳ ಪದವೇ? ಎಂದು ಅನುಮಾನಿಸಲು ಪ್ರಾರಂಭಿಸಿದರು. ಈ ಕಾರಣದಿಂದ ದಲಿತ ಪದವನ್ನು ಶೋಷಿತ ಸಮುದಾಯಗಳನ್ನು ಗುರುತಿಸಲು ಬಳಸುವುದು ಎಷ್ಟು ಸೂಕ್ತ? ಅಕಾಡೆಮಿಕ್ ಕ್ಷೇತ್ರಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ತಮ್ಮ ಅನುಕೂಲತೆಯ ದೃಷ್ಟಿಯಿಂದ ಅಸ್ಪೃಶ್ಯ ಸಮುದಾಯಗಳನ್ನು 'ದಲಿತ' ಪದದಿಂದಲೇ ಗುರುತಿಸುತ್ತವೆ.

"ಅಸ್ಪೃಶ್ಯ ಸಮುದಾಯವನ್ನು ಗುರುತಿಸುವುದಕ್ಕಾಗಿ, ಕರೆಯುವುದಕ್ಕಾಗಿ ಈ ಮೊದಲಿದ್ದ ಆದಿಮ ಜನಾಂಗ, ಆದಿ ಕರ್ನಾಟಕ, ಅಂತ್ಯಜರು, ಪಂಚಮರು, ಚಾಂಡಾಳರು, ಹೊಲೆಯರು, ಮಾದಿಗರು, (ತೋಟಿಗರು, ತಳವಾರು, ನೀರಗಂಟಿ) ಅತಿಶೂದ್ರ, ದಸ್ಯು, ಹರಿಜನ ಮುಂತಾದ ಪದಗಳು ಅವರ ವೃತ್ತಿ ಹಾಗೂ ಇರುವಿಕೆಯನ್ನು ಸೂಚಿಸುವ ಪದಗಳಾಗಿದ್ದವು. ಹಾಗೂ ಸಾಮಾಜಿಕ ಜೀವನದಲ್ಲಿ ಅವಹೇಳನಕ್ಕೀಡು ಮಾಡುವಂಥಹವೂ ಆಗಿದ್ದವು. ಈ ಪದಗಳಿಂದಾಗುವ ಮಾನಸಿಕ ಹಿಂಸೆಯಿಂದ ಅಸ್ಪೃಶ್ಯರು ಬಿಡುಗಡೆ ಬಯಸುತ್ತಿದ್ದುದು ಸಹಜವೇ. ಈ ಕಾರಣದಿಂದಲೇ ಮಹಾತ್ಮಗಾಂಧಿಯವರು ಬಳಕೆಗೆ ತಂದಿದ್ದ 'ಹರಿಜನ' ಪದವೂ ಕೆಲವು ಕಾಲದ ನಂತರ ಗೌರವಾರ್ಹವೆನಿಸಲಿಲ್ಲ. ಅಸ್ಪೃಶ್ಯರು ಮಾತ್ರ ಹರಿಯ ಮಕ್ಕಳಾದರೆ ಉಳಿದವರು ಯಾರ ಮಕ್ಕಳು? ಎಂದು ದಲಿತೇತರರು ಪ್ರಶ್ನಿಸುವಾಗ ಅಸ್ಪೃಶ್ಯರಲ್ಲಿ ವಾಸ್ತವದ ಅರಿವು ಉಂಟಾಗಿ, ನಾವು ಮನುಷ್ಯರ ಮಕ್ಕಳಾದರೆ ಸಾಕು ಎಂಬ ನಿಲುವಿಗೆ ಬಂದರು. ಅಂದಿನಿಂದ ಹೊಲೆ ಮಾದಿಗರು ಎಂದು ನೇರವಾಗಿ ಹೇಳುವ ಹೊಸ ಅಲೆ ಪ್ರಾರಂಭವಾಯಿತು" (ಸಂ. ಡಾ. ಅರವಿಂದ ಮಾಲಗತ್ತಿ, ೨೦೦೪, ಪು. ೧೫).

ಈ ರೀತಿ ಆಯಾ ಜಾತಿಗಳ ಮೂಲಕವೇ ದಲಿತ ಎಂಬುವುದನ್ನು ಗುರುತಿಸಿಕೊಳ್ಳುವುದು ಹೆಚ್ಚು ಸೂಕ್ತ. 'ದಲಿತ' ಎಂಬುವುದನ್ನು ಬಳಸದೇ ಇದ್ದರೆ ಆಗುವುದೇ ಇಲ್ಲ ಎಂಬುವಷ್ಟರ ಮಟ್ಟಿಗೆ 'ದಲಿತ' ಪದ ಬಳಕೆಯಾಗಿ ಹೋಗಿದೆ. ಈ ಅಧ್ಯಯನದಲ್ಲಿ 'ಹೊಲೆಮಾದಿಗ' ಮಹಿಳೆಯನ್ನು 'ದಲಿತ ಮಹಿಳೆ' ಎಂದು ಕರೆಯುತ್ತೇನೆ.

ದಲಿತ ಎಂಬುವುದರ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಅಭಿಪ್ರಾಯಗಳನ್ನು ಹೀಗೆ ಹೇಳುತ್ತಾರೆ;

ಪ್ರೊ. ಎಸ್.ಎಸ್. ಹಿರೇಮಠ : ಇವರು ಜಾತ್ರೆಗಳ ಹಿನ್ನೆಲೆಯಲ್ಲಿ ದಲಿತ ಸಂಸ್ಕೃತಿಯ ಪರಂಪರೆಯನ್ನು ಅಧ್ಯಯನ ಮಾಡಿದ್ದಾರೆ. ಹೊಲೆಮಾದಿಗರು ಈ ದೇಶದ ಪ್ರಪ್ರಥಮ ಕೃಷಿಕರು, ಮಾತೃ ಆರಾಧಕರು ಮತ್ತು ಸಮತಾವಾದಿ ಸಮಾಜದ ಮೂಲಿಗರಾಗಿದ್ದಾರೆ. ದೇಶದ ಸಂಸ್ಕೃತಿಯಲ್ಲಿ ಆಳವಾದ ಪ್ರಭಾವ ಬೀರಿದ ತಾಂತ್ರಿಕ ಪಂಥದ ನಿರ್ಮಾತೃಗಳು ಎಂದು ಹೇಳುತ್ತಾರೆ.

ವೈದಿಕರು ದ್ರಾವಿಡರ ಪ್ರದೇಶಕ್ಕೆ ಪ್ರಥಮದರಲ್ಲಿ ಬಂದಾಗ ಕೃಷಿಕ ಮೂಲದ ಹೊಲೆಮಾದಿಗರಿಂದ ಸೋಲಿಸಲ್ಪಟ್ಟರು. ಸೋತ ವೈದಿಕರ ಹೆಂಗಸರನ್ನು ಗೆದ್ದ ಹೊಲಿಮಾದಿಗರು ವಶಪಡಿಸಿಕೊಂಡರು. ಇದರಿಂದಾಗಿ ಇಬ್ಬರಿಗೂ ಆಗಾಗ ಹೊಡೆದಾಟ ನಡೆಯುತ್ತಿತ್ತು. ನಂತರ ಪ್ರಬಲರಾದ ವೈದಿಕರು ಹೊಲೆಮಾದಿಗರನ್ನು ತಮ್ಮ ಪ್ರಥಮ ಶತ್ರುಗಳೆಂದು ಅತ್ಯಂತ ಕೀಳಾಗಿ ಅಸ್ಪೃಶ್ಯರಂತೆ, ಗುಲಾಮರಂತೆ ಕಂಡರು ಎಂಬುವುದಾಗಿ ಎಸ್.ಎಸ್. ಹಿರೇಮಠ ಅವರು ಜಾತ್ರೆಗಳ ಮೂಲಕ ಕನ್ನಡ ದಲಿತ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಾರೆ.

ಶ್ರೀ ದೇವಯ್ಯ ಹರವೆ : ದಲಿತ ಎಂದರೆ ಅಸ್ಪೃಶ್ಯ ಹಾಗೂ ಸಣ್ಣ ಪ್ರಮಾಣದಲ್ಲಿ ಅಸ್ಪೃಶ್ಯತೆಯ ಅನುಭವವಿಲ್ಲದಿದ್ದರೂ ಅತ್ಯಂತ ವೇದನೆಗೆ ಒಳಗಾದ ಚದುರಿ ಹೋಗಿರುವ ಜನಾಂಗದ ಪ್ರತಿನಿಧಿಗಳು, ಪ್ರಗತಿಪರ ದಲಿತ ಸಂಘಟನೆಯೊಂದಿಗೆ ತಮ್ಮನ್ನು ಗುರುತಿಸಿಕೊಂಡು ತಮ್ಮ ಸಾಹಿತ್ಯ ಮತ್ತು ಸಂಘಟನೆಗಳ ಮೂಲಕ ಅಸ್ಪೃಶ್ಯತೆಯನ್ನು, ಅಸಮಾನತೆಯನ್ನು ತೊಡೆದುಹಾಕಲು ಪ್ರಯತ್ನ ಪಡುವಂತವರೂ ಆಗಿರುತ್ತಾರೆ. ಅಂದರೆ ತಲ ತಲಮಾರಿನಿಂದ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ರಾಜಕೀಯವಾಗಿ ಹಿಂದುಳಿದ ಜನಾಂಗದವರು ಮಾತ್ರ ದಲಿತರು ಎಂದು ಸ್ಪಷ್ಟವಾಗಿ ತಿಳಿಯಬೇಕು ಎಂದು ಹೇಳುತ್ತಾರೆ.

ಡಾ. ಅರವಿಂದ ಮಾಲಗತ್ತಿ : ಶತ-ಶತಮಾನಗಳಿಂದ ಜನಸಮುದಾಯಗಳಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಮತ್ತು ಶೈಕ್ಷಣಿಕವಾಗಿ ಶೋಷಣೆಗೆ ಒಳಗಾದವರು ಒಟ್ಟು ಮನುಷ್ಯ ಸಮಾಜದೊಂದಿಗೆ ಬದುಕಲಾರದೆ ಊರ ಹೊರಗೆ ವಾಸಿಸಿ, ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆ ಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರು ದಲಿತರೆನಿಸಿಕೊಳ್ಳುತ್ತಾರೆ. ವ್ಯಕ್ತಿಗೆ ಅವನ ಸಮಾಜದ ಒಟ್ಟು ಬದುಕಿನ ಎಲ್ಲಾ ರಂಗದಲ್ಲಿಯೂ ಸಮಾನತೆಯು ಮುಖ್ಯವಾಗುತ್ತದೆ. ಈ ಸಮಾನತೆಯ ಬದುಕಿನಿಂದ ವ್ಯವಸ್ಥಿತವಾಗಿ ಸಮಾಜವು ಕೆಲವು ಜಾತಿ/ಸಮುದಾಯಗಳನ್ನು ದೂರ ಇಟ್ಟಿರುತ್ತದೆ. ಅವರೆಲ್ಲರೂ ದಲಿತರು ಎಂಬ ಅರ್ಥಕಲ್ಪನೆಯು ಮಾಲಗತ್ತಿಯವರಲ್ಲಿದೆ (ಸಂ. ಡಾ. ಅರವಿಂದಮಾಲಗತ್ತಿ, ೨೦೦೨, ಪು. ೩೦).

ಡಾ. ಮೊಗಳ್ಳಿಗಣೇಶ್ : "ಬಹು ಮುಖ್ಯವಾಗಿ ದಲಿತ ಎಂಬುವುದು ಅಲಕ್ಷಿತ ಸಂಸ್ಕೃತಿಗಳು ಆಧುನಿಕ ಯುಗದ ಪ್ರಭುತ್ವ ಧರ್ಮದ ಜೊತೆಗೆ ಮುಖಾಮುಖಿಯಾಗುವ ಪ್ರಕ್ರಿಯೆಯನ್ನು ನಿರೂಪಿಸುವ ಒಂದು ಸಾಂಸ್ಕೃತಿಕ ನಿರ್ವಚನದ ತಾತ್ವಿಕ ಸಂಕೇತ. ಸಾಂಸ್ಕೃತಿಕ ಅರಿವಿನ ಮೂಲಕವೇ ತನ್ನ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಬಯಸುವ ಆಕಾಂಕ್ಷೆಯನ್ನು ಸೂಚಿಸುವ ಪದವಿದು. 'ದಲಿತ' ಎಂದರೆ ಅತ್ಯಂತ ಅವಮಾನಿತ, ಶೋಷಿತ, ಅನಕ್ಷರಸ್ಥ ಬಡವರೂ, ನಿರ್ಗತಿಕರೂ, ತೀರಾ ಕೆಳಜಾತಿಯವರು ಎಂದು ಅನೇಕರು ಕರೆಯುತ್ತಿರುತ್ತಾರೆ. ಒಂದು ಹಂತಕ್ಕೆ ಮಾತ್ರ ಈ ರೀತಿ ಅರ್ಥ ಸರಿಯಿದ್ದರೂ 'ದಲಿತ' ಎಂಬ ಪದವನ್ನು

'ಹರಿಜನ', 'ಅಸ್ಪೃಶ್ಯ' ಹಾಗೂ ಕೆಳಜಾತಿಗಳು ಎಂಬ ಪದಗಳ ಪರ್ಯಾಯ ಶಬ್ದ ಎಂದು ಮಾತ್ರವೇ ಕರೆಯಬೇಕಾಗಿಲ್ಲ. 'ದಲಿತ' ಶಬ್ದ ಇವನ್ನು ಒಳಗೊಂಡಿದ್ದರೂ ಕೇವಲ ಆಯಾ ಕೆಳಜಾತಿಗಳ ಪರ್ಯಾಯವಾಗಿ ಮಾತ್ರ ಈ ಪದವನ್ನು ನೋಡುವ ಸೂತಕದ ಕಣ್ ಮನಗಳು ಇರಬೇಕಾಗಿಲ್ಲ. 'ದಲಿತರು' ಎಂಬ ಮಾತಿಗೆ ಈಗ ಆತ್ಮಾಭಿಮಾನವೂ, ವಿಶ್ವಾಸವೂ ಒಂದು ಸಾಂಸ್ಕೃತಿಕ ಗುರುತು ಇದೆ ಎಂಬುವುದನ್ನು ಸೂಕ್ಷ್ಮಜ್ಞರು ಬಲ್ಲವರಾಗಿದ್ದಾರೆ. ತಿರಸ್ಕೃತ ಮೌಲ್ಯಗಳನ್ನು ಪುನರ್‌ಸಂಘಟಿಸುವ ಶಕ್ತಿಯಾಗಿಯೂ ಒಂದು ಸಾಮುದಾಯಿಕ ಚಿನ್ಹೆಯಾಗಿಯೂ ದಲಿತ ಪದದ ಅರ್ಥವನ್ನು ವಿಸ್ತರಿಸಬಹುದು. ಎಲ್ಲಾ ತಿರಸ್ಕೃತ ಜಾತಿಗಳ ಬಿಡುಗಡೆಯನ್ನು ಸಂಘಟಿತತೆಯ ವಿಸ್ತರಣೆಯನ್ನು ಈ ಪದ ಒಳಗೊಳ್ಳಬಲ್ಲದು. ಕೇವಲ ಜಾತಿಗಳ ಅಳತೆಯಿಂದಲೇ ಇದನ್ನು ಅಳೆಯಬೇಕಾಗಿಲ್ಲ, ಮಾನವಶಾಸ್ತ್ರೀಯ ನೆಲೆಯಿಂದಲೂ, ಚರಿತ್ರೆ ಮತ್ತು ಜನಪದ ಪರಿಕಲ್ಪನೆಗಳಿಂದಲೂ ವಿಶ್ಲೇಷಿಸುತ್ತಾ ಇವತ್ತಿನ ದಲಿತರ ಸಂವೇದನೆಯನ್ನು ಬಿಡುಗಡೆಯ ಆಶಯವನ್ನು ಈ ಪದದಲ್ಲಿ ಧ್ವನಿಸಬಹುದು" (ಸಂ. ಡಾ. ಮೊಗಳ್ಳಿಗಣೇಶ್, ೧೯೯೯, ಪು. ೨೩).

ಜಾತಿಯಿಂದ ಹಿಂದುಳಿದವರೆಲ್ಲರೂ ಆರ್ಥಿಕವಾಗಿ ಅಷ್ಟೇ ಅಲ್ಲ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ತೀರ ಉಪೇಕ್ಷೆಗೆ ಒಳಗಾದವರು ನಿಜವಾದ ದಲಿತರು. ಇನ್ನಿತರ ಉಪಜಾತಿಗಳು ಮೀಸಲಾತಿಯನ್ನು ಬಯಸುವಾಗ ಸಮಾನ ಎಂದು ಭಾವಿಸಿದರೆ ಅಸ್ಪೃಶ್ಯತೆಯನ್ನು ಆಚರಿಸುವಾಗ ನಾವು ಮೇಲ್ಪಂಕ್ತಿ ಎಂಬಂತೆ ಪರಿಭಾವಿಸುತ್ತವೆ. ಹೀಗಾಗಿ ದಲಿತರ ಸಮಸ್ಯೆಯನ್ನು ನೋಡಿದಾಗ ಜಾತಿಯಿಂದ ಹಿಂದುಳಿದವರೇ ನಾನಾ ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆಂಬುವುದು ಹೆಚ್ಚು ಸ್ಪಷ್ಟವಾಗುತ್ತದೆ.

ಈ ದೇಶದಲ್ಲಿ ಆರ್ಥಿಕವಾಗಿ ಹಿಂದುಳಿದವರೆಲ್ಲರೂ ದಲಿತರು ಎಂದು ಅನೇಕರು ಹೇಳುತ್ತಿರುತ್ತಾರೆ. ಆದರೆ ಆರ್ಥಿಕತೆಯನ್ನು ಮಾತ್ರ ಇಟ್ಟುಕೊಂಡು ದಲಿತರನ್ನು ಗುರುತಿಸುವುದು ಅಷ್ಟು ಸೂಕ್ತವಾದ ಕ್ರಮವಲ್ಲ. ಆರ್ಥಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹೀಗೆ ಒಟ್ಟಾರೆ ಎಲ್ಲಾ ಸ್ಥಿತಿಗಳಿಂದಲೂ ಯಾರು ಕಡೆಗಣಿಸಲ್ಪಟ್ಟಿದ್ದಾರೆ ಅವರೇ ನಿಜವಾದ ದಲಿತರಾಗುತ್ತಾರೆ. ಬೇರೆ ಜಾತಿ, ಉಪಜಾತಿಗಳು ತಾವು 'ದಲಿತರು' ನಾವು ಆರ್ಥಿಕವಾಗಿ ಹಿಂದುಳಿದಿದ್ದೇವೆ ಎಂದು ಹೇಳಿಕೊಂಡು ಮೀಸಲಾತಿಯನ್ನು ಪಡೆದುಕೊಳ್ಳುವಾಗ ನಾವು ನೀವು ಸಮಾನರು ಎಂದು ಹೇಳಿಕೊಂಡರು. ನಿಜವಾದ ದಲಿತರು ಅನುಭವಿಸುವ ಅಸ್ಪೃಶ್ಯತೆಯನ್ನು ಅವರು ಅನುಭವಿಸುವುದಿಲ್ಲ. ಅಂತಹ ಸಂದರ್ಭ ಬಂದಾಗಲಂತೂ ಆ ಜಾತಿಗಳು ನಾವು ಮೇಲ್ಪಂಕ್ತಿ ಎಂಬಂತೆ ಭಾವಿಸುತ್ತವೆ. ಹಾಗೆಯೇ ಮೀಸಲಾತಿಯನ್ನು ಪಡೆದುಕೊಳ್ಳುವಾಗಿದ್ದಂತಹ ಸಮಾನತೆ ಇಲ್ಲಿ ಕಣ್ಮರೆಯಾಗುತ್ತದೆ. ಆದುದರಿಂದ ದಲಿತರ ಎಲ್ಲಾ ಸಮಸ್ಯೆಗಳನ್ನು ಅವಲೋಕಿಸಿದಾಗ ಜಾತಿಯಿಂದ ಅಸ್ಪೃಶ್ಯತೆಯನ್ನು ಅನುಭವಿಸಿ ಹಿಂದುಳಿದಿರುವವರೇ ಅನೇಕ ರೀತಿಯ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ ಎಂಬುವುದು ಸ್ಪಷ್ಟವಾಗಿ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಜಾತಿಯಿಂದ ಯಾರು ಹೆಚ್ಚು ಶೋಷಣೆಯನ್ನು ಅನುಭವಿಸುತ್ತಾರೋ ಅವರೇ ನಿಜವಾದ ದಲಿತರು ಎಂದು ತಿಳಿಯಬೇಕು. ಹೀಗೆ ಶೋಷಣೆಗೊಳಗಾದ ದಲಿತರಲ್ಲಿಯೂ ದಲಿತ ಮಹಿಳೆ, ದಲಿತ ಪುರುಷನಿಂದ, ಮೇಲ್ಜಾತಿ/ ಮೇಲ್ವರ್ಗದ ಪುರುಷ/ಮಹಿಳೆಯರಿಂದ, ವ್ಯವಸ್ಥೆಯಿಂದ ಅತ್ಯಂತ ಹೆಚ್ಚು ಶೋಷಣೆಗೆ ಒಳಗಾಗುತ್ತಿರುವ ವಿಷಯ ಎಲ್ಲರಿಗೂ ತಿಳಿದಿರುವಂತಹದ್ದು. ಎಲ್ಲಾ ಮಹಿಳೆಯರಿಗಿಂತಲೂ ದಲಿತ ಮಹಿಳೆ ಹೆಚ್ಚು ಶೋಷಣೆಗೆ ಒಳಗಾಗಿರುವುದನ್ನು ಏಕೆ ಯಾರು ಗುರುತಿಸಲಿಲ್ಲ? ಇವಳ ಕುರಿತು ವ್ಯವಸ್ಥೆ ನಡೆದುಕೊಂಡಿರುವ ರೀತಿ ಶೋಚನೀಯದಿಂದ ಕೂಡಿರುವಂತಹದ್ದು. ಇಂತಹ ಶೋಷಣೆಗಳನ್ನು ಗುರುತಿಸುವ ನಿಟ್ಟಿನಲ್ಲಿ ಅಧ್ಯಯನ ಸಾಗುವ ಜರೂರಿದೆ.

೨.೬ ದಲಿತ ಮಹಿಳೆ ಅರ್ಥವ್ಯಾಖ್ಯಾನ

ಹಿಂದೆ ತಿಳಿಸಿದ 'ದಲಿತ' ಅರ್ಥವ್ಯಾಖ್ಯಾನ ಸಾರಾಸಗಟಾಗಿ ದಲಿತ ಮಹಿಳೆಗೂ ಅನ್ವಯಿಸುತ್ತದೆ. ಕೆಲವು ಮೇಲ್ಜಾತಿ ಮೇಲ್ವರ್ಗದ ಮಹಿಳಾವಾದಿಗಳು ಮಹಿಳೆಯರೆಲ್ಲರೂ 'ಶೋಷಿತರು' ಆದರಿಂದ ಮಹಿಳೆಯರೆಲ್ಲರನ್ನು 'ದಲಿತರು' ಎಂದು ಕರೆಯಬಹುದು ಎಂದು ಹೇಳುವ ಮೂಲಕ ಎಲ್ಲಾ ಮಹಿಳೆಯರ ಸಮಸ್ಯೆಗಳನ್ನು ಏಕರೂಪೀಕರಿಸಿ ಮಾತನಾಡುತ್ತಿರುತ್ತಾರೆ, ಇದು ಸರಿಯಲ್ಲ. ಆಯಾ ಮಹಿಳೆಯರ ಸಮಸ್ಯೆಗಳನ್ನು ಆಯಾ ಜಾತಿ, ವರ್ಗ, ಲಿಂಗ, ಸಂದರ್ಭ, ಪ್ರದೇಶಗಳ ಹಿನ್ನೆಲೆಯಿಂದಲೇ ವಿಶ್ಲೇಷಿಸಬೇಕಾಗಿದೆ, ಆಗ ಮಾತ್ರ ನಿಜವಾದ ನ್ಯಾಯವನ್ನು ಒದಗಿಸಿದಂತಾಗುತ್ತದೆ. ಇಲ್ಲದಿದ್ದರೆ ಎಲ್ಲರನ್ನೂ ಒಟ್ಟಾಗಿ ಅಧ್ಯಯನ ಮಾಡುವುದರಿಂದ ತಳಸಮುದಾಯದ ಯಾವುದೋ ಅಂಚಿನ ಅಸ್ಪೃಶ್ಯ ಮಹಿಳೆಯ ಸಮಸ್ಯೆಗಳು, ನೋವುಗಳು, ನಲಿವುಗಳು ನಮಗೆ ಸಮಸ್ಯೆಯಾಗಿ ಕಾಣಿಸದೇ ಹೋಗಬಹುದು. "ಪ್ರಧಾನಧಾರೆಯಲ್ಲಿರುವ ಸ್ತ್ರೀವಾದಿಗಳು ಶಿಕ್ಷಣ, ಉದ್ಯೋಗ, ರಾಜಕೀಯ ಮೀಸಲಾತಿಯಂತಹ ಸಾಮಾಜಿಕ ಸಂಗತಿಗಳ ಕುರಿತು ಮಾತನಾಡಿದರೂ ಅವರಿಗರಿವಿಲ್ಲದಂತೆಯೇ ದಲಿತ ಮಹಿಳೆಯನ್ನು ಕೈಬಿಟ್ಟಿರುತ್ತಾರೆ. ಮೇಲ್ಜಾತಿಯ ಮಧ್ಯಮವರ್ಗದ ಸ್ತ್ರೀಯರನ್ನು ಕೇಂದ್ರವಾಗಿರಿಸಿಕೊಂಡು ಬೆಳಸಿದ ಚಿಂತನೆಗೆ ಸಾರ್ವತ್ರಿಕ ಸ್ವರೂಪವನ್ನು ಲೇಪಿಸುತ್ತಾರೆ. ಸಾಮಾಜಿಕವಾಗಿ ಅತ್ಯಂತ ಕೆಳಸ್ತರದಲ್ಲಿದ್ದು, ದಾರಿದ್ರ್ಯತೆಯಿಂದ ಬಳಲುತ್ತಿರುವ, ಅಕ್ಷರ ಲೋಕವನ್ನೇ ಅರಿಯದ ದಲಿತ ಮಹಿಳೆಯರ ಕಷ್ಟ-ನಷ್ಟಗಳನ್ನು ಮಾನಾಪಮಾನಗಳನ್ನು ಕನಿಷ್ಟಪಕ್ಷ ಕೇಳಿಸಿಕೊಳ್ಳುವ ಸೌಜನ್ಯವನ್ನು ತೋರುವುದಿಲ್ಲ. ಹೀಗಾಗಿ ಮೇಲ್ಜಾತಿಯ ಸ್ತ್ರೀವಾದಿಗಳಿಗೆ ದಲಿತ ಮಹಿಳೆಯ ಶೋಷಣೆಯ ಒಳ ಹರಿವುಗಳು ಕೈಗೆಟುಕದೇ ಹೋಗಿಬಿಡುತ್ತವೆ" (ಸಂ. ಶೈಲಜಾ ಹಿರೇಮಠ, ೨೦೦೩, ಪು. ೨೮).

ಪ್ರಧಾನ ಧಾರೆಯ ಸ್ತ್ರೀವಾದಿಗಳಿಗೆ ದಲಿತ ಮಹಿಳೆಯರ ಸಮಸ್ಯೆ, ಸಮಸ್ಯೆಯಾಗಿ ಕಾಣಿಸಲಿಲ್ಲ. ಕಾಣಿಸಿದರೂ 'ದಲಿತ' ಮಹಿಳೆಯರ ಸಮಸ್ಯೆಗಳನ್ನು ಕುರಿತು ಚರ್ಚಿಸುವ ಅಗತ್ಯವಿಲ್ಲವೆಂದು ತಿಳಿದು ಉದ್ದೇಶಪೂರ್ವಕವಾಗಿಯೇ ಕೈಬಿಡಲಾಗಿದೆ.

ಕೆಲವು ಸ್ತ್ರೀವಾದಿಗಳು ದಲಿತ ಮಹಿಳೆಯನ್ನು ಮಹಿಳೆಯರಿಂದ ಪ್ರತ್ಯೇಕಿಸಿ ಅಭ್ಯಾಸಿಸುವುದು ಸರಿಯಲ್ಲ. ಇದು ಮಹಿಳೆಯರನ್ನು ಮಹಿಳೆಯರ ಮೇಲೆ ಎತ್ತಿ ಕಟ್ಟುವ ಪುರುಷರಾಜಕಾರಣದ ಕುತಂತ್ರ. ಮಹಿಳೆಯರನ್ನು ಇಬ್ಭಾಗಿಸುವ ಪ್ರಕ್ರಿಯೆ ಎಂದು ಹೇಳುತ್ತಾರೆ. ಆದರೆ ಇದನ್ನು ನಾವು ಹೇಗೆ ನೋಡಬೇಕು? ಮೇಲ್ಜಾತಿಯ ಮೇಲ್ವರ್ಗದ ಮಹಿಳಾವಾದಿಗಳು ದಲಿತ ಮಹಿಳಾ ಸಮಸ್ಯೆಗಳಿಗೆ ಸ್ಪಂದಿಸುವ ರೀತಿ ಯಾವ ತೆರನಾದುದು ಎಂಬುವುದನ್ನು ಮೇಲಿನ ಹೇಳಿಕೆ ಸ್ಪಷ್ಟಪಡಿಸುತ್ತದೆ. ಆಯಾ ಮಹಿಳೆಯ ಸಮಸ್ಯೆಯನ್ನು ಅವರವರ ಪರಿಸರದ ಹಿನ್ನೆಲೆಯಲ್ಲಿಯೇ ಅಭ್ಯಾಸಿಸಿದರೆ ಹೆಚ್ಚು ಪರಿಣಾಮಕಾರಿ ಹಾಗೂ ಸ್ಪಷ್ಟ. ಇದನ್ನು ಈ ತರಹದ ಮಹಿಳಾವಾದಿಗಳು ಯಾಕೆ ಒಪ್ಪಿಕೊಳ್ಳುವುದಿಲ್ಲ? ಎಂಬುವುದನ್ನು ಯೋಚಿಸಿದರೆ ವ್ಯವಸ್ಥೆ ಎಷ್ಟು ನಿಶ್ಯಬ್ದವಾಗಿ ತನ್ನ ಜಾತಿಯ ಕೆಲಸವನ್ನು ನಿರ್ವಹಿಸುತ್ತಿದೆ ಎಂಬುದು ಅರ್ಥವಾಗುತ್ತದೆ. "ವರ್ತಮಾನದ ಸವಾಲುಗಳ ನಡುವೆ 'ದಲಿತ ಮಹಿಳೆ' ಎಂಬುವುದನ್ನು ಜಾತಿ ಮತ್ತು ಬೌದ್ಧಿಕ ಸಂಕೇತಗಳ ಮೂಲಕವೇ ಗಮನಿಸಬೇಕಾಗುತ್ತದೆ" (ಸಂ. ಮೊಗಳ್ಳಿಗಣೇಶ್, ೨೦೦೩, ಪು. ೧೩೨). ಆಗ ಮಾತ್ರ ದಲಿತ ಮಹಿಳೆಯರನ್ನು ಗುರುತಿಸಿ, ಅವಳಿಗೆ ನ್ಯಾಯ ಒದಗಿಸುವ ಕಡೆ ನಡೆಯಲು ದಾರಿ ಸಿಕ್ಕಂತಾಗುತ್ತದೆ.

ಶೋಷಣೆಗಳಲ್ಲೆಲ್ಲ ಮಹಿಳೆಯ ಮೇಲೆ ನಡೆದ ಶೋಷಣೆಯೇ ಆದಿಮ ಶೋಷಣೆ, ಗರತಿ/ವೇಶ್ಯೆ, ದೇವಿ/ದಾಸಿ, ಗೌರವಾನ್ವಿತ/ಅವಮಾನಿತ, ರಕ್ಷಣೆ/ಶೋಷಣೆ ಇತ್ಯಾದಿಗಳೆಲ್ಲವೂ ಒಂದೇ ನಾಣ್ಯದ ಎರಡು ಮುಖಗಳಾಗಿ ಕೆಲಸ ನಿರ್ವಹಿಸುತ್ತಿವೆ. ಇವು ದಲಿತ ಮಹಿಳಾ ಸ್ಥಿತಿಗತಿಗಳಲ್ಲಿ ಅಚ್ಚುಕಟ್ಟಾಗಿ ಮುದ್ರೆ ಒತ್ತಿಬಿಟ್ಟಿವೆ. "ಜಾತಿ ಮತ್ತು ಪುರುಷ ಎಂಬ ಎರಡು ಅಲುಗಿನ ಕತ್ತಿಯ ಜೊತೆ ನಿಲ್ಲುವ ದಲಿತ ಮಹಿಳೆಯು ಆಧುನಿಕೋತ್ತರ ಜಗತ್ತಿನ ಹೊರ ಆಕ್ರಮಣಗಳಿಗೂ ಒಳಗಾಗಬೇಕಾಗಿದೆ (ಸಂ. ಮೊಗಳ್ಳಿಗಣೇಶ್, ೨೦೦೩, ಪು. ೧೧೮).

ಈ ಹಿನ್ನೆಲೆಯಲ್ಲಿ ಜಾತಿಯಿಂದ, ಲಿಂಗದಿಂದ, ವರ್ಗದಿಂದ ಯಾವ ಮಹಿಳೆ ಶೋಷಣೆಗೆ ಒಳಗಾಗಿದ್ದಾಳೋ ಅಂತಹ ಮಹಿಳೆಯನ್ನು 'ದಲಿತ ಮಹಿಳೆ' ಎಂದು ಕರೆಯಬಹುದು.

* ಹೊಲೆಯ ಮಹಿಳೆ
* ಮಾದಿಗ ಮಹಿಳೆ
* ಜಾಡಮಾಲಿ ಮಹಿಳೆಯರ ಹಿನ್ನೆಲೆಯಲ್ಲಿ ಮುಂದೆ ಇದನ್ನು ಇನ್ನಷ್ಟು ವಿಸ್ತರಿಸಿಕೊಂಡು ಅಭ್ಯಸಿಸೋಣ

'ನನ್ನ ಹೆಸರು ಸಂಕ್ಲಮ್ಮ. ನಾವು ನಾಲ್ಕು ಜನ ಅಕ್ಕ-ತಂಗಿಯರು. ನಾವು ಮಾದ್ರು. ಮೊದಲು ಬರಿ ಗೋಳಿಸೊಪ್ಪು ತಿಂತಿದ್ವಿ. ಎಣ್ಣೆ ಉಪ್ಪು ಇಲ್ಲ. ಎಣ್ಣೆ ಇಲ್ಲದಿದ್ರೆ ಹೋಗ್ಲಿ ಸೊಪ್ಪಿಗೆ ಹಾಕಾಕ ಉಪ್ಪು ಕೂಡ ಇರ್‍ಲಿಲ್ಲ. ಯವ್ವ ಕೈಯತ್ತಿ ಸ್ವಲ್ಪ ಕೊಡ್ರಪ್ಪ ಅಂತ ತಾಯಿ ಹೋಗಿ ಮನಿ ಮನಿಗಿ ಕೇಳ್ತಾ ಇದ್ಲು. ಎಂಟುದಿವಸದ್ದು, ಹತ್ತು ದಿವಸದ್ದು ಹಲಸಿರೋದು ತೆಗೆದಿಟ್ಟಿದ್ರೆ, ಹಾಕ್ತಾ ಇದ್ರು. ಅದನ್ನೆಲ್ಲ ತಂದು ನಮ್ಮ ತಾಯಿ ನಮಗೆ ತಂದು ಕೊಡ್ತಾ ಇದ್ಲು. ಮನೀಲಿ ಮಕ್ಕಾಳಾಕ ಆಗ್ತಾ ಇರ್‍ಲಿಲ್ಲ. ಮನೆ ಚಿಕ್ಕದು. ಚಪ್ರದ್ಮನಿ ತಾಯಿ ಬರೋದ್ನೆ ಕಾಯಬೇಕು. ಅವಳು ಅಷ್ಟು ಗಂಗಾಳಾಗ ಹಾಕಿಕೊಟ್ರೆ ಅಷ್ಟೆ, ತಿನ್ನಬೇಕು. ಆಗ ಮೂರು ರೂಪಾಯಿ ಕೂಲಿ. ನಮ್ಮಮ್ಮಗೆ ಹೊಟ್ಟೆ ಹಸಿದರೆ ತಡಿಲಾಗದೆ ಹೊಟ್ಟಿ ಗಟ್ಟಿಗ ಕಟ್ಟಿ ಬಿಡ್ತಾ ಇದ್ರು. ಮೂರಾಳು-ನಾಲ್ಕಾಳೆಂದು ಒಬ್ಬೆ ದುಡಿತಿದ್ಲು. ಮೂರು ರೂಪಾಯಂಗೆ ೨೦ ಹೊರೆ ಕಬ್ಬು ಕಡಿತಿದ್ಲು ಅಷ್ಟು ಗಟ್ಟಿ. ಅಷ್ಟು ದುಡಿದರೂ ಕೂಲಿ ಎಂಟು ದಿನಕ ಒಂದು ಸಾರಿ ಕೊಡ್ತಾ ಇದ್ರು. ಅವ್ರು ಸತಾಯಿಸಿ ಸತಾಯಿಸಿ ಕೊಡ್ತಾ ಇದ್ರು. ಕೊಡ್ರಪ್ಪ ದಣಿ ಅಂತಂದ್ರೆ ಯಾಕ ಬ್ಯಾಂಕಾಗ ರೊಕ್ಕ ಕೊಟ್ಟಿಲ್ಲೇನು ಅಂಬೋರು. ಕೊಡ್ರಪ್ಪ ಮನ್ಯಾಗೆ ಚಿಕ್ಕ ಕೂಸುಗಳು ಇದಾವ ಅಂತಂದ್ರೆ, ತಡೆಪ್ಪ ಬ್ಯಾಂಕಗೋಲ್ಲ. ಈ ಪಂಡು ಆ ಪಂಡು ಬಂದಿಲ್ಲ ಅಂತಿದ್ರು. ಅವರು ಕೊಟ್ಟ ಮೇಲೆ ಜ್ವಾಳ ತಗೊಂಡು ಹಿಟ್ಟು ಬೀಸಿಕೊಂಡು ತರಕಾರಿ ತಗೊಂಡು ಗರ್ಭಿಣಿ ಹೆಣ್ಮಗಳು ಹೊಟ್ಟೆ ಬಂದಿದ್ರೆ ಈ ಕಡಿ ತೊಡಿ ಆ ಕಡಿ ತೊಡಿ ಬ್ಯಾಸಲ ಬ್ಯಾಸಲ ಹಂಗೆ ತೆರ್‍ಳ್ದು ಬರೋದು ತೊಡಿ. ಹೊಸಪ್ಯಾಟಿಯಿಂದ ಧರ್ಮದಗುಡ್ಡಗ ನಡೆದು ಹೋಗಬೇಕು. ಅಷ್ಟು ದೂರ ನಡೆತಿದ್ಲು. ನಡಕೊಂತ ಹೋಗ ಬೇಕು ನಡಕ್ಕೊಂತ ಬರಬೇಕು. ಎಂಟು, ಒಂಬತ್ತು, ಹತ್ತು ಟೈಂ ಹೇಳಂಗಿಲ್ಲ.

ನಮ್ಮ ದೊಡ್ಡವ್ವ ಬಸವಿ. ನಮ್ಮ ತಾಯಿ ಬಸವಿ. ಅವರಿಬ್ಬರೂ ಬಸವಿಗಳು. ಅವರೂ ಅಷ್ಟೇ ಚಿಕ್ಕ ವಯಸ್ಸಿಗೆ ತಂದೆ-ತಾಯಿಯನ್ನು ಕಳ್ಕೊಂಡು ಬಿಟ್ರು. ಆಮೇಲೆ ನಮ್ಮ ಜೀವನ ಹಂಗೆ ಅಂದು ದೊಡ್ಡಮ್ಮ ಮುಸಲ್ಮಾನ್ರನ್ನು ಮಾಡಿಕೊಂಡ್ಲು. ನಮ್ಮ ಅಮ್ಮ ಒಬ್ಬರ ಹತ್ತಿರ ಇದ್ಲು. ಪಸ್ಟ್ ಪಸ್ಟ್ ನಮ್ಮ ಅಮ್ಮಗ ನಾನೊಬ್ಬಳೇ ಆಗಿದ್ದು. ಆದ್ರೆ ನಮ್ಮ ಅಪ್ಪ, ಅಮ್ಮನನ್ನು ಸರಿಯಾಗಿ ನೋಡಿಕೊಳ್ಳಾರ್‍ದೆ ಇದ್ದಿದ್ದಕ್ಕೆ ನಮ್ಮಮ್ಮ, ಬ್ಯಾಡಪ್ಪ ನೀನು ಸರಿಯಾಗಿ ನೋಡಂಗಿಲ್ಲ ನನ್ನ ಮಗಳೊಬ್ಬಳ್ನೆ ಇಟ್ಟುಕೊಂಡು ದುಡುಕ್ಕಂತಿಂತೀನಿ. ತಾಯಿ ಇದಾಳ ಅಂತ ನಮ್ಮ ಅಮ್ಮ ಅಂದಳಂತೆ. ಆಮೇಲೆ ಅವನು ಬಿಟ್ಟು ಬಿಟ್ಟ. ನಮ್ಮ ಅಮ್ಮನು ನೋಡಲಾರದೆ, ಅಮ್ಮ ಹೊಲಕ್ಕೆ ಕಳೆಕೀಳೋಕೋಗೋವಾಗ ಒಬ್ಬಾತ ಕುಲಸ್ತರೇ ಕಳೆ ಕೀಳೋಕ ಬರ್‍ತಾಳ ಅಂತ ಕಟ್ಟಿಕೆಂಡಿದ್ದ. ಬಾಳ ಚೆನ್ನಾಗಿದ್ದ. ಅಂದ್ರೆ ಬಡವ. ಆಯಪ್ಪಗ ಏಳು ಮಂದಿ ಹುಟ್ಟೀವಿ. ಏಳು ಜನ ಹುಟ್ಟಿದ ಮೇಲೆ ನಮ್ಮ

ಅಮ್ಮ 'ಏನಪ್ಪ ನೀನು ನಮ್ಮ ಜೊತೆನೇ ಇಷ್ಟು ದಿನ ಇದ್ದರೆ ನಿನ್ನ ಮನೆತನ ಆಗೋದೆಂಗೆ, ನಿನ್ನ ಮನೆಗೆ ನಾನು ಮೊದಲಿಗಿ ಮದುವೆ ಮಾಡ್ತೀನಿ' ಅಂತ ನಮ್ಮ ಅಪ್ಪಗ ನಮ್ಮ ಅಮ್ಮ ಮೊದಲಿಗಿ ಮಾಡಿ ಮದುವೆ ಮಾಡಿದ್ನು. ಆತ 'ಇಷ್ಟೆಲ್ಲಾ ನಿನ್ನ ಬಾಯಾಗ ಬಂದಾತಂದ್ರ ನೀನೇ ಮಾಡು ನನ್ನ ಸಂಬಳ ದುಡ್ನು ಕೊಡ್ತೀನಿ ಮಾಡು ಅಂತಂದ'. ಅವರ ಅಣ್ಣ ತಮ್ಮರು, ನಮ್ಮ ಅಮ್ಮ ಅಣ್ಣ ತಮ್ಮರು ಎಲ್ಲಾ ಕಲ್ತುಕೊಂಡು ನಮ್ಮ ಅಮ್ಮ ಮಾಡ್ಯಾಕ್ಕ ಅಂದ್ನು. ಮಾಡ್ಯಾಕ್ಕಂಡ. ನಮ್ಮಪ್ಪ ನಮ್ಮ ಮನಿಗ ಬಂದ್ರ ಆವಾಗಲಿಂದ ನಮ್ಮಮ್ಮನ ಮೇಲೆ ನಮ್ಮ ಅಪ್ಪನ ಹೆಂಡತಿಗೆ ಸಿಟ್ಟು. ನೀನು ಅಲ್ಲಿ ಹೋಗಬಾರ್ದು. ಮಕ್ಕಳಿದ್ದಾರ ಚಿಕ್ಕವರು ಅಂತಿದ್ನು. ಮದುವೆ ಎಲ್ಲಾ ಮಾಡಿದ್ನು, ನೀನು ಅಂಗ ಎಂದರೆ ಎಂಗ ನಾನು ಹೋಗ್ತೀನಿ, ಮಕ್ಕಳ ಮುಖ ನೋಡ್ತೀನಿ ಅಂತ ನಮ್ಮಪ್ಪ ಅಂತಿದ್ದ. ಆಕೆ ಬಾಳ ಬಾಳ ರಮಾನಿ ಮಾಡಿದ್ನು, ದಿನ-ದಿನ ಬಂದು ನಮ್ಮನಿಗೆ ಬಡಿಯೋದು, ನಮಗೆ ಬಡಿಯೋದು, ನಮ್ಮನ್ನು ಕರೆಕೊಳ್ಳದೇ ಇರೋದು, ನಮ್ಮ ಜೊತೆ ನಮ್ಮ ಅಪ್ಪ ಮಾತನಾಡಿಸದಂಗೆ ಮಾಡೋದು ಎಲ್ಲಾ ಮಾಡಿ ಲಾಸ್ಟಗೆ ಅಪ್ಪನಿಗೇ ಪೋಲಿಸ್ ಸ್ಟೇಷನ್‌ಗೆ ಹಾಕಿಸಿದ್ನು. ಅಲ್ಲಿ ಅವರು ಹೆಂಡ್ತಿಬೇಕಾ ಸೂಳೆ ಬೇಕಾ ಅಂತ ಕೇಳಿದ್ರು. ನನಗೆ ಹೆಂಡತಿ ಬೇಕು ಅಂದ. ಆಮೇಲೆ ನಮ್ಮ ಅಮ್ಮ ಆ ಕೊಬ್ಬಿನ ಗದ್ಯಾಗ, ಈ ತಗ್ಗಿನಾಗ, ಆ ಗುಡ್ಡದ ಅಂಚಿನಾಗ ಅಲ್ಲಿ ಇಲ್ಲಿ ಉಪವಾಸ ವನವಾಸ ತಿರುಗ್ತಾ ಇದ್ದಾಗ, ನಮ್ಮಪ್ಪ ಚಿಕ್ಕಮಕ್ಕಳು ಅಂತ ಬಂದಕಾಂತಾ ಹೋಗ್ಕಂತ ಇದ್ದ. ನಮ್ಮ ಅಮ್ಮ ಒಂದೇ ಒಂದು ತಿಂಗಳ ಕೂಸು ಕಟ್ಟಿಕೊಂಡು ಅಪ್ಪಗ ಬುತ್ತಿನ ಹೊಸಪೇಟೆ ಹೋಟ್ಲಾಗ ಇದ್ರ ಹೋಟ್ಲಾಗ ತಂದು ಕೊಡಬೇಕು. ಕಬ್ಬಿನ ಗದ್ಯಾಗ ಇದ್ರೆ ಕಬ್ಬಿನ ಗದ್ಯಾಗ ತಂದು ಕೊಡಬೇಕು. ಎಲ್ಲೇಲ್ಲೂ ತಗಂಡೋಗಿ ಕೊಟ್ಟು ಮನೆಗೆ ಬರ್ತಾ ಇದ್ನು. ಬರತ್ತಿದ್ರ ಬರತ್ತಿದ್ರ ಲಾಸ್ಟ್‌ಗೆ ಸಾಕು ಎಷ್ಟು ಕಷ್ಟ ಪಟ್ರೂ ನನ್ನ ಮಕ್ಕ ಅದೃಷ್ಟ ನನ್ನ ಅದೃಷ್ಟ ಇಷ್ಟೇ ಆಯ್ತು, ಬಂಗಾರ ನೋಡ್ಲಿಲ್ಲ. ಏನೂ ನೋಡ್ಲಿಲ್ಲ. ಎಲ್ಲಾ ನಾನು ಪರದೇಶಿ ಅನಾಥೆಯಾದೆ ಅಂತಿದ್ನು. ಆಗ ನನಗೆ ಒಂಬತ್ತು ವರ್ಷ ಆಗಿತ್ತು. ಒಂಬತ್ತು ವರ್ಷದಲ್ಲಿ ಮದುವೆ ಮಾಡಿಕೊಟ್ಟ ಆದ ಮೇಲೆ ಎರಡು ವರ್ಷದ ಮೇಲೆ ನನ್ನ ಗಂಡನ ಮನಿಗಿ ಹೋಗೀನಿ. ಕೆಲಸಕ್ಕೆ ಹೋತಿದ್ದೆ ಬರ್ತಿದ್ದೆ. ಹೋಗತಟ್ಟಗೆ ಬೆಳಿಗ್ಗೆ ಎದ್ದು ಬಟ್ಟೆ ತೊಳಿಬೇಕು ಆದ ತಕ್ಷಣಾನೇ ಕೆಲಸಕ್ಕೆ ಹೋಗಬೇಕು. ತಲೆ ಬಾಚಿಕೊಂಡ್ರೇನು, ಕುಂಕುಮ ಇಟ್ಟುಕಂಡ್ರೇನು, ನನ್ನ ಗಂಡ ಸಸಿ ಹೋರಾಕ, ಕಣವಿ ಕಡಿಯಾಕ ಅವೆಲ್ಲಾ ಹೋಗ್ತಿದ್ದ ಆವನು ಗಂಡು ಮಕ್ಕ ಕೆಲಸ ಮಾಡ್ತಿದ್ದ. ನಾವು ಹೆಣ್ಮಕ್ಕ ಕೆಲ್ಸ ಮಾಡ್ತಿದ್ವಿ. ನಾವು ಒಂದು ದಿಸ್ಕ ಎಂಬತ್ತು ಎಪ್ಪತ್ತು ದುಡಿತಿದ್ವಿ ದುಡ್ನು. ಮತ್ತೆ ಭತ್ತಗೆ ಹತ್ತು ಐದು ಕೊಡುತ್ತಿದ್ದರು ದಿವಸ. ಇಷ್ಟು ದುಡ್ನು ದುಡಿದರೆ ನಾವು ಒಂದು ವಾರ್ಕ ಏನಿಲ್ಲ ಅಂದ್ರೆ ಗಂಡ ಹೆಂಡತಿ ಒಂದು ಸಾವಿರ ಒಂದೂವರೆಸಾವಿರ ದುಡಿತಿದ್ವಿ. ಆತರ ದುಡಿದರೂ ಕೂಡ ನಾವು ಏನೂ ಕಾಣ್ಲಿಲ್ಲ. ಸುಮ್ನೆ ಹೊಟ್ಟೆ ಬಟ್ಟೆ ಜೀವನ ಅಷ್ಟು. ಮಕ್ಕೆಲ್ಲ ಸಣ್ಣ ಸಣ್ಣವ್ರು. ಐದು ಜನ ಮಕ್ಳು. ಹತ್ತು ವರ್ಷ ಕೂಡ ಆಗಿಲ್ಲ. ನಮ್ಮ ಮದುವೆಯಾಗಿ ಜಲ್ದಿ ಜಲ್ದಿ ಮಕ್ಳು ಆಗ್ಬಿಟ್ಟು.

ಅಣ್ಣ, ತಮ್ಮಗಳು ಒಂದೇ ಮನೇಲಿ ಇದ್ವಿ. ಅಣ್ಣ, ತಮ್ಮರ ಜಗಳದಾಗ ಗಂಡಗ ಪೆಟ್ಟಾತು. ಯಾವ ಯಾವ ಅಂಗಡಿನಾಗೊ ಎಲ್ಲೆಲ್ಲಿ ಏನೇನೂ ಮುಲಾಮು ಎಲ್ಲಾ ತಂದು ಹಚ್ಚಿದ್ವಿ ಏನೂ ಆಗಿಲ್ಲ ಹಳೇನೋವ್ಲಿಗಿಟ್ಕಂತು. ತಾನು ಅಲ್ಲಿ ಇಲ್ಲಿ ಬಾಳ ಓಡಾಡ್ತಾ ಇದ್ದ. ಒಕ್ಕಲ ಮನುಷ್ಯ ಮೇಸ್ತ್ರೀತನ ಎಲ್ಲಾ ಮಾಡ್ತಾ ಇದ್ದ. ಅಲ್ಲಿ ಇಲ್ಲಿ ಹೊಡಾಡ್ತ ಏನಾಯ್ತೋ ಏನೋ ಬಿದ್ದಿದ್ದು ಒಂದು ನೆವ. ಬಿದ್ದಾಗಲಿಂದ ಒಂದು ಮೂರು ತಿಂಗಳು ತೋರಿಸಿಕೊಂಡಾನ ಅಷ್ಟೆ, ಜೇಸು ಮಾತಾಡಿಕೊಂಡಾ. ಎಂಟೇ ದಿನದಾಗೆ ತೀರಿಕೆಂಬಿಟ್ಟ. ನಾನು ಏನು ಮಾಡಿಬಿಟ್ಟೆ, ಒಂದು ತಿಂಗಳ ಸುಮ್ನೆ ಊಟ ತಿನವಲ್ಲೆ, ಏನು ತಿನವಲ್ಲೆ, ಇಲ್ಲೆ ಬರ್ತಾನೇನೇ ಬಿಡು, ನನ್ನ ಜೊತೆ ಮಾತಾಡ್ತಾನೇನು ಬುಡು, ಇಲ್ಲೇ ಹೋಗ್ತಾನೇನೂ ಬುಡು ಅಂತ ಐಲು ಆದಂಗೆ ಆಗಿದ್ದೆ ನಾನು. ಐಲು ಬಂದಂಗೆ ನೀನು ಇಂಗಾದರೆ ಮಕ್ಕಳನ್ನು ಮರೆತುಬಿಟ್ಟೀಯಾ ಸಂಕ್ಲಮ್ಮ ಅಂತ ಎಲ್ಲರೂ ಹೇಳಿದ್ರು. ಜೀವನಕ್ಕೆ ಏನೂ ಇಲ್ಲ. ಕಣಕ್ಕ ಹೋಗ್ಬೇಕು. ಕಾಳ್ ತರಬೇಕು, ತಂದು ಮಾಡ್ಕೊಂಡು ತಿನ್ನಬೇಕು. ಗಂಡ ತೀರಿ ಹೋದ ಮೇಲೆನೂ ಅಲ್ಲಿ ಮನಿ ಇತ್ತು, ಪಾತ್ರೆ ಸಾಮಾನು ಇತ್ತು, ಹೆಚ್ಚಿನದೇನು ಇಲ್ಲ. ಮಾಡ್ಕಂತಿನ್ನಾಕ ಗಂಗಾಳ ಚೆಂಬು, ಒಂದು ಮಲಗಾಕ

ಮನಿ. ಇವರೆಡು ಬಿಟ್ಟು ಬೇರೆ ಏನು ಜಾಸ್ತಿ ಏನು ಇರ್ಲಿಲ್ಲಿ. ಹೊಲ ಇಲ್ಲ, ಮನೆ ಇಲ್ಲ ಇಲ್ಲಿ ಯಾಕೆ ಇರಬೇಕು. ಅಂತ ಅಲ್ಲಿ ಹೋದರೆ 'ಏ ಕಂತ್ರಿ ರಂಡೆ, ತುಡುಗರಂಡೆ' ಅಂಗೆಲ್ಲಾ ಅಂದು ಬಿಟ್ಟ ಮೈದ್ನ. ಈ ಮೈದ್ನ ಅಂಬೋನ ಕೂಡ ಮಾಡಿಕೊಂಡಿದ್ದ ಹೆಂಡ್ತಿನೇ ಮೂತಿ ಮೂತಿಗೆ ಹೊಡಿತಾನ. ಇನ್ನು ನನಗೇನು ಬುಡುತಾನ ಈತ. ನನ್ನ ಜೀವನ ಇರ್‍ಬಾರ್‍ದು ಅಂದುಕಂಡೆ . ಸಣ್ಣ ಸಣ್ಣ ಮಕ್ಳು ಅವರಿಗೆ ಹೇಳಿದ್ರ ಏನು ಬರತೈತಿ. ಅವರು ಬಗೆಪ್ಪ ಅಂದ್ರ ಬರ್‍ಲಿಲ್ಲ. ನಾನು ಎಂಟು ದಿನ ಅಮ್ಮ ಮನ್ಯಾಗ ಹಬ್ಬ ಮಾಡ್ತೀನಿ ಅದ್ಯಂತ ಬಂದೆ. ಬಂದ ಮೇಲೆ ಅಕ್ಕಪಕ್ಕದಾಗ ಅಲ್ಲ 'ನಿನ್ಗ ಒಂದು ಕೂಸು ಎರಡು ಕೂಸು ಅಲ್ಲ ಐದು ಕೂಸು ಎಷ್ಟು ಚೆನ್ನಾಗಿದಾರ ಅವ್ರು ಜ್ಯೋತೆಮ್ಮ, ನೀನು ಇಲ್ಲೇ ದುಡುಕಂಡು ಇದ್ದುಬುಡು, ಯಾರಿದ್ದು ಊರಾಗ ಹೆಸರು ಹೇಳೋದೈತಿ' ಅಂತ ಮಂದಿ ಅಂದ್ರು. ಸರಿ ಆಯ್ತು ಬುಡು ಅಷ್ಟೆ ಅಂತ ಇದ್ದು ಒಂದು ವರ್ಷ ಬೇಲ್‌ದಾರಿ ಕೆಲಸಕ್ಕೂ ಹೋದೆ. ಕೆಲಸಕ್ಕೋಗಿ ಎಷ್ಟು ದುಡಿದ್ರೂ ಇಷ್ಟೆ ಬುಡಪ್ಪ ಅಂತ ತರಕಾರಿ ಮಾರೋಕೋದೆ. ತರಕಾರಿ ಮಾರೋಕೋಗಿ ಇದು ಬ್ಯಾಡಮ್ಮ ಅದು ಎದುರಾಗಕ ನಿಂತು ಬಿಡ್ತು. ಮತ್ತಾ ಮಾರಬೇಕು ಅಂತ ಅನಸ್ತು. ಮತ್ತ ಇರ್‍ಲಿ ಬುಡು ಹೋಗ್ಲಿ ಅತ್ತಾಗ ಬೇರೆ ಕಷ್ಟಪಟ್ರ ಆತು ಅಂತ ಬಿಟ್ಕೆ. ಅಂದು ಬಿಟ್ಟು ಮತ್ತೆ ರೈತರ ಕೆಲಸಕ್ಕೆ ಹೋದೆ. ಆದ್ರೆ ಅಲ್ಲಿನೂ ಮೇಸ್ತ್ರಿಗಳು ರೊಕ್ಕ ತಿನ್ನಾಕ ಹತ್ತಿಬುಟ್ರು. ನನಗೆ ಯಾವುದೂ ನಡೀ ಒಲ್ಲದು ಹಿಂದಕ್ಕಿಲ್ಲ ಮುಂದಕ್ಕಿಲ್ಲ. ಏನೂ ಇಂಗಿ ಇಂಗಿ ಡಾಕ್ಟರು ನನಗ ಹುಷಾರಿಲ್ಲ ಕೆಲಸ ಮಾಡ ಬೇಡಮ್ಮ ಒಜ್ಜೆ ಎತ್ತ್ರದೆ ಕೈ ಕೆಲಸ ಮಾಡು ಅಂತ ಅಂದ್ರು. ಮೊದಲು ಉಂಬೋಕೆ ನಮ್ಮ ಮನ್ಯಾಗ ಅನ್ನಾ ಇರ್‍ಲಿಲ್ಲ. ದುಡುಕಂಡು ತಿನ್ನಬೇಕು. ಒಳ್ಳೆರಾಗಿ ಜನರತ್ರ ಒಳ್ಳೆ ಮನುಷ್ಯರಾಗಿ ಒಳ್ಳೆರತಾಗ ನಾವು ಇರಬೇಕು. ಅಂತ ದುಡಿಕಂತಿದ್ರೂ ಕೂಡ ಇಲ್ಲಿ ಈ ಹುಡ್ಗರನ್ನ ಹಾಕೆಂಡು ಕೆಟ್ಟ ಕೆಲಸ ಮಾಡೋಕೋಗ್ನ ಈ ಹುಡುಗರನ್ನಾ ಯಾರು ಮದುವೆ ಆಗ್ತಾರ ಅನ್ನೊ ಯೋಚ್ನೆ. ಇನ್ನೂ ಸಣ್ಣವು ಅದಾವ.

ನಾವು ಹರಿಜನ ನಾನು ಕ್ರಿಶ್ಚಿಯನ್ನಿಗೆ ಕನ್‌ವರ್ಟ್ ಆಗಿ ಐದು-ಆರು ವರ್ಷ ಆಗೈತಿ. ಯಾರಾದರೂ ಆಗ್ಲಿ ಪ್ರೀತಿಯಿಂದ ವಿಶ್ವಾಸದಿಂದ ಖುಷಿಯಿಂದ ಮಾತಾಡಿಕೊಂಡಿರುವ ವಿಶ್ವಾಸ ಇಲ್ಲಿ ಜಾಸ್ತಿ ಐತಲ್ಲಾ ಅದಕ್ಕೋಸರಾಗಿ ಇದನ್ನು (ಏಸು) ಬಿಟ್ಟು ಇನ್ನೂ ಹೆಚ್ಚಿನ ಆಸೆ ಏನೈತಿ. ಮಕ್ಳು ಎಲ್ಲರೂ ಚಿಕ್ಕವರೇ. ಮಗ ಎಸ್.ಎಸ್.ಎಲ್.ಸಿ. ಓದ್ತಿದಾನೆ. ಎರಡನೆಯವಳು ಕಳೇ ಹರೇಕಾ, ಮುಸುರೆ ತಿಕ್ಕಾಕ ಹೋಗ್ತಾಳೆ. ಅವಳಿಗೊಂಬತ್ತು ವರ್ಷ ಇರ್ತಾದೇನೋ ಅವಳನ್ನು ಗಂಡನ ಮನೆಯಲ್ಲಿ ಅವರ ಹತ್ರಾನೇ ಬಿಟ್ಟು ಬಂದೀನಿ, ಒಬ್ಬ ಹುಡುಗನೂ ಅಲ್ಲೆ ಅವ್ನೆ. ಅವ್ರೇ ನೋಡ್ಕಂತಾರೆ ಕರಯೋಕೆ ಆಗಂಗಿಲ್ಲ. ಕರೆದರೂ ಅವರು ಕಳಸಲ್ಲ. ದೊಡ್ಡ ಮಗ ಒಟ್ಟಿಗೆ ಇರೋಣ ಅಂತಾನೇ ಆದರ ಆಗಬೇಕಲ್ಲಮ್ಮ.

ಜೀವ್ನಕ ಏನೇನೋ ಬದ್ಕು ಮಾಡೀನಿ. ಮೊದ್ಲೆಲ್ಲ ಮೈನಿಂಗ್ ಕೆಲಸಕ್ಕಾ ಹೋಗತ್ತಿದ್ವೀನಿ. ಬಿಂಚು ಹಾಕೋರೆ ಬ್ಯಾರೆ, ಪೌಡ್ರು ತುಂಬೋರೆ ಬ್ಯಾರೆ, ಪೌಡ್ರು ತುಂಬಾಕ ಹಿಂದು ಮುಂದು ನೋಡ್ತಾರಾ. ಯಾಕಂದ್ರಾ ಮೂಗಿನಾಗ ಬರ್‍ತಾದಲ್ಲಾ, ಮೂಗಿಗೊಂದು ಬಟ್ಟೆಕಟ್ಟಿಕೊಳ್ಳೋದು, ಲುಂಗಿಕಟ್ಟಿ ಕೊಳ್ಳೋದು, ಪ್ಯಾಂಟು ಉಟ್ಟುಕೊಳ್ಳೋದು, ಮಕ ಎಲ್ಲಾ ಮುಚ್ಚಿಕೆಂಬಿಡೋದು, ಮುಚ್ಚಿಕೊಂಡು ದಬಾ ದಬಾ ಪೌಡ್ರು ತುಂಬೋಕೋಗೋದು. ಪೌಡ್ರು ಬ್ಯಾರೆ, ಸಣ್ಣ ಬಿಂಚು ಬ್ಯಾರೆ, ಆವ್ಯಾಲೆ ದೊಡ್ಡ ಬಿಂಚು ಬ್ಯಾರೆ, ಕಲ್ಲು ತುಂಬೋರು ಬ್ಯಾರೆ. ಅಯ್ಯಯ್ಯಪ್ಪೋ ಹೇಳ್ಬಾರ್‍ದು, ಅದೊಂದು ಸಾರಿ ಹೊರಗ ಬಂದು ಬಿಟ್ರ ಗಾಟ ಅಂಗೇ.... ತುಂಬಾ ಗಾಟ. ಕ್ಯಮ್ಮಾಕ ಕೂಡ ಉಸುರು ಬರೊಲ್ಲದು. ಅಷ್ಟು ಗಾಟ. ಅದನ್ನಾ ಅಯ್ಯಪ್ಪ ಎಂಗ ಮಾಡಬೇಕಪ್ಪ ಈ ಕೆಲಸ ಅಂದ್ಕಂತಿದ್ದೆ. ಅದನ್ನೆಲ್ಲಾ ಕೆಮ್ಮಿ ಕೆಮ್ಮಿ ಕ್ಯಾಕರಸಿ ಕೆಳಕೆಲ್ಲಾ ಉಗ್ಗಿ ಬಾಯಾಗಿರೋ ಅಷ್ಟೆಲ್ಲಾ ಉಗ್ಗಿ ಆಮೇಲೆ ಮಕ ತಳಕಂಡು ಯರ್‍ಡು ಗ್ಲಾಸು ನೀರು ಕುಡ್ದು ಆವ್ಯಾಲೆ ಅದರಾಕ ಹೋಗೋದು. ಮತ್ತೆ ಹೋಗೋದು ಮತ್ತೆ ಒಂದು ದಮ್ ದಬಾ ದಬಾ ದಬಾ ಆದಾಗ ಹಾಕಿ ಬುಡಬೇಕು ಪೌಡ್ರನ್ನು, ಕಲ್ಲನ್ನು. ಮತ್ತೆ ಮತ್ತೆ ಬರೋದು ಮುಖ ತಳಕಳ್ಳೋದು ಕಣ್ಣು ಉರಿ, ಮೂಗು ಉರಿ, ಗಂಟಲು ಉರಿ. ಮತ್ತೆ ಬೆಳಕ ಹರಿದರೆ ಮತ್ತೆ ಊಟ ತಿನ್ನಾಕ ಕೂಡ ಆಗಂಗಿಲ್ಲ ಅಷ್ಟೊಂದು ಗಾಟ ನೋಡು ಅದರಾಗ. ನಾನು ಹೋಗಿಲ್ಲಂದ್ರೆ ಕಷ್ಟ ಇಲ್ಲದ್ದು ಯಾವುದು ಬರ್‍ತಾದ ಅನಿಸ್ತಾದ.

ಅಲ್ಲಿ ಅಂತೂ ಲೆಕ್ಕಕ್ಕಿಲ್ಲ. ನೋಡಮ್ಮ ಅದಕ ಆಳಂತೂ ಲೆಕ್ಕಾನೆ ಇಲ್ಲ. ಅಲ್ಲಿಗೆ ಗಂಡುಮಕ್ಕಳಿಗೆ ಗುತ್ತಿದೆ ಅಂದ್ರೆ 80-70 ರೂಪಾಯಿ ಬರ್ತಾದ ಕೂಲಿ. ಹೆಣ್ಮಕ್ಕಳ್ಗಂದ್ರೆ ೫೫-೬೦ ಕೂಲಿ.

ಜಂಭುನಾಥನ ಗುಡ್ಡಕ್ಕ ಮೈನಿಂಗ್ ಕೆಲ್ಸಕೆ ಇಲ್ಲಿಂದನೂ ನಡಕಂಡೇ ಹೋಗತಿದ್ವಿ ನಡಕಂಡೇ ಬರತಿದ್ವಿ. ಅವ್ರು ಬಸ್ ಗಿಸ್ಸು ಏನು ಕಳಿಸ್ತಾ ಇರ್‍ಲಿಲ್ಲ. ಬೆಳಿಗ್ಗೆ ಇಲ್ಲಿ ಬೇಗ ಬಿಟ್ಟರೆ ಅಲ್ಲಿ ಒಂಭತ್ತು ಒಂಭತ್ತು ವರೆಗೆ ಅಲ್ಲಿ ಇರ್‍ತಾ ಇದ್ವಿ. ತುಂಬಾ ಕಷ್ಟ ಅನಿಸ್ತಾ ಇತ್ತು. ಆದರೆ ಬದುಕಾದು ಹೆಂಗೆ ಕಷ್ಟ ಅಂದ್ರೆ? ಬೇಗ ನಾಲ್ಕು ಗಂಟೆಗೆಲ್ಲಾ ಎದ್ದು ಅಡಿಗೆ ಮಾಡಿ ಮಕ್ಕಳಿಗೆ ಊಟ ಕೊಟ್ಟು ಎಲ್ಲಾ ಮುಗಿಸಿ ಬೆಳಕು ಹರಿಯೋ ಹೊತ್ತಿಗೆ ಇಲ್ಲಿಂದ ಬಿಡಬೇಕಾಗಿತ್ತು. ರಜೆ ಇರೋ ಟೈಮಿನಲ್ಲಿ ಕಟ್ಟಿಗೆ ತಂದು ಹಾಕಿಕೊಂತಾ ಇದ್ವಿ. ಕೆಲಸ ಬಾಳ ದವತಿ. ಮುಂಜಾಲೆ ಎದ್ದೇಳಾಕ ಬರಾದಿಲ್ಲ. ಮೈ ಅಷ್ಟು ನೋವು. ಆದ್ರೆ ಏನು ಮಾಡಬೇಕು. ಅಲ್ಲಿ ಕೆಲಸ ಮಾಡೋತಾಗ ಅಂತೋ ಗಂಡಸರದು ತುಂಬಾ ತರ್‍ಲೆ ಕೆಲ್ಸ. ಆದ್ರೆ ಅದನ್ನು ನಾನು ಏನು ಮನ್ಸಿಗಿ ಅಚ್ಚಕೊಳ್ಳ ಅಂಗಿಲ್ಲ. ಅಲ್ಲಿ ಗಂಡಸರು ಮಾಡ್ತಾ ಇದ್ದಿದ್ದು ಬರೀ ನಕಲಿ. ಹೆಂಗಸರನ್ನ ಅಂಗೆ ಇಂಗೆ ಅನ್ನೋರು. ಒಬ್ಬೊಬ್ಬರು ಅನಿಸಿಕೊಂಬೋರು ಇರ್‍ತಾರ. ಒಬ್ಬೊಬ್ಬರು ತಿರುಗಿ ಅಂತಾರಾ. ನಮ್ಮ ಜಾತಿ (ಮಾದ್ರು) ಹೆಣ್ಣು ಮಕ್ಳೇ ಅಲ್ಲಿ ಬಾಳ ಮಂದಿ. ಅತ್ತಿ ಮನ್ಯಾಗ ಏನ್ ನನಗಿ ತಿರಿಗಿ ಮಾತಾಡ್ತಿಯ ನೀನು ಅಂಬೋರು. ನಿಂತನಿಂತಗೇನೆ ಕುಂತಾಗೇನೆ ಜಗ್ಗಿ ಹೊಡಸ್ಕೋತ್ತಿದ್ದೆ. ಇಲ್ಲಪ್ಪ ಹೊಡಿಬ್ಯಾಡಪ್ಪ ಇನ್ನೊಂದ ಸಲ ಎದ್ರು ಹೇಳಲ್ಲಪ್ಪ ಅಂಬೋದು. ಅವಾಗ ಮತ್ತೆ ಆ ತಗೊ ಪುಟ್ಟಿ ಬಾ ನಿಂತು ನೋಡ್ತಿ ಏನು ಮತ್ತೆ, ಅಂತ ಅಲ್ಲೆ ಗದರಸ್ತಾ ಇದ್ದ. ಅತ್ಯಂತ ಕೆಲ್ಸ ಮಾಡಾಕತ್ತಿದ್ದೆ. ಯಾಕಪ್ಪ ಇಂಗ ಮಾಡ್ತಾನ ಅಂತ ಒಬ್ರೂ ನನ್ನ ಅಂತವಳು ಇಂತವಳು ಅನ್ನಲ್ಲಿಲ್ಲ. ಯಾಕಪ್ಪ ಹಿಂಗಾತಲ್ಲ ಅಂತ ಅನ್‌ಕಂಡಿದ್ದೆ ಅತ್ತು ಅತ್ತು ತಲೆಯಲ್ಲ ಬಾತು ಬಿಡ್ತು. ಮುಂಜಾಲೆ ಕೆಲ್ಸಕ ಹೋಗಾಕ ಇಷ್ಟ ಇಲ್ಲ. ತಲೆಬಾಚಿ ಕೊಂಡ್ರೆ ಯಾವನಿಗಾದ್ರು ಹೇಳಿಬಂದಿದ್ದೀಯೇನು ಅಂತಿದ್ದ. ಕೆಲ್ಸಮಾಡೋವಾಗ ಗಂಡಸರ ಜೊತೆ ಇರ್‍ಬೇಕಾಗಿತ್ತು. ಆವಾಗ ಅವ್ರು ಮುಂದೆ ಸುಮ್ನೆ ನಿಂತಕಂಡು ಪುಟ್ಟಿ ಹೊತ್ಕಂಡು ಕಣ್ಣು ತಗೆದ್ರೆ 'ಏನ್ ನೋಡ್ತಿ ಯಾರ್‍ನ ನೋಡ್ತಿ' ಅಂತಿದ್ದ. ನೇರವಾಗಿ ನೋಡಂಗಿಲ್ಲ. ಸುಮ್ನೆ ಹಿಂಗೆ ಬಗ್ಗಿ ಹೊತ್ಕೊಂಬೋದು.ನೋಪ್ಪೆ ಹೆಂಗೆ ಹೊತ್ಕಂಬೇಕೊ ಗೊತ್ತಿಲ್ಲ. ಹೋಗಲಿ ಬಿಡು ಅಂತ ದೊಡ್ಡ ಮನ್ಸು ಮಾಡ್ಕಂಡು ಸುಮ್ನೆ ಇದ್ದೋದೆ. ರಾತ್ರಿ ಏನು ಮಾಡ್ತಾ ಇದ್ದ. ಯಷ್ಟು ದಣಕಂದೀನಿ ಸುಮ್ನೆ ಮಕ್ಕಳ್ಳೋ ಅಂದ್ರೆ ಇಲ್ಲ ನೀನು ಯಾವನೋ ನೋಡಿಯಾ ಅದಕ ನೀನು ಇಂಗ ಮಾಡೋದು. ಇಲ್ಲ ಅಂದ್ರೆ ನಾನು ಹೇಳಿದಂಗೆ ಕೇಳ್ತೀಯಾ ಅಂಬೋದು ಬಡಿಯೋದು. ದೇವರ ಸಾಕ್ಷಿಯಾಗಿ ಸತ್ಯವಾಗಿ ಹೇಳು ನೀನು ಯಾರನ್ನು ಮಾಡಿಲ್ಲ ಯಾರತಾಕೂ ಹೋಗಿಲ್ಲ ಅಂತ. ಎಲ್ಲಿ ಹೋಗಾಕ ಏತಿಯಪ್ಪ ರಾತ್ರಿ ತನ ಜಗಲಾಗ ಮಕ್ಕಾಳಕೈತಿ, ಮುಂಜಾಲಿ ಚಿಕ್ಕಿ ಹೋಟ್ಕೋದ್ರಾಗ ಮನೆಕೆಲಸ ಮುಗಿಸಿ ಗದ್ಯಾಗ ಬಗ್ಗೋದೈತಿ. ಚುಕ್ಕಿ ಹುಟ್ಕೊದ್ರಾಗ ಗದ್ಯಾಗ ಇರತಿದ್ವಿ ನಾವು.

ಈ ಬಸ್ವಿ ಅನ್ನೋದನ್ನ ಹರಿಜನ, ನಾಯಕ ಜಾತಿಯಲ್ಲಿ ಅಷ್ಟೇ ಬುಡೋದು. ತಂದೆ ತಾಯಿಗೆ ಗಂಡುಮಕ್ಳು ಇದ್ರು ಅವರು ಹೆಂಡ್ತಿ ಮಾತು ಕೇಳಿ ಅವರ ಜೀವ್ನ ಅವರು ಸಾಗಿಸ್ತಾರ. ಆದರ ತಂದಿ ತಾಯಿಗೆ ಯಾರ ನೋಡಬೇಕು? ಆದ್ರ ಮಗ್ಳು ಒಂತರ ಮನಿ ಇದ್ದಂಗ. ಮಗಳನ್ನ ಬೇರೆಯವರಿಗೆ ಕೊಟ್ಟು ಅಯ್ಯೋ ಅಂಬೋದಕ್ಕಿನ್ನ ನಮ್ಮ ಮನ್ಯಾಗ ಇದ್ದು ಜೀವನ ಮಾಡಿಕೆಂತ ಇರ್‍ತಾಳಲ್ಲ ಅಂತ ತಂದೆ ತಾಯಿಗೆ ಇಷ್ಟ ವಲ, ಮನಿ ಏನಾರ ಇದ್ರ ಹಾಗ್ಲು ಮನ್ಯಾಗ ಬಿಟಕಂತಾರ. ಬಡತನ ಇದಕ ಕಾರಣ ಅಲ್ಲ. ಬಡತನ ಇದ್ರ ಏನೋ ಕೊಟ್ಟದ್ರೆ ಚೆನ್ನಾಗಿರ್‍ತ ಇತ್ತಲ್ಲಪ್ಪಾ ಅಂತ ಸಲ್ಪ ಹೊತ್ತು ಅಂತಾರ ಆಮೇಲೆ ದುಡಿಕೆನ್‌ತಿನ್ನೊರಾದ್ರ ಅಲ್ಲಿ ದುಡಿಯೋದ ಇಲ್ಲಿ ದುಡಿಯೋದೆ ದುಡಿಕೆನ್ ತಿನ್ನಿ ಬಿಡು. ಮತ್ತೆ ಏನು ಒಂದಿಷ್ಟು ಆಸ್ತಿ ಪಾಸ್ತಿ ಇದ್ರೆ, ಒಬ್ಬರಿಗಿ ಒಂದಿಷ್ಟು ಒಂದಿಷ್ಟು ಅಂತ ಅಂಚಿಕೆಂತಾರ.

ಬ್ಯಾಡ್ರು, ಲಂಬಾಣಿ ಯಾವ ಜಾತಿ ಆಮ್ರೂ ಪರವಾಗಿಲ್ಲ ಈ ಮಾದಿಗ ಜಾತಿನಾಗ ಹುಟ್ಟಬಾರ್‍ದು. ಈ ಹರಿಜನ ಅಂದಮ್ಯಾಲೆ ಉಣ್ಣೋದ್ರಾಗ ಹಿಂದೆ ಯಾವದಕಂದ್ರೂ ಹರಿಜನ ಕೆಳಗ. ಸಣ್ಣ ಜಾತಿ ನೀವು ಸಣ್ಣ ಜಾತಿ ನೀವು ಕೆಳಗ ಬಿಟ್ಟಿ ತೊಡ್ರಿ. ಕೆಳ

ಕುಂತಕಂಡು ಊಟ ಮಾಡ್ರಿ. ನೀವು ಟೇಬಲ್ ಮ್ಯಾಲೆ ಹತ್ತಬಾರದು ಹಿಂಗೆ ನಮ್ಮ ಕಡೆ ಎಲ್ಲ್ರೂ ಅಂತಾನೇ ಇರ್ತಾರೆ. ಸಿಟಿನಾಗ ಮಾತ್ರ ಇದು ಇರಂಗಿಲ್ಲ ಅನಸ್ಪೈತಿ ನೋಡ್ರಿ. ಬಸವಿ ಮನ್ಯಾಗ ಹೆಣ್ಣು ತಕ್ಕಂಡು ಬರಬಾರ್ದು ಯಾಕಂದ್ರ ತಾಯಿ ಅಂತವ್ಳು ಮಗಳು ಇಂತಾವ್ಳು, ಮಗಳು ಏನ್ ನೀಟಾಗಿ ಬಾಳ್ವೆ ಮಾಡಿಕೆಂಡು ತಿಂದ್ರೂ ಕೂಡ ತಾಯಿ ಹೆಸರು ಮಗಳಿಗಿ ಬರ್ತೈತಿ. ಈ ತರ ನಾನು ಅನಿಸಿಕೆಂಡೀನಿ. ಆದ್ರ ನಾನು ಅಂಗಿ ಅನಿಸಿಕೆಂಬಾರ್ದಾಲ್ಲಾ ಅಂತ ನಾನು ಯ್ಯಾರೂ ಜೊತೇನು ಮಾತಾಡಿಲ್ಲ. ಚಿಕ್ಕವ್ಳಿಂದ ಇಡಿದು ಮನ್ಯಾಗ ಕೆಲ್ಸ ಅಂದ್ರ ಕೆಲ್ಸ. ಹೋದ್ರೆ ಅಡವ್ಯಾಗ ಕೆಲ್ಸ. ಬಂದ್ರ ಮನ್ಯಾಗ ಕೆಲ್ಸ. ಬರೀ ಕಷ್ಟದಾಗೆ ಬಂದ ಬಿಟ್ಟೀನಿ. ಯಾವ ಗಂಡು ಹುಡಗ್ರಾತ್ರಾನೂ ಆಟ ಆಡಿಲ್ಲ. ಹೆಣ್ಣು ಹುಡಗರ ಚಾಳನೂ ಆಟ ಆಡಿಲ್ಲ.

ಇದು ಅನಂತಶಯನ ಗುಡಿಯ ಪಾಂಡುರಂಗ ಕಾಲೋನಿಯಲ್ಲಿ ವಾಸವಾಗಿರುವ ೩೦ ರ ಹರೆಯದ ಸಂಕ್ಲಮ್ಮನ ಆತ್ಮಕಥನವಾಗಿ ಮಾತ್ರ ಉಳಿಯುವುದಿಲ್ಲ. ಇದು ಇಡೀ ಬಳ್ಳಾರಿಯ ಕರ್ನಾಟಕದ ದಲಿತ ಮಹಿಳೆಯ ವಾಸ್ತವ ಸ್ಥಿತಿಗೆ ಹಿಡಿದ ಕನ್ನಡಿ.

ಹೊಲೆಯ, ಮಾದಿಗ, ಜಾಡಮಾಲಿ ಮಹಿಳೆಯರು ಅಸ್ಪೃಶ್ಯರಲ್ಲಿ ಅಸ್ಪೃಶ್ಯರಾಗಿ ಪಂಚಮರಲ್ಲಿಯೇ ಪಂಚಮರಾಗಿ ಶೋಷಣೆಯನ್ನು ಅನುಭವಿಸುತ್ತಿರುವ ಮಹಿಳೆಯರಾಗಿದ್ದಾರೆ. ಇಂತಹ ಮಹಿಳೆಯರ ಪದತಲದಿಂದ ಅಭಿವೃದ್ಧಿಯನ್ನು ಸಮಾಜದ ಬದಲಾವಣೆಯನ್ನು ಗುರುತಿಸಬೇಕಾಗಿದೆ. ಕರ್ನಾಟಕದಲ್ಲಿ ಪರಿಶಿಷ್ಟ ಜಾತಿಗಳು ಹಲವಾರು ಜಾತಿಗಳಾಗಿ ಹಾಗೂ ಹಲವಾರು ಉಪಜಾತಿಗಳಾಗಿ ಹಂಚಿಹೋಗಿವೆ. ಈ ಎಲ್ಲಾ ಜಾತಿಗಳನ್ನು ಸೇರಿಸಿ ಎಡಗೈ, ಬಲಗೈ ಎಂದು ರೂಪುಗೊಳಿಸಲಾಗಿದೆ. ಈ ಎರಡೂ ಗುಂಪುಗಳಲ್ಲಿ ಸಾಕಷ್ಟು ಉಪಜಾತಿಗಳನ್ನು ನೋಡಬಹುದು. ಇಂತಹ ಉಪಜಾತಿಗಳ ಸಮುದಾಯಗಳಾದ ಹೊಲೆಯ-ಮಾದಿಗ ಮಹಿಳೆಯರು ಬಳ್ಳಾರಿ ಜಿಲ್ಲೆಯಲ್ಲಿ ಈ ಕೆಳಗಿನ ವೃತ್ತಿಗಳಲ್ಲಿ ತೊಡಗಿದ್ದಾರೆ.

೧. ಕೃಷಿಕಾರ್ಮಿಕರಾಗಿ

೨. ಚರ್ಮ ಹದಮಾಡುವವರಾಗಿ

೩. ಜಾಡಮಾಲಿಗಳಾಗಿ
(ಮುನಿಸಿಪಾಲ್ಟಿಗಳಲ್ಲಿ, ಬಸ್‌ಸ್ಟ್ಯಾಂಡ್‌ಗಳಲ್ಲಿ, ಲಾಡ್ಜ್, ಹೋಟೆಲ್, ಆಸ್ಪತ್ರೆ, ಸಿನಿಮಾ ಟಾಕೀಸು, ರೈಲ್ವೆ ಸ್ಟೇಷನ್‌ಗಳಲ್ಲಿ, ಮನೆಕೆಲಸ ಮಾಡುವವರಾಗಿ)

೪. ಹಳ್ಳಿಯಲ್ಲಿ ಪಾರಂಪರಿಕ ವೃತ್ತಿ ಮಾಡುವವರಾಗಿ
(ಕೋಲಾರ- ಚಾಕರಿವೃತ್ತಿ, ಬಳ್ಳಾರಿ- ಮನೆಮಾದ್ರು)

೫. ಗಣಿಕೂಲಿಕಾರ್ಮಿಕರಾಗಿ

೬. ಇತರೆ ಸಣ್ಣಪುಟ್ಟ ಆರ್ಥಿಕ ಚಟುವಟಿಕೆಗಳಲ್ಲಿ (ತರಕಾರಿ ಮಾರುವುದು, ಹಣ್ಣು ಮಾರುವುದು, ಹೂ ಕಟ್ಟುವುದು)

ಅ. ಹೊಲೆಯ ಮಹಿಳೆ

ಹೊಲೆಯ ಎಂಬುವುದು 'ಹೊಲೆ'ಯಿಂದ ಹುಟ್ಟಿಕೊಂಡಿರುವಂತಹದ್ದು. 'A Field' ಎಂದರ್ಥ. ಹೊಲೆಯ ಎಂದರೆ 'ಕೂಲಿಕಾರ್ಮಿಕ' (A field labourer). ಆದರೆ ಹೊಲೆಯ ಎಂಬುವುದು ಹೆಚ್ಚಾಗಿ

‘ಹೊಲೆ’ ಎಂಬುವುದರಿಂದಲೇ ಗುರುತಿಸಿಕೊಂಡಿದೆ. ಇದರರ್ಥ ಕೊಳಕು, ಗಲೀಜು, ಗಬ್ಬು, ನಾಥ, ವಾಸನೆ, ಮಾಲಿನ್ಯ, ಮಲಿನ, ದುರ್ನಾತ ಇಂತಹ ಕ್ಷೇತ್ರದಲ್ಲಿ ವಾಸಿಸುವ, ಕೆಲಸ ಮಾಡುವ ಇಂತಹದನ್ನು ಯಾರು ಶುಚಿ ಮಾಡುವ ಕೆಲಸದಲ್ಲಿ ತೊಡಗಿರುತ್ತಾರೋ ಅವರೇ ‘ಹೊಲೆಯ’ ಎಂಬುದಾಗಿ ವ್ಯವಸ್ಥೆಯಿಂದ ಗುರುತಿಸಿಕೊಂಡಿದೆ. ಕರ್ನಾಟಕದಲ್ಲಿ ಇವರ ಸಂಖ್ಯೆ ೧೯೮೧ರ ಅಂಕಿ- ಅಂಶಗಳ ಪ್ರಕಾರ ೪.೫೦. ೬೭೭ (K.S. Singh; Volume 26, Part 2).

ಹೊಲೆಯ ಎಂಬ ಪದ ‘ಹೊಲ’ದಿಂದ ಬಂದಿದೆ ಎಂದು ದಲಿತರಲ್ಲಿ ನಂಬಿಕೆ ಇದ್ದರೆ ‘ಹೊಲಸು’ ಎಂಬ ಶಬ್ದದಿಂದ ಬಂದಿದೆ ಎಂದು ಬ್ರಾಹ್ಮಣರು ವಾದಿಸುತ್ತಾರೆಂದು ಥರ್ಸ್ಟನ್ ಹೇಳುವುದು ಸಮಂಜಸವೇ- ದಕ್ಷಿಣ ಕನ್ನಡದಲ್ಲಿ ‘ಮೂಲದ ಹೊಲೆಯ’, ‘ಸಾಲದ ಹೊಲೆಯ’ರೆಂಬ ಜೀತ ಪದ್ಧತಿ ಇದೆ. ‘ಹುಟ್ಟಾಳು’, ‘ಮಣ್ಣಾಳು’ ಎಂದು ಹಲವೆಡೆ ಇವರಿಗೆ ಹೆಸರಿದೆ. ಮೂಲ ಕೃಷಿಕರಾದ ಹೊಲೆಮಾದಿಗರನ್ನು ಜಾತಿ ಬದ್ಧ ಶೋಷಕ ವ್ಯವಸ್ಥೆ- ‘ಮೂಲಾಳು’, ‘ಹುಟ್ಟಾಳು’ ಎಂಬ ರೂಪದಲ್ಲಿ ಜೀತಗಾರರನ್ನಾಗಿ ಮಾಡಿ ಉಳಿಸಿಕೊಂಡು ಬಂದಿತು (ಸಂ. ಎಸ್.ಎಸ್. ಹಿರೇಮಠ, ೧೯೯೩, ಪು. ೩೩೯).

ಹೊಲೆಯ - ಹೊಲ + ಯ - ಹೊಲವನ್ನು ಉಳುವವನು

ಹೊಲೆ - ಅಶುದ್ಧ, ಮಲಿನ

ಹೊಲೆಯ- ಅಶುದ್ಧವಾಗಿರುವ, ಮಲಿನದಿಂದ ಕೂಡಿರುವವ

ಹೊಲೆಯಾಳು- ಕೊಳಕಿನಿಂದ ಕೂಡಿದ ಆಳು, ಮೇಲ್ಜಾತಿಗಳ ಮನೆಗಳಲ್ಲಿ ದನ, ಕರು, ಹೊಲ- ಗದ್ದೆಗಳನ್ನು ನೋಡಿಕೊಳ್ಳುವರು. ಗೌಡರು ಹೇಳಿದ ಕೆಲಸವನ್ನು ಮಾಡುವವರು. ಇದು ದಕ್ಷಿಣಕರ್ನಾಟಕದಲ್ಲಿ ಪ್ರಚಲಿತದಲ್ಲಿದೆ. ಹೀಗೆ ‘ಹೊಲೆಯ’ ಎಂಬುವುದನ್ನು ‘ಹೊಲ’ ಹೊಲಸು ಎಂದು ಎರಡು ರೀತಿಯಲ್ಲಿಯೂ ಯೋಚಿಸಬಹುದಾಗಿದೆ.

‘ಪುಲ’ಕ್ಕೆ ಮೈಲಿಗೆ ಎಂಬರ್ಥವೂ ಇದೆಯಂತೆ. ಇದರಿಂದ ‘ಪುಲಯ’ ಹುಟ್ಟಿರಬೇಕೆಂದು ಥರ್ಸ್ಟನ್ ಸೂಚಿಸುತ್ತಾನೆ. ಕನ್ನಡದ ‘ಹೊಲೆಯ’ರ ಕುರಿತು ಹೇಳುವಾಗಲೂ ಕೂಡ ಇಂಥದೇ ವಿವರ ನೀಡುತ್ತಾನೆ. ಹೊಲೆಯ ಜಾತಿಗಳಲ್ಲಿ ೧೨ ಉಪಜಾತಿಗಳಿವೆ.

* ಕನ್ನಡದ ಹೊಲೆಯ
* ಕಪ್ಪೆ ಹೊಲೆಯ
* ಕೆಂಬಟ್ಟೆ ಹೊಲೆಯ
* ಕೊಂಗೊಲೆಯ
* ಕೂಡು ಸಾಲ ಹೊಲೆಯ
* ಗಟ್ಟಿ ಹೊಲೆಯ
* ತೆಲುಗು ಹೊಲೆಯ
* ಚಂಗ ಹೊಲೆಯ

* ಗಂಗತಿಕಾರ ಹೊಲೆಯ
* ಮನ್ನಾ ಹೊಲೆಯ
* ಸಾಮ ಹೊಲೆಯ
* ಉರ್ಮಿ ಹೊಲೆಯ (ಸಂ. ಎಸ್.ಎಸ್. ಹಿರೇಮಠ, ೧೯೯೩, ೨೫೮).

ಈ ಮೇಲಿನ ಜಾತಿಗಳೆಲ್ಲವೂ ವೃತ್ತಿ ಆಧಾರದ ಹಿನ್ನೆಲೆಯಿಂದ ಹುಟ್ಟಿಕೊಂಡುವಂತಹವು. ವೃತ್ತಿ ಮತ್ತು ಜಾತಿಗೆ ಇರುವ ನಂಟನ್ನು ಈ ಜಾತಿಗಳು ಸ್ಪಷ್ಟವಾಗಿ ತೋರಿಸುತ್ತವೆ.

"ಜಾತಿವರ್ಗ ಸಮಾಜದಲ್ಲಿ ಇವರ ಶ್ರಮದ ಫಲವನ್ನು ಕಸಿದು ಧನವಂತರೆಂದು ಮೆರೆಯುವ ಮೇಲ್ಜಾತಿ ಶೋಷಕರು 'ಶ್ರಮವನ್ನೇ ಕೀಳು' ಎಂದು, ಶ್ರಮಿಕ ಜಾತಿಗಳೆಲ್ಲ ಕೀಳು ಎಂದು ಪ್ರತಿಪಾದಿಸುತ್ತ, ಹಾಗೆ ಅವರು ಕೀಳಾಗಿರುವ ಸ್ಥಿತಿಯನ್ನೇ ಮುಂದುವರೆಸುತ್ತ ಬಂದರು. ಕೆಲಸಗಳ ಮಧ್ಯೆಯೂ ಮೇಲು, ಕೀಳನ್ನು ಸೃಷ್ಟಿಸಿ, ಶ್ರಮಿಕರ ಮಧ್ಯೆ ಹಲವಾರು ಜಾತಿಗಳನ್ನು ಸೃಷ್ಟಿಸುವ ಕುತಂತ್ರ ಆಗಾಧವಾದುದು ಎಂಬುವುದನ್ನು ಜಾತ್ರೆಗಳು ಪುಸ್ತಕದಲ್ಲಿ ಎಸ್.ಎಸ್. ಹಿರೇಮಠರು ಅನೇಕ ಆಧಾರಗಳ ಸಹಿತ ಸ್ಪಷ್ಟಪಡಿಸುತ್ತಾ ಹೋಗುತ್ತಾರೆ.

ಹೊಲೆಯ ಮಹಿಳೆ ಕುರಿತು ದಿ ಪೀಪಲ್ ಆಫ್ ಇಂಡಿಯಾ ಕೃತಿಯಲ್ಲಿ ಹೀಗೆ ಹೇಳಲಾಗಿದೆ;

The Holeya women contribute to the family income either through Agriculture wage labour or manual labour, as through some of the economic activities women collect fodder for the Animals bring potable water and look after children and other house hold work. They have restricted order in rituals and religious activities (K.S. Singh, P. 633).

ಸವರ್ಣಿಯರಿಂದ ಅಸ್ಪೃಶ್ಯರು ಎಷ್ಟು ಅಡಿ ದೂರ ಇದ್ದು ದುಡಿಯಬೇಕಾಗಿತ್ತು. ಶೋಷಕರಿಗೆ ದುಡಿಯಬೇಕಾದ ಜಮೀನುಗಳಲ್ಲಿ ಈ ಸ್ಥಿತಿಯಿದ್ದರೆ ಇದಕ್ಕೆ ತದ್ವಿರುದ್ಧವಾಗಿ ಊರುಗಳಲ್ಲಿ ಕ್ರೂರ ಅಸ್ಪೃಶ್ಯತೆ. ಸವರ್ಣಿಯರಿಂದ ಚೇರುಮನ್‌ರು ೩೦ ಅಡಿ ದೂರವಿರಬೇಕಿತ್ತು. ಇದರೊಳಗೆ ಬಂದರೆ ಮೈಲಿಗೆ, ಸ್ನಾನ ಮಾಡಿ ಶುದ್ಧರಾಗಬೇಕಿತ್ತು. ಬ್ರಾಹ್ಮಣರ ಕೇರಿ ದೇಗುಲ ಕೆರೆಗಳ ಹತ್ತಿರ ಚೇರುಮಾನರಿಗೆ ಪ್ರವೇಶವಿರಲಿಲ್ಲ. ಬೀದಿಗಳಲ್ಲಿ 'ಓ ಹೋಜ' ಎಂದು ಕೂಗಿಕೊಂಡು ಬರಬೇಕಿತ್ತು. ಪಾಲಘಾಟದ ಬಜಾರಿನಲ್ಲಿ ಅವರಿಗೆ ಪ್ರವೇಶವೇ ಇರಲಿಲ್ಲ. 'ಓ ಹೋಜ' ಎಂಬುವುದನ್ನು 'ಓಲಿಗ್ಯಾ' ಎಂದು ಕೂಗಿಕೊಂಡು (ಎಸ್.ಎಸ್. ಹಿರೇಮಠ, ೧೯೯೩, ಪು. ೨೬೦). ಮನೆ ಮನೆಗೆ ಹೋಗಿ ಜೋಳ ಉಗ್ಗಿ ಬರುವ ಸಂಪ್ರದಾಯ ಬಳ್ಳಾರಿಯ ಕೆಲವು ಅಮ್ಮನ ಆಚರಣೆಗಳಲ್ಲಿ ಈಗಲೂ ಇದೆ.

'ಮೈಲಿಗೆ ಆಗುವಷ್ಟು ಹತ್ತಿರ ಬಂದರೆ ನಾಯರ್ ಮೊದಲಾದ ಜನ ಬಡಿಗೆಯಿಂದ ಹೊಡೆಯುತ್ತಿದ್ದರು. ಎಷ್ಟೋ ಸಲ ಕೊಲೆ ಮಾಡುತ್ತಿದ್ದರು. ದಕ್ಷಿಣದ ಪುಲಯನ್ನರು, ಬ್ರಾಹ್ಮಣರಿಂದ ೯೦ ಅಡಿ, ನಾಯರ್‌ರಿಂದ ೬೪ ಅಡಿ ದೂರವಿರಬೇಕಿತ್ತು. ಇತರ ಜಾತಿ ಜನಗಳ ಹತ್ತಿರ ಅಡಿ ಪ್ರಮಾಣ ಕಡಿಮೆಯಾಗುತ್ತಿತ್ತು. ದನದ ಮಾಂಸ ಸೇವಿಸುತ್ತಿದ್ದ ಪುಲ, ಚೇರುಮನರು, ಪರಯ, ಉಳ್ಳಾಡನ್‌ರು ಕಟುಕರಿಗಿಂತ ಕೀಳೆಂದು ಚೇರುಮನರ ನಂಬಿಕೆಯಾಗಿತ್ತು. ನಾಯರ್ ಮುಟ್ಟಿದರೆ ಚೇರುಮನ್ ೭ ಕೆರೆಗಳಲ್ಲಿ ಸ್ನಾನ ಮಾಡಬೇಕಿತ್ತು. ಮತ್ತು ತನ್ನ

ಬೆರಳನ್ನು ಕೊಯ್ದುಕೊಂಡು ಸ್ವಲ್ಪ ರಕ್ತ ಹರಿಸಬೇಕಿತ್ತು (ಥರ್‌ಸ್ಟನ್ ದಕ್ಷಿಣಭಾರತದ ಜಾತಿಗಳು ಮತ್ತು ಬುಡಕಟ್ಟುಗಳು).

ದಲಿತ, ದಲಿತ ಮಹಿಳೆ, ದಲಿತ ಮಕ್ಕಳ ಮಾರಾಟ

೧೮-೧೯ನೇ ಶತಮಾನಗಳಲ್ಲಿ ಚೇರುಮಾನ್ ಗುಲಾಮರ ಮಾರಾಟ ಪದ್ಧತಿ ನಿಲ್ಲಿಸಲು ಬ್ರಿಟೀಷ್ ಸರಕಾರ ಅರೆಬರೆ ಪ್ರಯತ್ನ ಮಾಡಿದ್ದರಿಂದ ಅದು ನಿಂತಿರಲಿಲ್ಲ. ೧೮೩೬ ರಲ್ಲಿ ಮಲಬಾರಿನ ಸರಕಾರಿ ಭೂಮಿಗೆ ಸಂಬಂಧಿಸಿದ ಚೇರುಮಾನರಿಂದ ಕೊಡುತ್ತಿದ್ದ ವಾರ್ಷಿಕ ಕಂದಾಯ ರೂ. ೯೨೭, ೧೩ ಆಣೆಗಳನ್ನು ಮಾಫ್ ಮಾಡಿ ಸರಕಾರಿ ಭೂಮಿಗಳಿಂದ ಮುಕ್ತಗೊಳಿಸಲಾಯಿತು.

ಮಕ್ಕಳನ್ನು ಹೆರುವ ಗುಲಾಮ ಹೆಂಗಸರ ಮಾರುಕಟ್ಟೆ ಬೆಲೆ ಗಂಡಸರಿಗಿಂತ ಹೆಚ್ಚಿತ್ತು. ಒಬ್ಬ ಯುವಕನ ಬೆಲೆ ರೂ. ೩-೮ ನ್ಯಾಯಾಲಯದ ಹರಾಜಿನಲ್ಲಿ ಹತ್ತು ತಿಂಗಳ ಮಗು ರೂ. ೧-೧೦-೬ ಆಣೆ ಪೈಸೆಗೆ ಮಾರಾಟವಾಯಿತು. ತಾಯಿಗೆ ಪ್ರತ್ಯೇಕ ಬೆಲೆ ಕಂದಾಯದ ಬಾಕಿ ತುಂಬುವುದಕ್ಕಾಗಿ ಒಡೆಯರು, ಚೇರುಮಾನ್ ಮಹಿಳೆಯರನ್ನು ಮಾರಾಟ ಮಾಡುತ್ತಿದ್ದರು. ೧೮೩೫ ರ ಗಣತಿ ಪ್ರಕಾರ ೧,೪೪,೦೦೦ ಗುಲಾಮರಿದ್ದರು. ೧೯೪೨ ರಲ್ಲಿ ಈ ಸಂಖ್ಯೆ ಹೆಚ್ಚಿತು. ೧,೫೬,೦೦೦ ಜನರಾದುದನ್ನು ನೋಡಿದರೆ ಗುಲಾಮಗಿರಿ ಹೆಚ್ಚುತ್ತಿದ್ದುದು ಗೊತ್ತಾಗುತ್ತದೆ. ೧೮೭೧ ರಲ್ಲಿ ಮಲಬಾರಿನಲ್ಲಿ ಚೇರುಮಾನರ ಸಂಖ್ಯೆ ೯೯೦೦೯ ಇದ್ದರೆ ೧೮೮೧ ರಲ್ಲಿ ೬೪, ೭೩೫ ಕ್ಕಿಳಿಯಿತು. ಕಾರಣವೇನೆಂದರೆ ಗುಲಾಮಗಿರಿಯಿಂದ ವಿಮೋಚನೆಗೊಳ್ಳಲು ಸುಮಾರು ೪೦ ಸಾವಿರ ಚೇರುಮಾನರು ಇಸ್ಲಾಂಗೆ ಮತಾಂತರವಾಗಿದ್ದು, ಪದೇ- ಪದೇ ಆಗುತ್ತಿದ್ದ ಮಹಿಳಾ ದಂಗೆಗಳಲ್ಲಿ ಇವರು ಪಾಲ್ಗೊಳ್ಳುತ್ತಿದ್ದರು ಎಂಬುವುದನ್ನು ಥರ್‌ಸ್ಟನ್ ತನ್ನ ದಕ್ಷಿಣ ಭಾರತದ ಜಾತಿಗಳು ಮತ್ತು ಬುಡಕಟ್ಟು ಕೃತಿಗಳಲ್ಲಿ ವಿವರಿಸುತ್ತಾರೆ.

ನಾಮಕಾವಸ್ತೆ ಬ್ರಿಟೀಷ್ ಸರಕಾರದ ಕಾನೂನಿದ್ದರೂ ಗುಲಾಮರನ್ನು ಮಾರಿಕೊಳ್ಳುವ, ಬಾಡಿಗೆ ನೀಡುವ ಕೆಲಸ ಗುಪ್ತವಾಗಿ ನಡದೇ ಇತ್ತು. ಗುಲಾಮಗಿರಿನಾಶ ಮಾಡಿದರೂ 'ವಲ್ಲಿಯಾಳ' (ಗುಲಾಮ) ಹೆಸರು ಈಗಲೂ ಚಾಲ್ತಿಯಲ್ಲಿದೆ ಎಂದು ಅನಂತ ಕೃಷ್ಣ ಅಯ್ಯರ್ ತಿಳಿಸುತ್ತಾರೆ.

ಹೊಲಸು- ಹೊಲೆಯ, ಸಮೃದ್ಧಿ ಮಾಡುವವ, ಬೆಳೆ- ಬೆಳೆಯುವವ ಎಂದಿರುವುದರಿಂದ ಹೊಲೆಯ ಪದದ ನಿಷ್ಪತ್ತಿ ಹೊಲ, ಭೂಮಿ ಅಥವಾ ಮಣ್ಣಿನ ಜೊತೆಯಲ್ಲಿ ಅರ್ಥ ಮಾಡುವುದುಂಟು. ಅಂದರೆ ಹೊಲೆಯರೇ ನೆಲದ ಒಡೆಯರು ಎಂಬ ಪರಿಗಣನೆಯನ್ನು ಈ ನಿಟ್ಟಿನಲ್ಲಿ ಮಾಡಲಾಗಿದೆ. ಆದರೆ ಎಮ್.ಜಿ. ನಾಗರಾಜ್ ಕೆಂಬಟ್ಟೆ ಹೊಲೆಯರ ಸಂಸ್ಕೃತಿ ಎಂಬ ತಮ್ಮ ಕೃತಿಯಲ್ಲಿ ಹೊಲೆಯ ಪದವನ್ನು 'ಹೊಲಕ್ಕೆ' ಅಂಟಿಸುವುದು ಸರಿಯಾಗದು ಎಂದು ಅಭಿಪ್ರಾಯಪಟ್ಟಿದ್ದಾರೆ. ಹೊಲದಾಳು, ಮನೆಯಾಳು, ಮನೆಮಕ್ಕಳು, ಮನೆಮಾದ್ರು ಪದಗಳು ಬಳಕೆಯಲ್ಲಿವೆ.

ರಾಘವಾಂಕನ 'ಹರಿಶ್ಚಂದ್ರಕಾವ್ಯದಲ್ಲಿ' ಹೊಲತಿಯರ ಪ್ರಸಂಗ ಬರುತ್ತದೆ. ವಿಶ್ವಾಮಿತ್ರನು ಹರಿಶ್ಚಂದ್ರನನ್ನು ಪರೀಕ್ಷೆ ಮಾಡಲು ಹೊಲತಿಯರನ್ನು ಕಳಿಸುತ್ತಾನೆ. ಹೊಲತಿಯರು ತುಂಬಾ ಕಪ್ಪಾಗಿದ್ದು, ತುಂಬಾ ಗಲೀಜಿನಿಂದ ಕೂಡಿ ಅವರ ದೇಹದಿಂದ ದುರ್ನಾತ ಬರುತ್ತಿರುತ್ತದೆ. ಇವರ ತರಲೆಗಳನ್ನು ತಡೆದ ಹರಿಶ್ಚಂದ್ರ ಇವರನ್ನು ಓಯಾಳಿಸುತ್ತಾನೆ. ಹೊಲತಿಯರೂ ಸಹ ಅದಕ್ಕೆ ತಕ್ಕಂತೆ ಉತ್ತರಿಸುತ್ತಾರೆ. ಹರಿಶ್ಚಂದ್ರನ ಮನಸ್ಸನ್ನು ಕೆಡಿಸಲು

ಬಂದ ಹೊಲತಿಯರ ಚಿತ್ರವನ್ನು ರಾಘವಾಂಕ ಯಾಕೆ ಈ ರೀತಿ ಚಿತ್ರಿಸಿದ್ದಾನೆ? ಇದು ಹೊಲೆಯರ ಆಗಿನ ಸ್ಥಿತಿಗತಿಯನ್ನು ತೋರಿಸುತ್ತದೆಯೇ? ಅಥವಾ ಹೊಲತಿಯರ ಬಗೆಗಿನ ಮಿಥ್ ಇಲ್ಲಿ ಕೆಲಸ ಮಾಡಿದೆಯೇ? ಜಾತಿ ಮತ್ತು ವೃತ್ತಿವಾಚಕ ಹಿನ್ನೆಲೆಯಲ್ಲಿ ಹೊಲತಿ ಎಂದು ಹೇಳಿ ಸುಮ್ಮನಾಗಬಹುದಿತ್ತು. ಆದರೆ ಅವರ ದೇಹ ಸೌಂದರ್ಯವನ್ನು ಕೊಳಕು, ಕಪ್ಪು, ಅಂಗವಿಕಲತೆಯಿಂದ ವರ್ಣಿಸಿರುವುದು ಏನನ್ನು ಸೂಚಿಸುತ್ತದೆ? ಹರಿಶ್ಚಂದ್ರನ ಮನಸ್ಸು ಕೆಡಿಸಲು ಹೊಲತಿಯರೇ ಬೇಕಾಗಿರಲಿಲ್ಲವಲ್ಲ. ಸುವಾಸನೆ ಬರಿತ ಲಲನೆಯರನ್ನು ವಿಶ್ವಾಮಿತ್ರ ಯಾಕೆ ಕಳಿಸಲಿಲ್ಲ?

ಕನ್ನಡ ಸಾಹಿತ್ಯದಲ್ಲಿ ದಲಿತ ಮಹಿಳೆಯನ್ನು ಕುರಿತು ಬರೆದಿರುವ ಅಥವಾ ದಲಿತ ಮಹಿಳೆ ಚಿತ್ರಿತಗೊಂಡಿರುವ ಸಾಕಷ್ಟು ಸಾಹಿತ್ಯ ಬಂದಿದೆ. ಆದರೆ ಅದು ಗರಿಷ್ಠ ಪ್ರಮಾಣದಲ್ಲಿ ಯಶಸ್ವಿಯಾಗಿರುವುದು ದಲಿತ ಕವಿ, ಕವಿಯಿತ್ರಿ, ಲೇಖಕರ ಮೂಲಕ.

ಉದಾಹರಣೆ

ದೇವನೂರು ಮಹಾದೇವ	-	ಒಡಲಾಳ, ಕುಸುಮಬಾಲೆ
ಚೆನ್ನಣ್ಣವಾಲೀಕಾರ	-	ಹುಲಿಗೆಮ್ಮ
ಗೀತಾನಾಗಭೂಷಣ	-	ದಂಗೆ, ಬದುಕು
ಸಿದ್ದಲಿಂಗಯ್ಯ	-	ಹೊಲೆಮಾದಿಗರ ಹಾಡುಗಳು
ಮೊಗಳ್ಳಿಗಣೇಶ್	-	ಬುಗುರಿ ಮೊದಲಾದವುಗಳನ್ನು ನೋಡಬಹುದು;

ಆ. ಮಾದಿಗ ಮಹಿಳೆ

ಮಾದಿಗರ ಮೂಲ ಪುರುಷ ಜಾಂಬವಂತಮುನಿ ಎಂದು ಪೌರಾಣಿಕ ಹಿನ್ನೆಲೆಯಲ್ಲಿ ಹೇಳಲಾಗುತ್ತದೆ. ಮಾದಿಗ ಪದವನ್ನು ಮಹಾ + ಆದಿ = ಆದಿ ಪುರುಷನೆಂದು ಹೇಳುವುದುಂಟು. ಮಾದಿಗ ಪದವನ್ನು ಮಾತಂಗ. ಮತಂಗರು ಎಂದು ಕೆಲವು ವಿದ್ವಾಂಸರು ಅರ್ಥೈಸಿದ್ದಾರೆ. ದ್ರಾವಿಡರ ಮಾದಿಗ ಪದವೇ ಸಂಸ್ಕೃತಕ್ಕೆ ಮಾತಂಗವಾಗಿ ಸೇರಿತು ಎಂಬ ದ್ರಾವಿಡ ಎಟಮಲಾಜಿಕಲ್ ಶಬ್ದ ಕೋಶದ ವಾದವು ಗಟ್ಟಿ ಎನ್ನುವುದಾದರೆ ಮಾತಂಗರು ಭಾರತದಲ್ಲಿ ಪ್ರಪ್ರಥಮ ರಾಜ್ಯಗಳನ್ನು ಸ್ಥಾಪಿಸಿದರೆಂಬ ಮತ್ತೊಂದು ಘನವಾದ ವಿಚಾರಕ್ಕೆ ಪ್ರವೇಶಿಸುತ್ತೇವೆ. ಆನೆಯನ್ನು ತಮ್ಮ ಕುಲದೇವತೆಯಾಗುಳ್ಳವರು ಮಾತಂಗರು. ಗಣಪತಿಯ ಆನೆ ಮುಖದ ಗುಟ್ಟನ್ನು ಬಯಲಿಗೆಳೆಯುವ ಸಂದರ್ಭದಲ್ಲಿ ದೇವಿ ಪ್ರಸಾದ ಚಟ್ಟೋಪಾಧ್ಯಾಯರು ಮಾತಂಗರು ರಾಜ್ಯ ಸ್ಥಾಪಕರಾದಾಗ ಗಣಪತಿ ದೇವನಾದನೆಂದು ಪ್ರತಿಪಾದಿಸುತ್ತಾರೆ. ಮಾದಿಗರ ಮೂಲದ ಮಾತಂಗರು ಯುದ್ಧ ವೀರರಾಗಿದ್ದು, ಯುದ್ಧದಲ್ಲಾದ ಪರಾಭವದಿಂದ ತಮ್ಮ ಉನ್ನತ ಸ್ಥಾನವನ್ನು ಕಳೆದುಕೊಂಡು ಗೆದ್ದವರ ಗುಲಾಮರಾಗಿರುವ ಸಾಧ್ಯತೆ ಇದೆ (ಎಸ್.ಎಸ್. ಹಿರೇಮಠ, ೧೯೯೩, ಪು. ೨೪೬).

'ಮಾದಿಗ' ಎಂಬುವುದು ಮಾದ + ಇಗ ಎಂಬೆರಡು ಶಬ್ದಗಳಿಂದ ರೂಪಿತವಾಗಿದೆ. ಮಾದ ಎಂಬ ಕನ್ನಡ ಪದದ ಅರ್ಥ ಅಸ್ಪೃಶ್ಯ, ಹರಿಜನ ಎಂದಾಗುತ್ತದೆ. ಇದಕ್ಕೆ ಇಗ ಎಂಬ ತದ್ಧಿತ ಪ್ರತ್ಯಯ ಸೇರಿ ಮಾದಿಗ ಎಂದಾಗಿದೆ. ಇವರನ್ನು ಮಾದಾರ, ಮಾತಂಗ, ಮಾಂಗ ಎಡಗೈಯವರು ಎಂದು ಮುಂತಾದ

ಹೆಸರುಗಳಿಂದ ಕರೆಯುವ ವಾಡಿಕೆ ಇದೆ. ಈ ಪದವು ಜಾತಿ ಸೂಚಕ, ವೃತ್ತಿ ಸೂಚಕ, ಬೈಗುಳ ಸೂಚಕವಾಗಿಯೂ ಬಳಕೆಯಾಗುತ್ತಾ ಬಂದಿರುವುದನ್ನು ನೋಡಬಹುದು (ಅರ್ಜುನಗೊಳಸಂಗಿ, ೨೦೦೦, ಪು. ೧೧೨).

'ಇವನೊಬ್ಬ ಮಾದ' ಎಂದು ಸಾಮಾನ್ಯವಾಗಿ ಹಳ್ಳಿಗಳಲ್ಲಿ ಬಳಸಲಾಗುತ್ತದೆ. ಮಾದ ಎಂಬುವುದನ್ನು ತುಂಟ, ತರಲೆ ಎಂಬ ಅರ್ಥಗಳಲ್ಲಿ ಕೆಲವು ಕಡೆ ಬಳಸಿದರೆ, ಇನ್ನೂ ಕೆಲವು ಕಡೆ ಮಾದ ಎಂಬುವುದನ್ನು ಕಷ್ಟಜೀವಿ ಎಂಬರ್ಥದಲ್ಲಿ ಬಳಸಲಾಗುತ್ತಿದೆ.

ಉದಾಹರಣೆಗೆ ಕೋಲಾರ ಜಿಲ್ಲೆಯಲ್ಲಿ ಹೆಚ್ಚಾಗಿ ಕೆಲಸ ಮಾಡುವವರನ್ನು ಕುರಿತು 'ಏನೋ ಕೆಲಸ ಒಳ್ಳೆ ಮಾದ ಮಾಡಿದಂಗೆ ಮಾಡ್ತೀಯ' ಎಂದು ಹೇಳಲಾಗುತ್ತದೆ. ಇದರಿಂದ 'ಮಾದ' ಎಂಬುವುದು ಕಷ್ಟದ ಕೆಲಸಗಳನ್ನು ಮಾಡುವವ, ಹೆಚ್ಚು ಕೆಲಸ ಮಾಡುವವ ಎಂದು ತಿಳಿಯಬಹುದಾಗಿದೆ. ಆದರೆ ಒಂದು ವಿಶೇಷವೆಂದರೆ 'ಮಾದ' ಎಂಬುವುದನ್ನು ಸ್ತ್ರೀವಾಚಿಯಾಗಿ ಅಷ್ಟು ಬಳಸುವುದಿಲ್ಲ. ಅಂದರೆ ಏನು 'ಮಾದಿಗಳ' ತರ ಕೆಲಸ ಮಾಡ್ತೀಯ ಎಂದು ಬಳಸುವುದಿಲ್ಲ. 'ನೋಡೋಕೆ ನೋಡು ಎಂಗಿದಾನೆ ಮಾದಿಗನ ತರ', 'ಸೀರೆ ನೋಡು ಒಳ್ಳೆ ಮಾದಿಗರ ಸೀರೆ ಇದ್ದಂಗೈತೆ' ಎಂಬ ವಾಕ್ಯಗಳು ಮಾದಿಗರೂ ಸಹ ಹೊಲೆಯರಂತೆಯೇ ಕೊಳಕು, ಗಲೀಜಿನಿಂದ ಕೂಡಿದ್ದು ಕೊಳಚೆ ಪ್ರದೇಶದಲ್ಲಿ ವಾಸ ಮಾಡುತ್ತಾರೆ ಎಂಬುವುದನ್ನು ಸೂಚಿಸುತ್ತದೆ. ಪುರಾಣವು ಮಾತಂಗಿಯ ಮಕ್ಕಳೆಂದು, ವಂಶಸ್ಥರೆಂದು ಮಾದಿಗರನ್ನು ಗುರುತಿಸುತ್ತದೆ.

ಎಮ್ಮೆ, ಕೋಣ, ಹಸುಗಳನ್ನು ಕೊಯ್ದು ಶುಚಿಮಾಡಿ ಮಾಂಸವನ್ನು ಹೊಲೆಯರಿಗೂ ಕೊಡುವವರು (ಮಾರುವವರು), ಊರಿನ ಸತ್ತ ಕೋಣ, ಎಮ್ಮೆಗಳನ್ನು ಹೊತ್ತುಕೊಂಡು ಊರ ಹೊರಗೆ ಹಾಕಿ, ಊರಿನ ಶುಚಿ ಕಾಪಾಡುವವರು ಮಾದಿಗರು. ಬಳ್ಳಾರಿಯಲ್ಲಿ ಮಾದಿಗ ಮಹಿಳೆಯರೇ ಹೆಚ್ಚಾಗಿ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿದ್ದಾರೆ.

ಕೆಂಪಾದವೋ ಬದುಕು ಕೆಂಪಾದವೋ...

ನಮ್ಮ ಸಮಾಜದಲ್ಲಿ ಮೇಲ್ವರ್ಗದ ಪುರುಷರೇ ಎಲ್ಲಾ ನಿರ್ಧಾರಗಳನ್ನು ಮಾಡುತ್ತಾರೆ. ಅವರು ನ್ಯಾಯಯುತವಾಗಿ ನಿರ್ಧಾರ ಮಾಡಬೇಕೆಂದುಕೊಂಡರೂ, ನಿರ್ಧರಿಸುವ ಕ್ರಿಯೆ ಸಹಭಾಗಿತ್ವದಿಂದ ಕೂಡಿಲ್ಲವಾದ್ದರಿಂದ ಪುರುಷರ ನಿರ್ಧಾರಗಳನ್ನು ಎಲ್ಲರೂ ಒಪ್ಪುತ್ತಾರೆ. ಮತ್ತು ಸಮಾಜಕ್ಕೆ ಅದೇ ಸರಿಯಾದುದು ಎಂದು ನಿರ್ಧರಿಸುತ್ತಾರೆ. ಆದರೆ ಅವರು ಹಲವು ಬಾರಿ ನ್ಯಾಯಯುತ ನಿರ್ಧಾರ ಮಾಡುವುದಿಲ್ಲ ಎಂಬುವುದನ್ನು ತಿಳಿಯಬೇಕಾಗಿದೆ.

ವಾಸ್ತವ ಎಂದರೆ ಸಮಾಜದಲ್ಲಿ ದಲಿತ ಮಹಿಳೆ ಕಡೆಗಣಿಸಲ್ಪಟ್ಟವಳೂ, ಮೂಲೆಗೆ ತಳ್ಳಲ್ಪಟ್ಟವಳೂ ಆಗಿದ್ದಾಳೆ. ಮಹಿಳೆಯರು ಜಗತ್ತಿನ ಅರ್ಧಭಾಗವಿದ್ದಾರೆ. ಕೆಲಸದಲ್ಲಿ ಮೂರನೆಯ ಎರಡು ಭಾಗ ಮಾಡುತ್ತಾರೆ. ಆದರೆ ಆದಾಯದಲ್ಲಿ ಕೇವಲ ಹತ್ತನೇ ಒಂದು ಭಾಗ ಅವಳಿಗೆ ದೊರೆಯುತ್ತದೆ. ಆಸ್ತಿಯಲ್ಲಿ ಕೇವಲ ನೂರನೇ ಒಂದು ಭಾಗ ದೊರೆಯುತ್ತಿರುವುದು ವಿಷಾದ.

ಮಹಿಳೆಯ ಆರೋಗ್ಯ ಪುರುಷರ ಆರೋಗ್ಯಕ್ಕಿಂತ ಭಿನ್ನವಾದುದು. ಆರೋಗ್ಯ ಕ್ಷೇತ್ರದಲ್ಲಿ ಅವಳ ಅಸ್ತಿತ್ವವನ್ನು ಕಡೆಗಣಿಸಲಾಗುತ್ತಿದೆ. ಮಹಿಳೆಯ ಆರೋಗ್ಯಮಟ್ಟವನ್ನು ಪುರುಷರ ಆರೋಗ್ಯ ಮಟ್ಟಕ್ಕೆ ಹೋಲಿಸಿದರೆ ವ್ಯತ್ಯಾಸ ಕಾಣುತ್ತದೆ. ಇದಕ್ಕೆ ಕಾರಣವೇನೆಂದರೆ ಮಹಿಳೆಯರು ಹೆಚ್ಚು ಸಾವು ಕಾಯಿಲೆಗಳಿಗೆ

ತುತ್ತಾಗುತ್ತಿರುವುದು. ಪ್ರತಿ ಸಾವಿರ ಪುರುಷರಿಗೆ ಈಗ ೯೨೯ ಮಹಿಳೆಯರಿದ್ದಾರೆ. ಮಕ್ಕಳನ್ನು ಹೆರುವ ವಯಸ್ಸಿನಲ್ಲಿ ಮಾತ್ರ ಮರಣದ ದರ ಅತಿ ಹೆಚ್ಚು. ಏಕೆಂದರೆ ಮಕ್ಕಳನ್ನು ಹೆರುವ ಸಮಯದಲ್ಲಿ ಸರಿಯಾದ ಚಿಕಿತ್ಸೆ ದೊರೆಯದಿರುವುದು. ಇಂದು ಭಾರತದಲ್ಲಿ ಪ್ರತಿ ಲಕ್ಷ ಹೆರಿಗೆಗೆ ೪೦೦ ಕ್ಕೂ ಹೆಚ್ಚು ತಾಯಿಯರು ಮರಣ ಹೊಂದುತ್ತಾರೆ. ೧೯೯೭ರ ಅಂಕಿಸಂಖ್ಯೆಗಳ ಆಧಾರದಿಂದ ಹೇಳುವುದಾದರೆ ಕರ್ನಾಟಕದಲ್ಲಿ ಲಿಂಗ ಪ್ರಮಾಣ ೯೨೩, ಮಾತೃ ಮರಣ ೪೫೦ ಮತ್ತು ಶಿಶು ಮರಣ ೫೮ ಆಗಿದೆ. ಮಹಿಳೆಯರ ಅನಾರೋಗ್ಯದ ಪ್ರಮಾಣ ಪುರುಷರಿಗಿಂತ ಹೆಚ್ಚು. FRCH ಅಧ್ಯಯನದ ಪ್ರಕಾರ ಪ್ರತಿ ಸಾವಿರ ಜನಸಂಖ್ಯೆಯಲ್ಲಿ ಪುರುಷರ ಆರೋಗ್ಯ ಕೆಡುವ ದರ ೫೧೩ ಇದ್ದರೆ, ಮಹಿಳೆಯರಲ್ಲಿ ಇದು ೭೮೦ ರಷ್ಟಿರುತ್ತದೆ. (ನಮ್ಮ ಅಸ್ತಿತ್ವವೂ ಪ್ರಮುಖವಾಗುವ ಜಗತ್ತು, ೨೦೦೨, ಪು. ೯) ಮಹಿಳೆಯರಲ್ಲಿ ಅಪೌಷ್ಟಿಕತೆ ಅತ್ಯಂತ ಹೆಚ್ಚು ಬಹುತೇಕ ಎಲ್ಲಾ ಮಹಿಳೆಯರೂ ರಕ್ತಹೀನತೆಯಿಂದ ಬಳಲುತ್ತಿರುತ್ತಾರೆ. ಆದರೆ ಮಹಿಳೆಗೆ ಈ ಪರಿಸ್ಥಿತಿ ಉಂಟಾಗಲು ಪುರುಷ ಪ್ರಧಾನ ಸಮಾಜವೇ ಕಾರಣವಾಗಿರುತ್ತದೆ.

ಕೆಲಸದ ಅಧಿಕ ಒತ್ತಡ, ನ್ಯೂನ ಪೋಷಣೆ, ಮೇಲಿಂದ ಮೇಲೆ ಗರ್ಭ ಧರಿಸುತ್ತಿರುವುದರಿಂದ ಮಹಿಳೆಯ ಆರೋಗ್ಯ ಅತಿ ಕಳಪೆ ಮಟ್ಟದಿಂದ ಕೂಡಿದೆ. ಒಂದು ಅಧಿಕೃತ ವರದಿಯ ಪ್ರಕಾರ ಶೇಕಡಾ ೩೦-೪೦ ಮಹಿಳೆಯರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಸಾಕಷ್ಟು ಜನ ಪುರುಷರೂ ಸಹ ಬಡವರಿದ್ದಾರೆ ನಿಜ. ಆದರೆ ಬಡತನವು ಮಹಿಳೆಯರ ಮೇಲೆಯೇ ಹೆಚ್ಚು ಪರಿಣಾಮ ಬೀರುತ್ತದೆ ಅದರಲ್ಲೂ ದಲಿತ ಮಹಿಳೆಯರ ಮೇಲೆ.

ಗಣಿ ಕೂಲಿ ಕಾರ್ಮಿಕ ಮಹಿಳೆ ಅತ್ಯಂತ ಬಡವಳಾಗಿದ್ದಾಳೆ. ಅವಳಿಗೆ ಗಣಿ ಬಿಟ್ಟರೆ ಎರಡನೆ ಆದ್ಯತೆ ಕೃಷಿ, ಆದರೆ ಕೃಷಿ ರಂಗ ನಾಶವಾಗಿ ಎರಡನೆಯ ಆದ್ಯತೆಯೂ ಇಲ್ಲವಾಗಿದೆ. ಗಣಿ ಕೆಲಸವನ್ನು ಹುಡುಕಿಕೊಂಡು ವಲಸೆ ಹೋಗುವುದು, ತ್ಯಜಿಸಲ್ಪಟ್ಟ, ಅಥವಾ ಕುಡಿತದಂತಹ ಸಮಸ್ಯೆಗಳಿಂದಾಗಿ ಮಹಿಳೆಯಲ್ಲಿ ಮನೆಯನ್ನು ನಿಭಾಯಿಸುತ್ತಿದ್ದಾಳೆ. ಹೆಚ್ಚಿನ ಮಟ್ಟಿಗೆ ಅಥವಾ ಎಷ್ಟೋ ಬಾರಿ ಪೂರ್ಣ ಮಹಿಳೆಯರದೇ ಆದಾಯ ಆಗಿರುತ್ತದೆ. ಇಲ್ಲಿ ಮಹಿಳೆಗೆ ಕೊಡುವ ಕೂಲಿ ಪುರುಷನಿಗಿಂತಲೂ ಕಡಿಮೆಯಾಗಿರುವುದರಿಂದ, ಗಂಡಮಕ್ಕಳ ಆರೋಗ್ಯ ಆಹಾರದ ಬಗ್ಗೆ ಗಮನಹರಿಸುವುದರಿಂದ ಸ್ವತಹ ಅವರೇ ಅಪೌಷ್ಟಿಕತೆಯಿಂದ/ಅನಾರೋಗ್ಯದಿಂದ ನರಳುತ್ತಿರುತ್ತಾರೆ.

ಗಣಿಯಲ್ಲಿ ಒಂದೇ ಮಟ್ಟದ ಕೆಲಸಕ್ಕೆ ಮಹಿಳೆಯರಿಗೆ ಪುರುಷರಿಗಿಂತ ಕಡಿಮೆ ಕೂಲಿ ಸಿಗುತ್ತದೆ. ಅಲ್ಲದೆ ಸಾಮಾನ್ಯವಾಗಿ ಇಲ್ಲಿ ಮಹಿಳೆಯರು ಕಲ್ಲು ಒಡೆಯುವುದು, ಕಲ್ಲು ಪುಡಿ ಮಾಡುವುದು, ಜರಡಿ ಹಿಡಿಯುವುದು, ಕಲ್ಲು ಗ್ರೇಡ್ ಮಾಡುವುದು, ಕಲ್ಲು ಆರಿಸುವುದು, ಕಲ್ಲು ಹೊರುವುದು, ಭೂಮಿ ಅಗೆಯುವುದು, ಲೋಡಿಂಗ್ ಮಾಡುವುದು, ಕಸಗುಡಿಸುವುದು, ಟೀ ಮಾಡುವುದು, ರೆಡ್ಆಕ್ಸೈಡ್ ಪುಡಿಯನ್ನು ಚೀಲಗಳಿಗೆ ತುಂಬುವುದು ಮತ್ತು ಅತೀ ಸಣ್ಣ ಗುತ್ತಿಗೆದಾರರು ಇವೇ ಕೆಲಸಗಳಲ್ಲಿ ಮಹಿಳಾ ಕೂಲಿಗಳು ದುಡಿಯುತ್ತಿದ್ದಾರೆ. ಆದರೆ ಇವರಿಗೆ ಯಾವುದೇ ಅಕ್ಷರಜ್ಞಾನ ಇಲ್ಲದಿರುವುದರಿಂದ ಇವರ ಶ್ರಮಶಕ್ತಿ ಕೌಶಲ್ಯರಹಿತವಾಗಿ ಅತಿ ಹೆಚ್ಚಿನ ಶ್ರಮದಾಯಕ ಕೆಲಸಗಳನ್ನು ಕಡಿಮೆ ಕೂಲಿಗೆ ಮಾಡುತ್ತಾರೆ. ೨೦೦೧ರ ಜನಗಣತಿ ಪ್ರಕಾರ ಮಹಿಳೆಯರ ಸಾಕ್ಷರತೆ ೪೬.೪ ರಷ್ಟಿದ್ದರೆ, ಪುರುಷರ ಸಾಕ್ಷರತೆ ೭೧.೮೬ ರಷ್ಟಿದೆ. ಕಡಿಮೆ ಕೂಲಿ ಕೊಡಬಹುದು ಎಂಬ ಕಾರಣಕ್ಕಾಗಿ ಬಂಡವಾಳಿಗರು ಅಧಿಕವಾಗಿ ಮಕ್ಕಳನ್ನು

ದುಡಿಸಿಕೊಳ್ಳುತ್ತಿದ್ದಾರೆ. ಗಣಿಗಾರಿಕೆಯಲ್ಲಿ ಹೆಚ್ಚಾಗಿ ಕೆಳಜಾತಿಯ ಮಹಿಳೆಯರು ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ. ಅಲ್ಲಿ ಉನ್ನತ ಕೆಲಸವನ್ನು ಮಹಿಳೆಯರು ಮಾಡುತ್ತಿದ್ದಾರೆ ಎಂದಾದರೆ ಅವರು ಉನ್ನತ ಜಾತಿ/ವರ್ಗದ ಮಹಿಳೆಯರಾಗಿರುತ್ತಾರೆ.

ಗಣಿ ಕೂಲಿ ಮಹಿಳೆಗೆ ಅಸಂಘಟಿತ ವಿಭಾಗಗಳಲ್ಲಿ ಸರಿಯಾದ ಸಾಮಾಜಿಕ ಸೌಲಭ್ಯಗಳು ದೊರೆಯುತ್ತಿಲ್ಲ. ಅಲ್ಲದೆ ಕೆಲಸದ ವಾತಾವರಣ ಶೋಚನೀಯದಿಂದ ಕೂಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಧರ್ಮಸಾಗರದ ಸರೋಕ್ಕ ಈ ರೀತಿ ಹೇಳುತ್ತಾರೆ "ನನ್ನ ಹೆಸರು ಸರೋಕ್ಕ, ವಯಸ್ಸು ಗೊತ್ತಿಲ್ಲ. ನನ್ನ ಸ್ವಂತ ಊರು ಪಾಪಿನಾಯಕನಹಳ್ಳಿ. ಆದ್ರ ನಾನೇ ಇಲ್ಲೇ ಅದೀನಿ. ನಮ್ಮ ಮನೆಯಲ್ಲಿ ಆರು ಜನ ಇದೀವಿ. ಇಬ್ಬರು ಲೋಡಿಂಗ್‌ಗೆ ಹೋಗ್ತಾರೆ. ನಾನು ಫ್ಯಾಕ್ಟರಿಗೆ ಹೋಗ್ತೀನಿ. ಇಬ್ಬರು ಮಕ್ಳು ಇದಾರೆ ನನ್ನ ತಂಗಿಯವು. ಒಬ್ಬ ಹುಡುಗ ಮೊದಲು ಶಾಲೆಗೆ ಹೋಗ್ತಿದ್ದ. ಈಗ ಬಿಟ್ಟಾನ. ಅವನೇ ಬಿಟ್ಟುಬಿಟ್ಟ. ಇಷ್ಟ ಇಲ್ಲ ಅಂತ. ಮುಂಜಾಲಿ ೮ ಕ್ಕೆ ಹೋಗಿ ೫ ಕ್ಕೆ ಬರ್ತೀವಿ. ನೈಟ್ ಶಿಫ್ಟ್ ಕೊಟ್ರೆ ಹೋಗ್ತೀವಿ. ಇಲ್ಲ ಅಂದ್ರೆ ಇಲ್ಲ. ನೈಟ್ ಶಿಫ್ಟ್ ೯ ಗಂಟೆತನಕ ಬಾಳ ಸಾರಿ ಮಾಡೀನಿ. ನಾನು ಗಣಿ ಕೆಲಸ ಬಿಟ್ಟು ಬೇರೆ ಕೆಲ್ಸಕ್ಕೆ ಹೋಗಲ್ಲ. ಈ ಕೆಲಸ ಇಲ್ಲ ಅಂದ್ರೆ ಮನೆನಲ್ಲೇ ಇರ್ತೀನಿ. ನನಗೆ ಸಣ್ಣಾಕಿ ಇದ್ದಾಗೆ ಲಗ್ನ ಆಗ್ಯಾದ. ನಾನು ದೊಡ್ಡಾಕಿ ಆಗೋದರಾಗ ಗಂಡ ತೀರಿಕೆಂಬಿಟ್ಟ. ಅದಕ್ಕ ತವರು ಮನಿನಾಗೆ ತಾಯಿ ನೋಡ್ಕಂಡು ಗಣಿ ಕೆಲ್ಸಕ್ಕೆ ಹೋಗ್ಕಂಡು ಇದ್ದು ಬಿಟ್ಟೀನಿ.

ನಮ್ಮಲ್ಲಿ ಗಂಡುಮಕ್ಳಲ್ಲಿ ಇದ್ದಂಗೆ ಯಾವುದೇ ತರ ಸಂಘಗಳಿಲ್ಲ. ನಮ್ಮದು ಯಾವಾಗಲು ಕೆಲ್ಸ ಇರತ್ತೈತಿ. ದಿನಕ ೩೮ ರೂಪಾಯಿ ಕೊಡ್ತಾರಾ. ಮೊದಲು ೩೭ ರೂಪಾಯಿ ಕೊಡ್ತಾ ಇದ್ರು. ಈಗ ೩೮ ರೂಪಾಯಿ ಕೊಡ್ತಾರ. ವರ್ಷಕ್ಕೆ ಕೂಲಿನ ಎರಡು ರೂಪಾಯಿ ಏರಿಸ್ತಾರೆ. ಬೇರೆ ಗಣಿಗಳಾಗ ಮಕ್ಳಿಗೆ ಬುಕ್ಸ್ ಬಟ್ಟೆ ರೊಕ್ಕ ಕೊಡ್ತಾರಂತೆ. ಆದ್ರ ಡಾಲ್ಮಿಯ ನಿಂತುಹೋಗ್ಯೆತಿ. ಅವರು ನಮ್ಮ ಮಕ್ಳಿಗೆ ಏನು ಕೊಡ್ತಾ ಇಲ್ಲ. ಗಂಡುಮಕ್ಳಿಗೆ ೫೦ ರೂಪಾಯಿ ಕೊಡ್ತಾರೆ. ಗಂಡು ಮಕ್ಳಿಗೆ ಯಾಕೆ ಜಾಸ್ತಿ ಕೂಲಿ ಕೊಡ್ತೀರಿ? ನಮಗ್ಯಾಕೆ ಕಡಿಮೆ ಕೂಲಿ? ನಾವು ಅವರಷ್ಟೇ ಕೆಲ್ಸ ಮಾಡ್ತೀವಲ್ಲಾ. ಅಂತ ಕೇಳಿದರೆ ಏನು ಗಂಡು ಮಕ್ಳು ತರ ಕಷ್ಟದ ಕೆಲ್ಸ ಮಾಡ್ತೀರೇನೋ ನೀವು ಹೆಣ್ಣುಮಕ್ಳು ಅಂತಾರೆ. ಇಲ್ಲಿ ಕೆಲಸ ಮಾಡಲು ರೆಡ್ಡಿಗರು, ಕುರುಬರು, ಹರಿಜನರು, ನಾಯಕರು, ಚಲವಾದಿಗಳು ಎಲ್ಲಾ ಮಂದಿನೂ ಬರ್ತಾರೆ. ಇಲ್ಲಿ ಕೆಲ್ಸ ಮಾಡಲು ನಮ್ಮ ಮೈನ್ಸ್‌ನವರೆ ಟ್ರೈನಿಂಗ್ ಕೊಡ್ತಾರೆ.

ಕೆಲ್ಸ ಮಾಡುವಾಗ ಏನಾದರೂ ಗಾಯ ಆದ್ರೆ, ಮೈನ್ಸ್‌ನವರೇ ತೋರಿಸ್ತಾರೆ. ಮನೆಯಲ್ಲಿದ್ದಾಗ ಏನಾದರೂ ಆದ್ರೆ ನಾವೇ ತೋರಿಸ್ಕೊಂಬೇಕು. ಮೊದಲು ಗಾದಿಗನೂರಿನಲ್ಲಿ ಇದ್ದಿಲು ತುಂಬೋಕ್ಕೋಗ್ತಿದ್ವೆ. ಕೆಲ್ಸಕ್ಕೆ ಹೋಗ್ದೆ ಇದ್ರೆ ಗಣಿನಲ್ಲಿ ಕೂಲಿ ಕಟ್ಟು ಮಾಡ್ತಾರೆ. ಇಲ್ಲಿ ಡೆಲಿವರಿ ರಜಾ ಅಂತದ್ದೇನು ಇಲ್ಲ. ಇಲ್ಲಿ ಧೂಳಿನಿಂದ ಬಾಳ ತೊಂದರೆ ಆಗತ್ಯೆತಿ. ಎದೆನೋವು, ಕೈಕಾಲು ಹರಿತ, ನಡು ನೋವು ಬರ್‍ತೈತಿ. ವಾರಕ್ಕೆ ಒಂದು ದಿನ ರಜಾ ಕೊಡ್ತಾರೆ. ನಾವು ಕೆಲಸ ಮಾಡೋ ಹತ್ರ ಯಾವ ಲೇಬರ್ ಆಫೀಸರ್‌ಗಳು ಬರಲ್ಲ. ಅಲ್ಲಿ ಯಾವುದೇ ಸೌಕರ್ಯ ಇಲ್ಲ. ಅಲ್ಲಿ ದೊಡ್ಡಿಗೋಗಲಿಕ್ಕೆ ಬಹಳ ತೊಂದರೆ. ತುಂಬಾ ದೂರ ಹೋಗ್ಬೇಕು. ಇಲ್ಲಿ ಯಾರು ಮನಿನಾಗ ಇಲ್ಲದಿರೋರು ಸಣ್ಣ ಮಕ್ಳನ್ನ ತಮ್ಮ ಜೊತಿನಾಗೇ ಕರಕಂಬರ್ತಾರೆ. ಅವು ಮಣ್ಣು ಅಂದ್ರೆ ಮಣ್ಣಲ್ಲಿ, ಕಲ್ಲು ಅಂದ್ರೆ ಕಲ್ಲಲ್ಲೇ ಆಡಿಕೆಂತಾ ಮಣ್ಣು ತಿಂದೇ

ಬದುಕುತಾವೇ. ಕುಡಿಯೋಕು ಕೂಡ ಇಲ್ಲಿ ನೀರು ಇಲ್ಲ. ತುಂಬಾ ದೂರದಿಂದ ನೀರು ತಗಂಬರಬೇಕು. ಒಟ್ಟಾಗಿ ನೋಡ್ರಿ ಎಲ್ಲಕ್ಕೂ ತಾಪತ್ರಾನೇ ಇಲ್ಲಿ. ಏನೂ ಗತಿ ಇಲ್ದೆ, ಇಲ್ಲಿ ಕೆಲ್ಸ ಮಾಡಬೇಕಾಗೈತಿ. ಇಲ್ಲಿ ಬರೋ ಕೂಲಿ ಕೂಡಾ ಸಾಕಾಗಲ್ಲ. ಹೊಲದ ಕೆಲ್ಸಕ್ಕೆ ತುಂಬಾ ಕಡಿಮೆ ಕೂಲಿ ಕೊಡ್ತಾರೆ. ಅದೂ ಸಾಕಾಗಲ್ಲ ಅಂತ ಇಲ್ಲಿ ಬಂದ್ರೆ, ಇಲ್ಲಿ ಕೂಡಾ ಅದೇ ರೀತಿ ಐತಿ. ಸ್ವಲ್ಪ ಜಾಸ್ತಿ ಕೂಲಿ ಕೊಟ್ಟು ಜಗ್ಗಿ ದುಡಿಸಿಕೆಂತಾರ. ವಾರಕ್ಕೆ ಮನಿಗೆ ಸಾಮಾನು ತರೋಕೇ ಸಾಕಾಗೋದಿಲ್ಲ. ಇನ್ನು ಆಸ್ಪತ್ರಿಗೆ ಏನಾರ ಹೋಗಬೇಕು ಅಂದ್ರೆ ಸಾಲ ಮಾಡಿಕೊಂಡು ಹೋಗಿ ತೋರಿಸಿಕೆಂತೀವಿ. ಏನೂ ಉಳಿತಾಯಾನೂ ಮಾಡಕಾಗಲ್ಲ. ಬಾರ ಹೊರುತೀವಲ್ಲ. ಜಗ್ಗಿ ಮೈಕೈನೋವು ಬರತೈತಿ. ಸಾಯಂಕಾಲ ಕುಡಿಯಲೇ ಬೇಕು. ಇಲ್ಲಂದ್ರೆ ನಿದ್ದಿ ಬರಂಗಿಲ್ಲ. ಒಂದು ಪಾಕೆಟ್‌ಗೆ ೧೫ ರೂಪಾಯಿ ಹೊರಟೋಗ್ತಾದೆ. ಇನ್ನು ಉಳಿಸೋದು ಎಲ್ಲಿಂದ ಬಂತು.

ಇನ್ನೂ ಕೆಲ್ಸ ಮಾಡೋ ಹತ್ರ ಗಂಡುಮಕ್ಳ ಕಾಟ ಬ್ಯಾಡ. ಅವರು ಹೇಳಿದಂಗೆ ಕೇಳ್ಬೇಕು. ಇಲ್ಲಾಂದ್ರೆ ಬಾಳ ಕೆಲ್ಸ ಕೊಡ್ತಾರೆ. ಬಾರ ತಲಿಮ್ಯಾಲೆ ಎತ್ತೋವಾಗ ಜೋರಾಗಿ ಕುಕ್ಕುತ್ತಾರೆ. ಕೈ ಎಳೆಯೋದು, ಕಾಲನ್ನು ತಗಲ್ಸೋದು, ಚಿವುಟೋದು, ಕಣ್ಣೊಡೆಯುವುದು ಮಾಡ್ತಾರ ಕೆಲವರು ಅವರಿಗೆ ತಕ್ಕಂಗೆ ನಡಕಾತಾರ. ನಮಗ ಆಗಂಗಿಲ್ಲ ನೋಡ್ರಿ, ಅಂಗೇ ಸಿಟ್ಟು ಬರತೈತಿ ಅವರ ಮ್ಯಾಲ. ಆದ್ರ ಏನೂ ಮಾಡ್ಬೇಕು ಬಿಡ್ರಿ, ಏನೂ ಮಾಡಿದ್ರೂ ಅವರು ಚಟ ಅವರು ಬಿಡಂಗಿಲ್ಲ. ಹೊಟ್ಟೆಪಾಡು ಎಂಗೋ ಕೆಲ್ಸ ಮಾಡ್ಬೇಕು ಅಷ್ಟೇ" ಎಂದು ಹೇಳುತ್ತಾರೆ.

ಗಣಿ ಮಹಿಳಾ ಕೂಲಿಗಳ ಕೆಲಸ ಅಸಂಘಟಿತ ವಿಭಾಗವಾಗಿರುವುದರಿಂದ ಅವರು ಕಂಟ್ರಾಕ್ಟರ್‌ಗಳ ವಿರುದ್ಧ, ತನಗೆ ಹಿಂಸೆ ಕೊಡುವವರ ವಿರುದ್ಧ, ಮಾಲಿಕರ ವಿರುದ್ಧ ಹೋರಾಡಲು ಆಗದಿರುವುದರಿಂದ ಈ ವಿಭಾಗದಲ್ಲಿಯೂ ಅವಳಿಗೆ ಕೆಲಸ ಸಿಗದೆ ಹೋಗುತ್ತಿದೆ. ಬಡತನದೊಂದಿಗೆ ಹೆಚ್ಚು ಮಕ್ಕಳು ಆಗುವುದರಿಂದ ಮಕ್ಕಳು ಕಡಿಮೆ ತೂಕದ/ಹುಟ್ಟಿ ಸಾಯುವ/ಸತ್ತು ಹುಟ್ಟುವ ಮಕ್ಕಳಾಗುತ್ತವೆ. ಪದೇ ಪದೇ ಹೆರುವುದು, ಬೇಗ ಹೆರುವುದು, ಮಾರನೇ ದಿನವೇ ಗಣಿ ಕೆಲಸಕ್ಕೆ ಹೋಗುವುದು, ಗರ್ಭಿಣಿ ಇದ್ದಾಗಲೂ ಕಷ್ಟದ ಕೆಲಸದಲ್ಲಿ ತೊಡಗುವುದು, ಹೆಚ್ಚು ಮಕ್ಕಳನ್ನು ಹೆರುವುದು ಇದೂ ಬಡ ಗಣಿ ಕೂಲಿ ಮಹಿಳೆಯ ಅನಾರೋಗ್ಯದಲ್ಲಿ ಬಹುಮುಖ್ಯ ಪಾತ್ರವಹಿಸುತ್ತದೆ. ಇವರಿಗೆ ಮಕ್ಕಳೇ ಭವಿಷ್ಯ ನಿಧಿ. ಮಕ್ಕಳು ಹೆಚ್ಚಾದಷ್ಟು ಅಧಿಕ ಆದಾಯ ಬರುವುದೆಂದು ಇವರು ನಂಬುತ್ತಾರೆ. ಆದರೆ ತನಗೆ ಆಗುವ ಅನಾರೋಗ್ಯದ ಬಗ್ಗೆ ಯೋಚಿಸುವುದಿಲ್ಲ.

ಕ್ಷಯ ಮಹಿಳೆಯ ಸಾವಿಗೆ ಅತೀಮುಖ್ಯ ಕಾರಣ. ಗರ್ಭಿಣಿಯಿರುವಾಗ ಮರಣ ಹೊಂದುವ ಮಹಿಳೆಯರಲ್ಲಿ ನಾಲ್ಕು ಮಂದಿ ಕ್ಷಯ ರೋಗದಿಂದ ಸಾಯುತ್ತಾರೆ. ಆರೋಗ್ಯಪೂರ್ಣ ವ್ಯಕ್ತಿಗಿಂತ ದುರ್ಬಲ, ರಕ್ತಹೀನತೆಯಿಂದ ಕೂಡಿದ ಗಣಿಕೂಲಿ ಮಹಿಳೆಯರ ದೇಹಕ್ಕೆ ಕ್ಷಯ ಬರುವುದು ಹೆಚ್ಚು. ಮೂತ್ರನಾಳದ ಸೋಂಕು ಕೂಡಾ ಮಹಿಳೆಯರಿಗೆ ಹೆಚ್ಚು. ಏಡ್ಸ್ ಬರುವುದು ಕೂಡಾ ಹೆಚ್ಚಾಗಿ ಮಹಿಳೆಯರಿಗೆ ಎಂಬುವುದಕ್ಕೆ ಇದೇ ಕಾರಣ.

ಮನೆಯಲ್ಲಿ ಗಂಡನ ಪೋಷಣೆ, ಮಕ್ಕಳ ಪೋಷಣೆ, ಗಣಿಯಲ್ಲಿ ಸುಸ್ತಾಗುವ ಕೆಲಸ, ಧೂಳು ಶಬ್ದದಿಂದ ಕೂಡಿದ ಕೆಲಸ ಎಂದೂ ಅವಳದೇ ಆಗಿರುತ್ತದೆ. ಆ ಕೆಲಸಕ್ಕೆ ಅವಳಿಗೆ ಪ್ರತಿಫಲವೂ, ವಿಶ್ರಾಂತಿಯೂ ಇರುವುದಿಲ್ಲ. ಈ ಕಾರಣಕ್ಕಾಗಿ ಅವಳ ಪಾಲಿಗೆ ದಿನ ಮುಗಿಯುವುದೇ ಇಲ್ಲ.

ಗಣಿಯಲ್ಲಿ ಮಹಿಳಾ ಕೂಲಿಗಳಿಗೆ ವಾರಾಂತ್ಯ ರಜಾ ದಿನಗಳೂ ಇಲ್ಲ, ರಜಾ ಹಾಕಿದರೆ ಒಂದು ದಿನದ ಕೂಲಿ ಹೋಗುತ್ತದೆ. ಆ ದಿನದ ಊಟದ ಸ್ಥಿತಿಯನ್ನು ನೆನೆದು ಅತಿಯಾಗಿ ದುಡಿಯುವುದರಿಂದ, ಇದರೊಂದಿಗೆ ಬಡತನ, ಅಷ್ಟೇ ಸಾಕು ಮಹಿಳೆಯರಿಗೆ ಆರೋಗ್ಯ ಸಮಸ್ಯೆ ಉಂಟಾಗಲು. ಗಣಿ ಪ್ರದೇಶದಲ್ಲಿ ಚಿಕ್ಕ ಡೇರೆಗಳು, ಅಡಿಗೆ ಕೆಲಸ, ಕೂಲಿ ಕೆಲಸ, ಸಂಡಾಸು ವ್ಯವಸ್ಥೆ ಇಲ್ಲದಿರುವುದು, ಖಾಸಗಿತನಕ್ಕಂತೂ ಅವಕಾಶ ಇಲ್ಲದಿರುವುದು, ನೀರಿನ ಸಮಸ್ಯೆ ಇವೆಲ್ಲವೂ ಅವಳನ್ನು ಮಾನಸಿಕ ಒತ್ತಡಕ್ಕೆ ಸಿಲುಕಿಸಿದೆ. ಅತಿಯಾದ ಬಡತನ, ಮಾಹಿತಿಯ ಕೊರತೆಯಿಂದ ಅವಳು ವೈದ್ಯಕೀಯ ಚಿಕಿತ್ಸೆಗೆ ಒಳಗಾಗಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ವೈದ್ಯಕೀಯ ಸೌಲಭ್ಯದ ಕೊರತೆ ಜಿಲ್ಲೆಯಲ್ಲಿ ತುಂಬಾ ಇದೆ.

ಗಣಿಗಾರಿಕೆ ಯಾವಾಗಲೂ ಅನಾರೋಗ್ಯಕರವಾಗಿರುತ್ತದೆ. ಗಣಿ ಕಾರ್ಮಿಕರು ಮತ್ತು ಗಣಿಗಾರಿಕೆಯ ಸುತ್ತಮುತ್ತಲಿರುವ ಜನಸಮುದಾಯ ನಿರಂತರವಾಗಿ ಹಾನಿಕಾರಕ ಧೂಳು ಹಾಗೂ ಅಪಾಯಕಾರಿ ವಸ್ತುಗಳಿಂದ ಸದಾ ಬಲಿಯಾಗುತ್ತಿರುತ್ತಾರೆ. ಎಷ್ಟೋ ವರ್ಷಗಳ ಹಿಂದೆ ಗಣಿಗಾರಿಕೆ ನಡೆದು ಈಗ ಸ್ಥಗಿತಗೊಂಡಿರುವ ಗಣಿ ಪ್ರದೇಶಗಳಲ್ಲಿಯೂ ಜನಸಮುದಾಯ ಈಗಲೂ ಕೂಡಾ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಗಣಿ ಈಗ ನಡೆಯುತ್ತಿದೆ ಎಂದರೆ ಆ ಪ್ರದೇಶದ ಭೀಕರ ಸ್ಥಿತಿ ಊಹೆಗೂ ನಿಲುಕುವುದಿಲ್ಲ. ನೋಡಿದವರಷ್ಟೇ ಅದನ್ನು ಊಹೆ ಮಾಡಲು ಅದರ ಪರಿಣಾಮವನ್ನು ಗ್ರಹಿಸಲು ಸಾಧ್ಯ.

ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಗಣಿಯ ಮಾಲಿಕರು ಉಚಿತ ರೇಷನ್‌ಕಾರ್ಡು ಕೊಡುವ, ಮೊದಲ ಮಗಳಿಗೆ ಬುಕ್ಸ್, ಸ್ಕಾಲರ್‌ಶಿಪ್ ಕೊಡುವ, ಬಸ್ ಪಾಸ್ ವಿತರಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದರ ಉದ್ದೇಶವಿಷ್ಟೇ ಗಣಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಆಗುವ ಯಾವುದೇ ತೊಂದರೆಗಳ ಕುರಿತು ಕಾರ್ಮಿಕರು ಚಕಾರ ಎತ್ತದೆ ಇರುವಂತೆ ಬಾಯಿ ಮುಚ್ಚಿಸುವ ಕ್ರಮ ಇದು. ಆದರೆ ಕಾರ್ಮಿಕರಿಗೆ ಇದು ಹೇಗೆ ಅರ್ಥವಾಗಬೇಕು? ಒಂದು ಕಡೆ ಸಹಾಯ ಮಾಡುವ ನಾಟಕವಾಡಿ ಇನ್ನೊಂದೆಡೆ ಕಾರ್ಮಿಕರ ಅನಾರೋಗ್ಯಕ್ಕೆ ಹದ್ದುಗಳಾಗುತ್ತಾರೆ. ಕಾರ್ಮಿಕನ ದೇಹದ ಒಂದಿನಿತು ರಕ್ತ, ಮಾಂಸ, ಮೂಳೆ ಬಿಡದೆ ತಿನ್ನುತ್ತಾರೆ. ಆದರೆ ಕೊನೆಯವರೆಗೂ ಇದು ಕಾರ್ಮಿಕರಿಗೆ ಗೊತ್ತಾಗುವುದೇ ಇಲ್ಲ. ಕಾರ್ಮಿಕರು ಇದನ್ನು ಗುರುತಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದಿಲ್ಲ. ನಿಜವಾದ ದುರಂತ ಇದು. ಇದೇ ಕಥೆ ಡಣಾಪುರದ ಹನುಮಕ್ಕನವರ ಕುಟುಂಬದಲ್ಲೂ ಜರುಗಿದ್ದು.

"ಮೊದಲಿನಿಂದಲೂ ಅಪ್ಪ ಅಮ್ಮ ಇಬ್ರೂ ಮೈನಿಂಗ್ ಕೆಲ್ಸಕ್ಕೆ ಹೋಗ್ತೀದ್ರು. ಅಪ್ಪ ಹೋಗೋ ಮುಂಚೇನೇ ಚಿಕ್ಕಪ್ಪೋರು ಇಬ್ರು ಮೈನಿಂಗ್ ಲೋಡ್ ಮಾಡೋಕ ಹೋಗ್ತಾ ಇದ್ರು. ಚಿಕ್ಕ ವಯಸ್ಸಿಗೆ ಹೋಗ್ತಾ ಇದ್ರು. ನಮ್ಮ ಕೂಡುಕುಟುಂಬ ಬ್ಯಾರೆ ಬ್ಯಾರೆ ಆದಮ್ಯಾಲೆ ನಮಗೆ ಬಾಳ ಕಷ್ಟ ಆತು. ನಾವು ಐದು ಜನ ಮಕ್ಳು. ದುಡಿಯೋರು ಯಾರೂ ಇಲ್ಲ. ಏನೂ ಇಲ್ಲ. ಸಾಲ ಜಗ್ಗಿ ಹಾಗ್ಬಿಟ್ಟದ ಮನೆಕಟ್ಟೊ ಸಲುವಾಗಿ. ತಮ್ಮ ಮೂಕ ಬ್ಯಾರೆ. ತಮ್ಮ ಮೂಕ ಅಂತ ಗೊತ್ತಾಗಿದ್ರಿಂದ ಅಮ್ಮ ತುಂಬಾ ನೊಂದಾಳ. ಏನಾಯ್ತು ನನ್ನ ಹಣೆಬರ. ಇಷ್ಟು ಕಷ್ಟದಾಗ ಮಗ ಮೂಕ ಹುಟ್ಯಾನ ಅಂತ ಹೇಳಿ ನನಗೆ ಇದೆಲ್ಲ ಗೊತ್ತಾಗಿದ್ದು ಐದ್ನೆ ಕ್ಲಾಸ್‌ನಲ್ಲಿದ್ದಾಗ. ನವೋದಯ ಪರೀಕ್ಷೆ ಬರೀಲಿಕ್ಕ ನಮ್ಮ ಶಾಲೆಯಿಂದ ಹತ್ತು ಜನನ ಕಳುಹಿಸಿದ್ರು. ಅದರಲ್ಲಿ ನನ್ದು ರ್‍ಯಾಂಕು ಬಂತು. ನಮ್ಮ ಮೇಷ್ಟ್ರು ನಮ್ಮ ಅಪ್ಪನ್ನ ಕರ್‍ದು

ನಿಮ್ಮ ಮಗ್ಳನ್ನ ತಿಮ್ಮಾಲಾಪುರಿಗೆ ಕಳ್ಸು, ಚೆನ್ನಾಗಿ ಓದ್ತಾಳ ಅಂತ ಹೇಳಿದ್ರು. ಆಗ ನಮ್ಮ ಅಪ್ಪ ಬಂದು ಇಲ್ಲರೀ ನಾವು ಮೈನಿಂಗ್ ಕೆಲ್ಸಕ್ಕ ಹೋಗ್ತೀವ್ರಿ. ಅಡಿಗೆ ಮಾಡಾಕ ಆಗಲ್ಲ. ಆಕಿನೆ ಮಾಡ್ಬೇಕು ಅಂತ ಹೇಳಿದ್ರು. ನಾನು ಚಿಕ್ಕವಳಿಂದಲೇ ಮನೆನಲ್ಲಿ ಮುಸುರಿ ತೊಳೆದು ನಮ್ಮಮ್ಮ ಮೈನಿಂಗ್ ಕೆಲ್ಸದಿಂದ ಬರೋ ಅಷ್ಟರಲ್ಲಿ ಮನಿನಲ್ಲಿ ಇರೋ ಎಲ್ಲಾ ಕೆಲ್ಸಾನು ಒಬ್ಬಾಕಿನೆ ಮಾಡ್ತಿದ್ದೆ.

ಬೆಳಗ್ಗೆ ನಾಲ್ಕು ಗಂಟೆಗೆ ಅಪ್ಪ ಅಮ್ಮ ಇಬ್ರೂನೂ ಮೈನಿಂಗ್ ಕೆಲ್ಸಕ್ಕೆ ಹೋಗ್ತೀದ್ರು. ನಮ್ಮ ಅಪ್ಪ-ಅಮ್ಮ, ಚಿಕ್ಕಪ್ಪ-ಚಿಕ್ಕಮ್ಮ, ಇನ್ನೊಬ್ಬ ಚಿಕ್ಕಪ್ಪ ಚಿಕ್ಕಮ್ಮ ನಮ್ಮ ಒಟ್ಟು ಕುಟುಂಬಾನೆ ಮೈನಿಂಗ್ ಕೆಲ್ಸಕ್ಕೆ ಹೋಗ್ತಾ ಇದ್ರು. ನಮ್ಮೂರಲ್ಲಿ ಮೊದ್ಲು ಮೈನಿಂಗ್‌ಗೆ ಹೋಗಿದ್ದು ಅಂದ್ರೆ ನಮ್ಮ ಕುಟುಂಬದವರೆ. ಗುತ್ತಿಗೆ ಕೆಲ್ಸ ನಾವು ಎಷ್ಟು ಮಾಡ್ತೀವಿ ಅಷ್ಟು ಬರ್‍ತಾ ಇತ್ತು. ರಾತ್ರಿ ಎರಡು ಗಂಟೆಗೆ ಹೋಗಿ ಬ್ಲಾಸ್ಟ್ ಮಾಡ್ಕೊಂಡು ಅವರಿಗೆ ಗೊತ್ತಿರೋ ಸಾರ್‌ಗೆ ಜಲ್ದಿ ಬರ್‍ತೀವಿ ಅಂತೇಳಿ ಹೇಳ್ಬಿಟ್ಟು ಬರ್‍ತಾ ಇದ್ರು. ಆ ಕೆಲ್ಸನ ಇವ್ರು ಯಾವಾಗ ಬೇಕಾದ್ರು ಮಾಡಿಕೊಡಬಹುದಿತ್ತು. ಕೆಲ್ಸ ಮುಗಿಸಿ ರಾತ್ರಿ ಹತ್ತಕ್ಕೆ ಹನ್ನೊಂದಕ್ಕೆ ಬರ್‍ತಿದ್ರು. ಮತ್ತೆ ನಾಲ್ಕು ಗಂಟೆಗೆ ಹೋಗ್ತಿದ್ರು. ಹಿಂಗೆ ಕಾಂಪಿಟೇಷನ್ ಜಾಸ್ತಿ ಇತ್ತಲ್ಲ, ಯಾಕಂದ್ರೆ ಮೈನಿಂಗ್‌ಗೆ ಊರಲ್ಲಿ ತುಂಬಾ ಜನ ಹೋಗ್ತಿದ್ರು. ಅವ್ರೂ ಬೇಗ ಹೋಗ್ತಾರೆ, ಇವ್ರೂ ಬೇಗ ಹೋಗ್ತಾರೆ. ನಾವು ಬೇಗ ಹೋಗ್ಬೇಕು ಜಾಸ್ತಿ ಕೆಲ್ಸ ಮಾಡಿ ಜಾಸ್ತಿ ಸಂಪಾದಿಸಬೇಕು ಅಂತೇಳಿ ಅದನ್ನು ಒಂದು ಹಠವಾಗಿ ಸ್ವೀಕರಿಸಿದ್ರು. ಅದರಲ್ಲಿ ನಮ್ಮಮ್ಮಗ ಆಗ್ತಾ ಇರ್‍ಲಿಲ್ಲ. ಮೊದ್ಲೆಲ್ಲ ಜಗ್ಗಿ ಬಡಿಸ್ಕೊಂಡಿದ್ರಿಂದ ತುಂಬ ವೀಕಾಗಿದ್ಲು. ಆಗ್ಲು ನಮ್ಮಪ್ಪ ಕುಡಿದು ಜಗ್ಗಿ ಬಡಿತಿದ್ರು, ಎಲ್ಲಾನು ಅಪ್ಪ ಹೇಳಿದಂಗೆ ಮಾಡಬೇಕಾಗಿತ್ತು. ಆದ್ರೂ ಎಲ್ಲಾರು ಹೋದ್ಮೇಲೇನೆ ನಮ್ಮ ಅಪ್ಪ, ಅಮ್ಮ ಹೋಗ್ತಾ ಇದ್ರು. ರಾತ್ರಿ ಒಂಬತ್ತಕ್ಕೆ ಹತ್ತಕ್ಕೆ ಬರ್‍ತಾ ಇದ್ರು. ಅವ್ರು ಬರೋ ಅಷ್ಟರಲ್ಲಿ ನಾವು ಉಂಡು ಮಲಗಿಬಿಡ್ತಾಇದ್ವಿ. ಹೊಲದಾಗೆ ವರ್ಷದಿಂದ ವರ್ಷಕ್ಕೆ ಇಳುವರಿನೂ ಕಡಿಮೆ ಆಯ್ತು. ಊಟಕ್ಕೆ ಬಾಳ ಕಷ್ಟ ಆಗೋದು. ಬರೀ ಕೊಂಡುಕೊಂಡು ತಿನ್ತಿದ್ವಿ. ಇರೋ ಸ್ವಲ್ಪ ಹೊಲಾನೂ ನಮ್ಮ ಚಿಕ್ಕಪ್ಪನೋರು ಕೂಡಾ ಮಾಡ್ಲಿಲ್ಲ ಎಲ್ರೂ ಕೆಲ್ಸಕ್ಕೆ ಹೋಗ್ತಿದ್ರು. ಏನಿಲ್ಲ ಅಂದ್ರೂ ತುಂಬಾ ದುಡ್ಡು ಬರ್‍ತಾ ಇತ್ತು. ಇಲ್ಲಿ ಮಳೀನೇ ಚೆನ್ನಾಗಿ ಆಗಲ್ಲ. ಎಂ.ಎಸ್.ಪಿ.ಎಲ್.ನಲ್ಲಿ ಮೈನಿಂಗ್ ಬೋನಸ್, ಅಡಿಗೆ ಸಾಮಾನು, ರೇಷನ್ ಎಲ್ಲಾ ಚೆನ್ನಾಗಿ ಕೊಡ್ತಾ ಇದ್ರು. ಚೆನ್ನಾಗಿ ನೋಡಕಂತಾರ ಅಂತೇಳಿ ಎಲ್ರೂ ಅಲ್ಲಿಗೆ ಹೋಗ್ತಾ ಇದ್ರು. ನಮ್ಮೂರಿಗೆ ಎಂ.ಎಸ್.ಪಿ.ಎಲ್. ಹತ್ತಿರ ಇತ್ತು. ವಾರಕ್ಕೆ ಎಂಟುನೂರು, ಒಂಬೈನೂರು ತರತಿದ್ರು. ತಂದ್ರು ಅಲ್ಲಿವರೆಗೂ ನಾವು ಸಾಲ ಗೀಲ ಏನು ಕಟ್ಟಿದ್ದಿಲ್ಲ. ನಮ್ಮಪ್ಪ ಶನಿವಾರ, ಆಯಿತವಾರ ದುಡ್ಡು ಬಂದ ಮೇಲೆ ಜಗ್ಗಿ ಕುಡಿಯೋದೆ ಕುಡಿಯೋದು. ಮೂನ್ನೂರು, ನಾನ್ನೂರು ಅಂಗೆ ಕುಡಿಯುತ್ತಿದ್ದ. ಮಾಂಸನೂ ಜಗ್ಗಿ ತರ್‍ತಿದ್ರು, ಮತ್ತೇನಕ್ಕೂ ದುಡ್ಡು ಉಳಿತಾನೇ ಇದ್ದಿಲ್ಲ. ಆಮ್ಯಾಲೆ ನನ್ನನ್ನು ಓದೋಕೆ ಬ್ಯಾಡ ಅಂತ ಹೇಳಿದ್ರು. ಅಡಿಗೆ ಮಾಡಾಕಾಗಲ್ಲ. ಬೆಳಗ್ಗೆ ಬೇಗ ಹೋಗಿ ರಾತ್ರಿ ಲೇಟಾಗಿ ಬರ್‍ತೀವಿ. ನಾವು ಇಲ್ದಿರುವಾಗ ಹುಡುಗರ್‍ನ ನೋಡಿಕೊಳ್ಳೋರು ಯಾರೂ ಇರೋದಿಲ್ಲ. ನಾವಂತೂ ಕಳಿಸೋದಿಲ್ಲ ಅಂತ ಹೇಳ್ತಾ ಇದ್ರು. ನಾನು ೭ನೇ ಕ್ಲಾಸು ಬರೋವರ್‍ಗು ಮೈನಿಂಗ್‌ನವರು ಕೊಡೋ ಬುಕ್ಸ್‌ನಿಂದನೆ ಓದಿದ್ದು. ಅದೇ ಬುಕ್ಸನ್ನ ನಾವು ಬೇರೆಯವರಿಗೂ ಕೊಟ್ಟು ದುಡ್ಡು ಇಸಕಂತಾ ಇದ್ವಿ. ಅಂಗಾಗಿ ಏಳನೆ ಕ್ಲಾಸ್‌ನವರೆಗೆ ನಮಗೆ ಬಾಳ ಹೆಲ್ಪಾಯ್ತು. ನೀನು ಮೈನಿಂಗ್ ಕೆಲ್ಸಕ್ಕೆ ಬಂದು ಬಿಡು ಬಾಳ ರೊಕ್ಕ ಬರತೈತಿ ಅಂತಿದ್ರು. ಆದ್ರ ನನಗ ಓದೋದು ಅಂದ್ರ ಜೀವ.

ಮರಿಯಮ್ಮನಹಳ್ಳಿಯಲ್ಲಿ ಒನೇ ಕ್ಲಾಸ್‌ಗೆ ಸಾಲ ಮಾಡಿ ಹಚ್ಚಿದೆ. ವಾರದಾಗೆ ಶನಿವಾರ ಭಾನುವಾರ ಶಾಲೆ ರಜೆ. ಆವಾಗ ಮೈನಿಂಗ್ ಕೆಲ್ಸಕ್ಕೆ ಹೋಗ್ಬೇಕಾಗಿತ್ತು. ಎರಡು ದಿವಸದ್ದು ನಲವತ್ತು ರೂಪಾಯಿ ಬರ್ತಿತ್ತಲ್ಲಾ ಅದರಲ್ಲಿ ಸೊಸೈಟಿನಲ್ಲಿ ಹತ್ತು ಸೇರು ಜೋಳಕ್ಕೆ ೩೦ ರೂಪಾಯಿ ಕೊಡ್ತಾ ಇದ್ದೆ. ಅಪ್ಪ, ಅಮ್ಮ ಆವಾಗ ಅವಾಗ ಆರಾಮಿಲ್ದೆ ಮೈನಿಂಗ್‌ಗೆ ಹೋಗ್ದೆ ಇದ್ದು ಬಿಡ್ತಾ ಇದ್ರು. ಹೀಗೆ ರಜೆ ಇದ್ದಾಗೆಲ್ಲ ಕೆಲ್ಸಕ್ಕೆ ಹೋಗ್ತಾ ಇದ್ದೆ. ಮೈನಿಂಗ್ ಕೆಲ್ಸ ಮಾಡೋ ಮೊದ್ಲು ಮಗ್ಳಿಗೆ ಅವ್ರು ಚೆನ್ನಾಗಿ ಓದಿ ಪರಸೆಂಟೇಜ್ ಮಾಡಿದ್ರೆ ಸ್ಕಾಲರ್‌ಶಿಪ್ ಕೊಡತಾ ಇದ್ರು ಮೈನಿಂಗ್ ಇಂದ. ಅದನ್ನೇ ಎಂ.ಎಸ್.ಪಿ.ಎಲ್.ನಲ್ಲಿ ಎರಡು ಸಲ ಇಸಕಂಡೀನಿ. ಅಷ್ಟರೊಳಗ ನಮ್ಮ ಅಪ್ಪಗ ಆರಾಮು ಇಲ್ಲದಂಗ ಆತು. ಕೆಲ್ಸಕ್ಕೆ ಹೋಗದಂಗೆ ಆಗ್ಬಿಟ್ರು. ತಾವು ಮನೆಯಲ್ಲಿದ್ದು ನನ್ನನ್ನು ಶಾಲಿ ನಿಲ್ಲಿಸಿ ಕೆಲ್ಸಕ್ಕ ಕಳಸ್ಬೇಕು ಅಂತ ಮಾಡಿದ್ರು. ಕೆಲ್ಸಾಕ ನಡಕಂತ ಹೋಗ್ಬೇಕು ನಡಕಂತ ಬರಬೇಕು. ಒಂಬತ್ತು ಕಿ.ಮೀ. ಆಗತ್ತಿತ್ತು. ಮೈನಿಂಗ್ ಧೂಳು ಬೇರೆ ಜಾಸ್ತಿ ಇತ್ತು. ನಮ್ಮ ಅಪ್ಪಗ ತುಂಬಾ ಸುಸ್ತು ಆಗುತ್ತಿತ್ತು. ಏನೋ ಸುಮ್ನೆ ಜ್ವರ ಅಂದ್ಕೊಂಡು ಅಷ್ಟೊಂದು ಕೇರ್ ತಗಂಡಿದ್ದಿಲ್ಲ. ಮತ್ತೆ ಚೆನ್ನಾಗಿ ಆಗ್ಬೋದು ಅಂತೇಳಿ ಸುಮ್ನೆ ಇದ್ದು ಬಿಟ್ಟದ್ವಿ. ಮನಿನಾಗ ಯಾರೂ ದುಡಿಯೋರು ಇಲ್ಲದಂಗೆ ಆತು. ಒಬ್ಬ ತಮ್ಮನ್ನಾ ಜೀತಕ್ಕೆ ಇಟ್ಟೆದ್ವಿ. ಟಿ.ಬಿ.ಡ್ಯಾಂ ಹತ್ರ ಇರೋ ಒಂದು ಹಳ್ಳಿನಾಗ. ಐದು ವರ್ಷಕ್ಕೆ ಮೂರು ಸಾವಿರ ರೂಪಾಯಿಗಳನ್ನು ಕೊಡ್ತಾ ಇದ್ರು. ಆ ದುಡ್ಡನ್ನಾ ಅಪ್ಪ ತಗಂಬಂದು ಸ್ವಲ್ಪ ದುಡ್ಡನಾಗ ಕಾಯಿಲೆ ತೋರಿಸ್ಕೊಂಡು ಉಳಿದ ರೊಕ್ಕನ್ನೆಲ್ಲಾ ಕುಡಿದು ಬಿಟ್ಟದ್ರು. ಮನೀಗೆ ಏನು ಕೊಡ್ತಿದ್ದಿಲ್ಲ.

ಮೊದ್ಲೆಲ್ಲಾ ಅಪ್ಪಾಗ ಮೈಯಲ್ಲಿ ಹುಷಾರು ಇಲ್ದೆ ಆಗಿದ್ದು ಮೈನಿಂಗ್‌ಗೆ ಹೋಗಿದ್ದಕ್ಕೆ ಅಂತ ಗೊತ್ತಿದ್ದಿಲ್ಲ. ಅಲ್ಲಿ ಬಾಳ ಧೂಳು ಬಿಸಿಲು, ಅಪ್ಪ ಮೈನಿಂಗ್ ಒಡಿಯೋ ಕೆಲ್ಸ ಮಾಡ್ತಾ ಇದ್ರಿಂದ ಎದಿ ನೋವು ಬಾಳ ಇತ್ತು. ಅದರಲ್ಲಿ ಬೇರೆ ಕುಡಿತಾ ಇದ್ರು. ಸ್ವಲ್ಪ ದಿನ ಆದ ಮೇಲೆ ಅಮ್ಮಗೂ ಜಗ್ಗಿ ಕಾಯಿಲೆಗಳು ಬರೋಕೆ ಸ್ಟಾರ್ಟ್ ಆಯ್ತು. ನಮ್ಮ ಟೀ ಕುಡಿಯೋಕೆ ಹೋದಾಗ ಮಂದಿಯೆಲ್ಲಾ ಕೀಳಾಗಿ ನೋಡ್ತಾ ಇದ್ರು. ತೆಳ್ಳಗಾಗಿದ್ದ ಈತನ ಕರಕೊಂಡು ಹೋಟ್ಲಾಗ ಕುಂತ್ರೆ ನಿಮಗೆ ಆ ರೋಗ ಬಂದು ಬಿಡಬಹುದಲ್ಲ ಅಂತ ಹೇಳಕಂತಿದ್ರು. ಅಂಗನವಾಡಿಯವರು ಟೆಸ್ಟ್ ಮಾಡಿದ ಮೇಲೆ ಅಪ್ಪಗ ಟಿ.ಬಿ. ಇದೆ ಅಂತ ಗೊತ್ತಾಯ್ತು. ಕಾಯಿಲೆ ಗೊತ್ತಾದ ಮೇಲಂತು ನಮ್ಮ ಚಿಕ್ಕಪ್ಪನವರು ನಮ್ಮನ್ನು ಒಂಥರಾ ನೋಡ್ತಾ ಇದ್ರು. ನಾವು ಮಾಡಿದ ಸಾರು, ಊಟ ಮಾಡ್ತಿದ್ದಿಲ್ಲ. ಅದರಿಂದ ಅಪ್ಪ ಬಾಳ ನೊಂದ್ಕೊಂಡು ಹೊರಗಡೆಯೇ ಹೋಗ್ತಾ ಇದ್ದಿಲ್ಲ. ಇಂಗೇ ಸ್ವಲ್ಪ ದಿನ ಆದ ಮೇಲೆ ಅಪ್ಪ ತೀರಿಕಂಬಿಟ್ರು" ಎಂದು ಹೇಳಿದಳು.

ಗಣಿಗಾರಿಕೆ ನಡೆಯುವ ಪ್ರದೇಶದಲ್ಲಿ ವಾಸಿಸುವ ಗುಡ್ಡಗಾಡು ಜನರನ್ನು ಗಣಿಗಾರಿಕೆಯಲ್ಲಿ ತೊಡಗಿರುವ ಕಂಪನಿಗಳು ಜನತೆಯನ್ನು ಅವರ ಮೂಲ ಸ್ಥಳಗಳಿಂದ ವರ್ಗಾಯಿಸುತ್ತಿದ್ದಾರೆ. ಇಡೀ ಗುಡ್ಡಗಳನ್ನೇ ಸ್ಫೋಟಿಸಿ ನೆಲಸಮ ಮಾಡುತ್ತಿದ್ದಾರೆ. ಭಾರಿ ಯಂತ್ರಗಳನ್ನು ಬಳಸಿ ಆಳವಾದ ಗುಂಡಿಗಳನ್ನು ಸೃಷ್ಟಿಸುತ್ತಿದ್ದಾರೆ. ಅದರಲ್ಲಿ ವಿಷಕಾರಿ ಸ್ಫೋಟಕ ವಸ್ತುಗಳನ್ನ ತುಂಬಿ ಒಂದೇ ಬಾರಿಗೆ ಇಡೀ ಗುಡ್ಡವನ್ನೇ ಸ್ಫೋಟಿಸುತ್ತಿದ್ದಾರೆ. ಇದರಿಂದ ಭಾರೀ ಗಾತ್ರದಲ್ಲಿ ಕೆಂಪು ಧೂಳು ಗಣಿಗಾರಿಕೆ ನಡೆಯುವ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇರುವ ಕೃಷಿಭೂಮಿ, ಹಳ್ಳಿಗಳಿಗೆ ಹೋಗುತ್ತಿರುವುದರಿಂದ ಭಾರಿ ಪ್ರಮಾಣದಲ್ಲಿ ಇದು ಸಮಸ್ಯೆಯಾಗಿ ಪರಿಣಮಿಸುತ್ತಿದೆ.

ಮನುಷ್ಯನ ಹಣದಾಸೆಗೆ ಮಿತಿಯೇ ಇಲ್ಲ. ಪ್ರಕೃತಿಯ ಅಸಮತೋಲನದಿಂದ ಆಗುತ್ತಿರುವ / ಆಗಬಹುದಾದ ಅನಾಹುತಗಳ ಬಗ್ಗೆ ಕಾಳಜಿಯೂ ಇಲ್ಲ ಎಂಬುದಕ್ಕೆ ಬಳ್ಳಾರಿ, ಸಂಡೂರು, ಹೊಸಪೇಟೆಗಳ ಪ್ರದೇಶಗಳು ಸಾಕ್ಷಿಯಾಗಿದೆ. ಬಳ್ಳಾರಿ ಎಂದರೇನೇ ಬಿಸಿಲು. ಅದರಲ್ಲಿಯೂ ಕೂಡ ಹಸಿರಿನಿಂದ ನಳನಳಿಸುತ್ತಿದ್ದ ಸಂಡೂರು, ಬಳ್ಳಾರಿ, ಹೊಸಪೇಟೆ ಗುಡ್ಡಗಳು ಮೊದಲಿನ ಸೌಂದರ್ಯವನ್ನು ಇತಿಹಾಸವಾಗಿಸಿವೆ. ಸ್ಫೋಟಗೊಂಡ ಗಣಿಗಳಿಂದಾಗಿ ಸುತ್ತಮುತ್ತಲಿನ ಪ್ರದೇಶಗಳು ಕೆಮ್ಮಣ್ಣು ಗುಂಡಿಯಾಗಿ ಮಾರ್ಪಟ್ಟಿವೆ. ಈ ನೆಲದಲ್ಲಿ ಅಧಿಕವಾಗಿರುವ ಕಬ್ಬಿಣ, ಮ್ಯಾಂಗನೀಸ್, ರೆಡ್ ಓಕರ್, ಬೆಣಚುಕಲ್ಲು, ಸುಣ್ಣದ ಕಲ್ಲು, ಸಿಲಿಕಾನ್ ಜಿಂಕ್, ಚಿನ್ನ, ಬೆಳ್ಳಿಯಂತಹ ಅಮೂಲ್ಯ ಖನಿಜಗಳನ್ನು ಪಡೆಯಲು ದೇಶ - ವಿದೇಶದ ಗಣಿಗಾರಿಕೆ ಸಂಸ್ಥೆಯವರು ಇಲ್ಲಿ ನಡೆಸುತ್ತಿರುವ ಉತ್ಖನನದಿಂದಾಗಿ ಮಲೆನಾಡು ಪ್ರದೇಶವಾಗಿದ್ದ ಬಳ್ಳಾರಿಯ ಗಣಿ ಪ್ರದೇಶ ಈಗ ಕರ್ಮಗೂಡು, ರೋಗಗಳ ಆವಾಸಸ್ಥಾನ, ನೀರು-ವಾಯು ಮಾಲಿನ್ಯದಿಂದಾಗಿ ಪರದಾಟ ನಡೆಸುವ ಸಮಸ್ತ ಅವ್ಯವಹಾರಗಳ ತಾಣವಾಗಿದೆ.

ಇದೇ ರೀತಿ ಯಾವ ಅಂಕೆಯಿಲ್ಲದೆ ಗಣಿಗಾರಿಕೆ ನಡೆದರೆ ಬಳ್ಳಾರಿಯ ಗಣಿ ಪ್ರದೇಶ ಬರಡು ಭೂಮಿಯಾಗಿ ಜನರೆಲ್ಲಾ ರೋಗ ರುಜಿನಗಳಿಗೆ ಬಲಿಯಾಗಿ ಸಾಯುವ ಕಾಲ ತುಂಬಾ ದೂರ ಇಲ್ಲ ಎಂಬುದರಲ್ಲಿ ಸಂದೇಹವೇ ಇಲ್ಲ. ಗಣಿಗಾರಿಕೆಯಿಂದ ಉಂಟಾಗುವ ದುರದೃಷ್ಟಕರ ಪ್ರಕ್ರಿಯೆಗಳು ಈಗಾಗಲೇ ಪ್ರಾರಂಭವಾಗಿವೆ. ವಿಜಯನಗರ ಕಾಲದಿಂದಲೂ ಪ್ರಸಿದ್ದಿಯಾಗಿ, ಸಮೃದ್ಧಿಯಾಗಿದ್ದ ತೆರೆದ ಬಾವಿಗಳು ಮತ್ತು ಕೆರೆಗಳು ಬತ್ತಿ ಹೋಗಿವೆ. ಹಾಗೂ ಹೂಳು ತುಂಬಿಕೊಂಡಿವೆ. ಅಂತರ್ಜಲ ಬತ್ತಿರುವುದರಿಂದ ೫೦೦ ಅಡಿವರೆಗೆ ಕೊರೆದರೂ ಭೂಮಿಯಲ್ಲಿ ನೀರು ಸಿಗುತ್ತಿಲ್ಲ. ಗಣಿಗಾರಿಕೆಯ ಹೆಸರಲ್ಲಿ ಮರಗಳನ್ನು ಕಡಿಯುತ್ತಿರುವುದರಿಂದ ಬೆಲೆ ಬಾಳುವ ಶ್ರೀಗಂಧ, ತೇಗ, ಹೊನ್ನೆ, ಬೀಟೆಯಂತಹ ಮರಗಳು ನಾಶವಾಗಿವೆ. ಗಣಿಯ ಉತ್ಪನ್ನವನ್ನ ಶೇಖರಿಸಲು ಸ್ಟಾಕ್‌ಯಾರ್ಡ್‌ಗಳನ್ನು ಮಾಡುತ್ತಿರುವುದರಿಂದಲೂ ಸಾವಿರಾರು ಹೆಕ್ಟೇರ್ ಕಾಡು ಮತ್ತು ಕೃಷಿ ನಾಶವಾಗಿದೆ. ಕಾಡಿನ ನಾಶದಿಂದಾಗಿ ಹತ್ತು ವರ್ಷದ ಹಿಂದೆ ೫೬,೮೮೭ ಮಿ.ಮೀಟರ್ ಇದ್ದ ಮಳೆಯ ಪ್ರಮಾಣ ೨೦೦೩- ೨೦೦೪ನೇ ಇಸವಿಯ ಹೊತ್ತಿಗೆ ಕೇವಲ ೪೪೩.೮ ಮಿ.ಮೀ.ಗೆ ಇಳಿದಿದೆ. ಮೊದಲಿನಿಂದಲೂ ಬಳ್ಳಾರಿ ಬಿಸಿಲಿನ ಪ್ರದೇಶವಾಗಿ ಮಳೆ ಪ್ರಮಾಣ ಕಡಿಮೆ. ಅದರಲ್ಲೂ ಗಣಿಗಾರಿಕೆಯಿಂದ ಇನ್ನಷ್ಟು ಮಳೆ ಕಡಿಮೆಯಾಗಿರುವುದು ಶಾಪವಾಗಿ ಮಾರ್ಪಟ್ಟಿದೆ.

ಮಳೆ ಬರಬೇಕೆಂದರೆ ಆಮ್ಲಜನಕ ಮುಖ್ಯ. ಅದು ಮೋಡವಾಗಿ ಮಳೆ ಸುರಿಯುತ್ತದೆ. ಇದು ವೈಜ್ಞಾನಿಕವಾಗಿ ಸತ್ಯ. ಈ ನಿಟ್ಟಿನಲ್ಲಿ ಸರಕಾರದ ಪ್ರಕಾರ ಗಣಿಗಾರಿಕೆ ನಡೆಸುತ್ತಿರುವ ಸುತ್ತಮುತ್ತ ೯ ಕಿ.ಮೀ. ಅಂತರದಲ್ಲಿ ಜೀವಿಸುವವರಾಗಲಿ, ಮನೆಗಳಾಗಿ ಇರಬಾರದು ಎಂಬ ಕಾಯಿದೆ ಇದೆ. ಆದರೆ ಅದನ್ನು ಯಾರೂ ಪಾಲನೆ ಮಾಡುತ್ತಿಲ್ಲ. ಸರಕಾರವೂ ಕೂಡ ಅವರ ಹತ್ತಿರ ಪಾಲನೆ ಮಾಡಿಸುತ್ತಿಲ್ಲ. ಒಟ್ಟಾರೆ ಅದೇ ಘಟಕದಿಂದ ೩೦ ಕಿ.ಮೀ. ವ್ಯಾಪ್ತಿಯಲ್ಲಿ ೨೦ ರಿಂದ ೩೦ ವರ್ಷ ಇದೇ ರೀತಿ ಗಣಿಗಾರಿಕೆ ನಡೆದರೆ ಕೀಟದಿಂದ ಹಿಡಿದು ಇಡೀ ಜೀವಸಂಕುಲ ನಾಶವಾಗುತ್ತದೆ ಎಂದು ವಿಜ್ಞಾನ ಹೇಳುತ್ತದೆ. ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದಲ್ಲಿ ಹಾಗೂ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದಿಂದ ೧೫-೨೦ ಕಿ.ಮೀ. ಗಳವರೆಗೂ ಗುಬ್ಬಚ್ಚಿಗಳು ಕಾಣಿಸುತ್ತಿಲ್ಲ. ವೈದ್ಯ ವಿಜ್ಞಾನದ ಪ್ರಕಾರ ಎಲ್ಲಿ ಗುಬ್ಬಚ್ಚಿಗಳು

ವಾಸಿಸುವುದಿಲ್ಲವೋ ಆ ಪ್ರದೇಶ ವಿನಾಶದ ಕಡೆಗೆ ಹೋಗುತ್ತಿದೆ. ಹಾಗೂ ಮನುಷ್ಯ ಆ ಪ್ರದೇಶದಲ್ಲಿ ವಾಸಿಸುವುದು ಸರಿಯಲ್ಲ. ಅಪಾಯ ಅವನಿಗೆ ಕಟ್ಟಿಟ್ಟ ಬುತ್ತಿ ಎಂಬುವುದನ್ನು ಸೂಚಿಸುತ್ತದೆ.

ಒಮ್ಮೆ ಗಾಂಧೀಜಿಯವರು ಸಂಡೂರಿಗೆ ಭೇಟಿ ಕೊಟ್ಟಾಗ, ಇದು ಸ್ವರ್ಗದ ರೀತಿ ಇದೆ. ಸಂಡೂರು ಬಳ್ಳಾರಿಯ ಊಟಿ ಎಂದು ಹೇಳಿ ಹೋಗಿದ್ದರೆಂಬುವುದನ್ನು ನಾವು ಪುಸ್ತಕದಲ್ಲಿ ಓದಿಯೋ ಅಥವಾ ಯಾರೋ ಹೇಳುವುದನ್ನು ಕೇಳಿ ತಿಳಿದುಕೊಂಡಿದ್ದೇವೆ. ಅದು ಸತ್ಯ ಕೂಡ ಇರಬಹುದು. ವೈಜ್ಞಾನಿಕವಾಗಿ ಇದನ್ನು ನಾವು ಗಮನಿಸಿದರೆ ಇದನ್ನು ಯಾರು ಹಾಳು ಮಾಡಿರಬಹುದು. ದೇವರು ಅಂತೂ ಹಾಳುಮಾಡಿಲ್ಲ. ದೆವ್ವ ಅಂತೂ ಹಾಳೂ ಮಾಡಿಲ್ಲ. ಇದನ್ನು ನಾಶ ಮಾಡಿರುವುದು ಮನುಷ್ಯನೇ.

ನಿಸರ್ಗ ಯಾವತ್ತೂ ಕೂಡ ತನ್ನಷ್ಟಕ್ಕೇ ತಾನೇ ಬದಲಾಗುವುದಿಲ್ಲ. ಬದಲಾದರೂ ಕಾರಣ ಇಲ್ಲದೇ ಬದಲಾಗುವುದಿಲ್ಲ. ಸಾವಿರಾರು ವರ್ಷಗಳ ಕಾಲ ಈ ಪ್ರದೇಶದಲ್ಲಿ ಬದಲಾಗದ ವಾತಾವರಣ ಈ ೩-೪ ವರ್ಷಗಳಲ್ಲಿ ಯಾಕೆ ಇಷ್ಟು ಬದಲಾವಣೆ ಆಗಿದೆ. ಆರೋಗ್ಯ, ಕೃಷಿ, ಅಂತರ್ಜಲ ಇವುಗಳೆಲ್ಲ ಯಾಕೆ ಕುಸಿದು ಹೋಗಿವೆ. ಇದೆಲ್ಲದಕ್ಕೂ ಕಾರಣ ಗಣಿಗಾರಿಕೆಯೇ ಆಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ನಿರ್ಮಾಣವಾಗಿರುವ ಎಲ್ಲಾ ಕಬ್ಬಿಣ ಮತ್ತು ಉಕ್ಕು ಉದ್ದಿಮೆಗಳೆಲ್ಲ ಜಲಸಾಂದ್ರ ಉದ್ದಿಮೆಗಳಾಗಿವೆ. ಔದ್ಯಮೀಕರಣದ ನಿಮಿತ್ತ ನಿರ್ಮಾಣವಾಗಲಿರುವ ನಗರ, ಉಪನಗರ, ವಸತಿ, ಸಮುಚ್ಛಯಗಳಿಂದಾಗಿ ಕುಡಿಯುವ ನೀರಿನ ಬೇಡಿಕೆ ಅಪಾರವಾಗಿ ಹೆಚ್ಚಿದೆ. ಈ ಎಲ್ಲಾ ರೀತಿಯ ಹೆಚ್ಚುವರಿ ನೀರಿನ ಬೇಡಿಕೆಯನ್ನ ತುಂಗಭದ್ರಾ ಜಲಾಶಯದಿಂದಲೇ ಪೂರೈಸಲಾಗುತ್ತಿದೆ. ಒಂದು ಅಂದಾಜಿನ ಪ್ರಕಾರ ನಿರೀಕ್ಷಿತ ೬.೬ ದಶಲಕ್ಷ ಟನ್ ಉಕ್ಕು ಉತ್ಪಾದನೆಗೆ ಅಗತ್ಯವಾದ ನೀರಿನ ಪ್ರಮಾಣ ಪ್ರತಿನಿತ್ಯ ೨೩೭.೬ ದಶಲಕ್ಷ ಲೀಟರ್ (ಶೇಷಾದ್ರಿ ಬಿ, ೧೯೯೮) ತುಂಗಭದ್ರಾ ಜಲಾಶಯದಿಂದ ಕೃಷಿಗೆ ನೀರು ಬಿಡಲು ಜಲಾಶಯದಲ್ಲಿ ತುಂಬಾ ಕಡಿಮೆ ನೀರಿದೆ ಎಂದು ಹೇಳುತ್ತಿರುವ ತುಂಗಭದ್ರಾ ಜಲಮಂಡಳಿ ಗಣಿಗಾರಿಕೆ ಮಾಡುತ್ತಿರುವ ಪ್ರದೇಶಕ್ಕೆ ಮಾತ್ರ ವರ್ಷದ ಪೂರ್ತಿ ಹೇಗೆ ನೀರನ್ನು ರವಾನಿಸುತ್ತಿದೆ? ಇದಕ್ಕೆ ಕಾರಣವೇನು? ಇದರ ಹಿಂದಿನ ರಾಜಕಾರಣದ ಬಗ್ಗೆ ಯಾರೂ ತಲೆ ಕೆಡಿಸಿಕೊಳ್ಳುತ್ತಿಲ್ಲ.

ರೈತರೂ ಮತ್ತು ರೈತ ಹೋರಾಟಗಾರರಾದ ಶಿವಾನಂದಯ್ಯಸ್ವಾಮಿ ಹೀಗೆ ಹೇಳುತ್ತಾರೆ. "ನಮ್ಮ ಊರು ಗಂಗಲಾಪುರ, ಇದು ತಾರಾನಗರದಿಂದ ಒಂದು ಕಿಲೋಮೀಟರ್ ಮುಂದೆ ಬರುತ್ತದೆ. ನಾನು ೪ ಎಕರೆ ವ್ಯವಸಾಯ ಮಾಡ್ತೀನಿ. ನೀರಾವರಿ ಮೊದಲು ಇತ್ತು. ಆದರೆ ಈಗ ಅದು ಇಲ್ಲ. ಈ ಸಮಸ್ಯೆ ನಿಮಗೆ ಹೇಳಬೇಕೆಂದರೆ ಹತ್ತು ದಿನ ಬೇಕಾಗುತ್ತದೆ. ಅಂತಹ ಪರಿಸ್ಥಿತಿ ಇದೆ. ಇದಕ್ಕೆ ಮುಖ್ಯ ಕಾರಣ ಎಂದರೆ ಗಣಿಗಾರಿಕೆ. ವಿಶ್ವದಲ್ಲಿ ಎಲ್ಲಿಯೂ ಕೊರೆಕ್ಸ್ ಘಟಕ ಆಕ್ಸಿಜನ್ ಘಟಕ ಹಾಕೋದಿಕ್ಕೆ ಎಲ್ಲಿಯೂ ಪರ್ಮಿಷನ್ ಕೊಡೋದಿಲ್ಲ. ಜಿಂದಾಲ್ ಉಕ್ಕಿನ ಕಾರ್ಖಾನೆಯಿಂದಾಗಿ ಕೊರೆಕ್ಸ್ ಘಟಕ ನಡೆಯುತ್ತಿದೆ. ಕೊರೆಕ್ಸ್ ಘಟಕ ನಡೆಯಬೇಕೆಂದರೆ ಆಕ್ಸಿಜನ್ ಬೇಕು. ಆದಕಾರಣ ವಾತಾವರಣದಲ್ಲಿ, ಇಲ್ಲಿ ೧೮ ಅನಿಲ ಎಷ್ಟೋ ಹೇಳ್ತಾರಲ್ಲ ಅಷ್ಟು ಅನಿಲ ಇದೆ. ಒಂದು ಗಂಟೆಗೆ ೬ ಸಾವಿರ ಟನ್ ಆಕ್ಸಿಜನ್‌ನ್ನು ಎಳೆದುಕೊಳ್ಳಲಾಗುತ್ತಿದೆ. ಅವರಿಗೆ ಬೇಕಾದಂತಹ ಹೆಚ್ಚಿನ ಆಮ್ಲಜನಕವನ್ನು ಶೇಖರಣೆ ಮಾಡಿ ಆ ಕೊರೆಕ್ಸ್ ಘಟಕಕ್ಕೆ ಬಳಸಿಕೊಂಡು ಉಳಿದದ್ದನ್ನು ಅನಿಲ ರೂಪದಲ್ಲಿ ಬೇರೆ ಕಡೆ ಮಾರಿಕೊಳ್ಳಲಾಗುತ್ತದೆ.

ಗಣಿಗಾರಿಕೆ ಧೂಳು ಕೃಷಿ ಮರ ಗಿಡಗಳ ಮೇಲೆ ಹೆಚ್ಚಾಗಿ ಕೂಡುವುದರಿಂದ ಗಿಡಗಳು ಸರಾಗವಾಗಿ ದ್ಯುತಿಸಂಶ್ಲೇಷಣೆ ಕ್ರಿಯೆ ನಡೆಸಲು ಸಾಧ್ಯವಾಗುತ್ತಿಲ್ಲ. ಈ ಕಾರಣದಿಂದಲೂ ಹೆಚ್ಚಾಗಿ ಆಮ್ಲಜನಕದ ಕೊರತೆ ಉಂಟಾಗಿದೆ. ಮೊದಲೆಲ್ಲಾ ಈ ತಾಲ್ಲೂಕಿನಲ್ಲಿ ೫ ರಿಂದ ೧೫ ಅಡಿ ಅಂತರದಲ್ಲಿ ಅಂತರಜಲ ದೊರೆಯುತ್ತಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ಮೊದಲೆಲ್ಲಾ ಕಪಲಿ ಹೊಡೆಯುವುದರ ಮೂಲಕವೇ ಹೆಚ್ಚಾಗಿ ಕೃಷಿ ಮಾಡ್ತಾ ಇದ್ವಿ. ಹೆಚ್ಚಾಗಿ ಬಾವಿಗಳು ಇದ್ದವು. ಆದರೆ ಈಗ ಎಷ್ಟು ಅಡಿಗಳಿಗೆ ಇಳಿಸಿದರೂ ನೀರು ಸಿಗುತ್ತಿಲ್ಲ. ಬಾವಿಗಳೆಲ್ಲಾ ಬತ್ತಿ ಹೋಗಿವೆ. ಇದಕ್ಕೆಲ್ಲಾ ಕಾರಣ ಎಂದರೆ ಗಣಿಗಾರಿಕೆ ಚಟುವಟಿಕೆ ಮತ್ತು ಜಿಂದಾಲ್‌ನ ಚಟುವಟಿಕೆ. ಇವೆರಡೇ ಕಾರಣ ಎಂದು ಸ್ಪಷ್ಟವಾಗಿ ಹೇಳಬಹುದು.

ಈ ದೇಶದಲ್ಲಿ ಸಂವಿಧಾನ ಬದ್ಧವಾಗಿ ಮೂಲಭೂತ ಹಕ್ಕಿನ ಅಡಿಯಲ್ಲಿ ಆಸ್ತಿ ಹಕ್ಕು ಇಲ್ಲದಿದ್ದರೂ ಪಿತ್ರಾರ್ಜಿತ ಹಕ್ಕು ಇದೆ. ನಮ್ಮ ನೆಲ, ಜಲ, ಗಾಳಿ ಎಲ್ಲಕ್ಕೂ ಬೆಲೆ ಇದೆ. ಆದರೆ ಅದರ ಅರಿವು ರೈತನಿಗಾಗಲಿ, ಜನಸಾಮಾನ್ಯರಿಗಾಗಲಿ ಗೊತ್ತಾಗದೆಯೇ ಇತರರು ಕಸಿದುಕೊಳ್ಳುತ್ತಿದ್ದಾರೆ. ನೇರವಾಗಿ ಖಾಸಗೀಕರಣದ ಅಡಿಯಲ್ಲಿ ಕಾರ್ಖಾನೆ ಇದೆ. ಖಾಸಗಿ ಗಣಿಮಾಲಿಕರು ಗಣಿಗಾರಿಕೆಯನ್ನು ನಡೆಸುತ್ತಿದ್ದಾರೆ. ೮-೧೦ ವರ್ಷಗಳಿಂದ ಖಾಸಗೀ ಗಣಿಮಾಲಿಕರು, ಗುತ್ತಿಗೆದಾರರ ದರ್ಬಾರನ್ನು ಖಂಡಿಸಿ ಅನೇಕ ರೀತಿ ಚಳುವಳಿಗಳನ್ನು ನಡೆಸುತ್ತಿದ್ದರೂ ಯಾವುದೇ ರೀತಿಯ ಪ್ರತಿಫಲ ದೊರೆತಿಲ್ಲ. ಸರಕಾರದ ಆದೇಶದ ಪ್ರಕಾರ ಗಣಿ ಮಾಲಿಕರು ಸರಕಾರದ ಯಾವುದೇ ನಾಲೆ, ಜಮೀನು, ಫುಟ್‌ಪಾತ್‌ಗಳನ್ನು ಬಳಸಕೂಡದು ಅಂತ ಇದೆ. ಆದರೆ ಗಣಿಮಾಲಿಕರೆಲ್ಲರೂ ಇವಿಷ್ಟನ್ನು ಬಳಸಿಯೇ ಗಣಿಗಾರಿಕೆ ಮಾಡುತ್ತಿರುವುದು ನಮ್ಮ ಮುಂದಿರುವ ದುರಂತ. ಸಂಡೂರಿನಲ್ಲಿ ಘೋರ್ಪಡೆ ಮನೆಯವರು ದಲಿತರ ಅಷ್ಟೋ, ಇಷ್ಟೋ ಇರುವ ಎಲ್ಲಾ ಜಮೀನುಗಳನ್ನು ಕಬಳಿಸಿದ್ದಾರೆ. ರೈತ ದಲಿತ ಹೋರಾಟಗಳು ಇದರ ಸಲುವಾಗಿ ಎಷ್ಟೋ ನಡೆದಿವೆ. ಆದರೆ ನಿರೀಕ್ಷಿಸಿದಷ್ಟು ಪಲಿತಾಂಶ ಸಿಗಲಿಲ್ಲ. ಇದು ಸರಕಾರದ ಎಲ್ಲಾ ಪಕ್ಷದ ನಾಯಕರಿಗೂ ಗೊತ್ತು. ಯಾರೂ ಯಾವ ಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಎಂದರೆ ಎಲ್ಲಾ ನಾಯಕರು ಗಣಿಗಾರಿಕೆ ಚಟುವಟಿಕೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಪ್ರತಿಯೊಂದು ಚಟುವಟಿಕೆಯೂ ನಿಗೂಢವಾಗಿ ನಡೆಯುತ್ತಿದೆ. ಶೇಕಡ ೫೦ ರಷ್ಟು ಗಣಿಗಾರಿಕೆ ಅಕ್ರಮ ಗಣಿಗಾರಿಕೆಯಿಂದ ಕೂಡಿದೆ.

ಗಣಿಮಾಲಿಕರು ಭೂಮಿಯ ಮೇಲೆ ವ್ಯಭಿಚಾರ ನಡೆಸುತ್ತಿದ್ದಾರೆ. ರೈತರು ಅಷ್ಟೋ ಇಷ್ಟೋ ಹೋರಾಟಗಳನ್ನು ನಡೆಸುತ್ತಿದ್ದರೂ ಹೋರಾಟದ ನಾಯಕರನ್ನು ಹಾಗೂ ಅವರ ಹಿಂದಿನವರನ್ನೂ ಹಣ ಕೊಟ್ಟು-ಕೊಳ್ಳುವ, ಅವರಿಗೆ ದುಡ್ಡಿನ ಆಮಿಷ ಒಡ್ಡಿ ಅವರ ಮನ ಪರಿವರ್ತಿಸುವ, ಭಯ, ಬೆದರಿಕೆ ಒಡ್ಡುವ ಕೆಲಸಗಳು ನಡೆಯುತ್ತಿವೆ ಎಂದು ಹೇಳುತ್ತಾರೆ.

ಇನ್ನೊಬ್ಬ ರೈತ ಹೋರಾಟಗಾರರಾದ ಈರಣ್ಣನವರು ಹೀಗೆ ಹೇಳುತ್ತಾರೆ. "ನಮ್ಮದು ಭುಜಂಗನಗರ. ನಾವು ಹತ್ತಿ, ಜೋಳ, ಈರುಳ್ಳಿ ಹಾಕ್ತಾ ಇದ್ವಿ. ಒಂದು ವರ್ಷಕ್ಕೆ ಒಂದು ಹುಣಸೇ ಮರದಿಂದ ಹುಣಸೆಹಣ್ಣು ಸಾಕಷ್ಟು ಬರ್ತಾ ಇತ್ತು. ಇವತ್ತು ತಾಲ್ಲೂಕಿನಲ್ಲಿ ೩ ರಿಂದ ೫ ಲಕ್ಷ ಹುಣಸೆ ಮರಗಳಿವೆ. ೧ ಮರ ೧ ಕೆ.ಜಿ. ಯಿಂದ ೧೦ ಕೆ.ಜಿ. ವರೆಗೆ ಕೂಡ ಹುಣಸೆಹಣ್ಣು ಬಿಟ್ಟಿಲ್ಲ. ಇಡೀ ಸಂಡೂರು ಪ್ರದೇಶದಲ್ಲಿ ತಾರಾನಗರದಿಂದ ಹಿಡಿದು ಬಸಾಪುರದವರೆಗೆ ಇರುವ ಯಾವುದೇ ಹುಣಸೇ ಮರವೂ ಒಂದೂ ಕಾಯೀನೂ ಬಿಟ್ಟಿಲ್ಲ" ಎಂದು ಹೇಳುತ್ತಾರೆ. ಹುಣಸೆಕಾಯಿ ಆರಿಸುವ, ಹುಣಸೆಹಣ್ಣು

ಹೊಡೆಯುವ ಎಲ್ಲಾ ಕೆಲಸವನ್ನು ದಲಿತ ಮಹಿಳೆಯರೇ ಮಾಡುತ್ತಿದ್ದರು. ಆದರೆ ಅದು ಈಗ ಇಲ್ಲವಾಗಿದೆ.

ಮಳೆ ಕಡಿಮೆಯಾದಂತೆ ಮಳೆಯನ್ನೇ ಅವಲಂಬಿಸಿದ್ದ ಕೃಷಿಕರು ತಮ್ಮ ಸಾಂಪ್ರದಾಯಿಕ ವೃತ್ತಿಗೆ ವಿದಾಯ ಹೇಳಿ ತಮ್ಮ ಭೂಮಿಯಲ್ಲಿ ಅಡಗಿರುವ ಅಮೂಲ್ಯ ಖನಿಜಗಳಿಗಾಗಿ ಅಗೆದು ಹುಡುಕಾಡುವ ಪರಿಸ್ಥಿತಿ ಬಂದಿದೆ. ಕಾರಣ ಇಲ್ಲಿನ ಎಲ್ಲರಿಗೂ ಮೊದಲ ಆದ್ಯತೆಯೂ, ಎರಡನೆಯ ಆದ್ಯತೆಯೂ ಗಣಿಗಾರಿಕೆಯೇ ಆಗಿದೆ. ಗಣಿಗಾರಿಕೆ ಬಿಟ್ಟರೆ ಬೇರೆ ಉದ್ಯೋಗ ಇಲ್ಲ. ಇಂತಹ ಪರಿಸ್ಥಿತಿ ಇವರಿಗೆ ಕೊಟ್ಟಿರುವ ಕೊಡುಗೆ ಎಂದರೆ 'ಕಾಯಿಲೆಗಳು / ರೋಗಗಳು'.

ಗಣಿಗಾರಿಕೆಯಿಂದ ಬಳ್ಳಾರಿ ಜಿಲ್ಲೆಯಲ್ಲಿ ರೋಗಗಳ ಸ್ವರೂಪದಲ್ಲಿ ತೀವ್ರ ಬದಲಾವಣೆ ಕಾಣಿಸಿಕೊಂಡಿದೆ. ವಲಸೆ ಬರುವವರ ಸಂಖ್ಯೆಯೂ ಅಧಿಕಗೊಂಡಂತೆ ಕೊಳಚೆ ಪ್ರದೇಶಗಳು ಹುಟ್ಟಿಕೊಂಡಿವೆ. ವೇಶ್ಯಾವಾಟಿಕೆಯ ಹಾವಳಿ ಅಧಿಕಗೊಳ್ಳುತ್ತಿದೆ. ಲೈಂಗಿಕ ರೋಗಗಳ ಪೀಡೆ ಅಧಿಕಗೊಂಡಿದೆ. ಇಡೀ ಬಳ್ಳಾರಿ ಜಿಲ್ಲೆಯು ಅಧಿಕ ಶಿಶುಮರಣ ಹೊಂದಿರುವ ಜಿಲ್ಲೆಯಾಗಿದೆ. ಆದರೆ ದುರಂತವೆಂದರೆ ಬದಲಾಗುತ್ತಿರುವ ರೋಗಗಳ ಸ್ವರೂಪವನ್ನು ಎದುರಿಸಲು ಜಿಲ್ಲೆಯಲ್ಲಿ ಸುಸಜ್ಜಿತವಾದ ವೈದ್ಯಕೀಯ ವ್ಯವಸ್ಥೆ ಇಲ್ಲ.

ಗಣಿಗಾರಿಕೆ ತಮ್ಮ ಕುಟುಂಬದ ಆರೋಗ್ಯದ ಮೇಲೆ ಬೀರಿರುವ ಪರಿಣಾಮವನ್ನು ಪಾಪಿನಾಯಕನಹಳ್ಳಿಯ ಸರಸಮ್ಮ ಹೀಗೆ ಹೇಳುತ್ತಾಳೆ. "ನಮ್ಮದು ಪಾಪಿನಾಯಕನಹಳ್ಳಿ. ನಮ್ಮ ಮಾವನವರ ಸ್ವಂತ ಊರು ಶಿವಮೊಗ್ಗ. ಲಾರಿ ಡ್ರೈವರ್ ಆಗಿದ್ರಿಂದ ಅಲ್ಲಿಂದ ಇಲ್ಲಿಗೆ ವಲಸೆ ಬಂದಾರ. ಎರಡು ಗಂಡು, ಎರಡು ಹೆಣ್ಣು ಮಕ್ಕಳು ಅದಾವ. ನಾನು ವಾಗಿನ್ ಲೋಡಿಂಗ್ ಮಾಡೋಕ ಹೋಗ್ತೀನಿ. ಪರ್ಮನೆಂಟ್. ೧ ಟನ್‌ಗೆ ೧೭ ರೂಪಾಯಿ, ೧೦ ಟನ್‌ಗೆ ೧೭೦ ರೂಪಾಯಿ ಕೊಡ್ತಾರೆ. ಮೈನಿಂಗ್ ಕೂಲಿಗೆ ಹೋದರೆ ೬೦ ರೂಪಾಯಿ ಕೊಡ್ತಾರೆ. ವಾಗಿನ್ ಬಂದಾವ ಅಂತ ಜನ ಎಲ್ಲಾ ಹೋಗ್ತಾರ. ಅವಾಗ ನಾವೂನೂ ಹೋಗ್ತೀವಿ. ಅಲ್ಲಿ ನಮ್ಮನ್ನ ಕೆಲಸಕ್ಕಾ ಕರಿತಾರ. ಹೋದರೆ ಕೂಲಿ, ಇಲ್ಲ ಅಂದ್ರೆ ಇಲ್ಲ. ಪೌಡ್ರು ಬಾಳ ವಜ್ಜೆ ಇರತೈತಿ. ಬಾಳ ಕಷ್ಟ. ಅಭ್ಯಾಸ ಇರೋರಿಗೂ ಕೂಡಾ ನಡುನೋವು. ಅಂಗೀ ಇರತೈತಿ, ಅಂಗೇ ಹೋಗಬೇಕಲ್ಲ ಮತ್ತ. ಅದರಿಂದ ಬಿಡುಗಡೆ ಇಲ್ಲ. ಪೌಡ್ರಿಂದ ಎದೆನೋವು, ತಲೆನೋವು, ಕಣ್ಣುರಿ ಎಲ್ಲಾ ಬರತೈತಿ. ಲೋಡಿಂಗ್ ಮಾಡೋಕ ಮುಂಜಾಲೇ ಎದ್ದು ಹೋಗೋದ್ರಿಂದ ತಲೆಸುತ್ತು ಎಲ್ಲಾ ಬರತೈತಿ. ಬಿಸಿಲು ಆದ ಮೇಲೆ ಜಾಸ್ತಿ ಧೂಳು ಆಗೋದ್ರಿಂದ ಲೋಡಿಂಗ್ ಬಾಳ ಕಷ್ಟ ಅನಿಸತೈತಿರೀ. ಅದಕ್ಕೆ ಮುಂಜಾಲೆ ೫ ಕ್ಕೆ ಲೋಡಿಂಗ್‌ಗೆ ಹೋಗ್ಬಿಡ್ತೀವಿ. ಬಿಸಿಲು ಹತ್ತಿದಂಗೆಲ್ಲಾ ಘಾಟ, ನೀರಡಿಕೆ ಜಾಸ್ತಿ. ಹೊಟ್ಟೆಗೆ ಊಟ ಇಲ್ಲದೆ ನೀರು ಕುಡಿದು ಕುಡಿದು ಅದೇ ಹೊಟ್ಟೆ ತುಂಬಿದಂಗೆ ಆಗಿ ಬಿಡತೈತಿ. ಅದೇ ಮನುಷ್ಯರಿಗೆ ಸುಸ್ತಿ. ಕೆಲಸಕ್ಕೋಗಿ ಬಂದು ಮನೆನಾಗ ಕೆಲಸ ಮಾಡಬೇಕಂದ್ರೆ ರೋಸಿಗೆ ಎದ್ದು ಹೋಗತೈತಿ. ನಡುನೋವು, ಮೈಕೈನೋವು, ವಜ್ಜೆ ಎತ್ತಿ ಎತ್ತಿ ಮೈಕೈ ನೋವು ಬಂದು ಬಿಟ್ಟಿರುತೈತಿ. ಕೈ ಎಲ್ಲ ಬೊಬ್ಬೆ ಬಂದಂಗಾಗಿರತೈತಿ. ಮೈಕೈ ತೊಳಕಂಡ್ರೂ ಹೋಗೋ ಅಂಗಿಲ್ಲ. ಕೆಂಪು ಧೂಳು. ತೊಳಕಾಳಕೂ ಬ್ಯಾಸರ ಅನ್ನಿಸತೈತಿ. ಏನು ತೊಳಕಂತಿ ಬಿಡು ಸಾಕಾಗೈತಿ ಅನಿಸಿಬಿಡತೈತಿ.

ಒಂದು ಸಲ ಕಾಲು ಮೇಲೆ ಕಲ್ಲು ಬಿದ್ದಾಗ ಆಸ್ಪತ್ರಿಗೆ ಹೋಗಿದ್ವಿ. ಚಿಕ್ಕ ಪುಟ್ಟದಕ್ಕೆಲ್ಲ ಅವರು ನಮಗೆ ಏನೂ ತೋರಿಸಲ್ಲ, ಮಾಡಿಸಲ್ಲ. ಆಕ್ಸಿಡೆಂಟ್ ಏನಾದರೂ ಆದರೆ ಲೋಡಿಂಗ್ ಮಾಡುವಾಗ

ತಲೆ, ಕಾಲು, ಕೈ ಏನಾದರೂ ಒಡೆದರೆ ಅದಕ್ಕೆ ರೊಕ್ಕ ಕೊಡ್ತಾರೆ. ನಾವೇ ಹೋಗಿ ತೋರಿಸಿಕೊಂಬೇಕು. ಯಾವುದೇ ಬೋನಸ್ ಕೊಡಲ್ಲ. ಒಂದು ಲೋಡಿಗೆ ಇಷ್ಟು ರೊಕ್ಕ ಅಂತ ಮುರಿತಾರೆ. ವರ್ಷಕ್ಕೆ ಒಂದು ಸಾರಿ ಅದನ್ನ ಕೊಡ್ತಾರೆ. ಮನೆಗೆ ಇಷ್ಟು ವಾಗಿನ್ ಅಂತ ಇರುತ್ತೆ. ವಾಗಿನ್ ಕಂಟ್ರಾಕ್ಟ್ ಸಬಾನ್‌ಸಾಬ್ ಹತ್ರಾನೇ ನಾವೆಲ್ಲ ಕೆಲಸ ಮಾಡೋದು. ಮೈನಿಂಗ್ ಮಕ್ಕಳಿಗಾಗಿ, ಮೈನಿಂಗ್‌ನಲ್ಲಿ ಕೆಲಸ ಮಾಡುವವರಿಗಾಗಿ ಏನೇನು ಫೆಸಿಲಿಟೀಸ್ ಇದಾವೆ ಅಂತ ನಮಗೇನು ಗೊತ್ತಿಲ್ಲ. ಮೊದಲು ಕೂಲಿ ಕಡಿಮೆ ಇತ್ತು. ಈಗ ೬೦ ರೂಪಾಯಿ ಮಾಡವರೆ. ಇದು ಕೂಡ ಸಾಕಾಗಲ್ಲ. ಎಲ್ಲಾನೂ ರೇಟೇ ಆಗಿ ಬಿಟ್ಟಿದೆ. ಸಾಲ ತೆಗೆದುಕೊಂಬೇಕು. ತೋರಿಸಿಕೊಂಬೇಕು. ದೊಡ್ಡರ ಸಹವಾಸ ಯಾಕೆ ಅಂತ ನಾವು ಏನೂ ಕೇಳಿಲ್ಲ. ಅವರು ಎಷ್ಟು ಕೂಲಿ ಕೊಡ್ತಾರೋ ಅಷ್ಟು ಕೂಲೀನ ತೆಗೆದುಕೊಂತೀವಿ. ನಮಗೆ ಯಾವಾಗಲೂನೂ ಪೂರ್ತಿ ಕೂಲಿ ಕೊಡೋದೇ ಇಲ್ಲ. ಬಟವಾಡೆ ವಾರಕ್ಕೆ ಒಂದು ಸಾರಿ ಕೊಡ್ತಾರೆ. ಸ್ವಲ್ಪ ದುಡ್ಡು ಹಿಡಿದುಕೊಂಡೇ ಕೊಡ್ತಾರೆ. ಗಂಡು ಆಳು ಅಂತ ಗಂಡಸರಿಗೆ ಹೆಂಗಸರಿಗಿಂತ ೨೦-೩೦ ರೂಪಾಯಿ ಜಾಸ್ತಿ ಕೊಡ್ತಾರೆ. ನಾವು ಎಷ್ಟು ಕಷ್ಟ ಬಿದ್ದರೂ ಕೂಡ ಅದೇ ಲೆಕ್ಕ ಕೂಲಿ ಕೊಡ್ತಾರೆ. ಇದನ್ನೆಲ್ಲ ಕೇಳೋಕೆ ಬರೋದಿಲ್ಲ. ನಮ್ಮಲ್ಲಿ ಯಾವುದೇ ರೀತಿ ಸಂಘ ಇಲ್ಲ. ಗಂಡಸರು ಅದೇನೇನೋ ಸಂಘಗಳು ಮಾಡಿಕೊಂಡಿದಾರೆ. ಗಂಡು ಮಕ್ಕಳು ಜಾಸ್ತಿ ಕಷ್ಟ ಬೀಳ್ತಾರ ಅಂತ ಅವರಿಗೆ ಜಾಸ್ತಿ ಕೂಲಿ ಕೊಡ್ತಾರೆ. ನಮಗೆ ಸರಕಾರದಿಂದ ಯಾವುದೇ ಮನೆ ಏನೂ ಬಂದಿಲ್ಲ. ನೋಡಿ ಈ ತರ ಮನೆನಾಗ ಇದೀವಿ.

ಇಲ್ಲಿ ರೋಡ್‌ನಲ್ಲಿ ಲಾರಿ ಓಡಾಟ ಜಾಸ್ತಿ ಅದಾವ. ಮಕ್ಕಳು ಮರಿಗೆ ತುಂಬಾ ಭಯ ಐತಿ. ಯಾರನ್ನು ಏನೂ ಕೇಳಿದರೂ ಪ್ರಯೋಜನ ಇಲ್ಲ. ಮನಿ ತುಂಬಾ ಧೂಳ. ದಿನಾ ಕಸ ಅಂದರೂವು ಧೂಳಾನೇ. ಊಟ ಮಾಡೋವಾಗ ಧೂಳ ಅಂದ್ರೆ ಧೂಳ. ಈ ಓಣ್ಯಾಗ ಚರಂಡಿ ಏನೂ ಇಲ್ಲ. ಓಣಿ ಸಂಧಿನ್ಯಾಗ ನೀರು ಎಲ್ಲಿ ಅಂದ್ರೆ ಅಲ್ಲೆ ನಿಂತು ಬಿಡುತಾವ. ಚಿಕ್ಕ ಮಕ್ಕಳು ಹೊರಗ ಹೋಗಿ ಊಟ ಮಾಡ್ತಾವ. ಆದ್ರ ಏನು ಮಾಡಬೇಕು ಅನ್ನದ ಮೇಲೆ ಬರೀ ಕೆಂಪು ಧೂಳು ಬಂದು ಕೂರುತ್ತೈತಿ. ಸ್ವಲ್ಪ ಜಾಣತನದಿಂದ ಹುಡುಗರಿಗೆ ಒಳಗೆ ಊಟ ಮಾಡಿಸೋದು. ಹೊರಗ ಕುಂದ್ರಂಗಿಲ್ಲ. ವ್ಯಾಗಿನ್ ತುಂಬೋವಾಗ ತಲೆಗೊಂದೇ ಬಟ್ಟೆ ಕಟ್ಟಿಕೋಂತೀವಿ. ದಿನಾನೂ ತಲೆ ತೊಳಿಯೋಕ ಆಗಾಂಗಿಲ್ಲ. ವಾಗಿನ್ ಹಾಕೋವಾಗ ಮುಖ ಮೇಲೆ ಎಲ್ಲಾ ಧೂಳು ತುಂಬಿ ಹೋಗಿರತೈತಿ. ನಾವು ವಾಗಿನ್ ಹಾಕೋವಾಗ ನೀವು ನಮ್ಮನ್ನ ಗುರುತು ಹಿಡಿಯೋಕೆ ಆಗಂಗಿಲ್ಲ ಅಂಗಿರಿತೀವಿ. ಬರೀ ಕೆಂಪು ಧೂಳಿಂದ ದೆವ್ವಗಳಾಗಿರುತೀವಿ. ಮೂತಿ ಮುಖಕ ಏನೂ ಹಾಕ್ಕೋಳ್ಳೋಕ ಕೊಡಂಗಿಲ್ಲ. ಕಣ್ಣಲ್ಲಿ ಧೂಳು ಬಿದ್ದರೂ ತಿಕ್ಕಿಕೊಂಡು, ಊದಿಕೊಂಡು ಸರಿ ಮಾಡಿಕೊಂಬೇಕು. ಡಾಕ್ಟ್ರ ಹತ್ರ ಹೋಗಾಕ ರೊಕ್ಕ ಇರೋದಿಲ್ಲ. ಅದಕ್ಕೆ ಮನಿನಾಗೇ ಕಣ್ಣಿನ ಟ್ಯೂಬು ಅದು ಇದು ಹಾಕಿಕೊಂಡು ಸ್ವಲ್ಪ ಸರಿ ಮಾಡಿಕೊಂತೀವಿ. ಕಿವಿನೋವು ಆದರೆ ಡಾಕ್ಟ್ರ ಹತ್ರ ಊರಾಗೇ ತೋರಿಸಿಕೆಂತೀವಿ. ಹುಡುಗರಿಗೆ ಏನ್ನಾದರೂ ಆದರೆ ಅಂಗಡಿನಾಗ ಗುಳಿಗಿ ಇರತಾವಲ್ಲ ತರದೂ ಸ್ವಲ್ಪ ಸ್ವಲ್ಪ ಹಾಕಿಬಿಡೋದು.

ಅಲ್ಲಿ ಕೆಲಸ ಮಾಡಿಕೊಂಡು ಬಂದು ಮನಿನಾಗ ಕೆಲಸ ಮಾಡಾಕ ಆಗೋದೇ ಇಲ್ಲ. ಕಟ್ಟಿಗೆ ಅಂತೂ ೪-೫ ಮೈಲಿ ದೂರದಿಂದ ತರಬೇಕು. ಕಟ್ಟಿಗೆ ತರೋಕೆ ವಾರಕ್ಕೆ ಒಂದು ದಿನ ಇಡಬೇಕು. ಮುಟ್ಟಾದಗಂತೂ ಕೆಲಸ ಮಾಡೋಕ, ಎತ್ತೋದೂ, ಇಳಿಸೋದು, ಫಿಳೋದೂ, ಬಗ್ಗೋದು, ಬಾರ ಹೊರೋದು ತುಂಬಾ ಕಷ್ಟ ಆಗತೈತಿ. ಈ ಪೌಡ್ರು ಬಾಳ ಈಟು. ಮುಟ್ಟು ಆಗೋದಿನ ಇನ್ನೂ ಒಂದು ವಾರ ಇದೆ ಅನ್ನೋವಾಗ

ಹೀಗೆ ಆಗಿಬಿಡ್ತೀವಿ. ಆದರೆ ಏನೂ ಮಾಡಾಕ ಆಗತೈತಿ. ನಿರವಾಕಿಲ್ಲ ಮಾಡಬೇಕು. ನಾವು ನೋಡಿದರೆ ಎದುಕ ಇಂಗ ಆಗತೈತಿ ಅನ್ನೊದು ಮತ್ತೆ ಇರಲಿ ಬಿಡು ಅಂಗೇ ಆಗತ ಇರತೈತಿ ಅನ್ನೋದು ಮತ್ತೆ ಹೋಗೋದು.

ಈ ಗಣಿ ಕೆಲಸ ಇಲ್ಲದಾಗ ಮೊದಲು ಕೃಷಿ ಕೆಲ್ಸ ಮಾಡ್ತಾ ಇದ್ವಿ. ಈ ೩-೪ ವರ್ಷಗಳಿಂದ ಗಣಿ ಕೆಲಸ ಜಾಸ್ತಿ ಆಗಿ ಊರಿನವರೆಲ್ಲರೂ ಗಣಿ ಕೆಲ್ಸಾನೇ ಮಾಡ್ತಾರೆ. ಮಕ್ಕಳಿಂದ ದೊಡ್ಡೋರ ತನಕ ಎಲ್ಲರೂ ಇದೇ ಕೆಲಸಾನೇ ಮಾಡ್ತಾರೆ. ಈಗ ಅಂತೂ ಈ ಕೆಲ್ಸ ಬಿಟ್ಟರೆ ನಮಗೆ ಬೇರೆ ಕೆಲ್ಸ ಇಲ್ಲ. ಇರೋ ಒಂದು ಎಕರೆನಾಗ ಬೆಳೆ ಬೆಳೆಯೋಕ ಮಳೆ ಇಲ್ಲ. ಯಾವಾಗಲೂ ಒಂದು ಸಾರಿ ಮಳೆ ಬಿದ್ದರೂ ಧೂಳಿನಿಂದ ಮಳಕೆನೇ ಹೊರ ಬರಲ್ಲ.

ಗಂಡ ಲಾರಿಗೆ ಹೋಗ್ತಾನೆ. ಅವರು ಮನೆಗೆ ಬಂದಾಗ ಅವರನ್ನ ಕಂಡು ಹಿಡಿಯಾಕ ಕೂಡ ಆಗಂಗಿಲ್ಲ. ಅಷ್ಟು ಕೆಂಪು ಮಣ್ಣು ಇರತೈತಿ. ಅವರು ಒಂದು ಸಾರಿ ಸ್ನಾನ ಮಾಡಲಿಕ್ಕೆ, ಬಟ್ಟೆ ಒಗೀಲಿಕ್ಕೆ ಒಂದು ಪೂರ್ತಿ ಸೋಪು ಬೇಕು. ಗಂಟಲಲ್ಲಿ ಇರುವ ಧೂಳು ಹೊಟ್ಟೆ ಒಳಗೆ ಹೋಗಲಿ ಅಂತ ಬಾಳೆಹಣ್ಣು ತಗೊಂಡು ತಿಂತೀವಿ. ಧೂಳು ಜಾಸ್ತಿ ಹೊಟ್ಟೆ ಒಳಗೆ ಹೋಗೋದ್ರಿಂದ ಬೇದಿ ಜಾಸ್ತಿ ಆಗತೈತಿ. ಇಡೀ ಬೇದಿ ಕೆಂಪಗೆ ಬರೀ ಮಣ್ಣು ತರ ಇರತೈತಿ" ಎಂದು ಹೇಳಿದಳು.

ಶ್ವಾಸಕೋಶದ ತೊಂದರೆಗಳು

ಗಣಿಗಳು ಹಾನಿಕರ ಧೂಳಿನಿಂದ ತುಂಬಿಕೊಂಡಿರುವುದರಿಂದ ಗಣಿ ಕೆಲಸದಲ್ಲಿ ನಿರಂತರವಾಗಿ ಜನ ಸಮುದಾಯ ಇಂತಹ ಹಾನಿಕಾರಕ ಪರಿಸರದಲ್ಲಿ ವಾಸಿಸುವುದರಿಂದ ಅನೇಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಗಣಿಯಿಂದ ಬರುವ ಧೂಳು ಶ್ವಾಸಕೋಶಗಳನ್ನು ಹಾಳು ಮಾಡಿ ಉಸಿರಾಟದ ತೊಂದರೆಗೆ ಎಡೆ ಮಾಡಿಕೊಡುತ್ತದೆ. ಧೂಳು ಶ್ವಾಸಕೋಶವನ್ನು ಮುಚ್ಚುವುದಲ್ಲದೇ ಅದನ್ನು ಹರಿದು ಹಾಕಿ ನಮ್ಮನ್ನು ಉಸಿರುಗಟ್ಟುವಂತೆ ಮಾಡುತ್ತದೆ. ಹೆಚ್ಚಿನ ಪ್ರಮಾಣದ ಧೂಳು ಶ್ವಾಸಕೋಶಗಳ ತುಂಬಾ ನೀರು ತುಂಬಿಸಿ ಊದಿಕೊಳ್ಳುವಂತೆ ಮಾಡುತ್ತದೆ. ಎಲ್ಲಾ ಗಣಿಗಳಲ್ಲಿ ಸಿಲಿಕೊ ಅಡಗಿರುತ್ತದೆ. ಆದ್ದರಿಂದ ಈ ಸಿಲಿಕಾ ತುಂಬಾ ಸಾಮಾನ್ಯ ಮತ್ತು ಅಪಾಯಕಾರಿಯಾದುದು.

ಗಣಿ ಪ್ರದೇಶದಲ್ಲಿ ಡಿಗ್ಗಿಂಗ್, ಜರಡಿ ಹಿಡಿಯುವುದು, ಕಲ್ಲು ಒಡೆಯುವುದು, ಗುಡ್ಡದ ಮೇಲೆ ಕೆಲಸ ಮಾಡುವವರ ಬಟ್ಟೆ, ಶರೀರ ಮತ್ತು ಉಪಕರಣಗಳು ಧೂಳಿನಿಂದ ತುಂಬಿ ಹೋಗಿರುತ್ತವೆ. ಡಿಗ್ಗಿಂಗ್ ಪ್ರದೇಶದಲ್ಲಿ ತಂದೆ ತಾಯಿ ಅಷ್ಟೇ ಕೆಲಸ ಮಾಡದೆ ತಮ್ಮ ಇಡೀ ಕುಟುಂಬವೇ ಕೆಲಸ ಮಾಡುತ್ತಿರುತ್ತದೆ. ಜೊತೆಗೆ ಚಿಕ್ಕ ಮಕ್ಕಳೂ ಸಹ ಅಲ್ಲಿ ಕೆಲಸ ಮಾಡುತ್ತಿರುತ್ತಾರೆ. ಇನ್ನೂ ನಡೆಯಲು ಬಾರದ ಹಾಲು ಕುಡಿಯುವ ಕೂಸುಗಳನ್ನು ಸಹ ಗಣಿ ಪ್ರದೇಶಕ್ಕೆ ತರುವುದರಿಂದ ಅದೂ ಸಹ ಮಣ್ಣಿನಲ್ಲಿ ಆಡಿಕೊಂಡು ಅದನ್ನೇ ತಿಂದು ಮಣ್ಣಿನೊಂದಿಗೆ ಬೆರೆತು ಹೋಗಿರುತ್ತದೆ. ಬೇರೆ ಪ್ರದೇಶದಿಂದ ವಲಸೆ ಬಂದಿರುವ ಕಾರಣ ಚಿಕ್ಕ ಚಿಕ್ಕ ಜೋಪಡಿಗಳನ್ನು ಹಾಕಿಕೊಂಡಿರುತ್ತಾರೆ. ಈ ಜೋಪಡಿ ತೆರೆದಿದ್ದಾಗಿರುವುದರಿಂದ ಇಡೀ ಧೂಳು ತಾವು ತಿನ್ನುವ ಇಡೀ ಆಹಾರದ ಮೇಲೆ ಕೂರುತ್ತದೆ. ಗಣಿ ಪ್ರದೇಶದಲ್ಲಿ ಅಷ್ಟೇ ಅಲ್ಲದೆ ಗಣಿಯಿಂದ ಸುತ್ತಮುತ್ತಲಿನ ಹಳ್ಳಿ ಪಟ್ಟಣಗಳಲ್ಲಿಯೂ ಸಹ ಈ ಕೆಂಪು ಧೂಳು ಅತಿಯಾಗಿ ಹರಡಿರುವ

ಕಾರಣ ಶ್ವಾಸಕೋಶದ ತೊಂದರೆ ಅಧಿಕ ಪ್ರಮಾಣದಲ್ಲಿ ಕಾಣಸಿಗುತ್ತದೆ. ಆದರೆ ದುರಂತವೆಂದರೆ ಎಷ್ಟೋ ಜನಕ್ಕೆ ಶ್ವಾಸಕೋಶದ ತೊಂದರೆ ಗಣಿಯ ಧೂಳಿನಿಂದ ಬಂದಿದೆ ಎಂಬುವುದು ಗೊತ್ತಿಲ್ಲ.

ಶ್ವಾಸಕೋಶದ ಹಾನಿಯ ಲಕ್ಷಣಗಳೆಂದರೆ:

* ಕಷ್ಟಕರವಾದ ಉಸಿರಾಟ, ಕೆಮ್ಮು ಮತ್ತು ಗೂರು ಸಹಿತ ಕೆಮ್ಮು
* ಹಸಿರು ಅಥವಾ ಹಳದಿ ಉಗುಳಿನಿಂದ ತುಂಬಿದ ಕೆಮ್ಮು
* ಗಂಟಲಿನ ಬಾವು, ಊದಿದ ಗಂಟಲು
* ಹಸಿರಾದ ಕಿವಿ ಮತ್ತು ತುಟಿಗಳ ಚರ್ಮ
* ಎದೆನೋವು
* ಜ್ವರ
* ಹಸಿವಿನ ತೊಂದರೆ
* ಆಯಾಸ

ಈ ಶ್ವಾಸಕೋಶದ ಕಾಯಿಲೆ ದೀರ್ಘಗೊಂಡು ಯಾವುದೇ ರೀತಿಯ ಚಿಕಿತ್ಸೆ ಪಡೆಯದಿದ್ದರೆ ನ್ಯೂಮೋನಿಯಾ, ಅಸ್ತಮ, ಕೀಲುನೋವು, ಟಿ.ಬಿ. ದೀರ್ಘ ಕಾಲದ ಶ್ವಾಸಕೋಶ ಬೇನೆ, ಹೃದಯ ಬೇನೆ, ಶ್ವಾಸಕೋಶ ಕ್ಯಾನ್ಸರ್, ಲೂಸಸ್, ರುಮ್ಯಾಟಿಕ್ ಜ್ವರ, ಸ್ಥರೋಸಿಸ್, ಸಿಲಿಕೋ ಪ್ರಾಲಿಯೇಸಿಸ್ ರೋಗಗಳಿಗೆ ತುತ್ತಾಗುತ್ತಾರೆ ಎಂದು ನುರಿತ ವೈದ್ಯರೊಬ್ಬರು ಹೇಳುತ್ತಾರೆ.

ಕ್ಷಯ ರೋಗ (ಟಿ.ಬಿ)

ಕ್ಷಯವು ಒಂದು ಶ್ವಾಸಕೋಶದ ದೀರ್ಘಕಾಲಿಕ ಸಾಂಕ್ರಾಮಿಕ ರೋಗವಾಗಿದೆ. ಗಣಿ ಕೂಲಿ ಕಾರ್ಮಿಕರು ಅತಿಯಾದ ಧೂಳಿನ ಪರಿಸರದಲ್ಲಿ ಕೆಲಸ ಮಾಡುವುದರಿಂದ ಕ್ಷಯ ರೋಗಕ್ಕೆ ತುತ್ತಾಗುವುದು ಸಹಜ. ಯಾವ ಜನತೆ ಧೂಳಿಗೆ ಹಾಗೂ ಅಪಾಯಕಾರಿ ರಾಸಾಯನಿಕಗಳನ್ನು ತುಂಬಿರುವ ಪರಿಸರದಲ್ಲಿರುವವರೋ ಅಂತಹವರಿಗೆ ಕ್ಷಯ ತಪ್ಪಿದ್ದಲ್ಲ.

ಡಿಗ್ಗಿಂಗ್, ಲೋಡಿಂಗ್, ಕಲ್ಲು ಒಡೆಯುವುದು, ಪುಡಿ ಮಾಡುವುದು, ಲಾರಿಯಲ್ಲಿ ಲೋಡ್‌ಗಳನ್ನು ಹೊಡೆಯುವುದು ಈ ರೀತಿಯ ಕೆಲಸಗಳಲ್ಲಿ ಅವರ ಶ್ರಮಕ್ಕೆ ತಕ್ಕಂತೆ ಕೂಲಿಯನ್ನು ಕಾಂಟ್ರಾಕ್ಟ್ ಗುತ್ತಿಗೆ ಒಪ್ಪಿಗೆ ನಿಗದಿಪಡಿಸಿರುವುದರಿಂದ ಸರಿಯಾಗಿ ನೀರು ಕುಡಿಯದೇ, ಆಹಾರ ಸೇವಿಸದೇ, ವಿಶ್ರಾಂತಿ ತೆಗೆದುಕೊಳ್ಳದೇ ಉರಿಬಿಸಿಲಲ್ಲಿ ಕೆಲಸ ಮಾಡುವುದರಿಂದ ಕ್ಷಯ ರೋಗಕ್ಕೆ ತುತ್ತಾಗುವುದು ಹೆಚ್ಚು. ಏಕೆಂದರೆ ಅವರು ದೈಹಿಕವಾಗಿ ದುರ್ಬಲರಾಗಿರುತ್ತಾರೆ. ಟಿ.ಬಿ. ಇರುವವರು ಬಹುಬೇಗ ಎಚ್.ಐ.ವಿ. ಏಡ್ಸ್ ರೋಗಗಳಿಗೆ ಸಹಜವಾಗಿ ಬಲಿಯಾಗುತ್ತಾರೆ. ಗಣಿಗಾರಿಕೆಯಲ್ಲಿ ಕೆಲಸ ಮಾಡುವ ಶೇಕಡ ೬೦ ರಷ್ಟು ಹೆಣ್ಣು ಮಕ್ಕಳು ಕ್ಷಯ ರೋಗಕ್ಕೆ ಬಲಿಯಾಗುತ್ತಿದ್ದಾರೆ ಎಂದು ಹೇಳಲಾಗುತ್ತಿದೆ. ಕಾರಣ ಅವರ ಅತಿಯಾದ ಕೆಲಸದ ಒತ್ತಡ, ಉದ್ವೇಗವನ್ನು ಅನುಭವಿಸುತ್ತಿರುವುದರಿಂದ ಮಾನಸಿಕವಾಗಿ ಕುಬ್ಜರಾಗಿ ಹೋಗಿದ್ದಾರೆ. ಗಣಿ ಪ್ರದೇಶದಲ್ಲಿ ಕ್ಷಯ ರೋಗಕ್ಕೆ ದೊಡ್ಡವರು ಚಿಕ್ಕವರು ಎಂಬ ಯಾವುದೇ ತಾರತಮ್ಯ

ಇಲ್ಲ. ಕ್ಷಯ ರೋಗಕ್ಕೆ ಬಲಿಯಾದ ಜನತೆ ಕೆಮ್ಮು, ಜ್ವರ, ರಕ್ತದಿಂದ ಕೂಡಿದ ಕೆಮ್ಮಿನಿಂದ ನಿಶ್ಯಕ್ತಿ, ತೂಕ ಕಳೆದುಕೊಳ್ಳುವಿಕೆ ಹಾಗೂ ಬೆವರುವಿಕೆಯ ಸಮಸ್ಯೆಗಳಿಗೆ ತುತ್ತಾಗುತ್ತಿದ್ದಾರೆ. ಕ್ಷಯ ರೋಗಕ್ಕೆ ಸರಿಯಾದ ಔಷಧಿಯನ್ನು ತೆಗೆದುಕೊಳ್ಳದಿದ್ದರೆ ಕೆಲವೇ ವರ್ಷಗಳಲ್ಲಿ ಇವರ ಸಾವು ಖಂಡಿತ.

ಕ್ಷಯ ರೋಗ ಹರಡುವುದನ್ನು ತಡೆಯಲು ಮೊದಲು ಕ್ಷಯ ರೋಗಕ್ಕೆ ಔಷಧಿ ತೆಗೆದುಕೊಳ್ಳಬೇಕು. ಇಂತಹ ಯಾವುದೇ ಮಾಹಿತಿ ಅವರಿಗೆ ಗೊತ್ತಿಲ್ಲ. ಕ್ಷಯ ರೋಗವನ್ನು ಮಾಮೂಲಿಯ ಕೆಮ್ಮು ಎಂದೇ ಹೇಳುತ್ತಾರೆ. "ಏನು ಬಿಡಮ್ಮ ಇದು ನಮಗೇನು ಅನಸಂಗಿಲ್ಲ. ಬರತ್ತೈತಿ ಹೋಗತ್ತೈತಿ ಏನು ಮಾಡಾಕಾಗತ್ತೈತಿ, ಒಂದು ದಿವಸ ಹೋದರೂನೂ ಇಲ್ಲಿ ದಿನಕ್ಕೆ ೭೦ ರೂಪಾಯಿ ಹೋಗತ್ತೈತಿ ಮತ್ತೆ ಆಸ್ಪತ್ರೆಯಲ್ಲಿ ಬೇರೆ ಬಾಳ ರೊಕ್ಕ ಇಸಕಂತಾರ ಏನು ಹೋಗಬೇಕು" ಅಂತಾರೆ.

ಗಣಿಯಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕರಿಗ್ಯಾರಿಗೂ ತಾವು ಕೆಲಸ ಮಾಡುವ ಕಂಪನಿಯ ಮಾಲಿಕರು ಗೊತ್ತಿಲ್ಲ. ಕಂಟ್ರಾಕ್ಟರ್ ಅಷ್ಟೇ ಗೊತ್ತು ಎಂದು ಹೇಳುತ್ತಾರೆ. ಪುರುಷರು ಕೆಲವು ಕಾರ್ಮಿಕ ಸಂಘಟನೆಯನ್ನು ಕಟ್ಟಿಕೊಂಡು ಅದರ ಮೂಲಕ ಅಷ್ಟೊ ಇಷ್ಟೋ ತಮ್ಮ ಮೂಲಭೂತ ಸೌಲಭ್ಯಗಳಿಗಾಗಿ ಧ್ವನಿ ಎತ್ತುತ್ತಾರೆ. ಆದರೆ ಯಾವುದೇ ಕಾರ್ಮಿಕ ಸಂಘಟನೆಯಲ್ಲಿ ಮಹಿಳೆಯರು ಇಲ್ಲ. ಮಹಿಳೆಯರದ್ದೇ ಆದ ಯಾವುದೇ ಕಾರ್ಮಿಕ ಸಂಘಟನೆಗಳು ಇಲ್ಲ. ಅವರೆಲ್ಲರೂ ಅಸಂಘಟಿತ ವಲಯದಲ್ಲಿಯೇ ದುಡಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಇವರು ತಮ್ಮ ಮೂಲ ಸೌಲಭ್ಯಗಳನ್ನು ಯಾರ ಹತ್ತಿರ ಹೇಳಬೇಕು ಯಾರನ್ನು ಕೇಳಬೇಕು? "ಕೂಲಿ ಜಾಸ್ತಿ ಮಾಡಿ ೧ ದಿನ ಸೂಟಿ ಕೊಡಿ ಅಂತ ಕೇಳಿದರೆ ಇಲ್ಲಿ ಇನ್ನ ಮೇಲಿಂದ ಕೂಲಿಗೆ ಬರಬೇಡ ಅಂತ ಹೇಳ್ತಾರೆ. ಇದನ್ನು ಬಿಟ್ಟರೆ ನಾವು ಯಾವ ಕೆಲ್ಸಕ್ಕೆ ಹೋಗಬೇಕು. ಇದೊಂದೆ ಕೆಲ್ಸಾನೆ ಇಲ್ಲಿ ಇರೋದು. ಇನ್ನು ಸಂಘದ ಬಗ್ಗೆ ಮಾತನಾಡಿದರೆ ಗಂಡು ಮಕ್ಕಳು ನಗ್ತಾರೆ. ಬಾರಿ ಸಂಘ ಮಾಡ್ತೀರಿ ಅಂತಾರ. ಗಂಡುಮಕ್ಕಳು ಇರುವ ಸಂಘದಲ್ಲಿ ನಮ್ಮನ್ನು ಸೇರಿಸಿಕೊಳ್ಳಂಗಿಲ್ಲ ಅನ್ನಿಸ್ತೈತಿ. ನಾವೂ ಹೋಗಿ ಕೇಳಿಲ್ಲ", ಅಂತ ನಗ್ತಾನೇ ಹೇಳಿದರು ಗಾದಿಗನೂರಿನ ೪೫ ವರ್ಷದ ಶಾರದಮ್ಮ.

ಹೆಚ್.ಐ.ವಿ.

ಬಳ್ಳಾರಿಯ ಹಂಪಿ ವಿಶ್ವವಿಖ್ಯಾತ ಪ್ರವಾಸೋದ್ಯಮವಾದ್ದರಿಂದ ಇಲ್ಲಿ ಈಗಾಗಲೇ ಹೋಟೆಲ್, ಡಾಬಾ, ಪಬ್, ಕ್ಲಬ್‌ಗಳು ಸೃಷ್ಟಿಯಾಗಿ ಇಲ್ಲಿ ಲೈಂಗಿಕ ದಾಂಧಲೆ ನಡೆಯುತ್ತಿದೆ. ಬಳ್ಳಾರಿಯಲ್ಲಿ ಹೆಚ್.ಐ.ವಿ. ಕಾಣಿಸಿಕೊಂಡಿದ್ದೇ ಹಂಪಿಯ ಪ್ರವಾಸೋದ್ಯಮದಿಂದ ಎಂದು ಕೆಲವರು ಹೇಳುತ್ತಾರೆ. ಇದರ ಜೊತೆಗೆ ಗಣಿಗಾರಿಕೆ ಬೆಳೆದಂತೆ, ವಲಸಿಗರು ಹೆಚ್ಚಾದಂತೆ, ಬಳ್ಳಾರಿ ಜಿಲ್ಲೆಯಲ್ಲಿ ಹೆಚ್.ಐ.ವಿ. ಸೋಂಕಿತರು ಹೆಚ್ಚಾಗಿದ್ದಾರೆ. ಕರ್ನಾಟಕದಲ್ಲಿಯೇ ಹೆಚ್.ಐ.ವಿ. ಸೋಂಕಿತರಲ್ಲಿ ಬಳ್ಳಾರಿ ಮೂರನೆ ಸ್ಥಾನದಲ್ಲಿದೆ. ಆಂಧ್ರ, ತಮಿಳುನಾಡು, ಮಹಾರಾಷ್ಟ್ರ, ಗೋವಾ, ಕೇರಳ ಹೀಗೆ ಬೇರೆ ಬೇರೆ ಕಡೆಗಳಿಂದ ಗಣಿಗಾರಿಕೆಗಾಗಿ ಬರುವವರು ಕೇವಲ ಗಣಿ ಕಾರ್ಮಿಕರಷ್ಟೇ ಅಲ್ಲದೆ ಗಣಿ ಮಾಲಿಕರು, ಕಾಂಟ್ರಾಕ್ಟರ್‌ಗಳು, ಲಾರಿಯವರು, ಲಾರಿ ಓನರ್‌ಗಳು, ಹೋಟೆಲ್ ಉದ್ಯಮಿಗಳು ಸಹ ಬರುತ್ತಾರೆ. ಇವರಲ್ಲಿ ಕೆಲವರು ಗಣಿಯಲ್ಲಿ ಕೆಲಸ ಮಾಡುವ ಮಹಿಳೆಯರನ್ನು ಲೈಂಗಿಕವಾಗಿ ಹಿಂಸಿಸುವ ಅವಳನ್ನು ಲೈಂಗಿಕತೆಯಲ್ಲಿ ಬಳಸಿಕೊಳ್ಳುವ ಕೆಲಸಗಳು ತುಂಬಾ ನಡೆಯುತ್ತಿವೆ ಎಂದು ಅಲ್ಲಿನ ಮಹಿಳೆಯರೇ ಹೇಳುತ್ತಾರೆ.

ಇದರಿಂದಾಗಿ ಅವಳ ಹಿಂಸೆಗೆ ಮನೆಕೆಲಸ, ಗಣಿಕೆಲಸ, ಮಕ್ಕಳ ಪೋಷಣೆ, ಗಂಡನ ಹಿಂಸೆ, ಒತ್ತಡ ಇವುಗಳ ಜೊತೆ ಕೆಲಸ ಮಾಡುವ ಪ್ರದೇಶದಲ್ಲಿಯ ಲೈಂಗಿಕ ಹಿಂಸೆಯೂ ಬಂದು ಸೇರಿಕೊಂಡು ಅವಳು ಇನ್ನಷ್ಟು ಹಿಂಸೆಗೆ ಒಳಗಾಗುತ್ತಿದ್ದಾಳೆ. ಕೆಲವು ಮಹಿಳೆಯರು ಇಂತಹ ಲೈಂಗಿಕ ಹಿಂಸೆಯನ್ನು ಹೇಳಿಕೊಳ್ಳದೇ ಮುಚ್ಚಿಡುತ್ತಾರೆ. ಅವರಿಗೆ ಕಾಂಟ್ರಾಕ್ಟರ್‌ಗಳ ಭಯ ಹೆಚ್ಚಾಗಿದ್ದು ಎಲ್ಲಿ ಕೆಲಸದಿಂದ ತೆಗೆಯುತ್ತಾರೋ, ಅಥವಾ ಇನ್ನೂ ಹೆಚ್ಚಿನ ಲೈಂಗಿಕ ಹಿಂಸೆಗೆ ಒಳಪಡಿಸುತ್ತಾರೋ ಎಂದು ಹೆದರುತ್ತಾರೆ.

ಗಣಿಗಾರಿಕೆ ಹೆಚ್ಚಾದಂತೆ ಹೋಟೆಲ್‌ಗಳು, ಸಿನಿಮಾ ಮಂದಿರಗಳು, ಡಾಬಾಗಳು ಹೆಚ್ಚು ತೆರೆಯಲ್ಪಟ್ಟಿವೆ. ಇಂತಹ ಪ್ರದೇಶದಲ್ಲಿ ವೇಶ್ಯಾವಾಟಿಕೆ ತುಂಬಾ ಭೀಕರವಾಗಿ ನಡೆಯುತ್ತದೆ. ಗಣಿ ಕೆಲಸಕ್ಕಾಗಿ ಬಂದಿರುವ ಮನೆ ಬಿಟ್ಟು ೧೫-೨೦ ದಿವಸ ಅಥವಾ ಅದಕ್ಕಿಂತ ಹೆಚ್ಚು ದಿವಸ ಆಗಿರುವ ಪುರುಷರನ್ನು ಸಹಜವಾಗಿ ಇಂತಹ ಹೋಟೆಲ್‌ಗಳು, ಡಾಬಾಗಳು ಆಕರ್ಷಿಸುತ್ತವೆ. ಇಂತಹ ವೇಶ್ಯಾವಾಟಿಕೆ ಚಟುವಟಿಕೆಗಳಿಗೆ ಗಣಿಯಲ್ಲಿ ಕೆಲಸ ಮಾಡುವ ಮಹಿಳೆಯರು, ಅಸಹಾಯಕ ಹೆಣ್ಣು ಮಕ್ಕಳು ಬಲಿಯಾಗುತ್ತಿದ್ದಾರೆ. ಕೆಲವು ಮಹಿಳೆಯರು ಒಪ್ಪಿಗೆ ಮೇರೆಗೆ ಇದರಲ್ಲಿ ಪಾಲ್ಗೊಂಡರೆ (ಇದರ ಪ್ರಮಾಣ ತುಂಬಾ ಕಡಿಮೆ), ಕೆಲವರನ್ನು ಬಲವಂತವಾಗಿ ಬಳಸಿಕೊಂಡು ಕೊಲೆ ಮಾಡಲಾಗುತ್ತದೆ. ದೇವದಾಸಿ ಹೆಸರಿನಲ್ಲಿಯೂ ಇಂತಹ ಕೆಲಸಗಳು ಸಾಕಷ್ಟು ನಡೆಯುತ್ತಿವೆ. ಇತ್ತೀಚಿಗೆ ಇದೊಂದು ಮಾರುಕಟ್ಟೆಯಾಗಿ ಬದಲಾಗಿ ಹೊರಗಿನಿಂದಲೂ ಹುಡುಗಿಯನ್ನು ಕರೆ ತಂದು ಇಲ್ಲಿ ಬಳಸಿಕೊಳ್ಳಲಾಗುತ್ತಿದೆ. ಇತ್ತೀಚೆಗೆ ಗಣಿಕೆಲಸವನ್ನೆಲ್ಲಾ ಯಂತ್ರಗಳೇ ಮಾಡುತ್ತಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರಿಗೆ ಬೇರೆ ಕೆಲಸ ಇಲ್ಲದಾಗಿ ಅವರ ಆರ್ಥಿಕ ಪರಿಸ್ಥಿತಿ ಅವರನ್ನು ದಂದೆಗೆ ಇಳಿಯುವಂತೆ ಮಾಡಿದೆ. ಹೀಗೆ ಗಣಿಗಾರಿಕೆಯಲ್ಲಿ ಕೆಲಸ ಮಾಡುವವರು ಧೂಳಿನಿಂದ ಟಿ.ಬಿ.ಗೆ ಬಲಿಯಾಗುವುದರ ಜೊತೆಗೆ ಅತಿ ಬೇಗ ಹೆಚ್.ಐ.ವಿ.ಗೂ ಬಲಿಯಾಗುತ್ತಿರುವುದು ದುರಂತ. ಹಾಗೆಯೇ ಅದು ಸತ್ಯ ಕೂಡ.

ಹೆಂಗೋ ಅಡ್ಜಸ್ಟ್ ಮಾಡಿಕೊಳ್ಳಿ

ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳಲ್ಲಿ ನೀರಿನ ಅಭಾವ ತುಂಬಾ ಇದೆ. ಗಣಿಯಿಂದ ಚಿಮ್ಮಿದ ಧೂಳು ರಸ್ತೆಗಳಿಂದ ಏಳದಿರಲೆಂದು ರಸ್ತೆಗಳಿಗೆ ನೀರನ್ನು ಲಾರಿಗಳ ಮೂಲಕ ಚಿಮುಕಿಸುವುದರಿಂದಾಗಿ ಸಾಕಷ್ಟು ನೀರು ವ್ಯರ್ಥವಾಗುತ್ತದೆ. ತಲೆ ಎತ್ತಿರುವ ನೂರಾರು ಸ್ಪಾಂಜಾಗಳಿಗೆ ನೀರು ಎಷ್ಟಾದರೂ-ಸಾಲದು. ನೂರಾರು ಲೀಟರ್‌ಗಳ ನೀರನ್ನು ಇವುಗಳಿಗೆ ಒದಗಿಸಬೇಕಾಗುತ್ತಿದೆ. ಆದರೆ ಡಿಗ್ಗಿಂಗ್ ಪ್ರದೇಶಗಳಿಗೆ ವಲಸೆ ಬಂದು ಸಣ್ಣ ಸಣ್ಣ ಗುಡಿಸಲುಗಳನ್ನು ಹಾಕಿಕೊಂಡು ಡಿಗ್ಗಿಂಗ್ ಮಾಡುತ್ತಾ ಜೀವನ ಸಾಗಿಸುತ್ತಿರುವ ದಲಿತ ಕುಟುಂಬಗಳು ನೀರಿಗೆ ಪರದಾಡುವ ಸ್ಥಿತಿಯನ್ನು ದೇವರೇ ಬಲ್ಲ.

"೧೦ ಕಿ.ಮೀ. ದೂರದಿಂದ ನೀರನ್ನು ತರಬೇಕ್ರೀ. ಅಲ್ಲಿ ಕಾಣ್ತಾ ಇರೋ ಫ್ಯಾಕ್ಟರಿಯಿಂದ ತರತೀವ್ರೀ. ಅಲ್ಲಿ ಅವರು ಕುಡಿಯೋಕು ಸಹ ನೀರು ಬಿಡಂಗಿಲ್ಲ. ಎಲ್ಲಾ ನೀರು ನಿಮಗೆ ಬಿಟ್ಟರೆ ಫ್ಯಾಕ್ಟರಿಗೆ ನೀರು ಸರಿಬರಂಗಿಲ್ಲ. ಇಲ್ಲಿ ಬಂದು ಎಲ್ಲಾ ಗಲಿಬಿಲಿ ಮಾಡ್ತೀರಾ ಇಲ್ಲಿಗೆ ಬರಬ್ಯಾಡ್ರಿ ಅಂತಾರ. ಇಲ್ಲಿ ಎಲ್ಲೂ ಸುತ್ತಮುತ್ತ ನೀರು ಇಲ್ಲ. ನಮ್ಮ ಕಂಟ್ರಾಕ್ಟರೂ ಇದರ ಬಗ್ಗೆ ಕೇಳಿದರೂ ತಲೆಕೆಡಿಸಿಕಳಂಗಿಲ್ಲ. ಹೆಂಗೋ ಅಡ್ಜಸ್ಟ್ ಮಾಡ್ಕಳ್ಳಿ ಅಂತಾರೆ. ನಾವು ಏನು ಮಾಡಬೇಕು ರೀ. ನಮ್ಮ ಪರಿಸ್ಥಿತಿ ಇಂಗೈತಿ. ಮೈನಿಂಗ್ ಗುಡ್ಡದತ್ರ ಇದ್ದಿದ್ರ ಟ್ಯಾಂಕರ್‌ನಲ್ಲಿ ನೀರು ತಂದು ಕೊಡತಾ ಇದ್ರು. ಇಷ್ಟು ದೂರ ಕೆಲಸ ಮಾಡ್ತಾ

ಇರೋದ್ರಿಂದ ನಮಗೆ ನೀರು ತುಂಬಾ ಕಷ್ಟ ಆಗತ್ತೈತಿ. ನೀರನ್ನು ಬಂಗಾರ ಬಳಸಿದಂತೆ ಬಳಿಸ್ತಾ ಇದೀವಿ. ನಾವೇ ಹೋಗಿ ನೀರು ತರಬೇಕು ಗಂಡು ಮಕ್ಕು ತರಂಗಿಲ್ಲ ಇಷ್ಟೊಂದು ಧೂಳು ನೀವೇ ನೋಡ್ತಾ ಇದೀರಿ. ಅಡಿಗಿ ಮಾಡಿಕೊಂಡು ಉಂಡು, ನೀರು ಕುಡಿತೀವಿ. ಇನ್ನೂ ಮಿಕ್ಕಿದ್ದಕೆಲ್ಲಾ ನೀರು ಬಳಸಬೇಕು ಅಂದ್ರ ಹಿಂದು ಮುಂದು ನೋಡ್ತಾವಿ". ಹೀಗಂತ ಕಾರಿಗನೂರಿನಿಂದ ೭ ಕಿ.ಮೀ. ದೂರದ ಹೊಲದಲ್ಲಿ ಡಿಗ್ಗಿಂಗ್ ಮಾಡಲು ಕೂಡ್ಲಿಗಿಯಿಂದ ವಲಸೆ ಬಂದಿರುವ ಹುಲಿಗೆಮ್ಮ ಹೇಳುತ್ತಾಳೆ.

ನೆಲದಲ್ಲಿ ಅಡಗಿರುವ ಕಬ್ಬಿಣದ ಅದಿರನ್ನು ಸಿವೂರ್ ಅಗೆದು ತೆಗೆಯುವುದು ಮತ್ತು ಜರಡಿ ಹಿಡಿಯುವುದರ ಮೂಲಕ ಅದಿರಿನ ಸಾಮರ್ಥ್ಯದ ಮೇಲೆ ಅವುಗಳನ್ನು ವಿಂಗಡಿಸುವುದು ತುಂಬಾ ಕಷ್ಟದ ಕೆಲಸ. ಇಂತಹ ಸಂದರ್ಭದಲ್ಲಿ ಕೆಂಪು ಮಣ್ಣು ಇಡೀ ದೇಹವನ್ನು ಆವರಿಸಿ, ದೇಹದ ಮೇಲೆ ಕೂರುತ್ತದೆ. ಇಲ್ಲಿ ೫-೬ ವರ್ಷದ ಮಕ್ಕಳು ಸಹ ಕೆಲಸ ಮಾಡುತ್ತಾರೆ. ಹಾಲುಗಲ್ಲದ ಹಸುಗೂಸುಗಳು ಸಹ ತಾಯಿ ಕೆಲಸ ಮಾಡುವ ಪಕ್ಕದಲ್ಲಿಯೇ ಮಣ್ಣಿನಲ್ಲಿ ಆಡಿ ಅದೇ ಮಣ್ಣನ್ನು ಮೈಗೆ ಮೆತ್ತಿಸಿಕೊಂಡು, ಅದನ್ನೇ ತಿನ್ನುತ್ತಾರೆ. ಕೆಲಸ ಮಾಡುವ ತಾಯಿಗೆ ಇದರ ಯಾವುದೇ ಲಕ್ಷ್ಯ ಇರುವುದಿಲ್ಲ. ಇನ್ನಷ್ಟು ದುಡಿದರೆ ಇನ್ನಷ್ಟು ಹಣ ಸಂಪಾದಿಸಬಹುದು, ಮನೆ ನಿಭಾಯಿಸಬಹುದು ಎಂಬ ಆತುರದಲ್ಲಿರುತ್ತಾಳೆ.

ಕಳೆದ ಎರಡು ವರ್ಷದಿಂದ ೨೦,೦೦೦ ಮಂದಿ ಬಾಲಕಾರ್ಮಿಕರು ಗಣಿ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಇವರ ಜೀವನ ಸಂಕಷ್ಟದಿಂದ ಕೂಡಿದೆ ಎಂದು ಹೇಳುತ್ತಿದ್ದ ಸಂದರ್ಭದಲ್ಲಿ ಜಿಲ್ಲಾಧಿಕಾರಿಯಾಗಿದ್ದ ಶ್ರೀ ಜಯರಾಂ ತಂಡ ಬಳ್ಳಾರಿಯಲ್ಲಿ ಬಾಲಕಾರ್ಮಿಕರು ಇಲ್ಲವೇ ಇಲ್ಲ ಎಂದು ಹೇಳಿದರು. ಇದರ ಬಗ್ಗೆ ಸಾಕಷ್ಟು ವರದಿ ಸಲ್ಲಿಸಲಾಯಿತು. ಇಲ್ಲಿ ಎಲ್ಲಾ ರೀತಿಯ ಸಮಸ್ಯೆಗಳು ಇವೆ ಎಂದು ಹೇಳಿದರೆ ಅದನ್ನು ನಾವು ಹೊರಬೇಕು, ತಲೆ ಕೆಡಿಸಿಕೊಳ್ಳಬೇಕು ಎಂದು ಜವಾಬ್ದಾರಿಯಿಂದ ನುಣಚಿಕೊಳ್ಳುವ ಇಂತಹ ಅಧಿಕಾರಿಗಳನ್ನು ಏನೆನ್ನಬೇಕು?

ಡಿಗ್ಗಿಂಗ್ (ಗಣಿ) ಕೆಲಸ ಮಾಡುವ ಸ್ಥಳದಲ್ಲಿ ಕುಡಿಯುವ ನೀರು ಸರಿಯಾಗಿ ಸಿಗದ ಕಾರಣ ಹೆಚ್ಚಾಗಿ ನೀರು ತೆಗೆದುಕೊಳ್ಳುವುದಿಲ್ಲ. ತೆಗೆದುಕೊಂಡರೂ ಅದು ಪರಿಶುದ್ಧವಾಗಿರುವುದಿಲ್ಲ. ಇದರಿಂದಾಗಿ ಅತಿಸಾರ, ಕಿಡ್ನಿ ಸಮಸ್ಯೆ, ಉರಿಮೂತ್ರ, ಹೆಣ್ಣು ಮಕ್ಕಳಲ್ಲಿ ಗರ್ಭಕೋಶದ ತೊಂದರೆಗಳು, ಬಿಳಿಮುಟ್ಟು, ಕೆಂಪು ಹೆಚ್ಚಾಗುವುದು (ಇದನ್ನು ಹಿಸ್ಪಿರೆಕ್ಷಮಿ ಎಂದು ಕರೆಯುತ್ತಾರೆ.) ಅತಿಯಾದ ಹೊಟ್ಟೆ ನೋವು ಬರುವುದು, ಮುಂತಾದ ಕಾಯಿಲೆಗಳು ಕಾಣಿಸಿಕೊಂಡಿವೆ ಎಂದು ಪಾಪಿನಾಯಕನಹಳ್ಳಿಯ ಡಾ. ಅಶೋಕ್ ಹೇಳುತ್ತಾರೆ.

ಸಾಯಂಕಾಲ ಒಂದು ಬೇಕೇ ಬೇಕ್ರಿ

"ಬೆಳಿಗ್ಗೆ ೯ ಗಂಟೆಗೆ ಕೆಲಸಕ್ಕೋಗ್ತೀನಿ ರ್ರೀ. ನಾನು ಅಲ್ಲಿ ಕಾಣ್ತದಲ್ಲ ಮಿಷಿನು ಅಲ್ಲಿಗೆ ಹೋಗ್ತೀನಿ ರೀ. ಲಮ್ಸ್‌ನ್ನು ಕ್ರಿಷರ್‌ಗೆ ಹಾಕೋಕೋಗ್ತೀನಿ. ಲಮ್ಸ್ ತುಂಬಾ ಭಾರ. ಕ್ರಷರ್ ಹತ್ರ ನಾವೇ ಹೆಣ್ಣು ಮಕ್ಕು ತಗೊಂಡೋಗಿ ಕೊಡ್ತೀವಿ, ಗಂಡು ಮಕ್ಕಳು ಅದರಲ್ಲಿ ಹಾಕ್ತಾರ. ಬಾಳ ತೂಕ ಇರತ್ತೈತಿ ಅದು. ಕುತ್ತಿಗಿ, ಕಾಲು, ಕೈ ಬಾಳ ನೋವು ಬರತ್ತೈತಿ. ಮನಿಗಿ ಬಂದ್ರ ತುಂಬಾ ಸುಸ್ತು, ನಿದ್ದಿ ಬರಂಗಿಲ್ಲ. ಸರಾಯಿ ಕುಡಿದರೇನೇ ನಿದ್ದಿ ಬರೋದು, ಇಲ್ಲಂದ್ರೆ ಬರಲ್ಲ. ಏನಾದರೂ ಸಂಜಿಗಿ ಒಂದು ಹಾಕೇ ಬೇಕ್ರೀ" ಎಂದು ಸಂಡೂರಿನ ನಂದಿಹಳ್ಳಿಯ ಬಳಿ ಇರುವ ಹೆಚ್.ಟಿ. ಕ್ಯಾಂಪ್‌ನ ಗಾಳೆಮ್ಮ ಹೇಳುತ್ತಾಳೆ.

ಗಣಿ ಪ್ರದೇಶದ ನೀರಿನಲ್ಲಿ ಕ್ಯಾಲ್ಸಿಯಂ ಜಾಸ್ತಿ ಇದೆ. ಅಂತಹ ಕ್ಯಾಲ್ಸಿಯಂ ಭರಿತ ನೀರನ್ನು ಸೇವಿಸುವುದರಿಂದ ವಿಶ್ರಾಂತಿ ಇಲ್ಲದೆ ಹೆಚ್ಚು ಕೆಲಸ ಮಾಡುವುದರಿಂದ, ಊಟಕ್ಕಿಂತ ಹೆಚ್ಚಾಗಿ ಕುಡಿತವೇ ಇರುವುದರಿಂದ ಕಿಡ್ನಿ ಸಮಸ್ಯೆ, ಗ್ಯಾಸ್ಟಿಕ್ಸ್ (ಹೊಟ್ಟೆ ಕಟ್ಟಿದಾಗ), ಕರಳು ಬೇನೆ ಮುಂತಾದ ಸಮಸ್ಯೆಗಳು ಹೆಣ್ಣು/ಗಂಡು ಇಬ್ಬರಲ್ಲಿಯೂ ಕಾಣಿಸಿಕೊಂಡಿವೆ. ಅದರಲ್ಲಿಯೂ ಬಳ್ಳಾರಿಯಲ್ಲಿಯೇ ಶೇಕಡ ೮೦ ರಷ್ಟು ಕಿಡ್ನಿ ಸಮಸ್ಯೆ ಸಂಡೂರು ಪ್ರದೇಶದಲ್ಲಿದೆ.

ಲಾರಿಗಳೆಂಬ ಭೂತಗಳು

ಬಳ್ಳಾರಿಯಲ್ಲಿ ಕೈಗಾರಿಕೆಗಳ ಸಂಖ್ಯೆ ಅಂದಾಜು ಒಂದು ಸಾವಿರ ಇದ್ದರೆ ವಾಹನಗಳ ಸಂಖ್ಯೆ ಲಕ್ಷಕ್ಕೂ ಹೆಚ್ಚು. ಇಡೀ ಜಿಲ್ಲೆಯ ಮಾಲಿನ್ಯ ರಕ್ಷಣೆಯ ಹೊಣೆ ಹೊತ್ತ ಮಂಡಳಿಯಲ್ಲಿ ಸಿಬ್ಬಂಧಿಗಳ ಸಂಖ್ಯೆ ಕೇವಲ ಹನ್ನೊಂದು ಜನ ಮಾತ್ರ. ಗಣಿಗಾರಿಕೆಯಿಂದಾಗಿ ಎಲ್ಲಾ ವಾಹನಗಳಿಗಿಂತ ಲಾರಿಗಳ ಸಂಖ್ಯೆ ಹೆಚ್ಚಾಗಿದೆ. ಗಣಿಯ ಹೋರ್‌ನ್ನು ಲಾರಿಗಳು ತುಂಬಿಕೊಂಡು ಸ್ಟಾಕ್‌ಯಾರ್ಡ್‌ಗಳು, ರೈಲ್ವೆ ಹಳಿಗಳು ಇತರ ಪ್ರದೇಶಗಳ ಕಡೆಗೆ ಸಾಗಿಸುವುದರಿಂದ ಅವುಗಳಿಂದ ಉಂಟಾಗುವ ಶಬ್ದ, ಧೂಳು, ಆಕ್ಸಿಡೆಂಟ್‌ನಂತಹ ತೊಂದರೆಗಳಿಗೆ ಬಳ್ಳಾರಿ, ಸಂಡೂರು, ಹೊಸಪೇಟೆ ಪಟ್ಟಣಗಳು ಹಾಗೂ ಅವುಗಳ ಸುತ್ತಮುತ್ತಲಿನ ಹಳ್ಳಿಗಳು ರೋಸಿ ಹೋಗಿವೆ. ಅದಿರು ತುಂಬಿದ ಗಣಿ ಲಾರಿಗಳ ಸಂಚಾರಕ್ಕೆ ತಡೆ ಒಡ್ಡಿ ಎಂದ ಸಾರ್ವಜನಿಕ ಅದಾಲತ್ತಿಗೆ ಯಾವುದೇ ರೀತಿಯಲ್ಲಿ ಮಾನ್ಯತೆ ಇಲ್ಲ. “ಅದಿರು ತುಂಬಿದ ಗಣಿಲಾರಿಗಳ ಸಂಚಾರ ತಡೆ” ಎಂಬುದನ್ನು ಸಂಡೂರು ನಾಗರಿಕ ಹಿತರಕ್ಷಣಾ ಸಮಿತಿ ರಚಿಸಿಕೊಂಡಿದೆ. ಎಷ್ಟೇ ಹೋರಾಟ ನಡೆಸಿದರೂ ಅದು ಒಂದು ವಾರದವರೆಗೆ ಬಿಸಿಯಾಗಿರುತ್ತದೆಯೇ ಹೊರತು ನಂತರ ಯಥಾ ರೀತಿ. ಇದಕ್ಕೆ ಹೊಣೆ ಯಾರು?

ಗಣಿ ಪ್ರದೇಶದಲ್ಲಿ ಲಾರಿಯ ಡ್ರೈವರ್‌ಗಳಾಗಿ ಕೆಲಸ ಮಾಡುವವರು ೧೨ ರಿಂದ ೨೦ ವರ್ಷದವರೇ ಹೆಚ್ಚಾಗಿದ್ದಾರೆ. ಇವರಿಗೆ ಲಾರಿ ಓಡಿಸುವುದೆಂದರೆ ಹುಮ್ಮಸ್ಸು, ಖುಷಿ, ಕಾಂಪಿಟೇಷನ್, ಹೆಮ್ಮೆ. ಲೋಡಿಗೆ ಇಂತಿಷ್ಟು ಹಣ ಎಂದು ಫಿಕ್ಸ್ ಮಾಡಿರುವುದರಿಂದ (ಎಷ್ಟು ದೂರ ಎಂಬುದರ ಮೇಲೆ ನಿರ್ಧರಿಸುತ್ತದೆ). ಹೆಚ್ಚಾಗಿ ಲೋಡ್‌ಗಳನ್ನು ಹೊಡೆಯಲು ತನ್ನ ಸಹಪಾಟಿಯನ್ನು ಹಿಂದಕ್ಕೆ ಹಾಕುವ ಸಲುವಾಗಿ ಲಾರಿಗಳನ್ನು ವೇಗವಾಗಿ ಓಡಿಸುವುದರಿಂದ ಅತಿಯಾದ ಆಕ್ಸಿಡೆಂಟ್‌ಗಳು ಆಗುತ್ತಿವೆ.

ಲಾರಿಗಳ ಓಡಾಟದಿಂದ ಗ್ರಾಮಗಳ ಪುಟ್ಟ ರಸ್ತೆಗಳು ಕಿರಿದಾಗಿದ್ದು, ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಮಹಿಳೆಯರು, ಮಕ್ಕಳು ಭಯದ ವಾತಾವರಣದಲ್ಲಿ ಬದುಕುವಂತಹ ಸ್ಥಿತಿ ಮಾರ್ಪಟ್ಟಿದೆ. ಬೈಪಾಸ್ ರಸ್ತೆಯಲ್ಲಿ ಲಾರಿಗಳು ಸಂಚರಿಸುವುದು ಸೂಕ್ತ. ಆದರೆ ಅದನ್ನು ಯಾರು ಕೇಳುತ್ತಾರೆ? ಕುಮಾರಸ್ವಾಮಿಯ ಗುಡ್ಡದಿಂದ ಮೈನ್ಸನ್ನು ತುಂಬಿಕೊಂಡು ಕೆಳಗಿಳಿಯುವ ಲಾರಿಗಳು ವಾರಕ್ಕೆ ಮೂರು - ನಾಲ್ಕು ಲಾರಿಯಾದರೂ ಬೀಳುತ್ತವೆ ಎಂದು ಅಲ್ಲಿಯೇ ಕೆಲಸ ಮಾಡುವ ಹೆಚ್.ಟಿ. ಕ್ಯಾಂಪಿನ ಮಾರುತಿ ಹೇಳುತ್ತಾನೆ. ಇದರಿಂದಾಗಿ ಹೆಚ್ಚು ಆಕ್ಸಿಡೆಂಟುಗಳು ನಡೆಯುತ್ತವೆ. ಕೆಲವು ಮೈನ್ಸ್‌ನವರು ಇದಕ್ಕೆ ಪರಿಹಾರ ಧನ ಕೊಟ್ಟರೆ ಕೆಲವು ಮೈನ್ಸ್‌ಗಳಲ್ಲಿ ಹಾಗೆ ಹೀಗೆ ಹೇಳಿ ಮುಂದೂಡುವ, ಮರೆಸುವ ಹಾಗೂ ನೇರವಾಗಿ ಕೊಡುವುದಿಲ್ಲ ಎಂದು ಹೇಳುವುದು ನಡೆಯುತ್ತದೆ. ಸಣ್ಣ ಪುಟ್ಟ ಗಾಯಗಳಿಗಂತೂ ಇಲ್ಲಿ ಲೆಕ್ಕವೇ ಇಲ್ಲ. ಇವುಗಳಿಗೆ ಯಾವುದೇ ಪರಿಹಾರ ಇಲ್ಲ. ಆಕ್ಸಿಡೆಂಟಿನಿಂದ ಮರಣ ಹೊಂದಿದವರ

ಮನೆಯವರಿಗೆ ಕಂಪನಿಯಲ್ಲಿಯೇ ಸೇರಿಸಿಕೊಳ್ಳುವ ಕೆಲಸ ನಡೆಯುತ್ತಿದೆ? ಇದಷ್ಟು ಪರಿಹಾರವೇ? ಇದರಿಂದ ಕಾರ್ಮಿಕರ, ಮನೆಯವರ ಆರೋಗ್ಯ ಹೇಗೆ ಸರಿಯಾಗುತ್ತದೆ? ಆರೋಗ್ಯವನ್ನೇ ಕೊಡದ ಕೆಲಸ ಭಾಗ್ಯವನ್ನು ತಾನೇ ಹೇಗೆ ಕೊಟ್ಟೀತು?

ಕಾರ್ಡು ಇರೋರಿಗೆ ಮಾತ್ರ

"ನನ್ನ ಹೆಸರು ಯಮನೋರಮ್ಮ. ನಾವು ಕೊಪ್ಪಳ ಕಡಿಯಿಂದ ಬಂದೀವಿ. ನಾವು ಬಂದು ಏನಲ್ಲ ಅಂದ್ರೂ ಐದು ಆರು ತಿಂಗ್ಳ ಆಗೈತಿ ನೋಡ್ರಿ ಇಲ್ಲಿಗೆ ಬಂದು. ನನ್ನ ಗಂಡ ಇಲ್ಲೇ ಲಾರಿ ಡ್ರೈವರ್ ಆಗಿ ಕೆಲಸ ಮಾಡಾಕ ಹತ್ಯಾನ. ಮಕ್ಕಳು, ನಾನು ಇಲ್ಲೇ ಕಲ್ಲು ಆಯಿಸುತೀವಿ. ಜರಡಿ ಹಿಡಿತೀವಿ ರೀ. ಮನ್ನೆ ಸೋಮಾರ ನನ್ನ ಗಂಡಗ ಆಕ್ಸಿಡೆಂಟ್ ಆಗಿ ಬಿಟ್ಟಿತ್ತು. ಕಾಲು ಜಾಸ್ತಿ ಏಟು ಆಗಿಬಿಟ್ಟಿತ್ತು. ಗಣಿ ದವಾಖಾನಿ ಐತಿ ಹತ್ರ ಆಗತೈತಿ ಅಂತ ಕಾರಿಗನೂರಿನ ದವಾಖಾನಿಗೆ ಕರಕಂಡೋಗಿವಿ ರೀ. ಆದರ ಏನು ಮಾಡಬೇಕು ಅಲ್ಲಿ ಅವರು ನೋಡಲಿಲ್ಲ. ಕಾರ್ಡು ತೋರಿಸ್ರಿ ಅಂದ್ರು. ನಮಗೆ ಕಾರ್ಡು ಗೀರ್ಡು ಏನು ಕೊಟ್ಟಿಲ್ಲ. ಮೈನ್ಸ್ ಗುಡ್ಡದಾಗ ಕೆಲಸ ಮಾಡೋರಿಗೆ ಮಾತ್ರ ಕಾರ್ಡು ಕೊಡ್ತಾರಿ, ಕಾರ್ಡು ಇರೋರಿಗೆ ಮಾತ್ರ ಇಲ್ಲಿ ನೋಡೋದು. ನಮ್ಮನ್ನು ಬಳ್ಳಾರಿ ದವಾಖಾನಿಗಿ ಹೋಗು ಅಂತ ಹೇಳಿದ್ರು. ನಮಗೆ ಅಷ್ಟು ದೂರ ಹೋಗಾಕ ಆಗಂಗಿಲ್ಲ ರೀ.

ಮನಿ ನಿಭಾಯಿಸಾಕ ಕಷ್ಟ ಅಂತ ಇಲ್ಲಿಗೆ ಬಂದೀವ್ರಿ. ಆದ್ರ ಬೆಳಗಿನಿಂದ ಸಂಜಿವರೆಗೂ ದುಡಿದರೂ ಸಾಕಾಗಂಗಿಲ್ಲ. ಇಲ್ಲಿ ಕೂಲಿ ಗಂಡು ಮಕ್ಕಳಿಗೆ ೭೫ ರೂಪಾಯಿ ಕೊಡ್ತಾರ ರೀ. ಹೆಣ್ಣು ಮಕ್ಕಳಿಗೆ ೫೦ ರೂಪಾಯಿ ಕೊಡ್ತಾರ. ಈ ಕೆಲಸ ಬಾಳ ಕಷ್ಟ. ಆದರ ಇದನ್ನ ಯಾರಿಗೆ ಹೇಳಬೇಕು. ಇರೋತನಕ ದುಡಿತೀವಿ, ಆಮೇಲಿ ದೇವ್ರು ಮಾಡಿದಂಗ ಆಗಲಿ" ಅಂತ ಕೊಪ್ಪಳದಿಂದ ಮೈನಿಂಗ್ ಕ್ಷೇತ್ರಕ್ಕೆ ಕೆಲಸವನ್ನು ಹುಡುಕಿಕೊಂಡು ವಲಸೆ ಬಂದ ಯಮನೋರಮ್ಮ ಬೇಜಾರಿನಿಂದಲೇ ಇದನ್ನೆಲ್ಲಾ ಹೇಳಿ ದೀರ್ಘ ಉಸಿರು ಬಿಟ್ಟರು. ಆಗ ಕಣ್ಣಿನಲ್ಲಿ ನೀರು ತುಂಬಿಕೊಂಡಿತ್ತು.

ಬಳ್ಳಾರಿ, ಸಂಡೂರು, ಹೊಸಪೇಟೆ ಸುತ್ತಮುತ್ತ ಕೆಲಸ ಮಾಡುತ್ತಿರುವ ಎಲ್ಲರಿಗೂ ಸಂಬಂಧಿಸಿದಂತೆ ಕಾರಿಗನೂರಿನಲ್ಲಿ ಮತ್ತು ಸಂಡೂರಿನಲ್ಲಿ ಎರಡು ಕಾರ್ಮಿಕ ಆಸ್ಪತ್ರೆ ಇವೆ. ಆದರೆ ಅವುಗಳು ತಮ್ಮ ಮೂಲ ಉದ್ದೇಶವನ್ನು ಕಳೆದುಕೊಂಡು ಕೆಲಸ ಮಾಡುತ್ತಿವೆ. ಕೆಲಸ ಮಾಡಬೇಕು ಮಾಡುತ್ತಿವೆ ಅಷ್ಟೇ. ಕಾರಿಗನೂರಿನ ಆಸ್ಪತ್ರೆಗೆ ನಾನು ಕ್ಷೇತ್ರ ಕಾರ್ಯಕ್ಕಾಗಿ ಡಾಕ್ಟರನ್ನು ಸಂಪರ್ಕಿಸಲು ೫-೬ ಸಾರಿ ಬೇಟಿ ನೀಡಿದರೂ ಡಾಕ್ಟರ್ ಇಲ್ಲ. ಅಲ್ಲಿ ಇರುವವರು ಕೇವಲ ನರ್ಸ್‌ಗಳು, ಪೀವನ್‌ಗಳು. ಅಲ್ಲಿ ಅವರೇ ಆಡಳಿತಾಧಿಕಾರಿಗಳು, ಡಾಕ್ಟರ್‌ಗಳು ಎಲ್ಲವೂ ಆಗಿದ್ದಾರೆ. ನರ್ಸ್‌ಗಳಿಗೆ ಡಾಕ್ಟರ್ ಯಾವಾಗ ಬರ್ತಾರೆ ಅಂತ ಕೇಳಿದರೆ ಅವರಿಗೂ ಸಹ ಡಾಕ್ಟರ್ ಯಾವಾಗ ಬರ್ತಾರೆ ಎಂಬುದು ಗೊತ್ತಿಲ್ಲ. ಯಾವಾಗಲೂ ಅವರ ಹತ್ತಿರ ಸಿಗುವ ಉತ್ತರ ಒಂದೇ ಡಾಕ್ಟರ್ ನಾಳೆ ಬರಬಹುದು ರೀ.

ರೋಗಗಳ ಸ್ಟಾಕ್‌ಯಾರ್ಡ್

ರೈಲ್ವೆ ಹಳಿಗಳ ನಿರ್ಮಾಣ ಗಣಿಯ ಬೆಳವಣಿಗೆಯಿಂದಾಗಿ ಅತೀ ವೇಗದಲ್ಲಿ ನಡೆಯುತ್ತಿವೆ. ಇದರಿಂದ ಸ್ಟಾಕ್‌ಯಾರ್ಡ್ (Stockyard) ಹೆಚ್ಚಾಗುತ್ತಿವೆ. ಇದು ಮೈನ್ಸ್ ಸ್ಟಾಕ್‌ಯಾರ್ಡ್ ಆಗದೆ ರೋಗಗಳ

ಸ್ಟಾಕ್‌ಯಾರ್ಡ್ ಆಗಿದೆ. ಇಲ್ಲಿ ಮಹಿಳೆಯರೇ ಹೆಚ್ಚು ಕೆಲಸ ಮಾಡುತ್ತಾರೆ. ರೈಲ್ವೆ ಇಲಾಖೆ ಗಣಿಗಾರಿಕೆಯಿಂದ ವಾರ್ಷಿಕ ೧೯೦೦ ಕೋಟಿ ರೂಪಾಯಿಗಳಷ್ಟು ಆದಾಯವನ್ನು ಪಡೆಯುತ್ತಿದೆ. ವ್ಯಾಗಿನ್ ಲೋಡಿಂಗ್‌ನ್ನು ಹೆಚ್ಚಾಗಿ ಹೆಣ್ಣು ಮಕ್ಕಳೇ ಮಾಡುತ್ತಾರೆ. ಆದರೆ ವ್ಯಾಗಿನ್ ಮೇಲೆತ್ತಿ ಅದನ್ನು ಲೆವೆಲ್ ಮಾಡುವ ಕೆಲಸವನ್ನಷ್ಟೇ ಗಂಡು ಮಕ್ಕಳು ಮಾಡುತ್ತಾರೆ. ಆದರೂ ಅಲ್ಲಿ ಗಂಡಸರಿಗೂ ಕೂಲಿ ಹೆಚ್ಚು. ಹೊಸಪೇಟೆ, ಬಳ್ಳಾರಿ ನಗರದ ರೈಲ್ವೆ ನಿಲ್ದಾಣಗಳ ಪಕ್ಕದಲ್ಲಿಯೇ ಅದಿರನ್ನು ತಂದು ರಾಶಿ ಹಾಕಲಾಗುತ್ತಿದೆ. ಅದು ಪ್ರಯಾಣಿಕರಿಗೆ ಹೆಚ್ಚು ತೊಂದರೆಯಾಗುತ್ತಿದೆ. ನಿತ್ಯ ೫೬ ರಿಂದ ೬೮ ಬೋಗಿಗಳು ೨೦ ಕ್ಕೂ ಹೆಚ್ಚು ಸರಕು ಸಾಗಣೆ ರೈಲುಗಳು (ಒಂದು ಬೋಗಿಗೆ ೫೮ ಟನ್ ಅದಿರನ್ನು ತುಂಬಿರಲಾಗಿರುತ್ತದೆ) ಅದಿರು ಹೊತ್ತು ಸಾಗುತ್ತಿದ್ದರೆ ಅಷ್ಟೇ ರೈಲುಗಳು ಕಲ್ಲಿದ್ದಲು, ಗೊಬ್ಬರ, ಸರಕು ಹೊತ್ತು ಬರುತ್ತಿವೆ. ಇದು ಅಭಿವೃದ್ಧಿಯೇ? ಹೌದು. ಇದು ಗಣಿಮಾಲಿಕರ ದೃಷ್ಟಿಯಲ್ಲಿ ಬಳ್ಳಾರಿ ಜಿಲ್ಲೆಯ ಅಭಿವೃದ್ಧಿ ಎಂದು ಹೇಳಲಾಗುತ್ತಿದೆ. ಆದರೆ ಇದನ್ನು ಬಳ್ಳಾರಿ ಅಭಿವೃದ್ಧಿ ಎನ್ನುವುದಕ್ಕಿಂತ ಬಳ್ಳಾರಿಯ ಗಣಿಮಾಲಿಕರ ಅಭಿವೃದ್ಧಿ ಎನ್ನುವುದು ಹೆಚ್ಚು ಸೂಕ್ತ ಅಲ್ಲವೇ?

ಜೀವದ ಬ್ಲಾಸ್ಟಿಂಗ್ ಟೈಮ್

ಗಣಿಗಾರಿಕೆಗಾಗಿ ಗುಡ್ಡಗಳನ್ನು ಸಿಡಿಸುವುದರಿಂದ ಶಬ್ದಮಾಲಿನ್ಯ ಉಂಟಾಗುತ್ತಿದೆ. ಜೊತೆಗೆ ಬ್ಲಾಸ್ಟಿಂಗ್‌ಗೆ ರಾಸಾಯನಿಕಗಳನ್ನು ಬಳಸುವುದರಿಂದ ನೆಲಮಾಲಿನ್ಯ ಕೂಡ ಉಂಟಾಗುತ್ತಿದೆ. ಇದರಿಂದ ಅತಿಯಾದ ಧೂಳು ಏಳುತ್ತಿದೆ. ಬ್ಲಾಸ್ಟಿಂಗ್ ನಡೆಯುತ್ತಿರುವ ಪ್ರದೇಶದಿಂದ ೩೦-೪೦ ಕಿ.ಮೀ. ದೂರದವರೆಗೂ ಭೂಮಿ ಕಂಪನ ಆಗುವುದರಿಂದ ಇದು ಹೆಚ್ಚು ಸಮಸ್ಯಾತ್ಮಕವಾಗಿ ಪರಿಣಮಿಸಿದೆ. ಬ್ಲಾಸ್ಟಿಂಗ್‌ನಿಂದ ಸಿಡಿದ ಗುಡ್ಡಗಳು ಹೊಲಗಳಿಗೆ ಬಂದು ಬೀಳುತ್ತಿರುವುದರಿಂದ ರೈತರು ತಮ್ಮ ಹೊಲಗಳಿಗೆ ಹೋಗಲು ಹೆದರುತ್ತಿದ್ದಾರೆ. ಗುಡ್ಡಕ್ಕೆ ಕಟ್ಟಿಗೆ ತರಲು ಹೋಗುವ ಹೆಣ್ಣುಮಕ್ಕಳ ಬಾಯಿಯಲ್ಲಿಯೇ ಇದರ ಭೀಕರತೆಯನ್ನು ಕೇಳಬೇಕು. ಗಣಿಯ ಹತ್ತಿರದ ಪ್ರದೇಶಗಳಲ್ಲಿಯಂತೂ ಬ್ಲಾಸ್ಟಿಂಗ್ ನಡೆಯುವ ಯಾವ ಸಮಯದಲ್ಲಿ ಮನೆ ಬೀಳುವುದೋ ಗೊತ್ತಿಲ್ಲ. ಐತಿಹಾಸಿಕ ಸ್ಮಾರಕವಾದ ಜಂಬುನಾಥನ ದೇವಾಲಯವಂತೂ ಗಣಿಯ ಗುಡ್ಡದ ಧೂಳಿನಿಂದ ತುಂಬಿಕೊಂಡು ಇವತ್ತೊ ನಾಳೆಯೋ ಎಂದು ಬಿರುಕು ಬಿಡುತ್ತಾ ಬಿದ್ದು ಹೋಗುವ ಸ್ಥಿತಿಯಲ್ಲಿದೆ. ಐತಿಹಾಸಿಕ ಸ್ಥಳ ಹಂಪಿಗೂ ಇದರ ಕಾವು ತಪ್ಪಿಲ್ಲ. ಬ್ಲಾಸ್ಟಿಂಗ್ ಸಮಯದಲ್ಲಿ ಹಂಪಿಯ ಸ್ಮಾರಕಗಳಲ್ಲಿ ನಡುಕ ಕಾಣಿಸುತ್ತದೆ. ಮನೆಯ ಪಾತ್ರೆಗಳು ಮಾತನಾಡಿದರೆ ಬ್ಲಾಸ್ಟಿಂಗ್ ಭೂತ ಮನೆಯನ್ನು ಹೊಕ್ಕುಕೊಂಡಿದೆ ಎಂದೇ ಅರ್ಥ. ಇದು ಗುಡ್ಡದ ಬ್ಲಾಸ್ಟಿಂಗ್ ಜೊತೆಗೆ ಜೀವದ ಬ್ಲಾಸ್ಟಿಂಗ್‌ನ್ನು ಮಾಡುತ್ತಿದೆ. ಬ್ಲಾಸ್ಟಿಂಗ್‌ನ ಶಬ್ದದಿಂದ ಹೆಚ್ಚಾಗಿ ಚಿಕ್ಕ ಮಕ್ಕಳಿಗೆ ತೊಂದರೆಯಾಗುತ್ತಿದೆ. ಇದರಿಂದ ಅವರಿಗೆ ಬುದ್ಧಿಮಾಂದ್ಯ, ಕಿವುಡುತನ, ಒತ್ತಡ, ತಲೆನೋವು, ಭಯ, ಕಣ್ಣು ಉರಿ ಮುಂತಾದ ತೊಂದರೆಗಳು ಕಾಣಿಸಿಕೊಂಡಿವೆ.

ಗಾಳೆಮ್ಮ ಎಲ್ಲವನ್ನು ವಾಸಿಮಾಡ್ತಾಳೆ.

ಗಣಿ ಕೂಲಿ ಕಾರ್ಮಿಕ ದಲಿತ ಮಹಿಳೆಯರು ತಮಗೆ ಬಂದ ಅನೇಕ ರೋಗಗಳ ಪರಿಹಾರಕ್ಕೆ ಆಸ್ಪತ್ರೆಗಳಿಗೆ ಭೇಟಿ ನೀಡದೆ ಜ್ಯೋತಿಷಿ, ಪೂಜಾರಿ, ದೇವರ ಹತ್ತಿರ ಹೋಗಿ ಮೋಸ ಹೋಗುತ್ತಿದ್ದಾರೆ. ಕೆಮ್ಮು, ಜ್ವರ, ಅಸ್ತಮಾ, ಹೊಟ್ಟೆನೋವು, ಮುಟ್ಟಿನ ತೊಂದರೆ ಹೀಗೆ ಯಾವುದೇ ಕಾಯಿಲೆಗಳ ಕಾರಣಕ್ಕೆ

ತಾಯಿಯ ಮಹಿಮೆಯೇ ಕಾರಣ ಎಂದು ನಂಬುತ್ತಾರೆ. ಇಲ್ಲಿನ ಬಹಳಷ್ಟು ಜನ ಹುಲಿಗೆಮ್ಮ, ಗಾಳೆಮ್ಮ, ಎಲ್ಲಮ್ಮ, ಜಂಬುನಾಥ ದೇವರುಗಳಿಗೆ ನಡೆದುಕೊಳ್ಳುತ್ತಾರೆ. ಜ್ಯೋತಿಷಿ, ಪೂಜಾರಿ ಹೇಳಿದ ಅನಗತ್ಯ ಪೂಜೆಗಳಿಗೆ ಕೂಲಿ ಮಾಡಿದ ಹಣವನ್ನೆಲ್ಲಾ ವ್ಯಯ ಮಾಡುತ್ತಾರೆ. ಒಂದೆಡೆ ಹಣ ಖರ್ಚಾಗಿ ಇನ್ನೊಂದೆಡೆ ಕಾಯಿಲೆಯೂ ಹೆಚ್ಚಾಗಿ ಕೊನೆಯಲ್ಲಿ ಆಸ್ಪತ್ರೆಗೆ ಸೇರಿಸಲಾಗುತ್ತದೆ. ಆದರೆ ಸರಕಾರಿ ಆಸ್ಪತ್ರೆಯಲ್ಲಿ ಆ ಕಾಯಿಲೆಗೆ ತಕ್ಕ ಚಿಕಿತ್ಸೆ ದೊರೆಯುವುದಿಲ್ಲ. ದೊಡ್ಡ ಆಸ್ಪತ್ರೆಗೆ ಕರೆದುಕೊಂಡೋಗಿ ಎಂದು ಹೇಳಿದಾಗ, ಗಣಿ ಕೂಲಿ ಕಾರ್ಮಿಕರು ತುಂಬ ಬಡತನದ ಕಾರಣ ಖಾಸಗೀ ಆಸ್ಪತ್ರೆಯಲ್ಲಿ ಹಣ ಕೊಟ್ಟು ಚಿಕಿತ್ಸೆ ಕೊಡಿಸಲು ಆಗದೆ ರೋಗಿ ಸಾವು-ನೋವು ಬದುಕಿನ ನಡುವೆ ಹೋರಾಡಿ ಕೊನೆಗೆ ಸಾವಿನಲ್ಲಿ ಕೊನೆಗೊಳ್ಳುವ ಸ್ಥಿತಿ ಬಂದೊದಗುತ್ತದೆ. ಇದರಿಂದ ಇದ್ದ ಬದ್ದ ಹಣವನ್ನೆಲ್ಲಾ ರೋಗಿಗಾಗಿ ಖರ್ಚು ಮಾಡಿದ ಮನೆಯ ಸದಸ್ಯರು ಇನ್ನಷ್ಟು ಬಡತನಕ್ಕೆ ಒಳಗಾಗುತ್ತಾರೆ. ಮತ್ತೆ ಆ ಬಡತನವನ್ನು ನೀಗಿಸಿಕೊಳ್ಳಲು ಹೆಚ್ಚು ದುಡಿಯುತ್ತಾರೆ. ಇದರಿಂದ ಕಾಯಿಲೆಗೆ ಒಳಗಾಗುತ್ತಾರೆ. ಮತ್ತೆ ದೇವರು... ಡಾಕ್ಟರ್.. ಬಡತನ.. ಕೂಲಿ..... ಹೀಗೆ ಚಕ್ರದಂತೆ ಇವರ ಜೀವನ ಸಾಗುತ್ತಲೇ ಇರುತ್ತದೆ ಹೀಗೆಯೇ ಕೊನೆಗೊಳ್ಳುವ ಯಾವ ಲಕ್ಷಣಗಳೂ ಇಲ್ಲದೆ.

'ನಾವು ಓದಿರೋದು ಒಂಥರ ಎಂ.ಬಿ.ಬಿ.ಎಸ್ ಇದ್ದಂಗೆ'

ಬಳ್ಳಾರಿ ಜಿಲ್ಲೆಯಲ್ಲಿ ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆಯನ್ನು ಗಮನಿಸಿ ಖಾಸಗಿ ವೈದ್ಯಕೀಯ ಘಟಕಗಳು ಜಿಲ್ಲೆಯಾದ್ಯಂತ ಅಣಬೆಯಂತೆ ತಲೆ ಎತ್ತಿವೆ. ಬಡವರಿಗೆ ಹಾಗೂ ಕೆಳವರ್ಗ ಜನರಿಗೆ ವೈದ್ಯಕೀಯ ಸೌಲಭ್ಯಗಳು ಕೈಗೆಟುಕದ ಸಂಗತಿಯಾಗಿ ಬಿಟ್ಟಿದೆ. ಮೊದಲೆಲ್ಲಾ ಖಾಸಗಿ ಆಸ್ಪತ್ರೆಯಲ್ಲಿ ಅಟೆಂಡರ್, ಪೀವನ್ ಆಗಿದ್ದವರೂ ಕೂಡ ಈಗ ಒಂದು ಆಸ್ಪತ್ರೆಯನ್ನು ಇಟ್ಟುಕೊಂಡು ಡಾಕ್ಟರ್ ಆಗಿದ್ದಾರೆ. ಕೆಲವರು ಸುಳ್ಳು ಬೋರ್ಡನ್ನು ಹಾಕಿಕೊಂಡಿದ್ದಾರೆ. ಹೆಚ್ಚಾಗಿ RMP ಎಂದು, ಕೆಲವರು ಬೋರ್ಡುಗಳನ್ನು ಹಾಕಿಕೊಳ್ಳದೆಯೂ ಕೆಲಸ ಮಾಡುತ್ತಿದ್ದಾರೆ. ಇವರು ರೋಗಿಗಳ ಹತ್ತಿರ ಕಡಿಮೆ ಚಾರ್ಜನ್ನು ತೆಗೆದುಕೊಳ್ಳುವುದರಿಂದ ಕಾರ್ಮಿಕರು ಇಂತವರ ಹತ್ತಿರ ಹೋಗಿ ಇನ್ನಷ್ಟು ತೊಂದರೆಗೆ ಒಳಗಾಗುತ್ತಿದ್ದಾರೆ.

ಆರು-ಏಳು ವರ್ಷಗಳ ಹಿಂದಿನ ಪ್ರಮಾಣಕ್ಕೆ ಹೋಲಿಸಿದರೆ ಈಗಿನ ಖಾಸಗಿ ಆಸ್ಪತ್ರೆಗಳು ಗಣನೀಯ ಪ್ರಮಾಣದಲ್ಲಿ ಹೆಚ್ಚಾಗಿವೆ. ಇದಕ್ಕೆ ಗಣಿ ಪ್ರದೇಶಕ್ಕೆ ವಲಸಿಗರ ಸಂಖ್ಯೆ ಹೆಚ್ಚಾಗಿರುವುದು, ಗಣಿ ಪ್ರದೇಶದಲ್ಲಿ ಗಣಿ ಕಾರ್ಮಿಕರ ಆರೋಗ್ಯ ಸಮಸ್ಯೆ ಹೆಚ್ಚಾಗಿರುವುದೇ ಕಾರಣವಾಗಿದೆ.

ಶಾಪ್‌ಗಳನ್ನು ಇಟ್ಟುಕೊಂಡು ರೋಗಿಗಳಿಗೆ ಚಿಕಿತ್ಸೆ ಮಾಡುತ್ತಿರುವ, ಬೋರ್ಡ್‌ನಲ್ಲಿ ಕೊಟ್ರೇಶ್ RMP ಎಂದು ಹಾಕಿಕೊಂಡಿರುವ ಕೊಟ್ರೇಶ್ 'ನಾವು ಓದಿರೋದು ಕೂಡ ಒಂಥರ ಎಂ.ಬಿ.ಬಿ.ಎಸ್. ಇದ್ದಂತೆ ರೀ ನಾವು ಎಲ್ಲಾ ಕಾಯಿಲೆಗಳಿಗೂ ನೋಡ್ತೀವಿ' ಎಂದು ಹೇಳುತ್ತಾರೆ. ಇವರು ಹೇಗೆ ನೋಡ್ತಾರೆ, ಯಾವ ತರ ನೋಡ್ತಾರೆ ತೋರಿಸಿಕೊಂಡವರಿಗಷ್ಟೇ ಗೊತ್ತು!

ಕಾರ್ಮಿಕ ದಿನಾಚರಣೆ

ಇಲ್ಲಿ ಗಣಿ ಕಾರ್ಮಿಕರಿಗೆ ಯಾವುದೇ ರೀತಿಯ ಸೇಫ್ಟಿ ಮೆಜರ್ಸ್ ಇಲ್ಲ. ಕೇಳಿದರೂ ಕೂಡ ಕೊಡುವುದಿಲ್ಲ. ಯಾರಾದರೂ ಮೇಲಿನ ಅಧಿಕಾರಿಗಳು ಗಣಿ ನೋಡಲು ಬಂದರೆ, ಅಥವಾ ಕಾರ್ಮಿಕ

ದಿನಾಚರಣೆಯ ಒಂದು ದಿನ ಕೊಡ್ತಾರೆ ಮತ್ತೆ ವಾಪಾಸ್ಸು ತೆಗೆದುಕೊಳ್ಳುತ್ತಾರೆ ಎಂದು ಕಾರ್ಮಿಕರು ದೂರುತ್ತಾರೆ. ಮಹಿಳೆಯರಿಗಂತೂ ಗಣಿ ಪ್ರದೇಶದಲ್ಲಿ ಯಾವುದೇ ಸೌಲಭ್ಯ ಇಲ್ಲ. ಮಕ್ಕಳನ್ನು ಬಿಡುವ ಬಾಲವಾಡಿ, ಯಾವುದೂ ಇಲ್ಲ. ಅವರ ಪಾಡು ಹೇಳುವ ಹಾಗಿಲ್ಲ. ನರಕವೇ ಅದಾಗಿ ಪರಿಣಮಿಸಿದೆ.

ಎ.ಸಿ. ಕಾರಿನಲ್ಲಿ ಎ.ಸಿ. ರೂಮಿನಲ್ಲಿ ಕೂಡುವ ಮೈನಿಂಗ್ ಮಾಲಿಕರು, ಸರಕಾರಿ ಅಧಿಕಾರಿಗಳು, ಕಾರ್ಮಿಕರ ಆರೋಗ್ಯವನ್ನು ತಿಂದು ತಿಂದು ಹೊಟ್ಟೆ ದೊಡ್ಡದಾಗಿಸಿಕೊಳ್ಳುತ್ತಿದ್ದಾರೆ. ಇನ್ನು ಕಾರ್ಮಿಕರ ಕಡೆ ಗಮನ ಹರಿಸುವುದು ಎಲ್ಲಿ ಬಂತು?

ಅಕ್ರಮ ಗಣಿ / ಸುಲಿಗೆ ದರೋಡೆ

ಅಕ್ರಮ ಗಣಿಗಾರಿಕೆ ಎಂದರೆ ಒಪ್ಪಿಗೆ ಇಲ್ಲದೆ ಕದ್ದು ಮುಚ್ಚಿ ಗಣಿಗಾರಿಕೆ ಮಾಡುವುದರ ಜೊತೆಗೆ ಅತಿಯಾಗಿ ಗಣಿಗಾರಿಕೆ ಮಾಡುವುದು. ಅಕ್ರಮ ಗಣಿಗಾರಿಕೆ ಆರೋಗ್ಯದ ಮೇಲೆ ಗಣನೀಯ ಪ್ರಮಾಣದಲ್ಲಿ ಪ್ರಭಾವ ಬೀರಿದೆ. ಸದ್ಯದಲ್ಲಿ ೯೫ ಗಣಿಗಾರಿಕೆಗಳು ಜಿಲ್ಲೆಯಲ್ಲಿ ನಡೆಯುತ್ತಿವೆ. ಅಕ್ರಮ ಗಣಿಗಾರಿಕೆ ನಿಲ್ಲಿಸಲು ಸರ್ಕಾರ ೨೦೦೬ ಜನವರಿಯಲ್ಲಿ ೩೧ ರಂದು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಟಾಸ್ಕ್ ಫೋರ್ಸ್ ಸಮಿತಿ ರಚಿಸಿತ್ತು. ಇದರಲ್ಲಿ ೦೫-೬೦ ರಲ್ಲಿ ೩೫,೧೭,೪೩೬೮ ಮೆಟ್ರಿಕ್ ಟನ್ ಅದಿರು ಸಾಗಿಸಲು ಪರ್ಮಿಟ್‌ಗಳನ್ನು ನೀಡಿವೆ ಎನ್ನುತ್ತಾರೆ. ಆದರೆ ಅದಕ್ಕಿಂತ ಹೆಚ್ಚಾಗಿ ಪರ್ಮಿಟ್ ನೀಡಿರುವುದರ ಬಗ್ಗೆ ಚಕಾರ ಎತ್ತುವುದಿಲ್ಲ.

ರೈತರ ಹೊಲಗಳು, ಅರಣ್ಯ, ಮತ್ತು ಕಂದಾಯ ಇಲಾಖೆಗೆ ಸೇರಿದ ಭೂಮಿಯಿಂದ ತೆಗೆಯುವ ಅದಿರನ್ನು ಮಧ್ಯವರ್ತಿಗಳು ಮತ್ತು ಕೆಲ ಕೂಲಿಕಾರ್ಮಿಕರುಗಳು ಟನ್‌ಗೆ ೨೫೦ ರಿಂದ ೪೦೦ ರೂ ಖರೀದಿಸುತ್ತಾರೆ. ೫೮ ರಷ್ಟು ಕಬ್ಬಿಣ ಅಂಶ ಇರುವ ಪ್ರತಿ ಟನ್ ಅದಿರಿಗೆ ೯೫೦ ರಿಂದ ೧೦೫೦ ರೂಗೆ ಮತ್ತು ೬೪ ರಿಂದ ೬೮ ರಷ್ಟು ಕಬ್ಬಿಣಾಂಶ ಇರುವ ಪ್ರತಿ ಟನ್ ಅದಿರಿಗೆ ೧೪೦೦ ರೂ ದರಕ್ಕೆ ಮಾರುತ್ತಾರೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಿಗುವ ದರ ಹೆಚ್ಚು ರಪ್ತುದಾರರಿಗೆ ಸಿಗುತ್ತದೆ. ಇಲ್ಲಿ ಕಾರ್ಮಿಕರು ಕೇವಲ ದಿನವಿಡೀ ದುಡಿಯುವ ಕೂಲಿಗಳು ಮಾತ್ರ.

ಇಂತಹ ಅಕ್ರಮ ಗಣಿಗಾರಿಕೆ ಇಂದಿನ ರಾಜಕೀಯದಲ್ಲಿ ಎಬ್ಬಿಸಿದ ಕೋಲಾಹಲದ ಪರಿಣಾಮ ಗಣಿಗಾರಿಕೆಯನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದರೂ, ಅದು ಕೇವಲ ಪತ್ರಿಕೆ, ಟಿ.ವಿ. ಗೆ ಮಾತ್ರ ಮೀಸಲು ಎಂಬಂತೆ ಗಣಿಗಾರಿಕೆ ತನ್ನಷ್ಟಕ್ಕೆ ತಾನು ನಡೆಯುತ್ತಿದೆ. ಯಾವುದೇ ಅಕ್ರಮಗಳಿಗೂ ಕೊನೆಯಿಲ್ಲದೆ, ಕಾರ್ಮಿಕರ ಆರೋಗ್ಯವನ್ನು, ಪರಿಸರವನ್ನು ನುಂಗುತ್ತಾ....

ಅಕ್ರಮ ಅದಿರು ಗಣಿಗಾರಿಕೆ ಹೆಚ್ಚಾಗಿರುವುದರಿಂದ ದರೋಡೆ, ಸುಲಿಗೆ, ಕೊಲೆಗಳು ಮಾಮೂಲಿಯಾಗಿವೆ. ಕತ್ತಲೆಯಲ್ಲಿ ಅಲ್ಲದೆ ಬೆಳಗಿನ ಸಂದರ್ಭದಲ್ಲಿಯೂ ಗಣಿ ಪ್ರದೇಶದಲ್ಲಿ ಒಬ್ಬರೇ ಓಡಾಡಲು ಜನ ಭಯ ಪಡುತ್ತಾರೆ.

ಗಣಿಗಾರಿಕೆಯಿಂದ ರಾಜಕೀಯದಲ್ಲಿ ಸಾಕಷ್ಟು ಬದಲಾವಣೆ ಆದರೂ ಗಣಿ ಕಾರ್ಮಿಕರ ಸುರಕ್ಷಾ ಕ್ರಮಗಳು ಪಾಲನೆ ಆಗುತ್ತಿಲ್ಲ. ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುವುದನ್ನು ತಡೆಯಲು ಆಗಿಲ್ಲ. ಗಣಿ ಸ್ಥಳಗಳಲ್ಲಿ ಮಹಿಳಾ ಕೂಲಿಗಳಿಗೆ ಕನಿಷ್ಠ ಸೌಲಭ್ಯಗಳು ಇಲ್ಲ. ಸಂಡೂರು ಮತ್ತು ಹೊಸಪೇಟೆ

ತಾಲೂಕಿನಲ್ಲಿ ಆಗಿರುವ ಅರಣ್ಯ ನಾಶದ ಬಗ್ಗೆ ಪರಿಸರ ಇಲಾಖೆ ಚಕಾರ ಎತ್ತಿಲ್ಲ. ಸಂಡೂರಿನ ಕಾಡು, ಕಾಡಿನಲ್ಲಿನ ಪ್ರಾಣಿಗಳು ಏನಾಗಿದೆ ಎಂದು ಅರಣ್ಯ ಇಲಾಖೆಗೂ ಗೊತ್ತಿಲ್ಲ. ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದ ಜನಜೀವನ ಅಸ್ತವ್ಯಸ್ತವಾಗಿದ್ದರೂ ಅವರ ಆರೋಗ್ಯ ಅಧೋಗತಿಗೆ ಇಳಿದಿದ್ದರೂ ಅದನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ ಎನ್ನುವುದನ್ನು ನೋಡಿದರೆ ಸರ್ಕಾರದಲ್ಲಿ ಇರುವವರಿಗೆ, ಅಕ್ರಮ ಗಣಿಮಾಲಿಕರಿಗೆ ಗಣಿಗಾರಿಕೆಯಿಂದ ಲಾಭ ಇದೆ ಎನ್ನುವುದು ಗೊತ್ತಾಗುತ್ತದೆ.

ಸಾಮಾನ್ಯ ಚಳುವಳಿ ಪ್ರದರ್ಶನಗಳಿಂದ ಏನೂ ಪ್ರಯೋಜನ ಇಲ್ಲ. ಚಳುವಳಿ ಸಂಘಟಿಸಿದವರ ಮೇಲೆ ಗೂಂಡಾಗಳನ್ನು ಬಿಟ್ಟು ಹಲ್ಲೆ ಮಾಡುವ ಸಾಧ್ಯತೆಗಳಿರುವುದರಿಂದ ಜನ ಬಹಿರಂಗವಾಗಿ ಪ್ರತಿಭಟಿಸಲು ಹಿಂಜರಿಯುತ್ತಿದ್ದಾರೆ. ಸಣ್ಣ ಪುಟ್ಟ ಪ್ರತಿಭಟನೆಗಳಿಂದ ಏನೂ ಆಗದು. ಈಗ ಆಗಿರುವ ಪರಿಣಾಮಗಳಿಗಿಂತ ಇನ್ನೂ ಕೆಟ್ಟ ಪರಿಣಾಮಗಳು ಆದ ಮೇಲೆ ಸರಕಾರ ಕಣ್ಣು ತೆರೆಯುವುದೇನು ಕಾದು ನೋಡಬೇಕಾಗಿದೆ.

ಸ್ವಾತಂತ್ರ್ಯ ಚಳುವಳಿ, ಕಾಗೋಡು ಚಳುವಳಿಯಂತಹ ದೊಡ್ಡ ಚಳುವಳಿಗಳು ನಡೆದರೆ ಆಗೇನಾದರೂ ಮೈನಿಂಗ್ ನಿಲ್ಲಿಸಬಹುದೇ? ಗಣಿಗಾರಿಕೆ ನಿಂತರೆ ಎರಡನೆ ಆದ್ಯತೆ ಇಲ್ಲದೆ ಗಣಿಗಾರಿಕೆಯಲ್ಲಿ ತೊಡಗಿರುವ ದಲಿತ ಮಹಿಳಾ ಕಾರ್ಮಿಕರು ಯಾವ ಕೆಲಸ ಮಾಡಬೇಕು?

- ಅವರಿಗೆ ಯಾರು ಕೆಲಸ ಕೊಡುತ್ತಾರೆ?
- ಆಗ ಅವರ ಆರೋಗ್ಯ ಸರಿ ಹೋಗುವುದೇ?
- ಇದಕ್ಕಿಂತಲೂ ಭೀಕರ ಸ್ಥಿತಿ ಬರುವುದಿಲ್ಲವೇ?
- ಆ ಭೀಕರ ಸ್ಥಿತಿಯನ್ನು ಇವರು ಎದುರಿಸಲು ತಯಾರಿರುವರೇ?

ಗಣಿಗಾರಿಕೆಯಿಂದಾಗುವ ದುಷ್ಪರಿಣಾಮಗಳಿಗೆ ಸಂಬಂಧಿಸಿದಂತೆ ಸರಕಾರವಾಗಲಿ, ಯಾವುದೇ ಸಂಘ ಸಂಸ್ಥೆಗಳಾಗಲಿ ಕೆಲಸ ಮಾಡುತ್ತಿಲ್ಲ. ಒಟ್ಟಾರೆ ಗಣಿಗಾರಿಕೆ ಜಿಲ್ಲೆಯ ಜನರಲ್ಲಿ ಒಂದು ಬಗೆಯ ಭೀತಿ ಹುಟ್ಟಿಸಿದೆ. ಗಣಿಗಾರಿಕೆಯಿಂದ ಜಿಲ್ಲೆಯ ರಾಜಕಾರಣ ಮತ್ತು ಆರೋಗ್ಯ ಯಾವ ಸ್ವರೂಪ ಪಡೆದುಕೊಳ್ಳಬಹುದು ಎನ್ನುವುದು ಈಗ ಊಹಿಸಲು ಸಾಧ್ಯವಿಲ್ಲ.

ಇ. ಜಾಡಮಾಲಿ ಮಹಿಳೆ

'ನನ್ನ ಹೆಸ್ರು ಎಮುನೂರಮ್ಮ. ನಾವು ಚಲುವಾದಿಗಳು. ನನಗಿ ಮೂರು ಜನ ಹೆಣ್ಣು ಮಕ್ಳು ಅದಾರ. ಒಬ್ಬಿಗಿ ಮದಿವಿ ಮಾಡಿಕೊಟ್ಟೇನಿ. ಒಬ್ಳು ಸತ್ಹೋಗ್ಯಾಳ, ಒಬ್ಳು ಮನಿನಾಗ ಕೆಲ್ಸ ಮಾಡ್ತಾಳ. ನನ್ನ ತವ್ರ ಮನಿ ಕೂಡ್ಲಿಗಿ. ಗಂಡನ ಮನಿ ಹಡಗಲಿ. ನನ್ನ ಮದ್ವಿ ಮಾಡಿ ಗಂಡನ ಮನಿಗಿ ಕಳಿಸಿದಮ್ಯಾಲಿ ಐದು ವರ್ಷಕ್ಕೆಲ್ಲಾ ಗಂಡ ಟಿ.ಬಿ ಜೆಡ್ಡು ಬಂದು ಸತ್ಹೋದ. ಮತ್ತೆ ಮಕ್ಳನ್ನ ಕರಕಂಡು ತವ್ರ ಮನೀಗಿ ಬಂದೆ. ತವ್ರ ಮನಿನಾಗ ಅಣ್ಣ ತಮ್ಮರು ಎಷ್ಟು ದಿನ ಅಂತ ನೋಡುತಾರ. ಅಲ್ಲಿ ಸ್ವಲ್ಪ ದಿನ ಇದ್ದಮ್ಯಾಲಿ ಅವರು ನನ್ನ ಹತ್ರ ನಡೆದುಕೊಳ್ತಿದ್ದು ನೋಡಿ ತುಂಬಾ ಬೇಜಾರು ಅನಿಸ್ತು. ವಯಸ್ಸಾದ ತಾಯಿನ, ಮಕ್ಳನ್ನು ಹಾಕೊಂಡು ಕೆಲಸ ಹುಡಿಕೊಂಡು ಬಳ್ಳಾರಿಗಿ ಬಂದೆ. ತಾಯಿಗೆ ತುಂಬಾ ವಯಸ್ಸಾಗಿದೆ. ಎರ್ಡನೇ ಮಗ್ಳು ಏನೋ ಜಡ್ಡು ಅತ್ತಿ ಚಿಕ್ಕ ವಯಸ್ಸಿಗೆ ತೀರಿಕೊಂಡ್ಲು.'

ನಾವು ಯಾರೂ ಓದಿಲ್ಲ. ಗಂಡ ಓದಿಲ್ಲ, ನಾನು ಓದಿಲ್ಲ, ಮಕ್ಳನೂ ಓದ್ಸಿಲ್ಲ. ಏಕೆಂದ್ರೆ ನಾವು ಬಡವರು. ನಾವು ಯಾಕ ಓದ್ಬೇಕು? ನಾವು ಏನಿದ್ರೂ ಬ್ಯಾರ್ಯೋರ ಮನ್ಯಾಗ ದುಡ್ದು ತಿನ್ನೋದು ಇದ್ದೇ ಇರ್‍ತೈತಿ. ಗಂಡನೂ ಬೇಲ್ದಾರಿ ಕೆಲ್ಸ ಮಾಡ್ತಾ ಇದ್ದ. ನಾವು ಕೂಡ ಹುಟ್ಟಲಿಂದ ಬೇಲ್ದಾರ ಕೆಲ್ಸ ಮಾಡಿಕೆಂತಾ ಬಂದೀವಿ. ನಮ್ಮೂರ್ ಸೈಡು ಮಳೆ ಇಲ್ಲ, ನೀರಿಲ್ಲ. ಈ ಕಡೆ ನೀರೈತಿ ಕೂಲಿ ಸಿಗಬಹುದಂತ ಅಂದ್ಕಂಡು ಬಂದೀವಿ. ಬಳ್ಳಾರಿನಾಗ ಬೇಲ್ದಾರಿ ಕೆಲ್ಸಕ ಜಾಸ್ತಿ ಕರೆಂಗಿಲ್ಲ. ಅದಕ್ಕೆ ಈ ಕೆಲ್ಸ ಹುಡಿಕೆಂಡೆ. ಆಸ್ಪತ್ರಿನಾಗ ಕೆಲ್ಸ ಮುಗ್ಸಿ ಮತ್ತೆ ಎರಡು ಮನಿ ಕೆಲ್ಸ ಮಾಡ್ತೀನಿ. ಮನಿಗಳ ಕೆಲ್ಸ ಮಾಡ್ಬಹುದು ಆದರೆ ಆಸ್ಪತ್ರಿನಾಗ ಬಂಡೆ ಒರಿಸೋದು, ಗುಡಿಸೋದು, ಸಾರಿಸೋದು, ಲೆಟ್ರೀನ್ ಕ್ಲೀನ್ ಮಾಡೋದು, ಹೆರಿಗೆ ಆದ್ರೆ, ಯಾರ್ನಾದರೆ ಆಪ್ರೇಷನ್ ಆದ್ರೆ, ಶುಗರಿಂದ ಕೈ ಕಾಲು ತೆಗಿದ್ರೆ ಎತ್ಕೊಂಡೋಗಿ ಹಾಕಬೇಕು. ಆಸ್ಪತ್ರಿನಾಗ ಜಾಸ್ತಿ ಜೆಡ್ಡು ಇರೋರೆ ಬಂದಿರ್‍ತಾರ. ಕೆಲವ್ರು ಅಂತು ಅಲ್ಲಿ, ಇಲ್ಲಿ ಮಾಡಿಕೆಂತಾ ಇರ್‍ತಾರೆ. ಲೆಟ್ರಿನ್‌ಗೆ ಹೋದ್ರೆ ಮ್ಯಾಲೆ ಹೋಗಿಬರ್‍ತಾರ ಅದನ್ನೆಲ್ಲಾ ತೊಳಿಬೇಕು. ಇನ್ನೂ ಕೆಲವ್ರಿಗೆ ನಡೆಯಕಾಗಂಗಿಲ್ಲ. ಅವ್ರನ್ನ ನಾನೇ ಲೆಟ್ರಿನ್‌ಗೆ ಕರಕಂಡೋಗ್‌ಬೇಕು. ತೊಳಿಬೇಕು. ಮೊದ್ಲೆಲ್ಲಾ ಬಾಳ ಬ್ಯಾಸ್ಗರಿಕೆ ಮಾಡಿಕೆಂತಾ ಇದ್ದೆ. ಯಾಕಪ್ಪ ದೇವ್ರೆ ನಾನು ಈ ಕೆಲ್ಸ ಮಾಡ್ಬೇಕು. ನನ್ಗೇನು ಗ್ರಾಚಾರ. ಇಷ್ಟಕ್ಕೊಂದು ಗಲೀಜು ಎತ್ತೋದು, ತೊಳಿಯೋದು ನಾನ್ ಯಾಕ್ ಮಾಡ್ಬೇಕು ಅಂತ ಅನಿಸ್ತಿತ್ತು. ಆದ್ರೆ ಈಗ ಅದ್ಕೆಲ್ಲಾ ರೂಡಿ ಆಗೋಗೈತಿ. ಎಷ್ಟೋ ಸಾರಿ ಅದನ್ನೆಲ್ಲಾ ಬಿಟ್ಟು ಬೇಲ್ದಾರಿ ಕೆಲ್ಸಕ ಹೋಗಬೇಕ್ ಅಂದಕಂಡೀನಿ. ಆದ್ರೆ ಅದು ಇದಕ್ಕಿಂತ ಬಹಳ ಕಷ್ಟ. ಬಿಸಿಲು, ಮಳೆ, ಚಳಿ ಅಂದ್ನೆ ಬೆಳಿಗ್ಗೆ ನಡ ಬಗ್ಗಿಸ್ದೋರು ಸಂಜಿ ತನಕ ಅಂಗೆ ಇರ್ಬೇಕು. ಅಲ್ಲಿ ದಣಿರ್ ಹತ್ರ ಹೊಲ್ಸು, ಹೊಲ್ಸು ಮಾತು ಬ್ಯಾರೆ ಅನಿಸ್ಕಂಬೇಕು. ಯಾಕ್‌ಬೇಕಪ್ಪ ಅನ್ನೋದು, ಇದೇ ಕೆಲ್ಸನೇ ಮಾಡೋದು. ತಿಂಗ್ಳಿಗಿ ಒಂಬತ್ತುನೂರು ಕೊಡ್ತಾರ ಅಂಗೆ ಮನಿ ನಡಿತೈತಿ. ನಮ್ಮಿಗಿ ನೋಡ್ರಿ ಏನು ಇಲ್ಲ. ಬಾಡಿಗಿ ಮನಿ ಐತಿ ಇರೋತನ ದುಡ್ದಕಂದು ತಿಂತೀನಿ, ದುಡೀಕಾಗ್ದೆ ಹೋದ್ರೆ ಅವತ್ತೆ ಸತ್ಹೋಕ್ತೀನಿ ಅಷ್ಟೆ. ಯಾರೋ ಮುನಿಸಿಪಾಲ್ಟಿ ಅವರು ಇವರು ಎಳ್ದಾಕ್ತಾರ. ಇಲ್ಲ ನಾಯಿನೋ, ನರಿನೋ ಕಿತ್ಕಂದು ತಿಂತಾವ ಅಷ್ಟೆ ನೋಡ್ರಿ. ಇನ್ನೇನ್ ಐತಿ ನಮ್ದು ಇಷ್ಟು ಬಿಟ್ಟು.

ಕೆಲ್ಸನಾಗ ಮೇಸ್ತ್ರಿ ಅಂತೂ ಅವ್ವ, ಇವ್ವ, ಅಂತಾನೇ ಕರಿತಾರ. ದಾರಿಲೋಗ ಪೋಲಿಗಳು ಇಡೀ ದಿನ ದುಡ್ದ್ರ ಮೂವತ್ತು, ನಲವತ್ತು ಅಷ್ಟೇ ಸಿಗೋದು ನಮ್ಮ ಹತ್ರ ಬಾ ಐದು ನಿಮಿಷಕ್ಕೆ ನೂರು ರೂಪಾಯಿ ಕೊಡ್ತೀನಿ ಅಂತಾರ. ಸ್ವಲ್ಪ ಚಂದ ಇರೋ ಹೆಣ್‌ಮಕ್ಕಿಗಿ, ವಯಸ್ಸಿರೋ ಹೆಣ್‌ಮಕ್ಳಿಗಿ ಜಗ್ಗಿ ಕಾಟ ಐತಿ. ರೊಕ್ಕ ಮಾಡೋರ್‍ಗೆ ಇದು ಸುಲಭ ಅನಿಸೈತಿ. ಆದರೆ ನಾವು ದುಡ್ದು ತಿನ್ನೋ ಮಂದಿ ಅಂಗೆ ಹಾದ್ರಾಗೀದ್ರಾ ಮಾಡೋರಲ್ಲ. ಮನಿನಾಗ ಗಂಡುಮಕ್ಳು ತರ ಮೂವತ್ತು ರೂಪಾಯಿಗೆ ಮುಂಜಾಲಿ ಹೋಗಿ ಸಂಜಿ ಬರ್‍ತಾಳ ಅಂತಾರ. ಗಂಡ ಮನಿ ಮಾರಿ ಸಾವಿರಾರು ರೂಪಾಯಿ ಬಿಟ್ಹೋದ ಕಷ್ಟಪಟ್ಟು ತೀರಿಸ್ತಾ ಇದೀನಿ ಹೆರಿಗೆ ಆದಾಗ ಕೂಡ ಐದು ದಿನಕ್ಕೆ ಮನಿ ಕೆಲ್ಸ ಮಾಡಾಕೋಗೀನಿ. ಮನಿ ಹತ್ರ ಸಾಲ್ದೋರು ಬರ್‍ತಾರ ರಿ. ನಾನು ಹಸ್ಕಂಡೀನಿ ಅಂದ್ರೂ ಸಾಲ ಪಾಲ ಮಾಡಕೋಗ್ಲಲ್ಲ ಬಡ್ಡಿ ಕೊಡೋಕಾಗಲ್ಲ ಅಂತ ಅಸಲು ತೀರಿಸೀನಿ.

ನಮ್ಗ ಕೆಲ್ಸ ಮಾಡೋ ಹತ್ರ ಕಕ್ಕಸ್ಸಿಗೆ ಕುಂತು ಸ್ವಲ್ಪ ಸುದಾರಿಸಿಕೊಳ್ಳಾಕ ಏನು ಗತಿ ಇಲ್ಲ. ಮುಟ್ಟು ಏನಾರ ಬಂದ್ರೆ ಬಾಳ ಕಷ್ಟ ಏನ್ ಕಷ್ಟ ಬಂದ್ರೂ ಯಾರ ಹತ್ರ ಹೇಳಲ್ಲ ನನ್ ಕಷ್ಟ ನನಗಿ ಯಾರ ಹತ್ರ ಯಾಕೆ ಹೇಳ್ಬೇಕು ಬುಡು ಅನ್ನೋದು ಸುಮ್ಮನಾಗೋದು.

ಮೂರು ಜನ ಕೆಲ್ಸ ಒಬ್ರೆ ಮಾಡ್ತೀವಿ. ಆದ್ರ ಪಗಾರ ಮಾತ್ರ ಒಬ್ರುದೇ ಸಿಗೋದು. ಮೂರು ಸಾವಿರ ರೂಪಾಯಿ ಕೆಲ್ಸ ಮುನ್ನೂರು ರೂಪಾಯಿಗೆ ಮಾಡ್ತೀವಿ. ರೊಟ್ಟಿ ಪಲ್ಲೆ ಇದ್ರೆ ಸಾಕು ಎಷ್ಟು ಕೆಲ್ಸ ಹೇಳ್ತೀರ ಹೇಳಿ ಮಾಡ್ಯಾಕ್ತೀನಿ. ನಮ್ಮ ಮಾದ್ರು ಮಂದಿನೆ ಅಂಗ' ಎಂದು ಬಳ್ಳಾರಿಯ ಎಸ್.ಎನ್.ಪೇಟೆ ಬೀದಿಗಳನ್ನು ಸ್ವಚ್ಛ ಮಾಡುವ ಗುತ್ತಿಗೆ ಪೌರ ಕಾರ್ಮಿಕಳಾಗಿ ದಿನಗೂಲಿ ಕೆಲ್ಸ ಮಾಡುತ್ತಿರುವ ಹುಲಿಗೆಮ್ಮ ತನ್ನ ದುಃಖವನ್ನು ನುಂಗಿಕೊಂಡು ಖುಷಿಯಾಗಿದೀನಿ ಎನ್ನುವ ಹಾಗೆ ನಗು ನಗುತ್ತಲೆ ಮಾತಾಡುತ್ತಿದ್ದುದು ಸ್ಪಷ್ಟವಾಗಿ ಕಾಣಿಸುತ್ತಿತ್ತು.

ಎಮುನೂರಮ್ಮನ ಇಡೀ ಕತೆ ಜಾಡಮಾಲಿ ಮಹಿಳೆಯರ ದುಃಸ್ಥಿತಿಯನ್ನು ಸಾರಾಸಗಟಾಗಿ ನಮ್ಮ ಮುಂದಿಡುತ್ತದೆ. ಅದು ಮಹಿಳೆ, ಜಾತಿ, ವರ್ಗ, ಸಮಾಜ, ವಲಸೆ ಮುಂತಾದವುಗಳನ್ನು ಬಿಡಿಬಿಡಿಯಾಗಿಸಿ, ಒಟ್ಟುಗೂಡಿಸಿ ತಿಳಿಸುತ್ತದೆ.

ಜಾಡಮಾಲಿ ಎಂಬುವುದನ್ನು ಸ್ತ್ರೀವಾಚಿಯಾಗಿಯೂ, ಪುರುಷವಾಚಿಯಾಗಿಯೂ ಬಳಸಲಾಗುತ್ತಿದೆ. ಇದು ವೃತ್ತಿಸೂಚಕ ಪದವೇ ಹೊರತು ಜಾತಿಸೂಚಕ ಪದವಲ್ಲ. ಸಮಾಜದ ಕಣ್ಣಲ್ಲಿ ಕೆಟ್ಟದ್ದು, ವಾಸನೆ, ಕೊಳಕು, ಗಲೀಜು, ಅಸಹ್ಯ ಎನಿಸಿಕೊಂಡಿರುವ ಕೆಲಸವನ್ನು ಯಾರು ಮಾಡುತ್ತಾರೋ ಅಂತಹವರನ್ನು 'ಜಾಡಮಾಲಿ'ಗಳು ಎಂದು ಕರೆಯುತ್ತಾರೆ. ಕೆಲವು ಕಡೆ 'ತೋಟಿಗರು' ಎಂದೂ ಸಹ ಕರೆಯುತ್ತಾರೆ. ಬಳ್ಳಾರಿಯಲ್ಲಿ ಅಷ್ಟೆ ಅಲ್ಲದೆ ಇಡೀ ದೇಶದಲ್ಲಿಯೇ ಜಾಡಮಾಲಿತನವನ್ನು ಕೆಳಜಾತಿಗಳಷ್ಟೇ ಮಾಡುತ್ತವೆ.

'ಕರ್ಮವಾರಾಧನೆ ಸೇವೆಯೇ ಪೂಜೆ
ನನ್ನ ಭಾಗಕೆ ಪೊರಕೆ ಆರತಿ, ಗುಡಿಸುವುದೆ
ನನ್ನ ದೇವರ ಪೂಜೆ! ನಿನ್ನ ದೇಗುಲದೆಡೆಗೆ
ಹೋದೆನ್ನ ಕಂದನಂ ಬೈದಿರಿಸು ನೂಕಿದರು
ಶಿವಗುಡಿಯ ಶಿವನು ಜೋಯಿಸರ ಶಿವನಂತೆ,
ನನ್ನ ಶಿವನು ಮಣ್ಣಿನಲ್ಲಿಹನು, ನನ್ನ ಶಿವ
ಕೊಳೆತ ಕಸದೊಳಗಿಹನು, ಕಪ್ಪುರದೊಳಿಲ್ಲ
ಮಂಗಳಾರತಿಯೊಳಿಲ್ಲ, ಹೂವುಗಳಲಿಲ್ಲ' (ಕುವೆಂಪು, ೨೦೦೬, ಪು. ೭)

ಜಾಡಮಾಲಿಗಳಿಗೆ ಪೊರಕೆಯೇ ಆರತಿ, ಕೊಳೆತ ಕಸವೇ ಶಿವನ ರೂಪ, ಕಾಯಕವೇ ಕೈಲಾಸತತ್ವ ಎಂಬುವುದನ್ನು ಕುವೆಂಪುರವರು ತಮ್ಮ ಜಲಗಾರ ನಾಟಕದಲ್ಲಿ ಜಲಗಾರನ ಮೂಲಕ ಪ್ರತಿಬಿಂಬಿಸುತ್ತಾರೆ.

'ಜಾಡಮಾಲಿ' ಎಂಬುವುದು ಹಿಂದಿ ಭಾಷೆಯ ಪದ. ಜಾಡ ಎಂದರೆ ಗಲೀಜು, ಕೊಳಕು, ಜಾಡು ಎಂದರ್ಥ. ಮಾಲಿ ಎಂದರೆ ಶುಚಿ ಮಾಡುವವ, ಕೊಳಕು ತೆಗೆಯುವವ ಎಂದರ್ಥ. ಸರಕಾರ ಇವರನ್ನು 'ಪೌರಕಾರ್ಮಿಕ' ಎಂಬುವುದಾಗಿ ಕರೆಯುತ್ತಿದೆ. ಪೌರ ಎಂದರೆ ಪ್ರಜೆ, ಜನ ಎಂದಾದರೆ, ಕಾರ್ಮಿಕ ಎಂಬುವುದು ಕೆಲಸಗಾರ ಎಂದಾಗುತ್ತದೆ. ಜನರ ಕೆಲಸವನ್ನು ಮಾಡುವವನು ಯಾರೋ ಅವನು ಪೌರಕಾರ್ಮಿಕ ಎಂಬುವುದಾಗಿದೆ. ಜಾಡಮಾಲಿ ಎಂಬುವುದು ಬೈಗುಳ ರೀತಿಯ ಪದವಾಗಿರುವುದರಿಂದ ಅವರಿಗೆ ಗೌರವ ಸೂಚಿಸುವ

ಸಲುವಾಗಿಯೇ 'ಪೌರಕಾರ್ಮಿಕ' ಎಂದು ಸರಕಾರ ನಾಮಾಂಕಿತವನ್ನು ಇಟ್ಟಿತು ಎಂದು ಐ.ಪಿ.ಡಿ ಸಾಲಪ್ಪನವರು ೧೯೭೬ ರಲ್ಲಿ ಸರ್ಕಾರಕ್ಕೆ ಜಾಡಮಾಲಿ ಸ್ಥಿತಿಗತಿಗಳ ಬಗ್ಗೆ ತಿಳಿಸಿದ ತಮ್ಮ ವರದಿಯಲ್ಲಿ ತಿಳಿಸುತ್ತಾರೆ. ಪೌರಕಾರ್ಮಿಕ ಪದವೂ ಸಹ ಹರಿಜನ ಪದದಂತೆ ವ್ಯಂಗ್ಯವಾಗಿದೆಯಲ್ಲವೆ? ಹಾಗಾಗಿ ಜಾಡಮಾಲಿ ಎಂದು ನಿರ್ದಿಷ್ಟವಾಗಿ ವೃತ್ತಿಯನ್ನೇ ಗುರುತಿಸುವ ಪದ ಬಳಕೆಯನ್ನು ಮಾಡುವುದು ಸೂಕ್ತವೆನಿಸುತ್ತದೆ. ನನ್ನ ಅಧ್ಯಯನದಲ್ಲಿ ಪೌರಕಾರ್ಮಿಕರನ್ನು ಜಾಡಮಾಲಿಗಳೆಂದೇ ಕರೆಯುತ್ತೇನೆ. ಜಾಡಮಾಲಿ ಎಂಬುವುದು ಅವಮಾನವಲ್ಲ ಅದು ಸ್ವಾಭಿಮಾನದ ಪ್ರಶ್ನೆ.

ಊಳಿಗಮಾನ್ಯ ಸಮಾಜದ ಹಳೆಯ ಮೌಲ್ಯಗಳು ಜಾತಿ ಪದ್ಧತಿಯಲ್ಲಿ ಆಳವಾಗಿ ಬೇರುಬಿಟ್ಟ ಸಂದರ್ಭದಲ್ಲಿ ಅಸ್ಪೃಶ್ಯತೆ ಹುಟ್ಟಿಕೊಂಡಿತು. ಅದರ ಹಿನ್ನೆಲೆಯಲ್ಲಿಯೇ ಸೇವೆ, ಚಾಕರಿ ವೃತ್ತಿಗಳೂ ಹುಟ್ಟಿಕೊಂಡವು. ಪುರೋಹಿತಶಾಹಿ ಕಾಲಘಟ್ಟದಲ್ಲಿ ಸೇವೆ ಮಾಡಿದರೆ ಸ್ವರ್ಗ ಪ್ರಾಪ್ತಿಯಾಗುತ್ತದೆ. ಈ ಕೀಳು ಜಾತಿಯಲ್ಲಿ ಹುಟ್ಟಿರುವವರು ಮುಂದಿನ ಜನ್ಮದಲ್ಲಿ ಉತ್ತಮ ಕುಲದಲ್ಲಿ ಜನ್ಮ ತಾಳುವರು ಎಂಬ ಹುಸಿಕಲ್ಪನೆಗಳನ್ನು ಕಟ್ಟಿಕೊಡಲಾಯಿತು. ಇದರ ಮೂಲಕ ಚಾಕರಿ ವೃತ್ತಿ ಪ್ರಾರಂಭವಾಗಿ, ಊಳಿಗಮಾನ್ಯ ಕಾಲಘಟ್ಟದಲ್ಲಿ ಅವು ಮಾಯವಾಗದ ಹಾಗೆ, ಯಾರೂ, ಎಂದಿಗೂ ಕಳಚಲಾಗದಷ್ಟು ಆಳವಾದ ಬೇರುಗಳನ್ನು ಬಿಟ್ಟುಕೊಂಡಿತು.

ಜಾಡಮಾಲಿತನವನ್ನು ಕೆಳಜಾತಿಗಳೇ ಯಾಕೆ ಮಾಡುತ್ತವೆ?

ಕಸಗುಡಿಸುವವರು ಹಾಗೂ ಮಲ ಹೊರುವವರ ವೃತ್ತಿಯ ಬಗ್ಗೆ ನಿರ್ದಿಷ್ಟವಾಗಿ ಪ್ರಾಚೀನ ಕಾಲದಿಂದಲೂ ಹೇಗೆ ನಡೆದುಕೊಂಡು ಬಂದಿತೆಂದು ಹೇಳುವುದು ತ್ರಾಸದಾಯಕ. ಪ್ರಾಚೀನ ಭಾರತದಲ್ಲಿ ಜನಸಂಖ್ಯೆ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಹಾಗೂ ಕೆಲವೇ ಕೆಲವು ನಗರಗಳು ಮಾತ್ರ ಇದ್ದವು. ಈಗ ಇರುವ ಪ್ರಮಾಣದಷ್ಟು ಆಗ ಜಾಡಮಾಲಿತನ ಇರಲಿಲ್ಲ ಎಂದೇ ಹೇಳಬೇಕು. ಜನಸಂಖ್ಯೆ ಬೆಳೆದಂತೆಲ್ಲಾ ದೊಡ್ಡ ನಗರಗಳು ಬೆಳೆದವು. ಹಾಗೂ ಅದರಡಿಯಲ್ಲಿಯೇ ಅಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಸುಧಾರಿಸುವುದು ಕಷ್ಟವಾಯಿತು. ಆದಕಾರಣ ಅನಿವಾರ್ಯವಾಗಿ ಇಂತಹ ನಗರ ಪ್ರದೇಶಗಳ ಸ್ವಚ್ಛತೆಯನ್ನು ಮಾಡಲು ಜನರ ಅಗತ್ಯತೆ ಕಾಡಿತು. ಈ ನಗರಗಳ ಧೂಳು, ಕಸ, ಮಲಮೂತ್ರ ಎಲ್ಲವನ್ನು ತೆಗೆಯುವ, ಶುಚಿಗೊಳಿಸುವ, ಹೊರುವ ಕೆಲಸ ತುಂಬಾ ಕಷ್ಟವಾಯಿತು. ಭಾರತದಲ್ಲಿನ ಮೇಲ್ಜಾತಿಗಳು ಇಂತಹ ಕೆಲಸದಲ್ಲಿ ತೊಡಗುವುದು ಪಾಪ, ಅಪರಾಧ ಎಂಬ ಮಿಥ್‌ನ್ನು ಸೃಷ್ಟಿಸಿದವು. ನಂತರದ ಕಾಲದಲ್ಲಿ ಅದು ಗಾಢಗೊಳ್ಳುತ್ತಾ ಬರಲಾಯಿತು. ಕೊಳಕು, ಗಲೀಜು ಕೆಲಸಗಳು ಅಸ್ಪೃಶ್ಯರು ಮಾತ್ರ ಮಾಡಬೇಕು ಅವರು ಆ ಕೆಲಸವನ್ನು ಮಾಡುವುದು ನೈಸರ್ಗಿಕವಾದುದು ಹಾಗೂ ಅದು ಅವರ ಕರ್ತವ್ಯ ಎಂದು ನಂಬಿಸಲಾಯಿತು.

ಗಾಂಧೀಜಿಯವರೂ ಸಹ ಜಾಡಮಾಲಿಗಳು ಮಾಡುವ ಕೆಲಸ ಅರ್ಥಪೂರ್ಣವಾದದ್ದು ಅದನ್ನು ನಾವು ಗೌರವದಿಂದ ನೋಡಬೇಕು ಎಂದು ಒಂದು ಕಡೆ ಹೇಳಿರುವುದು ಜಾಡಮಾಲಿ ವೃತ್ತಿಯನ್ನು ಸಮರ್ಥಿಸಿದ್ದಾರೆ ಎಂದು ತಿಳಿಯುತ್ತದೆ.

ಮೇಲ್ವರ್ಗಗಳ ಕುತಂತ್ರದಿಂದ ಅಸ್ಪೃಶ್ಯರು ಆರ್ಥಿಕವಾಗಿ, ಸಾಮಾಜಿಕವಾಗಿ ಶೋಷಣೆಗೊಳಗಾದ ಕೆಳಜಾತಿಯ ಪಂಚಮರು ಅನಿವಾರ್ಯವಾಗಿ ಈ ಉದ್ಯೋಗದಲ್ಲಿ ತೊಡಗಿದ್ದಾರೆ (ಬೇಗ ಸಿಗುವ ಕೆಲಸ).

ಈ ಅಸ್ಪೃಶ್ಯ ಜಾತಿಗಳು ತಮ್ಮ ಬರ್ಬರ ಜೀವನದ ಕಾರಣದಿಂದ ಜಾಡಮಾಲಿ ಕೆಲಸದಲ್ಲಿ ತೊಡಗಿ, ಮೇಲ್ಜಾತಿಯ ಚಿಂತನೆಗಳನ್ನು ಸರಿ ಎಂದು ಒಪ್ಪಿಕೊಂಡರು. ಅವರ ಚಿಂತನೆಗಳಿಗೆ ತಕ್ಕಂತೆ ನಡೆದುಕೊಂಡವು. ಇದೇ ದಾರಿಯಲ್ಲೇ ಮುಂದುವರೆದ ಜಾಡಮಾಲಿ ವೃತ್ತಿಯಲ್ಲಿ ಇಂದಿಗೂ ನಾವು ಪರಿಶಿಷ್ಟ ಜಾತಿಯವರನ್ನು ಮಾತ್ರ ಕಾಣುತ್ತೇವೆ. ಬಳ್ಳಾರಿ ಪರಿಸರದಲ್ಲಿ ಇವರ ಸಂಖ್ಯೆ ೯೦% ರಷ್ಟು ಇದೆ. ಉಳಿದ ಜಾತಿಗಳು ಕೇವಲ ೧೦% ಮಾತ್ರ. ಕೆಲವು ಜಾತಿಗಳು ಆರ್ಥಿಕ ದುಸ್ಥಿತಿ ಕಾರಣದಿಂದ ಜಾಡಮಾಲಿ ವೃತ್ತಿಗಳಿಗೆ ಇಳಿದುಕೊಂಡಿವೆ. ಅಂತಹ ಜಾತಿಗಳೆಂದರೆ ಬೇಡ, ಮುಸ್ಲಿಂ, ಕ್ರಿಶ್ಚಿಯನ್, ಕುರುಬ ಮುಂತಾದವು. ಇವರ ಸಂಖ್ಯೆ ತೀರಾ ಕಡಿಮೆ.

ಮೇಲ್ವರ್ಗದ ಜಾತಿಗಳು ಇಲ್ಲಿ ಕೆಲಸ ಮಾಡುತ್ತಿರುವುದು ಸರ್ಕಾರಿ ನೌಕರಿ, ಸಂಬಳ ಚೆನ್ನಾಗಿದೆ ಎಂಬ ಕಾರಣಕ್ಕಾಗಿಯೇ ಹೊರತು ಕೆಲಸ ಮಾಡಬೇಕೆಂದಲ್ಲ. ಈ ಕೆಲಸವನ್ನು ಮಾಡುವುದು ಅವಮಾನವೆಂದೇ ತಿಳಿದ ಅವರು ಈ ಕೆಲಸಕ್ಕಾಗಿ ನೇಮಕಗೊಂಡರೂ ಹೇಳಿಕೊಳ್ಳುವುದು ಕ್ಲರ್ಕ್ ಅಂತಲೇ. ಕೆಲಸಕ್ಕೆ ದಿನವೂ ಸಹಿ ಹಾಕಿ ಸಂಬಳ ತೆಗೆದುಕೊಳ್ಳುತ್ತಾರೆ ಹೊರತು ತಾವು ಕೆಲಸ ಮಾಡುವುದಿಲ್ಲ. ತಮ್ಮ ಕೆಲಸವನ್ನು ಕೆಳ ಜಾತಿ ಬಡವರಿಂದಲೇ ಮಾಡಿಸಿ ಅವರಿಗೆ ಇಂತಿಷ್ಟು ಅಂತ ಕಡಿಮೆ ಹಣವನ್ನು ಕೊಟ್ಟು ಬಾಯಿ ಮುಚ್ಚಿಸುತ್ತಾರೆ.

ಇವರೆಲ್ಲಾ ಮಿನಿಸ್ಟರ್ ಲೆವೆಲ್‌ನಿಂದ ರೆಕಮೆಂಡ್ ಮೇಲೆ ಬಂದವರು. ಅವರು ಈ ಕೆಲಸಕ್ಕೆ ಬಂದು ಸೇರಿಕೊಂಡರೂ ತುಂಬಾ ದಿನಗಳ ಕಾಲ ಆ ವೃತ್ತಿಯಲ್ಲಿ ಇರುವುದಿಲ್ಲ. ಓ.ಓ.ಡಿ ಮೇಲೆ ಮೇಲ್ಬಡ್ತಿ ಹೊಂದುತ್ತಾರೆ. ಮೇಸ್ತ್ರಿ, ಅಟೆಂಡರ್, ಪೀವನ್ ಆಗಿ ಹೋಗುತ್ತಾರೆ. ಅನಿವಾರ್ಯವಾಗಿ ಹೋಗಲು ಆಗದೇ ಇದ್ದವರು ಅಲ್ಲೆಯೇ ಇದ್ದು ಗೋಲ್‌ಮಾಲ್ ಮಾಡುತ್ತಾರೆ. ಆರೋಗ್ಯಾಧಿಕಾರಿ, ಗುತ್ತಿಗೆದಾರ, ಇನ್‌ಸ್ಪೆಕ್ಟರ್ ಇವರಿಗೆ ಶಾಮೀಲಾಗಿ ಅವರಿಗೆ ಸ್ವಲ್ಪ ಕೊಟ್ಟು ಇವರೊಂದು ಸ್ವಲ್ಪ ಇಟ್ಟುಕೊಂಡು ಜಾಡಮಾಲಿಗಳನ್ನು ಶೋಷಿಸುತ್ತಲೇ ಮುಂದುವರಿಯುತ್ತಾರೆ.

ಇವತ್ತಿಗೂ ಸಾಕಷ್ಟು ಹೊಲೆಮಾದಿಗ ಮಹಿಳೆಯರೆ ತಮ್ಮ ಜೀವನ ವೃತ್ತಿಯಾಗಿ, ಗುತ್ತಿಗೆ ಜಾಡಮಾಲಿಗಳಾಗಿ, ಕಸಗುಡಿಸುವ, ಕಸಎತ್ತುವ ಜಾಡಮಾಲಿ ವೃತ್ತಿಯನ್ನೇ ಸ್ವೀಕರಿಸಿದ್ದಾರೆ. ಅದು ಅವರಿಗೆ ಅನಿವಾರ್ಯ ಹಾಗೂ ಯಾವುದೇ ಪರ್ಯಾಯಗಳಿಲ್ಲದ ಕಾರಣ ಗುತ್ತಿಗೆ ಮಾಲಿಗಳಾಗಿ ಈ ವೃತ್ತಿ ಪಡೆಯಲು ಯಾವುದೇ ಸ್ಪರ್ಧೆಗಳು ಇಲ್ಲದ ಕಾರಣ ಸಹಜವಾಗಿ ಹಾಗೂ ಸುಲಭವಾಗಿ ಈ ವೃತ್ತಿ ಅವರಿಗೆ ಎಟಕುತ್ತಿದೆ. ಕಾರಣ ಹೆಚ್ಚಾಗಿ ಹೆಣ್ಣು ಮಕ್ಕಳೇ ಈ ವೃತ್ತಿಯನ್ನು ಅವಲಂಬಿಸಿದ್ದಾರೆ. ಸಮಾಜ ಬೆಳೆದಂತೆಲ್ಲಾ ಇವರ ಅವಶ್ಯಕತೆಯೂ ಬೆಳೆಯುತ್ತಿದೆ. ಆದರೆ ಸಮಾಜಕ್ಕೆ ಇವರು ಬೇಡದೇ ಇರುವವರು (Un wanted people).

ಕರ್ನಾಟಕದಲ್ಲಿ ಕಸಗುಡಿಸುವವರು ಹಾಗೂ ಜಾಡಮಾಲಿಗಳು ಪ್ರಮಾಣದಲ್ಲಿ ತೆಲಗು ಮಾತನಾಡುವ ಮಾದಿಗರೇ ಇದ್ದಾರೆ. ಇವರು ಆಂಧ್ರಪ್ರದೇಶದಿಂದ ವಲಸೆ ಬಂದಿರುವವರೇ ಆಗಿದ್ದಾರೆ. ಅವರು ಚಿತ್ತೂರು, ಕರ್ನೂಲ್, ಅನಂತಪುರ, ನೆಲ್ಲೂರ್‌ಗಳಲ್ಲಿ ಕ್ಷಾಮ ಹಾಗೂ ಅಲ್ಲಿನ ನೈಸರ್ಗಿಕ ವಿಕೋಪಗಳಿಂದ ಜರ್ಜರಿತರಾಗಿ ಇಲ್ಲಿಗೆ ಬಂದಿದ್ದಾರೆ. ಇನ್ನೂ ಕೆಲವರು ಅಲ್ಲಿ ಭೂಮಾಲಿಕರಲ್ಲಿ ವಿಕಪಾರಂಪರ್ಯವಾಗಿ ಕೃಷಿ ಕೂಲಿಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದು, ಬಡ್ಡಿ, ಚಕ್ರಬಡ್ಡಿ ಸಾಲಗಳನ್ನು ತೀರಿಸಲಾಗದೆ ಅದರಿಂದ ತಪ್ಪಿಸಿಕೊಳ್ಳಲು ಇಲ್ಲಿಗೆ ಬಂದಿದ್ದಾರೆ. ಇವರು ಬಂದ ತಕ್ಷಣ ಅವರಿಗೆ ತಮ್ಮ ಜೀವನಸ್ಥಿತಿಯ ಸಾಗುವಿಕೆಗೆ ಯಾವುದಾದರೂ ಕೆಲಸದಲ್ಲಿ ತೊಡಗುವುದು ಅನಿವಾರ್ಯವಾಯಿತು. ತುಂಬಾ ಸುಲಭವಾಗಿ ಸಿಕ್ಕ ಕೆಲಸವೆಂದರೆ ಜಾಡಮಾಲಿತನ. ಆದ್ದರಿಂದ ಅದೇ ವೃತ್ತಿಯಲ್ಲಿ ಸೇರಿ, ಅದೇ ವೃತ್ತಿಯಲ್ಲಿ ಮುಂದುವರಿದರು.

ಅನಂತಪುರ, ನೆಲ್ಲೂರು, ರಾಜಮಂಡ್ರಿ ಭಾಗಗಳಿಂದ ಆಂಧ್ರಮಾದಿಗರು, ತಮಿಳು ನಾಡಿನ ಚೆನ್ನಗಿರಿ, ಹೊಸೂರು, ವೇಲೂರು, ಸತ್ಯಮಂಗಲಗಳಿಂದ ತಮಿಳು ಮಾದಿಗರು ಹೊಟ್ಟೆಪಾಡಿಗಾಗಿ ಕೆಲಸವನ್ನು ಹುಡುಕಿಕೊಂಡು ಬಂದಿದ್ದಾರೆ. ಕೋಲಾರ ಭಾಗದಲ್ಲಿ ಚಿನ್ನದ ಗಣಿಯಲ್ಲಿ ಕೆಲಸವನ್ನು ಹುಡುಕಿಕೊಂಡು ಬಂದರೆ, ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರ ಡ್ಯಾಂ ಕಟ್ಟುವ ಸಮಯದಲ್ಲಿ ಇವರ ಕೆಲಸದ ಹುಡುಕಾಟ ಪ್ರಾರಂಭವಾಗಿದೆ. ಡ್ಯಾಂ ಹಾಗೂ ಕಾಲುವೆ ಕಾಮಗಾರಿಗೆ ಕೂಲಿಯಾಳುಗಳಾಗಿ ಬಂದು ಸೇರಿ ಕಾಮಗಾರಿ ಪೂರ್ಣಗೊಂಡ ನಂತರ ಅನಿವಾರ್ಯವಾಗಿ ಸುಲಭವಾಗಿ ಸಿಗುವ ಜಾಡಮಾಲಿತನದಲ್ಲಿ ತೊಡಗಿದ್ದಾರೆ. ಇನ್ನೂ ಕೆಲವರು ಕೃಷಿ ಕೂಲಿಗಳಾಗಿ, ಕಟ್ಟಡ ನಿರ್ಮಾಣದ ಕೂಲಿಯಾಳುಗಳಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇನ್ನು ಬೆರಳೆಣಿಕೆಯ ಜನ ಮಾತ್ರ ಇತರ ಆರ್ಥಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಕೋಲಾರದ ಚಿನ್ನದ ಗಣಿಗೆ ಕೂಲಿಯಾಳುಗಳಾಗಿ ಬಂದು ಸೇರಿರುವ ತಮಿಳುನಾಡಿನ ದಲಿತರು ಚಿನ್ನದ ಗಣಿ ಮುಚ್ಚಿದ ನಂತರ ಅವರ ಪಾಡು ಅತಂತ್ರ ಸ್ಥಿತಿಗೆ ತಲುಪಿದೆ. ಅವರ ಅಳಲು ಕೇಳುವವರಾರೂ ಇಲ್ಲ. ಅನೇಕ ಎನ್.ಜಿ.ಓ ಗಳು, ಪತ್ರಿಕೆಗಳು, ಡಾಕ್ಯುಮೆಂಟ್ ಮಾಡಿದವು, ಪ್ರಸಾರವನ್ನೂ ಮಾಡಿದವು. ಆದರೆ ಪ್ರಯೋಜನವಾಗಲಿಲ್ಲ. ಇಂದಿಗೂ ಯಾವುದೇ ಸೌಕರ್ಯವಿಲ್ಲದೆ ದೊಡ್ಡ ದೊಡ್ಡ ಸ್ಲಂಗಳಲ್ಲಿ ಇವರ ಜೀವನ ಸಾಗುತ್ತಿದೆ. ಇಲ್ಲಿನ ಅನೇಕ ದಲಿತ ಹೆಣ್ಣುಮಕ್ಕಳು ಬೆಂಗಳೂರಿನ ಗಾರ್ಮೆಂಟ್ಸ್‌ಗಳಿಗೆ KGF ನಿಂದ ಬೆಂಗಳೂರಿಗೆ ಹೋಗುವ ರೈಲಿನಲ್ಲಿ ಹೋಗಿ ಸಂಜೆ ಬರುತ್ತಾರೆ. ಇವರ ಪರಿಸ್ಥಿತಿ ಅನೇಕ ಹೆಣ್ಣು ಮಕ್ಕಳನ್ನು ವೇಶ್ಯೆ ವೃತ್ತಿಗೂ ಸಹ ಇಳಿಸಿದೆ. ಇವರದೇ ಆದ ಒಂದು ದೊಡ್ಡ ಭಯಾನಕ ಲೋಕವಿದೆ. ಅವರ ದುಸ್ಥಿತಿಯನ್ನು ಭಯಾನಕ ಎನ್ನುತ್ತಿದ್ದೇನೆ. ಈ ಪರಿಸ್ಥಿತಿಯನ್ನು ಕುರಿತ ಪ್ರತ್ಯೇಕವಾದ ಅಧ್ಯಯನದ ಅವಶ್ಯಕತೆ ಇದೆ.

ಕೆಳಗಿನ ಎರಡು ಕಾರಣಗಳಿಂದ ಆಂಧ್ರದ ಮಾದಿಗರು ಹಾಗೂ ತಮಿಳಿನ ಪರ್‍ಯಯನ್‌ರು ಕರ್ನಾಟಕದಲ್ಲಿ ಕಾಲೂರಲು ಸಾಧ್ಯವಾಯಿತು.

1. ಸ್ಥಳೀಯವಾಗಿ ಇಲ್ಲಿನವರು ಜಾಡಮಾಲಿ ಕೆಲಸವನ್ನು ಮಾಡಲು ಹಿಂದುಮುಂದು ನೋಡುತ್ತಿದ್ದರು. ಮತ್ತು ಅವರಿಗೆ ಇಷ್ಟವಿರಲಿಲ್ಲ.

2. ಇವರು ವಲಸೆ ಬಂದಾಗ ಈ ವೃತ್ತಿ ಬಿಟ್ಟು ಬೇರೆ ಕೆಲಸ ಸಿಗದ ಕಾರಣ ಸ್ಥಳೀಯರಿಂದ ಈ ವೃತ್ತಿಗೆ ಯಾವುದೇ ಸ್ಪರ್ಧೆ ಇರದ ಕಾರಣ, ಅದೇ ಸಮಯದಲ್ಲಿ ವಲಸಿಗರು ಮತ್ತೆ ತಮ್ಮ ಸ್ವಂತ ಸ್ಥಳಗಳಿಗೆ ಹೋಗಲು ಸಾಧ್ಯವಾಗದ ಕಾರಣ ಅವರು ಈ ವೃತ್ತಿಯನ್ನೇ ಅನುಸರಿಸಬೇಕಾಯಿತು.

ಕರ್ನಾಟಕದಲ್ಲಿ ರಾಯಚೂರು, ಬಳ್ಳಾರಿ, ಬಾಗಲಕೋಟೆಗಳಿಂದ ಕೆಲಸವನ್ನು ಹುಡುಕಿಕೊಂಡು ಬೆಂಗಳೂರು, ಮೈಸೂರಿಗೆ ಹೋದ ದಲಿತರು ಇದೇ ವೃತ್ತಿಯನ್ನೇ ಆಶ್ರಯಿಸಿದ್ದಾರೆ. ಸಮಾಜದಲ್ಲಿ ಇವರು ಮಾಡುವ ಕೆಲಸಕ್ಕೆ ಮಾನ್ಯತೆ ಸಿಗದ ಕಾರಣ ಇವರು ಪ್ರತ್ಯೇಕವಾಗಿಯೇ ತಮ್ಮ ಜೀವನ ಸಾಗಿಸುತ್ತಿದ್ದಾರೆ. ಅವರದೇ ಆದ ಲೋಕ, ಅವರದೇ ಆದ ಕನಸು, ಇವತ್ತಿನ ಇವರ ಸ್ಥಿತಿಗತಿ ತುಂಬಾ ಶೋಚನೀಯವಾಗಿದೆ. ಈ ಕೆಲಸ ಅಸ್ಪೃಶ್ಯರಿಗೆ ಮಾತ್ರ ಮೀಸಲಾಗಿದೆ. ಈ ವೃತ್ತಿಗೆ ಸಂಬಂಧಿಸಿದಂತೆಯೇ ಅಂತಹ ಸಮುದಾಯಗಳೊಂದಿಗೆ ತನ್ನ ಸಂಬಂಧವನ್ನು ಇರಿಸಿಕೊಂಡಿದೆ. ಈ ವೃತ್ತಿಯನ್ನು ಮೊದಲಿನಿಂದಲೂ ಅಸ್ಪೃಶ್ಯರೇ ಮಾಡುತ್ತಾ ಬಂದಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಸ್ಥಳೀಯ ಮುನಿಸಿಪಾಲಿಟಿಗಳು ಇತರ ಜಾತಿಗಳನ್ನು ಕೆಲಸಕ್ಕೆ ಸೇರಿಕೊಂಡರೂ ಅವರು ಕೆಲಸವನ್ನು ತಿರಸ್ಕಾರದಿಂದ ನೋಡುತ್ತಾರೆ. ನಿರುದ್ಯೋಗವನ್ನು

ತಾಳಲಾರದೆ ನೊಂದು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರು ನಾವು ಜಾಡಮಾಲಿ ವೃತ್ತಿಯನ್ನು ಮಾಡುತ್ತಿದ್ದೇವೆ ಎಂದು ಹೇಳಿಕೊಳ್ಳಲು ನಾಚಿಕೆ ಪಡುತ್ತಾರೆ. ಇದು ನಮ್ಮ ಜಾತಿಗೆ ಮಾಡಿದ ಅವಮಾನ ಎಂದು ತಿಳಿಯುತ್ತಾರೆ. ಸಂವಿಧಾನಿಕವಾಗಿ ತಾವು ಕೆಲಸದ ಪಟ್ಟಿಯಲ್ಲಿದ್ದರೂ ಸಂಬಳವನ್ನು ತೆಗೆದುಕೊಂಡು ಬೇರೆಯವರಿಂದ ತಮ್ಮ ಕೆಲಸ ಮಾಡಿಸಿಕೊಂಡು ಅವರಿಗೆ ಅತ್ಯಂತ ಕಡಿಮೆ ಕೂಲಿಯನ್ನು ಕೊಡುತ್ತಾರೆ. ಹೆಣ್ಣು ಮಕ್ಕಳಿಂದ ಈ ರೀತಿ ಹೆಚ್ಚಾಗಿ ಕೆಲಸ ಮಾಡಿಸಿಕೊಳ್ಳುತ್ತಾರೆ. ಇದು ಇನ್ನೊಂದು ರೀತಿಯ ಶೋಷಣೆ. ಕೆಲವು ಸ್ಥಳಗಳಲ್ಲಿ ಮುಸ್ಲಿಮರು, ಮತಾಂತರಗೊಂಡ ಕ್ರಿಶ್ಚಿಯನ್ನರೂ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇವರ ಸಂಖ್ಯೆ ಕಡಿಮೆ ಇದೆ.

೧೯೭೩ರಲ್ಲಿ ಕರ್ನಾಟಕದಲ್ಲಿ ಬಸವಲಿಂಗಪ್ಪನವರು ಮಲಹೊರುವ ಪದ್ಧತಿಯನ್ನು ನಿಷೇಧ ಮಾಡಲು ಕಾಯಿದೆಯನ್ನು ಹೊರಡಿಸಿದರು. ಕರ್ನಾಟಕದಲ್ಲಿ ಸಂಪೂರ್ಣವಾಗಿ ನಿಷೇಧ ಆಗಿದೆ ಎಂದು ಹೇಳಲಾಗುತ್ತಿದೆ. ಮ್ಯಾನ್ ಹೋಲ್ ಕೆಲಸವನ್ನು ರಸ್ತೆಗಳಲ್ಲಿ ಕಸದ ಜೊತೆಗೆ ಮಲಗುಡಿಸುವ ಅದನ್ನು ಕೈ ಬಂಡಿಗಳಿಗೆ ತುಂಬುವುದನ್ನು ಏನೆಂದು ಕರೆಯಬೇಕು? ಇದು ಮಲ ಹೊರುವ ಪದ್ಧತಿ ಅಲ್ಲವೇ? ಹುಬ್ಬಳ್ಳಿ, ದಾರವಾಡ, ಬೆಳಗಾವಿ ಕಡೆ ಈಗಲೂ ತಲೆಯ ಮೇಲೆ ಮಲ ಹೊರಲಾಗುತ್ತಿದೆ. ವಿಜ್ಞಾನ ಇಷ್ಟು ಮುಂದುವರೆದಿದ್ದರೂ ಇಂತಹ ಗಲೀಜುಗಳನ್ನು ಕ್ಲೀನ್ ಮಾಡಲು ಯಂತ್ರೋಪಕರಣಗಳನ್ನು ಯಾಕೆ ಬಳಸುತ್ತಿಲ್ಲ. ದೊಡ್ಡ ದೊಡ್ಡ ನಗರಗಳಲ್ಲಿ ಈ ಸೌಲಭ್ಯವಿದ್ದರೂ ಅದು ಕೆಲವು ಏರಿಯಾಗಳಿಗೆ ಮಾತ್ರ. ಉಳಿದ ಸ್ಥಳಗಳಲ್ಲಿ ಕೆಲಸ ಮಾಡುವ ಜಾಡಮಾಲಿಗಳು ಏನು ಮಾಡಬೇಕು?

ಉತ್ತರ ಕರ್ನಾಟಕದಲ್ಲಿ ಈ ಕಾಯಿದೆ ಜಾರಿಗೆ ಬರದೇ ಇರಲು ಕಾರಣ ಏನೆಂಬುವುದನ್ನು ಐ.ಪಿ.ಡಿ ಸಾಲಪ್ಪನವರು ತಮ್ಮ ವರದಿಯಲ್ಲಿ ಹೀಗೆ ತಿಳಿಸುತ್ತಾರೆ.

೧. ಸರಕಾರ ಹೊರಡಿಸಿರುವ ನಿಷೇಧ ಉತ್ತರ ಕರ್ನಾಟಕದಲ್ಲಿ ಜಾರಿಗೆ ಬರದೇ ಇರಲು ಕಾರಣ ಇಲ್ಲಿ ಒಳಚರಂಡಿ ವ್ಯವಸ್ಥೆ ಇಲ್ಲ.

೨. ಸರಕಾರದ ಆದೇಶ ಇದೆಯೇ ಹೊರತು, ಖಾಸಗೀ ಕ್ಷೇತ್ರದಲ್ಲಿ ಇದರ ನಿಷೇಧ ಇಲ್ಲ.

೩. ಸರಕಾರ ಇದರ ನಿಷೇಧದ ಬಗ್ಗೆ ಆದೇಶ ಹೊರಡಿಸಿದೆಯೇ ಹೊರತು ಯಾವುದೇ ಪರ್ಯಾಯಗಳನ್ನು ರೂಢಿಸಿಲ್ಲ. ಅನಿವಾರ್ಯವಾಗಿ ಖಾಸಗಿ ಜಾಡಮಾಲಿಗರು ಈ ವೃತ್ತಿಯನ್ನು ಈಗಲೂ ಮಾಡುತ್ತಿದ್ದಾರೆ ಎಂಬ ಅಂಶಗಳನ್ನು ತಿಳಿಸಲಾಗಿದೆ. ಆದರೆ ಇದು ಈಗಲೂ ಪ್ರಸ್ತುತವಾಗಿ ಕಾಣುತ್ತದೆ.

ಕರ್ನಾಟಕದಲ್ಲಿ ಜಾಡಮಾಲಿ ವೃತ್ತಿಯನ್ನು ಮಾಡುವ ಜಾತಿಗಳೆಂದರೆ

1. ಮಾದಿಗ	2. ಗೊಲ್ಲ ಮಾದಿಗ	3.ಮಧುರೆ ಮಾದಿಗ
4. ಮಾಹಾರ್	5. ಮಾದರ್	6. ಮಿಂದು ಮಾದರ್
7. ವಡ್ಡ	8. ಭೋವಿ	9. ಹೊಲೆಯ
10.ದೊಂಬರಿ	11. ಕೋಲಿ	12. ಚೆನ್ನ ಹೊಲೆಯ
13.ಚಲವಾದಿ	14. ಮೋಚಿ	15. ಕೊರಗ

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ವರ್ಗಗಳು, ಮುಸ್ಲಿಮರು ಮತ್ತು ಮತಾಂತರ ಕ್ರಿಶ್ಚಿಯನ್ (ದಲಿತ್ ಕ್ರಿಶ್ಚಿಯನ್ನರ್) (ಐ.ಪಿ.ಡಿ ಸಾಲಪ್ಪ, ೧೯೭೬, ಪು. ೨೧).

ಬಳ್ಳಾರಿಯಲ್ಲಿ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿರುವ ಜಾತಿಗಳೆಂದರೆ ಮಾದಿಗ, ಚಲುವಾದಿ, ಕೊರಗ, ನಾಯಕ, ಬೆಸ್ತ, ಮುಸ್ಲಿಂ, ಕ್ರಿಸ್ಚಿಯನ್ ಮೊದಲಾದವರು. ಇವರು ತೆಲುಗು, ತಮಿಳು, ಕನ್ನಡ, ಉರ್ದು, ಹಿಂದಿ ಮಾತನಾಡುತ್ತಾರೆ. ಅದರಲ್ಲಿ ತೆಲುಗು ಮಾತನಾಡುವವರೇ ಹೆಚ್ಚು. ಮಲ ಹೊರುವ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆಂದು ನೀಡಲಾಗಿರುವ ೩.೨೫ ಕೋಟಿ ರೂಪಾಯಿಗಳಷ್ಟು ಹಣ ರಾಜ್ಯ ಸರ್ಕಾರಗಳ ಬಳಿ ಖರ್ಚಾಗದೆ ಕೊಳೆಯುತ್ತಾ ಬಿದ್ದಿದೆ. ಬಹು ದೊಡ್ಡ ಸಾಮಾಜಿಕ ಕಳಂಕವಾಗಿರುವ ಈ ಅನಿಷ್ಟವನ್ನು ತೊಲಗಿಸುವ ತುರ್ತಾಗಲಿ, ಬದ್ಧತೆಯಾಗಲಿ ಸಂಬಂಧಪಟ್ಟ ಇಲಾಖೆಗಳಿಗೆ ಇಲ್ಲದಿರುವುದು ಅವರ ಬೇಜವಾಬ್ದಾರಿತನವನ್ನು ತೋರಿಸುತ್ತದೆ. ಮಲ ಹೊರುವವರಿಗೆ ಬೇರೆ ಉದ್ಯೋಗ ಒದಗಿಸುವ ಮತ್ತು ಶುಷ್ಕಪಾಯಿಖಾನಿಗಳ ನಿರ್ಮಾಣವನ್ನು ನಿಷೇದಿಸುವ ೧೯೯೩ ರ ಕೇಂದ್ರ ಖಾಯಿದೆ ಜಾರಿಗೆ ಬಂದರೂ ರಾಜ್ಯ ಸರ್ಕಾರಗಳು ಸಾಕಷ್ಟು ಆಸಕ್ತಿ ತೋರಿಸುತ್ತಿಲ್ಲ. ೨೦೦೭ ರ ಅಂತ್ಯದೊಳಗೆ ಈ ಪದ್ಧತಿಯ ನಿರ್ಮೂಲನೆ ಆಗಬೇಕೆಂದು ಯೋಜನಾ ಆಯೋಗ ತನ್ನ ರಾಷ್ಟ್ರೀಯ ಕ್ರಿಯಾ ಯೋಜನೆಯನ್ನು ನೀಡಿ ಗಡುವು ನಿಗದಿ ಮಾಡಿದೆ. ಆದರೆ ಈ ಅಮಾನವೀಯ ದಾಸ್ಯದಿಂದ ಮುಕ್ತರಾಗಲು ಕಾಯುತ್ತಿರುವ ನತದೃಷ್ಟರ ಅಧಿಕೃತ ಸಂಖ್ಯೆ ಭಾರತದಲ್ಲಿ ೯.೭೬ ಲಕ್ಷವಾದರೆ, ಅನಧಿಕೃತರ ಸಂಖ್ಯೆ ೧೩ ಲಕ್ಷವಿದೆ. (ಕನ್ನಡ ಪ್ರಭ, ಮೇ ೧೯ ೨೦೦೭).

೧೯೯೧-೯೨ ನೇ ಸಾಲಿನಲ್ಲಿ ಸ್ಕ್ಯಾವೆಂಜರ್ಸ್‌ಗಳನ್ನು ಗುರುತಿಸಲು ನಗರಾಭಿವೃದ್ಧಿ ಇಲಾಖೆಯಿಂದ ಸಮೀಕ್ಷೆ ನಡೆಸಿದ್ದು ರಾಜ್ಯಾದ್ಯಂತ ೧೪,೫೫೫ ಸ್ಕ್ಯಾವೆಂಜರ್ಸ್‌ಗಳಿದ್ದಾರೆಂದು ಗುರುತಿಸಲಾಗಿದೆ. ೨೦೦೨-೦೩ ನೇ ಸಾಲಿನಲ್ಲಿ ನಡೆಸಲಾದ ಸಮೀಕ್ಷೆಯ ಮುಖಾಂತರ ರಾಜ್ಯಾದ್ಯಂತ ಇವರ ಸಂಖ್ಯೆ ೪೯೬೯೮ ಎಂದು ಗುರುತಿಸಲಾಗಿದೆ. ಹಾಗೂ ಇನ್ನೂ ಕೆಲವು ಕುಟುಂಬಗಳು ಬಿಟ್ಟು ಹೋಗಿರಬೇಕೆಂದು ಅಂದಾಜಿಸಿ ಪುನರ್ ಸಮೀಕ್ಷೆ ನಡೆಸಬೇಕೆಂದು ಸೂಚಿಸಲಾಗಿದೆ. ಆದರೆ ಇದುವರೆವಿಗೂ ಸಮೀಕ್ಷೆ ಕಾರ್ಯ ಪೂರ್ಣಗೊಂಡಿರುವುದಿಲ್ಲ. ಈ ಕೆಲಸವನ್ನು ಎನ್.ಎಸ್.ಎಲ್.ಆರ್.ಎಸ್ ಯೋಜನೆಯು ನಿರ್ವಹಿಸುತ್ತಿದೆ - (National Scheme of liberation & Rehabilitation of Scavengers & Their Dependents). ಫ್ಯಾಕ್ಟರಿಗಳಲ್ಲಿ, ರೈಲು, ಪೋಲಿಸ್ ಡಿಪಾರ್ಟ್‌ಮೆಂಟ್, ಪಟ್ಟಣ, ನಗರ ಪಂಚಾಯಿತಿಗಳಲ್ಲಿ, ತಾಲೂಕು ಮತ್ತು ಜಿಲ್ಲೆಯಲ್ಲಿ ಖಾಸಗಿ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಜಾಡಮಾಲಿಗಳ ಅಂಕಿ-ಅಂಶಗಳನ್ನು ತೆಗೆದು ಕೊಂಡಿಲ್ಲ ಅಂದಾಜು ಮಾತ್ರ ಮಾಡಲಾಗಿದೆ. ಅವರ ಸಂಖ್ಯೆ ಇನ್ನೂ ಹೆಚ್ಚಾಗಿಯೂ ಇರಬಹುದು.

'ಹೆಣ್‌ಮಗ್ಳಾಗಿ ನಾನು ಮನಿನಾಗ ಕೆಲ್ಸ ಮಾಡ್ಬೇಕು. ಹೊರಗೂ ಕೆಲ್ಸ ಮಾಡ್ಬೇಕು. ಈ ಕೆಲ್ಸ ಮಾಡೋಕ ಮೊದ್ಲು ಬೇಲ್ದಾರಿ ಕೆಲ್ಸಕ ಹೋತಿದ್ದೆ. ನಾನು ಈ ಕೆಲ್ಸಕ ಬಂದು ಎಂಟು ವರ್ಷ ಆತು. ಮುನ್ನೂರು ರೂಪಾಯಿನಿಂದ ಶುರು ಮಾಡೀನಿ. ಮನಿನಾಗ ಕಷ್ಟ ಇತ್ತು ಏನೋ ಪರ್ಮನೆಂಟ್ ಆಗ್ಬಹುದು ಅಂತ ಆಸೆ ಇತ್ತು. ಮನಿ ಕೆಲ್ಸ ಮಾಡಿದ್ರೆ, ಬೇಲ್ದಾರಿ ಕೆಲ್ಸ ಮಾಡಿದ್ರೆ ಯಾವಾಗಾದ್ರೂ ತೆಗಿಬೋದು ಅಂದ್ಕೊಂಡು ಈ ಕೆಲ್ಸ ಪರ್ಮನೆಂಟ್ ಆದ್ರೆ, ರಿಟೈರ್ಡ್ ಆದ್ರೂ ರೊಕ್ಕ ಬರ್‍ತೈತಿ. ನಮ್ಗಿಲ್ಲ ಅಂದ್ರೆ ಮಕ್ಳಿಗಿ ಆಗ್ತೈತಿ ಅಂದ್ಕಂಡೀನಿ. ಆರು ಜನ ಮಕ್ಳು ನನ್ಗಿ. ಗಂಡ ನನ್ನ ಬಿಟ್ಟು ಬೇರೆಯವಳ ಜೊತೆ ಓಡಿ ಹೊಂಟೋದ ನನ್ಗಿ ಬರೋ ರೊಕ್ಕಕ್ಕೆ

ಮಕ್ಕಳ ಸಾಕೋದು ತುಂಬಾ ಕಷ್ಟ. ಬರೀ ಈ ಕೆಲ್ಸದಿಂದ ಮನಿ ನಡೆಯೊಲ್ಲ ಇದನ್ನು ಮುಗಿಸಿಕೊಂಡು ಮನಿ ಕೆಲ್ಸ ಮಾಡ್ತೀನಿ. ಮೊದ್ಲು ನಾನೇ ಎಲ್ಲಾ ಮಾಡಿಟ್ಟು ಬರ್‍ತಾ ಇದ್ದೆ. ಈಗ ದೊಡ್ಡಮಗ್ಳು ಅದಾಳ. ಅವಳ್ಗೆ ಹನ್ನೆರಡು ವರ್ಷ ಐತಿ. ಮೂರ್‍ನಾಲ್ಕು ವರ್ಷದಿಂದ ಆಕಿನೆ ರೊಟ್ಟಿ ಬಡಿತಾಳ.

ಜಾಡಮಾಲಿ ಮಹಿಳೆ ತಾನು ಕೆಲಸ ಮಾಡುತ್ತಿರುವ ಪ್ರದೇಶದಲ್ಲಿ ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾಳೆ. ಇದನ್ನು ವಿರೋಧಿಸಿ ಅವಳೇನಾದರೂ ನಡೆದುಕೊಂಡದ್ದೇ ಆದರೆ ಅವಳನ್ನು ಕೆಲಸದಿಂದ ತೆಗೆಸುವ ಬೆದರಿಕೆ ಹಾಕಿ ಕೆಟ್ಟ ಕೆಟ್ಟ ಮಾತುಗಳನ್ನು ಬಳಸಿ ಬೈಯಲಾಗುತ್ತಿದೆ. ಹೆಚ್ಚಾಗಿ ಮೇಲಿನಾಧಿಕಾರಿಗಳಿಂದಲೇ ಅವಳು ಲೈಂಗಿಕ ಕಿರುಕುಳವನ್ನು ಅನುಭವಿಸುತ್ತಿದ್ದಾಳೆ. ಜನಸಂಖ್ಯೆ ಅತಿಯಾಗಿ ಬೆಳೆಯುತ್ತಿರುವುದರಿಂದ ಪಿಟ್‌ಗಳನ್ನು ಮಾಡಲು ಸ್ಥಳಾವಕಾಶ ಇಲ್ಲದ ಕಾರಣ ದೊಡ್ಡ, ದೊಡ್ಡ ನಗರಗಳಲ್ಲಿ ಬೆಂಗಳೂರು, ಬಾಂಬೆ, ಕಲ್ಕತ್ತ, ಮದ್ರಾಸ್ ಮುಂತಾದವುಗಳ ಕಡೆ ಮಲ ತೆಗೆಯುವವರನ್ನು ನೇಮಿಸಲಾಗುತ್ತಿದೆ. ಈ ರೀತಿಯ ಜಾಡಮಾಲಿಗಳು ಎರಡು ರೀತಿಯಾಗಿ ಇರುತ್ತಾರೆ.

೧. ಒಣಗಿದ ಮಲವನ್ನು ಹೊರುವವರು

೨. ಹಸಿ ಮಲವನ್ನು ಹೊರುವವರು
(ಪ್ರತಿದಿನ ತೆಗೆಯುವುದು)

ಸಾಕಷ್ಟು ಜಾಡಮಾಲಿಗಳು ಒಣಗಿದ ಹೇಲನ್ನು ತೆಗೆಯುತ್ತಾರೆ. ಯಾಕೆಂದರೆ ಬೀದಿಗಳಲ್ಲೂ ಗುಡಿಸುವಾಗ ಮಲಗಳನ್ನು ಕ್ಲೀನ್ ಮಾಡುವಾಗ ತೆರೆದ ಲೆಟ್ರೀನ್‌ಗಳಲ್ಲಿ ಮಲವನ್ನು ಯಾವುದೇ ಸೇಫ್ಟಿ ಮೆಜರ್ಸ್ ಇಲ್ಲದೇ ತೆಗೆಯುವುದು ಇವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ.

ಜೀವನವೆಲ್ಲ ಗಾಜಿನ ಚೂರು, ಕಬ್ಬಿಣದ ಮೊಳೆಗಳು

ಅನೇಕ ಮುನಿಸಿಪಾಲಿಟಿಗಳಲ್ಲಿ ಪುರಾತನ ಕಾಲದ ಪೊರಕೆ, ಬುಟ್ಟಿ ಮತ್ತು ಚಲಿಕೆಗಳನ್ನು ಜಾಡಮಾಲಿ ಕೆಲಸಕ್ಕಾಗಿ ನೀಡಲಾಗುತ್ತಿದೆ. ಎಲ್ಲಾ ಕಡೆಗಳಲ್ಲಿ ಈ ಕೆಲಸದಲ್ಲಿ ತೊಡಗಿರುವವರಿಗೆ ಶೂಗಳು, ಕೈಚೀಲ ಅಥವಾ ಮುಖವಾಡಗಳನ್ನು ನೀಡಲಾಗಿಲ್ಲ. ಹೀಗೆ ಇತರರ ಆರೋಗ್ಯ ಮತ್ತು ಬದುಕನ್ನು ಕಾಯುವ ಈ ಜನಕ್ಕೆ ಆಧುನಿಕ ಸಾಧನಗಳಿಲ್ಲದೆ ಅಪಾಯಕಾರಿ ಸನ್ನಿವೇಶದಲ್ಲಿ ಆರೋಗ್ಯ ಡೋಲಾಯ ಮಾನಸ್ಥಿತಿಯಲ್ಲಿದೆ.

'ಗ್ಲೌಸು, ಪೊರಕೆ ಏನು ಕೊಟ್ಟಿಲ್ಲ ರೀ, ಸದ್ಯಕ್ಕೆ ಸರಿಯಾಗಿ ಕೂಲಿ ಕೊಟ್ರೆ ಸಾಕು. ಪರ್‌ಮನೆಂಟು ಇರೋರಿಗೇನೇ ಏನೂ ಕೊಡಲ್ಲ, ಇನ್ನು ನಮ್ಮಂತೋರಿಗೆ ಏನು ಕೊಡ್ತಾರೆ. ಕಸ ಜಾಸ್ತಿ ಇರೋದ್ರಿಂದ ಒಂದು ಪರಕೆ ಒಂದು ವಾರಕ್ಕೂ ಬರಲ್ಲ. ನಮ್ಮ ರೊಕ್ಕದಲ್ಲೇ ಪರಕೆ, ಪುಟ್ಟಿ ತಗೊಂತೀವಿ. ಅದು ಇದು ಅಂತ ಕೇಳಿದರೆ ಕೆಲಸದಿಂದ ತಗಿತೀವಿ ಎಂದು ಹೆದರಿಸ್ತಾರೆ. ಕಸದಲ್ಲಿರೋ ಗಾಜಿನ ಚೂರು, ಕಬ್ಬಿಣದ ಮೊಳೆಗಳು ಕೈಗೆ ಚುಚ್ಚಿಕೊಂಡು ರಕ್ತ ಬರ್‍ತಾ ಇದ್ರು ಅಂಗೇ ಕೆಲ್ಸ ಮಾಡಬೇಕು. ಅವರಿಗೇನು ಕೆಲಸ ಮುಖ್ಯವಾಗಿ ಆಗಬೇಕು. ನಮ್ಮ ಸ್ಥಿತಿ ಏನಾದರೆ ಅವರಿಗೇನು, ನಾವು ಅಲ್ಲದಿದ್ರೆ ಇನ್ನೊಬ್ಬರನ್ನು ಕರಕಂತಾರೆ. ಬಚ್ಚಲು ಕಸ ತೆಗೆವಾಗಂತೂ ವಾಸಿನ ತಡಕಳ್ಳಾಕ ಆಗಂಗಿಲ್ಲ, ಸೆರಗನ್ನು ಮೂಗಿಗೆ ಸುತ್ತಿಕೊಂಡರೂ ಇರಕಾಗಲ್ಲ. ಆದ್ರೆ ಏನು ಮಾಡಬೇಕು ಸಂಬ್ಳ ತಗಳಲ್ಲೇನೇ ತಗಿಯೇ ಅಂತ ನಮ್ಮ ಗುತ್ತಿಗಿ ಸಾರ್ ಜಬರ್‌ಸ್ತಾರೆ ಸುಮ್ನೆ ಮಾಡಬೇಕು ಅಷ್ಟೆ' ಎಂದು ತನ್ನ ಅಸಹಾಯಕ ಸ್ಥಿತಿಯನ್ನು ಹೇಳಿಕೊಳ್ತಾನೆ ಹನುಮಕ್ಕ ಕೆಲಸ ಮಾಡ್ತಾನೇ

ಇದ್ದು. ಅವರ ಅತಿಯಾದ ಬಡತನ ಮೇಸ್ತ್ರಿಗಳನ್ನು ಎದುರಿಸಿ ಕೇಳುವಂತೆ ಇರಿಸಿಲ್ಲ. ಅದು ಅವರನ್ನು ಇನ್ನಷ್ಟು ಅಸಹಾಯಕತೆಗೆ ತಳ್ಳಿದೆ.

ಅಮಾನವೀಯ ಕೆಲಸವಾದ ಹೇಲೆತ್ತುವ ಕೆಲಸವನ್ನು ಮೊದಲ ಬಾರಿ ಮುಂಬೈರಾಜ್ಯದಲ್ಲಿ ನಿಷೇಧಿಸಲು ಅಕ್ಟೋಬರ್ ೧೯೪೭ರಲ್ಲಿ ಒಂದು ಖಾಸಗಿ ಬಿಲ್ಲನ್ನು ಮಂಡಿಸಲಾಯಿತು. ಆದರೆ ಅದು ಪ್ರಯೋಜನಕ್ಕೆ ಬರಲಿಲ್ಲ. ಅಂದಿನಿಂದ ಇಂದಿನವರೆಗೆ ಅನೇಕ ರೀತಿಯ ಸಮಿತಿಗಳನ್ನು ಮತ್ತು ಶೋಧನಾ ಸಮಿತಿಗಳನ್ನು ನೇಮಿಸಲಾಗಿದೆ. ಸರ್ಕಾರ ಒಣ ಪಾಯಿಕಾನೆಗಳನ್ನು ನಿರ್ಮಿಸಬಾರದು ಎಂದು ಕಾಯಿದೆ ಹೊರಡಿಸಿದ್ದರೂ, ಇಂದಿಗೂ ಸಹ ಒಣ ಪಾಯಿಕಾನೆಯ ಕೆಲಸಗಾರರು ಹಾಗೆಯೇ ಮುಂದುವರೆದಿದ್ದಾರೆ.

೧೯೮೯ರಲ್ಲಿ ಇಂತಹ ಪಾಯಿಕಾನಿಗಳು ಭಾರತದಲ್ಲಿ ಒಟ್ಟು ೭.೬೪ ಮಿಲಿಯನ್ ಇದ್ದು, ಅವುಗಳಲ್ಲಿ ೫.೪೨ ಮಿಲಿಯನ್ ನಗರದಲ್ಲಿದ್ದರೆ ೨.೨೨ ಮಿಲಿಯನ್ ಪಾಯಿಕಾನೆಗಳು ಗ್ರಾಮೀಣ ಪ್ರದೇಶದಲ್ಲಿವೆ.

೧೯೯೯-೨೦೦೦-೨೦೦೧ರ ಅಂಕಿಅಂಶಗಳು

ವರ್ಷ	ನಗರಗಳಲ್ಲಿ ಪೌರಕಾರ್ಮಿಕರು	ಗ್ರಾಮೀಣಪ್ರದೇಶದಲ್ಲಿ ಪೌರಕಾರ್ಮಿಕರು
೧೯೭೧	೫೫.೭೦	೪೪.೩೦
೧೯೮೧	೭೫.೬೦	೨೪.೪೦
೧೯೮೯	೮೩.೨೪	೧೬.೭೬

(ಮೂಲ: ರಾಷ್ಟ್ರೀಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಆಯೋಗ ದೆಹಲಿ)

ಮೇಲಿನ ಅಂಕಿಅಂಶಗಳ ಮೂಲಕ ತಿಳಿಯುವುದೇನೆಂದರೆ ಹಳ್ಳಿಗಳಿಗಿಂತ ನಗರಪ್ರದೇಶದಲ್ಲಿಯೇ ಹೆಚ್ಚು ಪೌರಕಾರ್ಮಿಕರಿದ್ದಾರೆ. ಇವರೆಲ್ಲಾ ವಲಸೆಯಿಂದ ಹೋಗಿ ಸ್ಲಂಗಳಲ್ಲಿ ಜೀವಿಸುತ್ತಿರುವ, ಗುತ್ತಿಗೆ ಆಧಾರದ ಮೇಲೆ ಕೆಲಸಮಾಡುತ್ತಿರುವ ಪೌರಕಾರ್ಮಿಕರೇ ಆಗಿದ್ದಾರೆ. ಬಳ್ಳಾರಿಯಲ್ಲಿ ೧೯೭೬ರಲ್ಲಿ ೬೦೨೬೮೭ ಜನಸಂಖ್ಯೆಗೆ ೭೩೫ ಜನ ಪೌರಕಾರ್ಮಿಕರಿದ್ದರೆಂದು, ೭೦೦ ಜನಕ್ಕೆ ಒಬ್ಬ ಪೌರ ಕಾರ್ಮಿಕನನ್ನು ನೇಮಿಸಬೇಕೆಂದುಐ.ಪಿ.ಡಿ ಸಾಲಪ್ಪನವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಆದರೆ ಈಗ ಇರುವ ನಿಯಮಾವಳಿಗಳು ೫೦೦ ಜನಕ್ಕೆ ಒಬ್ಬ ಪೌರಕಾರ್ಮಿಕನಿರಬೇಕೆಂದು ಹೇಳಲಾಗುತ್ತಿದೆ. ೫೦೦ ಜನರ ಕೊಳಕನ್ನು ಒಬ್ಬ ಕ್ಲೀನ್ ಮಾಡುವುದೆಂದರೆ ಅದು ಪೌರಕಾರ್ಮಿಕನ/ಳ ಕೆಲಸದ ಭೀಕರತೆಯನ್ನು ತಿಳಿಸುತ್ತದೆ.

೨೦೦೦-೦೧ ರ ಅಂಕಿ-ಅಂಶಗಳ ಪ್ರಕಾರ ಭಾರತದಲ್ಲಿ ೪೭.೭% ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ೩೬% ಮಹಿಳೆಯರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ದಲಿತರಲ್ಲಿ ೩೬.೨೫% ಗ್ರಾಮೀಣ ಪ್ರದೇಶದಲ್ಲೂ ೩೮.೪೭% ನಗರ ಪ್ರದೇಶದಲ್ಲಿ ಸರಿಯಾದ ಆಹಾರ ಇಲ್ಲದೇನೇ ಇದ್ದಾರೆ ಎಂದು ಗುರುತಿಸಿದೆ.

ನಮ್ಮ ದೇಶದಲ್ಲಿ ಅಪೌಷ್ಟಿಕತೆಯಿಂದ ನರಳುವವರೆಂದರೆ:

* ಅಸಂಘಟಿತರು
* ಬಾಲಕಾರ್ಮಿಕರು/ಜೀತ ಮಾಡುವವರು

* ಮಹಿಳೆಯರು
* ಕೃಷಿಕೂಲಿಕಾರ್ಮಿಕರು
* ಇತರ ಕೂಲಿಗಾರರು
* ಆದಿವಾಸಿಗಳು/ದಲಿತರು

ಇವರೆಲ್ಲರೂ ಆಹಾರವಿಲ್ಲದೆ ನರಳುತ್ತಿರುವವರು. ಆದರೆ ೨೦% ರಷ್ಟು ಆಹಾರ ಗೋದಾಮುಗಳಲ್ಲಿ ಕೊಳೆಯುತ್ತಿದೆ. ಬಡವರಿಗೆ ಒಂದು ವರ್ಷಕ್ಕೆ ಸಾಕಾಗುವಷ್ಟು ಈ ಆಹಾರ ಇಲಿ/ಹೆಗ್ಗಣಗಳ ಪಾಲಾಗುತ್ತಿರುವುದು ದುರಂತವೇ ಸರಿ.

೫೨ನೇ ಎನ್.ಎಸ್.ಎಸ್ ವರದಿಯ ಪ್ರಕಾರ ಸಾಲಕ್ಕೆ ಮುಖ್ಯ ಕಾರಣ, ಆಸ್ಪತ್ರೆಯಲ್ಲಿ ಅಡ್ಮಿಟ್ ಆಗುವುದೇ ಆಗಿದೆ. ೪೨ನೇ ಎನ್.ಎಸ್.ಎಸ್ ವರದಿಯ ಪ್ರಕಾರ ೧೫% ೪೦% ಖಾಯಿಲೆಗಳಿಗೆ ಚಿಕಿತ್ಸೆಯನ್ನು ಪಡೆಯದೇ ಇರುವುದಕ್ಕೆ ಕಾರಣ ಆರ್ಥಿಕ ತೊಂದರೆ. ೫೫ ನೇ ಎನ್.ಎಸ್.ಎಸ್ ವರದಿಯ ಪ್ರಕಾರ ಗ್ರಾಮೀಣ ಭಾಗದಲ್ಲಿ ೨೫% ಜನರ ಸಾಲಕ್ಕೆ ಕಾರಣ ಅನಾರೋಗ್ಯವೇ ಆಗಿರುತ್ತದೆ. ಇವೆಲ್ಲಾ ಅಂಕಿ-ಅಂಶಗಳಲ್ಲಿ ಹೆಚ್ಚಾಗಿ ದಲಿತರೇ ಅದರಲ್ಲೂ ದಲಿತ ಮಹಿಳೆಯರು ಇದ್ದಾರೆ ಎಂಬುವುದನ್ನು ಗಮನಿಸಬೇಕು.

ಈ ಹಿಂದಿನ ರಾಷ್ಟ್ರೀಯ ಯೋಜನಾ ಸಮಿತಿಯ ಅಧ್ಯಯನದ ಪ್ರಕಾರ ಜಾಡಮಾಲಿಯಲ್ಲಿ ತೊಡಗಿರುವವರ ಆರೋಗ್ಯ ಹೀನ ಸ್ಥಿತಿಗೆ ತಲುಪಿದೆಯೆಂದು ಹೇಳಿರುವುದು ಈಗಲೂ ವಾಸ್ತವವಾಗಿಯೇ ಉಳಿದುಕೊಂಡಿದೆ.

* ಶೇ. ೪೨.೩ ರಷ್ಟು ಮಂದಿ ಉಸಿರಾಟದ ತೊಂದರೆಗಳಿಂದ ನರಳುತ್ತಿದ್ದಾರೆ.
* ಶೇ. ೧೨.೫ ರಷ್ಟು ಜನ ಚರ್ಮ ರೋಗಗಳಿಂದ ವೇದನೆ ಪಡುತ್ತಿದ್ದಾರೆ.
* ಶೇ. ೫೫.೯ ರಷ್ಟು ಜನ ಸಂಧಿವಾತದ ಬಗ್ಗೆ ದೂರಿದ್ದಾರೆ.
* ಶೇ. ೬.೨ ರಷ್ಟು ಜನ ಜ್ವರ ಪೀಡಿತರು.
* ಶೇ. ೨೬.೩ ರಷ್ಟು ಮಂದಿ ಕರುಳು ಬೇನೆಗೊಳಗಾಗಿದ್ದಾರೆ.
* ಶೇ. ೧೧.೮ ರಷ್ಟು ಮಂದಿ ತೂಕ ಕಳೆದುಕೊಂಡಿದ್ದಾರೆ.
* ಶೇ. ೧೧.೨ ರಷ್ಟು ಮಂದಿ ದೈಹಿಕವಾಗಿ ಗಾಯಗೊಂಡಿದ್ದಾರೆ.
* ಶೇ. ೧೨.೫ ರಷ್ಟು ಜನ ಮಾನಸಿಕ ಒತ್ತಡ ಮತ್ತು ಮಧ್ಯಪಾನ ವ್ಯಸನಿಗಳಾಗಿದ್ದಾರೆ.

(ವೃತ್ತಿಪರ ಆರೋಗ್ಯ ಮತ್ತು ರಕ್ಷಣಾ ಕೇಂದ್ರ ವರದಿ ಮುಂಬಯಿ, ೧೯೯೬, ಉದ್ಧೃತ: ಹೊನ್ನಾರು, ೨೦೦೫, ಪು. ೨೨)

ಮಲ ಹೊರುವುದಕ್ಕೆ ಸಂಬಂಧಿಸಿದಂತೆ ನಿಷೇಧ ಕಾನೂನು ಜಾರಿಗೆ ಬಂದ ಮೇಲೆ- ಜಾಡಮಾಲಿಗಳು ಈ ಕೆಲಸವನ್ನು ಬಿಟ್ಟರು. ಆದರೆ ಮನೆಯ ಮಾಲಿಕರು ಇದಕ್ಕೆ ಪರ್ಯಾಯವಾಗಿ ತಮ್ಮ ಮನೆಯಲ್ಲಿ ಕೆಲಸಗಾರರಿಂದಲೇ ಇದನ್ನು ಮಾಡಿಸಲು ಶುರುಮಾಡಿದರು. ಇಡೀ ಉತ್ತರ ಕರ್ನಾಟಕದಲ್ಲಿ ಇದನ್ನು ವಿರೋಧಿಸಿ ಯಾವುದೇ ಪ್ರತಿಕ್ರಿಯೆಯನ್ನು ತೋರಿಸಲಿಲ್ಲ, ಹಾಗೂ ಪ್ರೋತ್ಸಾಹಿಸಲಿಲ್ಲ ಎಂಬುವುದು ದುರಂತವೇ

ಸರಿ. ಈ ಕಾರಣದಿಂದಲೇ ಈಗಲೂ ಉತ್ತರಕರ್ನಾಟಕದಲ್ಲಿ ಮಲ ಹೊರುವ ಪದ್ಧತಿ ಜಾರಿಯಲ್ಲಿದೆ. ಜನಸಂಖ್ಯೆ ಜಾಸ್ತಿಯಾಗುತ್ತಿದೆ ಅದಕ್ಕೆ ತಕ್ಕ ಹಾಗೆ ಪೌರ ಕಾರ್ಮಿಕರಿಲ್ಲ.

ಬಳ್ಳಾರಿಯಲ್ಲಿ ನಿರ್ಮಲನಗರ ಯೋಜನೆ ಅಂತ ಮಾಡಿದ್ದಾರೆ. ಆದರೆ ಅದು ಎಲ್ಲಾ ಫೋಲ್ ಆಗ್ತಾ ಇದೆ. ಇದನ್ನು ಸ್ತ್ರೀಶಕ್ತಿ ಗುಂಪುಗಳು, ಎನ್.ಜಿ.ಓಗಳು ಸಾಮಾನ್ಯವಾಗಿ ಎಕ್ಸಟೆನ್ಷನ್ ಏರಿಯಾಗಳಲ್ಲಿ ಮಾಡಿದ್ದಾರೆ ಆದರೆ ಅದು ಸಫಲವಾಗಿಲ್ಲ. ಯಾಕೆಂದರೆ ಅದರ ನಿಯಮಾವಳಿಗಳೇ ಸರಿ ಇಲ್ಲ. ಮನೆ, ಮನೆಗೂ ಹೋಗಿ ಕಸ ತೆಗೆದುಕೊಳ್ಳಬೇಕು. ಮನೆ ಮನೆಗೂ ಹಣ ಇಷ್ಟು ಎಂದು ಕೇಳಬೇಕು, ಅದನ್ನು ಯಾರು ಹೇಳುತ್ತಾರೆ. ಸ್ಟಾರ್ ಹೋಟೆಲ್‌ಗಳಲ್ಲಿ ಕೂತುಕೊಂಡು ಕಾರ್ಯಾಗಾರ ಮಾಡಿದ ಬುದ್ಧಿಜೀವಿಗಳು ಮಾಡ್ತಾ ಇದಾರೆ. ಸರಿಯಾಗಿ ಕ್ಷೇತ್ರಕ್ಕೆ ಬಂದು ನೋಡಿದಾಗ ಪ್ರಾಮಾಣಿಕವಾಗಿ ಸಫಲವಾಗಿಲ್ಲದಿರುವುದು ತಿಳಿಯುತ್ತದೆ. ಯಾಕೆಂದರೆ ಮನೆ ಮನೆಯಲ್ಲಿ ಹೆಣ್ಣುಮಕ್ಕಳು ಕಸವನ್ನು ಸಂಗ್ರಹಿಸಿದ ಮೇಲೆ ಹಣವನ್ನು ತೆಗೆದುಕೊಳ್ಳಲು ಅಲ್ಲಿಯ ಸ್ಥಳೀಯ ರೌಡಿಗಳೇ ಬರುತ್ತಾರೆ, ಕಾರ್ಪೋರೇಟರ್ಸ್ ಬರುತ್ತಾರೆ. ಕೆಲವೊಮ್ಮೆ ಹೆಣ್ಣುಮಕ್ಕಳೇ ಕಸವನ್ನು ಎತ್ತಿ ಹಣ ಸಂಗ್ರಹಿಸಿ ಅವರಿಗೆ ತೆಗೆದುಕೊಂಡು ಹೋಗಿ ಕೊಡಬೇಕು. ಅವರು ಕೊಟ್ಟ ಚಿಲ್ಲರೆಯನ್ನು ತೆಗೆದುಕೊಂಡು ಸುಮ್ಮನೆ ಆಗಬೇಕು. ಈ ತರಹದ್ದು ನಡೀತಾ ಇದೆ.

ಬೇರೆ ಕೆಲಸಕ್ಕೆ ಹೋದರೆ ಸಂಜೆವರಿಗೂ ದುಡಿತೀವಿ ೮೦-೧೦೦ ಕೂಲಿ ಕೊಡುತ್ತಾರೆ. ಆದರೆ ಇಲ್ಲಿ ನಾವು ೧, ೨ ಗಂಟೆಯವರಿಗೂ ಕೆಲಸ ಮಾಡಿ ಮನೆಗೆ ಹೋಗುತ್ತೀವಿ ಅಥವಾ ಬೇರೆ ಯಾವುದೋ ಪಾರ್ಟ್‌ಟೈಂ ಕೆಲಸ ಮಾಡುತ್ತೀವಿ ಇದು ನಮಗೆ ಅಡ್ಜಸ್ಟ್ ಆಗಿಬಿಟ್ಟಿದೆ ಅಂತ ಹೇಳುತ್ತಾರೆ. ಈಗ ಪಿ.ಯು.ಸಿ, ಡಿಗ್ರಿ ಓದಿರುವ ಹುಡಗರು ಕೂಡ ಜಾಡಮಾಲಿ ಕೆಲಸಕ್ಕೆ ಹೋಗುತ್ತಾ ಇದ್ದಾರೆ. ಇದನ್ನು ನೋಡಿದರೆ ವಾಸ್ತವ ಸ್ಥಿತಿ ಏನು ಎಂಬುವುದು ತಿಳಿಯುತ್ತದೆ. ಮೈಸೂರಿನಲ್ಲಿ ಗುತ್ತಿಗೆ ಪೌರ ಕಾರ್ಮಿಕರ ಕೂಲಿ ೨೫೦೦ ಬೆಂಗಳೂರಿನಲ್ಲಿ ಗುತ್ತಿಗೆ ಪೌರ ಕಾರ್ಮಿಕರ ಕೂಲಿ ೧೮೦೦, ಕೋಲಾರದಲ್ಲಿ ಗುತ್ತಿಗೆ ಪೌರ ಕಾರ್ಮಿಕರ ಕೂಲಿ ೧೮೦೦, ಬಳ್ಳಾರಿಯಲ್ಲಿ ಗುತ್ತಿಗೆ ಪೌರ ಕಾರ್ಮಿಕರು ೧೧೦೦ ಕೂಲಿಯನ್ನು ಪಡೆಯುತ್ತಿದ್ದಾರೆ. ಇದನ್ನು ನೋಡಿದರೆ ಬಳ್ಳಾರಿಯಲ್ಲಿನ ಪೌರಕಾರ್ಮಿಕರು ಅತ್ಯಂತ ಕಡಿಮೆ ಕೂಲಿ ಪಡೆಯುತ್ತಿದ್ದಾರೆ ಎಂಬುವುದು ತಿಳಿಯುತ್ತದೆ. ಸಮಾನವಾದ ಕೆಲಸಕ್ಕೆ ಕೂಲಿಯಲ್ಲಿ ಎಷ್ಟೊಂದು ತಾರತಮ್ಯಗಳಿದೆ ಅಲ್ಲವೆ? ಇದಕ್ಕೆ ಸಂಬಂಧಿಸಿದಂತೆ ಅಲ್ಲಲ್ಲಿ ಸಣ್ಣ ಸಣ್ಣ ಹೋರಾಟಗಳು ಆಗುತ್ತಿವೆ. ಆದರೆ ಕರ್ನಾಟಕದ ಮಟ್ಟದಲ್ಲಿ ದೊಡ್ಡ ದೊಡ್ಡ ಹೋರಾಟಗಳು ನಡೆಯುತ್ತಿಲ್ಲ. ಇಲ್ಲಿ ನಾಯಕನ ಸಮಸ್ಯೆ ಮುಖ್ಯವಾಗಿದೆ. ಎಲ್ಲರೂ ಸಾಮಾನ್ಯವಾಗಿ ರಾಜಕೀಯ ಮಾಡುತ್ತಿರುವುದರಿಂದ ಇವರೆಲ್ಲಾ ಒಂದುಗೂಡಲು ಕಷ್ಟವಾಗುತ್ತಿದೆ. ಸ್ಥಳೀಯರಲ್ಲಿಯೇ ನಾಯಕತ್ವ ಬೆಳೆಯಲು ರಾಜಕಾರಣಿಗಳು ಗುತ್ತಿಗೆದಾರರು ಬಿಡುವುದಿಲ್ಲ. ಚುರುಕು ಇರುವವರನ್ನೆಲ್ಲ ತಮ್ಮ ಕಡೆ ಕರೆದುಕೊಂಡು ಬಿಡುತ್ತಾರೆ. ಅಷ್ಟು ಸುಲಭವಾಗಿ ಹೋರಾಟ ಮಾಡಲು ಆಗುವುದಿಲ್ಲ. ಪೌರ ಕಾರ್ಮಿಕ ಮಹಿಳೆಗಂತು ಏನು ನಡೆಯುತ್ತಿದೆ ಎಂಬುವುದೇ ತಿಳಿಯುವುದಿಲ್ಲ.

ಗುಲ್ಬರ್ಗಾದಲ್ಲಿ ದರ್ಮಸಿಂಗ್ ಸಿ.ಎಮ್ ಆಗಿದ್ದಾಗಿನಿಂದ ಪೌರ ಕಾರ್ಮಿಕರಿಗೆ ೪೫೦೦ ರೂ. ಗಳನ್ನು ಸಮಾನ ಕೆಲಸಕ್ಕೆ ಸಮಾನ ವೇತನ ಎಂದು ಕೊಡಲಾಗುತ್ತಿದೆ. ಖಾಯಂನವರಿಗೆ ಮೂಲದಲ್ಲಿ ೪೫೦೦ ರೂ.ಗಳನ್ನು ಕೊಡುತ್ತಾ ಇದ್ದಾರೆ. ಗುತ್ತಿಗೆಯವರಿಗೂ ಸಹ ಈ ಕೂಲಿ ಸಿಗಬೇಕು. ಎಲ್ಲಾ ಕಡೆಯು ಕೂಲಿ ಜಾಸ್ತಿ ಮಾಡಿದೆ ಅಂತ ಹೇಳಿ ೧೦, ೧೫ ರೂ.ಗಳನ್ನು ಜಾಸ್ತಿ ಮಾಡ್ತಾರೆ. ಮಹಿಳೆ ಎಂದು ಹೇಳಿ ಅತ್ಯಂತ

ಕಡಿಮೆ ಕೂಲಿಯನ್ನು ಕೊಡಲಾಗುತ್ತಿದೆ. ಇದು ಯಾವ ತರಹದ ನ್ಯಾಯ? ಗುತ್ತಿಗೆ ಪೌರ ಕಾರ್ಮಿಕರಿಗೆ ತಿಂಗಳಿಗೆ ೩೦೦೦ ರೂ.ಗಳನ್ನು ಕೊಡಬೇಕೆಂದು ಟೆಂಡರ್ ನಿಯಮಾವಳಿಗಳು ಹೇಳುತ್ತವೆ. ಟೆಂಡರಿನಲ್ಲಿರುವ ಯಾವುದೇ ನಿಯಮಾವಳಿಗಳನ್ನು ಗುತ್ತಿಗೆದಾರರು ಪಾಲಿಸುತ್ತಿಲ್ಲ.

ಗುತ್ತಿಗೆ ಪೌರಕಾರ್ಮಿಕರಿಗೆ ಸಂಬಂಧಿಸಿದ ಟೆಂಡರ್‌ನ ನಿಯಮಾವಳಿಗಳು;

ಹೊಸ ಟೆಂಡರ್ ನಿಯಮಗಳ ಭಾಗ ೯ರ ಕಾಲಂ ೯ ಸಿ.ಯಲ್ಲಿ ಗುತ್ತಿಗೆದಾರನು ಪೂರ್ವಾವಧಿಯ ಮೇರೆಗೆ ನೇಮಿಸಿಕೊಂಡಿರುವ ಪ್ರತೀಕಾರ್ಮಿಕರಿಗೆ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆ ನಿಗದಿಪಡಿಸಿರುವ ವೇತನ ಅಥವಾ ಕನಿಷ್ಟ ಪ್ರತಿ ತಿಂಗಳಿಗೆ ೧೮೦೦ ರೂ. ಅಥವಾ ಪ್ರತೀ ದಿನಕ್ಕೆ ೬೦ ರೂನಂತೆ ಯಾವುದು ಹೆಚ್ಚೋ ಅದನ್ನು ಪಾವತಿಸತಕ್ಕದ್ದು. ವೇತನವನ್ನು ಪಾಲಿಕೆಯ ಅಧಿಕಾರಿಗಳ ಸಮಕ್ಷಮದಲ್ಲಿ ಪಾವತಿಸತಕ್ಕದ್ದು.

(ಇದು ನಿಜಸ್ಥಿತಿಯಲ್ಲಿ ನಡೆಯುತ್ತಿಲ್ಲ. ಕಾರ್ಮಿಕರಿಗೆ ಟೆಂಡರ್‌ನಲ್ಲಿರುವ ಯಾವುದೇ ನಿಯಮಾವಳಿಗಳ ಬಗ್ಗೆ ಮಾಹಿತಿ ಗೊತ್ತಿಲ್ಲ. ಗುತ್ತಿಗೆದಾರರಾಗಲಿ ಅಥವಾ ಯಾವುದೇ ಸಂಘಸಂಸ್ಥೆಗಳೇ ಆಗಲಿ ಅಥವಾ ಮುನಿಸಿಪಾಲಿಟಿಯ ಇತರೆ ಸದಸ್ಯರೇ ಆಗಲಿ ಅವರಿಗೆ ಮಾಹಿತಿ ತಿಳಿಸಿಲ್ಲ. ಕಾರ್ಮಿಕರಿಗೂ ಸಹ ಇದರಲ್ಲಿ ನಿಯಮಗಳು ಇದೆ ಎಂಬುವುದು ಕೂಡ ಗೊತ್ತಿಲ್ಲದ ಕಾರಣ ತಿಳಿದುಕೊಳ್ಳಬೇಕೆಂಬ ಗೋಜಿಗೆ ಹೋಗಿಲ್ಲ. ಟೆಂಡರ್ ಬಗ್ಗೆ ನಮಗೇನು ಗೊತ್ತಿಲ್ಲ ಎಂತಲೇ ಕಾರ್ಮಿಕರು ಹೇಳುತ್ತಾರೆ.)

ಭಾಗ ೯ರ ಕೆಲವು ನಿರ್ದಿಷ್ಟ ಕಾಲಂಗಳಲ್ಲಿ ಇತರೆ ನಿಯಮಗಳನ್ನು ಹೇಳಲಾಗಿದೆ. ಕಾಲಂ ೬: ಕೆಲಸಗಾರರಿಗೆ ವೈದ್ಯಕೀಯ ನೆರವು ಒದಗಿಸಲು ಗುತ್ತಿಗೆದಾರನು ಪಾವತಿ ಮಾಡಬೇಕಾದ ಖರ್ಚು ವೆಚ್ಚಗಳು.

ಅಪಘಾತದ ಪರಿಣಾಮವಾಗಿ ಯಾವುದೇ ಕೆಲಸಗಾರನ/ಳ ದೇಹಕ್ಕೆ ಪೆಟ್ಟು ಉಂಟಾದಾಗ ಆತನಿಗೆ/ಆಕೆಗೆ ವೈದ್ಯಕೀಯ ನೆರವು ಒದಗಿಸಲು ಗುತ್ತಿಗೆದಾರನು ಜವಾಬ್ದಾರನಾಗಿರುತ್ತಾನೆ. ಮತ್ತು ಅದರ ಖರ್ಚುವೆಚ್ಚಗಳನ್ನು ಆತನೇ ಪಾವತಿ ಮಾಡಬೇಕಾಗುತ್ತದೆ. ಅಂತ ಖರ್ಚುವೆಚ್ಚಗಳನ್ನು ಕಾರ್ಪೋರೇಷನ್ ಭರಿಸಿದ್ದೇ ಆದರೆ ಅದನ್ನು ನಂತರ ಗುತ್ತಿಗೆದಾರನಿಂದ ವಸೂಲಿ ಮಾಡಿಕೊಳ್ಳಬಹುದಾಗಿರುತ್ತದೆ. ಮತ್ತು ಗುತ್ತಿಗೆದಾರನಿಗೆ ಕೊಡಬೇಕಾಗಿರುವ ಅಥವಾ ಮುಂದೆ ಕೊಡಬೇಕಾಗಿ ಬರುವ ಯಾವುದೇ ಮೊತ್ತದಿಂದ ಕಾರ್ಪೋರೇಷನ್‌ನ ಯಾವುದೇ ಇತರ ಪರಿಹಾರೋಪಾಯಕ್ಕೆ ಭಾದಕ ಉಂಟಾಗದಂತೆ ಮುರಿದುಕೊಳ್ಳಬಹುದಾಗಿರುತ್ತದೆ.

ಕಾಲಂ ೭: ಕಾರ್ಮಿಕರ ಪರಿಹಾರ ಅಧಿ ನಿಯಮದ ಅನ್ವಯ ಗುತ್ತಿಗೆದಾರನು ಪಾವತಿ ಮಾಡಬೇಕಾದ ಪರಿಹಾರ.

ಕೆಲಸ ಮಾಡುತ್ತಿರುವಾಗ ಕೆಲಸಗಾರರಿಗೆ ಪೆಟ್ಟುಗಳು ಉಂಟಾದ ಪಕ್ಷದಲ್ಲಿ ೧೯೨೩ರ ಕಾರ್ಮಿಕರ ಪರಿಹಾರ ಅಧಿನಿಯಮದ ಅನ್ವಯ ಇಲ್ಲಿ ಆ ಘಟನೆಗೆ ಗುತ್ತಿಗೆದಾರನು ಜವಾಬ್ದಾರನಾಗಿರುತ್ತಾನೆ. ಮತ್ತು ಅದಕ್ಕಾಗಿ ತನ್ನ ಸ್ವಂತ ಕಾರ್ಮಿಕರಿಗೆ ಪಾವತಿ ಮಾಡಬೇಕಾದ ಯಾವುದೇ ಪರಿಹಾರವನ್ನು ಆತನು ಪಾವತಿ ಮಾಡಬೇಕಾಗುತ್ತದೆ. ಗುತ್ತಿಗೆದಾರನ ಪರವಾಗಿದ್ದ ಸದರಿ ಅಧಿನಿಯಮದ ಪ್ರಕರಣ ೧೨ ರ ಉಪಪ್ರಕರಣ (೧)ರ ಅನ್ವಯ ಪ್ರಧಾನ ಉದ್ಯೋಗದಾತರಾದ ಕಾರ್ಪೋರೇಷನಿಂದ ಅಂತಹ ಪರಿಹಾರವನ್ನು ಪಾವತಿ ಮಾಡಿದ್ದೇ ಆದರೆ ಆಗ ಆ ಮೊತ್ತವನ್ನು ಸದರಿ ಪ್ರಕರಣದ ಅನ್ವಯ ಕಾರ್ಪೋರೇಷನ್ ಗುತ್ತಿಗೆದಾರನಿಂದ

ವಸೂಲಿ ಮಾಡಿಕೊಳ್ಳಬಹುದಾಗಿರುತ್ತದೆ. ಇಂತಹ ಪರಿಹಾರವನ್ನು ಕಾರ್ಪೋರೇಷನ್ ಗುತ್ತಿಗೆದಾರನಿಗೆ ಪಾವತಿಯಾಗುವ ಬಿಲ್ಲುಗಳಿಂದ ಅಥವಾ ಕಾರ್ಯನಿರ್ವಹಣಾ ದಕ್ಷತೆಯ ಖಾತರಿಯಿಂದ ವಸೂಲಿ ಮಾಡಿಕೊಳ್ಳಬಹುದಾಗುತ್ತದೆ. ಟೆಂಡರುದಾರರು ಟೆಂಡರ್ ನಿರ್ವಹಿಸುವ ಅವಧಿಯಲ್ಲಿ ಅಲ್ಲದೆ ಪೂರ್ತಿ ಕಾರ್ಮಿಕ ಇಲಾಖೆಯಿಂದ ಸೂಕ್ತ ಪರವಾನಿಗೆ ಚಾಲ್ತಿ ನೊಂದಣಿ ಪತ್ರ ಹೊಂದಿರತಕ್ಕದ್ದು ನೊಂದಾಯಿತ ಪತ್ರದ ಪ್ರತಿಯನ್ನು ತಾಂತ್ರಿಕ ಬಿಡ್ ಜೊತೆ ಲಗತ್ತಿಸತಕ್ಕದ್ದು.

ಕಾಲಂ ೮: ಗುತ್ತಿಗೆದಾರನು ಒದಗಿಸಬೇಕಾಗಿರುವ ವೈಯಕ್ತಿಕ ಸುರಕ್ಷಣಾ ಸಲಕರಣೆಗಳು, ಪ್ರಥಮ ಚಿಕಿತ್ಸೆ ಸಲಕರಣೆಗಳ ಚಿಕಿತ್ಸೆ ಇತ್ಯಾದಿಗಳ ಕುರಿತು.

ಕೆಲಸದ ಸ್ಥಳದಲ್ಲಿ ಕೆಲಸಕ್ಕೆ ನೇಮಿಸಲಾಗಿರುವ ಕೆಲಸಗಾರರು ಉಪಯೋಗಿಸಲು ಅಗತ್ಯವಾದ ಎಲ್ಲಾ ವೈಯಕ್ತಿಕ ಸುರಕ್ಷತೆಯ ಸಲಕರಣೆ/ವಸ್ತುಗಳು ಇತ್ಯಾದಿಗಳನ್ನು ಮತ್ತು ಪ್ರಥಮ ಚಿಕಿತ್ಸೆಯ ಸಾಧನೋಪಕರಣಗಳನ್ನು ಗುತ್ತಿಗೆದಾರನು ಒದಗಿಸಬೇಕು. ಮತ್ತು ಯಾವುದೇ ಸಮಯದಲ್ಲಾದರೂ ಅವುಗಳನ್ನು ತಕ್ಷಣ ಬಳಕೆ ಮಾಡಲು ಸೂಕ್ತವಾಗಿರುವಂತೆ ಉತ್ತಮ ಸ್ಥಿತಿಯಲ್ಲಿ ನಿರ್ವಹಣೆ ಮಾಡಿರಬೇಕು. ಹಾಗೂ ಇದರ ಸಂಬಂಧದಲ್ಲಿ ಕೆಳಕಂಡ ನಿಬಂಧನೆಗಳನ್ನು ಪಾಲಿಸಬೇಕು.

ಅ. ಗುತ್ತಿಗೆದಾರನು ಆ ರೀತಿ ಒದಗಿಸಿದ ಸಲಕರಣೆ ಇತ್ಯಾದಿಯನ್ನು ಕೆಲಸಗಾರನು ಬಳಸಬೇಕಾಗುತ್ತದೆ. ಮತ್ತು ಸಂಬಂಧಪಟ್ಟ ಕೆಲಸಗಾರನು ಸಲಕರಣೆಗಳು ಇತ್ಯಾದಿಯನ್ನು ಸರಿಯಾಗಿ ಉಪಯೋಗಿಸುವಂತೆ ಮಾಡಲು ಗುತ್ತಿಗೆದಾರನು ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಬೇಕು.

ಆ. ನೀರಿನಲ್ಲಿ ಮುಳುಗಿ ಹೋಗುವಂತಹ ಅಪಾಯವಿರುವ ಯಾವುದೇ ಸ್ಥಳದ ಸಮೀಪದಲ್ಲಿ ಕೆಲಸವನ್ನು ಮಾಡಬೇಕಾಗಿರುವ ಸಂದರ್ಭದಲ್ಲಿ ಅಪಾಯದಲ್ಲಿರುವ ಯಾವುದೇ ವ್ಯಕ್ತಿಯನ್ನು ಸರಿಯಾದ ರೀತಿಯಲ್ಲಿ ತಕ್ಷಣ ಕಾಪಾಡಲು ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಇ. ಕೆಲಸದ ಸಮಯದಲ್ಲಿ ಸಂಭವಿಸಬಹುದಾದ ಎಲ್ಲಾ ರೀತಿಯ ಪೆಟ್ಟುಗಳಿಗೆ ಕೂಡಲೆ ಪ್ರಥಮ ಚಿಕಿತ್ಸೆ ಮಾಡಬೇಕು.

ಮೇಲಿನ ಎಲ್ಲಾ ನಿಯಮಗಳು ಟೆಂಡರ್‌ನ ನಿಯಮಗಳಲ್ಲಿ ಮಾತ್ರ ಇವೆ. ಇವು ಕಾರ್ಮಿಕರಿಗೆ ಮುಟ್ಟಿದ್ದಿದ್ದರೆ ಮಂಡ್ಯಾದಲ್ಲಿ ೩ ಜನ ಪೌರಕಾರ್ಮಿಕರು ಮ್ಯಾನ್‌ಹೋಲ್‌ನಲ್ಲಿ ಬಿದ್ದು ಸಾಯುತ್ತಿರಲಿಲ್ಲ. ಇಲ್ಲಿ ನಡೆಯುವ ಗೋಲ್‌ಮಾಲ್‌ಗಳನ್ನು ಜಯಮ್ಮ ಹೀಗೆ ಹೇಳುತ್ತಾಳೆ. ಮುನಿಸಿಪಾಲಿಟಿಯಲ್ಲಿ ನನ್ನ ಗಂಡ ಕೆಲಸದಲ್ಲಿ ಇದಾನೆ ಕಸಗುಡಿಸೋ ಕೆಲಸ. ಮೊದ್ಲೆಲ್ಲಾ ಅವರೇ ಮಾಡ್ತಾ ಇದ್ರು, ಈಗ ಅವರಿಗೆ ಮೈಯಲ್ಲಿ ಹುಷಾರ್ ಇಲ್ದೆ ಆಗಿದ್ದರಿಂದ ಕೆಲಸಕ್ಕೆ ಹೋಗಾಕಾಗ್ತಾ ಇಲ್ಲ. ಅವರು ಬೆಳಿಗ್ಗೆ, ಮದ್ಯಾಹ್ನ, ಸಾಯಂಕಾಲ ಸೈನ್ ಮಾಡೋಕೋಗ್ತಾರೆ ಅಷ್ಟೆ. ಅವರ ಕೆಲಸ ನಾನೇ ಮಾಡ್ತೀನಿ. ಮೊದಲೆಲ್ಲಾ ಭಯ ಇತ್ತು. ಬದಲಿ ಮಾಡಿದರೆ ಏನು ಅಂತಾರೋ ಅಂತ. ಆದರೆ ನಾನು ಗಂಡನ ಬದಲಿಗೆ ಕೆಲಸ ಮಾಡ್ತಾ ಇದೀನಿ. ಆದರೆ ಇಲ್ಲೆಲ್ಲಾ ತಮ್ಮ ಕೆಲಸವನ್ನು ಬೇರೆ ಜನರ ಕೈಯಿಂದ ಮಾಡಿಸಿ ಅವರಿಗೆ ಕಡಿಮೆ ರೊಕ್ಕ ಕೊಟ್ಟು ಕಳಿಸ್ತಾರೆ. ಸೈನ್ ಹಾಕಿ ಸಂಬ್ಳ ಮಾತ್ರ ಅವರೇ ತಗೊಂತಾರೆ. ಅವರು ಮುಂದೆ ನಮ್ಮದೇನು ಅಲ್ಲ. ಅವರಿಗೇನು ಕೆಲಸ ಆಗಬೇಕು ಅಷ್ಟೆ.

ಆದರೂ ಭಲೇ ಕಷ್ಟದ ಕೆಲಸ ಬಿಡಮ್ಮ ಇದು. ೧೫ ದಿವಸಕ್ಕೊಂದ್ಸಾರೆ ಕಸಬಾರಿಗಿಗಳೆಲ್ಲಾ ಸೌದೋಕ್ತಾವೆ. ಕೇಳಿ, ಕೇಳಿ ಸಾಕಾಗಿ ನಾವೇ ತಗಂಬಿಡ್ತೀವಿ. ಜೋರು ಮಾಡಿ ಕೇಳಾಕಾಗಲ್ಲ. ವಾರಕ್ಕೊಂದು ಬಾರಿಗಿ ಸೌವಸ್ತೀರಿ ನಿಮ್ಮ ಮನೆನಾಗ ಇಂಗೆ ಸೌವಸ್ತೀರೇನು ಅಂತ ಬಯ್ಯುತ್ತಾರೆ. ಏನಮ್ಮ ನಾವೇನು ಬಾರಿಗಿನ ಕೂತುಕೊಂಡು ತಿನ್‌ತೀವಾ.. ಅಂಗೆಲ್ಲಾ ಅಂತಾರೆ. ಎನ್ನುತ್ತಾ ಜಯಮ್ಮ ಗುತ್ತಿಗೆದಾರನನ್ನು ಬೈಯುತ್ತಲೇ ಇದ್ದಳು. ಇಲ್ಲಿ ಟೆಂಡರ್‌ನಲ್ಲಿರುವ ಸಲಕರಣೆಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳು ಹೇಗೆ ಬಳಕೆಯಾಗಿವೆ ಎಂಬುವುದು ಗೊತ್ತಾಗುತ್ತದೆ.

ಟೆಂಡರ್ ನಿಯಮಗಳ ಭಾಗ ೧೦: ಈ ಕೆಳಗಿನ ನಿಯಮಗಳನ್ನು ತಿಳಿಸುತ್ತದೆ. ಕಾಲಂ ೨೨: ಯಶಸ್ವಿ ಗುತ್ತಿಗೆದಾರರು ತಮಗೆ ವಹಿಸಿದ ಪ್ರದೇಶದಲ್ಲಿ ಅವರದೇ ಆದ ಒಂದು ಹಾಜರಾತಿ ಸ್ಥಳ ಮತ್ತು ಸಲಕರಣೆಗಳನ್ನು ಸಂಗ್ರಹಿಸಲು ಹಾಗೂ ಕೆಲಸಗಾರರಿಗೆ ಶೌಚಾಲಯ ಮತ್ತು ಕಛೇರಿ ವ್ಯವಸ್ಥೆಗಾಗಿ ಒಂದು ಕಟ್ಟಡವನ್ನು ಗುರುತಿಸಿ ಲಿಖಿತ ಮೂಲಕ ಆರೋಗ್ಯ ವೈಧ್ಯಾಧಿಕಾರಿಗಳ ಕಛೇರಿಗೆ ತಿಳಿಸಬೇಕು.

ಕಾಲಂ ೨೬: ಯಶಸ್ವಿಯಾದ ಗುತ್ತಿಗೆದಾರರು ಪ್ರತಿದಿನ ಗುತ್ತಿಗೆ ಪ್ರದೇಶದಲ್ಲಿ ಕನಿಷ್ಟ ಮೂರು ಬಾರಿ ನಿಗದಿಪಡಿಸಿದ ಲಾರಿಗಳನ್ನು ಉಪಯೋಗಿಸಿಕೊಂಡು ಗಂಟೆಗಾಡಿಗಳಿಂದ ಕಸದ ತೊಟ್ಟಿಗಳಲ್ಲಿ ಮತ್ತು ಕಸ ಶೇಖರಣೆಯಾಗಿರುವ ಎಲ್ಲಾ ಕಸವನ್ನು ನಿಗದಿಪಡಿಸಿರುವ ಡಂಪಿಂಗ್‌ಯಾರ್ಡ್‌ಗೆ ಸಾಗಿಸತಕ್ಕದ್ದು ಮತ್ತು ಆರೋಗ್ಯವಾರ್ಡ್‌ನಲ್ಲಿ ಉಳಿದಿರುವ ಕಸವನ್ನು ಸಾಗಿಸಲು ಹೆಚ್ಚುವರಿ ವಾಹನ ಅಥವಾ ಹೆಚ್ಚುವರಿ ಟ್ರಿಪ್ ಮಾಡುವ ಮೂಲಕ ಎಲ್ಲಾ ಕಸವನ್ನು ಸಾಗಿಸತಕ್ಕದ್ದು.

ಭಾಗ -೪ ಕೆಲಸದ ಅವಧಿಯನ್ನು ಸೂಚಿಸುತ್ತದೆ. ಕಾಲಂ ೧೪: ರಾತ್ರಿ ಸ್ವಚ್ಛತಾ ಪ್ಯಾಕೇಜ್: ರಾತ್ರಿ ಗುತ್ತಿಗೆದಾರರು ರಾತ್ರಿ ಸಮಯದಲ್ಲಿ ಕಸ, ಕಡ್ಡಿ ಇನ್ನಿತರ ತ್ಯಾಜ್ಯವಸ್ತುಗಳನ್ನು ಸ್ವಚ್ಛಗೊಳಿಸುವುದು ಮತ್ತು ಸಾಗಣೆಯನ್ನು ೨ ಪಾಳಿಗಳಲ್ಲಿ ಮಾಡುವುದು, ಪ್ಯಾಕೇಜಿನ ವ್ಯಾಪ್ತಿಯೊಳಗಿರುವ ಕೆಲವು ಪ್ರದೇಶಗಳನ್ನು ೨ ಪಾಳಿಗಳಲ್ಲಿ ಮಧ್ಯಾಹ್ನ ೨ : ೩೦ ರಿಂದ ೬ : ೩೦ ರ ತನಕ ಹಾಗೂ ರಾತ್ರಿ ೭ ಗಂಟೆಯಿಂದ ೧೧ : ೩೦ರವರೆಗೂ ಸ್ವಚ್ಛಗೊಳಿಸಬೇಕು ಮತ್ತು ಕಸವನ್ನು ತೆಗೆದು ಹಾಕಬೇಕು. ಯಶಸ್ವಿ ಬಿಡ್‌ದಾರನು ಗೊತ್ತುಪಡಿಸಿದ ಪ್ರದೇಶದಲ್ಲಿ ಕಸವನ್ನು ಸಂಗ್ರಹಿಸಲು ಮತ್ತು ಸುರಿದು ಕುಪ್ಪೆ ಹಾಕುವ ಪ್ರಾಂಗಣಕ್ಕೆ ಅದನ್ನು ಸಾಗಾಣೆ ಮಾಡಲು ಸೂಕ್ತವಾದ ವ್ಯವಸ್ಥೆ ಮಾಡಬೇಕು. ಇದಲ್ಲದೆ ಕೆಲ ಸಿಬ್ಬಂದಿಗಳನ್ನು ಕೆಲಸಕ್ಕೆ ತೊಡಗಿಸುವ ಮೂಲಕ ಬೆಳಗಿನ ವೇಳೆಯಲ್ಲಿಯೂ ಕೂಡ ಆ ಪ್ರದೇಶವನ್ನು ಸ್ವಚ್ಛವಾಗಿಡಲು ಗುತ್ತಿಗೆದಾರನು ವ್ಯವಸ್ಥೆ ಮಾಡಬೇಕು.

ಗುತ್ತಿಗೆದಾರರು ನಿಯಮಗಳಿಗೆ ತಕ್ಕಂತೆ ಕೆಲಸಗಾರರನ್ನು ನೇಮಿಸಿಕೊಳ್ಳುತ್ತಿಲ್ಲ. ತನ್ನ ಲಾಭದ ದೃಷ್ಟಿಯಿಂದ ಯಾವ ಮೂಲದಲ್ಲಿ ಉಳಿತಾಯ ಮಾಡಬಹುದು. ಯಾವ ಮೂಲದಿಂದ ಲಾಭವನ್ನು ಪಡೆಯಬಹುದು ಎಂಬುವುದನ್ನೇ ನಿರೀಕ್ಷೆ ಮಾಡುತ್ತಿರುವುದರಿಂದ ಮೊದಲು ಇದ್ದ ಕೆಲಸಗಾರರ ಸಂಖ್ಯೆಯನ್ನು ಕಡಿಮೆಗೊಳಿಸಿ, ಕಡಿಮೆ ಸಂಖ್ಯೆಯ ಕೆಲಸಗಾರರಿಗೆ ಹೆಚ್ಚಿನ ಕೆಲಸವನ್ನು ವಿಸ್ತರಿಸುತ್ತಾನೆ. ಗುತ್ತಿಗೆ ಕಾರ್ಮಿಕರಿಗೆ ಸ್ವಚ್ಛತೆಯ ಕೆಲಸ ಮಾಡಲು ಯಾವುದೇ ನಿಯಮಗಳನ್ನು ವಿಧಿಸಿಲ್ಲವೆಂದು ಹೇಳುತ್ತಾರೆ. ಇಷ್ಟು ಕೆಲಸ ನೀನು ಮಾಡಬೇಕು. ಆ ಪ್ರದೇಶವನ್ನು ನಾನು ನೋಡಿದಾಗ ಸ್ವಚ್ಛವಾಗಿರಬೇಕು ಅಷ್ಟೇ ಎಂದು ಕಠಿಣವಾಗಿ ಹೇಳಲಾಗುತ್ತದೆ. ಇದರಿಂದ ಗುತ್ತಿಗೆ ಕಾರ್ಮಿಕರು ಅವರು ವಹಿಸಿರುವ ಪ್ರದೇಶ ದೊಡ್ಡದಾಗಿ ಹೆಚ್ಚಿನ ಗಲೀಜಿನಿಂದ ಕೂಡಿರುವುದರಿಂದ ಅತೀ ಹೆಚ್ಚಿನ ಸಮಯವನ್ನು, ಶ್ರಮವನ್ನು ಉಪಯೋಗಿಸಿಯೇ ಆ ಪ್ರದೇಶದ ಸ್ವಚ್ಛತಾ

ಕಾರ್ಯವನ್ನು ಮಾಡಬೇಕಾಗುತ್ತದೆ. ಗುತ್ತಿಗೆಯವರು ನಾವು ಕಾರ್ಮಿಕರನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತೇವೆ ಎಂತಲೇ ಹೇಳುತ್ತಿರುತ್ತಾರೆ. ಆದರೆ ಒಳಗಿನ ತಿರುಳನ್ನು ಅನುಭವಿಸಿದ ಪೌರಕಾರ್ಮಿಕ ಮಹಿಳೆ ಮಾತ್ರ ಅದರ ಭೀಕರತೆಯನ್ನು ವಿವರಿಸಬಲ್ಲಳು. ಅವಳಿಂದಲೇ ಅದನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ಎಲ್ಲಾ ಗುತ್ತಿಗೆದಾರರು ಪೌರಕಾರ್ಮಿಕರ ಖಾಯಿದೆಗಳನ್ನು, ನಿಯಮಗಳನ್ನು ಷರತ್ತುಗಳನ್ನು ಉಲ್ಲಂಘನೆ ಮಾಡಿದ್ದಾರೆ. ಅವರಿಗೆ ವಿಶೇಷವಾದ ಗ್ಲೌಜು, ಸೋಪು, ಕೋಟು, ಪೊರಕೆ, ಶೂಸ್ ಕೊಡುತ್ತಿಲ್ಲ. ಮ್ಯಾನ್‌ಹೋಲ್‌ಗಳಲ್ಲಿ ಇಳಿಯುವಾಗ ವಿಶೇಷವಾಗಿ ಮೂಗಿಗೆ ಹಾಕಿಕೊಳ್ಳುವ ಸಾಧನವನ್ನು ಕೊಡುತ್ತಿಲ್ಲ. ಪ್ರತಿಸಲವು ಪೌರಕಾರ್ಮಿಕರ ಕಾರ್ಯಕ್ರಮ ಮಾಡಿದಾಗಲೂ ಎಲ್ಲಾ ಉಪಕರಣಗಳನ್ನು ಕೊಡುತ್ತೇವೆ ಎಂದು ಹೇಳುತ್ತಾರೆ ಆದರೆ ಕೊಡುವುದಿಲ್ಲ. ಕಾಂಟ್ರಾಕ್ಟರ್‌ಗಳ ಲಾಭ ಅಧಿಕಾರಿಗಳ ಶಾಮೀಲು ಆಗಿ ಎಲ್ಲವನ್ನು ಕಮಿಷನ್‌ನಲ್ಲಿ ತೂಗೊಂತಾರೆ. ಎಲ್ಲಾ ಕಮಿಷನ್ ತೆಗೆದುಕೊಳ್ಳುವುದರಿಂದ ಇಲ್ಲಿ ಎಲ್ಲರೂ ತೊಂದರೆಯನ್ನು ಅನುಭವಿಸುತ್ತಿದ್ದಾರೆ.

ಮೈಸೂರು ರಾಜರ ಕಾಲದಲ್ಲಿ ಸ್ವತಂತ್ರ್ಯ ಪೂರ್ವದಲ್ಲಿ ಆಂಧ್ರದಿಂದ ಬಂದ ಮಾದಿಗರು, ಬಳ್ಳಾರಿ, ಪಾವಗಡ, ರಾಯಚೂರು, ಗುಲ್ಬರ್ಗಾ, ಬೆಳಗಾಂನಿಂದ ಮಾದಿಗರು ಮೈಸೂರಿಗೆ ವಲಸೆ ಬಂದಿದ್ದಾರೆ. ಕೋಯಂಬತ್ತೂರು, ಸೇಲಂನಿಂದಲೂ ಇಲ್ಲಿಗೆ ವಲಸೆ ಬಂದಿದ್ದಾರೆ. ಮೈಸೂರಿನಲ್ಲಿ ೪೦ ರಿಂದ ೫೦ ಸಾವಿರ ಜನಸಂಖ್ಯೆ ಇದ್ದರೆ ಅವರೇ ಶೇಕಡ ೬೦ ತಮಿಳುನಾಡಿನ ಮೂಲದವರೇ ಇದ್ದಾರೆ. ಬಳ್ಳಾರಿ ಮೂಲದವರು ೨ನೇ ಮೇಜರ್‌ನಲ್ಲಿ ಬರುತ್ತಾರೆ. ಇಲ್ಲಿ ಆಂಧ್ರದಿಂದ ಮೈಗ್ರೇಟ್ ಆಗಿ ಬಂದಿರುವವರು ಕಡಿಮೆ. ಇಲ್ಲಿ ಹೆಚ್ಚುಕಡಿಮೆ ೩೦ ರಿಂದ ೪೦ ಕಾಲೋನಿಗಳು ಜಾಡಮಾಲಿಗಳದೇ ಇವೆ. ಅದರಲ್ಲಿ ೩,೪ ಕಾಲೋನಿಗಳು ಆಂಧ್ರದಿಂದ ಬಂದವರಾಗಿದ್ದಾರೆ. ಇನ್ನು ಮಿಕ್ಕವರು ತಮಿಳುನಾಡು ಮತ್ತು ಹೈದ್ರಾಬಾದ್ ಕರ್ನಾಟಕದ ಭಾಗದವರೇ ಆಗಿದ್ದಾರೆ ಎಂದು ಮೈಸೂರಿನ ಪೌರಕಾರ್ಮಿಕ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ನಿರ್ದೇಶಕರಾದ ಆರ್. ರಘು ಅವರು ಹೇಳಿದರು.

ಬಳ್ಳಾರಿಯ ಹೊಲೆಮಾದಿಗರು ಜಿಲ್ಲೆಯಲ್ಲಿಯಷ್ಟೆ ಜಾಡಮಾಲಿಗಳಾಗಿ ಕೆಲಸ ಮಾಡುತ್ತಿಲ್ಲ. ತಾವು ವಲಸೆ ಹೋದ ಬೆಂಗಳೂರು, ಮೈಸೂರಿನಂತಹ ದೊಡ್ಡ ಪಟ್ಟಣಗಳಲ್ಲಿಯೂ ಸಹ ಜಾಡಮಾಲಿತನವನ್ನೇ ಆಯ್ಕೆ ಮಾಡಿಕೊಂಡಿರುವುದು ಅವರ ಸ್ಥಿತಿಯನ್ನು ಇನ್ನಷ್ಟು ಬಿಚ್ಚಿಡುತ್ತದೆ.

ಜಾಡಮಾಲಿಗಳ ಆರೋಗ್ಯ ಎಷ್ಟು ಮುಖ್ಯವೋ ಹಾಗೆಯೇ ಸಾರ್ವಜನಿಕ ಆರೋಗ್ಯವು ಮುನಿಸಿಪಾಲ್ಟಿಗಳಿಗೆ ಅಷ್ಟೇ ಮುಖ್ಯವಾಗತೊಡಗಿತು. ಇಂದಿಗೂ ಹೊಲೆಯ, ಮಾದಿಗ ಮುಂತಾದ ಕೆಳ ಜಾತಿಗಳನ್ನು ಬಿಟ್ಟು ಜಾಡಮಾಲಿ ವೃತ್ತಿಯನ್ನು ಇತರ ಜಾತಿಗಳು ಮಾಡುವುದಿಲ್ಲ.

ಕೊಳಕನ್ನು ತೆಗೆಯುವ ಸಾಂಪ್ರದಾಯಿಕ ಕೆಲಸದಿಂದಾಗಿ ಅಸ್ಪೃಶ್ಯರಾದವರಿಗೆ ಕೆಲವು ವೇತನ ತರುವ ಉದ್ಯೋಗಗಳ ಸಂಪೂರ್ಣ ಏಕ ಸ್ವಾಮ್ಯ ದೊರಕಬೇಕಿತ್ತು. ಇಂಥ ಕೆಲಸವನ್ನು ಇತರೆ ಜಾತಿಯವರು ಆಯ್ದುಕೊಳ್ಳುವುದು ದೂರದ ಪ್ರಶ್ನೆಯಾಗಿರುವುದರಿಂದ ಸಾವಿರಾರು ಅಸ್ಪೃಶ್ಯರು ಇಂಥ 'ಸಂಘಟಿತ' ವಲಯದಲ್ಲಿ ವೇತನ ನೀಡುವ ಉದ್ಯೋಗ ದೊರೆತರೆ ಸಾಮಾಜಿಕ ಭದ್ರತೆ ದೊರೆತಂತಾಗುತ್ತಿತ್ತು. ಆದರೆ

ಈ ಆರ್ಥಿಕ ಸಬಲೀಕರಣದ ಅವಕಾಶಗಳೂ ಸಹ ಸಾರ್ವಜನಿಕ ವಲಯವನ್ನು ಖಾಸಗಿಯಾಗಿಸುವುದರಿಂದ ಕುಸಿಯುತ್ತಿವೆ. ಇದರಿಂದ ಹೆಚ್ಚು ತೊಂದರೆಯನ್ನು ಅನುಭವಿಸುವವರೆಂದರೆ ದಲಿತ ಮಹಿಳೆಯರು.

ಐ.ಪಿ.ಡಿ ಸಾಲಪ್ಪನವರು ತಮ್ಮ ವರದಿಯಲ್ಲಿ ಪೌರಕಾರ್ಮಿಕರು ಮತ್ತು ಭಂಗಿಗಳ ಸುಧಾರಣೆಗಾಗಿ ಮಾಡಿರುವ ಸಲಹೆಗಳು ಈಗಲೂ ಪ್ರಸ್ತುತವಾಗಿವೆ ಅವು ಈ ಕೆಳಗಿನಂತಿವೆ;

೧. ಸಂವಿದಾನಾತ್ಮಕವಾಗಿ ಪ್ರತೀ ಹುದ್ದೆಯಲ್ಲೂ ಶೇಕಡ ೧೮ ರಷ್ಟು ಸ್ಥಾನಗಳನ್ನು ಹರಿಜನರಿಗೆ ಮೀಸಲಿಡಬೇಕು. ಆದರೆ ಸ್ಥಳೀಯ ಸಂಸ್ಥೆಗಳ ಪ್ರಕಾರ ಶೇಕಡವಾರು ಸೂತ್ರ ಪ್ರತಿ ಹುದ್ದೆಗಳನ್ನು ಅನ್ವಯಿಸಲಾಗುತ್ತಿದೆ. ಆದ್ದರಿಂದ ಪೌರಕಾರ್ಮಿಕ ಹುದ್ದೆಗಳಿಗೆಲ್ಲಾ ಹರಿಜನರನ್ನು ನೇಮಿಸಿಕೊಂಡು ಇತರೆ ಹುದ್ದೆಗಳು ಹರಿಜನರಿಗೆ ದಕ್ಕದಂತೆ ಮಾಡಲಾಗುತ್ತಿದೆ. ಕೆಲವರು ಸ್ಥಳೀಯ ಸಂಸ್ಥೆಗಳಲ್ಲಿ ಹರಿಜನರೇತರರನ್ನು ಪೌರಕಾರ್ಮಿಕರನ್ನಾಗಿ ನೇಮಿಸಿಕೊಂಡಿದ್ದರೂ ಅಂತಹವರಿಂದ ಪೌರಕಾರ್ಮಿಕ ಮಾಡಬೇಕಾದ ಕೆಲಸಗಳನ್ನು ಮಾಡಿಸದೇ ಬೇರೆ ಕೆಲಸಗಳನ್ನು ಮಾಡಿಸುತ್ತಿರುವುದು ಖಂಡನೀಯ, ಯಾರನ್ನೇ ಆಗಲಿ ಪೌರಕಾರ್ಮಿಕರನ್ನಾಗಿ ನೇಮಿಸಿಕೊಂಡಲ್ಲಿ ಆತನಿಂದ ಹರಿಜನ ಪೌರಕಾರ್ಮಿಕರು ಮಾಡುವಂತಹ ಕೆಲಸವನ್ನೇ ಮಾಡಿಸಬೇಕಲ್ಲದೆ ಬೇರೆ ಕೆಲಸಗಳನ್ನಲ್ಲ.

೨. ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕ ಉಸ್ತುವಾರಿ ಸಿಬ್ಬಂದಿ ಹರಿಜನೇತರರಾಗಿರುತ್ತಾರೆ. ಅವರು ಹರಿಜನ ಪೌರಕಾರ್ಮಿಕರನ್ನು ಅತೀ ಹೀನಾಯವಾಗಿ ನಡೆಸಿಕೊಳ್ಳುತ್ತಾರೆ. ಪೌರಕಾರ್ಮಿಕರನ್ನು ಅದರಲ್ಲೂ ಮಹಿಳಾ ಪೌರಕಾರ್ಮಿಕರನ್ನು ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಅಲ್ಲದೆ ಪೌರಕಾರ್ಮಿಕರನ್ನು ಏಕವಚನದಿಂದ ಮಾತನಾಡಿಸುತ್ತಾರೆ. ಅಂತಹ ಉಸ್ತುವಾರಿ ಸಿಬ್ಬಂದಿ ಮೇಲೆ ತೀವ್ರ ಕ್ರಮ ಕೈಗೊಳ್ಳುವಂತಾಗಬೇಕು.

೩. ತಲೆ ಮೇಲೆ ಮಲ ತುಂಬಿದ ಬುಟ್ಟಿಗಳನ್ನು ಹೊತ್ತು ಸಾಗಿಸುವುದನ್ನು ಸರ್ಕಾರ ನಿಷೇಧಿಸಿದ್ದರೂ ಉತ್ತರಕರ್ನಾಟಕದ ನಾನಾ ಕಡೆ ಆ ಪದ್ಧತಿಯನ್ನು ಮುಂದುವರಿಸುತ್ತಿರುವುದು ಶೋಚನೀಯ. ತನ್ನ ವ್ಯಾಪ್ತಿಯಲ್ಲಿರತಕ್ಕ ಹಳೆ ಮಾದರಿ ಕಕ್ಕಸ್ಸುಗಳನ್ನು ನವೀಕರಿಸುವ ಕಾರ್ಯವನ್ನು ಸ್ಥಳೀಯ ಸಂಸ್ಥೆಗಳು ತ್ವರಿತಗೊಳಿಸಬೇಕು. ಮತ್ತು ಹಳೇ ಮಾದರಿ ಕಕ್ಕಸ್ಸುಗಳನ್ನು ಹೊಂದಿರತಕ್ಕವರು ಅವುಗಳನ್ನು ನವೀಕರಿಸಲು ಆರ್ಥಿಕವಾಗಿ ಅಶಕ್ತರಾಗಿದ್ದಲ್ಲಿ ಸ್ಥಳೀಯ ಸಂಸ್ಥೆಗಳು ನವೀಕರಿಸಿ ಆದ ಖರ್ಚನ್ನು ಮನೆ ಮಾಲೀಕರಿಂದ ಸುಲಭ ಕಂತುಗಳಲ್ಲಿ ವಸೂಲಿ ಮಾಡಿಕೊಳ್ಳಬೇಕೆಂದು ಸರ್ಕಾರ ಸ್ಪಷ್ಟ ಮತ್ತು ಕಟ್ಟುನಿಟ್ಟಾದ ಆದೇಶವನ್ನು ಹೊರಡಿಸಬೇಕು. ಹಾಗೂ ಸರ್ಕಾರದ ಆದೇಶವನ್ನು ಕಾರ್ಯಗತ ಮಾಡುವುದರಲ್ಲಿ ವಿಳಂಬ ತೋರುವ ಸ್ಥಳೀಯ ಸಂಸ್ಥೆಗಳ ಅಧಿಕಾರ ವರ್ಗದ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕು.

೪. ಸಾರ್ವಜನಿಕ ಆರೋಗ್ಯ ರಕ್ಷಣೆ ಪಾಲಿಸುವಂತಹ ಪ್ರಜ್ಞೆಯನ್ನು ಜನರಲ್ಲಿ ಮೂಡಿಸಲು ವಿದ್ಯಾ ಇಲಾಖೆಯು ಆ ಬಗ್ಗೆ ಶಾಲೆಗಳಲ್ಲಿ ಪ್ರತ್ಯೇಕ ವಿಷಯ ಬೋದಿಸುವ ವ್ಯವಸ್ಥೆ ಮಾಡಬೇಕು.

೫. ಪೌರಕಾರ್ಮಿಕ ವೃತ್ತಿಯನ್ನು ಕ್ಲಿಷ್ಟ ವೃತ್ತಿಗಾರರಿಗಾಗಿ ನೀಡಲಾಗುತ್ತಿರುವಂತಹ ಸೌಲಭ್ಯಗಳನ್ನು ಪೌರಕಾರ್ಮಿಕರಿಗೂ ಒದಗಿಸಬೇಕು.

೬. ೫೦೦ ಪ್ರಜಾಸಂಖ್ಯೆಗೊಬ್ಬರಂತೆ ಪೌರಕಾರ್ಮಿಕರನ್ನು ನೇಮಿಸಬೇಕು.

೭. ಸೇವೆಯಲ್ಲಿರುವಾಗಲೇ ಪೌರಕಾರ್ಮಿಕ ಮೃತನಾದರೆ ಆತನ ಸಂಸಾರಕ್ಕೆ ನೆರವಾಗುವಂತೆ ಆತನ ಮೃತನ ಆಶ್ರಿತರೊಬ್ಬರನ್ನು ಮೃತರ ಸ್ಥಾನದಲ್ಲಿ ಪೌರಕಾರ್ಮಿಕರಾಗಿ ನೇಮಿಸಿಕೊಳ್ಳಬೇಕು.

೮. ಪ್ರತಿಯೊಂದು ಸ್ಥಳೀಯ ಸಂಸ್ಥೆ ರಜೆಯಲ್ಲಿ ಬದಲಿ ಕೆಲಸಗಾರರನ್ನು ನೇಮಿಸಿಕೊಳ್ಳಬೇಕು. ಖಾಯಂ ಹುದ್ದೆಗಳನ್ನು ಭರ್ತಿ ಮಾಡುವಾಗ ರಜೆ ಬದಲಿಯಾಗಿ ಕೆಲಸ ಮಾಡಿದವರಿಗೆ ಮೊದಲ ಅವಕಾಶ ನೀಡಬೇಕು.

೯. ಒಂದು ವರ್ಷ ಸತತ ಸೇವೆ ಸಲ್ಲಿಸಿರುವಂತಹ ಎಲ್ಲಾ ತಾತ್ಕಾಲಿಕ ಕೆಲಸಗಾರರನ್ನು ಸೇವೆಯಲ್ಲಿ ಖಾಯಂಗೊಳಿಸಬೇಕು.

೧೦. ಪೌರಕಾರ್ಮಿಕರಿಗೆ ಸರ್ಕಾರಿ ಇಲಾಖೆಗಳ ೨ನೇ ದರ್ಜೆ ಗುಮಾಸ್ತರ ವೇತನಶ್ರೇಣಿಯನ್ನು ನೀಡಬೇಕು.

೧೧. ಚರಂಡಿ, ಒಳಚರಂಡಿ, ಕಾಂಪೋಸ್ಟ್ ಕೆಲಸಗಾರರಿಗೆ ಅವರ ಮೂಲ ವೇತನದ ಶೇಕಡ ೨೫ ರಷ್ಟು ವಿಶೇಷ ವೇತನ ನೀಡಬೇಕು.

೧೨. ಪೌರಕಾರ್ಮಿಕರು ಅರ್ಹರಾಗಿದ್ದಲ್ಲಿ ದಫೇದಾರ್, ಆಕ್ಟಾಯ್ ಗುಮಾಸ್ತೆ, ಜವಾನ, ಡ್ರೈವರ್, ೨ನೇ ದರ್ಜೆ ಗುಮಾಸ್ತ, ಸೂಪರ್‌ವೈಜರ್, ವರ್ಕ್ ಇನ್‌ಸ್ಪೆಕ್ಟರ್, ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ಮುಂತಾದ ಹುದ್ದೆಗಳಿಗೆ ಬಡ್ತಿ ನೀಡಬೇಕು.

೧೩. ಹೆಚ್ಚಿನ ಪೌರಕಾರ್ಮಿಕರು ಮೇಲ್ದರ್ಜೆ ಹುದ್ದೆಗಳಿಗೆ ಅರ್ಹರಾಗಿರುವುದಿಲ್ಲವಾದ್ದರಿಂದ ಪ್ರತಿ ೭ ವರ್ಷಗಳಿಗೊಮ್ಮೆ ಅವರಿಗೆ ಸೆಲೆಕ್ಷನ್ ಗ್ರೇಡ್ ವೇತನಶ್ರೇಣಿಯನ್ನು ನೀಡಬೇಕು.

೧೪. ಒಂದೇ ರೀತಿಯ ಕೆಲಸವನ್ನು ವರ್ಷಾನುಗಟ್ಟಲೆ ಮಾಡುತ್ತಿರುವುದು ಅಹಿತಕರವಾದುದರಿಂದ ಬೀದಿ ಕಸ ಬದಲಾಯಿಸಬೇಕು.

೧೫. ಪೌರಕಾರ್ಮಿಕರ ನಿವೃತ್ತಿ ವಯಸ್ಸನ್ನು ೫೮ ವರ್ಷಗಳಿಗೆ ನಿಗದಿಪಡಿಸಬೇಕು. ನಿವೃತ್ತಿಯಾಗುವ ೬ ತಿಂಗಳ ಮುಂಚೆಯೇ ಅವರಿಗೆ ನಿವೃತ್ತಿಯ ನೋಟೀಸ್ ಜಾರಿಯಾಗಬೇಕು.

೧೬. ನಿವೃತ್ತರಾಗುವವರಿಗೆ ೨೦ ತಿಂಗಳುಗಳ ವೇತನದಷ್ಟು ಮೊತ್ತವನ್ನು ಗ್ರ್ಯಾಚುಟಿಯಾಗಿ ನೀಡಬೇಕು. ಗ್ರ್ಯಾಚುಟಿ ಪೌರಕಾರ್ಮಿಕರಿಗೆ ನಿವೃತ್ತಿಯಾಗುವ ದಿನದಂದೇ ಅವರಿಗೆ ಸಂದಾಯವಾಗಬೇಕು.

೧೭. ನಿವೃತ್ತಿಗೊಳ್ಳುವಂತಹ ಪೆನ್‌ಷನ್ ಕಾಗದ ಪತ್ರಗಳು ತಿಂಗಳ ಮುಂಚೆಯೇ ಸಿದ್ಧವಾಗಿ ಮಂಜೂರು ಮಾಡಿ ಪೌರಕಾರ್ಮಿಕ ನಿವೃತ್ತಿಗೊಂಡ ನಂತರದ ಮೊದಲ ತಿಂಗಳಿನಿಂದಲೇ ಪೆನ್‌ಷನ್ ದೊರಕಬೇಕು.

೧೮. ವೈದ್ಯರ ಸರ್ಟಿಫಿಕೇಟ್ ಇಲ್ಲದೆಯೇ ಮೂರು ದಿನಗಳ ಖಾಯಿಲೆ ರಜೆಗಳನ್ನು ನೀಡಬೇಕು.

೧೯. ೨ ವರ್ಷಗಳಿಗೊಮ್ಮೆ ಎಲ್ಲಾ ಪೌರಕಾರ್ಮಿಕರನ್ನು ಒಂದು ತಿಂಗಳ ವಿಶ್ರಾಂತಿ ರಜೆ ಮೇಲೆ ಅಥವಾ ವರ್ಷಕ್ಕೊಮ್ಮೆ ೧೫ ದಿನಗಳ ವಿಶ್ರಾಂತಿ ರಜೆಯ ಮೇಲೆ ಕಡ್ಡಾಯವಾಗಿ ಕಳುಹಿಸಬೇಕು.

೨೦. ಮಹಿಳಾ ಪೌರಕಾರ್ಮಿಕರಿಗೆ ೨ ತಿಂಗಳ ರಜೆಯನ್ನು ಅವರ ಅನುಕೂಲಕ್ಕೆ ತಕ್ಕಂತೆ ನೀಡಬೇಕು.

೨೧. ಪೌರಕಾರ್ಮಿಕರ ಕೆಲಸದ ವೇಳಾ ಪದ್ಧತಿಯು ಒಂದೇ ಸಮನಾಗಿರಬೇಕು ಮತ್ತು ಅವರಿಂದ ದಿನಾ ಆರು ಗಂಟೆಗಳಿಗಿಂತಲೂ ಹೆಚ್ಚು ಕೆಲಸ ಮಾಡಿಸ ಕೂಡದು.

೨೨. ದಿನಕ್ಕೆರಡು ಕೆಲಸದ ಪಾಳಿಗಳಾಗಬೇಕು. ಮೊದಲನೆ ಪಾಳಿಯಲ್ಲಿ ನೇಮಿಸಲ್ಪಟ್ಟವರು ಬೆಳಿಗ್ಗೆ ಆರರಿಂದ ಹನ್ನೆರಡರತನಕ ಕೆಲಸ ಮಾಡಿ ಮನೆಗೆ ಹಿಂದಿರುಗಬೇಕು. ಮಧ್ಯಾಹ್ನ ೧೨ ಗಂಟೆಗೆ ಎರಡನೇ ಪಾಳಿಯವರು ಕೆಲಸ ಪ್ರಾರಂಭಿಸಿ ಸಾಯಂಕಾಲ ೬ ರವರೆಗೆ ಎರಡನೇ ಪಾಳಿಗೂ, ಎರಡನೇ ಪಾಳಿಯವರನ್ನು ಮೊದಲ ಪಾಳಿಗೂ ಬದಲಾಯಿಸಬೇಕು.

೨೩. ಅನಿವಾರ್ಯ ಅಥವಾ ತುರ್ತು ಸಂದರ್ಭಗಳಲ್ಲಿ ಪೌರಕಾರ್ಮಿಕರು ನಿಗದಿಗಿಂತ ಹೆಚ್ಚು ಕಾಲ ಕೆಲಸ ಮಾಡಬೇಕಾದಲ್ಲಿ ಅವರಿಗೆ ಓವರ್ ಟೈಂ ವೇತನ ನೀಡಬೇಕು. ಮಹಿಳಾ ಪೌರಕಾರ್ಮಿಕರಿಂದ ೭ ಗಂಟೆ ನಂತರ ಯಾವುದೇ ಕಾರಣಕ್ಕಾಗಿಯೂ ಕೆಲಸ ಮಾಡಿಸಕೂಡದು.

೨೪. ವಾರಕ್ಕೊಂದು ಸಂಪೂರ್ಣ ರಜೆ ದಿನವನ್ನು ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ನೀಡಬೇಕು.

೨೫. ಬೀದಿ ಕಸ ಗುಡಿಸುವವರು ನಿಂತು ಗುಡಿಸಲು ಅನುಕೂಲವಾಗುವಂತೆ ಅವರಿಗೆ ಉದ್ದನೆಯ ಹಿಡಿಯ ಪೊರಕೆಗಳನ್ನು ಒದಗಿಸಬೇಕು.

೨೬. ೧೫೦೦೦ ಚದರ ಅಡಿಗಳ ಉದ್ದಕ್ಕಿಂತ ಹೆಚ್ಚಿನ ರಸ್ತೆಯನ್ನು ಪೌರಕಾರ್ಮಿಕರು ಗುಡಿಸಬಾರದು. ಹಾಗೆಯೇ ಚರಂಡಿ ಕೆಲಸಗಾರರಿಂದ ೧೦೦೦ ಚದರ ಅಡಿಯಷ್ಟು ಉದ್ದ ಚರಂಡಿಯನ್ನು ಮಾತ್ರ ಸ್ವಚ್ಛ ಮಾಡಬೇಕು.

೨೭. ರಸ್ತೆ ಕಸದ ತೊಟ್ಟಿಗಳಿಗೆ ಮುಚ್ಚಳವಿರಬೇಕು.

೨೮. ಚರಂಡೀ ಸ್ವಚ್ಛತೆಗೆ, ಲಾರಿಗೆ ಕಲ್ಮಶ ತುಂಬಲೆಂದೇ ಪ್ರತ್ಯೇಕ ಸಿಬ್ಬಂದಿಯ ನೇಮಕವಾಗಬೇಕು.

೨೯. ಕಸ ಕಲ್ಮಶ ಸಾಗಿಸುವ ಲಾರಿಗೆ ಆರು ಜನ ಕೆಲಸಗಾರರ ನೇಮಕವಾಗಬೇಕು. ಈ ಕೆಲಸಗಾರರಿಗೆ ರಬ್ಬರ್, ಕೈ ಚೀಲ, ಮುಖ ರಕ್ಷಣ ಕವಚ ಮತ್ತು ಗಮ್ ಷೂಗಳನ್ನು ಒದಗಿಸಬೇಕು.

೩೦. ಒಳಚರಂಡಿ ಕೆಲಸಗಾರರಿಗೆ ಅವರ ಸಂಬಳದ ಶೇಕಡ ೩೦ ರಷ್ಟು ವಿಶೇಷ ವೇತನ ನೀಡಬೇಕು. ಇವರಿಗೆ ದೇಹ ಪೂರ್ತಿ ಮುಚ್ಚುವಂತಹ ಚರ್ಮದ ಉಡುಪು, ಗ್ಯಾಸ್ ಮಾಸ್ಕ್‌ಗಳನ್ನು ಒದಗಿಸಬೇಕು.

೩೧. ಪೌರಕಾರ್ಮಿಕರಿಗೆ ಸ್ಥಳೀಯ ಸಂಸ್ಥೆಗಳು ಉಚಿತವಾಗಿ ನಿವೇಶನಗಳನ್ನು ನೀಡಬೇಕು. ಮತ್ತು ಅವರು ಮನೆ ನಿರ್ಮಿಸಿಕೊಳ್ಳಲು ಸಾಲವನ್ನು ಒದಗಿಸಬೇಕು.

೩೨. ಸ್ಥಳೀಯ ಸಂಸ್ಥೆಗಳು ತಮ್ಮ ಪೌರಕಾರ್ಮಿಕರಿಗೆ ಕ್ವಾಟ್ರರ್ಸ್‌ಗಳನ್ನು ನಿರ್ಮಿಸುವುದು ಕಡ್ಡಾಯವಾಗಬೇಕು.

೩೩. ಪೌರಕಾರ್ಮಿಕರ ಕಾಲೋನಿಗಳಲ್ಲಿ ಬೀದಿ ಕಕ್ಕಸ್ಸುಗಳು, ಸ್ನಾನದ ಮನೆಗಳು, ಕುಡಿಯುವ ನೀರಿನ ನಲ್ಲಿಗಳನ್ನು ಒದಗಿಸಬೇಕು.

೩೪. ಕಾಲೋನಿಗಳಲ್ಲಿ ಸಮುದಾಯ ಕೇಂದ್ರಗಳನ್ನು ಸ್ಥಾಪಿಸಬೇಕು. ಈ ಕೇಂದ್ರಗಳಲ್ಲಿ ರೇಡಿಯೋ, ವಾಚನಾಲಯ, ವ್ಯಾಯಾಮಶಾಲೆ ಮತ್ತು ಕರಕುಶಲ ಕಸುಬು ಕಲಿಸುವ ವ್ಯವಸ್ಥೆ ಇರಬೇಕು.

೩೫. ಕಾಲೋನಿಗಳ ಹತ್ತಿರದಲ್ಲಿ ಮದ್ಯದ ಅಂಗಡಿಗಳಿರಕೂಡದು.

೩೬. ಕಾಲೋನಿಗಳಲ್ಲಿ ಮನೋರಂಜನಾ ಕಾರ್ಯಕ್ರಮಗಳನ್ನು ಆಗಿಂದಾಗ ಏರ್ಪಡಿಸುವುದು ಸ್ಥಳೀಯ ಸಂಸ್ಥೆಯ ಹೊಣೆಯಾಗಬೇಕು.

೩೭. ಸ್ಥಳೀಯ ಸಂಸ್ಥೆಗಳು ತಮ್ಮ ನೌಕರಿಗಾಗಿ ನಿರ್ಮಿಸುವ ಕ್ವಾಟ್ರಸ್‌ಗಳಲ್ಲಿ ಎಲ್ಲಾ ದರ್ಜೆಯ ನೌಕರರ ಮಧ್ಯೆ ಪೌರಕಾರ್ಮಿಕರಿಗೆ ವಾಸಿಸುವ ಅನುಕೂಲ ಮಾಡಿಸಬೇಕು.

೩೮. ಪೌರಕಾರ್ಮಿಕರಿಗೆ ಸಂಬಳದ ವಿತರಣೆಯನ್ನು ಅಕೌಂಟ್ಸ್ ಇಲಾಖೆಯವರು ಮಾಡಬೇಕು. ಒಂದು ದಿನ ಮುಂಚೆಯೇ ಅವರಿಗೆ ಸಂಬಳದ ವಿತರಣೆ ಚೀಟಿಯನ್ನು ನೀಡತಕ್ಕದ್ದು.

೩೯. ಸ್ಥಳೀಯ ಸಂಸ್ಥೆಗಳು ತಮ್ಮ ಪೌರಕಾರ್ಮಿಕರು ಬ್ಯಾಂಕುಗಳಿಂದ ಸಾಲ ಪಡೆದುಕೊಳ್ಳಲು ಅನುವಾಗುವಂತೆ ಸಾಲದ ಕಂತುಗಳನ್ನು ಪೌರಕಾರ್ಮಿಕರ ಸಂಬಳದಿಂದ ಹಿಡಿದು ಬ್ಯಾಂಕಿಗೆ ಸಲ್ಲಿಸುವ ಗ್ಯಾರಂಟಿಯನ್ನು ನೀಡಬೇಕು.

೪೦. ಪೌರಕಾರ್ಮಿಕರಿಂದ ಕಡ್ಡಾಯವಾಗಿ ಜೀವವಿಮೆ ಮಾಡಿಸಬೇಕು.

೪೧. ತಮ್ಮ ನೌಕರರೆಲ್ಲರ ಅನುಕೂಲಕ್ಕಾಗಿ ಸ್ಥಳೀಯ ಸಂಸ್ಥೆಗಳೇ ಸಹಕಾರಸಂಘಗಳನ್ನು ಪ್ರಾರಂಬಿಸಬೇಕು.

೪೨. ಪೌರಕಾರ್ಮಿಕರನ್ನು ಮತ್ತು ಅವರ ಮನೆಯವರನ್ನು ಮೂರು ತಿಂಗಳಿಗೊಮ್ಮೆ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಬೇಕು.

೪೩. ಖಾಯಿಲೆ ಬೀಳುವ ಪೌರಕಾರ್ಮಿಕರಿಗೆ ಮತ್ತು ಗುಡಿಸುವವರನ್ನು ಕೆಲವು ವರ್ಷಗಳ ನಂತರ ಚರಂಡಿ ಸ್ವಚ್ಛ ಮಾಡುವ ಅಥವಾ ಇತರೆ ಕೆಲಸಗಾರರಿಗೆಲ್ಲರಿಗೂ ಸ್ಥಳೀಯ ಸಂಸ್ಥೆಗಳು ಉಚಿತ ವೈದ್ಯಕೀಯ ನೆರವನ್ನು ನೀಡಬೇಕು.

೪೪. ಆರೋಗ್ಯ ರಕ್ಷಣೆಯ ಬಗ್ಗೆ ಪೌರಕಾರ್ಮಿಕರಲ್ಲಿ ಅರಿವನ್ನುಂಟು ಮಾಡಲು ಆರೋಗ್ಯ ಇಲಾಖೆ ಪೌರಕಾರ್ಮಿಕರ ಕಾಲೋನಿಗಳಲ್ಲಿ ಸೂಕ್ತ ಉಪನ್ಯಾಸ, ಚಲನಚಿತ್ರ ಪ್ರದರ್ಶನ ಮುಂತಾದವುಗಳನ್ನು ಏರ್ಪಡಿಸಬೇಕು.

೪೫. ಮ್ಯಾನ್‌ಹೋಲ್‌ಗಳಲ್ಲಿ ಇಳಿದು ಕೆಲಸ ಮಾಡುವವರಿಗೆ ಸ್ಥಳೀಯ ಸಂಸ್ಥೆಗಳೇ ತಮ್ಮ ಖರ್ಚಿನಲ್ಲಿ ಜೀವ ವಿಮೆ ಮಾಡಿಸಬೇಕು.

೪೬. ಪೌರಕಾರ್ಮಿಕರ ಮಕ್ಕಳು ವಿದ್ಯಾವಂತರಾಗಬೇಕಾದಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ತರಬೇಕು.

೪೭. ಪೌರಕಾರ್ಮಿಕರ ಕಾಲೋನಿಗಳಲ್ಲಿ ಶಿಶು ಸಂರಕ್ಷಣಾ ಕೇಂದ್ರ, ನರ್ಸರಿ ಮತ್ತು ಪ್ರೈಮರಿ ಶಾಲೆಗಳನ್ನು ಸರ್ಕಾರ ಪ್ರಾರಂಬಿಸಬೇಕು.

೪೮. ಪೌರಕಾರ್ಮಿಕರ ಮಕ್ಕಳಿಗೆ ಉಚಿತ ಉಡುಪು, ಪುಸ್ತಕ ಮತ್ತು ಹಾಸ್ಟೆಲ್ ಸೌಲಭ್ಯಗಳನ್ನು ಒದಗಿಸಬೇಕು. ಪೌರಕಾರ್ಮಿಕರು ತಮ್ಮ ಮಕ್ಕಳನ್ನು ತಪ್ಪದೆ ಶಾಲೆಗೆ ಕಳುಹಿಸುವಂತೆ ಉತ್ತೇಜಿಸಲು ಪ್ರತಿ ಮಗುವಿಗೂ ೫ ರಿಂದ ೧೦ ರಂತೆ ವಿಶೇಷ ವೇತನವನ್ನು ಪೌರಕಾರ್ಮಿಕರಿಗೆ ನೀಡಬೇಕು.

೪೯. ಪೌರಕಾರ್ಮಿಕರಲ್ಲಿ ತಿಳುವಳಿಕೆ ಮೂಡಿಸಲು ವಯಸ್ಕರ ಶಿಕ್ಷಣ ಪದ್ಧತಿಯನ್ನು ಪೌರಕಾರ್ಮಿಕರ ಕಾಲೋನಿಗಳಲ್ಲಿ ಪ್ರಾರಂಬಿಸಬೇಕು.

೫೦. ಪೌರಕಾರ್ಮಿಕರನ್ನು ವರ್ಷಕ್ಕೊಂದು ಸಾರಿ ಪ್ರೇಕ್ಷಣೀಯ ಸ್ಥಳಗಳಿಗೆ ಪ್ರವಾಸ ಕರೆದುಕೊಂಡು ಹೋಗಬೇಕು.

೫೧. ಪೌರಕಾರ್ಮಿಕರ ಪ್ರತಿನಿಧಿಗಳನ್ನು ಸ್ಥಳೀಯ ಸಂಸ್ಥೆಗಳ ಸದಸ್ಯರನ್ನಾಗಿ ಮತ್ತು ವಿಧಾನ ಪರಿಷತ್, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರನ್ನಾಗಿ ನಾಮಕರಣ ಮಾಡಬೇಕು.

೫೨. ಜನನ ನಿಯಂತ್ರಣ ಚಿಕಿತ್ಸೆ ಮಾಡಿಸಿಕೊಳ್ಳುವ ಪೌರಕಾರ್ಮಿಕರಿಗೆ ರೂ. ೫೦೦ ಸಂಭಾವನೆ ನೀಡಬೇಕು.

೫೩. ವಯಸ್ಸಾದ ನಂತರ ಆಶ್ರಯವಿಲ್ಲದಂತಹ ಪೌರಕಾರ್ಮಿಕರಿಗಾಗಿ ಜಿಲ್ಲಾಕೇಂದ್ರಗಳಲ್ಲಿ ವಿಶ್ರಾಂತಿ ಗೃಹಗಳನ್ನು ನಿರ್ಮಿಸಬೇಕು.

೫೪. ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕ ಸಂಘಗಳಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ಒದಗಿಸಬೇಕು.

೫೫. ಸೆಪ್ಟೆಂಬರ್ ೨೩ ರಂದು ಅಥವಾ ಫೆಬ್ರವರಿ ೨೨ ರಂದು ಸ್ಥಳೀಯ ಸಂಸ್ಥೆಗಳು ಪೌರಕಾರ್ಮಿಕರ ದಿನಾಚರಣೆಯನ್ನು ಆಚರಿಸಬೇಕು.

೫೬. ಪೌರಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆಯಾಗಬೇಕು (ಭಂಗಿ ಬಂದು, ಆಗಸ್ಟ್ ೨೦೦೩).

ಐ.ಪಿ.ಡಿ ಸಾಲಪ್ಪನವರು ಈ ಸಲಹೆಗಳನ್ನು ೧೯೭೬ರಲ್ಲಿ ಸೂಚಿಸಿದ್ದರು. ೨೦೦೭ಕ್ಕೆ ಈ ಸಲಹೆಗಳನ್ನು ಸೂಚಿಸಿ ೩೧ ವರ್ಷಗಳಾಗಿವೆ. ಈಗಲೂ ಇವು ಪ್ರಸ್ತುತವಾಗಿವೆ ಎಂಬುವುದು ಪೌರಕಾರ್ಮಿಕರಿಗೆ ಸಂಬಂಧಿಸಿದ ಇಡೀ ವ್ಯವಸ್ಥೆಯು ಸ್ಥಿರವಾಗಿಯೇ ಇದೆ ಎಂಬುವುದನ್ನು ಸೂಚಿಸುತ್ತದೆ. ಈಗ ನಾವೆಲ್ಲಾ ಜಾಗತೀಕರಣ, ಉದಾರೀಕರಣ, ಖಾಸಗೀಕರಣ ಏನೆಲ್ಲಾವನ್ನು ಮಾತನಾಡುತ್ತೇವೆ. ವಿಜ್ಞಾನ ೩೧ ವರ್ಷಗಳಲ್ಲಿ ಸಾಕಷ್ಟು ಮುಂದುವರಿದಿದೆ. ಆದರೆ ಪೌರಕಾರ್ಮಿಕರ ಸ್ಥಿತಿ ೩೧ ವರ್ಷಗಳಲ್ಲಿ ಯಾಕೆ ಅಭಿವೃದ್ಧಿಗೊಳ್ಳಲಿಲ್ಲ? ೩೧ ವರ್ಷ ಅಂತ ಹೇಳಬಾರದು ಚಾತುರ್ವರ್ಣ ವ್ಯವಸ್ಥೆ ಸೃಷ್ಟಿಯಾದಾಗಿನಿಂದಲೂ ಜಾಡಮಾಲಿಗಳ ಸ್ಥಿತಿ ಯಥಾವತ್ತಾಗಿಯೇ ಇದೆ. ಅವರಲ್ಲಿ ಯಾವುದೇ ರೀತಿಯ ಖುಷಿಪಟ್ಟುಕೊಳ್ಳುವಂತಹ ಬದಲಾವಣೆಗಳು ಆಗಿಲ್ಲ ಎಂಬುವುದನ್ನು ಮುಖ್ಯವಾಗಿ ಗಮನಿಸಬೇಕು. ಇವರು ಇಂತಹ ಸ್ಥಿತಿಯಲ್ಲಿದ್ದರೂ ತಮ್ಮ ಸಂಸ್ಕೃತಿಯನ್ನು ಪ್ರೌಢವಾಗಿಯೇ ಬೆಳೆಸಿಕೊಂಡು, ಉಳಿಸಿಕೊಂಡರೆಂದು ಕೆಲವು ವಿದ್ವಾಂಸರು ಮಾತನಾಡುತ್ತಾರೆ. ಹಾಗೆ ಮಾತನಾಡಲು ಆಗುತ್ತದೆಯೇ? ಇದು ಹೆಚ್ಚು ಕುತೂಹಲವನ್ನು ಹುಟ್ಟಿಸುತ್ತದೆ.

ಅಧ್ಯಾಯ ೩. ದಲಿತ ಮಹಿಳಾ ಸಾಂಸ್ಕೃತಿಕ ರಚನೆ

ಅಧ್ಯಾಯ - ೩

ದಲಿತ ಮಹಿಳಾ ಸಾಂಸ್ಕೃತಿಕ ರಚನೆ

ಒಂದು ಸಮುದಾಯದ ಹಿನ್ನೆಲೆ, ಇತಿಹಾಸ, ಭೂಗೋಳ, ಧರ್ಮ, ಕೃಷಿ, ಸಂಪ್ರದಾಯ, ವಿಚಾರ, ನಂಬಿಕೆ, ಆಚರಣೆಗಳು, ನಿಷೇಧ, ಹಬ್ಬಗಳು, ಜಾತ್ರೆಗಳು, ಉತ್ಸವಗಳನ್ನು ಅಭ್ಯಾಸಿಸಿ, ವಿವೇಚಿಸಿ, ವಿಶ್ಲೇಷಿಸಿ ವ್ಯಾಖ್ಯಾನ ಮಾಡುವ ಕ್ರಮವು ಸಂಸ್ಕೃತಿಯಾಗುತ್ತದೆ. ಅದು ಅವಲೋಕನ ಕ್ರಮವಾಗಬಹುದು. ಸಂಸ್ಕೃತಿಯನ್ನು ಕುರಿತು ವ್ಯಾಖ್ಯಾನ ಮಾಡಿದರೆ ಅದು ಸಂಸ್ಕೃತಿಯಾಗುತ್ತದೆ ಎಂದಲ್ಲ ಅವರ ಸತ್ಯಾಸತ್ಯತೆಯನ್ನು ಹುಡುಕುವ ಪ್ರಯತ್ನವು ನಡೆದರೆ ಮಾತ್ರ ಸಮುದಾಯದ ವಿಚಾರದಲ್ಲಿ ಅದು ಸಂಸ್ಕೃತಿಯಾಗುತ್ತದೆ ಎಂದು ಹೇಳಬಹುದು.

ವಿವಿಧ ವಿದ್ವಾಂಸರು ತಮ್ಮ ತಮ್ಮ ಅಧ್ಯಯನಕ್ಕನುಗುಣವಾಗಿ ಸಂಸ್ಕೃತಿ ಎಂಬ ಪದಕ್ಕೆ ನೀಡಿರುವ ವ್ಯಾಖ್ಯೆ ವಿವರಗಳ ಪೈಕಿ ಕೆಲವನ್ನಿಲ್ಲಿ ಪರಿಭಾವಿಸಬಹುದು.

ಇ.ಬಿ. ಟೇಲರ್‌ರವರ ಪ್ರಕಾರ 'ಸಮಾಜದ ಸದಸ್ಯನಾಗಿ ಮಾನವ ಆರ್ಜಿಸಿಕೊಂಡ ಜ್ಞಾನ, ನಂಬಿಕೆ, ಕಲೆ, ನೀತಿ, ನ್ಯಾಯ, ಸಂಪ್ರದಾಯ ಮತ್ತಿತರ ಸಾಮರ್ಥ್ಯ ಹಾಗೂ ಅಭ್ಯಾಸಗಳ ಒಟ್ಟು ಮೊತ್ತವೇ ಸಂಸ್ಕೃತಿ' ಎಂದಿದ್ದಾರೆ (Tylor E.B, 1981, P. 10).

ಹರ್‌ಸ್ಕೋವಿಟ್ಸ್‌ರವರ ಪ್ರಕಾರ 'ಪರಿಸರದಲ್ಲಿ ಮಾನವ ನಿರ್ಮಿತವಾದ ಭಾಗವನ್ನೇ ಸಂಸ್ಕೃತಿ ಎಂದು ಕರೆಯಬಹುದು' ಎಂದಿದ್ದಾರೆ (Herskouits Melville, 1960, P. 223).

ಲೂವಿಯವರ ಪ್ರಕಾರ 'ಸಂಸ್ಕೃತಿಯೆಂಬುವುದು ಸಾಮಾಜಿಕ ಸಾಂಪ್ರದಾಯಗಳ ಒಟ್ಟು ಮೊತ್ತ' (Lowie, 1930).

ಸಂಸ್ಕೃತಿ ಎಂಬುದು ಪ್ರಧಾನವಾಗಿ ಅಂತರಂಗಿಕವಾದ ವಿಕಾಸಕ್ಕೆ ಸಂಬಂಧಿಸಿದುದು. ಮನುಷ್ಯನ ಮೃಗತ್ವವನ್ನು ಹೋಲಿಸಿ ಅಲ್ಲಿ ನಿಜವಾದ ಮಾನವೀಯತೆಯನ್ನು ಸ್ಥಾಪಿಸುವುದೇ ಸಂಸ್ಕೃತಿ. ಅತ್ಯುತ್ತಮ ಆಲೋಚನೆಗಳನ್ನು ಉಕ್ತಿಗಳನ್ನು ತಿಳಿಯುವುದು ಸಂಸ್ಕೃತಿಯೇ ಎಂದು ಡಾ. ಚಿದಾನಂದ ಮೂರ್ತಿಯವರು ಹೇಳುತ್ತಾರೆ (ಚಿದಾನಂದ ಮೂರ್ತಿ, ೧೯೬೬, ಪು. ೫).

'ಸಂಸ್ಕೃತಿ ನಾಗರಿಕತೆ ಎಂಬ ಮಾತುಗಳನ್ನು ಒಂದೇ ವ್ಯಕ್ತಿಯೇ ಒಂದಕ್ಕಿಂತ ಹೆಚ್ಚು ಅರ್ಥಗಳಲ್ಲಿ ಬಳಸುವುದನ್ನು ಕಾಣುತ್ತೇವೆ.. ಸಂಸ್ಕೃತಿ ಹಾಗೂ ನಾಗರೀಕತೆ ಇವೆರೆಡು ಸಮಾನಾರ್ಥಕವು. ಆ ಎರಡರಲ್ಲಿ ಒಂದು ಉಳಿದು ಇನ್ನೊಂದು ಇತಿಹಾಸದ ವಿಷಯವಾಗುತ್ತದೆ. ನಗರಗಳು ತಲೆ ಎತ್ತುವ ಮೊದಲು 'ನಾಗರೀಕತೆ'ಗಿಂತ 'ಸಂಸ್ಕೃತಿ' ಎಂಬುದು ಪ್ರಾಚೀನ ಹಾಗೂ ಹೆಚ್ಚು ವ್ಯಾಪಕಾರ್ಥವುಳ್ಳದ್ದಾಗಿ ಕಾಣುತ್ತದೆ. ವಿಶ್ವಕರ್ಮನ ಉಳಿಯ ಏಟು ತಿಂದು ಒಂದು ಶಿಲೆಯ ಮೂರ್ತಿ ಪ್ರತಿಮೆ ಸಿದ್ಧವಾಗುತ್ತದೆ. ಮಾನವನೊಳಗಿನ ಅಂತಃ ಶಕ್ತಿ ಹಾಗೂ ಬಾಹ್ಯ ಪರಿಸ್ಥಿತಿ (ನಿಸರ್ಗ ಮತ್ತು ಸಮಾಜ) ಇವೆರಡರೊಳಗಿನ ಆಘಾತ-ಪ್ರತ್ಯಾಘಾತಗಳಲ್ಲಿ ಈ ಸಂಸ್ಕೃತಿ ಎಂಬುದು ರೂಪುಗೊಂಡಿದೆ' (ಶಂಭಾಜೋಶಿ, ೧೯೯೬, ಪು. ೩) ಎಂದು ಹೇಳಬಹುದು.

ಸಂಸ್ಕೃತಿ ಎಂಬ ಶಬ್ದವನ್ನು ಇಂಗ್ಲೀಷ್‌ನ Culture ಎಂಬುವುದಕ್ಕೆ ಸಂವಾದಿಯಾಗಿ ಉಪಯೋಗಿಸಲಾಗುತ್ತಿದೆ. ಈ ಮಾತು ಹೊಸತು ಆದರೆ ಅದರ ಹಿಂದಿರುವ ಅರ್ಥ ಹೊಸದಲ್ಲ. Culture ಎಂಬುದರ ಮೂಲ ಪದ Cult ಅಥವಾ Culture ಎಂಬುವುದು ಗೌರವಿಸು, ಆರಾಧಿಸು, ಸೇವೆ ಮಾಡು ಮೊದಲಾದ ಅರ್ಥಗಳನ್ನು ಇದು ಕೊಡುತ್ತದೆ. ದೈವಭಕ್ತಿ ಎಂಬ ಅರ್ಥವನ್ನು ಒಂದು ಕಡೆ ಇದು ಪಡೆದರೆ ಇನ್ನೊಂದು ಕಡೆ ಭೂದೇವಿಯ ಆರಾಧನೆ, ಅದರ ಕೃಷಿ ಎಂಬ ಅರ್ಥವನ್ನು ಪಡೆಯಿತು ಎಂದು ಡಿ.ವಿ. ಗುಂಡಪ್ಪನವರು ಅಭಿಪ್ರಾಯ ಪಡುತ್ತಾರೆ (ಡಿ.ವಿ.ಜಿ ಪು.೭).

ಮನುಷ್ಯನಿಗೆ ಆಹಾರವನ್ನು ತಿಂದು ಮನೆಯನ್ನು ಕಟ್ಟಿ ಬಾಳುವ ಅನ್ನಮಯ ವ್ಯಾಪಾರದಿಂದ ಸಂಪೂರ್ಣ ತೃಪ್ತಿ ಲಭಿಸಲಿಲ್ಲ. ಇವುಗಳಿಂದ ತೃಪ್ತವಾಗದೆ ಇನ್ನೇನನ್ನೋ ಆತನ ಮನೋಮಯ, ಪ್ರಾಣಮಯ, ಆನಂದಮಯ, ಆಕಾಂಕ್ಷೆಗಳು ಬಯಸಿದವು. ಅನ್ನವನ್ನು ತಿನ್ನುವುದಷ್ಟೆ ಸಾಲದು ತಿನ್ನುವ ತಟ್ಟೆ ಸುಂದರವಾಗಿರಬೇಕು, ಮನೆಯನ್ನು ಕಟ್ಟುವುದಷ್ಟೆ ಸಾಲದು, ಆ ಮನೆ ಅಲಂಕೃತವಾಗಿರಬೇಕು, ಅಂದರೆ ಸೌಂದರ್ಯದ ಆಕಾಂಕ್ಷೆ ಅವನ ನಿತ್ಯ ಜೀವನದಲ್ಲಿ ಬೆಳೆಯಿತು. ಬಹುರೂಪಾಧಾರಣೆಯಾದ ಪ್ರಕೃತಿಯೂ ಸೌಂದರ್ಯದ ಉಪಾಸನೆಗೆ ಸಹಾಯಕಾರಿಯಾಯಿತು. ಇದರಿಂದ ಪ್ರಚೋದಿತವಾದ ಮನಸ್ಸು ಇನ್ನೂ ಹೆಚ್ಚು ಅಂತರ್‌ಮುಖಿಯಾಗಿ ಎಲ್ಲಾ ಸೌಂದರ್ಯಕ್ಕೂ ಕಾರಣವಾದ ಮೂಲ ಸೌಕರ್ಯವನ್ನು ಕಾಣುವ ಹಂಬಲ ತೊಡಗಿತು. ಮಾನವನ ಪ್ರಮುಖವಾದ ಎರಡು ಮುಖಗಳು ಇವು. ಅಂತರಂಗ ಮತ್ತು ಬಹಿರಂಗ ಜೀವನಗಳು. ಇವೆರಡನ್ನು ಸಂಸ್ಕೃತಿ ಮತ್ತು ನಾಗರೀಕತೆ ಶಬ್ದಗಳು ಸೂಚಿಸುತ್ತವೆ. 'ನಾಗರೀಕತೆ' ಆತನ ಬಹಿರಂಗ ಜೀವನಕ್ಕೆ ಸಹಕಾರಿಯಾದ ಅಂಶಗಳನ್ನು ನಿರ್ದೇಶಿಸಿದರೆ 'ಸಂಸ್ಕೃತಿ' ಆತನ ಅಂತರಂಗ ಜೀವನಕ್ಕೆ ಪರಿಣಮಿಸಿದೆ. (ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ೨೦೦೧, ಪು. ೫). ಹೀಗೆ ಅಂತರಂಗ ಜೀವನವು ಬಹಿರಂಗ ಜೀವನವನ್ನು ನಿರ್ದೇಶಿಸುತ್ತಿರುತ್ತದೆ.

ಮೇಲ್ಜಾತಿ, ಮೇಲ್ವರ್ಗಗಳು ಅನುಭವಿಸುತ್ತಿರುವ ಸಂಸ್ಕೃತಿಯನ್ನು ಹಾಗೂ ಕೆಳವರ್ಗಗಳು ಅನುಭವಿಸುತ್ತಿರುವ ಸಂಸ್ಕೃತಿಯನ್ನು ಅಥವಾ ಇಡೀ ಸಮಾಜದಿಂದ ಶೋಷಣೆಗೆ ಒಳಗಾಗಿರುವ ಸಂಸ್ಕೃತಿಗಳನ್ನು ಅಧ್ಯಯನ ಮಾಡಿರುವುದಕ್ಕೆ ಅವರ ಸಂಸ್ಕೃತಿಯನ್ನು ಗುರುತಿಸಲಿಕ್ಕೆ ಇಲ್ಲಿಯವರೆಗೆ ಅನೇಕ ರೀತಿಯ, ಅನೇಕ ಪರಿಕಲ್ಪನೆಗಳನ್ನು ಬಳಸಲಾಗಿದೆ. ಅವುಗಳೆಂದರೆ;

೧. ಸಂಸ್ಕೃತಿ - ಉಪಸಂಸ್ಕೃತಿ

೨. ಪ್ರಧಾನ ಸಂಸ್ಕೃತಿ - ಅಧೀನ ಸಂಸ್ಕೃತಿ

೩. ಉನ್ನತ ಸಂಸ್ಕೃತಿ - ಕೆಳಸಂಸ್ಕೃತಿ

೪. ಶಿಷ್ಟ ಸಂಸ್ಕೃತಿ - ಪರಿಶಿಷ್ಟ ಸಂಸ್ಕೃತಿ

೫. ಮೂಲ ಸಂಸ್ಕೃತಿ - ಪರ್ಯಾಯ ಸಂಸ್ಕೃತಿ

೬. ಸಂಸ್ಕೃತಿ ಮತ್ತು ಪ್ರತಿ ಸಂಸ್ಕೃತಿ

ಕನ್ನಡದಲ್ಲಿ ಇವೆಲ್ಲವೂ ಬರಗೂರರವರು ಪ್ರಾರಂಭಿಸಿದ ಉಪಸಂಸ್ಕೃತಿ ಮಾಲೆಯ ಅಧ್ಯಯನಗಳಿಂದ ಪ್ರಾರಂಭವಾಗಿ ಈ ಕಾಲಘಟ್ಟದವರೆಗೂ ಬಂದು ನಿಲ್ಲುತ್ತವೆ. ಸಮುದಾಯಗಳ ಅಧ್ಯಯನಗಳ ಸಂದರ್ಭದಲ್ಲಿ

ಆಯಾ ಸಮುದಾಯಗಳ ಹಿನ್ನೆಲೆಯಲ್ಲಿಯೇ ಆಯಾ ಸಮುದಾಯಗಳ ಸಂಸ್ಕೃತಿಯನ್ನು ಪರಿಭಾವಿಸಬೇಕಾಗುತ್ತದೆ. ಉಪ, ಅಧೀನ, ಪರಿಶಿಷ್ಟ, ಪ್ರತಿ, ಕಷ್ಟ ಸಂಸ್ಕೃತಿಗಳನ್ನು ತಳಸಮುದಾಯಗಳಿಗೆ ಬಳಸುವುದು ಸರಿಯಲ್ಲ. ಆ ಸಮುದಾಯ ಸಮಾಜ ಶೋಷಣೆಯ ಕಟ್ಟಕಡೆಯ ಮೆಟ್ಟಿಲಾಗಿರಬಹುದು. ಆದರೆ ಆ ಸಮುದಾಯಗಳ ಸಂಸ್ಕೃತಿ ಕಟ್ಟಕಡೆಯ ಮೆಟ್ಟಿಲಾಗಲು ಸಾಧ್ಯವಿಲ್ಲ. ತಳಸಮುದಾಯಗಳು ಮನುಷ್ಯ ಸೃಷ್ಟಿಯ ನೆಲೆಯಿಂದ ಇಲ್ಲಿಯವರೆಗೂ ತಮ್ಮದೇ ಆದ ಲೋಕದೃಷ್ಟಿಯನ್ನು ಹೊಂದಿರುತ್ತವೆ. ಇವುಗಳನ್ನು ಶೋಧಿಸುವ ಮೂಲಕ ಆ ಸಮುದಾಯಗಳಲ್ಲಿರುವ ಪ್ರೌಢ, ಶ್ರೀಮಂತ, ಸಂಸ್ಕೃತಿಯನ್ನು ಎತ್ತಿಹಿಡಿದು ಆ ಸಮುದಾಯಗಳು ಮೂಲದಲ್ಲಿ ಹೊಂದಿದ್ದ ಶ್ರೀಮಂತಿಕೆಯನ್ನು ಇದ್ದ ಸ್ಥಿತಿಯನ್ನು ಅರ್ಥೈಸಬೇಕಾಗುತ್ತದೆ. ಅಂತಹ ಸಮುದಾಯಗಳು ವರ್ತಮಾನದ ಸ್ಥಿತಿಯಲ್ಲಿ ಶೋಷಣೆಗೆ ಒಳಗಾಗಿರುವುದಕ್ಕೆ ಕಾರಣವೇನು ಎಂಬುವುದನ್ನು ಚರಿತ್ರೆಯ ಕಾಲ ಘಟ್ಟಗಳಲ್ಲಿ ಆದ ಶೋಷಣೆಯ ಹಂತಗಳನ್ನು ವಿವರಿಸಿಕೊಳ್ಳಬೇಕಾಗುತ್ತದೆ, ವಿಶ್ಲೇಷಿಸಿಕೊಳ್ಳಬೇಕಾಗುತ್ತದೆ.

ಸಂಸ್ಕೃತಿ ಮತ್ತು ವಿಸ್ಮೃತಿ (ಮರೆವು)ಗಳನ್ನು ಕುರಿತು ಮಾತನಾಡುತ್ತಾ ಡಿ.ಆರ್. ನಾಗರಾಜ್ ಅವರು ಹೀಗೆ ಹೇಳುತ್ತಾರೆ. "ವಸಾಹತುಶಕ್ತಿಗಳು ಜಾರಿಗೊಳಿಸಿದ ಆಧುನೀಕರಣ ಯೋಜನೆಗೆ ಶೋಷಣೆಗೊಳಗಾದ ಸಮುದಾಯದವರ ಪ್ರಕ್ರಿಯೆಯ ಮೊದಲ ಪ್ರಮುಖ ಅಂಶವೆಂದರೆ ಸಾಂಸ್ಕೃತಿಕ ಸ್ಮೃತಿ ನಾಶ, ನೆನಪಿನ ಹೊಸ ಸ್ವರೂಪವನ್ನು ಸೃಷ್ಟಿಸುವುದೂ ಈ ಪ್ರಕ್ರಿಯೆಯ ಅವಶ್ಯಕವಾದ ಒಂದು ಭಾಗ. ಸುಲಭವಾಗಿ ಅಳಿಸಲಾಗದ್ದನ್ನು ಅಳಿಸುವ ಈ ಪ್ರಯತ್ನ ಈ ಶತಮಾನದ ಹಿಂದುಳಿದ ಜಾತಿಗಳ ಚಳುವಳಿಗೆ ಸಂಕೀರ್ಣ ಸಮಸ್ಯೆಗಳ ಸರಮಾಲೆಯನ್ನೇ ಒಡ್ಡಿದೆ" (ಡಿ.ಆರ್. ನಾಗರಾಜ್, ೨೦೦೨, ಪು. ೯೦) ಎಂದು ಹೇಳುತ್ತಾರೆ. ಆದರೆ ಯಾವುದೇ ಸಮುದಾಯಗಳು ಯಾರ ಒತ್ತಡದಿಂದಲೂ ತಮ್ಮ ಸ್ಮೃತಿನಾಶ ಮಾಡಿಕೊಳ್ಳುವುದಿಲ್ಲ, ಆ ಸಂದರ್ಭದಲ್ಲಿ ಆ ಸಮುದಾಯಕ್ಕೆ ಅಗತ್ಯವೆನಿಸಿದ ಅಂಶಗಳನ್ನು ಮಾತ್ರ ತನ್ನಲ್ಲಿರಿಸಿಕೊಂಡು ಬೇಡದೇ ಆಗಿರುವ ಅಂಶಗಳನ್ನು ಬಿಟ್ಟುಕೊಡುತ್ತದೆ. ತನಗೆ ಬೇಕಾದ, ಅಗತ್ಯವೆನಿಸಿದ ಇತರೆ ಅಂಶಗಳನ್ನು ಈಗಿರುವ ಅಂಶಗಳ ಜೊತೆ ಆಂತರೀಕರಣಕ್ಕೊಳಪಡಿಸಿಕೊಳ್ಳುತ್ತವೆ. ಆದರೆ ಇದನ್ನೆ ಕೆಳಜಾತಿ ಸಮುದಾಯಗಳ ವಿಸ್ಮೃತಿ ಎಂಬುವುದು ಸರಿಯಲ್ಲ. ಕೆಳ ಸಮುದಾಯಗಳು ತಮ್ಮ ಅಭಿವ್ಯಕ್ತಿಯ ಕ್ರಮದಲ್ಲಿ ಮೂಲ ನೆಲೆಯನ್ನು, ಮೂಲ ಪರಿಕಲ್ಪನೆಯನ್ನು ಬಿಟ್ಟುಕೊಡುವುದಿಲ್ಲ. ಅದು ಯತಾವತ್ತಾಗಿ ಮೂಲ ರೂಪದಲ್ಲಿರದಿದ್ದರೂ ಮೂಲ ರೂಪವನ್ನು ಉಳಿಸಿಕೊಳ್ಳುತ್ತಲೇ ಅದರ ಸ್ವರೂಪವನ್ನು ಬದಲಾಯಿಸಿಕೊಂಡು ತನ್ನ ಅಸ್ತಿತ್ವದ ಪ್ರಶ್ನೆಗೆ ಉತ್ತರವಾಗಿರಿಸಿಕೊಳ್ಳುವ ರೀತಿಯಲ್ಲಿ ಅದನ್ನು ಪರಿಭಾವಿಸಿಕೊಂಡಿರುತ್ತದೆ.

ಸಂಸ್ಕೃತಿ ಸೃಷ್ಟಿಯಾಗುವುದು ಹೊರಗಿನ ವಾತಾವರಣ ಹಾಗೂ ಮನಸ್ಸುಗಳ ಸಮ್ಮಿಶ್ರಣದಿಂದ ಎಂದು ಹೇಳಬಹುದು. ಸಂಸ್ಕೃತಿ ಮತ್ತು ಪರಿಸರಗಳ ನಡುವಿನ ಸಂಬಂಧ ಕೂಡ ಪರಸ್ಪರ ಪೂರಕವಾದುದ್ದಾಗಿದೆ. ಪರಿಸರವು ಸಂಸ್ಕೃತಿಯನ್ನು ಬೆಳೆಸುವ ಶಕ್ತಿ ಹೇಗೆ ಇದೆಯೋ ಹಾಗೆಯೇ ಸಂಸ್ಕೃತಿಗೂ ಪರಿಸರವನ್ನು ತನ್ನ ಅಗತ್ಯಗಳಿಗೆ ತಕ್ಕಂತೆ ಬದಲಾಯಿಸಿಕೊಳ್ಳುವ ಶಕ್ತಿ ಇದೆ. ಕಾಲದಿಂದ ಕಾಲಕ್ಕೆ ಮಾರ್ಪಾಡುಗಳನ್ನು ಮಾಡುತ್ತಾ ಹೋಗುವ ತಯಾರಿಯನ್ನು ನೀಡುವುದು ಆ ಸಂಸ್ಕೃತಿಯಲ್ಲಿ ಕಂಡುಬರುವ ಪರಿಸರವೇ ಆಗಿರುತ್ತದೆ. ಸಂಸ್ಕೃತಿಯ ಒಂದು ಭಾಗವಾದ ಮಹಿಳೆಯರ ಜೀವನದ ಗತಿಯನ್ನು ನಿರ್ಧರಿಸುವಲ್ಲಿಯೂ ಪರಿಸರದ ಪಾತ್ರ ಬಹುಮುಖ್ಯವಾದುದು ಎನ್ನುವುದನ್ನೇನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಪ್ರತಿ ಸಂಸ್ಕೃತಿಯೂ ಮಹಿಳೆಯರಿಗೆ ಆಯಾ ಸಂಸ್ಕೃತಿಯ ಪರಿಸರಕ್ಕೆ ಅನುಗುಣವಾಗಿ ಪಾತ್ರಗಳನ್ನು ಹಂಚಿರುತ್ತದೆ ಹಾಗೂ ಜವಾಬ್ದಾರಿಗಳನ್ನೂ ಹಂಚಿರುತ್ತದೆ. ಒಂದು ಸಮುದಾಯದಲ್ಲಿ ಮಹಿಳೆಯರ ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಾನವನ್ನು ಅಧ್ಯಯನ ಮಾಡುವಾಗ ಕಡ್ಡಾಯವಾಗಿ ಈ ಅಂಶಗಳನ್ನು ಗಮನಿಸಬೇಕಾಗುತ್ತದೆ. ಸಂಸ್ಕೃತಿಯ ಸೃಷ್ಟಿ ಬೆಳವಣಿಗೆ ಮತ್ತು ಉಳಿವಿನಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುವುದನ್ನು ಅನೇಕ ವಿದ್ವಾಂಸರು ನಂಬುತ್ತಾರೆ (ಡಾ.ಆರ್. ಇಂದಿರಾ, ೨೦೦೨, ಪು. ೧೫೦).

ದಲಿತ ಮಹಿಳಾ ಸಮುದಾಯಗಳು ಪರಂಪರೆಯನ್ನು ಮರುರೂಪಿಸಿಕೊಳ್ಳಲು ಅವರ ದುಡಿಮೆ, ಸಂಸ್ಕೃತಿ, ಅನುಭಾವಗಳು ಕಾರಣವಾಗುತ್ತವೆ. ಇವುಗಳ ಹಿನ್ನೆಲೆಯಲ್ಲಿ ದಲಿತ ಮಹಿಳಾ ಸಂಸ್ಕೃತಿ ರಚನೆಯನ್ನು ಅಧ್ಯಯನ ಮಾಡುವುದಕ್ಕೆ ನಮಗೆ ಜಾನಪದದ ಅಸಂಖ್ಯಾತ ಆಕರಗಳು ಸಹಾಯಕಾರಿಯಾಗಿ ನಿಲ್ಲುತ್ತವೆ. 'ಭಾರತೀಯ ಸಂಸ್ಕೃತಿ' ಎಂದು ಭಾರತದಲ್ಲಿರುವ ಬಹುಸಂಸ್ಕೃತಿಗಳನ್ನು ಭಾರತೀಯ ಸಂಸ್ಕೃತಿಯಲ್ಲಿ ನೋಡಲಾಗುತ್ತಿದೆ. ಆದರೆ ಅದೇ ಸಮಾಜದಿಂದ, ವ್ಯವಸ್ಥೆಯಿಂದ, ಶೋಷಣೆಗೆ ಒಳಗಾದ ಸಮುದಾಯಗಳನ್ನು ಭಾರತೀಯ ಸಂಸ್ಕೃತಿಯಲ್ಲಿ ಸೇರಿಸಿ ಅಧ್ಯಯನ ಮಾಡುವುದು ಸರಿಯಾದ ಕ್ರಮವಲ್ಲ. "ಪರಂಪರೆ ಎಂಬುವುದು ಸಮುದಾಯಗಳ ಸಮಷ್ಟಿ ಜ್ಞಾನವಿಕಾಸ. ಅದು ಬಹು ಕಾಲಘಟ್ಟಗಳನ್ನು ಏಕಕಾಲಕ್ಕೆ ಅಂತರ್ಗತ ಮಾಡಿಕೊಂಡು ಹಳೆಯ ಮತ್ತು ಹೊಸ ಎರಡೂ ಜ್ಞಾನ ಕ್ರಮಗಳನ್ನು ಸಮುದಾಯದ ಬದುಕಿನಲ್ಲಿ ಬಿಂಬಿಸುತ್ತಿರುತ್ತವೆ. ಪರಂಪರೆಯನ್ನು ಸಮುದಾಯಗಳ ಸೃಜನಶೀಲ ಪ್ರವೃತ್ತಿಯ ಪ್ರಕ್ರಿಯೆ ಎಂದೂ ಕಾಣಬಹುದು. ಹಾಗೆಯೇ ಅದು ಸಂಸ್ಕೃತಿಗಳು ವಿಕಾಸವಾಗುವುದಕ್ಕೆ ಇರುವ ಒಂದು ವ್ಯವಸ್ಥೆ. ಸಮಾಜದ ಸಂಬಂಧಗಳನ್ನು ಸೃಜನಶೀಲವಾಗಿ ಬಂಧಿಸಲು ಪರಂಪರೆಯು ಯಾವತ್ತೂ ಕ್ರಿಯಾಶೀಲವಾಗಿರುತ್ತದೆ. ಹೀಗಾಗಿಯೇ ಪರಂಪರೆಯನ್ನು ಸಮುದಾಯಗಳ ಪ್ರಜ್ಞಾ ಪ್ರವಾಹವೆಂತಲೂ ಗುರುತಿಸಬೇಕಾಗುತ್ತದೆ. ಒಂದು ಸ್ಥಳೀಯ ಜ್ಞಾನ ಕ್ರಮವು ವಿಕಾಸವಾಗಲು ಪರಂಪರೆಯ ಅರಿವು ಇರಲೇಬೇಕಾಗುತ್ತದೆ" (ಮೊಗಳ್ಳಿಗಣೇಶ್, ೨೦೦೫, ಪು. ೩೭). ಈ ಹಿನ್ನೆಲೆಯಲ್ಲಿಯೇ ದಲಿತ ಸಮುದಾಯಗಳು ತಮ್ಮ ಪರಂಪರೆಯ ಕುರುಹುಗಳನ್ನು ಅವರ ಜೀವನ ವಿಧಾನಗಳಲ್ಲಿ ಅಳವಡಿಸಿಕೊಂಡು ಉಳಿಸಿಕೊಂಡು ಬಂದಿರುವುದನ್ನು ಕಾಣಬಹುದು. ಇಂತಹ ಪರಂಪರೆಯ ಕುರುಹುಗಳನ್ನು ಉಳಿಸಿ, ಬೆಳೆಸಿಕೊಂಡು ಬಂದ ಕೀರ್ತಿ ದಲಿತ ಮಹಿಳೆಯರಿಗೆ ಸಲ್ಲುತ್ತದೆ. ಆದರೆ ದಲಿತ ಮಹಿಳೆಯರು ಬೆಳೆಸಿಕೊಂಡು ಬಂದ ಇಂತಹ ಉನ್ನತ ಸಂಸ್ಕೃತಿಯನ್ನು ತಮ್ಮ ಹಿತಕ್ಕೆ ತಕ್ಕಂತೆ ಮೇಲ್ಜಾತಿ, ಮೇಲ್ವರ್ಗದ ಜನಗಳು ಪರಿವರ್ತಿಸಿದ ನಿದರ್ಶನಗಳು ಹಲವಾರಿವೆ. ದಲಿತ ಮಹಿಳೆಯರ ಸಾಂಸ್ಕೃತಿಕ ಹಿನ್ನೆಲೆಯಿಂದ ದಲಿತ ಪರಂಪರೆಯನ್ನು ನಾವು ಪರಿಭಾವಿಸಿಕೊಳ್ಳಲು ಸಾಧ್ಯವಾಗುತ್ತದೆ.

ಪ್ರಸ್ತುತ ಅಧ್ಯಾಯದಲ್ಲಿ ದಲಿತ ಸಮುದಾಯದ ನಂಬಿಕೆ, ಸಾಹಿತ್ಯ, ಆಚರಣೆಗಳ ಹಿನ್ನೆಲೆಯಲ್ಲಿ ದಲಿತ ಮಹಿಳೆಯ ಸಂಸ್ಕೃತಿಯನ್ನು ಗುರುತಿಸಿಕೊಳ್ಳಲು ಪ್ರಯತ್ನಿಸಲಾಗುವುದು. ದಲಿತ ಮಹಿಳೆಯ ಸಾಂಸ್ಕೃತಿಕ ರಚನೆ ಅವುಗಳಲ್ಲಾದ ಪಲ್ಲಟಗಳನ್ನು ಈ ಕೆಳಗಿನ ಕ್ರಮಗಳ ಮೂಲಕ ಅಧ್ಯಯನ ಮಾಡುವುದು ಸೂಕ್ತವೆನಿಸುತ್ತದೆ.

೧. ನಿಸರ್ಗನಿಷ್ಠ ತತ್ವ
೨. ಮಾತೃಮೂಲ ಗುಣ
೩. ಫಲವಂತಿಕೆ ನೀತಿ
೪. ವಿಶ್ವಾತ್ಮಕ ಪ್ರಜ್ಞೆ

ಇವುಗಳ ವಿವರಗಳನ್ನು ಈ ಕೆಳಗಿನಂತೆ ನೋಡೋಣ;

೧. ನಿಸರ್ಗನಿಷ್ಠ ತತ್ವ: ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿಗಳು ನಿಸರ್ಗದ ಕೂಸುಗಳು. ಭೂಮಿಯ ಮೇಲಿನ ಎಲ್ಲಾ ವ್ಯವಹಾರಗಳು ಫಲಿತಗೊಳ್ಳುವುದು ನಿಸರ್ಗನಿಷ್ಠ ತತ್ವದ ಆಧಾರದ ಮೇಲೆಯೇ. ಮನುಷ್ಯನ ಹುಟ್ಟು ಬೆಳವಣಿಗೆಗಳು ಈ ಹಾದಿಯಲ್ಲಿ ನಡೆದು ತನ್ನದೇ ಆದ ಸಂಸ್ಕೃತಿಯನ್ನು ರೂಪಿಸಿಕೊಂಡಿವೆ. ತನ್ನದೇ ಎನ್ನುವುದಕ್ಕಿಂತ ನಿಸರ್ಗದಿಂದ ರೂಪಿಸಲ್ಪಟ್ಟಿದ್ದು ಎಂದು ಹೇಳಬೇಕಾಗುತ್ತದೆ.

ಭೂಮಿಯ ಮೇಲೆ ಮೊದಲು ಮಾನವ ಸೃಷ್ಟಿಯಾದಾಗ ಅಲೆಮಾರಿ ಜೀವನವನ್ನು ನಡೆಸುತ್ತಿದ್ದ. ಆಹಾರಕ್ಕಾಗಿ ಗೆಡ್ಡೆ, ಗೆಣಸುಗಳನ್ನು ತಿನ್ನುತ್ತಿದ್ದ. ಇಂತಹ ಮಾನವನನ್ನು ವಿಜ್ಞಾನಿಗಳು ಆಫ್ರಿಕಾದ ಟಾಂಗಾನಿಕ ಜಲ ಶಿಲೆಯಲ್ಲಿ ಸತತ ೨೦ ವರ್ಷಗಳ ಶೋಧದಿಂದ ಕಂಡು ಹಿಡಿದಿದ್ದಾರೆ. ಈ ಕಾಲದ ಮನುಷ್ಯ ಮಂಗನ ತಲೆ ಬುರುಡೆಯನ್ನು ಹೊಂದಿದ್ದು ಮಂಗಗಳು ಬಳಸುವ ರೀತಿಯಲ್ಲಿ ಯಾವುದೋ ಕಡ್ಡಿಗಳನ್ನೇ ಆಯುಧಗಳಾಗಿ ಉಪಯೋಗಿಸುತ್ತಿದ್ದ ಹಾಗೂ ವಿವೇಕರಹಿತನಾಗಿದ್ದ ಎಂದು ಹೇಳುತ್ತಾರೆ. ನಿಜವಾದ ಮಾನವ, ಯೋಚಿಸುವಂತಹ ಮಾನವ ಸೃಷ್ಟಿಯಾಗಿದ್ದು ಪ್ಲೆಸ್ಟೋಸೀನ್ ಕಾಲದಲ್ಲಿ ಎಂದು ಹೇಳಲಾಗುತ್ತಿದೆ. 'ಇದು ೧೦೦-೧೨೫ ಮಿಲಿಯನ್ ವರ್ಷಗಳ ಹಿಂದೆ ಪ್ರಾರಂಭವಾಯಿತು. ಇದುವೆ ಹಿಮಾನೀ ಅವಧಿಯೆಂದು ಹೆಸರಾಯಿತು. ಜಾವಾದಲ್ಲಿ ಪೀಕಿಂಗ್ ಬಳಿಯ ಗುಹೆಯಲ್ಲಿ, ಉತ್ತರ ಆಫ್ರಿಕಾದಲ್ಲಿ, ಯೂರೋಪಿನಲ್ಲಿ, ಭಾರತದಲ್ಲಿ ಕೂಡ ನಮ್ಮ ಪೂರ್ವಜರ ಅವಶೇಷಗಳು ದೊರಕಿವೆ. ಈ ಎಲ್ಲಾ ಅವಶೇಷಗಳ ಗುಂಪನ್ನು ಒಟ್ಟು ಸೇರಿಸಿ 'ಪಿಥಿಕಾಂಥ್ರೋಪಿಯನ್' ಎಂದು ಕರೆಯುತ್ತಾರೆ (ಪ್ರೊ. ಎ.ವಿ. ಕುಲಕರ್ಣಿ, ೨೦೦೩, ಪು. ೭೯).

ಈ ಹಂತದಲ್ಲಿ ಮಳೆ, ಗಾಳಿ, ಚಳಿಗಳಿಂದ ತನ್ನ ಜೀವ ರಕ್ಷಣೆ ಮಾಡಿಕೊಳ್ಳುವ ಸಲುವಾಗಿಯೇ ನಿಸರ್ಗ ನಿರ್ಮಿಸಿರುವ ಗವಿ, ಬಂಡೆಯ ಗೂಡುಗಳಲ್ಲಿ ಮಾನವ ತಂಗಿರಬೇಕು. 'ಚೀನಾದೇಶದ ಪೀಕಿಂಗ್ ಪಟ್ಟಣದ ಬಳಿಯ ಗುಹೆ ಮಾನವ ಚರಿತ್ರೆಯಲ್ಲಿ ಅಚ್ಚಳಿಯದೆ ಕೀರ್ತಿ ಸಂಪಾದಿಸಿದ. ಈ ಗುಹೆಯಲ್ಲಿ ನಾವು ನಮ್ಮ ಪೂರ್ವಜರನ್ನು ಕಂಡಿದ್ದು ಮಾತ್ರವಲ್ಲದೆ ಅವರ ಜೀವನದ ಬಗ್ಗೆಯೂ ಸಹ ಈ ಗುಹೆ ಬೆಳಕು ಚೆಲ್ಲುತ್ತದೆ. ಈ ಗುಹೆಯಲ್ಲಿ ಪೀಕಿಂಗ್ ಮಾನವನ ಮೂಳೆಗಳು, ಅವನು ಉಪಯೋಗಿಸುತ್ತಿದ್ದ ಸಾಮಗ್ರಿಗಳೂ ದೊರೆತಿವೆ. ಬೆಂಕಿ ಅವಶೇಷಗಳು ದೊರೆತಿರುವುದು ಆಶ್ಚರ್ಯಕರವಾದ ಸಂಗತಿಯಾಗಿದೆ (ಅದೇ ಪುಟ. ೮೦). ಹೋಮೋ ಇರೆಕ್ಟಸ್ ಮಾನವ ಭಾಷೆಯನ್ನು ಕಲಿಯುತ್ತಿದ್ದ ಎಂದು ವೈಜ್ಞಾನಿಕವಾಗಿ ಸಾಬೀತು ಮಾಡಲಾಗಿದೆ. ಬೆಂಕಿ ಅನ್ವೇಷಣೆ, ಮಾತು ಕಲಿಕೆ ಇವು ಅವನ ಸಂಸ್ಕೃತಿಯ ವಿಕಾಸಕ್ಕೆ ಮೂಲವಾದವು. ಸ್ವಾನ್‌ಕೋಂಬ್ ಹಾಗೂ ನಿಯಾಂಡ್ರಥಾಲ್ ಮಾನವರು ಮಳೆ, ಗಾಳಿ, ಬಿಸಿಲುಗಳಿಗೆ ಹೆದರಿ ಗುಹೆಗಳಲ್ಲಿ ವಾಸಿಸುತ್ತಿದ್ದಾಗ ತನಗೆ ಹೆಚ್ಚು ತೊಂದರೆಗಳನ್ನು ಉಂಟು ಮಾಡುತ್ತಿದ್ದ ಮಳೆ, ಗಾಳಿಗಳನ್ನು, ಬಿಸಿಲು, ಗುಡುಗು, ಸಿಡಿಲುಗಳನ್ನು ಭಯಬೀತಿಯಿಂದ ಅವುಗಳನ್ನು ದೈವತ್ವ ಭಾವನೆಗೇರಿಸಿ ನಿಸರ್ಗವನ್ನು ಆರಾಧಿಸಲು ಶುರು ಮಾಡಿರಬೇಕು. ಬೀಜ ಮಣ್ಣಿನಲ್ಲಿ ನೆಟ್ಟಾಗ ಮೊಳಕೆ ಬರುವುದನ್ನು ನೋಡಿದ ಮಾನವ, ಹೆಣ್ಣಿನ ಗರ್ಭದಿಂದ ಮಗು ಬರುವುದನ್ನು ಸಮೀಕರಿಸಿ ನೋಡಲು ಪ್ರಾರಂಭಿಸಿದ. ಇವೆಲ್ಲವೂ ಪ್ರಕೃತಿಯಿಂದಲೇ ಎಂಬುವುದನ್ನು ಅರಿತ ಅವನು ಭೂಮಿ, ಬೆಳೆ, ಹೆಣ್ಣನ್ನು ಪೂಜನೀಯ ಭಾವದಿಂದ ಸ್ಮರಿಸಲು ಪ್ರಾರಂಭಿಸುತ್ತಾನೆ. ಭೂಮಿ ಮತ್ತು ಹೆಣ್ಣು ಎರಡೂ ಘಟಕಗಳನ್ನು ಒಂದೇ ಅಳತೆ ಗೋಲಿನಿಂದ ಸಮೀಕರಿಸಿ ನೋಡಲು ಇದು ಮೂಲವಾಯಿತು.

ಈ ಹಿನ್ನೆಲೆಯಲ್ಲಿಯೇ ಭೂಮಿ ತಾಯಿ ಎಂದು ಭೂಮಿಗೆ ತಾಯಿಯನ್ನು ಹೋಲಿಸಿ ಹೇಳುವುದು. ಪ್ರಕೃತಿಯ ಎಲ್ಲಾ ಚರಾಚರಗಳನ್ನು ಗಮನಿಸಿದ ಆದಿಮಾನವ ತನ್ನನ್ನು ತನ್ನ ಗುಂಪು ನೆಲೆಗೊಂಡಿರುವ ಸ್ಥಳಗಳನ್ನು ನಿಸರ್ಗನಿಷ್ಠ ಹೆಸರುಗಳಿಂದಲೇ ಗುರುತಿಸಿಕೊಳ್ಳಲು ಪ್ರಾರಂಭಿಸಿದ. ನಿಸರ್ಗ ದೈವವು ಇಡೀ ಜೈವಿಕ ಪರಂಪರೆಯನ್ನೇ ನಿಸರ್ಗ ದೇವರಾಗಿ ಮಾರ್ಪಡಿಸಿದೆ. ಇದರಿಂದಲೇ ಮಾನವರು ಪರಿಸರದ ಗೊಂಬೆಗಳು ಎಂದು ಹೇಳಲಾಗುತ್ತದೆ. ಆದಿಮ ಯುಗದಲ್ಲಿ ಮಾತೃಪ್ರಧಾನ ಸಮಾಜವಿತ್ತು. ಕುಟುಂಬದಲ್ಲಿ ತಾಯಿಯೇ ಪ್ರಧಾನ ಪಾತ್ರ ವಹಿಸುತ್ತಿದ್ದಳು. ಬಸುರಿ, ಬಾಣಂತಿಯಾದ ಸಂದರ್ಭದಲ್ಲಿ ಮನೆಯಲ್ಲಿಯೇ ಇರಬೇಕಾಗಿ ಬರುತ್ತಿತ್ತು. ಆಗ ಗಂಡು ಒಬ್ಬನೇ ಬೇಟೆಗೆ ಹೋಗುತ್ತಿದ್ದ. ಮನೆಯಲ್ಲಿಯೇ ಇದ್ದು ಆಹಾರ ಸಂಗ್ರಹವನ್ನು, ಗೃಹ ಕೆಲಸಗಳನ್ನು ಮಾಡುತ್ತಿದ್ದ ಹೆಣ್ಣು ತನ್ನ ಮನೆಯ ಸುತ್ತಮುತ್ತಲು ಸಿಗುವ ಹಣ್ಣು- ಹಂಪಲುಗಳನ್ನು ಸಂಗ್ರಹಿಸುತ್ತಿದ್ದಳು. ಆಗ ಬೀಜವು ಮೊಳಕೆ ಒಡೆಯುವ, ಸಸಿಯಾಗುವ, ಮರವಾಗುವ ಕ್ರಿಯೆಯನ್ನು ಗಮನಿಸುತ್ತಿದ್ದಳು. ಚಿಕ್ಕ ಕೋಲು, ಚೂಪುಗಲ್ಲಿನಿಂದ ಭೂಮಿಯನ್ನು ಅಗೆದು ಬೀಜವನ್ನು ಬಿತ್ತಿ ಕೃಷಿಯನ್ನು ಆರಂಭ ಮಾಡಿದ ಹಿರಿಮೆ ಹೆಣ್ಣಿನದಾಗುತ್ತದೆ. ಇದೇ ಅಲ್ಲದೆ ಹಲವಾರು ಹೊಸ ಹುಡುಕಾಟಗಳಿಗೆ ಇದು ಕಾರಣವಾಗಿರಬೇಕು. ಮಡಿಕೆ ಮಾಡುವುದು, ಅಡುಗೆ ಮಾಡುವುದು, ಮನೆ ಕಟ್ಟುವುದು, ಧಾರ್ಮಿಕ ಹಾಗೂ ಸಾಂಸ್ಕೃತಿಕವಾದ ಅನೇಕ ಕಾರ್ಯಗಳು ಅವಳಿಂದಲೇ ಮೊದಲುಗೊಂಡವು. 'ಪ್ರಾರಂಭದಲ್ಲಿ ಕೃಷಿಯನ್ನು ಮಾಡುತ್ತಿದ್ದ ಹೆಣ್ಣು ಸಮೃದ್ಧಿಗೋಸ್ಕರ ನಡೆಸುವ ಕೃಷಿ ಆಚರಣೆಗಳನ್ನು ನಡೆಸಿಕೊಡುವ ಹೊಣೆಗಾರಿಕೆಯನ್ನು ಹೊತ್ತಳು' (ಸಿದ್ಧಲಿಂಗಯ್ಯ, ೨೦೦೫, ಪು. ೧೭). ಈಗಲೂ ಹೊಲೆಮಾದಿಗರು ಮಾಡುವ ಆಚರಣೆಗಳಲ್ಲಿ ಈ ಗುರುತುಗಳು ಇವೆ. ಈ ಕಾರಣಕ್ಕಾಗಿಯೇ ದಲಿತ ಸಮುದಾಯದಲ್ಲಿ ಮಾತೃಪ್ರಧಾನತೆ ಇದೆ ಎಂದು ಹೇಳಲಾಗುವುದಿಲ್ಲ. ಅದು ಕೇವಲ ಸಂಕೇತಗಳ ಮೂಲಕವಷ್ಟೇ ಆಚರಣೆಯಲ್ಲಿರುವುದನ್ನು ನೋಡಬಹುದು.

'ಆದಿಮ ಯುಗದಲ್ಲಿ ಮಾನವನನ್ನು ಪ್ರಧಾನವಾಗಿ ಕಾಡಿದ್ದ ಎರಡು ಅಂಶಗಳು

೧. ಹುಟ್ಟು

೨. ಸಾವು

ಪ್ರಕೃತಿಯ ವೈಚಿತ್ರ್ಯದಲ್ಲಿ ಗರ್ಭ ಧರಿಸುವುದು ಒಂದು ವಿಸ್ಮಯಕಾರಕವಾದ ಅಂಶವಾಗಿದೆ. ಹೆಣ್ಣಿನ ಈ ಸಹಜ ಗುಣವು ಅವಳಿಗೆ ಒಂದು ರೀತಿಯ ಉನ್ನತವಾದ ಸ್ಥಾನ ದೊರಕಿಸಿ ಕೊಡುವಲ್ಲಿ ಮೊದಲ ಕಾರಣವಾಯಿತು. ಹೆಣ್ಣು ಗರ್ಭ ಧರಿಸುವಲ್ಲಿ ಗಂಡಿನ ಪಾತ್ರ ಇದೆ ಎಂಬುವುದು ಅವನ ಅರಿವಿಗೆ ಬಂದಿರಲಿಲ್ಲ. ಸತ್ತವರು ಮತ್ತೆ ಗರ್ಭದಲ್ಲಿ ಬಂದು ಸೇರುತ್ತಾರೆ ಎಂಬ ನಂಬಿಕೆ ನೆಲೆಗೊಂಡಿತ್ತು. ಪ್ರಕೃತಿಯ ಎಲ್ಲಾ ವೈಚಿತ್ರ್ಯಗಳನ್ನು ಬಿಡಿಸಲಾಗದ ನಿಗೂಢಗಳನ್ನು ಗಮನಿಸಿದ ಆದಿಮ ಮನುಷ್ಯ ತನ್ನನ್ನು ಮೀರಿದ ಅಗೋಚರ ಶಕ್ತಿಯೊಂದಿದೆ ಎಂದು ನಂಬಿದ. ಈ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನ್ನ ಒಳ್ಳೆಯದನ್ನು ಸಾಧಿಸಿಕೊಳ್ಳಬೇಕೆಂಬುವುದು ಅವನ ಉದ್ದೇಶವಾಯಿತು. ಯಾಕೆಂದರೆ ನಿಸರ್ಗದ ಒಡಲಲ್ಲಿ ಬಾಳುತ್ತಿದ್ದ ಅವನಿಗೆ ಸಹಜವಾಗಿಯೇ ನೂರೆಂಟು ಕಂಟಕಗಳು ಎದುರಾಗುತ್ತಿದ್ದವು. ಆದ್ದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಮೂಲಕ ತನಗೆ ಒದಗುವ ಕಂಟಕಗಳಿಂದ ಪಾರಾಗಬೇಕು ಎಂಬುವುದು ಅವನ ತರ್ಕವಾಗಿತ್ತು. ಹೀಗಾಗಿ ಆರಂಭದ ಅವನ ದೇವರ ಕಲ್ಪನೆಯು ಒಂದೇ. ತಾನು ದೇವರ ಕೃಪೆಯಿಂದ ದೊಡ್ಡವನಾಗಬೇಕು, ಸಂಪಾದಿಸಬೇಕು ಎಂಬ ಸ್ವಾರ್ಥಕ್ಕಿಂತ ತನಗೆ ಒದಗುವ ಸಂಕಷ್ಟಗಳಿಂದ ಪಾರಾಗಬೇಕು ಎಂಬ ಸಹಜ ಉದ್ದೇಶವಿತ್ತು.

ಅಂತೆಯೇ ಅದರಿಂದ ಅಗೋಚರ ಶಕ್ತಿಯನ್ನು ಒಲಿಸಿಕೊಳ್ಳುವ ಬಗೆ ಹೇಗೆ ಎಂಬ ಪ್ರಶ್ನೆಗೆ ಅವನು ಎರಡು ರೀತಿಯಲ್ಲಿ ದೈವವನ್ನು ಅಥವಾ ಶಕ್ತಿಯನ್ನು ಗೆಲ್ಲುವ ಪ್ರಯತ್ನ ಮಾಡಿದ. ಗೆಲ್ಲುವ ಪ್ರಯತ್ನದ ಫಲವಾಗಿ

೧. ಮಾಟದ ಮೂಲಕ ನಿಯಂತ್ರಿಸುವುದು

೨. ಆರಾಧನೆಯ ಮೂಲಕ ಒಲಿಸಿಕೊಳ್ಳುವುದು' (ಹಿ.ಚಿ. ಬೋರಲಿಂಗಯ್ಯ, ೨೦೦೦, ಪು. ೧೦).

ತನ್ನ ವಿರುದ್ಧ ಶಕ್ತಿಗಳನ್ನು ಗೆಲ್ಲುವ ಸಲುವಾಗಿ ಮಾಟದ ರೂಪದಲ್ಲಿ ನಿಯಂತ್ರಿಸಿದರೆ ಅವನಿಗಿದ್ದ ಎರಡನೆ ದಾರಿ ಅದೇ ಶಕ್ತಿಗಳನ್ನು ಭಕ್ತಿ-ಭಾವಗಳಿಂದ ಹೋಲಿಸಿಕೊಳ್ಳುವುದು. ಮುಂದೆ ಗರ್ಭ ಧರಿಸುವಲ್ಲಿ ನನ್ನ ಪಾತ್ರವೂ ಇದೆ ಎಂದು ಗೊತ್ತಾದಾಗ ಪುರುಷನ ಕೈ ಮೇಲಾಯಿತು.

ಆದಿಮಾನವನಿಗೆ ಸಾವು ದೊಡ್ಡ ಸಮಸ್ಯೆಯಾಗಿ ಬಗೆಹರಿಯದ ಸಮಸ್ಯೆಯಾಗಿ ಕಾಡಿರಬೇಕು. ಸತ್ತಾಗ ಪ್ರಾಣ ಎಲ್ಲಿ ಹೋಗುತ್ತದೆ? ಏನಾಗುತ್ತದೆ? ಎಂಬ ಕುತೂಹಲ ಹಾಗೂ ಈಗಿರುವ ಮನುಷ್ಯ ಸ್ವಲ್ಪದರಲ್ಲಿ ಹೇಗೆ ಸಾಯುತ್ತಾನೆ? ಎಂಬ ಭಯಗಳು ಇವನ ಅನುಭವಕ್ಕೆ ಬರತೊಡಗಿದವು. ಇದು ಯಾವುದೋ ಶಕ್ತಿ ಮಾಡುತ್ತಿದೆ ಎಂಬ ಕಲ್ಪನೆಯನ್ನು ಮಾಡಿಕೊಳ್ಳಲು ಪೂರಕವಾದ ವಾತಾವರಣವನ್ನು ಒದಗಿಸುತ್ತಿತ್ತು.

ಆದಿಮಾನವನನ್ನು ಎರಡು ಅಂಶಗಳು ಕಾಡಿರುವುದು

೧. ನಿಸರ್ಗದಿಂದಾಗುವ ಸಮೃದ್ಧಿ

೨. ನಿಸರ್ಗದಿಂದಾಗುವ ನಾಶ

ನಿಸರ್ಗದಲ್ಲಿರುವ ಮಳೆ, ಗಾಳಿ, ಬಿಸಿಲು, ಬೆಂಕಿ ಎಲ್ಲವೂ ಮನುಷ್ಯನಿಗೆ ನಿತ್ಯ ಚಟುವಟಿಕೆಗಳಿಗೆ ಅಗತ್ಯವಾಗಿ ಬೇಕಾಗಿರುವಂತಹವು. ಇಂತಹ ಗುಣಗಳೇ ಕೆಲವೊಮ್ಮೆ ನಾಶಾತ್ಮಕ ರೀತಿಯಲ್ಲಿ ಪರಿಣಮಿಸಿದಾಗ ಅವನಿಗೆ ಅತ್ಯಂತ ಆಶ್ಚರ್ಯವಾಗಿರಬೇಕು. ಇವೆರಡು ಒಟ್ಟೊಟ್ಟಿಗೆ ನಡೆಯುತ್ತಿರಬೇಕಾದರೆ ಅದನ್ನು ಮನುಷ್ಯನ ಹುಟ್ಟು ಸಾವುಗಳಿಗೆ ತುಲನೆ ಮಾಡಿ ನೋಡಲು ಪ್ರಾರಂಭಿಸಿದ. ಇದೇ ಗುಣವನ್ನು ಭೂಮಿಯಲ್ಲಿಯೂ ಗುರುತಿಸಿಕೊಂಡ. ಇದು ಹೆಣ್ಣು ಮತ್ತು ಭೂಮಿಯು ಸಮಾನಗುಣಗಳನ್ನು ಹೊಂದಿರುವುದರಿಂದ ಇವುಗಳಿಗೆ ಸಂಬಂಧಿಸಿದಂತೆ ತನ್ನ ಸುತ್ತ ಮನಸ್ಸಿನಲ್ಲಿರುವ ಭಯ-ಭಕ್ತಿಯನ್ನು ಭೂಮಿ, ಹೆಣ್ಣುಗಳನ್ನು ದೇವತೆಯ ರೂಪದಲ್ಲಿ ಕಾಣತೊಡಗಿದ. ಇದಕ್ಕೆ ಹೇಳುವುದು ಎಲ್ಲಕ್ಕೂ ಸಂಸ್ಕೃತಿಯೇ ಮೂಲವೆಂದು. ಮಾನವ ತನ್ನ ಅಗತ್ಯಕ್ಕೆ ತಕ್ಕ ಹಾಗೆ ಪರಿಸರವನ್ನು ರೂಪಿಸಿಕೊಳ್ಳುವಾಗ ತಾನು ಬಳಸುವ ವಸ್ತುವಿಗೆ, ತನ್ನ ಗುರುತಿಗೆ, ತನ್ನ ಗುಂಪಿಗೆ, ತನ್ನ ದೈವಕ್ಕೆ ನಿಸರ್ಗದ ಗುಣಗಳನ್ನೇ ಹೊಂದಿಸಿಕೊಂಡಿದ್ದಾನೆ. ಪ್ರತಿಯೊಂದು ಸಂಸ್ಕೃತಿಗಳು ಪರಿಸರದ ಸಂವೇದನೆಯನ್ನು ಅನುಸರಿಸಿಯೇ ತಮ್ಮ ಸಮುದಾಯದ ಮೌಲ್ಯ ವ್ಯವಸ್ಥೆಯನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಬೇಟೆ ಯುಗದ ಸಂಸ್ಕೃತಿಯಲ್ಲಿ ಕಾಡಿನಲ್ಲಿ ಅಲೆದಾಡುತ್ತ ಪರಿಸರಕ್ಕೆ ಮುಖಾಮುಖಿಯಾಗಿ ಹೋರಾಡುವಾಗ ದೈವ ಕಲ್ಪನೆಯನ್ನು ನಿಸರ್ಗದಲ್ಲಿ ಕಂಡುಕೊಂಡರೆ ಕೃಷಿ ಯುಗದಲ್ಲಿ ಇಡೀ ಪರಿಸರವನ್ನೇ ಪ್ರತಿ ಸೃಷ್ಟಿಸುವ ಕ್ರಿಯಾ ಸಂಸ್ಕೃತಿಯನ್ನು ಕಾಣುತ್ತೇವೆ. ಹೀಗಾಗಿಯೇ ಮಾನವ ನಿಸರ್ಗನಿಷ್ಠ ತತ್ವಕ್ಕೆ ಬದ್ಧನಾಗಿ ನಿಸರ್ಗವನ್ನೇ ದೈವತ್ವ ಕಲ್ಪನೆಗೆ ಏರಿಸಿಕೊಂಡ ಎಂದು ತಿಳಿದರೂ ಪರಿಸರವನ್ನು ತನ್ನ ಅನುಕೂಲಕ್ಕೆ ತಕ್ಕ ಹಾಗೆ ತಿರುಗಿಸಿಕೊಳ್ಳುವಾಗಲೂ ನಿಸರ್ಗವನ್ನು ದೈವತ್ವದಿಂದಲೇ ಕಂಡಿದ್ದಾನೆ. ಜನಪದ ಪರಂಪರೆಯು ನಿಸರ್ಗಕ್ಕೆ

ಸಂಬಂಧಿಸಿದಂತೆ ಅಪಾರವಾದ ಮಾಹಿತಿಯನ್ನು ಒಳಗೊಂಡಿದೆ. ಸಂಕ್ರಾಂತಿಯ ಪಬ್ಬದಲ್ಲಿ ಇಡೀ ನಿಸರ್ಗವನ್ನು ದೈವತ್ವವೆಂಬಂತೆ ಭಾವಿಸಲಾಗುತ್ತದೆ. ಕೃಷಿಗೆ ಸಂಬಂಧಿಸಿದ ಸಲಕರಣೆಗಳನ್ನು ಅಷ್ಟೇ ಅಲ್ಲದೆ ಹೊಲ-ಗದ್ದೆಯಲ್ಲಿ ಬೆಳೆಯುವ ಬೆಳೆಗಳನ್ನು, ಆ ಬೆಳೆಗಳಿಗೆ ಹಾಕುವ ಆಕಳದ ಸೆಗಣಿಯನ್ನು ಪೂಜಿಸಲಾಗುತ್ತದೆ. ಆಹಾರ ಸೃಷ್ಟಿಗೆ ಇವು ಮೂರು ಮುಖ್ಯವಾದವು. ಈ ಆಚರಣೆಗಳಲ್ಲಿ ನಿಸರ್ಗದ ನಾಶಾತ್ಮಕ ಪ್ರವೃತ್ತಿಯು ಯಾವುದೇ ಅಪಾಯ ತಂದೊಡ್ಡದಿರಲೆಂದು ಕೂಡ ಪೂಜಿಸಲಾಗುತ್ತದೆ. ಪರಿಸರದ ಎಲ್ಲಾ ಬಗೆಯ ಕ್ರಿಯೆಗಳು ಸಂಸ್ಕೃತಿಯಾಗಿ ರೂಪಗೊಂಡಿವೆ. ಆದಿಮಾನವನಿಂದ ಆಧುನಿಕ ಮಾನವನವರೆಗೂ ಪರಿಸರವನ್ನು ಸಂಸ್ಕೃತಿಯಾಗಿಸುವ ವಿವಿಧ ಸಾಂಸ್ಕೃತಿಕ ಹಂತಗಳು ಕಂಡುಬರುತ್ತವೆ. ಈ ಹಂತಗಳಲ್ಲಿ ಎಂದರೆ ಸಂಸ್ಕೃತಿ ವಿಕಾಸದಲ್ಲಿ ಭಾಷೆ ಪ್ರಮುಖ ಪಾತ್ರ ವಹಿಸುತ್ತದೆ.

ಪ್ರತಿಯೊಂದು ಪ್ರದೇಶಗಳು ಭಿನ್ನವಾಗಿ ರೂಪಗೊಳ್ಳುವುದು, ಭಿನ್ನ ಅನುಭವಗಳನ್ನು ಹೊಂದುವುದು, ಭಿನ್ನ ಸಂಸ್ಕೃತಿಯನ್ನು ರೂಢಿಸಿಕೊಳ್ಳುವುದು, ಭಿನ್ನ ಜನಸ್ಥಿತಿಯನ್ನು ಹೊಂದುವುದು ಆಯಾ ಪರಿಸರದ ಕಾರಣದಿಂದಲೇ ಎಂದು ಹೇಳಬೇಕಾಗುತ್ತದೆ. ಪರಿಸರವು ಒಂದು ಪ್ರದೇಶಕ್ಕೆ ತಕ್ಕ ಹಾಗೆ ಹೇಗೆ ರೂಪಗೊಂಡಿರುತ್ತದೆಯೋ ಹಾಗೆಯೇ ಅದೇ ಪ್ರದೇಶದಲ್ಲಿರುವ ಸಮುದಾಯಗಳು ಆ ಪ್ರದೇಶದ ಪರಿಸರಕ್ಕೆ ತಕ್ಕ ಹಾಗೆ ತಮ್ಮ ಜೀವನವನ್ನು ರೂಪಿಸಿಕೊಂಡಿರುತ್ತವೆ. ನಿಸರ್ಗದ ಹಿನ್ನೆಲೆಯಿಂದ ಜಿಲ್ಲೆಯು ಕಾಡು, ನೀರು, ಬೆಟ್ಟ, ಖನಿಜ ಸಂಪತ್ತಿನಿಂದ ಸಂಪದ್ಭರಿತವಾಗಿದೆ. ಗಾಳಿ ಪ್ರಕೃತಿಯ ಭಾಗ. ಗಾಳಿ ಇಲ್ಲದೆ ಮನುಷ್ಯನ ಬದುಕು ಇಲ್ಲ. ಮನುಷ್ಯ, ಪ್ರಾಣಿ, ಗಿಡ ಎಲ್ಲವುಗಳು ಬದುಕಬೇಕೆಂದರೆ ಗಾಳಿ ತುಂಬ ಮುಖ್ಯ. ಇದನ್ನು ಅರಿತ ಪ್ರಾಚೀನ ಮಾನವ ಗಾಳಿಯನ್ನು ಆರಾಧಿಸಲು ತೊಡಗಿದಾಗಿನಿಂದ ಗಾಳಿಯನ್ನು ದೈವತ್ವದಲ್ಲಿರಿಸಿ ಪೂಜಿಸಲಾಯಿತು. ತಾಯಿ ಇಲ್ಲದೆ ಮಗುವಿಲ್ಲ. ಮಗುವಿನ ಸೃಷ್ಟಿಗೆ, ಬೆಳವಣಿಗೆಗೆ ತಾಯಿಯ ಮಹತ್ವವನ್ನು ಕಂಡುಕೊಂಡ ಮಾನವ ಪ್ರಕೃತಿಯನ್ನು ಗಾಳಿಯೊಂದಿಗೆ, ತಾಯಿಯೊಂದಿಗೆ ಸಮೀಕರಿಸಿ ಗಾಳೆಮ್ಮ ಎಂದು ಮಾಡಿಕೊಂಡು ಪೂಜಿಸಲು ಪ್ರಾರಂಭಿಸಿರಬೇಕು. ನಿಸರ್ಗದ ಗಾಳಿ ಹಾಗೂ ನಿಸರ್ಗ ಸೃಷ್ಟಿಯ ತಾಯಿಯ ಮಿಶ್ರಣವೇ ಗಾಳೆಮ್ಮ.

ಹೊಸಪೇಟೆಯಿಂದ ೫ ಕಿ.ಮೀ. ದೂರದಲ್ಲಿರುವ ಗಾಳೆಮ್ಮನ ಗುಡಿ ಗ್ರಾಮದ, ಗ್ರಾಮದೇವತೆ ಗಾಳೆಮ್ಮ. ಜನಪದರು ತಮಗೆ ಕಷ್ಟ ಬಂದಾಗ ದೇವರು ಮಾಡುವುದಾಗಿ ಹರಕೆ ಹೊತ್ತುಕೊಳ್ಳುತ್ತಾರೆ. ಇನ್ನು ಕೆಲವರು ಮಕ್ಕಳಾಗುವುದಕ್ಕೆ, ಇನ್ನು ಕೆಲವರು ಒಳ್ಳೆಯದನ್ನು ಮಾಡಲಿ ಎಂದು ಹರಕೆ ಹೊತ್ತುಕೊಂಡು ತಮ್ಮ ತಮ್ಮ ಗುಂಪಿನ ಜೊತೆ ಬಂದು ಪ್ರಾಣಿ ಬಲಿಯನ್ನು ದೇವಿಗೆ ಅರ್ಪಿಸಿ, ಪೂಜೆ ಸಲ್ಲಿಸಿ ಗಾಳೆಮ್ಮನ ಗುಡಿಯ ಪಕ್ಕದಲ್ಲೇ ಇರುವ ತುಂಗಾಭದ್ರ ಕಾಲುವೆಯ ಪಕ್ಕದಲ್ಲಿ ಅಡುಗೆ ಮಾಡಿ, ನೀರಿಗೆ ಪೂಜೆ ಮಾಡಿ ತಾವು ಉಂಡು ಇತರರಿಗೂ ಉಣಬಡಿಸಿ ಸಂತೋಷದಿಂದ ಮನೆಗೆ ಹಿಂದಿರುಗುತ್ತಾರೆ. ಈ ರೀತಿಯ ಪೂಜೆ ಮಂಗಳವಾರ ಹಾಗೂ ಶುಕ್ರವಾರದಂದು ನಡೆಯುತ್ತದೆ. ಉಳಿದ ದಿನಗಳು ನಡೆದರೂ ಅದು ಮುಖ್ಯವಾಗುವುದಿಲ್ಲವೆಂದು ಗಾಳೆಮ್ಮನ ಭಕ್ತರು ಹೇಳುತ್ತಾರೆ. ಗ್ರಾಮ ದೇವತೆಗಳೆಲ್ಲಾ ಮಂಗಳವಾರ ಹೆಚ್ಚಾಗಿ ಪೂಜೆಯನ್ನು ಬಯಸುತ್ತವೆ. ಆದರೆ ಶಿಷ್ಟ ದೇವರುಗಳಲ್ಲಿ ಇದನ್ನು ಕಾಣಲು ಸಾಧ್ಯವಿಲ್ಲ. ನಿಸರ್ಗದ ಆರಾಧನೆಯನ್ನು ಇಲ್ಲಿ ದಲಿತ ಸಮುದಾಯವು ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು. ಇಲ್ಲಿ ಹೆಚ್ಚಾಗಿ ದಲಿತ ಮಹಿಳೆಯರೇ ಬರುತ್ತಾರೆ. ಇವರ ಆರಾಧನೆಯನ್ನು ಇತರ ಜಾತಿಗಳು ಒಪ್ಪಿಕೊಂಡಿವೆ. ಇತರರೂ ಸಹ ಇಲ್ಲಿ ಬಂದು ಪೂಜೆ ಸಲ್ಲಿಸುತ್ತಾರೆ. ಆದರೆ ಇವರ ಸಂಖ್ಯೆ ದಲಿತ ಮಹಿಳೆಯರಿಗಿಂತ ಕಡಿಮೆ. ಯಾಕೆಂದರೆ ಗಾಳೆಮ್ಮ ದಲಿತರ ದೇವತೆ.

ದಲಿತರಲ್ಲಿ ಮದುವೆಯ ಸಂದರ್ಭದಲ್ಲಿ ಮದುಮಗಳಿಗೆ ಕೆಂಪು ಸೀರೆಯನ್ನು ಉಡಿಸಲಾಗುತ್ತದೆ. ಕೆಂಪು ಮುಟ್ಟಿನ ಸಂಕೇತ, ಫಲವಂತಿಕೆಯ ಸಂಕೇತವಿರಬಹುದು. ಕೆಲವು ಸಮುದಾಯಗಳಲ್ಲಿ ಮದುಮಗಳಿಗೆ ಬಿಳಿ ಅಥವಾ ಹಸಿರು ಸೀರೆಯನ್ನು ಉಡಿಸಲಾಗುತ್ತದೆ. ಇದು ಶುಭ್ರ ಹಾಗೂ ಸಮೃದ್ಧಿಯ ಸಂಕೇತವೆಂದು ಗುರುತಿಸಬಹುದು. ಈ ಸಂಕೇತಗಳನ್ನು ಸಂಸ್ಕೃತಿಯಿಂದಲೇ ಗುರುತಿಸಿಕೊಳ್ಳಲಾಗಿದೆ. ಈ ಕಾರಣದಿಂದಲೇ ನಾನು ಹೇಳಿದ್ದು ಬೇರೆ ಬೇರೆ ಪ್ರದೇಶಗಳಿಗೆ ತಕ್ಕ ಹಾಗೆ ಪರಿಸರವು ಸಂಸ್ಕೃತಿಯನ್ನು ರೂಪಿಸುತ್ತಿರುತ್ತದೆ ಎಂದು. ನೀರು ಮತ್ತು ಹಸಿರನ್ನು ಎಲ್ಲಾ ಸಮುದಾಯಗಳು ಒಂದೇ ರೀತಿಯಲ್ಲಿ ಸ್ವೀಕರಿಸಿವೆ. ಶುಭ ಕಾರ್ಯಗಳಿಗೆ ಹಚ್ಚ-ಹಸಿರಿನ ಚಪ್ಪರ ಹಾಕುವುದನ್ನು ಎಲ್ಲಾ ಸಮುದಾಯಗಳು ಪಾಲಿಸುತ್ತವೆ. ನೀರನ್ನು ಗಂಗೆಯಾಗಿ ದೈವತ್ವದ ಭಾವನೆಯಿಂದ ಕಾಣುತ್ತಾರೆ. ನಿಸರ್ಗದಲ್ಲಿನ ಅರಳಿ ಮರ, ಬೇವಿನ ಮರ, ಆಲದ ಮರಗಳ ಸಂಬಂಧವನ್ನು ಸಮುದಾಯದಲ್ಲಿ ತಮ್ಮ ನಡುವೆಯೇ ಇರುವ ಸಂಬಂಧಿಗಳಂತೆ ಮಾನವ ರೂಪಿಸಿಕೊಂಡಿದ್ದಾನೆ. ಊರುಗಳಲ್ಲಿ ಅರಳಿಕಟ್ಟೆ ನೈತಿಕತೆಯ ಸಂಕೇತದಂತೆ ಹೆಣ್ಣು-ಗಂಡಿನ ಸಂಯೋಗ ಪ್ರತಿಮೆಯಾಗಿದೆ. ನಿಸರ್ಗದಲ್ಲಿನ ಪಶು-ಪಕ್ಷಿಗಳಿಂದಲೇ ಮಾನವನಿಗೆ ಅನೇಕ ಬಗೆಯ ಅರಿವು ಉಂಟಾಗಿದೆ. ಆದಿಮ ಯುಗದ ಮಾನವನ ಸಂಸ್ಕೃತಿಯನ್ನು ತಿಳಿಯಲು ಗುಹೆಗಳಲ್ಲಿ ಬಿಡಿಸಿದ ನಿಸರ್ಗ, ಪಶು-ಪಕ್ಷಿ ಚಿತ್ರಗಳೇ ಆಧಾರವಾಗಿವೆ. 'ಕ್ರೋಮ್ಯಾಗ್ನನ್ ಮಾನವ ಬಳಸುವ ಆಯುಧಗಳು ಅತ್ಯುತ್ತಮ ಮಟ್ಟದವು. ನುಣುಪಾಗಿ, ಚೂಪಾಗಿ, ಹರಿತವಾಗಿ, ಆಧುನಿಕವಾಗಿದ್ದವು. ಇವರಲ್ಲಿ ಗುಂಪು ಜೀವನ, ಧರ್ಮ ಶ್ರದ್ಧೆ ಇತ್ತು. ಕಲಾ ಪ್ರೇಮಿಗಳಾದ ಇವರು ಗುಹೆಗಳ ಗೋಡೆಗಳ ಮೇಲೆ ಅಂದಿನ ಕಾಲದ ಕಾಡು ಕುದುರೆಯ ಚಿತ್ರವನ್ನು ಅಂದವಾಗಿಯೇ ಬರೆದಿದ್ದಾರೆ. ಅಲ್ಲದೆ ಕಾಡೆಮ್ಮೆಯ ಬೃಹತ್ ಗಜಗಳಾದ ಮ್ಯಾಮತ್‌ಗಳ ಮತ್ತು ಇತರ ಕಾಡು ಜೀವಿಗಳಾದ ಜಿಂಕೆ ಮುಂತಾದ ಪ್ರಾಣಿ ಚಿತ್ರಗಳನ್ನು ಬಹಳ ಉತ್ತಮವಾಗಿ ಬರೆದಿದ್ದಾರೆ. ಆದರೆ ಈ ಚಿತ್ರಗಳಿದ್ದ ಗುಹೆಗಳಲ್ಲಿ ಇವನು ವಾಸಿಸುತ್ತಿರಲಿಲ್ಲ. ಈ ಗುಹೆಗಳೇ ಇವರಿಗೆ ದೇವಾಲಯಗಳು ಇವರು ಬೇಟೆಗೆ ಹೊರಡುವುದಕ್ಕೆ ಮುಂಚೆ ಈ ಚಿತ್ರಗಳನ್ನು ಪೂಜಿಸಿ ಹೊರಡುತ್ತಿದ್ದರು. ಬೇಟೆಯಲ್ಲಿ ಜಯ ದೊರಕಲೆಂದು ಈ ರೀತಿಯಾಗಿ ಆರಾದಿಸುತ್ತಿದ್ದರು. ಚಿತ್ರದಲ್ಲಿ ಒಂದು ರೀತಿಯ ಯಕ್ಷಿಣಿ ಶಕ್ತಿ ಇದೆ ಎಂದು ನಂಬಿದ್ದರು' (ಪ್ರೊ. ವಿ.ವಿ. ಕುಲಕರ್ಣಿ, ೨೦೦೩, ಪು. ೮೨).

ಆದಿಮಾನವ ಪರಿಸರದ ಕ್ರಿಯೆಗಳಿಂದ ಪಡೆದ ಭಯವೇ ಪರಿಸರವನ್ನು ಪೂಜನೀಯ ಭಾವದಿಂದ ಕಾಣಲು ಸಾಧ್ಯವಾಗಿದೆ. ಈಗಲೂ ನಿಸರ್ಗ ನಿರ್ಮಿತ ಹೆಸರುಗಳೇ ದಲಿತ ಸಮುದಾಯದಲ್ಲಿ ಕುಲಚಿಹ್ನೆಯಾಗಿ, ಕುಲ ದೈವವಾಗಿ, ಕುಲ ಕಸುಬಾಗಿ ಉಳಿದುಕೊಂಡು ಬಂದಿವೆ. ಇನ್ನು ಋತುಮಾನದ ದೈವಾಚರಣೆಗಳಲ್ಲಿ ಊರೊಟ್ಟಿನ ಹಬ್ಬದ ಸಂದರ್ಭಗಳಲ್ಲಿ ದಲಿತ ಮಹಿಳೆ ಪ್ರಮುಖ ಪಾತ್ರವಹಿಸುತ್ತಾಳೆ. ಗಿಡದ ಗುಣಗಳು ಕಾಯಿಗೆ, ಹಣ್ಣಿಗೆ ವರ್ಗಾಯಿಸುವ ಹಾಗೆ ದಲಿತ ಮಹಿಳೆಯ ಮೂಲಕವೆ ತನ್ನ ಮುಂದಿನ ಪರಂಪರೆಗೆ ಸಂಸ್ಕೃತಿ ವರ್ಗಾಯಿಸಿದೆ. ಅವಳ ಕೃಷಿಯೊಂದಿಗಿನ, ನಿಸರ್ಗದೊಂದಿಗಿನ ಸಂಬಂಧ ಆಚರಣೆಗಳ ಮೂಲಕ ಮುಂದುವರಿದು ಅವುಗಳ ಸಂಸ್ಕೃತಿಯನ್ನು ಭಾಷೆಯ ಮೂಲಕ ಹಿಡಿದಿಟ್ಟಿರುವ ಕೀರ್ತಿ ದಲಿತ ಮಹಿಳೆಗೆ ಸಲ್ಲುತ್ತದೆ. ಇಡೀ ನಿಸರ್ಗನಿಷ್ಠ ತತ್ವದ ಪ್ರತಿಪಾದನೆಯನ್ನು ನಿಸರ್ಗದಿಂದಲೇ ಪ್ರತಿಪಾದಿಸಿದಾಗ ಮಾತ್ರ ನಿಸರ್ಗನಿಷ್ಠವಾಗುತ್ತದೆ ಎಂದಲ್ಲ. ಭಾಷೆ, ಆಚರಣೆ, ರಚನೆಗಳಲ್ಲಿ ದೈವತ್ವದ ಧ್ಯಾನದಲ್ಲಿ ಅದನ್ನು ಅಳವಡಿಸಿಕೊಂಡಿರುವ ವಿಧಾನಗಳು ನಿಸರ್ಗನಿಷ್ಠದಿಂದಲೇ ಆಗಿರುವಂತಹವು. ಇಂತಹವುಗಳನ್ನು ದಲಿತ ಮಹಿಳೆಯೇ ಉಳಿಸಿಕೊಂಡು, ಬೆಳೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಹೊತ್ತಿದ್ದಾಳೆ. ಇದು ಅವಳ ಹಕ್ಕು ಎಂಬಂತೆ

ಪ್ರತಿಪಾದಿಸಿಕೊಂಡಿದ್ದಾಳೆ. ಆದರೆ ಅದನ್ನು ಅವಳು ಉದ್ದೇಶಪೂರ್ವಕವಾಗಿ ಗುರುತಿಸಿಕೊಳ್ಳಲು ಆಗಿಲ್ಲ. ಇದಕ್ಕೆ ಕಾರಣ ಪಿತೃಪ್ರಧಾನ ಸಮಾಜದ ಮೌಲ್ಯಗಳನ್ನು ಹಿಡಿಸಿಕೊಳ್ಳಲು, ತನ್ನ ನೆಲೆ ಕಂಡುಕೊಳ್ಳಲು, ಎದುರಾಳಿಯನ್ನು ಬಗ್ಗುಬಡಿಯಲು, ನಿಸರ್ಗವನ್ನೇ ತನ್ನ ತೆಕ್ಕೆಗೆ ತೆಗೆದುಕೊಂಡು ತಾನೇ ಶಕ್ತಿಯಾಗಿ, ದೈವವಾಗಿ ರೂಪಗೊಂಡಿದ್ದಾಳೆ. ಮಾತೃಮೂಲ ಗುಣಗಳಿಂದ ತನ್ನ ಭಕ್ತರನ್ನು ಸಂತೈಸುವ ನೆಲೆಯಲ್ಲಿ, ತನಗೆ ವಿರುದ್ಧವಿರುವವರಿಗೆ ತನ್ನ ಕ್ರೂರ ರೂಪವನ್ನು ತೋರಿಸುವ ನೆಲೆಯಲ್ಲಿಯೂ ದಲಿತ ಮಹಿಳೆ ಮಾತೃಪ್ರಧಾನ ಸಮಾಜದ ಅನನ್ಯತೆಯಾಗಿ ರೂಪ ತಳೆದಿದ್ದಾಳೆ. ಈ ಅನನ್ಯತೆಯು ಸಂಕೇತಗಳಲ್ಲಿ ಮಾತ್ರ ನಮಗೆ ಕಾಣಸಿಗುತ್ತದೆ.

೨. ಮಾತೃಮೂಲ ಗುಣ : ನಮ್ಮ ಮಾತೃ ಮೂಲ ಪರಂಪರೆಯ ನಂಬಿಕೆಗಳು ರೀತಿನೀತಿಗಳು, ಕನಸುಗಳ ಸಾಕಾರ ರೂಪವೇ ದಲಿತ ಮಹಿಳೆ. ಇಡೀ ದಲಿತ ಪರಂಪರೆಯ ಆಯಾಮಗಳನ್ನು ಗಮನಿಸುವಾಗ ಮಾತೃ ಮೂಲ ಸಂಸ್ಕೃತಿಯು ದ್ರಾವಿಡ ಪರಂಪರೆಯೊಳಗೆ ವಿಶೇಷವಾಗಿ ಮಾನವೀಯವಾದಂತಹ ಮೌಲ್ಯಗಳು ಇವೆ. ನಿಜವಾದ ಸಂಸ್ಕೃತಿ, ನಿಜವಾದ ಧರ್ಮ, ದೇಶೀಯವಾದದಂತಹ ಧರ್ಮ ಎನ್ನುವುದು ಇದ್ದರೆ ಅದು ಮಾತೃಮೂಲ ಸಂಸ್ಕೃತಿಯ ದ್ರಾವಿಡ ಪರಂಪರೆಯ ಮಹಿಳೆಯ ಮೂಲಕ.

ಭಾರತದಲ್ಲಿ ಧರ್ಮದ ಹಿನ್ನೆಲೆಯಲ್ಲಿ ವ್ಯವಹರಿಸುತ್ತಿರುವಾಗ ನಿಜವಾದ ಧರ್ಮ ಯಾವುದು? ದಲಿತ ಮಹಿಳೆಯ ಶೋಷಣೆಯ ರೀತಿನೀತಿಗಳು ಯಾವುವು? ಎಂಬುವುದಾಗಿ ನೆನಪು ಮಾಡಿಕೊಳ್ಳುವುದಾದರೆ ಭಾರತದಲ್ಲಿ ನಿಜವಾದ ಧರ್ಮ ಎಂಬುವುದು ಇದ್ದರೆ ಅದು ಮಾತೃ ಸಂಸ್ಕೃತಿಯ ಮೂಲಕ, ದ್ರಾವಿಡ ಪರಂಪರೆಯ ಮೂಲಕ, ಮಹಿಳೆಯರ ಮೂಲಕ ಹುಟ್ಟಿರುವುದೇ ನಿಜವಾದ ಅಸಲಿಯಾದಂತಹ ದೇಶೀಯವಾದಂತಹ ಧರ್ಮ. ಆದುದರಿಂದ ನಮ್ಮ ಎಲ್ಲಾ ಬಗೆಯ ಸವಾಲುಗಳಿಗೆ ನಾವು ಉತ್ತರ ಕಂಡುಕೊಳ್ಳಬೇಕಾದರೆ ಹಾಗೂ ಹೋರಾಟವನ್ನು ರೂಢಿಸಿಕೊಳ್ಳಬೇಕಾದರೆ ವಿಶೇಷವಾಗಿ ದಲಿತ ಮಹಿಳೆಯರ ಮೂಲಕವೇ ನಾವು ನಮ್ಮ ಬೌದ್ಧಿಕ ಆಲೋಚನೆಗಳನ್ನು ರೂಪಿಸಿಕೊಳ್ಳಬೇಕಿದೆ. ಯಾಕೆಂದರೆ ಈ ದೇಶದಲ್ಲಿ ಇರುವ ಎಲ್ಲಾ ಮಹಿಳೆಯರು ಒಂದೇ ಎನ್ನುವ ಅಭಿಪ್ರಾಯವನ್ನು ಅನೇಕರು ಪ್ರತಿಪಾದಿಸುತ್ತಾರೆ. ನಮ್ಮ ನಡುವೆಯೇ ಈ ಮಹಿಳೆಯರ ಅನೇಕ ಬಗೆಯ ಚರ್ಚೆಗಳು ನಡೆಯುತ್ತಿರುತ್ತವೆ. ಶ್ರೇಣೀಕೃತ ಸಮಾಜದಲ್ಲಿರುವ ಎಲ್ಲಾ ಶಾಪಗಳನ್ನು ಬಿಡಿಸಿಕೊಂಡೇ ನಾವು ನಮ್ಮ ಆಲೋಚನೆಗಳನ್ನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಪರಂಪರೆಯನ್ನು ವ್ಯಾಖ್ಯಾನಿಸಬೇಕು, ಚರಿತ್ರೆಯನ್ನು ಸರಿದಾರಿಯಲ್ಲಿ ತರಬೇಕೆಂಬ ನಮ್ಮ ವ್ಯಾಖ್ಯಾನಗಳೆಲ್ಲ ಮಣ್ಣು ಪಾಲಾಗುತ್ತವೆ. ಆದ್ದರಿಂದ ನಿಜವಾದ ದೇಶದ ಧರ್ಮ ಎಂಬುವುದಿದ್ದರೆ ಅದು ದಲಿತ ಮಹಿಳೆಯರ ಮಾತೃಮೂಲ ಧರ್ಮ ಮಾತ್ರ.

ಪರಂಪರೆಯ ಇಂತಹ ಮಾತೃಮೂಲದ ಎಳೆಗಳನ್ನು ನೋಡಬೇಕೆಂದರೆ ಮಾತೃದೇವತಾ ಆರಾಧನೆ, ಪರಿಕಲ್ಪನೆಗಳ ಮೂಲಕ ವಿವರಿಸಿಕೊಳ್ಳಬೇಕಾಗುತ್ತದೆ. ಮಾತೃದೇವತಾ ಆರಾಧನೆ ಭಾರತದ ಚರಿತ್ರೆಯಲ್ಲಿ ಪ್ರಮುಖ ಹಂತವಾಗಿ ಗುರುತಿಸಲ್ಪಟ್ಟಿದೆ. ಈಜಿಪ್ಟ್ ಸಿಲೋನ್ ಮುಂತಾದ ಕಡೆ ಮಾತೃದೇವತೆಗಳು ಕಂಡುಬಂದರೂ ಅದು ಸಮೃದ್ಧಿಯಾಗಿ ಬೆಳೆದು ಬಂದಿರುವುದು ಭಾರತದಲ್ಲಿನ ಮಾತೃಮೂಲ ಕುಟುಂಬ ವ್ಯವಸ್ಥೆಯಿಂದ.

ಪ್ರಾಚೀನ ಕಾಲದ ಕುಟುಂಬ ವ್ಯವಸ್ಥೆಯಲ್ಲಿ ತಾಯಿಯೇ ಪ್ರಧಾನ ಪಾತ್ರ ವಹಿಸುತ್ತಿದ್ದಳು. ಗಂಡು ಬೇಟೆ, ಪ್ರಾಣಿಗಳ ಸಾಕಾಣಿಕೆಯ ಕೆಲಸದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕಾಗುತ್ತಿತ್ತು. ಹೆಣ್ಣಿನ ಪ್ರಕೃತಿಯು ಗಂಡಿನ ರೀತಿಯಲ್ಲಿ ಎಲ್ಲಾ ಕಾಲದಲ್ಲಿ ತಿರುಗಾಟಕ್ಕೆ ಅನುಕೂಲಕರವಾಗಿರುವುದಿಲ್ಲ. ಆ ಕಾರಣಕ್ಕೆ ಕೆಲ ಸಮಯ ಒಂದೇ ಕಡೆ ನೆಲೆನಿಲ್ಲಬೇಕಾದ ಸಂದರ್ಭ ಬರುತ್ತಿತ್ತು. ಹೀಗೆ ನೆಲೆ ನಿಲ್ಲಬೇಕಾದ ಸಮಯದಲ್ಲಿ ಹೆಣ್ಣು ತನ್ನ ಸಮಸ್ತ ಪರಿವಾರವನ್ನು ಸಂರಕ್ಷಿಸಬೇಕಾಗುತ್ತಿತ್ತು. ಈ ಹಿನ್ನೆಲೆಯಲ್ಲಿಯೇ ಕೃಷಿ ಬೆಳವಣಿಗೆ ಬಂದಿದ್ದು

ಇದು ಕೃಷಿಯ ಆರಂಭ ಚರಿತ್ರೆಯಲ್ಲಿ ಹೆಣ್ಣಿನ ಸ್ಥಾನಮಾನಗಳನ್ನು ಗಮನಾರ್ಹವಾಗಿ ಬದಲಾವಣೆ ಮಾಡಿತಲ್ಲದೆ ಅನೇಕ ಸ್ತ್ರೀದೇವತೆಗಳ ಹುಟ್ಟಿಗೆ ಕಾರಣವಾಯಿತು. ಈಗಾಗಲೇ ಇದ್ದ ಸ್ತ್ರೀ ದೇವತೆಗಳು ಪ್ರವರ್ಧಮಾನಕ್ಕೆ ಬರಲು ಪೂರಕವಾಯಿತು. ಸ್ತ್ರೀಯನ್ನು ಕುರಿತು ಪೂಜ್ಯ ಭಾವನೆಯ ಜೊತೆಗೆ ಪ್ರಪಂಚದ ಎಲ್ಲಾ ದೇವರುಗಳು ಶಕ್ತಿಯಿಂದ ಸೃಷ್ಟಿಯಾದುವು ಎಂಬ ನಂಬಿಕೆ ಬೆಳೆಯಿತು. ಜಗದಂಬೆ, ಜಗನ್ಮಾತೆ ಈ ಪರಿಕಲ್ಪನೆಗಳು ಜನ ಮನದಲ್ಲಿ ಗಟ್ಟಿಯಾದವು. ಶಕ್ತಿಯು ಚಿರಕನ್ಯೆಯೆಂದು ಗರ್ಭ ಧರಿಸಿರುವ ದೇವತೆಗಳು ಜನಸಮುದಾಯವನ್ನು ಸೃಷ್ಟಿಸಿದಳೆಂದೂ ಪುರಾಣ, ಕಥೆಗಳು ಹುಟ್ಟಿಕೊಂಡವು. ಅನೇಕ ಸಂಸ್ಕೃತಿಗಳಲ್ಲಿ ಸ್ತ್ರೀದೇವತೆ ತನ್ನ ಗಂಡನಾಗುವವನನ್ನು ಸೃಷ್ಟಿಸಿದವಳಾಗಿದ್ದಾಳೆ. ಆಕೆ ತನ್ನ ಮಗ ಅಥವಾ ತನಗಿಂತ ಕಿರಿಯವನಾಗಿ ಕಾಣುವ ಪುರುಷ ದೇವತೆಯ ಜೊತೆಯಲ್ಲಿ ನಿಂತಿರುವ ಚಿತ್ರಗಳು ಜಗತ್ತಿನಾದ್ಯಂತ ಕಂಡುಬರುತ್ತವೆ (ಸಿದ್ದಲಿಂಗಯ್ಯ, ೨೦೦೫, ಪು. ೧೮). ಪ್ರಾಚೀನ ಸಮುದಾಯದಲ್ಲಿ ಮುಕ್ತ ಲೈಂಗಿಕತೆ ಇತ್ತು ಯಾರು ಯಾರ ಜೊತೆ ಬೇಕಾದರೂ ಲೈಂಗಿಕ ಸಂಪರ್ಕವನ್ನು ಹೊಂದಬಹುದಿತ್ತು. ಆಗ ಹುಟ್ಟುವ ಮಕ್ಕಳು ಸಮುದಾಯದ ಮಕ್ಕಳಾಗುತ್ತಿದ್ದವು. ತಂದೆಯನ್ನು ಗುರುತಿಸಲು ಸಾಧ್ಯವಾಗದ ಕಾರಣ ಮಕ್ಕಳನ್ನು ತಾಯಿಯ ಮೂಲಕವೇ ಗುರುತಿಸಲಾಗುತ್ತಿತ್ತು. ಅವಳೇ ಕುಟುಂಬದ ಎಲ್ಲಾ ನಿರ್ವಹಣೆಯನ್ನು, ನಿಯಂತ್ರಣಗಳನ್ನು ಮಾಡುತ್ತಿದ್ದಳು. ಇದು ಅವಳು, ಅವಳ ಅಧಿಕಾರ ಪ್ರಾಬಲ್ಯಕ್ಕೆ ಬರಲು ಕಾರಣವಾಗಿರಬೇಕು.

ಮಾತೃದೇವತೆಗಳು ಸೃಷ್ಟಿಯಾದಂತಹ ಪ್ರಾಚೀನ ಕಾಲದಲ್ಲಿ ಮಾತೃದೇವತೆಗಳು ಪೂಜೆಗೊಳ್ಳುತ್ತಿದ್ದ ಸ್ಥಳಗಳಲ್ಲಿ ಫಲವಂತಿಕೆಯನ್ನು ಮಾಡಬಲ್ಲ ಸ್ತ್ರೀಯರಿಗಷ್ಟೇ ಪ್ರವೇಶವಿತ್ತು. ಅಲ್ಲಿ ಪುರುಷರೇನಾದರೂ ಪ್ರವೇಶಿಸಿದರೆ ಅವರೂ ಸಹ ಮಹಿಳೆಯರಾಗುತ್ತಾರೆ ಎಂಬ ನಂಬಿಕೆ ಇತ್ತು. ಹಾಗೆಯೇ ಭಯವೂ ಇತ್ತು. ಈ ರೀತಿಯ ಕತೆಗಳನ್ನು ಅನೇಕ ಪುರಾಣಗಳು ಹೇಳುತ್ತವೆ. ಈ ವಿಷಯವನ್ನು ಕೂಲಂಕುಶವಾಗಿ ಕನ್ನಡಕ್ಕೆ ಡಾ. ವಿಠ್ಠಲರಾವ್ ಗಾಯಕವಾಡರು ಅನುವಾದಿಸಿರುವ ಲಜ್ಜಾಗೌರಿ ಎಂಬ ಕೃತಿಯಲ್ಲಿ ಚರ್ಚಿಸಲಾಗಿದೆ. ಪುರುಷ ದೇವಿಯ ಹತ್ತಿರ ಹೋಗುವ ನಿಷೇಧ ಭಯದ ಕಾರಣದಿಂದಾಗಿಯೇ ಪುರುಷ ಸ್ತ್ರೀಯಾಗಿ ಮಾರ್ಪಟ್ಟು ಮಾತೃದೇವತೆಗಳ ಎರಡು ಉಪಾಸನಾ ಸ್ಥಾನಗಳನ್ನು ತನ್ನ ವಶಕ್ಕೆ ತೆಗೆದುಕೊಂಡನು. ಮಾತೃದೇವತೆಗಳ ಎರಡು ಉಪಾಸನಾ ವರ್ಗಗಳಾದ ಪೋತರಾಜ ಮತ್ತು ಹಿಜಿಡಾಗಳು ಈ ಸ್ಥಿತ್ಯಂತರ ಸ್ವರೂಪಕ್ಕೆ ಜೀವಂತ ಉದಾಹರಣೆಗಳಾಗಿದ್ದಾರೆ (ಅನು: ವಿಠ್ಠಲರಾವ್ ಗಾಯಕವಾಡ್, ೨೦೦೩, ಪು. ೧೮೦).

ಪೋತರಾಜ ಮತ್ತು ಹಿಜಿಡಾ ಇವರಿಬ್ಬರು ತಮ್ಮ ಗಂಡಸುತನವನ್ನು ತೊರೆದು ಹೆಣ್ಣಾಗಿ ಮಾತೃಮೂಲ ಗುಣವನ್ನು ಪಡೆಯಲು ಹಾತೊರೆಯುತ್ತಾರೆ. ಪೋತರಾಜ ಕೆಲವು ದಿನಗಳು ಬಿಕ್ಷೆ ಬೇಡಿ ಎಲ್ಲಮ್ಮನ ಪೂಜೆ ಮಾಡಿದರೆ ಹಿಜಿಡಾ ಶಾಶ್ವತವಾಗಿಯೇ ತನ್ನ ಗಂಡುಸುತನವನ್ನು ತೊರೆದು ತಾಯಿಯ ತೊತ್ತಾಗಿ, ಹೆಣ್ಣಾಗಿ

ಮಾರ್ಪಾಡಾಗುತ್ತಾನೆ. ಶಿಷ್ಟ ದೇವತೆಗಳಾದ ವಿಷ್ಣು ಹೆಣ್ಣಾಗುತ್ತಾನೆ. ಆದರೆ ಮಾತೃಮೂಲದ ಮೂಲಕ ಮುಂದುವರೆಯುವುದು ಅವರಿಂದ ಆಗದ ಕಾರಣ ಮತ್ತೆ ಗಂಡಾಗಿ ಪಿತೃತ್ವವನ್ನು ಆಪ್ಯಾಯಿಸಿಕೊಳ್ಳುತ್ತಾರೆ. ಪ್ರಸಾರದಲ್ಲಿ ತೊಡಗುತ್ತಾನೆ.

ಮಾತೃ ಮೂಲಗುಣಗಳು ವಿಶೇಷವಾಗಿ ಫಲವಂತಿಕೆಯ ದೇವರುಗಳಾಗಿ ಮಾರ್ಪಾಟಾಗಿದ್ದು ಪಿತೃ ನೆಲೆಯ ಸಂವೇದನೆಯ ಜೊತೆ ಬೆರೆತು ಹೋಗಿವೆ. ಹೊಲೆಮಾದಿಗರು ಪ್ರಧಾನವಾಗಿ ಶಕ್ತಿ ದೇವತೆಯ ಆರಾಧಕರಾಗಿದ್ದಾರೆ. ಹೊಲೆಯಮಾದಿಗ ಎರಡೂ ಕೇರಿಗಳಲ್ಲಿ ಸ್ತ್ರೀದೇವತೆಗಳೇ ಹೆಚ್ಚಾಗಿ ನೆಲೆಸಿದ್ದಾರೆ. ಹುಲಿಗೆಮ್ಮ, ಉಚ್ಚಂಗೆಮ್ಮ, ಗಾಳೆಮ್ಮ ಈ ಭಾಗದ ಪ್ರಮುಖ ದೇವತೆಗಳಾಗಿದ್ದಾರೆ. ಉಳಿದಂತೆ ಪ್ರತಿ ಹಳ್ಳಿಗಳಲ್ಲಿಯೂ ಕೇರಿಗಳಲ್ಲಿ ಮೂರು ನಾಲ್ಕು ಸ್ತ್ರೀದೇವತೆಗಳ ಗುಂಪುಗಳಿವೆ. ಮಾದಿಗರ ಕೇರಿಗಳಲ್ಲಿ ಕೆಂಚಮ್ಮ, ಕಂಟೆಮ್ಮ, ಕೊಲ್ಲಾಪುರದಮ್ಮ, ತಾಯಮ್ಮ, ದುರುಗಮ್ಮ, ದುಗ್ಗಲೆಮ್ಮ, ಹುಲಿಗೆಮ್ಮ ಮುಂತಾದವರು ಪ್ರಮುಖ ಸ್ತ್ರೀದೇವತೆಗಳಾಗಿದ್ದಾರೆ. ಹೊಲೆಯರ ಕೇರಿಗಳಲ್ಲಿ ಹುಲಿಗೆಮ್ಮ, ಗಾಳೆಮ್ಮ, ಸಾವರೆಮ್ಮ, ಕೊಟ್ರಮ್ಮ , ಮಲ್ಲಮ್ಮ ಪ್ರಮುಖ ದೇವತೆಗಳಾಗಿದ್ದಾರೆ.

ಈ ಎಲ್ಲಾ ದೇವತೆಗಳ ಗುಣಗಳು ಪಿತೃ ನೆಲೆಯಲ್ಲಿ ಬೆರೆತು ಅಭಿವ್ಯಕ್ತಿಗೊಂಡಿರುವುದನ್ನು ಹೊಲೆಮಾದಿಗರು ಇಡುವ ಹೆಸರುಗಳಲ್ಲಿ ಕಾಣಬಹುದಾಗಿದೆ. ಮನೆಯ ಅಥವಾ ಊರಿನ ದೇವತೆಯ ಹೆಸರುಗಳನ್ನೇ ಹೆಣ್ಣು ಗಂಡಿಗೂ ಸೇರಿಸಿ ಸ್ತ್ರೀವಾದಿಯಾಗಿ ಪುರುಷವಾಚಿಯಾಗಿ ಇಡುವ ಪದ್ಧತಿ ಇದೆ.

ಕೊಟ್ರಮ್ಮ	-	ಕೊಟ್ರಪ್ಪ	ಹುಚ್ಚಮ್ಮ	-	ಹುಚ್ಚಪ್ಪ
ಮಾತಂಗಿ	-	ಮಾದಪ್ಪ	ಗಾಳೆಮ್ಮ	-	ಗಾಳೆಪ್ಪ
ದುರುಗಮ್ಮ	-	ದುರುಗಪ್ಪ	ಕೆಂಚಮ್ಮ	-	ಕೆಂಚಪ್ಪ
ದುರ್ಗಮ್ಮ	-	ದುರ್ಗಪ್ಪ	ಮಲ್ಲಮ್ಮ	-	ಮಲ್ಲಪ್ಪ
ಹುಲಿಗೆಮ್ಮ	-	ಹುಲಿಗೆಪ್ಪ	ಎಲ್ಲಮ್ಮ	-	ಎಲ್ಲಪ್ಪ
ಮಾರೆಮ್ಮ	-	ಮಾರಪ್ಪ	ಸಾರಮ್ಮ	-	ಸಾರಪ್ಪ
ಉಡ್ಸಲಮ್ಮ	-	ಉಡ್ಸಲಪ್ಪ	ದುಗ್ಗಲಮ್ಮ	-	ದುಗ್ಗಲಪ್ಪ
ಸಂಕ್ಲಮ್ಮ	-	ಸಂಕ್ಲಪ್ಪ	ಅಂಕ್ಲಮ್ಮ	-	ಅಂಕ್ಲಪ್ಪ
ಸತ್ಯಮ್ಮ	-	ಸತ್ಯಪ್ಪ			

ಇಂತಹ ಹೆಸರುಗಳು ದಲಿತ ಕುಟುಂಬಗಳಲ್ಲಿ ಮಾತ್ರ ಕಂಡುಬರುತ್ತವೆ. ಇತರ ಜಾತಿಗಳಲ್ಲಿ ಕಂಡುಬರುವುದಿಲ್ಲ. ಕಂಡುಬಂದರೆ ಅವರು ಇಂತಹ ಶಕ್ತಿ ದೇವತೆಗಳ ಪವಾಡಗಳಿಗೆ ಬೆರಗಾಗಿ ಶಕ್ತಿ ದೇವತಾಪಂಥಕ್ಕೆ ಶರಣಾಗಿರುವುದನ್ನು ಗಮನಿಸಬೇಕಾಗುತ್ತದೆ.

ಎಲ್ಲಮ್ಮ ಶಬ್ದದ ನಿಷ್ಪತ್ತಿಯನ್ನು ೨ ರೀತಿಯಲ್ಲಿ ಹೇಳಲಾಗುತ್ತದೆ. ಯಕ್ಷಿಣಿ > ಜಕ್ಕಿಣಿ > ಎಕ್ಕಲಮ್ಮ > ಎಲ್ಲಮ್ಮ ಆಗಿರಬಹುದು. ಎಲ್ಲಮ್ಮ ಎಂಬುವುದು ಅಚ್ಚಗನ್ನಡ ಪದ ಎಲ್ಲೆ + ಅಮ್ಮ = ಎಲ್ಲಮ್ಮ.

ಅಂದರೆ ಗಡಿ + ದೇವತೆ = ಗಡಿದೇವತೆ ಎಂದು ಹೇಳಲಾಗುತ್ತದೆ. ಎಲ್ಲೆಯ ಅಮ್ಮ ಎಂಬುವುದಕ್ಕಿಂತ ಎಲ್ಲರ ಅಮ್ಮ ಎಲ್ಲಮ್ಮ ಎಂಬುವುದು ಸರಿಯಾದ ನಿಷ್ಪತ್ತಿ ಎಂಬುವುದನ್ನು ಡಾ. ದೇವೇಂದ್ರ ಕುಮಾರ ಹಕಾರಿಯವರು ತಿಳಿಸುತ್ತಾರೆ.

ಎಲ್ಲಮ್ಮ ಎಂಬ ರೇಣುಕೆ ಶಬ್ದವನ್ನು ಸಮಾನ ಅರ್ಥದಲ್ಲಿ ಬಳಸಲಾಗುತ್ತದೆ. ಎಲ್ಲರನ್ನು ಸಲಹುವಳೇ ಎಲ್ಲಮ್ಮ. ಇವಳು ಕೇರಿ ತಾಯಿ, ಊರಿನ ತಾಯಿ, ಜಗದ ತಾಯಿ. ಅನ್ನವು ಎಲ್ಲರಿಗೂ ಅಮ್ಮ. ಗಾಳಿ, ನೀರು ಎಲ್ಲವು ಎಲ್ಲರಿಗೂ ತಾಯಿಯಾಗಿಯೇ ಕಂಡಿದೆ. ಈ ಹಿನ್ನೆಲೆಯಲ್ಲಿಯೇ ಎಲ್ಲಮ್ಮ ಹುಟ್ಟಿ ಬಂದಿರಬೇಕು. ಇದಕ್ಕೆ ಜನಪದರು ಪುರಾಣ, ಕಥೆ. ಹಾಡುಕಟ್ಟಿ ಹಾಡುತ್ತಾರೆ. ಜನಪದರಲ್ಲಿ ಎಲ್ಲಮ್ಮ ಕೇರಿಯ ದೇವತೆ. ಒಮ್ಮೆ ಎಲ್ಲಮ್ಮ ಸ್ನಾನಕ್ಕೆಂದು ಸಮುದ್ರಕ್ಕೆ ಹೋಗಿದ್ದಾಗ ಎಲ್ಲೋ ಸ್ನಾನ ಮಾಡುವ ಜಮದಗ್ನಿಯ ಬೆವರು ವಾಸನೆ ತಗುಲಿ ಎಲ್ಲಮ್ಮ ಗರ್ಭವತಿಯಾಗುತ್ತಾಳೆ. ಕಾಲ ಗತಿಸಿ ಮಗು ಹುಟ್ಟಿದ ನಂತರ

ಬಾ ನನ್ನ ಮಗನ ಮಲಿ ಉಣ್ಣಾ
ಮಲಿಗಳು ತೊರೆದಾವ ಹೇರುಗಳಾಗ್ಯಾವ
ಬೆನ್ನೀಲಿ ಹಾಲ ಎಸದಾವ ರಾಮ
ಬಾ ನನ್ನ ಮಗನ ಮಲಿ ಉಣ್ಣ ರಾಮಣ್ಣ
(ಸಂ. ಡಾ.ಎಂ.ಎಸ್. ಸುಂಕಾಪುರ, ಜೋಗತಿಹಾಡು, ಪು.೪೭)

ಎಂದು ಎಲ್ಲಮ್ಮ ಕರೆದಾಗ ಪರಶುರಾಮ ನಿರಾಕರಿಸುತ್ತಾನೆ. ನೀನು ನನ್ನನ್ನು ತಂದೆ ಇಲ್ಲದೆ ಹಡೆದಿದ್ದೀಯ ತಂದೆ ಯಾರು ಎಂದು ಹೇಳು, 'ಹಾದರಗಿತ್ತಿ ಹಾಲ ನಾ ಹೆಂಗ ಕುಡಿಯಲಿ' ಎಂದು ಹೀಯಾಳಿಸುತ್ತಾನೆ. ಮುಕ್ತ ಲೈಂಗಿಕತೆಯ ಪ್ರತಿಫಲವಾಗಿ ರಾಮನನ್ನು ಪಡೆದ ಎಲ್ಲಮ್ಮ ಆದಿಮ ಮೂಲ ಗುಣಗಳು ಉಳ್ಳವಳಾದರೆ, ಪರಶುರಾಮ ತಂದೆಯನ್ನು ಕೇಳಿ ಹೀಯಾಳಿಸುವುದರ ಮೂಲಕ ಆರ್ಯ ಗುಣಗಳ ಪ್ರತಿನಿಧಿಯಾಗಿದ್ದಾನೆ. ಈ ಹಂತವು ಮಾತೃಮೂಲ ಪ್ರಧಾನತೆಯನ್ನು ಹತ್ತಿಕ್ಕುವ ಕಾಲಘಟ್ಟವಾಗಿದೆ. 'ಪುಣ್ಯದ ಫಲದಿಂದ ನಿನ್ನ ಹಡೆದೆನೋ ರಾಮಣ್ಣ' ಎಂದರೂ, ಪರಶುರಾಮ ಹೀಯಾಳಿಸುವುದನ್ನು ಬಿಡಲಿಲ್ಲ. ತಾಯಿಯನ್ನು ವಿಧವೆ ಮಾಡುತ್ತಾನೆ. ಇದಕ್ಕೆ ಪ್ರತಿಕ್ರಿಯೆ ತೀರಿಸಿಕೊಳ್ಳುವ ಸಲುವಾಗಿ ಎಲ್ಲಮ್ಮ

ಒಡ್ಡುಗಲ್ಲಿನ ಮ್ಯಾಲೆ ಗುಡ್ಡಾಗಿ ಕುಂತಾಳೆ
ಗುಡ್ಡಾಕ ಮಾರಿ ತಿರಿವ್ಯಾಳೆ| ಚಿಕ್ಕೇನ ಹಳ್ಳಿ
ದೊಡ್ಡೋರು ಕೈ ಎತ್ತಿ ಮುಗುದಾರೆ||
(ಸಂ. ಕೃಷ್ಣಮೂರ್ತಿ ಹನೂರು, ೧೯೯೮, ಪು. ೩೮).

ತನ್ನನ್ನು ತಿರಸ್ಕರಿಸಿದವರು (ಇಲ್ಲಿ ಇಡೀ ಸಮುದಾಯದ ಸಂಕೇತವಾಗಿ ಪರಶುರಾಮ ಇದ್ದಾನೆ) ತನಗೆ ಕೈ ಎತ್ತಿ ಮುಗಿಯುವ ಹಾಗೆ ಮಾಡಿಕೊಳ್ಳುತ್ತಾಳೆ. ತನಗೊಂದು ಸ್ಥಾನವನ್ನು ಪಡೆದುಕೊಳ್ಳುವ ನೆಲೆಯಲ್ಲಿ ಮೌನವನ್ನು ದಾಟಿ ಬರುವ ಪ್ರಯತ್ನ ಇದಾಗಿದೆ. ಹಾಗೆಯೇ ಪ್ರಜ್ಞೆಯ ದ್ವಂದ್ವದ ನೆಲೆಯಿಂದ ಮುಂದಿನ ದಾರಿಯನ್ನು ಕಂಡುಕೊಳ್ಳುವ ಬಗೆ ಇದಾಗಿದೆ. ಪರಂಪರೆಯ ಎಲ್ಲಾ ದೇವತೆಗಳು ಕೂಡ ಒಂದು ಕಾಲದಲ್ಲಿ

ಗಾಢ ಮೌನವನ್ನು ವಹಿಸಿದ್ದವರು. ಆ ಮೌನವನ್ನು ಮುರಿದು ಬರುವ ಪ್ರಯತ್ನದ ಫಲವಾಗಿ ಶಕ್ತಿ ದೇವತೆಗಳಾಗಿ ಉಗ್ರರೂಪ ತಾಳಿ ತನ್ನ ಮೌನದ ಅಭಿವ್ಯಕ್ತಿಯ ಸ್ವರೂಪವನ್ನು ಬದಲಾಯಿಸಿಕೊಂಡಿವೆ. ಮೈಮೇಲೆ ದೇವರು, ದೆವ್ವ ಬರುವ ಮಹಿಳೆಯರನ್ನು ನಾವು ಈ ಹಿನ್ನೆಲೆಯಿಂದಲೇ ಪರಿಭಾವಿಸಬೇಕಾಗುತ್ತದೆ.

ಕೇರಿಯ ದೇವತೆಗಳು ಕೆಳ ಜಾತಿಗಳಲ್ಲಿ ಮಾತ್ರ ಕಂಡುಬರುತ್ತವೆ. ದಲಿತ ಮಹಿಳಾ ಪ್ರತಿನಿಧಿಗಳಾದ ಎಲ್ಲಮ್ಮ, ಹುಲಿಗೆಮ್ಮ ದೇವತೆಗಳು ಇಷ್ಟು ಪ್ರಖ್ಯಾತಿಯನ್ನು ಹೇಗೆ ಹೊಂದಿದವು? ಎಂಬುವ ಜಾಡನ್ನು ಹಿಡಿಯುತ್ತಾ ಹೋದರೆ ಅವು ಮಾತೃಮೂಲ ಗುಣಗಳನ್ನೇ ಧ್ವನಿಸುತ್ತವೆ.

ಮಾರಿ ಪುರಾಣಕ್ಕೆ ಸಂಬಂಧಿಸಿದಂತೆ ಎಲ್ಲಾ ದಲಿತರಲ್ಲೂ ಒಂದೇ ರೀತಿಯ ಕಥಾ ವಸ್ತುವಿದೆ. ಹೇಳುವ ಸ್ವರೂಪ ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೀತಿ ಇರುತ್ತದೆ. ಇದು ಮೇಲ್ಜಾತಿ, ಮೇಲ್ವರ್ಗ, ಮೇಲ್ವರ್ಣದವಳಾದ ಮಾರಿ ಕೆಳಜಾತಿಯಾದವನನ್ನು ಸರ್ವನಾಶ ಮಾಡುವಲ್ಲಿ ವಿಜೃಂಭಿಸುತ್ತದೆ. ಕೆಳಜಾತಿಯವಳೇ ಆದ ಮಾರಿಯನ್ನು ಮೇಲ್ಜಾತಿಯವರು ತಮ್ಮ ನೇಮಗಳಿಗೆ ಒಗ್ಗಿಸಿ ಮುಂದುವರಿಸಿಕೊಂಡು ಹೋಗಿರುವ ಸಂದರ್ಭದಲ್ಲಿ ತಮ್ಮವಳಾಗಿ ಮಾಡಿಕೊಂಡು ವರ್ಣವ್ಯವಸ್ಥೆ ಹಾಗೆ ಇರಬೇಕು ಅದಕ್ಕೆ ಯಾವುದೇ ದಕ್ಕೆ ಬರಕೂಡದು ಎಂಬುವ ಪೂರ್ವ ನಿರ್ಧಾರಿತ ಹಿನ್ನೆಲೆಯಲ್ಲಿಯೇ ಇಂತಹ ಪುರಾಣವು ಸೃಷ್ಟಿಯಾಗಿದೆ. ಮಾರೆಮ್ಮ ಮಾದಿಗರ ಕೇರಿ ದೇವತೆ. ಮಾರೆಮ್ಮನ ಪೂಜಾರಿ ಬ್ರಾಹ್ಮಣನಾದರೂ, ಜಾತ್ರೆ, ಉತ್ಸವಗಳ ಸಂದರ್ಭದಲ್ಲಿ ಮಾರೆಮ್ಮನಿಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಮಾಡುವವರು ದಲಿತರೇ ಆಗಿದ್ದಾರೆ. ಮಾರಿ ದಲಿತರ ಮನೆ ದೇವತೆಯೂ ಹೌದು. ಈ ಹಿನ್ನೆಲೆಯಲ್ಲಿಯೇ ಮಾರಿ ದಲಿತ ಹೆಣ್ಣುಮಗಳೇ ಹೊರತು ಬ್ರಾಹ್ಮಣರ ಹೆಣ್ಣುಮಗಳಲ್ಲ ಎಂಬುವುದನ್ನು ತಿಳಿಯಬೇಕಾಗುತ್ತದೆ.

ಕರುನಾಡು ಕಪ್ಪುಮಣ್ಣಿನಿಂದ ಕೂಡಿದ ಫಲವತ್ತತೆಯ ಭೂಮಿಯಾಗಿರುವದರಿಂದ ನಮ್ಮ ಎಲ್ಲಾ ಶಕ್ತಿ ದೇವತೆಗಳು ಗರಿಷ್ಠ ಪ್ರಮಾಣದಲ್ಲಿ ಕಪ್ಪು ಕಲ್ಲಿನ ಮೂರ್ತಿಗಳೇ ಆಗಿದ್ದಾರೆ. ಭೂಮಿಯ ಇನ್ನೊಂದು ರೂಪವೇ ಕಪ್ಪು ಕಲ್ಲು. ಕೆಳ ಜಾತಿಯ ದೇವತೆಗಳಿಗೆ ರೂಪವಿರುವುದಿಲ್ಲ. ಎಲ್ಲಾ ದೇವತೆಗಳು ಕಪ್ಪು ಕಲ್ಲಿನ ಮೂಲಕವೇ ಆರಾಧಿಸಲ್ಪಡುತ್ತಾರೆ.

'ಕರ್ನಾಟಕವನ್ನು ಮೊದಲು ಮಹಿಷಮಂಡಲ, ಎರವೈಯಿನ್‌ನಾಡು ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು. ಕನ್ನಡ ದೇಶವನ್ನು ಅರ್ಥಾತ್ ಮೈಸೂರು ರಾಜ್ಯವನ್ನು ಕಟ್ಟಿದವನು ಮಹಿಷಾಸುರ ಎಂಬ ದ್ರಾವಿಡ ರಾಜ. ದ್ರಾವಿಡರೂ ಸಹ ಕಪ್ಪು ವರ್ಣೀಯರು ಮಹಿಷಾಸುರ ಕಟ್ಟಿದ ಮಹಿಷಮಂಡಲದ ಸಂಸ್ಕೃತಿಯ ಲಾಂಛನ ಎಮ್ಮೆ. ಮಹಿ- ಪ್ರತಿಭೆ, ಮಹಿಮೆ- ಪ್ರತಿಭೆಯುಳ್ಳವ, ಮಹಿಷ- ಕೋಣ, ಮಹಿಷಿ- ಎಮ್ಮೆ, ಮಹಾಮಹಿಮ- ಮಹಾ ಬುದ್ಧಿವಂತ. ಪಟ್ಟಮಹಿಷಿ- ಪ್ರತಿಭಾಸಂಪನ್ನೆಯಾದ ಮಹಾರಾಣಿ ಮುಂತಾದ ಪದಗಳು ದ್ರಾವಿಡ ಶಬ್ದಕೋಶವನ್ನು ಅಲಂಕರಿಸಿವೆ. ಮಹಿಷಾಸುರನನ್ನು ಕೊಂದವರು ಅದೇ ಆರ್ಯರು. ದ್ರಾವಿಡ ರಾಜನನ್ನು ಕೊಂದ ಚಾಮುಂಡಿ ಆರ್ಯರ ದೈವವಾಗಿ ಆರಾದಿಸಲ್ಪಡುತ್ತಿದ್ದಾಳೆ (ವಡ್ನಗೆರೆ ನಾಗರಾಜಯ್ಯ, ೨೦೦೭, ಅಗ್ನಿ). ಎಮ್ಮೆಯನ್ನು ವಾಹನವಾಗಿ ಹೊಂದಿರುವ ಯಮ ಪ್ರಾಣ ತೆಗೆಯುವುದರಲ್ಲಿ ನಿಸ್ಸೀಮ. ಸ್ಮಶಾನದ ರಾಜ. ಇಂತಹ ಸ್ಮಶಾನವನ್ನು ಕಾಯುವ ಕಾಯಕವನ್ನು ದಲಿತರೇ ಮಾಡುತ್ತಾರೆ. ತಮ್ಮ ಅನನ್ಯತೆಯ ಸಂಕೇತವಾದ ಎಮ್ಮೆಯನ್ನು ಆಹಾರಕ್ಕಾಗಿ ಬಳಸಿಕೊಳ್ಳುವುದು ನಿಸರ್ಗನಿಷ್ಠ ಆಹಾರ ಸರಪಳಿಯನ್ನು ತಿಳಿಸುತ್ತದೆಯೇ ಹೊರತು ಬೇರೆ ಇನ್ನಾವುದೋ ಸಂಕೇತಗಳಿಂದ ಇದನ್ನು ವೈಭವೀಕರಿಸಿ ನೋಡುವ ಅಗತ್ಯವಿಲ್ಲ.

ಮುನಿರಾಬಾದ್‌ನ ಹುಲಿಗೆಯ ಊರಿನ ಹುಲಿಗೆಮ್ಮ. ಈ ಭಾಗದ ಪ್ರಸಿದ್ಧ ದೇವತೆ ಎನಿಸಿದ್ದಾಳೆ. ಹುಲಿಗಿ-ಹುಲುಸುನಿಂದ ಕೂಡಿದ ಪ್ರದೇಶದಲ್ಲಿ ನೆಲೆಸಿದ ದೇವಿ ಸಮೃದ್ಧಿ ದೇವಿಯಾಗಿದ್ದಾಳೆ. ಈ ದೇವಿಯ ಜಾತ್ರೆಯು ಸುಮಾರು ೯ ದಿನಗಳ ಕಾಲ ನಡೆಯುತ್ತದೆ. ಒಂದೊಂದು ದಿವಸವೂ ಒಂದೊಂದು ರೀತಿಯ ಪೂಜೆ ಮಾಡಲಾಗುತ್ತದೆ. ಮಕ್ಕಳಿಲ್ಲದವರು, ಕಷ್ಟದಲ್ಲಿರುವವರು, ಮುದುಕರು, ಕುಂಟರು, ಬಸವಿಯರು, ಜೋಗತಿಯರು ಬಂದು ಹಸಿರು ಬಳೆ, ಹೂವು, ಹಸಿರು ಸೀರೆಯನ್ನು ಉಡಿಸುತ್ತಾರೆ. ಎಲ್ಲೆಲ್ಲಿಯೂ ಹಸಿರು ಪ್ರದೇಶವೇ ಹಸಿರಾಗಿರಬೇಕೆಂದು ಆ ಸಮುದಾಯಗಳು ಬಯಸುತ್ತವೆ. ಇದು ವಿಶೇಷವಾಗಿರುವಂತಹದ್ದು. ಆದರೆ ಈಗ ಮನುಷ್ಯ ಸ್ವಾರ್ಥದಿಂದ ಯೋಚಿಸಿ ತನ್ನ ಒಳಿತನ್ನು ಮಾತ್ರ ಅಪೇಕ್ಷಿಸಿ ಉಳಿದವರ ಒಳಿತನ್ನು ನಿರ್ಲಕ್ಷಿಸುತ್ತಾನೆ.

ಭಕ್ತರು ಹುಲಿಗೆಮ್ಮನನ್ನು ಅಮ್ಮಾ ಎಂದೇ ಗುರುತಿಸುತ್ತಾರೆ. ಅದರ ಮೂಲಕ ಮಕ್ಕಳಾಗುತ್ತಾರೆ. ಭಾರತೀಯ ಸಮಾಜದಲ್ಲಿ ಕಂಡುಬರುವ ತಾಯಿ ಮಗನ ಬಲಿಷ್ಠ ಸಂಬಂಧಗಳೇ ಇಲ್ಲಿ ದೈವಿಕ ಆವರಣದಲ್ಲಿ ಪುನರ್‌ಸೃಷ್ಟಿಯಾಗಿದೆ. ಇದರ ಇನ್ನೊಂದು ಮಗ್ಗುಲಲ್ಲಿ ತಂದೆ ಇಲ್ಲದಿರುವುದು ಕಂಡುಬರುತ್ತದೆ. ತಂದೆ ಇಲ್ಲದೆ ತಾಯಿಯ ರಕ್ಷಣೆಯಲ್ಲಿರುವ ದೈವಿಕ ಸಮಾಜವಿದು. ಪರೋಕ್ಷವಾಗಿ ಇದು ಮಾತೃಮೂಲದ ಸಮಾಜವೊಂದರ ಅಭಿವ್ಯಕ್ತಿಯಾಗಿದೆ. ವಾಸ್ತವ ಸಮಾಜದಲ್ಲಿ ಈಗ ಪಿತೃಮೂಲ ಸಂಬಂಧಗಳು ಬಲಿಷ್ಠವಾಗಿವೆ. ಹುಲಿಗೆಮ್ಮನ ಭಕ್ತರೆಲ್ಲ ಇಂತಹ ಪಿತೃಮೂಲ ಕುಟುಂಬದ ಸದಸ್ಯರೇ ಆಗಿದ್ದಾರೆ. ಆದರೆ ಹುಲಿಗೆಮ್ಮನ ಕ್ಷೇತ್ರ ಮಾತ್ರ ಪಿತೃಮೂಲವನ್ನು ನಿರಾಕರಿಸಿ ಮಾತೃ ಅಧಿಕಾರವನ್ನು ಸ್ಥಾಪಿಸುವ ಪರ್ಯಾಯ ಶಕ್ತಿ ಕೇಂದ್ರವಾಗಿದೆ. ಈ ಅರ್ಥದಲ್ಲಿ ಇದು ಸಮಾಜದ ಸ್ವಯಂ ವೈರುದ್ಯಗಳನ್ನು ಸಾಭೀತುಪಡಿಸುತ್ತದೆ. ಇನ್ನೊಂದು ಕೊನೆಯಲ್ಲಿ ಅದು ಆಚರಣೆಯ ಒಳಗೆ ದೈವ ಮೂಲದ ಮಾತೃಪ್ರಧಾನ ಕುಟುಂಬದ ವ್ಯವಸ್ಥೆಯನ್ನು ಹೊಂದಿದೆ. ಹುಲಿಗೆಮ್ಮನನ್ನು ಅಮ್ಮನಾಗಿ ಕಂಡು ಸಂಭೋಗವನ್ನು ನಿರಾಕರಿಸುವುದು ಕುತೂಹಲಕರವಾಗಿದೆ. ಜೋಗಪ್ಪ ಜೋಗಮ್ಮನಾಗುವುದು ಗಂಡಸುತನದ ನಿರಾಕರಣೆಯಾಗುತ್ತದೆ. ಜೋಗಪ್ಪ ಜೋಗಮ್ಮಂದಿರು ಎಲ್ಲಮ್ಮನ, ಹುಲಿಗೆಮ್ಮನ ಮಾತೃಮೂಲ ಸಂಸ್ಕೃತಿಯನ್ನು ಪ್ರಚಾರ ಮಾಡುವ ಪ್ರಸಾರಕರಾಗಿದ್ದಾರೆ. ಆಚರಣೆಗಳನ್ನು ಬಿಟ್ಟರೆ ನಮ್ಮ ಮಾತೃಮೂಲ ಎಳೆಗಳನ್ನು ಗುರುತಿಸಲು ನಮಗಿರುವ ಆಕರವೆಂದರೆ ಜನಪದ ಸಾಹಿತ್ಯ.

ಜನಪದ ಕಾವ್ಯ ಹೆಣ್ಣನ್ನು ಕುರಿತು ಪರಂಪರಾಗತ ನಿಲುವನ್ನು ನೇರವಾಗಿಯೋ, ಪರೋಕ್ಷವಾಗಿಯೋ ಪ್ರತಿಪಾದಿಸಿಕೊಂಡು ಬರುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಜನಪದ ಸಾಹಿತ್ಯದ ಬೆಳವಣಿಗೆಗೆ ದಲಿತ ಮಹಿಳೆಯರೇ ಮೂಲ ಕಾರಣ. ಊರಿನ ಎಲ್ಲಾ ಕಥೆಗಳನ್ನು ಮೂಟೆಯಲ್ಲಿ ಕಟ್ಟಿಕೊಂಡು ಹೋಗುತ್ತಿದ್ದಾಗ ಹೊಲೆಮಾದಿಗ ಮನೆಯ ಹಟ್ಟಿಯಲ್ಲಿ ಬಂಡಿಯ ಚಕ್ರ ಮುರಿದುಬಿದ್ದಿದ್ದರಿಂದ ಎಲ್ಲಾ ಕಥೆಗಳು ಹೊಲೆಮಾದಿಗ ಹಟ್ಟಿಯಲ್ಲಿಯೇ ಉಳಿದುಹೋದವಂತೆ. ಅದಕ್ಕಾಗಿಯೇ ನಾವು ಹಾಡು, ಕಥೆ, ಕಾವ್ಯ ಹಾಡುತ್ತೇವೆ. ನಮ್ಮನ್ನು ಬಿಟ್ಟು ಬೇರೆಯವರು ಚೆನ್ನಾಗಿ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಇದು ಅವರ ಸೃಷ್ಟಿಯ ಲೋಕದೃಷ್ಟಿಯ ಗ್ರಹಿಕೆಯನ್ನು ತಿಳಿಸುತ್ತದೆ. ಮಹಿಳೆಯರ ಮೂಲಕ ಜನಪದ ಸಾಹಿತ್ಯ ಹುಟ್ಟಿರುವುದರಿಂದಲೇ ಜನಪದ ಸಾಹಿತ್ಯದಲ್ಲಿ ಮಾತೃಮೂಲ ಗುಣಗಳು ಇವೆ ಎಂಬುವುದು ನಿಜವಾದುದು.

ಭೂಮಿ ದಲಿತರಿಗೆ ಜೀವನದ ಮೂಲ ನೆಲೆ ಮತ್ತು ಸೆಲೆ. ಭೂಮಿ ತಾಯಿಯಾಗಿ ಜಾನಪದರಿಗೆ ಕಂಡಿದ್ದಾಳೆ. ಗ್ರಾಮೀಣ ಜನರು ಭೂಮಿಗೆ ಕೊಟ್ಟ ಮಹತ್ವವನ್ನು ಕೃಷಿ ಜಾನಪದ ಮಹಿಳೆ ಹೀಗೆ ಹೇಳುತ್ತಾಳೆ.

ಬೆಳಗಾಗ ನಾನೆದ್ದು ಯಾರರ ನೆನೆಯಲಿ

ಎಳ್ಳು ಜೀರಿಗೆ ಬೆಳೆಯೋಳೆ| ಭೂಮಿ ತಾಯಿ

ಎದ್ದೊಂದು ಗಳಿಗೆ ನೆನದೇನ||

ಜಾನಪದ ಮಹಿಳೆ ಬೆಳಗಿನ ಜಾವ ಎದ್ದು ಯಾರು ಯಾರನ್ನು ನಾನು ನೆನೆಯಬೇಕು ಎಂದು ಕೊಂಡಾಗ ಅವಳಿಗೆ ಮೊದಲು ಮನಸ್ಸಿಗೆ ಬರುವುದು ಭೂಮಿ. ನಮಗೆ ಅನ್ನ ಕೊಟ್ಟು ಸಾಕಿ- ಸಲುಹುವ, ನಾವು ಎಳ್ಳು, ಜೀರಿಗೆಯನ್ನು ಬೆಳೆಯುವ ಭೂಮಿ ತಾಯಿಯೇ ನಮ್ಮ ನಿಜವಾದ ತಾಯಿ. ಆದ್ದರಿಂದ ಅವಳನ್ನೇ ಮೊದಲ ಬಾರಿಗೆ ನೆನೆಯಬೇಕು. ನಾನು ಭೂಮಿಯನ್ನೇ ನೆನೆಸುತ್ತೇನೆ ಎಂದು ಹೇಳುತ್ತಾಳೆ. ಇದು ದಲಿತ ಮಹಿಳೆಯರಿಗೂ, ಕೃಷಿಗೂ ಇರುವ ನಂಟನ್ನು ತೋರಿಸುತ್ತದೆ. ಆರಾಧಕರಾಗಿರುವುದರ ಸೂಚನೆ ಇಲ್ಲಿ ಎದ್ದು ಕಾಣುತ್ತದೆ.

ಹೆಣ್ಣಿನ ಹೆತ್ತಳೆ ಪುಣ್ಯಸ್ತ್ರೀ ನೀಬಾರೆ

ಚಣ್ಣಕ್ಕಿ ಬಾನು ಉಣಬಾರೆ ನಿನ್ ಮಗಳು

ಬಣ್ಣು ತಂದಳು ಉಣುಬಾರೆ

ಒಬ್ಬಳೇ ತಾಯಿಗೆ ಒಬ್ಬಳೆ ಮಗಳೆಂದು

ಕಬ್ಬು ನೆಟ್ಟು ಹೆಳ್ಳು ಬಡದ್ಹಾಂಗೆ ಸುಮತಿಯೇ

ಒಬ್ಬಳೇ ಸಾಕು ಕುಲಕೆಲ್ಲ.

ಹೆಣ್ಣನ್ನು ತಿರಸ್ಕೃತ ಭಾವನೆಯಿಂದ ಕಾಣುತ್ತಿದ್ದ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಗೆ ಕೊಟ್ಟ ಸ್ಥಾನ ಮಾನವನ್ನು ಇದು ತಿಳಿಸುತ್ತದೆ. ಒಂದು ಸಮಾಜ ಆರೋಗ್ಯ ಪೂರ್ಣವಾಗಿ ನಡೆದುಕೊಂಡು ಹೋಗಲು ಗಂಡು- ಹೆಣ್ಣು ಎರಡು ಚಕ್ರಗಳು ತುಂಬಾ ಮುಖ್ಯ ಎಂಬುವುದನ್ನು ಮೊದಲಿಗೆ ಬಹಳ ಮುಖ್ಯ ನೆಲೆಗಳಲ್ಲಿ ಪರಿಭಾವಿಸಿಕೊಂಡವಳು ಮಹಿಳೆ.

ಆಡಿ ಬಾ ನನ ಕಂದಾ ಅಂಗಾಲ ತೊಳದೇನ

ತೆಂಗೀನ ತಿಳಿನೀರ| ತಕ್ಕೊಂಡು

ಬಂಗಾರ ಮಾರಿ ತೊಳದೇನು

ತಮ್ಮ ಜೀವನದಲ್ಲಿ ಅತ್ಯಂತ ಬಡತನವಿದ್ದರೂ ರೂಪಕ ಪ್ರತಿಮೆಗಳ ಮೂಲಕ ಜನಪದ ಸಾಹಿತ್ಯದಲ್ಲಿ ತಮ್ಮ ಶ್ರೀಮಂತಿಕೆಯನ್ನು ಪಡೆಯುವ ಕಲ್ಪನೆಯನ್ನು ಮರೆಯುವುದುಂಟು. ಅಂಗಾಲುಗಳನ್ನು ತೆಂಗಿನ ತಿಳಿನೀರಿನಲ್ಲಿ ತೊಳೆಯಲಾಗುವುದಿಲ್ಲ. ಏಕೆಂದರೆ ತೆಂಗಿನ ನೀರು ಕುಡಿಯಲು ಮಾತ್ರ ಬಳಸುವಂತಹದ್ದು. ಅಂತಹ ಅಪರೂಪದ ನಿಲುವಿನಿಂದಲೆ ಮಗು ಆಡಿ ಕಾಲುಗಳನ್ನು ಕೊಳೆ ಮಾಡಿಕೊಂಡು ಬಂದಾಗ ತೊಳೆಯುವುದು, ಹೆತ್ತವರಿಗೆ ಹೆಗ್ಗಣ ಮುದ್ದಲ್ಲವೇ ತನ್ನ ಮಗುವನ್ನು ತಳತಳ ಹೊಳೆಯುವ ಬಂಗಾರಕ್ಕೆ

ಹೋಲಿಸಿ ಮುದ್ದಾಡುವುದು ತಾಯಿಗೆ ಮಗುವಿನ ಮೇಲೆ ಇರುವ ಪ್ರೀತಿಗೆ ಹಿಡಿದ ಕನ್ನಡಿಯಂತಿದೆ. ದಲಿತ ಮಹಿಳೆ ತನ್ನ ಮನೆ, ಮಗು ಇಷ್ಟನ್ನೇ ಅಲ್ಲದೇ ಇಡೀ ಕೇರಿ, ಊರನ್ನು ಮಗುವಿನಂತೆ ನೋಡುತ್ತಾಳೆ. ಊರುಗಳು ಸಮೃದ್ಧಿಯಾಗಿರಬೇಕೆಂದು ಬಯಸುತ್ತಾಳೆ. ಊರಿನ ಸಮೃದ್ಧಿಗಾಗಿ ತನ್ನ ಪ್ರಾಣವನ್ನು ಸಹ ಬಲಿಕೊಡಲು ಹಿಂದುಮುಂದು ನೋಡುವುದಿಲ್ಲ. ಇದಕ್ಕೆ ಕೆಲವು ಕಥನ ಗೀತೆಗಳನ್ನು ಸಾಕ್ಷಿಯಾಗಿ ನೋಡಬಹುದು.

ಕೆರೆಗೆ ಹಾರ ಕಥನ ಗೀತೆಯಲ್ಲಿ ಮಲ್ಲನಗೌಡನ ಮನೆಯಲ್ಲಿ ದಲಿತ ಹುಡುಗಿ ಭಾಗೀರಥಿ ಕೆಲಸಕ್ಕಿರುತ್ತಾಳೆ (ಈ ಕಥನಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಸ್ವರೂಪದ ಕಥನಗಳಿವೆ). ಅವಳ ಗಂಡ ದಂಡಿನಲ್ಲಿರುತ್ತಾನೆ. ಊರು ಮಳೆ ಇಲ್ಲದೆ ಜನ ಸಾಯುವ ಸ್ಥಿತಿಗೆ ತಲುಪುತ್ತಾರೆ. ಊರಿನ ಕ್ಷೇಮ ಸಮಾಚಾರಗಳನ್ನು ನೋಡಿಕೊಳ್ಳಬೇಕಾಗಿರುವ ಕರ್ತವ್ಯ ಗೌಡನಿಗೆ ಇರುವುದರಿಂದ ಆ ಊರಿನ ಜೋಯಿಸನಿಂದಲೇ ಮಲ್ಲನ ಗೌಡ ಹೆಣ್ಣು ಮಗಳನ್ನು ಬಲಿಕೊಡಬೇಕೆಂದು ಹೇಳಿಸುತ್ತಾನೆ. ಆದರೆ ಇದು ಪೂರ್ವನಿರ್ಧಾರಿತ ಯೋಜನೆಯಾಗಿರುತ್ತದೆ. ಇದು ಭಾಗೀರಥಿಗೆ ಗೊತ್ತಿರುವುದಿಲ್ಲ. ಹೆಸರಿಗೆ ಮಾತ್ರ ಮೊದಲಿಗೆ ತನ್ನ ಸೊಸೆಯರಿಗೆ ಬಲಿಯಾಗಲು ಹಲವು ಸಂಕೇತಗಳ ಮೂಲಕ ತಿಳಿಸಲಾಗುತ್ತದೆ. ಅವರು ಯಾವುದೋ ನೆಪ ಹೇಳಿ ತಪ್ಪಿಸಿಕೊಳ್ಳುತ್ತಾರೆ. ಆದರೆ ಕೊನೆಗೆ ಸಿಗುವುದು ಬಾಗೀರಥಿ. ಊರಿನ ಗೌಡ ಮನೆಯ ಒಡೆಯನಿಗೆ ಅಡ್ಡ ಹೇಳುವ ಹಕ್ಕು ಇಲ್ಲ. ಹೇಳಿದರೂ ಬದುಕುಳಿಯಲು ಸಾಧ್ಯವಿಲ್ಲ. ಇಡೀ ಊರಿಗಾಗಿ, ಜನರಿಗಾಗಿ ಬಲಿಯಾಗುವ ನಿರ್ಧಾರ ಮಾಡುತ್ತಾಳೆ (ಮಾಡಿಸಲಾಗುತ್ತದೆ ಎಂದು ಹೇಳಬೇಕಾಗುತ್ತದೆ). ಇಲ್ಲಿ ತನ್ನ ಕಷ್ಟವನ್ನು ಅಪ್ಪ, ಅಮ್ಮರಿಗೆ ಹೇಳಿಕೊಳ್ಳುವುದು ಸಮುದಾಯದೊಂದಿಗೆ ಹೇಳಿಕೊಳ್ಳುವುದನ್ನು ಧ್ವನಿಸುತ್ತದೆ. ಯಾರೂ ಸಹಕರಿಸುವುದಿಲ್ಲ. ಕೊನೆಗೆ ಗೆಳತಿಯ ಹತ್ತಿರ ಹೇಳುತ್ತಾಳೆ. ಆದರೂ ಗೆಳತಿ ಏನೂ ಮಾಡುವ ಹಾಗಿಲ್ಲ. ಅಸಹಾಯಕಳಾಗುತ್ತಾಳೆ. ಭಾಗೀರಥಿ ಬಲಿಯಾಗುತ್ತಾಳೆ. ಕೆರೆಗೆ ನೀರು ಸಮೃದ್ಧಿಯಾಗಿ ಬರುತ್ತದೆ. ದಂಡಿನಿಂದ ಬಂದ ಮಹಾದೇವ ಹೆಂಡತಿಯ ತ್ಯಾಗದ ಗುಣಕ್ಕೆ ಮನಸೋತು, ಅವಳ ಪ್ರೀತಿಗಾಗಿ ಹಾತೊರೆದು ತಾನು ಕೆರೆಗೆ ಹಾರವಾಗುತ್ತಾನೆ.

ಸಮುದಾಯಕ್ಕಾಗಿ ಪ್ರಾಣ ತ್ಯಾಗ ಮಾಡಿದ ಭಾಗೀರಥಿ ಸಮುದಾಯವನ್ನು ತನ್ನ ಮಗುವಿನಂತೆ ಸ್ವೀಕರಿಸಿ, ಅದರ ಒಳಿತಿಗಾಗಿ ತನ್ನನ್ನು ತಾನು ಬಲಿದಾನಕ್ಕೆ ಸಮರ್ಪಿಸಿಕೊಂಡಳು ಎಂದು ಅವಳ ಮಾತೃಮೂಲ ಗುಣಗಳನ್ನು ಹೊಗಳಲಾಗುತ್ತಿದೆ. ಹಾಗೂ ಇಂದಿಗೂ ಅವಳನ್ನು ಪೂಜಿಸಲಾಗುತ್ತಿದೆ. ಭಾಗೀರಥಿ ಕೆರೆಗೆ ಹಾರವಾಗಿರುವ ಕೆರೆ ಚಿತ್ರದುರ್ಗದ ಕೆರೆ ಎಂದು ಕೆಲವರು ಹೇಳಿದರೆ, ಇನ್ನೂ ಕೆಲವರು ಕಮಲಾಪುರದ ಕೆರೆ ಎಂದೇ ಹೇಳುತ್ತಾರೆ. ಅದು ಏನೇ ಆಗಿರಲಿ ಇಲ್ಲಿ ಮಾತೃ ಮೂಲಗುಣಗಳನ್ನು ಗಮನಿಸುವುದಕ್ಕಿಂತ ಮುಖ್ಯವಾಗಿ ವ್ಯವಸ್ಥೆ ದಲಿತ ಮಹಿಳೆಯನ್ನು ಬಲಿಕೊಡುವಲ್ಲಿ ಎಂತಹ ಕ್ರೂರತನಕ್ಕೂ ಇಳಿಯುವುದು. ಪಿತೃಪ್ರಧಾನ ಮೌಲ್ಯಗಳನ್ನು ಮುಖ್ಯವಾಗಿ ಗಮನಿಸಿ ಅರ್ಥಮಾಡಿಕೊಳ್ಳಬೇಕಾಗಿದೆ.

ಬಳ್ಳಾರಿ ಜಿಲ್ಲೆಯ ಬಹುಪಾಲು ಕೆರೆಗಳು ವಿಜಯನಗರದ ಸೂಳೆಯರಿಂದಲೇ ನಿರ್ಮಾಣವಾಗಿರುವುದನ್ನು ಗಮನಿಸಿದರೆ ಸಮುದಾಯದ ಬಗ್ಗೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತದೆ. ಬಂದಮ್ಮ, ಕೆಂಚಮ್ಮ ಕಥನ ಗೀತೆಗಳು ಭಾಗೀರಥಿಯ ಕಥನ ಗೀತೆಗಿಂತ ಸ್ವರೂಪದಲ್ಲಿ ಬೇರೆಯಾಗಿದ್ದರೂ ಆಶಯಗಳು ಒಂದೇ ಇರುವುದನ್ನು ಗಮನಿಸಬೇಕು. ಇವುಗಳ ಪಠ್ಯದ ಭಾಷೆಗೂ ಬಳ್ಳಾರಿ ಭಾಷೆಗೂ ಹತ್ತಿರವಾಗಿರುವುದರಿಂದ ಈ ಎಲ್ಲಾ ಕಥನಗಳು ಇದೇ ಭಾಗದವು ಆಗಿರಬಹುದೇ?

೩. ಫಲವಂತಿಕೆ ನೀತಿ: ಸೃಷ್ಟಿಯನ್ನು ಅರಿಯುವ ಧ್ಯಾನಿಸುವ ಕ್ರಮದಲ್ಲಿ ಫಲವಂತಿಕೆ ಆಚರಣೆಗಳು ಹುಟ್ಟಿಕೊಂಡಿವೆ. ಬೇಟೆಯ ತರುವಾಯದ ಹಂತ ಕೃಷಿ. ಕೃಷಿ ಮಾಡುವುದರ ವೇಳೆಗಾಗಲೆ ಆದಿಮಾನವ ಅಲೆಮಾರಿತನವನ್ನು ಬಿಟ್ಟು ನೆಲೆನಿಲ್ಲಲು ಪ್ರಾರಂಬಿಸಿದ್ದ. ಈ ಸಂದರ್ಭದಲ್ಲಿ ಕೃಷಿಗೂ ಪರಿಸರಕ್ಕೂ ಇರುವ ಸಂಬಂಧವನ್ನು ಹೆಣ್ಣು- ಗಂಡು- ಕೂಡಿಕೆ- ಪರಿಸರಕ್ಕೂ ಇರುವ ಸಂಬಂಧವನ್ನು ಸೃಷ್ಟಿಯ ದೈವಿಕ ಆಯಾಮವೆಂದು ನಂಬಲಾಯಿತು. 'ಭೂಮಿ ಆಕಾಶಕ್ಕೂ ಪುರುಷ ಮತ್ತು ಪ್ರಕೃತಿಯ ಸಂಬಂಧವೇರ್ಪಟ್ಟು, ಹೆಣ್ಣು ಗಂಡಿನ ಸಂಭೋಗ ಕ್ರಿಯೆಯಲ್ಲಿ ಮಳೆ ಮತ್ತು ಬೆಳೆ ಎಂಬ ಸಾಂಸ್ಕೃತಿಕ ರೂಪಕಗಳು ಭಾಷೆಯಲ್ಲೂ, ವ್ಯವಸಾಯದಲ್ಲೂ ಮನಸ್ಸಿನ ಸುಪ್ತ ಸೃಜನಶೀಲತೆಯಲ್ಲೂ ಸೇರಿಕೊಂಡಿದ್ದು ಇಂತಹ ಸೃಜನಶೀಲ ಪ್ರಕ್ರಿಯೆಯು ಭೌತಿಕವಾಗಿ ಒಂದು ಕಡೆ ಸಂಸ್ಕೃತಿಯ ಒಳಗೆ ಪುರುಷ ಮತ್ತು ಸ್ತ್ರೀಯ ಮರು ರೂಪವಾಗಿ ದೈವವನ್ನು ಸೃಷ್ಟಿಸುವಂತೆ ಪ್ರೇರೇಪಿಸಿವೆ. ಇದು ಸಮುದಾಯಗಳ ಹರಿವಿನ ಕ್ರಮದ ವಿಕಾಸವನ್ನು ತಿಳಿಸುವಂತೆಯೇ ದೈವಗಳ ಕಾರ್ಯನೀತಿಯನ್ನು ಧ್ವನಿಸುತ್ತದೆ. ಫಲವಂತಿಕೆಯ ಸಂಕೇತಗಳು ಎಷ್ಟು ಗಾಢವಾಗಿ ಮೈ ಗೂಡಿದ್ದವೆಂದರೆ ಭೌತಿಕ ವಸ್ತುಗಳ ಮೇಲೂ, ಬಂಡೆ ಹಾಗೂ ಗವಿಗಳ ಗೋಡೆಗಳ ಮೇಲೂ ದಟ್ಟವಾಗಿ, ಪ್ರತಿಬಿಂಬವಾಗಿ ಸಂಕೀರ್ಣವಾದ ಅರ್ಥ ಪ್ರಭೇದಗಳನ್ನು ಒಳಗೊಂಡಿದ್ದವು (ಡಾ. ಮೊಗಳ್ಳಿ ಗಣೇಶ್, ೨೦೦೫, ಪು. ೧೪೪). ಪರಿಸರದಲ್ಲಿ ಜೀವ ಸಂಕುಲ ಮುಂದುವರಿಕೆಗೆ ಮೂಲ ಕಾರಣ ಗರ್ಭ. ಗರ್ಭ ಫಲವಂತಿಕೆಯ ಸಂಕೇತ. ಇಂತಹ ಫಲವಂತಿಕೆಗೆ ಸಂಬಂಧಿಸಿದ ಅನೇಕ ಆಚರಣೆ, ನಂಬಿಕೆಗಳನ್ನು ಇಂದಿಗೂ ದಲಿತ ಸಮುದಾಯದಲ್ಲಿ ದಲಿತ ಮಹಿಳೆಯರು ನಿರ್ವಹಿಸುತ್ತಿರುವುದನ್ನು ಕಾಣಬಹುದು.

ಫಲವಂತಿಕೆಯು ಕೃಷಿಯ ನೆಲೆಯಲ್ಲಿ ಹಾಗೂ ಮಾನವ ಕುಲದ ಮುಂದುವರಿಕೆಗೆ ಮುಖ್ಯವಾದುದು ಎಂದು ಅರಿತಿದ್ದರಿಂದ ಇಂತಹ ಆಚರಣೆಗಳನ್ನು ಅಳವಡಿಸಿಕೊಳ್ಳಲಾಗಿದೆ. ಶಕ್ತಿದೇವತೆಗಳನ್ನು ಪೂಜಿಸುವ ಸಂದರ್ಭಗಳಲ್ಲಿ ಪ್ರಾಣಿ ಬಲಿ ಕೊಟ್ಟು ರಕ್ತದ ತಿಲಕವನ್ನಿಡುವುದು, ರಕ್ತದ ಹೆಡೆ ಹಾಕುವುದು ಫಲವಂತಿಕೆಯ ಸೂಚಕವಾಗಿದೆ. ರಕ್ತ ಮುಟ್ಟಿನ ಸಂಕೇತ. ಮುಟ್ಟು ಫಲವಂತಿಕೆಯ ಸೂಚಕ. ಮದುವೆ ಸಂಸ್ಥೆ ಹುಟ್ಟುವದಕ್ಕೂ ಮೊದಲು ಹೆಣ್ಣು- ಗಂಡು ಕೂಡಿಕೆಯ ಸಂದರ್ಭದಲ್ಲಿ ಮೊದಲು ಪ್ರಕೃತಿಯಲ್ಲಿ ಭೂಮಿ ಬೆಳೆಯನ್ನು ಕಂಡ ಮಾನವ ಮೊದಲು ಪ್ರಕೃತಿಯನ್ನು ಆರಾಧಿಸಿ ನಂತರ ಕೂಡಿಕೆಯನ್ನು ಮಾಡಿಕೊಳ್ಳುವ ಶಾಸ್ತ್ರವನ್ನು ರೂಪಿಸಿರಬೇಕು. ಈಗಲೂ ಇದನ್ನು ದಲಿತ ಕುಟುಂಬಗಳಲ್ಲಿ ಕಾಣಬಹುದು.

ಊರೊಟ್ಟಿನ ಜಾತ್ರೆಯ ಸಂದರ್ಭದಲ್ಲಿ ದಲಿತ ಮಹಿಳೆ ಬುಟ್ಟಿಯಲ್ಲಿ ಜೋಳವನ್ನು ತುಂಬಿಕೊಂಡು ಹೋಗುತ್ತಿರುವಾಗ ಅವಳನ್ನು ಅಟ್ಟಿಸಿಕೊಂಡು ಗಂಡಸರು ಬರುತ್ತಾರೆ. ಅವರಿಂದ ತಪ್ಪಿಸಿಕೊಳ್ಳಲು, ಧಾನ್ಯರಕ್ಷೆ ಮಾಡಿಕೊಳ್ಳಲು ಓಡಿ ಹೋಗುತ್ತಾಳೆ. ಇದು ಮಾತೃಮೂಲ ಸಮಾಜದ ಮೇಲೆ ಪಿತೃಪ್ರಧಾನ ಸಮಾಜ ದಬ್ಬಾಳಿಕೆ ನಡೆಸುತ್ತಿರುವ ಹಂತದಲ್ಲಿ ತನ್ನ ಅನನ್ಯತೆಗಳನ್ನು ಉಳಿಸಿಕೊಳ್ಳಲು, ತಾನೇ ಬೆಳೆದ ಧಾನ್ಯವನ್ನು ರಕ್ಷಿಸಿಕೊಳ್ಳಲು ಹೆಣಗಾಡುವ ಸ್ಥಿತಿಯನ್ನು ಈ ಆಚರಣೆ ಧ್ವನಿಸುತ್ತದೆ. ಇಲ್ಲಿ ದಲಿತ ಮಹಿಳೆ ಧಾನ್ಯ ಸಂರಕ್ಷಣೆ ಮಾಡುವ ದೇವತೆಯಾಗಿ ಕಾಣಿಸುತ್ತಾಳೆ. ಜೋಳದಲ್ಲಿ ರಕ್ತ ಬೆರೆಸಿ ಚರಗ ಚೆಲ್ಲುವುದು ಫಲವಂತಿಕೆಯ ಸಂಕೇತವಾಗಿದೆ.

ಸಿಂಧು ಬಯಲಿನಲ್ಲಿ ದೊರೆತಿರುವ ಚಿತ್ರಗಳಲ್ಲಿ ನಗ್ನವಾಗಿ ನಿಂತಿರುವ, ಕುಳಿತಿರುವ, ಸ್ತ್ರೀ ಚಿತ್ರಗಳಲ್ಲಿ ಗರ್ಭದಿಂದ ಸಸಿ ಬೆಳೆಯುತ್ತಿರುವುದನ್ನು ಕಂಚಿನ ಹಾಗೂ ಜೇಡಿಮಣ್ಣಿನ ಆಕೃತಿಗಳಲ್ಲಿ ನೋಡಬಹುದು.

ಇದು ಫಲವಂತಿಕೆಯನ್ನು ಸೂಚಿಸುತ್ತದೆ. ದೇವದಾಸಿಯರು ಮುತ್ತು ಕಟ್ಟಿಸಿಕೊಳ್ಳುವಾಗ ಅದರ ಜೊತೆಯಲ್ಲಿ ಪೋಣಿಸಿಕೊಳ್ಳುವ ಕವಡೆಯ ಮೇಲಿನ ಗೆರೆ ಯೋನಿ ಆಕಾರದಿಂದ ಕೂಡಿರುತ್ತದೆ. ಇದು ಸ್ತ್ರೀಯ ಫಲವಂತಿಕೆಯನ್ನು ತೋರಿಸುತ್ತದೆ. ಈ ರೀತಿಯ ಫಲಸಮೃದ್ಧಿ ಕವಡೆ ಧರಿಸುವುದರಿಂದ ಯಾವುದೇ ಕಷ್ಟ ಬರದೆ ಬಾಳು ಸಮೃದ್ಧಿಯಿಂದ ಕೂಡಿರುತ್ತದೆ ಎಂದು ಅವರು ನಂಬುತ್ತಾರೆ.

ಅನೇಕ ಗ್ರಾಮೀಣ ಸ್ತ್ರೀದೇವತೆಗಳು ನಗ್ನದೇವತೆಗಳೇ ಆಗಿದ್ದಾರೆ. ಈ ಎಲ್ಲಾ ಶಕ್ತಿದೇವತೆಗಳು ಫಲವಂತಿಕೆಯ ಗುರುತುಗಳಾಗಿ ನಿಲ್ಲುತ್ತಾರೆ. ಇಂದಿಗೂ ಫಲವಂತಿಕೆಗೆ ಸಂಬಂಧಿಸಿದ ಅನೇಕ ಸಮುದಾಯಗಳು ವಿಶೇಷವಾದ ನಂಬಿಕೆಗಳನ್ನು ಹೊಂದಿವೆ. ಅವುಗಳ ಆಚರಣೆಗಳನ್ನು ಸಹಾ ಮಾಡಲಾಗುತ್ತಿದೆ. ಫಲವಂತಿಕೆಯು ಕೃಷಿಭೂಮಿಗೆ ಸಂಬಂಧಿಸಿದ್ದರಿಂದ ಮೈನೆರೆದ ಹೆಣ್ಣು ಮಕ್ಕಳಿಂದ ಕೊಯ್ಲು ಮಾಡುವಾಗ, ಬಿತ್ತುವಾಗ, ಪೂಜೆ ಮಾಡಿಸುವ ಕ್ರಮ ಅನೇಕ ಸಮುದಾಯಗಳಲ್ಲಿ ಇದೆ. ಗರ್ಭಿಣಿಯಾದ ಹೆಂಗಸಿನಿಂದ ಧಾನ್ಯರಾಶಿಗೆ ಪೂಜೆ ಮಾಡಿಸಿದರೆ ಹೆಚ್ಚಿನ ಫಸಲು ಮುಂದಿನ ವರ್ಷಗಳಲ್ಲಿ ಬೆಳೆಯುತ್ತದೆ ಎಂಬ ನಂಬಿಕೆ ಇದೆ. ಕಣದಲ್ಲಿ ರಾಶಿ ಪೂಜೆ ನಂತರ ಭೂಮಿಯ ಒಡೆಯರು ಧಾನ್ಯರಾಶಿಯನ್ನು ಮನೆಗೆ ತೆಗೆದುಕೊಂಡು ಹೋಗುತ್ತಾರೆ. ರಾಶಿಯ ಕೆಳಗೆ ಉಳಿದ ಧಾನ್ಯವನ್ನು ತಮ್ಮ ಹೊಲದಲ್ಲಿ ದುಡಿದ ಹೊಲೆಯಾಳುಗಳಿಗೆ ಅದನ್ನು ಬಿಟ್ಟುಕೊಡುತ್ತಾರೆ. ಇದರಿಂದ ಮುಂದಿನ ವರ್ಷದ ಫಸಲು ಚೆನ್ನಾಗಿ ಆಗುತ್ತದೆ ಎಂದು ನಂಬುತ್ತಾರೆ. ದಲಿತರಿಂದಲೇ ಭೂಮಿಯನ್ನು, ಬೆಳೆಯನ್ನು ಕಸಿದುಕೊಂಡ ಭೂ ಮಾಲೀಕನು ಇಂತಹ ನಂಬಿಕೆಯನ್ನು ಇರಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? ಇದಕ್ಕೆ ಕಾರಣವೇನು? ಎಂಬುವುದು ಹೆಚ್ಚು ಕುತೂಹಲವನ್ನು ಉಂಟುಮಾಡುತ್ತದೆ. ಇಲ್ಲಿ ಕೃಷಿಯ ಸಂದರ್ಭದಲ್ಲಿ ದಲಿತರು ಫಲವಂತಿಕೆಯ ಸಂಕೇತವಾಗಿ ನಿಲ್ಲುತ್ತಾರೆ.

ಹುಡುಗಿ ಮೈನೆರೆದಾಗ ಕವಡೆ ಧರಿಸಿದ ೫ ಜನ ಜೋಗತಿಯರು ಬಂದು ಮೈನೆರೆದ ಹುಡುಗಿಗೆ ಆಶೀರ್ವಾದ ಮಾಡುವುದು ಫಲವಂತಿಕೆಯ ಸಂಕೇತವಾಗಿದೆ. ಫಲವಂತಿಕೆಯ ಆಚರಣೆಗಳು ದೈವಗಳು ಸೃಷ್ಟಿಯಾದ ಬಗೆಯನ್ನು ತಿಳಿಸುತ್ತವೆ. ನವ ದಂಪತಿಗಳನ್ನು ಗಂಗೆಗೆ ಹೋಗಿ ಪೂಜೆ ಮಾಡಿಸಿಕೊಂಡು ಬರಲಾಗುತ್ತದೆ. ಫಲವಂತಿಕೆಗೆ ಮೂಲ ಸೆಲೆ ನೀರಾಗಿರುವುದರಿಂದ ನೀರು ಫಲವಂತಿಕೆಗೆ ಸಹಾಯಕವಾಗಿ ನಿಲ್ಲುತ್ತದೆ. ನಂಬಿಕೆ, ಆಚರಣೆಗಳಲ್ಲಿ ಬರುವ ಹಾವು ಫಲವಂತಿಕೆಯ ಸಂಕೇತವೆಂದು ಅನೇಕ ವಿದ್ವಾಂಸರು ಪ್ರತಿಪಾದಿಸುತ್ತಾರೆ. ಹಾವು ಕಾಮದ ಸಂಕೇತ. ಫಲವಂತಿಕೆಗೆ ಮೂಲ ಕೂಡಿಕೆ. ಕೂಡಿಕೆಗೆ ಮೂಲ ಕಾಮವಾಗುತ್ತದೆ. ಹೆಣ್ಣಿನ ಮೂಲಕ ಕೃಷಿಯ ಖಚಿತ ಆಕಾರವನ್ನು ಪಡೆದುಕೊಳ್ಳುತ್ತಾ ಹೋದಂತೆ ಕೃಷಿಯ ರಹಸ್ಯಗಳು ಬಯಲಾದವು. ಕೃಷಿಯ ಮೇಲೂ ಪುರುಷ ಕೂಡ ತನ್ನ ಪ್ರಭಾವವನ್ನು ಬೀರಲು ಶುರು ಮಾಡಿದ ಇದರಿಂದ ಪುರುಷನ ನಂಬಿಕೆಗಳೂ ಸಹ ಫಲವಂತಿಕೆಯ ಸಂಸ್ಕೃತಿಯಲ್ಲಿ ಅಳವಡಿಸಲು ಸಾಧ್ಯವಾಯಿತು. ನಂತರದಲ್ಲಿ ಈ ಏರುಪೇರುಗಳು ಉಂಟಾಗಿದ್ದರೂ ಫಲವಂತಿಕೆಯ ನಂಬಿಕೆಗಳು, ದೈವಾಚರಣೆಗಳು ಸೃಷ್ಟಿಯ ಸಂದರ್ಭದಲ್ಲಿ ಪ್ರಮುಖ ಪಾತ್ರವಹಿಸಿದವು.

ಫಲವಂತಿಕೆಯ ಆಚರಣೆಗಳು ಮಾತೃಪ್ರಧಾನ ಸಮಾಜವನ್ನು ಧ್ವನಿಸುತ್ತಲೇ ಪಿತೃಸಮಾಜದ ಕಡೆ ಅದು ಪಲ್ಲಟಗೊಂಡ ಸಂದರ್ಭಗಳನ್ನು ಹೇಳುತ್ತವೆ. ಏನೇ ಆದರೂ ತಳ ಸಮುದಾಯದ ಮಹಿಳೆ ಕೃಷಿಯನ್ನು ತನ್ನ ಜೀವನದ ಅನಿವಾರ್ಯಕ್ರಮ ಎಂದು ಭಾವಿಸಿದ್ದರಿಂದ ಅವರ ಆಚರಣೆಗಳಲ್ಲಿ ಇಂದಿಗೂ ಫಲವಂತಿಕೆಯ ನೀತಿಯನ್ನು ಗುರುತಿಸಬಹುದಾಗಿದೆ.

೪. ವಿಶ್ವಾತ್ಮಕ ಪ್ರಜ್ಞೆ: ವಿಶ್ವಾತ್ಮಕತೆ ಎಂದರೆ ವಿಶ್ವಪ್ರಜ್ಞೆ ಎಂಬ ಅರ್ಥದಲ್ಲಿ ಹಲವರು ಬಳಸುತ್ತಾರೆ. ಪದದ ಮೂಲಕ ಅರ್ಥ ವಿವರಣೆ ನೋಡುವುದಾದರೆ ವಿಶ್ವದ ಆತ್ಮಕತೆಯನ್ನು ತನ್ನ ಆತ್ಮಕತೆಯಾಗಿಸಿಕೊಳ್ಳುವುದು ಅಥವಾ ತನ್ನ ಆತ್ಮಕತೆಯನ್ನು ವಿಶ್ವದ ಆತ್ಮಕತೆಯೆಂದೇ ಪರಿಭಾವಿಸುವುದು ವಿಶ್ವಾತ್ಮಕ ಪ್ರಜ್ಞೆಯಾಗುತ್ತದೆ. ಆದರೆ ವಿಶ್ವಾತ್ಮಕತೆ ಎಂಬುವುದು ಭಾವನಾತ್ಮಕತೆಗೆ ಸಂಬಂಧಿಸಿದ್ದು. ಅನುಭವ ಲೋಕಕ್ಕೆ ಸಂಬಂಧಿಸಿದ್ದು ಎಂದು ಹೇಳಲಾಗುತ್ತದೆ. ಇಲ್ಲಿ 'ಪ್ರಜ್ಞೆ' ಎಂಬುವುದು 'ತಿಳುವಳಿಕೆ' ವ್ಯಾಪ್ತಿಯನ್ನು ಒಳಗೊಂಡಂತೆ ವಿಶ್ವಾತ್ಮಕತೆಯಲ್ಲಿನ ಅನುಭವವನ್ನು ಆಧರಿಸಿದೆ. ಇಂತಹ ತಿಳುವಳಿಕೆ, ಅನುಭವಗಳಿಂದ ಕೂಡಿದ ಭಾವನಾತ್ಮಕತೆಯೇ ಜಾನಪದದ ಹುಟ್ಟಿಗೆ ಕಾರಣವಾಗಿದೆ. ಮನುಷ್ಯ ಯಾವಾಗ ಭೂಮಿಯ ಮೇಲೆ ಹುಟ್ಟಿದನೋ ಆಗಿನಿಂದಲೂ ಜಾನಪದ ಸಂಸ್ಕೃತಿ ಇದೆ. 'ಜಾನಪದ ವಿರಾಟ್ ಸ್ವರೂಪದ್ದು. ಜಗತ್ತಿನ ಎಲ್ಲಾ ವಿಷಯಗಳು ಇದರಲ್ಲಿ ಬರುವವು. ಜನಪದ ಸಂಸ್ಕೃತಿಯ ಅಧ್ಯಯನವೇ ಜಾನಪದ. ಜಾನಪದಕ್ಕೆ ಸಂಬಂಧಿಸಿದ ಪ್ರಜ್ಞೆಯೇ ಜಾನಪದ. ತನ್ನ ವಿಶಾಲತೆಯ ಅರ್ಥದಲ್ಲಿ ಅದು ಯಾವುದೇ ಸಮಾಜದ ವಾಚಿಕ ಪರಂಪರೆಗಳ ಕಲೆ ಮತ್ತು ನಂಬಿಕೆಗಳ ಮೊತ್ತ ಹಾಗೂ ಸಂಪ್ರದಾಯವನ್ನು ಕುರಿತು ವಿಜ್ಞಾನವೂ ಆಗಿದೆ' (ಸಂ.ಹಿ.ಸಿ. ರಾಮಚಂದ್ರೇಗೌಡ, ೨೦೦೪, ಪು. ೧೧೪). ಈ ಹಿನ್ನೆಲೆಯಲ್ಲಿಯೇ ನಾವು ವಿಶ್ವಾತ್ಮಕತೆಯನ್ನು ಗುರುತಿಸಿಕೊಳ್ಳಬೇಕಾಗಿದೆ.

ಮೊಟ್ಟಮೊದಲಿಗೆ ವಿಶ್ವಾತ್ಮಕ ಪ್ರಜ್ಞೆಯ ಮೂಲಕ ತನ್ನ ಕಥನಗಳನ್ನು ರೂಪಿಸಿಕೊಂಡವಳು ದಲಿತ ಮಹಿಳೆ. ಜನಪದ ಕಥೆಯಲ್ಲಿ ರಾಜಕುಮಾರ ರಾಕ್ಷಸನನ್ನು ಸಂಹರಿಸಲು ೭ ಸಮುದ್ರ, ೭ ಬೆಟ್ಟಗಳ ಆಚೆ ಹೋಗುತ್ತಾನೆ. ಇದರ ಮೂಲಕ ದಲಿತ ಮಹಿಳೆ ಪ್ರಾದೇಶಿಕ ಎಲ್ಲೆಗಳನ್ನು ಮೀರಿ ವಿಶ್ವದ ಪ್ರದಕ್ಷಿಣೆಯನ್ನು ಮಾಡುತ್ತಾಳೆ. ನಕ್ಷತ್ರ, ಗ್ರಹಗಳ ಮೂಲಕ ಅವುಗಳ ಗುಣಾವಗುಣಗಳನ್ನು, ಅವುಗಳ ಲೋಕವನ್ನು ಹೇಳುತ್ತಾಳೆ. ಮೊದಲು ವಿಜ್ಞಾನ ಇಷ್ಟು ಮುಂದುವರಿದಿರಲಿಲ್ಲ. ಗ್ರಹ, ನಕ್ಷತ್ರ, ಆಕಾಶಗಳು ವೈಜ್ಞಾನಿಕವಾಗಿ ಬೆಳಕಿಗೆ ಬಂದಿರಲಿಲ್ಲ. ಆದರೆ ಅಜ್ಜಿ ಕಥೆಗಳು ಇವುಗಳೆಲ್ಲಾವನ್ನು ಹೇಗೆ ತನ್ನ ಪ್ರಜ್ಞಾವಲಯಕ್ಕೆ ತಂದುಕೊಂಡಳು ಎಂಬುವುದು ಆಶ್ಚರ್ಯವನ್ನು ಉಂಟುಮಾಡುತ್ತದೆ. ಪ್ರಾದೇಶಿಕ ಕಥನಗಳಲ್ಲಿ ವಿಶ್ವಾತ್ಮಕ ಪ್ರಜ್ಞೆಯನ್ನು ಗ್ರಹಿಸಲು ಆಗುವುದಿಲ್ಲ ಎಂದು ಹೇಳಲು ಬರುವುದಿಲ್ಲ. ವಿಶ್ವಾತ್ಮಕ ಪ್ರಜ್ಞೆಯು ಪ್ರಾದೇಶಿಕ ಪ್ರಜ್ಞೆಯಿಂದಲೇ ಬೆಳೆದುಬಂದಿರುವಂತಹದ್ದು. ಹಾಗೆಯೇ ಪ್ರಾದೇಶಿಕತೆಯಿಂದಲೇ ವಿಶ್ವಾತ್ಮಕತೆಯು ರೂಪಗೊಂಡಿರುತ್ತದೆ. ಜಗತ್ತಿನ ಎಲ್ಲಾ ಸಂಸ್ಕೃತಿಯ ಪರಂಪರೆಗಳ ಕೂಡುಬಿಂದು ಎಲ್ಲಿದೆ ಎಂದು ಹುಡುಕಾಟವನ್ನು ನಡೆಸುವುದು ವಿಶ್ವಾತ್ಮಕ ಪ್ರಜ್ಞೆಯ ಮೂಲ ಗುಣ. ಹಲವು ವಿಧಗಳಲ್ಲಿ ಅಭಿವ್ಯಕ್ತಿಗೊಳ್ಳುವ ವಿಶ್ವಪ್ರಜ್ಞೆಯು ವಿರಾಟ್ ಕಥನಗಳಲ್ಲಿ ಸಂಸ್ಕೃತಿ, ನಾಗರೀಕತೆ, ಚರಿತ್ರೆ, ರಾಜಕೀಯ ಪ್ರಭುತ್ವ, ಆಧುನಿಕತೆಯ ಪರ್ಯಾಯ ರೂಪಗಳನ್ನು ಕಾಣಬಹುದು. ಒಂದರೊಳಗೊಂದು ಸೇರಿಕೊಳ್ಳುವ ಮೂಲಕ ವಿಶ್ವದ ಎಲ್ಲಾ ಅನುಭವಗಳನ್ನು ತಿಳುವಳಿಕೆಯನ್ನು ಮಾನವೀಯತೆಗೆ ಒಳಪಡಿಸುವ ಪ್ರಜ್ಞೆಯೇ ವಿಶ್ವಾತ್ಮಕ ಪ್ರಜ್ಞೆ. ವಾಸ್ತವದಲ್ಲಿ ನಡೆಯುತ್ತಿರುವ ಜಿಲ್ಲೆ, ರಾಜ್ಯ, ದೇಶದ ಗಡಿ ವಿವಾದಗಳು ವಿಶ್ವಾತ್ಮಕ ಪ್ರಜ್ಞೆಯ ಕೊರತೆಯನ್ನು ತೋರಿಸುತ್ತವೆ. ಆದರೆ ಇಂತಹ ವಿವಾದಗಳನ್ನು ಮುರಿದು ಆರೋಗ್ಯಪೂರ್ಣವಾಗಿ ಸಂಬಂಧಗಳನ್ನು ಕಟ್ಟುವ ಗುಣಗಳನ್ನು ದಲಿತ ಮಹಿಳೆ ತನ್ನ ಕಥನಗಳಲ್ಲಿ ನಿರೂಪಿಸಿದ್ದಾಳೆ.

ಒಂದು ಕಾಲದಲ್ಲಿ ಸಮೃದ್ಧಿಯಿಂದ ಕೂಡಿದ ದಲಿತ ಮಹಿಳೆ ಕಾಲಘಟ್ಟಗಳ ಒತ್ತಡಕ್ಕೆ ಸಿಕ್ಕು ತನ್ನ ಸಮೃದ್ಧಿಯನ್ನು ಬೇರೆಯವರ ಹಿತಕ್ಕಾಗಿ ಬಿಟ್ಟುಕೊಡುವ ಅನಿವಾರ್ಯ ಒದಗಿತು. ಇದು ವ್ಯವಸ್ಥೆಯಲ್ಲಿ ಅವಳಿಗಾದ ಸಾಂಸ್ಕೃತಿಕ, ಸಾಮಾಜಿಕ ದುರಂತವನ್ನು ಸೂಚಿಸುತ್ತದೆ.

ಅಧ್ಯಾಯ ೪. ದಲಿತ ಮಹಿಳಾ ಸಾಮಾಜಿಕ ರಚನೆ

೪.೧ ಪುರೋಹಿತ ಶಾಹಿ ವ್ಯವಸ್ಥೆ ಮತ್ತು ದಲಿತ ಮಹಿಳೆ

೪.೨ ಊಳಿಗಮಾನ್ಯಶಾಹಿ ವ್ಯವಸ್ಥೆ ಮತ್ತು ದಲಿತ ಮಹಿಳೆ

೪.೩ ಲೈಂಗಿಕ ದೌರ್ಜನ್ಯ ಮತ್ತು ದಲಿತ ಮಹಿಳೆ

ಅಧ್ಯಾಯ - ೪

ದಲಿತ ಮಹಿಳಾ ಸಾಮಾಜಿಕ ರಚನೆ

ಭಾರತದಲ್ಲಿ ಇರುವ ಜಾತಿಪದ್ಧತಿಯಂಥ ವಿಸ್ತಾರವಾದ ವ್ಯವಸ್ಥೆಗೆ ಸಮಾನವಾಗಿರುವಂತಹದ್ದು ಪ್ರಪಂಚದ ಬೇರೆಲ್ಲೂ ಕಾಣಲಾಗುವುದಿಲ್ಲ ಎಂದು ಹೇಳಬಹುದು. ಸಮಾಜದಲ್ಲಿ ವಿವಿಧ ಸ್ತರಗಳು, ವರ್ಗಗಳು ಅಥವಾ ಸಾಮಾಜಿಕ ವ್ಯತ್ಯಯಗಳು, ದರ್ಜೆಗಳು ಕಂಡು ಬರದಿರುವ ದೇಶವೇ ಇಲ್ಲವಾದರೂ ಭಾರತೀಯ ಜಾತಿಪದ್ಧತಿ ಅದ್ವಿತೀಯವಾದುದು. ಒಂದು ಸಾಮಾನ್ಯ ಮೂಲ, ಹೆಸರು, ಶಿಕ್ಷಣ, ದೇವತೆ, ವೃತ್ತಿ ಹಾಗೂ ಆಚರಣೆಗಳು ಒಂದು ಸಮಾನ ಜಾತಿ ಗುಂಪಿನಿಂದ ಮತ್ತೊಂದನ್ನು ವಿಭಜಿಸುತ್ತದೆ. ಸಹಬಾಳ್ವೆ, ಹೆಣ್ಣನ್ನು ಸ್ವಜಾತಿಯಲ್ಲಿ ಕೊಟ್ಟು ತರುವುದು, ಉಳಿದ ವಿಷಯಗಳಿಗಿಂತ ಹೆಚ್ಚಾಗಿ ಇಂದಿನ ಜಾತಿಪದ್ಧತಿಯ ಪ್ರಮುಖ ಲಕ್ಷಣವಾಗಿದೆ. ಕೆಳ ಜಾತಿಯವರ ಸಂಬಂಧ ಉಂಟಾದ ತಕ್ಷಣ ಮೇಲುಜಾತಿಯವರು ನಾವು ಅಪವಿತ್ರವಾದೆವು ಎಂದು ತಿಳಿಯುತ್ತಾರೆ. ಇದು ಜಾತಿ- ಜಾತಿಯವರನ್ನು ವಿಂಗಡಿಸಿದೆ.

ಒಂದು ಕಾಲದ ವಿಶಿಷ್ಟ ಸಮಯದ ಸಮಾಜದ ಸ್ವರೂಪವನ್ನು ಅರಿಯಬೇಕಾದರೆ ಆ ಕಾಲದಲ್ಲಿ ಹೊರ ಬಂದ ಸಾಹಿತ್ಯದ ಕೃತಿಗಳ ಶಾಸನ, ಸ್ಮಾರಕ, ಶಿಲ್ಪಗಳನ್ನು ಅನಿವಾರ್ಯವಾಗಿ ಅವಲಂಭಿಸಬೇಕಾಗುತ್ತದೆ. ಪ್ರತಿಯೊಂದು ಕೃತಿಯೂ ಸಹ ತನ್ನ ಕಾಲದ ಸ್ಥಿತಿಗಳ ಚಿತ್ರಣವನ್ನು ಪ್ರತ್ಯಕ್ಷವಾಗಿಯೋ, ಪರೋಕ್ಷವಾಗಿಯೋ ತನ್ನ ಕೃತಿಯಲ್ಲಿ ಚಿತ್ರಿಸಿರುತ್ತದೆ. ಸಮಾಜದಲ್ಲಿರುವ ರೂಢಿಗಳು, ಸಂಪ್ರದಾಯಗಳು, ರೀತಿ- ನೀತಿಗಳು, ಆಚಾರ ವಿಚಾರಗಳ ಬಗೆಗೆ ಪ್ರತಿಯೊಂದು ಸಾಹಿತ್ಯ ಕೃತಿಯು ಅವಶ್ಯವಾಗಿ ಪ್ರಸ್ತಾಪಿಸಿರುತ್ತದೆ. ತನ್ನ ಸುತ್ತಮುತ್ತ ನಡೆಯುತ್ತಿರುವ ಪ್ರಕ್ರಿಯೆಗಳನ್ನು ದಾಖಲು ಮಾಡದೇ ಜಾಗ್ರತವಾದ ಪ್ರಕ್ರಿಯೆಯನ್ನು ತೋರಿಸದಿದ್ದ ಸಂದರ್ಭದಲ್ಲಿ ಅದು ತನ್ನ ಸ್ವರೂಪದಲ್ಲಿನ ಸೃಜನಶೀಲತೆಯನ್ನು ಕಳೆದುಕೊಂಡಿರುತ್ತದೆ ಎಂದೇ ಹೇಳಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ದಲಿತ ಮಹಿಳೆಯ ಸಾಮಾಜಿಕ ರಚನೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಆರ್ಯರು, ಭಾರತಕ್ಕೆ ಪ್ರವೇಶ ಪಡೆದ ಕಾಲದಿಂದಲೂ ಅವರಿಂದಾದ ಸಾಹಿತ್ಯ ಸಾಹಿತ್ಯೇತರ ಚಟುವಟಿಕೆಗಳಿಂದಲೇ ನಾವು ಆ ಹಾದಿಯನ್ನು ಪ್ರವೇಶ ಮಾಡಬೇಕಾಗುತ್ತದೆ.

೪.೧ ಪುರೋಹಿತಶಾಹಿ ವ್ಯವಸ್ಥೆ ಮತ್ತು ದಲಿತ ಮಹಿಳೆ

ಮಾನವನ ಆದಿಮ ಜೀವನ ಬುಡಕಟ್ಟುಗಳಲ್ಲಿತ್ತು. ಆಗಲೂ ಪೂಜಾರಿ, ಪುರೋಹಿತರುಗಳಿದ್ದರು. ಆದರೆ ಆಗ ಅವರು ಶ್ರೇಷ್ಠರಾಗಿರಲಿಲ್ಲ. ಅಂದರೆ 'ಪುರೋಹಿತಿಕೆ' ಆಗ 'ಪುರೋಹಿತಶಾಹಿ'ಯಾಗಿರಲಿಲ್ಲ (ಡಾ.ಟಿ.ಆರ್. ಚಂದ್ರಶೇಖರ್, ೨೦೦೫, ಪು. ೪೫). ಆರ್ಯವೈದಿಕರು ಭಾರತಕ್ಕೆ ಬಂದು ನೆಲೆಯಾಗುತ್ತ ಹೋದಂತೆ ಬುಡಕಟ್ಟು ಸ್ಥಿತಿಯಿಂದ ವರ್ಗ, ವರ್ಣ, ಜಾತಿ ಸಮಾಜಕ್ಕೆ ಪರಿವರ್ತನೆಗೊಂಡು ಅವರು ವ್ಯವಸ್ಥೆಯ ಯಜಮಾನರಾದುದರಿಂದ ತಮ್ಮ ಸಂಪರ್ಕಕ್ಕೆ ಬಂದ ಸ್ಥಳೀಯ ಬುಡಕಟ್ಟುಗಳನ್ನು ಜಾತಿವ್ಯವಸ್ಥೆಗೆ ಅಳವಡಿಸಿ ಶ್ರೇಣೀಕರಣವನ್ನು ಸ್ಥಿರಗೊಳಿಸಿದರು. ಈ ಹಂತದಲ್ಲಿ ಬುಡಕಟ್ಟು ಪುರೋಹಿತರು ವರ್ಗ, ವರ್ಣ ಸಮಾಜದ ಪುರೋಹಿತಶಾಹಿ ವರ್ಗವಾಗಿ ಮಾರ್ಪಟ್ಟರು (ಅದೇ ಪುಟ).

ಪ್ರಾಚೀನ ಭಾರತದಲ್ಲಿ ಸ್ತ್ರೀಯರ ಸ್ಥಾನಮಾನದ ಅಧ್ಯಯನಕ್ಕೆ ಸ್ಪಷ್ಟವಾದ ಆಧಾರಗಳು ದೊರಕುವುದು ವೇದಗಳ ಕಾಲದಿಂದ. ಅದಕ್ಕಿಂತ ಮೊದಲಿನ ಸಿಂಧೂಕಣಿವೆಯ ನಾಗರೀಕತೆ ಕಾಲದ ಸ್ತ್ರೀಯರ ಸ್ಥಿತಿಗತಿ

ಬಗ್ಗೆ ದೊರೆತಿರುವ ಅವಶೇಷಗಳನ್ನಾಧರಿಸಿ ಗಣಿಕೆಯರ ವೃತ್ತಿ ರೂಪುಗೊಂಡಿತ್ತೆನ್ನಲಾಗಿದೆ (ರಾಜರಾಮ ಹೆಗಡೆ, ೨೦೦೬, ಪು. ೧೨೦). ಇದರಿಂದ ವೇದಕಾಲದ ಪೂರ್ವದಲ್ಲಿಯೂ ಸ್ತ್ರೀಯರ ಶೋಷಣೆ ಇತ್ತು ಎಂಬುವುದು ಇದರಿಂದ ಸ್ಪಷ್ಟವಾಗುತ್ತದೆ.

ಪುರೋಹಿತಶಾಹಿಯ ಅಟ್ಟಹಾಸ ಮೆರೆದಿದ್ದು ವೇದಗಳ ಕಾಲದಲ್ಲಿ ಎಂಬುವುದು ವೇದಗಳಲ್ಲಿ ದೊರೆಯುವ ಅನೇಕ ಆಕರಗಳಿಂದ ಸ್ಪಷ್ಟವಾಗುತ್ತದೆ. ಆದರೆ ವೇದಗಳಲ್ಲಿ ಮೊದಲ ವೇದವಾದ ಋಗ್ವೇದದಲ್ಲಿ ಕ್ರಿ.ಪೂ. ೨೦೦೦-೫೦೦ ರಲ್ಲಿ ಸ್ತ್ರೀಯರು ಹೆಚ್ಚು ಕಡಿಮೆ ಪುರುಷರಷ್ಟೇ ಮಾನ್ಯತೆ ಹೊಂದಿದ್ದರು ಎಂದು ಹೇಳಲಾಗುತ್ತದೆ. ಇದನ್ನೇ ಋಗ್ವೇದದ ಅನೇಕ ಉಲ್ಲೇಖಗಳು ಸ್ಪಷ್ಟಪಡಿಸುತ್ತವೆ. ಬಹುಶಃ ಇದಕ್ಕೆ ಕಾರಣ ನಾಗರೀಕತೆ ಇನ್ನೂ ಆಗ ನೆಲೆಯೂರುತ್ತಿತ್ತು. ಆರ್ಯರು ಈ ಸ್ಥಿತಿಯಲ್ಲಿ ಇನ್ನೂ ನೆಲೆಗೊಂಡಿರಲಿಲ್ಲ ಎಂದು ಹೇಳುತ್ತಾರೆ. ವೇದಗಳೆಲ್ಲವೂ ಸೃಷ್ಟಿಯಾಗಿರುವುದು ಆರ್ಯರಿಂದಲೇ. ಆದುದರಿಂದ ಆರ್ಯರು ಪ್ರಾರಂಭದಲ್ಲಿ ಬುಡಕಟ್ಟಿನ ಮನೋಭಾವನೆಯನ್ನು ಹೊಂದಿದ್ದೂ ನಂತರದಲ್ಲಿ ದ್ರಾವಿಡರನ್ನು ಬಗ್ಗು ಬಡಿಯಲು ಅನೇಕ ನಿಯಮಾವಳಿಗಳನ್ನು ರೂಢಿಸುವ ಸಲುವಾಗಿಯೇ ವೇದಗಳನ್ನು ಜಾರಿಗೊಳಿಸಿರಬೇಕು.

ದ್ರಾವಿಡರ ಮೇಲೆ ನಡೆದ ಆರ್ಯರ ದಾಳಿಯಿಂದ ಅವರ ಜೀವನ ಸ್ಥಿತಿ ಅಸ್ತವ್ಯಸ್ತಗೊಂಡಿತು. ಕ್ರಿ.ಪೂ. ೧೨೨೦ ರ ಋಗ್ವೇದದ ಕೆಲವು ಪುರುಷ ಸೂಕ್ತಿಯ ಆಧಾರದ ಮೇಲೆ ಪ್ರಾಚ್ಯ ಸಂಶೋಧಕರಾದ ರಾಹುಲ ಸಾಂಕೃತ್ಯಾಯಾನರು ಮಂಡಿಸಿರುವ ಅಭಿಪ್ರಾಯ ಬಹಳಷ್ಟು ಮಟ್ಟಿಗೆ ನೈಜತೆಯನ್ನು ಹೊರಹಾಕಿವೆ. ಇವರ 'ದೇವೋದಾಸ' ಕಾದಂಬರಿಯಲ್ಲಿ ಬರುವ ಅನೇಕ ಐತಿಹಾಸಿಕ ಘಟನೆಗಳೆಲ್ಲವೂ ಸತ್ತ ಸಿಂಧೂ ನದಿ ಬಯಲು ಪ್ರದೇಶಕ್ಕೆ ಸಂಬಂಧ ಪಟ್ಟಂತಿವೆ. ಇದು ದೇಶೀಯ ನಾಗರೀಕತೆಯ ಜನ್ಮಸ್ಥಳ. ಈ ನಾಗರೀಕತೆಯನ್ನು ಆಧಾರವಾಗಿಟ್ಟುಕೊಂಡು ಭಾರತದ ಪೂರ್ವ ಇತಿಹಾಸವನ್ನು ಅವಲೋಕಿಸಿದಾಗ ಈ ದೇಶದ ನಾಗರೀಕತೆಯ ವಾಸ್ತವಿಕ ಕಥೆ ಬಿಚ್ಚಿಕೊಳ್ಳುತ್ತದೆ. ಇಂತಹ ಸಂಸ್ಕೃತಿಯ ಮೇಲೆ ಆರ್ಯ ಸಮುದಾಯದ ಯಜಮಾನಿಕೆಯ ಬಗ್ಗೆ ರಾಹುಲರ ಚಿಂತನೆ ಹೀಗಿದೆ. "ನಮಗೆ ಬೇಕಾಗಿರುವುದು ಆ ದೇವ ದ್ವೇಷಿಗಳ ಹಾಗೂ ಕೃಷ್ಣ ವರ್ಣೀಯರ ದನಕರುಗಳು ಮತ್ತು ಕುರಿ ಮೇಕೆಗಳು ದೇವ ದ್ವೇಷಿಗಳ ಬಳಿಯಲ್ಲಿ ಹೆಚ್ಚಿನ ಸಂಪತ್ತು ಇರಕೂಡದೆಂದು ಇಂದ್ರ ಆಜ್ಞೆ ಮಾಡಿದ್ದಾನೆ. ನಾವು ಅನೇಕ ವರ್ಷಗಳಾದ ಮೇಲೆ ಆಲೋಚನೆ ಮಾಡುತ್ತಿದ್ದರೂ, ದೇವತೆಗಳು ನಮಗೆ ನೀಡಿದ ಕರ್ತವ್ಯವನ್ನು ನಿರ್ವಹಿಸದೆ ಹೋಗಿದ್ದೇವೆ. ದೇವ ದ್ವೇಷಿಗಳೆಂದರೆ ನಿಷಾದ ಘಣಿ ಹಾಗೂ ಕಿರಾತರೆಂಬ ಸಪ್ತ ಸಿಂಧೂನದಿ ಬಯಲಿನಲ್ಲಿದ್ದ ಜನ ಸಮುದಾಯ, ಇವರು ಅಷ್ಟೇ ಸಂಪತ್ತನ್ನು ಹೊಂದಿದ್ದ ರಣೋತ್ಸಾಹಿ ವೀರರಾಗಿದ್ದರು. 'ಇಂದ್ರ' ಆರ್ಯರ ಅಧಿಪತಿಯಾದರೆ, ಭಾರತೀಯರಿಗೆ ಪಶುಪತಿ ಅಧಿಪತಿಯಾಗಿದ್ದನು. ಈ ಪಶುಪತಿಗಳು ಪ್ರಕೃತಿ ಪ್ರಾಣಿಗಳನ್ನೇ ಹೆಚ್ಚಾಗಿ ಪೂಜಿಸುತ್ತಿದ್ದವರು. ಇಂದ್ರ ಮತ್ತು ವಿಷ್ಣು ವರ್ಣಾಶ್ರಮದ ಮೂಲಾಧಿಪತಿಗಳಂತೆ ಗುರುತಿಸಿಕೊಳ್ಳುತ್ತಾರೆ (ದಾಸನೂರು ಕೂಸಣ್ಣ, ೧೯೯೯, ಪು. ೧). ವರ್ಣ ವ್ಯವಸ್ಥೆಯಲ್ಲಿ ನಾಲ್ಕು ವರ್ಣಗಳನ್ನು ವೃತ್ತಿ ಆಧಾರದ ಮೇಲೆ ಗುರುತಿಸಲಾಯಿತು. ಈ ವೃತ್ತಿ ಆಧಾರಿತ ವರ್ಣಾಶ್ರಮದಲ್ಲಿ ಹೊಲೆಮಾದಿಗರು ಸಮಾಜದಲ್ಲೇ ಅತ್ಯಂತ ಕೀಳು ಎನಿಸಿಕೊಂಡ ವೃತ್ತಿಗಳಾದ, ಸತ್ತ ದನವನ್ನು ಊರಿನ ಆಚೆ ಸಾಗಿಸಿ ಅದರ ಚರ್ಮ ಸುಲಿದು ಚಪ್ಪಲಿ, ಬಾರು ಕೋಲು, ತಯಾರು ಮಾಡುವುದು. ಸತ್ತ ದನವನ್ನೇ ಆಹಾರವಾಗಿ ಉಪಯೋಗಿಸುವುದು, ಊರಿನ ಎಲ್ಲಾ ಕೊಳಚೆಯನ್ನು ಶುಚಿಗೊಳಿಸುವ, ಹಬ್ಬ, ಉತ್ಸವ ಜಾತ್ರೆಗಳಿಗೆ ತಾವೇ ತಯಾರು ಮಾಡಿದ ಹಲಗೆ ಬಾರಿಸುವ ಕೆಲಸವನ್ನು

ಮಾಡುವುದು ಇವರನ್ನು ಸಾಮಾಜಿಕ ಬದುಕಿನಿಂದ ಹಿಂದೆ ಸರಿಸಿದೆ. ಇವರು ಸಾಂಸ್ಕೃತಿಕತೆಯಲ್ಲಿ ಸಿರಿತನವನ್ನು ಹೊಂದಿದ್ದರೂ ಅದು ಸಿರಿತನವಾಗಿ ವ್ಯವಸ್ಥೆ ಪರಿಗಣಿಸದೆ ಇರುವುದಕ್ಕೆ ಕಾರಣವೂ ಸಹ ಇದೇ ಆಗಿದೆ.

ಪ್ರಾಚೀನ ವೇದಗಳಲ್ಲಿ ಬರುವ ಸ್ತ್ರೀಯರಾದ ಗಾರ್ಗಿ, ಮೈತ್ರೇಯಿ, ಲೋಪಮುದ್ರಾ, ಘೋಷಾ, ಅಪಾಲ, ಸೀತಾ, ಸತಿ, ಅನಸೂಯ, ಸಾವಿತ್ರಿ ಮೊದಲಾದವರು ಪುರುಷರಷ್ಟೇ ಸಮಾನವಾದ ವಿದ್ಯೆಯನ್ನು ಪಡೆದುಕೊಂಡಿದ್ದರು. ಆದುದರಿಂದ ಅವರು ಅನೇಕ ಸ್ತೋತ್ರಗಳನ್ನು ರಚಿಸಿದ್ದಾರೆ. ಇದು ಅಂದಿನ ಕಾಲದ ಸ್ತ್ರೀಪುರುಷ ಸಮಾನತೆಯನ್ನು ತಿಳಿಸುತ್ತದೆ ಎಂದು ಹೇಳಲಾಗುತ್ತದೆ. ಕೆಲವೇ ಮಹಿಳೆಯರ ಸ್ಥಿತಿಗತಿಗಳನ್ನು ಎಲ್ಲರಿಗೂ ಸಾರ್ವತ್ರೀಕರಿಸುವುದು ಅಪಾಯದಿಂದ ಕೂಡಿರುವಂತಹದ್ದು. ಇಂದು ಪ್ರತಿಭಾ ಪಾಟೀಲ್ ರಾಷ್ಟ್ರಪತಿಯಾಗಿದ್ದಾರೆ. ಆದ್ದರಿಂದ ಭಾರತದ ಎಲ್ಲಾ ಮಹಿಳೆಯರು ಪುರುಷರಷ್ಟೇ ಸಮಾನವಾಗಿ ರಾಜಕೀಯದಲ್ಲಿ ಉನ್ನತ ಅಧಿಕಾರವನ್ನು ಹೊಂದಿದ್ದಾರೆ ಎಂದು ಹೇಳಲು ಬರುವುದಿಲ್ಲ. ಅಂತಹ ಉನ್ನತ ಸ್ಥಾನವನ್ನು ಅಲಂಕರಿಸಿದ ಮಹಿಳೆಯರು ಯಾರು? ಅವಳ ಹಿನ್ನೆಲೆ ಏನು ಎಂಬುವುದು ಮುಖ್ಯ.

'ಕೆಲವು ಸ್ತ್ರೀವಾದಿಗಳು ಸ್ತ್ರೀಯರ ಸ್ಥಾನಮಾನವನ್ನು, ದೇಶದ ನಾಗರೀಕತೆಯನ್ನು ಕುರಿತು ಮಾತನಾಡುವಾಗ ವೇದಕಾಲದ ಮಹಿಳೆಯನ್ನು ಉಲ್ಲೇಖಿಸುತ್ತಾರೆ. ಋಗ್ವೇದದಲ್ಲಿ ಎಲ್ಲಾ ಮಹಿಳೆಯರಿಗೂ ಸಮಾನ ಅವಕಾಶವಿತ್ತೆಂದು ವಾದಿಸುತ್ತಾರೆ. ಬ್ರಾಹ್ಮಣರು ವೇದಗಳನ್ನು ಬರೆದಿರುವುದರಿಂದ ತಮ್ಮ ಮನೆಯ, ತನ್ನ ಸಮಾಜದ ಮಹಿಳೆಯರನ್ನು ಕುರಿತು ಬರೆದಿರುತ್ತಾರೆಯೇ ವಿನಃ ಇತರ ಮಹಿಳೆಯರನ್ನು ಕುರಿತು ಅಲ್ಲ ಎಂಬುವುದನ್ನು ಗಮನಿಸಬೇಕು. ಏನೇ ಆಗಲಿ ಋಗ್ವೇದದಲ್ಲಿ ಮಹಿಳೆಯರಿಗೆ ಉನ್ನತ ಸ್ಥಾನಮಾನವಿತ್ತೆಂಬುವುದನ್ನು ವಿದ್ವಾಂಸರೆಲ್ಲರೂ ಒಪ್ಪಿಕೊಂಡಿದ್ದಾರೆ.'

ಋಗ್ವೇದದ ಕಾಲದಲ್ಲಿ ನಾವು ಈಗ ಕರೆಯುವ ದಲಿತರು, ಪಂಚಮ, ತಳ ಸಮುದಾಯಗಳು ಎಂಬ ವರ್ಗವು ಸ್ಪಷ್ಟವಾಗಿ ರೂಪುಗೊಂಡಿರಲಿಲ್ಲ. ಋಗ್ವೇದವನ್ನು "ಅನೇಕ ಪುರೋಹಿತರ ಕುಟುಂಬಗಳು ತಮ್ಮ ನಿಧಿಯೆಂಬಂತೆ ಭಾವಿಸುತ್ತಿದ್ದವು. ಅವುಗಳ ಸಂರಕ್ಷಣೆಯಲ್ಲಿ ಅವರಿಗಿದ್ದ ಆಸ್ಥೆಗೆ ಏಕೈಕ ಕಾರಣವೆಂದರೆ ತಮ್ಮ ಯಜ್ಞಗಳ ವಿಧಿಯಲ್ಲಿ ಅವನ್ನು ಬಳಸಬೇಕೆಂಬುವುದೇ. ಸ್ವಾಭಾವಿಕವಾದ ವಿಷಯಗಳಿಗೆ ಋಗ್ವೇದದಲ್ಲಿ ಹೆಚ್ಚಿನ ಸ್ಥಾನವೇನೂ ಇಲ್ಲ. ಏಕೆಂದರೆ ಈ ಸೂಕ್ತಗಳು ಬಂದು ಬಹಳ ಜಟಿಲವಾದ ಕರ್ಮಾಂಗದ ಭಾಗವಾಗಿದ್ದವು. ಬರಬರುತ್ತಾ ಇವುಗಳ ಮಹಿಮೆಯನ್ನು ಹೇಗೆ ಭಾವಿಸಲಾಯಿತೆಂದರೆ ಇವು ದೇವತೆಗಳನ್ನು ಒಲಿಸುವುದಿರಲಿ ಪುರೋಹಿತರ ಅಪ್ಪಣೆಯಂತೆ ದೇವತೆಗಳನ್ನು ವರ ನೀಡಲು ಬಲಾತ್ಕರಿಸುವ ಶಕ್ತಿಯನ್ನು ಇವಕ್ಕೆ ಆರೋಪಿಸಲಾಯಿತು. ಮಾಟಮಾಡಿ ಇಲ್ಲವೇ ಧಾರ್ಮಿಕ ಮನೋವೃತ್ತಿಯು ಮುಂದಿನ ಮೀಮಾಂಸಾ ದರ್ಶನದಲ್ಲಿ ತನ್ನ ಪೂರ್ಣ ಅಭಿವ್ಯಕ್ತಿಯನ್ನು ಕಂಡಿತು. ಅಲ್ಲಿ ದೇವತೆಗಳ ಹೆಸರುಗಳನ್ನು ಮಾತ್ರ ಉಳಿಸಲಾಯಿತು. ಅವರ ಸ್ಥಾನವನ್ನೆಲ್ಲಾ ಕರ್ಮವೇ ಆಕ್ರಮಿಸಿಕೊಂಡಿತು (ಕನ್ನಡ ಅನುವಾದ ಸಂ ವಿ.ವಿ. ನರಸಿಂಹಮೂರ್ತಿ, ೧೯೯೭, ಪು. ೨೮೨).

'ಮಹಾಕಾವ್ಯಗಳ ಕಾಲದಲ್ಲಿ ಸ್ತ್ರೀಯರಿಗೆ ಸಾಮಾಜಿಕ ಪ್ರಾಮುಖ್ಯತೆಯಿದ್ದರೂ ಋಗ್ವೇದದ ಕಾಲಕ್ಕಿಂತ ಅವರ ಸ್ಥಿತಿ ಭಿನ್ನವಾಗಿತ್ತು. ಸ್ತ್ರೀಯರು ಪುರುಷರನ್ನು ಆಧರಿಸಿ ಬಾಳುವುದೇ ಸೂಕ್ತ ಮತ್ತು ಅದುವೇ ಆದರ್ಶವೆಂದು ಮಹಾಕಾವ್ಯಗಳು ಬಿಂಬಿಸುತ್ತವೆ. ಹೀಗಾಗಿ ಮಹಾಕಾವ್ಯಗಳಲ್ಲಿ ಸೀತೆ ಗಾಂಧಾರಿಯಂತಹ ಪಾತ್ರಗಳನ್ನು ಚಿತ್ರಿಸಲಾಗಿದೆ. ಸ್ವಯಂವರದಲ್ಲಿ ಹೆಣ್ಣನ್ನೂ ಪಣವಾಗಿ ಇಟ್ಟು ಗೆದ್ದವರ ಪಾಲಿಗೆ ಹೆಣ್ಣು

ಹೋಗುತ್ತಿದ್ದಳು. ಇದು ಅವಳ ಸ್ಥಿತಿಯ ಸ್ವರೂಪವನ್ನು ಕಟ್ಟಿಕೊಡುತ್ತದೆ. ಸೀತೆಯನ್ನು ತುಂಬಾ ತುಚ್ಛವಾಗಿ ನಡೆಸಿಕೊಂಡಿದ್ದರೂ ಅವಳನ್ನು ಆದರ್ಶನಾರಿಯೆಂದೇ ಸ್ವಾಭಿಮಾನಿ, ಛಲವಾದಿ ಎಂದು ವೈಭವೀಕರಿಸಲಾಗುತ್ತದೆ. ಮಹಿಳೆಯರು ಸಮಸ್ಯೆಗಳ ಮೂಲ ಸಂಕುಚಿತ ಸ್ವಭಾವದವರು, ಪ್ರಲೋಭನೆಯನ್ನು ಎದುರಿಸಿ ನಿಲ್ಲುವಷ್ಟು ಸಾಮರ್ಥ್ಯವಿಲ್ಲದವರು ಎಂದು ಉಲ್ಲೇಖಿಸಲಾಗಿದೆ.[1] ಮಹಿಳೆಯ ವಿಷಯದಲ್ಲಿ ವೈರುಧ್ಯಗಳನ್ನು ಸೃಷ್ಟಿಸಲಾಯಿತು.

೧. ನೀರಿನಲ್ಲಿ ಮೀನಿನ ಹೆಜ್ಜೆ ಗುರುತು ಕಂಡು ಹಿಡಿಯಬಹುದು ಆದರೆ, ಹೆಣ್ಣಿನ ಮನಸ್ಸನ್ನು ಅರ್ಥ ಮಾಡಿಕೊಳ್ಳಕ್ಕಾಗಲ್ಲ.

೨. ಹೆಂಗಸರ ಬಾಯಲ್ಲಿ ಮಾತು ನಿಲ್ಲಲ್ಲ.

ಈ ಮೇಲಿನ ಎರಡು ಹೇಳಿಕೆಗಳು ವಿರುದ್ಧದಿಂದ ಕೂಡಿರುವಂತಹವು. ಒಂದು ಹೇಳಿಕೆ ಹೆಣ್ಣು ಜಾಸ್ತಿ ಮಾತನಾಡುತ್ತಾಳೆ ಎಂದು ಹೇಳಿದರೆ ಇನ್ನೊಂದು ಹೆಣ್ಣು ಜಾಸ್ತಿ ಮಾತನಾಡುವುದಿಲ್ಲ. ಅವಳು ಮೌನಿ ಎಂಬುವುದನ್ನು ತಿಳಿಸುತ್ತದೆ. ಆದರೆ ಇವೆರಡಲ್ಲಿ ಯಾವುದು ನಿಜವೆಂದರೆ ಎರಡು ನಿಜವಲ್ಲ. ತನ್ನ ಅನುಕೂಲಗಳಿಗೆ ತಕ್ಕಂತೆ ಪುರೋಹಿತಶಾಹಿ ಪಿತೃ ಮೌಲ್ಯ ಇದನ್ನು ತನ್ನ ಮನಸ್ಸಿಗೆ ಬಂದಂತೆ ಅವಳನ್ನು ರೂಪೀಕರಿಸಿ ಹುಟ್ಟಾಕಿದೆ.

ಮಹಾಭಾರತದಲ್ಲಿ ಕೃಷ್ಣನನ್ನು ಮೋಹಿಸಿದ ಸ್ತ್ರೀಯರು ಕೃಷ್ಣನಿಗಾಗಿ ಬರುತ್ತಿದ್ದರೋ ಅಥವಾ ಕೃಷ್ಣನೇ ಮಾನಿನಿಯರಿಗಾಗಿ ಹೋಗುತ್ತಿದ್ದನೋ ೧೬,೦೦೦ ಗೋಪಿಕಾ ಸ್ತ್ರೀಯರನ್ನು ಹೊಂದಿದ್ದ ಕೃಷ್ಣ ಎಂದು ಕಾವ್ಯದಲ್ಲಿ ಹೇಳಲಾಗುತ್ತದೆ. ಅದು ಸಾಧ್ಯವೇ ಎಂಬ ಅನುಮಾನ ಬಂದರೂ ಅದು ಸಾಧ್ಯವಿತ್ತು ಎಂದು ಹೇಳಬಹುದು. ವಿಜಯನಗರದ ಕಾಲದಲ್ಲಿ ಸಾವಿರಾರು ದೇವದಾಸಿಯರು ರಾಜ್ಯದ ಬೊಕ್ಕಸಕ್ಕೆ ಆದಾಯ ತರುವವರಾಗಿದ್ದರು. ಅದನ್ನು ನಿಭಾಯಿಸುತ್ತಿದ್ದವರು ಆ ಸಂದರ್ಭದಲ್ಲಿ ಆಳುತ್ತಿದ್ದ ರಾಜ. ಹಾಗೆಯೇ ಗೋಪಿಕಾ ಸ್ತ್ರೀಯರು ಇದ್ದರು ಎಂಬುವುದನ್ನು ಊಹೆ ಮಾಡಬಹುದು. ಆದರೆ ವೈದಿಕರು ತಾವು ಪೂಜಿಸುವ ಕೃಷ್ಣನಿಗೆ ಆ ಆರೋಪ ಹೊರಿಸಲು ತಯಾರಿಲ್ಲ. ಗೋಪಿಕಾ ಸ್ತ್ರೀಯರೇ ಕೃಷ್ಣನಿಗೆ ಮಾರು ಹೋಗುತ್ತಿದ್ದರು ಎಂದು ಹೇಳಿ ಇತಿಹಾಸವನ್ನು ತಿರುಚಿದ್ದಾರೆ ಎನಿಸುತ್ತದೆ ಅಲ್ಲವೇ? ಏನೇ ಆಗಲಿ ಆ ಕಾಲದಲ್ಲಿ ಉನ್ನತ ವರ್ಗದವರಿಗೆ ಕೆಲವು ಸ್ಥಾನಗಳನ್ನು ಉಳಿಸಿಕೊಳ್ಳಲಾಗಿತ್ತು. ಕೆಳವರ್ಗದವರ ಸ್ಥಾನಗಳು ಕೆಳಗೆಯೇ ಇದ್ದವು. ಇಲ್ಲಿ ಕೃಷ್ಣನನ್ನು ಎತ್ತಿ ಹಿಡಿಯಲು ಕುಚೇಲನ ಪಾತ್ರವನ್ನು ತಂದಂತಿದೆ.

ಉತ್ತರ ವೈದಿಕ ಯುಗದಲ್ಲಿ ಶೂದ್ರ ವರ್ಗದ ಅಸ್ತಿತ್ವ ಕಂಡು ಬರುತ್ತದೆ. ಈ ಯುಗದ ಸಾಹಿತ್ಯದಲ್ಲಿ ಶೂದ್ರರ ಕುರಿತು ಸಾಕಷ್ಟು ಉಲ್ಲೇಖಗಳು ಕಂಡುಬರುತ್ತವೆ. "ಶತಪಥ ಬ್ರಾಹ್ಮಣ್ಯದಲ್ಲಿ ನಾಲ್ಕು ವರ್ಣಗಳ ಬಗ್ಗೆ ಪ್ರಸ್ತಾಪ ಮಾಡುತ್ತ ನಾಲ್ಕು ವರ್ಣಗಳವರ ಸಮಾಧಿಗಳು ಬೇರೆ ಬೇರೆಯೆಂದೂ ಹೇಳಿದೆ. ಇವರಲ್ಲಿ ಬ್ರಾಹ್ಮಣ ಶ್ರೇಷ್ಠ ರಾಜ ಆಳುವುದು ಬ್ರಾಹ್ಮಣ ಕೊಟ್ಟ ಅಧಿಕಾರದಿಂದ. ಯಜುರ್ವೇದದಲ್ಲೂ ಬ್ರಾಹ್ಮಣನ ಹಿರಿಮೆ ಮತ್ತು ಪ್ರಭುತ್ವ ಸ್ಪಷ್ಟವಾಗಿ ಸ್ಥಾಪಿತವಾಗುತ್ತದೆ. ನ್ಯಾಯ ನೀಡುವವನು ಬ್ರಾಹ್ಮಣನೇ ಆಗುತ್ತಾನೆ. ರಾಜ ಆಳಬೇಕಾದರೆ ಬ್ರಾಹ್ಮಣ ಕೊಟ್ಟ ಅಧಿಕಾರದಿಂದ ಆಳಬೇಕು. ಬ್ರಾಹ್ಮಣ, ಅಬ್ರಾಹ್ಮಣರಿಗೆ ಜಗಳ ಉಂಟಾದಾಗ ನ್ಯಾಯ ಬ್ರಾಹ್ಮಣನ ಕಡೆಯೇ. ಶತಪಥ ಬ್ರಾಹ್ಮಣ್ಯದ ಪ್ರಕಾರ ಶೂದ್ರ ಹೆಣ್ಣು ಇರುವುದು ಭೋಗಕ್ಕಾಗಿಯೇ ಹೊರತು ಅವಳಿಂದ ಏನೂ ಉದಾತ್ತ ಕಾರ್ಯ ಸಾಧ್ಯವಿಲ್ಲ (ಮಲ್ಲೇಪುರಂ .ಜಿ. ವೆಂಕಟೇಶ್,

೨೦೦೫, ಪು. ೧೯೯) ಎಂದು ಹೇಳುತ್ತದೆ. ಜೈಮಿನಿ ಬ್ರಾಹ್ಮಣವು ಶೂದ್ರವು ಪ್ರಜಾಪತಿಯ ಕಾಲಿನಿಂದ ಹುಟ್ಟಿದ, ಅವನಿಗೆ ದೇವರಿಲ್ಲ. ಯಜಮಾನನೇ ದೇವರು, ಆತನ ಪಾದ ಸೇವೆಯಿಂದ ಬದುಕಬೇಕು. ಪಂಚವಂಶ ಬ್ರಾಹ್ಮಣರು 'ಶೂದ್ರರು ಪಶುಗಳ ಒಡೆಯನು' ಎಂದಿದೆ. ಐತರೇಯ ಬ್ರಾಹ್ಮಣದಲ್ಲಿ ಶೂದ್ರರು ಸಾಮಾಜಿಕವಾಗಿ ಆಳು ಸುದ್ದಿಗಾರ ಹಗಲೋ- ರಾತ್ರಿಯೋ ಕೆಲಸದಿಂದ ತೆಗೆಯಬಹುದಾದ ಮತ್ತು ಯಜಮಾನನಿಗೆ ಕೋಪ ಬಂದಾಗ ಬಡಿಯಬಹುದಾದವರು ಎನ್ನಲಾಗಿದೆ (ರಾಜರಾಮ ಹೆಗಡೆ, ೨೦೦೬, ಪು. ೧೨೩). ಶೂದ್ರರ ಸ್ಥಿತಿಯೇ ಹೀಗಿರಬೇಕಾದರೆ ಇನ್ನೂ ಅತಿಶೂದ್ರ / ಪಂಚಮ / ಅಸ್ಪೃಶ್ಯರ ಸ್ಥಿತಿ ಊಹೆಗೂ ನಿಲುಕದ್ದು ಅಲ್ಲವೇ? ಇವೆಲ್ಲವು ಅಸ್ಪಶ್ಯರು ಇನ್ನೂ ಹೆಚ್ಚಿನ ಶೋಷಣೆಗೆ ಒಳಗಾಗಿದ್ದರು ಎಂಬುವುದನ್ನು ತಿಳಿಸುತ್ತದೆಯಲ್ಲವೇ? ಚಾಂಡಾಲರ ಸ್ಥಿತಿಯನ್ನು ಹೀಗೆ ನಾವು ಕೆಲವು ಆಧಾರಗಳ ಮೇಲೆಯೇ ಕೇಳಿಸದ ಧ್ವನಿಗಳನ್ನು ಕೇಳಿಸಿಕೊಂಡಾಗ ಮಾತ್ರ ಅವರ ಸ್ಥಿತಿ ಅರ್ಥವಾಗುತ್ತದೆ. ಪ್ರಾಚೀನ ಪುರೋಹಿತ ಸಾಹಿತ್ಯವೆಲ್ಲವೂ ಶೂದ್ರ, ಅಸ್ಪಶ್ಯರನ್ನು ಏಕೀಕರಿಸಿ ನೋಡಿರುವುದರಿಂದ ಅಸ್ಪೃಶ್ಯರನ್ನು ಪ್ರತ್ಯೇಕವಾಗಿ ಗುರುತಿಸುವುದು ಕಷ್ಟ. ಇನ್ನೂ ದಲಿತ ಮಹಿಳೆಯನ್ನು ಗುರುತಿಸುವುದು ಇನ್ನೂ ಕಷ್ಟ.

ಬ್ರಾಹ್ಮಣ ಸ್ತ್ರೀ ಮತ್ತು ಶೂದ್ರ ಗಂಡಸಿನಲ್ಲಿ ಹುಟ್ಟಿದ ಚಾಂಡಾಲರು ಇಡೀ ಸಮಾಜದ ಒಬ್ಬ ಘಟಕದಿಂದ ಹೊರಕ್ಕೆ ಬಾಗಿದವರು. ಚಾಂಡಾಲರ ಸಂತತಿ ನಾಯಿ, ಹಂದಿಗಳಂತೆ ತುಚ್ಛವಾದದ್ದೆಂದು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದೆ. ಒಟ್ಟು ಇವರು ನಿಕೃಷ್ಟರಾದ ಜನ. ಇವರು ಊರ ಹೊರಗಡೆ ಇದ್ದು ಬದುಕಿದವರು. ಆದಿದ್ರಾವಿಡ, ಆದಿ ಕರ್ನಾಟಕ ಇವರೆಲ್ಲ ಅಸ್ಪೃಶ್ಯರೇ (ಮಲ್ಲೇಪುರಂ .ಜಿ. ವೆಂಕಟೇಶ್, ೨೦೦೫, ಪು. ೧೯೯). ವರ್ಣಾಶ್ರಮ ವ್ಯವಸ್ಥೆಯಲ್ಲಿ ವಿಷ್ಣು ಸೂರ್ಯನ ಪ್ರತಿನಿಧಿ ಎಂದು ಹೇಳಲಾಗುತ್ತದೆ. ಆತನ ಅಂಗಾಂಗಗಳಿಗೆ ಅನುಗುಣವಾಗಿ ವರ್ಣಗಳನ್ನು ವಿಭಜಿಸಿ ಹೇಳುವುದು ತುಂಬಾ ಗಮನಾರ್ಹವಾದ ವಿಷಯವಾಗಿದೆ.

ಬ್ರಾಹ್ಮಣೋಸ್ಯ ಮುಖಮೂಸೀತ್ ಬಾಹುರಾಜನನ್ಯ: ಶೃತಃ

ಊರೂ ತದಸ್ಯಯದ್ ವೈಶ್ಯಃ ಪದ್ಭ್ಯಾಂಶಶೋದ್ರೋ ಅಜಾಯತ (ಯಜುರ್ವೇದ ೩೧, ೧೧).

ಬ್ರಾಹ್ಮಣನು ಮುಖದಿಂದ, ಕ್ಷತ್ರಿಯ ಬಾಹುಗಳಿಂದ, ವೈಶ್ಯ ತೊಡೆಯಿಂದ ಮತ್ತು ಶೂದ್ರ ಕಾಲುಗಳಿಂದ ಹುಟ್ಟಿದವನು ಎಂದು ಸಾರುವ ಈ ಉಲ್ಲೇಖವು ವರ್ಣವ್ಯವಸ್ಥೆಯನ್ನು ಆಯಗಾರಿಕೆಯಿಂದ ಗುರುತಿಸಬೇಕು ಎಂದು ಕಾನೂನನ್ನು ಹೊರಡಿಸುತ್ತದೆ. ನಾಲ್ಕು ವರ್ಣಗಳನ್ನು ಬಿಟ್ಟು ಉಳಿದ ವರ್ಣಗಳಿರುವುದನ್ನು ವೇದಗಳು ಗುರುತಿಸುವುದಿಲ್ಲ. ಗುರುತಿಸಲೂ ಸಹ ಅನರ್ಹರಾದ ಅಸ್ಪೃಶ್ಯರ ಸ್ಥಿತಿ ವೇದಗಳ ಕಾಲವನ್ನು ತಿಳಿಸುತ್ತದೆ. ವರ್ಣವ್ಯವಸ್ಥೆಯಲ್ಲಿ 'ವರ್ಣ' ಮುಖ್ಯವಾಗಿತ್ತು. ಮೂಲ ನೆಲೆಯ ದ್ರಾವಿಡರು ಕಪ್ಪು ಬಣ್ಣದಿಂದ ಕೂಡಿದ್ದರಿಂದ ಅವರು ಶೂದ್ರರು, ಕೊನೆಯವರು, ನಮ್ಮ ಆಳುಗಳು ಎಂದು ಗುರುತಿಸಿತು. ಆದುದರಿಂದ ವರ್ಣವ್ಯವಸ್ಥೆಯಲ್ಲಿ ಎಲ್ಲೂ ಅಸ್ಪೃಶ್ಯರನ್ನು ಗುರುತಿಸಲಾಗಿಲ್ಲ. ಮನುಸ್ಮೃತಿಯಲ್ಲಿ ಶಿಕ್ಷೆಗೆ ಸಂಬಂಧಿಸಿದಂತೆ ಮಾತನಾಡುವಾಗ ಚಾಂಡಾಲರ ಉಲ್ಲೇಖ ಇದೆ.

ವರ್ಣಗಳನ್ನು ಹೀಗೆ ಗುರುತಿಸಲಾಗುತ್ತದೆ;

ಚಾತುರ್ವರ್ಣ

ಬ್ರಾಹ್ಮಣ
↓
ಕ್ಷತ್ರಿಯ
↓
ವೈಶ್ಯ
↓
ಶೂದ್ರ
↓
ಪಂಚಮ (ವೇದಗಳು ಇವರನ್ನು ಗುರುತಿಸಿಲ್ಲ)

ವರ್ಣ ವ್ಯವಸ್ಥೆಯಲ್ಲಿ ನಾವು ಗುರುತಿಸುವ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬುವುದನ್ನು ಮೇಲಿನಿಂದ ಕೆಳಕ್ಕೆ ಬರೆಯುತ್ತೇವೆ. ಸಮವಾಗಿಯಾಗಲಿ, ಮೇಲಿನಿಂದ ಕೆಳಕ್ಕಾಗಲಿ ಯಾಕೆ ಬರೆಯುವುದಿಲ್ಲ. ವ್ಯವಸ್ಥೆ ಆ ರೀತಿ ಬಂದಿದೆ ಎಂದು ಹೇಳಿದರೂ ನಾವು ಅದೇ ರೀತಿಯಾಗಿ ಬರೆಯುವ ಮೂಲಕ ಆ ವ್ಯವಸ್ಥೆಯನ್ನು ಹಾಗೆಯೇ ಇರಿಸಿಕೊಂಡು ಅದನ್ನು ನಾವೇ ಮುಂದೆ ತೆಗೆದುಕೊಂಡು ಹೋಗುತ್ತಿದ್ದೇವೆ ಅವುಗಳನ್ನು;

ಚಾತುರ್ವರ್ಣ

ಬ್ರಾಹ್ಮಣ | ಕ್ಷತ್ರಿಯ | ವೈಶ್ಯ | ಶೂದ್ರ | ಪಂಚಮ

ಚತುರ್ವರ್ಣ ವ್ಯವಸ್ಥೆ ಪಂಚಮರನ್ನು ಗುರುತಿಸಿಲ್ಲ ಎನ್ನುವುದಕ್ಕಿಂತ ನಿರ್ಲಕ್ಷಿಸಿದೆ ಎನ್ನಬೇಕು.

ವರ್ಣವ್ಯವಸ್ಥೆ

ಪಂಚಮ (ವೇದಗಳು ಇವರನ್ನು ಗುರುತಿಸಿಲ್ಲ)
↓
ಶೂದ್ರ
↓
ವೈಶ್ಯ
↓
ಕ್ಷತ್ರಿಯ
↓
ಬ್ರಾಹ್ಮಣ

ಹೀಗೆ ಬರೆಯುವುದರ ಮೂಲಕವೂ ಕೂಡ ಆಯಾ ಸಮುದಾಯಗಳು ವರ್ಣವ್ಯವಸ್ಥೆಯಲ್ಲಿ ನಡೆಸಿದ, ನಡೆದುಕೊಂಡ ರೀತಿಯನ್ನು ವಿವರಿಸಬಹುದಲ್ಲಾ? ಹಾಗೆ ಯಾಕೆ ಆಗುವುದಿಲ್ಲ? ಹಾಗಾದರೆ ನಾವು ಅಂತಹ ವ್ಯವಸ್ಥೆಯನ್ನೇ ಒಪ್ಪಿಕೊಂಡಿದ್ದೇವೆಯೇ? ವರ್ಣವ್ಯವಸ್ಥೆಯಲ್ಲಿ ಆಗುತ್ತಿರುವ ಶೋಷಣೆಯನ್ನು ಇಂದಿನವರಿಗೂ ಪುರುಷರ ನೆಲೆಯಲ್ಲಿಯೇ ನಿರ್ವಚಿಸಿಕೊಳ್ಳುತ್ತಾ ಬರಲಾಗಿದೆ. ವರ್ಣವ್ಯವಸ್ಥೆ ದಲಿತ ಪುರುಷರಿಗಿಂತಲೂ

ಹೆಚ್ಚಾಗಿ ದಲಿತ ಮಹಿಳೆಯರ ಮೇಲೆ ಭಿನ್ನವಾದ ಪರಿಣಾಮ ಯಾವ ರೀತಿಯದು ಎಂಬುವುದನ್ನು ಎಲ್ಲಿಯೂ ಹೇಳಲಾಗಿಲ್ಲ. ಜಾತಿ ಶ್ರೇಣೀಕರಣದಿಂದ ದಲಿತ ಮಹಿಳೆಯು ಅನುಭವಿಸಿರುವ ನೋವುಗಳು, ವೇದನೆಗಳು ಇಡೀ ವ್ಯವಸ್ಥೆಯಲ್ಲಿಯೇ ಭೀಕರವಾಗಿರುವಂತಹವು.

ಚತುರ್ವರ್ಣ ವ್ಯವಸ್ಥೆಯಲ್ಲಿ ಶೂದ್ರರ ಸಾಮಾಜಿಕ ಸ್ಥಾನ ಮಾನ

ಅಂಬೇಡ್ಕರ್ ಅವರು ವರ್ಣವ್ಯವಸ್ಥೆಯಲ್ಲಿ ಶೂದ್ರರ ಸಾಮಾಜಿಕ ಸ್ಥಾನಮಾನ ಹೇಗಿತ್ತು ಎಂಬುವುದರ ವಿವರವನ್ನು ಹೀಗೆ ಮಂಡಿಸುತ್ತಾರೆ.

೧. ಸಾಮಾಜಿಕ ವ್ಯವಸ್ಥೆಯಲ್ಲಿ ಶೂದ್ರ ಕಟ್ಟಕಡೆಯಲ್ಲಿರಬೇಕು.

೨. ಶೂದ್ರ ಹುಟ್ಟಿನಿಂದ ಅಪವಿತ್ರನಾದುದರಿಂದ ಅವನ ದೃಷ್ಟಿ ಸಮೀಪದಲ್ಲೂ ಶ್ರವಣ ಸಾಮೀಪ್ಯದಲ್ಲೂ ಯಾವುದೇ ಪವಿತ್ರ ಕಾರ್ಯವನ್ನು ಕೈಗೊಳ್ಳತಕ್ಕದ್ದಲ್ಲ.

೩. ಅನ್ಯ ವರ್ಣದವರಂತೆ ಶೂದ್ರರನ್ನು ಗೌರವಿಸತಕ್ಕದ್ದಲ್ಲ.

೪. ಶೂದ್ರನ ಜೀವಕ್ಕೆ ಯಾವುದೇ ಬೆಲೆಯಿಲ್ಲದ ಕಾರಣ ಯಾರು ಬೇಕಾದರೂ ಅವರನ್ನು ಕೊಲ್ಲಬಹುದು. ಇದಕ್ಕಾಗಿ ದಂಡ ತೆರಬೇಕಾದ ಪ್ರಮೇಯವೇನೂ ಇಲ್ಲ.

೫. ಶೂದ್ರ ಜ್ಞಾನವನ್ನು ಗಳಿಸತಕ್ಕದ್ದಲ್ಲ. ಶೂದ್ರನಿಗೆ ಶಿಕ್ಷಣ ಕೊಡುವುದು ಪಾಪವು, ಅಪರಾಧವೂ ಆಗುತ್ತದೆ.

೬. ಶೂದ್ರ ಆಸ್ತಿಯನ್ನು ಹೊಂದ ತಕ್ಕದ್ದಲ್ಲ. ಹಾಗೇನಾದರೂ ಹೊಂದಿದ್ದಲ್ಲಿ ಬ್ರಾಹ್ಮಣ ತನ್ನಿಚ್ಛೆಯಂತೆ ಕಿತ್ತುಕೊಳ್ಳಬಹುದು.

೭. ಶೂದ್ರ ರಾಜ್ಯದ ಯಾವುದೇ ಅಧಿಕಾರ ಹೊಂದತಕ್ಕದ್ದಲ್ಲ.

೮. ಮೇಲಿನ ಜಾತಿಗಳ ಸೇವೆ ಮಾಡುವುದರಲ್ಲೇ ಶೂದ್ರನ ಕರ್ತವ್ಯವು, ಅದರಲ್ಲೇ ಅವನ ಮುಕ್ತಿಯು ಅಡಗಿರುವುದು.

೯. ಶೂದ್ರರು ಗುಲಾಮ ಚಾಕರಿಗಾಗಿಯೇ ಹುಟ್ಟಿರುವುದು, ಎಂದೆಂದಿಗೂ ಅವರನ್ನು ಹಾಗೆಯೇ ಇರಿಸಬೇಕು (ಮ.ನ. ಜವರಯ್ಯ, ೧೯೯೧, ಪು. ೨೨೦ ೨೨೧).

ವೇದ, ಸ್ಮೃತಿ, ಧರ್ಮ ಸೂತ್ರಗಳಲ್ಲಿ ದಲಿತರನ್ನು

ಅಂತ್ಯ	-	ದಾಸ್ಯ
ಅಂತ್ಯಜ	-	ಆದಿಮ
ಅಂತ್ಯವಾಸಿನ್	-	ತಿರುಕುಲತ್ತರ್
ಅಂತ್ಯವ ಸಾಯಿ	-	ಅರಣಾಯ

ಎಂದು ವಿವಿಧ ಪದಗಳಿಂದ ಗುರುತಿಸಲಾಗಿದೆ. ಕಾಲಾಂತರದಲ್ಲಿ ಈ ಪದಗಳು ವಿಭಿನ್ನವಾದ ರೀತಿಯಲ್ಲಿ ಬದಲಾಗುತ್ತಾ ಹೋಗಿರುವುದನ್ನು ಈಗಿನ ದಲಿತರನ್ನು ಸೂಚಿಸುವ ಪದಗಳು ತಿಳಿಸುತ್ತವೆ (ಅರವಿಂದ ಮಾಲಗತ್ತಿ, ೨೦೦೩, ಪು. ೧೬).

ಹಿಂದೂ ಧರ್ಮ ಶಾಸ್ತ್ರಗಳನುಸಾರ ಒಂದು ಜಾತಿಯಲ್ಲಿ ಹುಟ್ಟಿದವನು ಜೀವಿಸಿರುವವರೆಗೆ ಅದೇ ಜಾತಿಯಲ್ಲಿಯೇ ಇರಬೇಕು. ಒಂದು ವೇಳೆ ತನಗಿಂತ ಮೇಲಿನ ಜಾತಿಗೆ ಸೇರಬೇಕಾದರೆ ಅನೇಕ ಜನ್ಮಗಳಲ್ಲಿ ಹುಟ್ಟಿ ಹುಟ್ಟಿ ಬಂದ ನಂತರ ಸಾಧ್ಯವಾಗಬಹುದು. ಚಾಂಡಾಲನೊಬ್ಬನು ಶೂದ್ರತೆಯನ್ನು ಪಡೆಯಲಿಕ್ಕೆ ಸಾವಿರ ಸಾವಿರ ಜನ್ಮಗಳಲ್ಲಿ ಹುಟ್ಟಿ ಬಂದಾಗ ಸಾಧ್ಯವಾಗಬಹುದು. ಈ ಮೊದಲು ಹೇಳಿದಂತೆ ಜಾತಿ ವರ್ಣಗಳಲ್ಲಿ ಕೊನೆಯ ವರ್ಣದವನೇ ಶೂದ್ರ. ಶೂದ್ರರಿಗಿಂತ ಇನ್ನೂ ಹೀನ ಜಾತಿಯವರಿದ್ದಾರೆ. ಅವರು ಅಸ್ಪೃಶ್ಯರು ಎಂದು ಈ ಐದನೆಯ ಗುಂಪು ಸೃಷ್ಟಿಗೊಂಡು ಶಾಶ್ವತವಾಗಿ ಅಪವಿತ್ರ ಸ್ಥಾನ ಪಡೆದುಕೊಂಡು ಸೇವಾ ವೃತ್ತಿಯಲ್ಲಿ ತೊಡಗಿತು. ಅವರಿಗೆ ಓದು ಬರಹ ಕಲಿಯಲು ನಿರ್ಬಂಧಿಸಲಾಗಿತ್ತು. ಅವರು ವಂಶಪಾರಂಪರ್ಯವಾಗಿ ನಿರಕ್ಷರಿಗಳಾಗಿಯೇ ಮುಂದುವರೆಯುವಂತೆ ನೋಡಿಕೊಳ್ಳಲಾಗುತ್ತಿತ್ತು. ಶೂದ್ರ ಮತ್ತು ಅಸ್ಪೃಶ್ಯರು ಸಣ್ಣ ಸಣ್ಣ ತಪ್ಪು ಮಾಡಿದರೂ ಅವರಿಗೆ ಕ್ರೂರ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಒಟ್ಟು ಸಮಾಜದ ಪ್ರತಿಶತ ೯೦ ರಷ್ಟಿದ್ದ ಬಹುಸಂಖ್ಯಾತರಾದ ಕೆಳವರ್ಗದ ದಲಿತರಿಗೆ ಅಂದು ವಿಧಿಸಲಾಗುತ್ತಿದ್ದ ಬರ್ಬರ ಶಿಕ್ಷೆಗಳ ವಿವರಗಳನ್ನು ಮನುಧರ್ಮಶಾಸ್ತ್ರದಲ್ಲಿ ಹೇಳಲಾಗಿದೆ. ಇಲ್ಲಿ ಆಯಾ ಶ್ಲೋಕಗಳಲ್ಲಿ ಕನ್ನಡಾನುವಾದವನ್ನು ಇದ್ದಕ್ಕಿದ್ದಂತೆ ಕೊಟ್ಟಿದ್ದೇನೆ (ಅನು: ಶೇಷನವರತ್ನ, ೧೯೯೮, ಪು. ೨೦).

ಶೂದ್ರನಿಗೆ ಬುದ್ಧಿ ಹೇಳಬಾರದು (ಓದು ಕಲಿಸಬಾರದು) ಯಜ್ಞ ಹವಿಸ್ಸಿನ ಶೇಷವನ್ನು ಹಾಗೂ ಎಂಜಲನ್ನು ಕೊಡಬಾರದು, ಧರ್ಮೋಪದೇಶ ಮಾಡಬಾರದು, ವ್ರತಾಚರಣೆಯನ್ನು ಹೇಳಿಕೊಡಬಾರದು (ಮನುಸ್ಮೃತಿ ಅಧ್ಯಾಯ ೪, ಶ್ಲೋಕ. ೮೦).

ಶೂದ್ರನಿಗೆ ಧರ್ಮೋಪದೇಶ ಮಾಡುವವನು, ವ್ರತಾಚರಣೆಗಳನ್ನು ಹೇಳಿಕೊಡುವವನು, ಅಶೂದ್ರನ ಜೊತೆ ಸೇರಿ ತಾನೂ ಸಹಿತ ಅಸಂವೃತವೆಂಬ ನರಕಕ್ಕೆ ಹೋಗುತ್ತಾನೆ (ಮನುಸ್ಮೃತಿ ಅಧ್ಯಾಯ ೪, ಶ್ಲೋಕ ೮೧).

ಉಪನಯನ ಸಂಸ್ಕಾರ ಹೊಂದಲು ಅರ್ಹತೆಯಿಲ್ಲದ (ಏಕ ಜಾತಿಯವನಾದ) ಶೂದ್ರನು ದ್ವಿ ಜಾತಿಯವರಾದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರನ್ನು ಹೀನವಾದ ಕೆಟ್ಟ ಮಾತುಗಳಿಂದ ಬೈದರೆ ಕೆಳಜಾತಿಯಲ್ಲಿ ಹುಟ್ಟಿದ ಆ ಶೂದ್ರನ ನಾಲಿಗೆಯನ್ನು ಛೇದಿಸತಕ್ಕದ್ದು. ಏಕೆಂದರೆ ಅವನು ಕೆಳಜಾತಿಯವನು (ಅಧ್ಯಾಯ ೮, ಶ್ಲೋಕ ೨೭೦).

ಬ್ರಾಹ್ಮಣ- ಕ್ಷತ್ರಿಯ- ವೈಶ್ಯ ಇವರ ಜಾತಿಯ ಹೆಸರುಗಳನ್ನೆತ್ತಿ ಹೀನಾಯ ಮಾನವಾಗಿ ಬೈದಂಥ ಆ ಶೂದ್ರನ ಬಾಯಲ್ಲಿ ಕಾದ ಕಬ್ಬಿಣದ ಹತ್ತಂಗುಲ ಉದ್ದದ ಸರಳನ್ನಿಡಬೇಕು (ಮನುಸ್ಮೃತಿ ಅಧ್ಯಾಯ ೮, ಶ್ಲೋಕ ೨೭೧).

ಬ್ರಾಹ್ಮಣರಿಗೆ ಅಹಂಕಾರದಿಂದ ಧರ್ಮವನ್ನು ಭೋದಿಸುವ ಶೂದ್ರರಿಗೆ ರಾಜನು ಬಾಯಲ್ಲಿ ಹಾಗೂ ಕಿವಿಯಲ್ಲಿ ಕಾದ ಎಣ್ಣೆಯನ್ನು ಹಾಕಬೇಕು (ಮನುಸ್ಮೃತಿ ೮, ಶ್ಲೋಕ ೨೭೨).

ಬ್ರಾಹ್ಮಣ ಮೊದಲಾದ ಶ್ರೇಷ್ಠ ಜಾತಿಯವರನ್ನು ತನ್ನ ಕೈ ಕಾಲು ಮುಂತಾದ ಯಾವ ಅಂಗದಿಂದ ಅಂತ್ಯಜನು (ಶೂದ್ರನು) ಹೊಡೆಯುತ್ತಾನೋ ಅವನ ಆ ಅಂಗವನ್ನು (ಕೈ, ಕಾಲು ಇತ್ಯಾದಿಯನ್ನು) ಕತ್ತರಿಸಬೇಕು (ಕತ್ತರಿಸಲು ಆಜ್ಞೆ ಮಾಡಬೇಕು). ಇದು ಮನುವು ಹೇಳಿದ ಶಾಸನವು. ಶ್ರೇಷ್ಠನನ್ನು ತನ್ನ ಯಾವ ಅಂಗದಿಂದ

ಶೂದ್ರನು ಹಿಂಸಿಸುತ್ತಾನೋ ಅವನ ಆ ಅಂಗವನ್ನು ಕತ್ತರಿಸಬೇಕು (ಮನುಸ್ಮೃತಿ ಅಧ್ಯಾಯ ೮, ಶ್ಲೋಕ ೨೭೯).

ಕೈಯನ್ನೆತ್ತಿ ಹೊಡೆದರೆ ಅಥವಾ ಕೋಲನ್ನೆತ್ತಿ ಹೊಡೆದರೆ ಆ ಕೈಯನ್ನು ಕತ್ತರಿಸಬೇಕು. ಕೋಪದಿಂದ ಸಿಟ್ಟಾಗಿ ಕಾಲಿಂದ ಒದ್ದರೆ ಅವನ ಕಾಲನ್ನು ಕತ್ತರಿಸಿ ಹಾಕಬೇಕು (ಮನುಸ್ಮೃತಿ ಅಧ್ಯಾಯ ೮, ಶ್ಲೋಕ ೨೮೦).

ಬ್ರಾಹ್ಮಣನ ಜತೆಗೆ ಒಂದೇ ಆಸನದಲ್ಲಿ ಕುಳಿತ ಅಂತ್ಯಜನಿಗೆ ಅಥವಾ ಶೂದ್ರನಿಗೆ ಸೊಂಟದಲ್ಲಿ ಬರೆ ಎಳೆದು ಊರಿನಿಂದ ಹೊರಗೆ ಹಾಕಬೇಕು. ಇಲ್ಲವೇ ಕುಂಡಿಯನ್ನು ಕತ್ತರಿಸಬೇಕು (ಮನುಸ್ಮೃತಿ ಅಧ್ಯಾಯ ೮, ಶ್ಲೋಕ ೨೮೧).

ಬೇಕೆಂತಲೆ ಸೊಕ್ಕಿನಿಂದ ಬ್ರಾಹ್ಮಣನ ಮೇಲೆ ಉಗುಳಿದರೆ ಅವನ ತುಟಿಗಳನ್ನು ಕತ್ತರಿಸಬೇಕು. ಬೇಕೆಂತಲೇ ಮೂತ್ರದಲ್ಲಿ ಅವಮಾನಿಸಿದರೆ ಶಿಶ್ನವನ್ನು ಕತ್ತರಿಸಬೇಕು. ಬೇಕೆಂತಲೇ ಹೂಸು ಬಿಟ್ಟು ಅವಮಾನಿಸಿದರೆ ಗುದವನ್ನು ಕತ್ತರಿಸಬೇಕು (ಮನುಸ್ಮೃತಿ ಅಧ್ಯಾಯ ೮, ಶ್ಲೋಕ ೨೮೨).

ತಲೆ ಗೂದಲನ್ನು ಹಿಡಿದೆಳೆದರೆ ಕೈಗಳನ್ನು ತಕ್ಷಣ ಕತ್ತರಿಸಬೇಕು. ಪಾದ, ಗಡ್ಡ, ಮೀಸೆ, ಕುತ್ತಿಗೆ, ವೃಷಣ ಬೀಜಗಳನ್ನು ಹಿಡಿದೆಳೆದರೆ ಕೂಡ ಕೈ ಕತ್ತರಿಸಬೇಕು (ಅಧ್ಯಾಯ ೮, ಶ್ಲೋಕ ೨೮೨).

ಅಧ್ಯಾಯ ೮, ಶ್ಲೋಕ ೫೫ ರಲ್ಲಿ- ಅಸ್ಪೃಶ್ಯರು ನಿಗದಿ ಪಡಿಸಿದ ಕೋಪಕ್ಕೆ ಹೋಗಬೇಕಾದರೆ ರಾಜನ ಆಜ್ಞೆಯಂತೆ ಕೆಲವು ಚಿಹ್ನೆಗಳನ್ನು ಧರಿಸಿ ಹೊರಗೆ ಹೋಗಬೇಕು ಮತ್ತು ಸಂಬಂಧಿಗಳಿಲ್ಲದ ಹೆಣಗಳನ್ನು ಹೂಳುವುದು, ಅವರ ಕರ್ತವ್ಯ ಎಂದು ಹೇಳಲಾಗಿದೆ.

ಅಧ್ಯಾಯ ೮, ಶ್ಲೋಕ ೫೬ ರಲ್ಲಿ- ರಾಜನ ಆಜ್ಞೆಯಂತೆ ಅಸ್ಪೃಶ್ಯರು ಸಮಾಜ ಘಾತಕರನ್ನು ಕಡಿದು ಅವರ ವಸ್ತ್ರ, ಹಾಸಿಗೆ ಮತ್ತಿತರ ವಸ್ತುಗಳನ್ನು ತೆಗೆದುಕೊಂಡು ಉಪಯೋಗಿಸಿಕೊಳ್ಳಬಹುದು.

ಚಾಂಡಾಲ ಮತ್ತು ಶ್ವಪಚರು ಅಪಾತ್ರರಾಗಿದ್ದು ಅವರು ಹಳ್ಳಿಯ ಹೊರವಲಯದಲ್ಲಿ ಜೀವಿಸಬೇಕು ಮತ್ತು ಅವರ ಐಶ್ವರ್ಯ ನಾಯಿಗಳು ಮತ್ತು ಕತ್ತೆಗಳು ಮಾತ್ರ ಆಗಿರಬೇಕು (ಅಧ್ಯಾಯ ೮, ಶ್ಲೋಕ ೫೧ ರಲ್ಲಿ).

ಚಾಂಡಾಲರು ಸತ್ತವರ ವಸ್ತ್ರಗಳನ್ನು ಮಾತ್ರ ಧರಿಸಬೇಕು. ಆಹಾರವನ್ನು ಅವರು ಮುರಿದ ಮಡಕೆಯ ಓಡುಗಳಲ್ಲಿ ತಿನ್ನಬೇಕು ಮತ್ತು ಅವರ ಒಡವೆಗಳು ಕಪ್ಪು ಬಣ್ಣದವು ಮಾತ್ರ ಆಗಿರಬೇಕು ಎಂದಿದೆ (ಅಧ್ಯಾಯ ೮, ಶ್ಲೋಕ ೫೨).

ಬೇರೆಯವರು ಮುರಿದ ಮಡಕೆ ಓಡುಗಳಲ್ಲಿ ರಾತ್ರಿ ಹೊತ್ತು ಮಾತ್ರ ಆಹಾರವನ್ನು ಇವರಿಗೆ ನೀಡಬೇಕೆಂದು ತಿಳಿಸಲಾಗಿದೆ (ಅಧ್ಯಾಯ ೮, ಶ್ಲೋಕ ೫೪).

ಮೇಲಿನ ಎಲ್ಲಾ ಶ್ಲೋಕಗಳನ್ನು ಗಮನಿಸಿದರೆ ಮನುವಿನ ಕಾಲದ ಶೂದ್ರರ ಸಾಮಾಜಿಕ ಸ್ಥಿತಿ ಅರ್ಥವಾಗುತ್ತದೆ. ಅತಿಶೂದ್ರರಿಗೆ ವಿಧಿಸುವ ಭಯಂಕರ ಹಿಂಸಾತ್ಮಕ ಕ್ರೂರ ಶಿಕ್ಷೆಗಳ ಚಿತ್ರಣ ಕಣ್ಣ ಮುಂದೆ ಬಂದು ನಿಲ್ಲುತ್ತದೆ.

"ಪ್ರತಿಯೊಂದು ಹಳ್ಳಿಯಲ್ಲಿ ಒಂದು ಅಸ್ಪೃಶ್ಯರ ಕೇರಿ ಇರುತ್ತಿತ್ತು, ಪ್ರತ್ಯೇಕ ಹೊಲೆಯರ ಬಾವಿ ಇರುತ್ತಿತ್ತು ಗ್ರಾಮಸ್ಥರ ಎಂಜಲು ತಿನ್ನುವುದು, ಹೊಲಸು ಬಳಿಯುವುದನ್ನು ಅಸ್ಪೃಶ್ಯರು ಸಹಜವೆಂಬಂತೆ ಮಾಡಬೇಕಿತ್ತು. ಅಸ್ಪೃಶ್ಯನೊಬ್ಬನು ಮಧ್ಯಾಹ್ನ ೧ ರಿಂದ ೯ ಗಂಟೆಯ ಒಳಗೆ ಮಾತ್ರ ಊರಲ್ಲಿ ಪ್ರವೇಶಿಸಬಹುದು. ಕಾರಣ ಅವನ ನೆರಳು ಅವನ ಕಾಲ ಕೆಳಗೆ ಬೀಳಬೇಕೇ ಹೊರತು, ಸವರ್ಣೀಯರ ಮೇಲೆ ಬೀಳಬಾರದು. ಉಗುಳುವುದಕ್ಕೆ ಕೊರಳಿನಲ್ಲಿ ಮಣ್ಣಿನ ಮಡಕೆ ಮತ್ತು ದಾರಿಯಲ್ಲಿ ಮೂಡಿದ್ದ ತನ್ನ ಹೆಜ್ಜೆಗಳನ್ನು ಅಳಿಸಲು ಅವನು ಮರದ ರೆಂಬೆಯನ್ನು ನಡಕ್ಕೆ ಕಟ್ಟಬೇಕಾಗಿತ್ತು. ಇದಲ್ಲದೆ ಕೈಯಲ್ಲೊಂದು ಗೆಜ್ಜೆಯ ಬಡಿಗೆ ಹಿಡಿದು ಸದ್ದು ಮಾಡುತ್ತ ಊರನ್ನು ಪ್ರವೇಶಿಸಬೇಕಾಗುತ್ತಿತ್ತು. ಅವರ ಹೆಣ್ಣು ಮಕ್ಕಳು ದೇವರ ಹೆಸರಿನಲ್ಲಿ ಶೋಷಣೆಗೆ ಒಳಗಾಗುವುದು ಅನಿವಾರ್ಯವಾಯಿತು. ಹೀಗೆ ಅಲ್ಪಸಂಖ್ಯೆಯ ಜನರ ಕೈಯಲ್ಲಿ ಬಹುಸಂಖ್ಯೆಯ ಜನರು ನಲುಗಿ ಹೋದರು" (ಕಾಂಬಳೆ, ೨೦೦೩, ಪು. ೮).

ಅನೇಕರು ಇಂತಹ ಕ್ರೂರ ಶಿಕ್ಷೆಗಳಿಗೆ ಹೆದರಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಬೌದ್ಧ ಧರ್ಮ ಸಹನೆ, ಶಾಂತಿಗೆ ಹೆಸರುವಾಸಿಯಾಗಿತ್ತು. ಬುದ್ಧ ಹಾಗೂ ಮಹಾವೀರ ಇವರು ಪ್ರಾರಂಭದಲ್ಲಿ ಮಹಿಳೆಗೆ ಪ್ರಾಮುಖ್ಯತೆ ಕೊಡದಿದ್ದರೂ, ನಂತರದ ಕಾಲದಲ್ಲಿ ಮಹಿಳೆಯೂ ಮೋಕ್ಷಕ್ಕೆ ಅರ್ಹಳು ಎಂಬುವುದನ್ನು ಸಾರಿದವು. ಇದರಿಂದ ಮಹಿಳಾ ಸಮಾನದಲ್ಲಿ ಮುಕ್ತ ವಾತಾವರಣ ನಿರ್ಮಾಣಗೊಂಡು ಸರಳವಾದ ಅಧ್ಯಯನದ ಅಭಿರುಚಿಯತ್ತ ಮನಸ್ಸು ಕೇಂದ್ರೀಕರಣಗೊಳ್ಳತೊಡಗಿತು. ಅನೇಕ ಸುಸಂಸ್ಕೃತ "ಮಹಿಳೆಯರು ಬಿಕ್ಷುಣಿಯರಾಗಿ, ಮತ ಪ್ರಚಾರಕರಾಗಿ 'ಥೇರಿಗಾದಾ'ದಂತಹ ಉನ್ನತ ಗ್ರಂಥ ನಿರ್ಮಾಣಕ್ಕೆ ಕಾರಣರಾದರು. ಬೌದ್ಧ ವಿಹಾರಗಳು ಈ ದಿಸೆಯಲ್ಲಿ ಪ್ರಮುಖ ಪಾತ್ರ ವಹಿಸಿದವು. ಒಂದು ರೀತಿಯಲ್ಲಿ ಬೌದ್ಧ ಧರ್ಮ ಭಾರತೀಯ ಮುಕ್ತ ವಿದ್ಯಾಪರಂಪರೆಗೆ ಅಡಿಪಾಯವನ್ನು ಹಾಕಿಕೊಟ್ಟಿದೆ (ಅದೇ ಪು. ೭೯).

ಬೌದ್ಧ ಧರ್ಮ ಜನನಕ್ಕೂ ಮುನ್ನ ಯಥೇಚ್ಛವಾಗಿ ಇಲ್ಲಿ ಪ್ರಾಣಿ ಹತ್ಯೆ ನಡೆಯುತ್ತಿತ್ತೆಂಬ ಜಾಗತಿಕ ಸತ್ಯಗಳು ಸಮಕಾಲೀನ ಚಾರಿತ್ರಿಕ ದಾಖಲೆಗಳಲ್ಲಿವೆ. ಈ ಧರ್ಮ ಮನುಕುಲ ಉದ್ಧಾರಕ್ಕಾಗಿ ಹಲವು ಮಾನವೀಯ ಸನ್ಮಾರ್ಗಗಳನ್ನು ಸಾರಿತ್ತು. ಕೃಷಿ ಪ್ರಧಾನವಾದ ಅಂದಿನ ಸಮಾಜ ಹಸು ಮತ್ತು ಇತರ ಪ್ರಾಣಿಗಳನ್ನು ಕೃಷಿ ಕಾರ್ಯಗಳಿಗೆ ಬಳಸಿಕೊಳ್ಳುತ್ತಿತ್ತು. ಅವುಗಳಿಂದ ಸಿಗುತ್ತಿದ್ದ ಸಹಾಯಗಳನ್ನು ನೆನೆದವರೆಲ್ಲರೂ ಅವುಗಳನ್ನು ಕೊಲ್ಲುವುದನ್ನು ನಿಲ್ಲಿಸಿದರು. ಬೌದ್ಧರ ವರ್ಚಸ್ಸಿನಿಂದ ಪುಳಕಿತಗೊಂಡ ಬ್ರಾಹ್ಮಣವಾದಿಯರು ಪ್ರಾಣಿ ಹತ್ಯೆ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸತೊಡಗಿದರು. ಅದು ವ್ಯಾಪಕವಾಗಿ ಹರಡಿದ್ದ ಬೌದ್ಧ ಧರ್ಮದ ಪ್ರಭಾವದಿಂದ ಎಲ್ಲಾ ಬಗೆಯ ಪ್ರಾಣಿ ಹತ್ಯೆ ನಿಷೇಧವಾಗತೊಡಗಿತ್ತು. ಅದರಲ್ಲೂ ಗುಪ್ತರ ಯುಗದಲ್ಲಿ ಬ್ರಾಹ್ಮಣ ಸಂಸ್ಕೃತಿಯನ್ನು ಸಾರಲು ಗೋಹತ್ಯೆ ನಿಷೇಧಕ್ಕೆ ರಾಜಾಶ್ರಯ ದೊರಕಿದವು. ಗೋ ಹತ್ಯೆಯು ಭಾರತದಲ್ಲಂತೂ ಒಂದು ಕಾಲಘಟ್ಟದಲ್ಲಿ ಕಾಣಿಸಿಕೊಂಡ ಪ್ರಕ್ರಿಯೆಯು ಆಗಿರಲಿಲ್ಲ. ಈ ನಿಟ್ಟಿನಲ್ಲಿ ಅವಲೋಕಿಸಿದಾಗ ಗೋ ಮಾಂಸ ಭಕ್ಷಣೆ ಅನಾದಿಕಾಲದಿಂದಲೂ ಇತ್ತೆಂಬ ಸಾಕ್ಷ್ಯಾಧಾರಗಳು ನಮಗೆ ಹೇರಳವಾಗಿ ದೊರೆಯುತ್ತವೆ (ದಾಸನೂರು ಕೂಸಣ್ಣ, ೨೦೦೩, ಪು. ೨೪).

ಸಮಾಜದಲ್ಲಿದ್ದ ಉನ್ನತ ಜಾತಿಗಳು ಬ್ರಾಹ್ಮಣಶಾಹಿಯ ಮೌಲ್ಯಗಳಿಗೆ ಮರುಳಾಗಿ ಮಾಂಸವನ್ನು ಬಿಟ್ಟರೆ, ತಳಸಮುದಾಯಗಳು ಬಡತನದ ಬೇಗೆಯಲ್ಲಿ ಸತ್ತ ಹಸುವಿನ ಮಾಂಸ ತಿನ್ನಲು ಶುರು ಮಾಡಿದ್ದರು. ಇದರಿಂದ ಇವರನ್ನು ಹಸು ಮಾಂಸ ತಿನ್ನುವವರು ಎಂದು ಕೆಟ್ಟದಾಗಿ ವ್ಯಾಖ್ಯಾನಿಸಲಾಯಿತು.

ಅಥರ್ವಣವೇದದಲ್ಲಿ ಹೀಗೆ ಹೇಳಲಾಗಿದೆ. "ಹತ್ತು ತಲೆಗಳು ಹಾಗೂ ಹತ್ತು ಮುಖಗಳು ಬ್ರಾಹ್ಮಣನು ಮೊದಲು ಹುಟ್ಟಿದವನು ಅವನು ಮೊದಲು ಸೋಮವನ್ನು ಕುಡಿದ, ವಿಷವನ್ನು ಶಕ್ತಿಹೀನವಾಗಿಸಿದ".

ರಾಜನನ್ನು ಗರ್ಭದಲ್ಲಿದ್ದಾಗಲೇ ಅವನನ್ನು ಕಂಡು ಹೆದರಿದ ದೇವತೆಗಳು ಅಲ್ಲಿಯೇ ಅವನನ್ನು ಕಟ್ಟುಗಳಿಂದ ಬಂಧಿಸಿದರು. ಹೀಗಾಗಿ ಅವನು ಹುಟ್ಟಿದಾಗಲೇ ನಿಯಂತ್ರಿಸಲ್ಪಟ್ಟಿದ್ದ. ಇಲ್ಲದಿದ್ದರೆ ಶತ್ರುಗಳನ್ನು ಅವನು ನಿರಂತರವಾಗಿ ಕತ್ತರಿಸುತ್ತಲೇ ಇರುತ್ತಿದ್ದ. ರಾಜನ್ಯನಿಗೆ ಇಂದ್ರನ ಗುಣವಿದ್ದರೆ, ಬ್ರಾಹ್ಮಣನಿಗೆ ಬೃಹಸ್ಪತಿಯ ಗುಣವಿರುವುದು. ರಾಜನ್ಯನು ಬಂಧ ವಿಮುಕ್ತವಾಗುವುದೇನಿದ್ದರೂ ಬ್ರಾಹ್ಮಣನ ಮೂಲಕವೇ" (ಡಾ.ಬಿ.ಆರ್. ಅಂಬೇಡ್ಕರ್, ೧೯೯೫, ಪು. ೨೨೮) ಎಂಬ ಸುಳ್ಳು ನಿಯಮಗಳನ್ನು ಸೃಷ್ಟಿಸಿದ ಬ್ರಾಹ್ಮಣಶಾಹಿಯು ಪ್ರಭುತ್ವದ ಜೊತೆ ಶಾಮಿಲಾಗಿ ಜಾತಿಬದ್ಧ ಭಾರತೀಯ ಸಮಾಜವನ್ನು ವ್ಯವಸ್ಥಿತವಾದ ಸುಲಿಗೆಗೆ, ಶೋಷಣೆಗೆ ಒಳಪಡಿಸಿತು. ಇದನ್ನು ಧಾರ್ಮಿಕ ನಿಯಮಗಳನ್ನಾಗಿ ಮಾಡಿ ಎಂದೆಂದೂ ಬದಲಾಗದ ಕ್ರೂರ ವ್ಯವಸ್ಥೆಯನ್ನಾಗಿ ಮಾಡಿತು. ಶ್ರೇಣೀಕೃತ ವ್ಯವಸ್ಥೆಯಲ್ಲಿ ಮೇಲ್ತುದಿಯಲ್ಲಿ ಪ್ರತಿಷ್ಠಿತರಾಗಿ ಭೂಸುರರೆಂದು ತಮ್ಮನ್ನು ಕರೆದುಕೊಂಡು, ಇಡೀ ದೇಶವನ್ನು ತಮ್ಮ ಗುಲಾಮಗಿರಿಗೆ ಒಳಪಡಿಸಿದರು. ಇವರ ಸುಳ್ಳು ನಿಯಮಗಳಿಗೆ ತಲೆಬಾಗಿದ ಪ್ರಭುತ್ವವು ಕೂಡ ಇವರಿಗೆ ಅಗ್ರಹಾರಗಳನ್ನು ಒದಗಿಸುವ, ರಾಜ್ಯದಲ್ಲಿ ಅವರಿಗೆ ವಿಶೇಷ ಪ್ರಾಮುಖ್ಯತೆ ಕೊಡುವ ಮೂಲಕ ಅವರ ಕಾಲಿಗೆ ಬಿದ್ದು ಆಯಿತು. ರಾಜರಿಗೂ ಕೂಡ ಅದು ಮುಖ್ಯವಾಗಿತ್ತು. ಯಾಕೆಂದರೆ ಇಲ್ಲಿ ವ್ಯವಸ್ಥೆ ನಿಂತಿರುವುದೇ ಧರ್ಮದ ಮೇಲೆ. ಧರ್ಮವನ್ನು ನಿಯಂತ್ರಣದಲ್ಲಿರಿಸಲು ಪುರೋಹಿತರನ್ನು ಒಲಿಸಿಕೊಳ್ಳಬೇಕಾಗಿತ್ತು. ಪುರೋಹಿತರನ್ನು ಒಲಿಸಿಕೊಳ್ಳಬೇಕಾದರೆ ಪುರೋಹಿತರ ಚಾಕರಿ ಮಾಡಬೇಕಾಗಿತ್ತು. ಇಂತಹ ಚಾಕರಿಯನ್ನು ಪುರೋಹಿತಶಾಹಿಗೆ ರಾಜತ್ವವು ಮಾಡಿತು.

ಕರ್ನಾಟಕದಲ್ಲಿ ಅಗ್ರಹಾರ ಪದ್ಧತಿ ಪ್ರಾರಂಭವಾದುದು ಕದಂಬರ ಕಾಲದಲ್ಲಿ ಎಂಬುವುದನ್ನು ಶಾಸನಕಾರರು ಶಾಸನಗಳಲ್ಲಿ ದೊರೆತ ಆಧಾರಗಳ ಮೇಲೆ ತಿಳಿಸುತ್ತಾರೆ. ಬ್ರಾಹ್ಮಣರ ಕುಟುಂಬಗಳಿಗೆ ದತ್ತಿಯಾಗಿ ನೀಡಿದ ಗ್ರಾಮ ಅಗ್ರಹಾರ. ಈ ಕುಟುಂಬಗಳ ಮುಖ್ಯಸ್ಥರನ್ನು ಶಾಸನಗಳು 'ಮಹಾಜನರು' ಎಂದು ಕರೆದಿದೆ.

"ಆದಿ ಪುರಾಣದಲ್ಲಿ ವೃಷಭದೇವ ತನ್ನ ಮಗಳು ಬ್ರಾಹ್ಮಿಗೆ 'ಸಿದ್ಧನ್ನಮ' ಎಂಬ ಮಂಗಳ ಪದದೊಂದಿಗೆ 'ಅ' ಕಾರಾದಿಯಾಗಿ 'ಹ' ಕಾರಾಂತದವರಿಗೆ ಸ್ವರ, ವ್ಯಂಜನ, ಬೇದ, ಭಿನ್ನ, ಶುದ್ಧಾಕ್ಷರ ಯೋಗವಾಹ ಚತುಷ್ಕ, ಸಂಯೋಗಾಕ್ಷರಗಳನ್ನು, ಇನ್ನೊಬ್ಬ ಮಗಳು ಸುಂದರಿಗೆ ಗಣಿತವನ್ನು ಭೋದಿಸಿದ. ಇದಲ್ಲದೆ ಸ್ವಯಂ ಭುವಾಭಿಧಾನ ಪದ ವಿದ್ಯಾಚ್ಚಂದೋವಿಚಿತ್ರಲಂಕಾರಗಳೆಂಬ ಮೂರರಿಂ ಪೆಸರ್ವಡೆದ ವಾಜ್ಞಯ ಸಮಸ್ತ ಕಳಾಕಳಾಪಗಳನ್ನು ಉಪದೇಶಗೈದು ವಿದ್ಯಾಪರಿಪೂರ್ಣೆಯರನ್ನಾಗಿ ಮಾಡಿದ. ಈ ಎಲ್ಲಾ ಹೇಳಿಕೆಗಳು ವಡ್ಡಾರಾಧನೆ ಆದಿಪುರಾಣ ಕಾಲದ ಸ್ತ್ರೀ ಓದಬೇಕಾದ ಆದರ್ಶವನ್ನು ಸೂಚಿಸುತ್ತಿರಬೇಕೇ ಹೊರತು ಓದುತ್ತಿದ್ದ ವಾಸ್ತವವನ್ನಲ್ಲ. ಆದರೆ,

ಒರ್ವಳಿ ಪೆರ್ಮೆಗಳ್ ಬಗೆ ವೊಡಿನ್ನೆಮಗೀಕೆಯೆ ಗಂಡುಗೂಸುತಾಂ|

ಸರ್ವಕಳಾವಿದಗ್ಧೆ ಪೆರತೇನೊ ಸರಸ್ವತಿಗತ್ತ ಮತ್ತೆ ಪ...|| ಎಂಬ ಕಾವ್ಯಾವಲೋಕನದ ಪದ್ಧತಿಗೆ ಸರ್ವಕಳಾವಿದಗ್ದೆಯಾದ ಹೆಣ್ಣನ್ನೇ ಗಂಡಿನಂತೆ ಕಾಣುವ ಸೂಚನೆ ಇದೆ. ಹೀಗೆ ಸ್ತ್ರೀ ವಿದ್ಯಾಭ್ಯಾಸ ಉಚ್ಛವರ್ಗಕ್ಕೆ ಮಾತ್ರ ಮೀಸಲಾಗಿದ್ದು ಮಧ್ಯಮ ಮತ್ತು ಕನಿಷ್ಠ ವರ್ಗಕ್ಕೆ ಇದರ ಸೋಂಕು ಇರಲಿಲ್ಲವೆನ್ನಬೇಕಾಗುತ್ತದೆ (ಚನ್ನಕ್ಕ ಎಲಿಗಾರ, ೧೯೯೩, ಪು. ೮೩).

ವಿವಾಹ ವ್ಯವಸ್ಥೆ ಉದಯವಾದಂದಿನಿಂದ ಅಸ್ತಿತ್ವಕ್ಕೆ ಬಂದ ಗೃಹಿಣಿ ಸಮಾಜದ ಜೊತೆ ಜೊತೆಯಲ್ಲಿಯೇ ಬೆಳೆದು ಬಂದಿದೆ. ಜಗತ್ತಿನ ಬೇರೆ ಬೇರೆ ಭಾಗಗಳಂತೆ ಭರತ ಖಂಡದಲ್ಲಿಯೂ ಇದು ಪುರಾತನ ಕಾಲದಿಂದ ನಡೆದುಬಂದ ಪದ್ಧತಿ. ಈ ವರ್ಗಕ್ಕೆ ಸಂಬಂಧಿಸಿದ ಸಾಧಾರಣಾ, ಜಾರಾ, ನಟಿ ಎಂಬ ಪದಗಳು ಋಗ್ವೇದದಲ್ಲಿ ಕಂಡುಬರುತ್ತವೆ (ಚನ್ನಕ್ಕ ಎಲಿಗಾರ, ೧೯೯೩, ಪು. ೪೭). ಇವರು ಅಪ್ಸರೆಯ ವಂಶಸ್ಥರು ಎಂದು ಶ್ರೀಕಂಠಶಾಸ್ತ್ರಿಯವರು ಭಾರತೀಯ ಸಂಸ್ಕೃತಿಯ ಗ್ರಂಥದಲ್ಲಿ ಹೇಳುತ್ತಾರೆ.

ದೇವತೆಗಳಿಗೂ, ದಾನವರಿಗೂ ನಡೆದ ಯುದ್ಧದಲ್ಲಿ ಮಡಿದ ದೇವತೆಗಳ ಹೆಂಡಂದಿರು ದಾನವರ ಬಲಾತ್ಕಾರಕ್ಕೆ ಒಳಗಾಗಲು ಅವರಿಗೆ ದೇವೇಂದ್ರನು ನೀವು ಈಗ ಅರಮನೆಯಲ್ಲಿಯೂ, ದೇವಾಲಯಗಳಲ್ಲಿಯೂ, ಭಕ್ತಿಯಿಂದ ವೇಶ್ಯಾ ಧರ್ಮವನ್ನನುಸರಿಸುತ್ತ ನಡೆಯಿರಿ ಎಂದು ಆದೇಶ ನೀಡಿದನೆಂದು ತಿಳಿಸುತ್ತದೆ ಮತ್ಸ್ಯ ಪುರಾಣ. ಪುರೋಹಿತ ಜಾತಿ ಹುಟ್ಟಿನಿಂದಲೇ ಎಲ್ಲಾ ಮೌಢ್ಯಗಳು, ಸಮಾಜದ ವಿಚ್ಛೇಂದ್ರೀಕರಣ, ಕ್ರೂರ ಸಂಪ್ರದಾಯಗಳು, ನಿರ್ಜೀವ ಆಚರಣೆಗಳು ಬಂದಿವೆ. ಇವು ಎಲ್ಲಾ ದೇಶಗಳಲ್ಲಿಯೂ ಪುರೋಹಿತರಿಗೆ ಪ್ರಾಬಲ್ಯ ಒದಗಿಸಿವೆ. ಇವೇ ಅಂತಿಮವಾಗಿ ಭಾರತದ ಸ್ವಾತಂತ್ರ್ಯವನ್ನು ಹಾಳು ಮಾಡಲು ಇಂಡಿಯಾದ ಜನಾಂಗಗಳನ್ನು ಗುಲಾಮರನ್ನಾಗಿಸಲು ಕಾರಣವಾಯಿತು. ಆರಂಭ ಕಾಲದಲ್ಲಿ ಪ್ರತಿ ಗೃಹಸ್ಥನೂ ತನಗೆ ತಾನೇ ಪುರೋಹಿತನಾಗಿದ್ದ. ರಾಜರು ಮಾತ್ರ ಕಸುಬುದಾರರನ್ನು ಅಥವಾ ಸೇವಕರನ್ನು ಯಜ್ಞ ಮಾಡಲು ನೇಮಿಸುತ್ತಿದ್ದರು. ಸಮೃದ್ಧಿ ಹೆಚ್ಚಾಗಿ ನೆಮ್ಮದಿಗೂ ವಿರಾಮವನ್ನು ಒದಗಿಸಿದಾಗ ಪುರೋಹಿತರ ನೆರವಿನಿಂದ ಆಗಾಗ್ಗೆ ಯೋಗಗಳನ್ನು ನಡೆಸುವುದರಲ್ಲಿ ರಾಜ ಮಹಾರಾಜರುಗಳೂ ಶ್ರೀಮಂತರೂ ಹೆಮ್ಮೆ ಪಡುತ್ತಿದ್ದರು. ತಮ್ಮ ಪೋಷಕರ ಒಣ ಪ್ರತಿಷ್ಠೆಯ ಅನುಕೂಲವನ್ನು ಪುರೋಹಿತರು ಪಡೆದುಕೊಂಡು ಸರಳ ಆಚರಣೆಗಳನ್ನು ಸಂಕೀರ್ಣ ವ್ಯವಸ್ಥೆಯ ಆಚರಣೆಗಳಿಗೆ ತಿರುಗಿಸಿದರು. ಈ ಯಜ್ಞಗಳು ಕೆಲವೇಳೆ ಅನೇಕ ದಿನಗಳೂ ತಿಂಗಳುಗಳೂ ನಡೆದು ಪುರೋಹಿತರಿಗೆ ಬಾರೀ ಬೆಲೆ ಬಾಳುವ ಉಡುಗೊರೆಗಳನ್ನು ಕೊಡುವ ಅಟ್ಟ ಹಾಸದಲ್ಲಿ ಮುಕ್ತವಾಗುತ್ತಿದ್ದವು (ಭಗವಾನ್, ೨೦೦೩, ಪು. ೫೪).

ಹೀಗೆ ಪುರೋಹಿತ್ಯ ಆ ಕಾಲದ ಅತ್ಯಂತ ಲಾಭದಾಯಕ ವೃತ್ತಿಯಾಯಿತು. ಪುರೋಹಿತರು ಪ್ರತ್ಯೇಕ ವರ್ಗವಾಗಿ ರೂಪುಗೊಳ್ಳುವುದು ಅಸಹಜವಾಗಲಿಲ್ಲ. ಬಂದ ಲಾಭವನ್ನು ಆದಷ್ಟು ಮಟ್ಟಿಗೆ ತಮ್ಮ ಕುಟುಂಬಗಳಿಗೆ ಮಾತ್ರ ಇಟ್ಟುಕೊಳ್ಳಲು ಮನಸು ಮಾಡಿದರು. ತಂದೆಯ ವೃತ್ತಿಯನ್ನು ಮಗ ಅನುಸರಿಸುವುದು ವಾಡಿಕೆಯಾಯಿತು. ಹಾಗಾಗಿ ವಂಶ ಪಾರಂಪರ್ಯವಾಗಿ ಪುರೋಹಿತ ವರ್ಗ ಅಸ್ತಿತ್ವಕ್ಕೆ ಬಂದಿತು. ಶಾಂತಿ ಮತ್ತು ಭೋಗದ ಕಾಲದಲ್ಲಿ ಧನಿಕರ ಶಕ್ತಿಯನ್ನು ಪೌರೋಹಿತ್ಯ ಕೌಶಲ್ಯವನ್ನೂ ಪ್ರದರ್ಶಿಸುವ ಸಲುವಾಗಿ ಯಜ್ಞಗಳು ಅಪರೂಪವಾಗಿರಲಿಲ್ಲ. ಪುರೋಹಿತರು ಸುಂದರವಾದ ಉಯ್ಯಾಲೆಯಲ್ಲಿ ಕೂರುತ್ತಿದ್ದರು. ಅದು ತೂಗಾಡುವಾಗ ನರ್ತಕಿಯರು ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದರು. ಸಂಗೀತ ಅದಕ್ಕೆ ಶೋಭೆಯನ್ನು ನೀಡುತ್ತಿತ್ತು. ಭರ್ಜರಿಯಾಗಿ ಸಿಂಗರಿಸಿದ್ದ ವಿಶಾಲ ಮಂಟಪದಲ್ಲಿ ಕೂರುತ್ತಿದ್ದರು. ಅವನ ಕುಟುಂಬದ ಪ್ರಾಣಿಗಳು ಮತ್ತು ನಿಧಿಗಳ ಪ್ರದರ್ಶನ ನಡೆಯುತ್ತಿತ್ತು. ಅಶ್ಲೀಲ ಸಂಭಾಷಣೆಗಳಿಗೆ ಅವಕಾಶವಿತ್ತು. ಹೆಂಗಸರು ಕೂಡ ಹರಟುತ್ತಿದ್ದರು. ಪಗಡೆ ಆಟ ನಡೆಯುತ್ತಿತ್ತು. ಜಂಭ ಕೊಚ್ಚುವಿಕೆ, ಹೊಡೆದಾಟ ಮತ್ತು ಶತ್ರುಗಳಿಗೆ ಬೆದರಿಕೆ ಒಡ್ಡುವುದರಲ್ಲಿ ರಮಿಸುತ್ತಿದ್ದರು (ಅದೇ ಪು. ೫೫).

ಇದೇ ಕಾಲದಲ್ಲಿ ಸತಿಸಹಗಮನ, ಬಾಲ್ಯ ವಿವಾಹ, ಬಲವಂತವಾಗಿ ಮಹಿಳೆಯ ಮೇಲೆ ಹೇರಲಾಯಿತು. ಪಾತಿವ್ರತ್ಯವನ್ನು ಕುರಿತು ಹೇಳಿದ ಪುರೋಹಿತಶಾಹಿಯೇ ವ್ಯಭಿಚಾರವನ್ನು ಹುಟ್ಟು ಹಾಕಿತು.

ಸಂಸ್ಕೃತ ಮತ್ತು ಕನ್ನಡ ಕಾವ್ಯಗಳಲ್ಲಿಯೂ ಇದಕ್ಕೆ ವಿಪುಲ ಉದಾಹರಣೆಗಳು ದೊರಕುತ್ತವೆ. ಆದರೆ ಪ್ರಾಚೀನ ಶಾಸನಗಳಲ್ಲಿ ಸಿಗುವ ಉಲ್ಲೇಖಗಳ ಬಲದಿಂದ ವ್ಯಕ್ತಿಯೊಬ್ಬನೊಂದಿಗೆ ಇದ್ದ, ದೇವರ ಹೆಸರಿನಲ್ಲಿ ಬಿಟ್ಟ, ಹಣಕ್ಕಾಗಿ ದೇಹ ಮಾರುವ ಇವರನ್ನು ವ್ಯಕ್ತಿಸೂಳೆ, ದೇವಸೂಳೆ, ಸಮಾಜಸೂಳೆ ಎಂದು ಚೆನ್ನಕ್ಕ ಎಲಿಗಾರ ಅವರು ಗುರುತಿಸುತ್ತಾರೆ.

'ಪುರೋಹಿತಶಾಹಿ ವ್ಯವಸ್ಥೆ ತನ್ನ ಪೌರೋಹಿತ್ಯದ ಮೂಲಕ ಇಡೀ ವ್ಯವಸ್ಥೆಯ ಮೇಲೆ ದಬ್ಬಾಳಿಕೆ ಮಾಡಿದೆ. ಇದರಲ್ಲಿ ಹೆಚ್ಚಿನ ಶೋಷಣೆಗೆ ಒಳಗಾದವಳೆಂದರೆ ಮಹಿಳೆ. ಪ್ರಾರಂಭದಲ್ಲಿ ದೇವಾಲಯಗಳಲ್ಲಿ ದೇವರ ಸೇವೆಗೆಂದು ಮಹಿಳೆಯರನ್ನು ದೇವರದಾಸಿಯಾಗಿ ಬಿಡುವ ಪದ್ಧತಿಯನ್ನು ಪುರೋಹಿತಶಾಹಿಯೇ ಹುಟ್ಟು ಹಾಕಿತು. ಇದರ ಹಿಂದಿನ ಕುತಂತ್ರ ಸಮಾಜದಲ್ಲಿ ಯಾರೂ ಅಷ್ಟು ಬೇಗ ಅರ್ಥ ಮಾಡಿಕೊಳ್ಳಲಾಗಲಿಲ್ಲ. ದ್ರಾವಿಡರ ದೇವರುಗಳನ್ನು ತಮ್ಮ ದೇವರುಗಳನ್ನಾಗಿ ಮಾಡಿಕೊಳ್ಳಲು ಹೆಣಗಿದ ಪುರೋಹಿತರು ದಲಿತ ಮಹಿಳಾ ಅರ್ಚಕರನ್ನು ಕಡೆಗಣಿಸಿದರು. ದಲಿತ ಮಹಿಳಾ ಅರ್ಚಕರನ್ನು ಕುರಿತು ಡಾ. ಸಿದ್ದಲಿಂಗಯ್ಯನವರು ಹೀಗೆ ಹೇಳುತ್ತಾರೆ. "ಗ್ರಾಮದೇವತೆಗಳ ಅರ್ಚಕರೆಲ್ಲ ದಲಿತರು ಹಿಂದುಳಿದ ವರ್ಗದವರು ಮತ್ತು ಮಹಿಳೆಯರು. ದೇವಸ್ಥಾನಗಳಲ್ಲಿ ಆರ್ಥಿಕ ಸ್ಥಿತಿ ಬಲವಾಗುತ್ತಿದ್ದಂತೆ ಮೇಲ್ಜಾತಿಯವರು ಮೊದಲೇ ಇದ್ದ ಕೆಳಜಾತಿಯವರನ್ನು ಹೊರಗಡೆ ಕಳುಹಿಸಿ ತಾವು ಅರ್ಚಕರಾಗಿ ಸೇರಿಕೊಂಡಿರುವುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಮತ್ತು ಎಲ್ಲಾ ದೇವತೆಗಳು, ಅದರಲ್ಲೂ ಗ್ರಾಮದೇವತೆಗಳ ಅರ್ಚಕರು ಮಹಿಳೆಯರು ಎಂಬುವುದು ತುಂಬಾ ಜನಗಳಿಗೆ ಗೊತ್ತಿಲ್ಲ. ಪುರುಷರು ಈ ಅರ್ಚಕ ವೃತ್ತಿಗೆ ಬಂದದ್ದು ಕ್ರಮೇಣ ಮಹಿಳೆಯರಿಗೆ ಈ ವಿಚಾರದಲ್ಲಿ ಯಾವ ರೀತಿಯ ದೌರ್ಜನ್ಯವಾಗಿ ಎಂದರೆ ಮಾತೃ ಪ್ರಧಾನ ವ್ಯವಸ್ಥೆ ದುರ್ಬಲವಾಗುತ್ತಾ ಪುರುಷ ಪ್ರಧಾನ ವ್ಯವಸ್ಥೆ ಬಲವಾಗುತ್ತಿದ್ದ ಕಾಲಘಟ್ಟದಲ್ಲಿ ಮಹಿಳೆಯರನ್ನು ಅರ್ಚಕ ವೃತ್ತಿಯಿಂದ ಸಮಾಜ ದೂಷೀಕರಿಸಿದ್ದಷ್ಟೆ ಅಲ್ಲ, ಅನೇಕ ಕಡೆ ದೇವಸ್ಥಾನದ ಒಳಗಡೆಗೆ ಮಹಿಳೆಯರಿಗೆ ಪ್ರವೇಶ ಕೊಡಬಾರದು ಎಂದು ನಿಯಮ ಮಾಡಿದರು. ಜಗತ್ತಿನ ಶ್ರೇಷ್ಠ ಮಾನವಶಾಸ್ತ್ರಜ್ಞ ಬ್ರಿಫಾಲ್ಟ್ ದೇವಿ ಪ್ರಸಾದ ಚಟ್ಟೋಪಾಧ್ಯಾಯ ಮತ್ತು ಎಂ.ಎನ್. ಭಟ್ಟಾಚಾರ್ಯ ಅವರು ಈ ವಿಚಾರವನ್ನು ತುಂಬಾ ಸಮರ್ಥವಾಗಿ ಚರ್ಚೆಮಾಡಿದ್ದಾರೆ. ಜಗತ್ತಿನ ಮುಕ್ಕಾಲುಪಾಲು ದೇವತೆಗಳ ಅರ್ಚಕರು ಮಹಿಳೆಯರೇ ಆಗಿದ್ದರು. ಅದರಲ್ಲೂ ಕೃಷಿ ಸಂಸ್ಕೃತಿಯಲ್ಲಿ ಹುಟ್ಟಿದ ಎಲ್ಲಾ ದೇವತೆಗಳ ಅರ್ಚಕರು ಮಹಿಳೆಯರೇ (ಡಾ. ಸಿದ್ದಲಿಂಗಯ್ಯ, ೨೦೦೭, ಪು. ೨೯). ಇದ್ದರು ಎಂಬುವುದನ್ನು ತಿಳಿಸುತ್ತಾರೆ.'

ಪುರೋಹಿತಶಾಹಿಯನ್ನು ವಿರೋಧಿಸುತ್ತಾ ದಲಿತ ಮಹಿಳೆ ಹೀಗೆ ಹೇಳುತ್ತಾಳೆ?

'ಹೆಣ್ಣೀನ ಗೋಳಟ್ಟಿ ಬನ್ನೀಯ ಮರ ಬೆಂದೋ
ಅಲ್ಲಿ ಸನ್ಯಾಸಿ ಮಠ ಬೆಂದೋ||
ಹಾರುವರ ಪಂಚಾಂಗ ಹತ್ತಿ ಉರಿದಾವ.

ಇದು ಪ್ರಾತಿನಿಧಿಕವಾದ ಒಂದು ತ್ರಿಪದಿ. ಹೆಣ್ಣೊಬ್ಬಳು ಸಮಾಜವನ್ನು ಪ್ರತಿಭಟನಾತ್ಮಕವಾಗಿ ನೋಡಿದ್ದರ ಒಂದು ಸೂಚನೆ ಇಲ್ಲಿ ಸಿಗುತ್ತದೆ. ಇದನ್ನೇ ಮುಂದುವರೆಸಿಕೊಂಡು ಬರಲಾಗಿದೆ. ಶೃಂಗೇರಿಯ ದಾಖಲೆಗಳಲ್ಲಿ, ಶೃಂಗೇರಿಯ ಸಂತೆಗಳಲ್ಲಿ ಸುಮಾರು ೧೦೦ ವರ್ಷದ ಹಿಂದೆ ದಲಿತ ಮಹಿಳೆಯರನ್ನು ಮಾರಾಟ ಮಾಡ್ತಾ ಇದ್ದಿದ್ದಕ್ಕೆ ದಾಖಲೆಗಳಿವೆ. ಶೃಂಗೇರಿಯಲ್ಲಿ ದಲಿತ ಮಹಿಳೆಯರನ್ನು ಹರಾಜು ಹಾಕ್ತಾ ಇದ್ದುದು, ಮಾರಾಟ

ಮಾಹ್ತಾ ಇದ್ದುದನ್ನು ಶಾಸನಗಳು ದಾಖಲು ಮಾಡಿವೆ. ಈ ಪ್ರಕ್ರಿಯೆಗೆ ಸಂಬಂಧಿಸಿದಂತೆ ಶೃಂಗೇರಿ ಮಠದ ಕಡತಗಳಲ್ಲಿರುವ ದಲಿತರ ಮಾರಾಟದ ಬಗ್ಗೆ ಕ್ರಯಾ ಚೀಟಿಗಳನ್ನು ಕುರಿತು ಎ.ಕೆ. ಶಾಸ್ತ್ರೀಯವರು ಐ.ಸಿ.ಎಚ್.ಆರ್.ಗೆ ಸಿದ್ಧಪಡಿಸಿದ ಕೃತಿಯಲ್ಲಿ ಸೇರಿಕೊಂಡಿದೆ. ಈ ಕ್ರಯಾ ಚೀಟಿಗಳ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿರುವ ಚಿದಾನಂದ ಮೂರ್ತಿಯವರು ಹೊಲೆಯರ ಮಾರಾಟದ ಕ್ರಯ ಪತ್ರಗಳನ್ನು ಕುರಿತು ಚರ್ಚಿಸಿದ್ದಾರೆ. ಜಮೀನುದಾರರು ತಮ್ಮ ಸ್ವಂತ ಪಿತ್ರಾರ್ಜಿತ ಆಸ್ತಿಗಳಾದ ಹೊಲೆಯರನ್ನು ಇತರರಿಗೆ ಮಾರಾಟ ಮಾಡಿ ಕ್ರಯ ಚೀಟಿಗಳನ್ನು ಬರೆದು ಕೊಟ್ಟ ವಿಷಯವಿದೆ. ಕ್ರಿ.ಶ. ೧೭೦೦ ಕ್ಕೆ ಸೇರಿದ ಕ್ರಯ ಚೀಟಿಯಲ್ಲಿ ಮಾರಾಟವಾಗಿರುವಂತ ದಕ್ಷಿಣ ಕನ್ನಡ ಜಿಲ್ಲೆಯ ಮೇರರು ಜಾತಿಗೆ ಸೇರಿದ ಹೊಲೆಯಾಳು ತಿಮ್ಮನ ಮಾರಾಟದ ಬೆಲೆ ಬಿಟ್ಟು ಒಂಬತ್ತು ವರಹ ಮತ್ತು ಒಂದು ಹಣ ಗುಡ್ಡಿ ಸರಕು ಸಹ- ಮಾರಾಟಗೊಂಡ ತಿಮ್ಮನ ಜೊತೆ ಅವನ ಗುಡಿಸಲಿನ ಸರಕುಗಳೂ ಸೇರಿದ್ದವು. ಅದೇ ರೀತಿ ಕ್ರಿ.ಶ. ೧೭೫೮ಕ್ಕೆ ಸಂಬಂಧಿಸಿದ ಕ್ರಯ ಚೀಟಿ ಶೃಂಗೇರಿ ಮಠದ ಅಧಿಕಾರದ ವ್ಯಾಪ್ತಿಯೊಳಗೆ ಬರುತ್ತಿದ್ದ ಪ್ರದೇಶದಲ್ಲಿ ವ್ಯಭಿಚಾರ ಮಾಡಿದ ಹೆಂಗಸರನ್ನು ಮಠಕ್ಕೆ ಕರಿಸಿ ಹಣಕ್ಕೆ ಅನ್ಯರಿಗೆ ಮಾರುತ್ತಿದ್ದರು.

೧೯೭೭ರಲ್ಲಿ ಸುಪ್ರೀಮ್ ಕೋರ್ಟ್ ಒಂದು ತೀರ್ಪು ಕೊಟ್ಟಿದೆ. ಸುಮಾರು ೧೦೦ ವರ್ಷಕ್ಕಿಂತ ಹಿಂದೆ ಮಹಿಳೆಯರು ವಕೀಲರಾಗಲು ಸಾಧ್ಯವಿಲ್ಲ. ಅವರು ನ್ಯಾಯವಾದಿಗಳಾಗಬಾರದು ಎಂದು. ಅದು ಈಗ ಉಲ್ಲಂಘನೆಯಾಗಿದೆ. ಸಮಾಜ ನಡೆದುಕೊಂಡದ್ದನ್ನು ಇದು ದಾಖಲಿಸುತ್ತದೆ!

ಜೈಪುರದ ಹೈಕೋರ್ಟ್‌ನಲ್ಲಿ ೭ ವರ್ಷಗಳ ಹಿಂದೆ ದಲಿತ ಮಹಿಳೆಯ ಮೇಲೆ ಅತ್ಯಾಚಾರ ನಡೆದದ್ದನ್ನು ವಿಚಾರಣೆ ಮಾಡಿದಂತಹ ನ್ಯಾಯಾಧಿಪತಿಗಳು ಒಂದು ತೀರ್ಪನ್ನು ಕೊಟ್ಟಿದ್ದಾರೆ. ಅತ್ಯಾಚಾರ ದಲಿತ ಮಹಿಳೆಯ ಮೇಲೆ ನಡೆದಿದೆ. ಆದರೆ ಅತ್ಯಾಚಾರ ಮಾಡಿದವರು ಮೇಲ್ವರ್ಗದವರಾಗಿರುವುದರಿಂದ ಇದು ನಡೆದಿರಲು ಸಾಧ್ಯವಿಲ್ಲ ಎಂದು ತೀರ್ಪು ಕೊಟ್ಟಿದ್ದಾರೆ. ಅಂದರೆ ಆ (ತಾರತಮ್ಯ) ಪ್ರವೃತ್ತಿ ನಮ್ಮಲ್ಲಿ ಇನ್ನೂ ಉಳಿದುಕೊಂಡಿದೆ. ದಲಿತರನ್ನು ಶೋಷಣೆ ಮಾಡುವಂತಹದ್ದು, ಹೆಣ್ಣುಗಳನ್ನು ಶೋಷಣೆ ಮಾಡುವ ಒಂದು ಪರಂಪರಾನುಗತವಾದ ಪ್ರವೃತ್ತಿ ಬೇರೆ ಬೇರೆ ರೂಪಗಳಲ್ಲಿ ತೀರ್ಪುಗಳ ಮೂಲಕ, ಘಟನೆಗಳ ಮೂಲಕ ಕಾಣಿಸಿಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ.

ಸತಿಸಹಾಗಮನ ಆಗಬೇಕು ಅಂತ ದೊಡ್ಡ ಜಗದ್ಗುರುಗಳು ಒಬ್ಬರು ಇತ್ತೀಚೆಗೆ ಹೇಳಿದ್ದರು. ಹೆಣ್ಣಿಲ್ಲದೆ ಗಂಡೂ ಪೂರ್ಣವಾಗುವುದಿಲ್ಲ. ಗಂಡಿಲ್ಲದೆಯೂ ಹೆಣ್ಣು ಸಹ ಪೂರ್ಣವಾಗುವುದಿಲ್ಲ. ಬಿ.ಚಿ. ಬ್ರಹ್ಮಚಾರಿ ಮಗ ಕಾದಂಬರಿ ಬರೆದಿದ್ದಾರೆ. ನೀನು ಯಾರ ಮಗ ಎಂದು ಕೇಳಿದರೆ ಬ್ರಹ್ಮಚಾರಿ ಮಗ. ಅವರು, ಅವರೂ ಸಹ ಬ್ರಹ್ಮಚಾರಿಯ ಮಗ, ಅವರು ಅವರೂ ಸಹ ಬ್ರಹ್ಮಚಾರಿಯ ಮಗ ಅಂದರೆ ಈ ಬಗೆಯ ಧೋರಣೆ ಹಾಸ್ಯಾಸ್ಪದವಾಗುತ್ತದೆ. ಅದರಿಂದ ನಮ್ಮ ಬದುಕಿನ ಅರ್ಧ ಭಾಗವಾಗಿವಾಗಿರುವ, ಸಮಾಜದ ಅರ್ಧ ಭಾಗವಾಗಿರುವಂತಹ ಹೆಣ್ಣು ಗಂಡುಗಳು ಸಮಾನತೆಯಿಂದ ಬದುಕುವಂತಹ ಸಮಾಜ ವ್ಯವಸ್ಥೆಯನ್ನು ಸೃಷ್ಟಿ ಮಾಡುವ ದಿಕ್ಕಿನಲ್ಲಿ ನಾವೆಲ್ಲರೂ ಹೋರಾಟ ಮಾಡಬೇಕು. ಈ ಹೋರಾಟವನ್ನು ಗಂಡಸರಿಗಿಂತ ಹೆಂಗಸರು ತೀವ್ರವಾಗಿ ಕಳಕಳಿಯಿಂದ ಮಾಡಲು ಸಾಧ್ಯ. ಅದಕ್ಕೆ ಗಂಡಸರು ಪರಿಪೂರ್ಣವಾದ ಪ್ರೋತ್ಸಾಹ ಕೊಟ್ಟು ಇದು ಸರಿಯಾದ ಹೋರಾಟ, ಇದು ಸಮಾಜಕ್ಕೆ ಗೌರವ ತರುವಂತಹ ಹೋರಾಟ, ಸಮಾಜದ ದೌರ್ಜನ್ಯ ಮತ್ತು ದಮನಕಾರಿ ನೀತಿಯನ್ನು ಪ್ರತಿಭಟಿಸುವ ಹೋರಾಟ ಎಂದು ಪುರುಷರೂ ಸಹ ಈ ಹೋರಾಟದ ಹಿಂದೆ ಬೆಂಬಲಿಗರಾಗಿ ನಿಂತುಕೊಂಡಿರುವಂತಹ ಅಗತ್ಯ ಇದೆ.

ಭಾಷೆಯನ್ನು ಬಳಸುತ್ತಿರುವಾಗಲೇ ಯಾರಾದರೂ ಅಪಸ್ವರ ಎತ್ತಿಬಿಟ್ಟಾರೋ ಎಂಬ ಭಯ ಇರುತ್ತದೆ ನಮಗೆ. ಇದನ್ನು ಮಲತಾಯಿ ಧೋರಣೆ ಎನ್ನುತ್ತೇವೆ. ಅಪಸ್ವರವಾಗಿ ಮಲ ತಂದೆ ಧೋರಣೆ ಎಂದು ಯಾಕೆ ಕರೆಯುವುದಿಲ್ಲ. ಆದರೆ ಎಲ್ಲರೂ ಹೇಳಿರುವುದು ಇದು ಭಾಷೆಯ ಬಳಕೆಯಲ್ಲಿ ಬಂದುಬಿಟ್ಟಿದೆ. ಅದಕ್ಕೆ ಹೊಂದಿಕೊಂಡು ಹೋಗಬೇಕು ಅಂತ ಹೇಳ್ತಾರೆ. ನಾನು ಗಂಡಸಾಗಿದ್ದರೆ ಮಾಡಿ ತೋರಿಸ್ತೀನಿ ಎನ್ನುವಂತಹದ್ದೂ ಕೂಡ ಇರುವುದು. ಸವಾಲಾಕುವುದು, ನಾನೇನು ಬಳೆ ತೊಟ್ಟು ಕೂಂಡಿದೀನಾ ಎಂಬುವುದು, ಮೀಸೆ ಬೋಳಿಸಿಕೊಂಡು ಬಿಡ್ತೀನಿ ಎನ್ನುವಂತಹದೆಲ್ಲವು ಭಾಷೆ ಭ್ರಷ್ಟಗೊಂಡಿರುವುದರ ಒಂದು ಸ್ಥಿತಿ. ಈ ಭಾಷೆ ಈ ರೀತಿ ಭ್ರಷ್ಟಗೊಳ್ಳಬೇಕಾದರೆ ಇದಕ್ಕೆ ಹಿನ್ನೆಲೆಯಾಗಿರುವಂತಹ ಸಮಾಜ ವ್ಯವಸ್ಥೆ, ಇದು ಏನು ತೋರಿಸುತ್ತದೆ ಎಂದರೆ ಒಂದು ಸಮಸ್ಯೆ ಎಷ್ಟೊಂದು ತೀಕ್ಷ್ಣ ಹಾಗೂ ಎಷ್ಟೊಂದು ಜಟಿಲ ಎಂಬುವುದನ್ನು ತೋರಿಸುತ್ತದೆ. ನೆಲದ ಸಂಸ್ಕೃತಿಯ ಕಣ್ಣುಗಳಂತಿರುವ ಮತ್ತು ಭಾರತೀಯ ವೈಚಾರಿಕ ಪರಂಪರೆಯ ಕ್ಷಿತಿಜವನ್ನು ಆಧ್ಯಾತ್ಮದ ಪ್ರಕಾರ ಬೆಳಕಿನಿಂದ ವಿಸ್ತರಿಸಿದ ಬುದ್ಧ, ಬಸವ, ಅಂಬೇಡ್ಕರ್, ಕನಕದಾಸ, ಲೋಹಿಯಾ, ಪೆರಿಯಾರ್, ಮಹಾವೀರ, ಸ್ವಾಮಿ ವಿವೇಕಾನಂದ ಮುಂತಾದ ಬಂಡುಕೋರ ಸಾಮಾಜಿಕ ಸಾಂಸ್ಕೃತಿಕ ನಾಯಕರ, ದಾರ್ಶನಿಕರ ಚಿತ್ರಗಳು ಶಂಕರಾಚಾರ್ಯ ಹೆಡಗೇವಾರ, ಗೋಳ್ವಲ್ಕರ್, ವೀರ ಸಾವರ್ಕರ್ ಮುಂತಾದ ಹಿಂದೂ ಧರ್ಮವನ್ನು ಅರ್ಥಾತ್ ವೈದಿಕ ಪುರೋಹಿತ ಶಾಹಿಯನ್ನು ಪುನರುಜ್ಜೀವನಗೊಳಿಸಿದ ನಾಯಕರ ಚಿತ್ರಗಳೊಂದಿಗೆ ಇಡೀ ದೇಶದಾದ್ಯಂತ ಮೆರವಣಿಗೆ ಮಾಡಲಾಗುತ್ತಿದೆ. ಹಾಗೂ ಇವರೆಲ್ಲರೂ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದ ಧಾರ್ಮಿಕ ನಾಯಕರುಗಳಾಗಿ ಸಮಾವೇಶದ ಭಾಷಣಗಳಲ್ಲಿ ವ್ಯಾಖ್ಯಾನ ಮಾಡಲಾಗುತ್ತಿದೆ. ಸಂಘ ಪರಿವಾರದ ಹಿಂದುತ್ವ ರಾಜಕಾರಣ ಮೊದಲಿನಿಂದಲೂ ಇಂತಹ ಐತಿಹಾಸಿಕ ಜನಪರ ನಾಯಕರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವ ತಂತ್ರ ಅನುಸರಿಸುತ್ತಲೇ ಬಂದಿದೆ.

ಹಿಂದೂ ಧರ್ಮದ ಅನಿಷ್ಟಗಳು ಮತ್ತು ಕೆಡುಕುಗಳನ್ನೆಲ್ಲಾ ಬಯಲು ಮಾಡುವ ಮೂಲಕ ಹಿಂದೂ ಧರ್ಮವನ್ನು ಅಪರಾಧಿ ಸ್ಥಾನದಲ್ಲಿರಿಸಿ ಸಾಮಾಜಿಕ ನ್ಯಾಯದ ಕಟಕಟೆಗೆ ನಿಲ್ಲಿಸಿ ವಿಶ್ವಮಟ್ಟದಲ್ಲಿ ಛೀಮಾರಿ ಹಾಕಿದ್ದ ನಾಯಕರುಗಳನ್ನೆಲ್ಲಾ ಹಿಂದೂ ಧರ್ಮದ ಮುಕುಟಮಣಿಗಳೆಂದು ಕೊಂಡಾಡಲಾಗುತ್ತಿದೆ (ಸಂವಾದ, ಮಾರ್ಚ್, ೨೦೦೭). ವಾಸ್ತವ ಸಮಸ್ಯೆಯನ್ನು ಮರೆಮಾಚಿಸುವ ಹುನ್ನಾರವಿದು.

ಜನತೆಯ ಪ್ರಜಾಪ್ರಭುತ್ವಕ ಕ್ರಾಂತಿಯಲ್ಲಿ ವರ್ಗ, ವರ್ಣ, ಜಾತಿಗಳ ವಿರುದ್ಧದ ಹೋರಾಟದಲ್ಲಿ ಪುರೋಹಿತಶಾಹಿಯೆಂಬ ಶೋಷಕ ವರ್ಗವನ್ನು ಎದುರಿಸಬೇಕಾದದ್ದು ಅನಿವಾರ್ಯ. ಭಾರತದ ಪುರೋಹಿತಶಾಹಿಯ ಸುದೀರ್ಘವಾದ ಶೋಷಕ ವ್ಯವಸ್ಥೆಯ ಅವಿಭಾಜ್ಯ ಅಂಗದಂತೆ ಚರ್ಚಿಸಿದೆ. ಪ್ರಭುತ್ವಗಳು ನಾಶವಾದರೂ ಪುರೋಹಿತಶಾಹಿ ಮಾತ್ರ ಅನಾಬಾಧಿತವಾಗಿ ಜನತೆಯ ಮೌಢ್ಯವನ್ನು ದುರುಪಯೋಗಿಸಿಕೊಂಡು ಬಂದಿದೆ. ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆ ಎಷ್ಟೇ ತೀವ್ರ ಸ್ವರೂಪವಿದ್ದರೂ ಅದಕ್ಕೆ ತದ್ವಿರುದ್ಧವಾಗಿರುವ ಪುರೋಹಿತಶಾಹಿಯ ಅಬ್ಬರದ ಪ್ರಚಾರ ಜನರನ್ನು ಅಡ್ಡದಾರಿಗೆಳೆಯುತ್ತದೆ (ಎಸ್.ಎಸ್. ಹಿರೇಮಠ, ೨೦೦೫, ಪು. ೪೮). ಅದಕ್ಕೆ ರಾಜಮಾರ್ಗಗಳೆಂಬಂತೆ ವಿರಾಟ್ ಹಿಂದೂ ಸಮಾಜೋತ್ಸವ ಸಮಾರಂಭಗಳು, ಶೋಭಾ ಯಾತ್ರೆಗಳನ್ನು ಆಚರಿಸಲಾಗುತ್ತಿದೆ. ಹಳ್ಳಿಗಾಡಿನ ಗ್ರಾಮೀಣ ಮುಗ್ಧರೂ ಸಹ ಬಲಪಂಥೀಯ ಹಿಂದೂ ರಾಜಕಾರಣದ ಪುನರುತ್ಥಾನಕ್ಕಾಗಿ ಮತ್ತು ಹಿಂದೂ ಧರ್ಮವನ್ನು ಭಾರತದ ಏಕ ಮೇವ ಸರ್ವಾಧಿಕಾರಿ ಧರ್ಮವನ್ನಾಗಿ ರೂಪಿಸಲು ತೊಡಗಿದ ಸಿಪಾಯಿಗಳಂತೆ ಕೆಂಪು ತಿಲಕ ಧರಿಸಿ - ಲಾಠಿ ತಿರುಗಿಸುವ ತಾಲೀಮು ನಡೆಸತೊಡಗಿದ್ದಾರೆ. ಇವು ಕೊನೆಗೆ ತನ್ನ ದುಷ್ಪರಿಣಾಮವನ್ನು ಬೀರುವುದು ದಲಿತ ಮಹಿಳೆಯರ ಮೇಲೆಯೇ.

ಇದು ರಾಜಕೀಯ ಮತ್ತು ಧರ್ಮ ಪರಸ್ಪರ ಮೇಳೈಸಿಕೊಂಡು ಸೆಣದಾಟಕ್ಕೆ ಬಿದ್ದರೆ ಏನಾಗಬಹುದು? ಹಾಗೂ ಈಗಾಗಲೇ ಆಕ್ರಮಣಕಾರಿ ವೈದಿಕ ಸಂಸ್ಕೃತಿ ದಾಳಿಗಳಿಂದ ಗಾಯಗೊಂಡು ನರಳುತ್ತಿರುವ ತಳ ಸಮುದಾಯಗಳು ಮತ್ತು ಅಲ್ಪಸಂಖ್ಯಾತರ ಸಾಂಸ್ಕೃತಿಕ ಬದುಕಿನ ಮೇಲೆ ಹಿಂದುತ್ವ ಹೆಸರಿನಲ್ಲಿ ಎಳೆಯುವ ಬ್ರಾಹ್ಮಣ್ಯದ ಬರೆಗಳು ಎಂತಹ ಸ್ವರೂಪದ ರಣಗಾಯಗಳನ್ನು ಮಾಡಬಹುದು (ಸಂವಾದ, ಮಾರ್ಚ್ ೨೦೦೭) ಎಂಬುವುದು ಊಹೆಗೆ ನಿಲುಕದ್ದು. ಅಂದಿನಿಂದ ಇಂದಿನವರೆಗೂ ಕನ್ನಡ ನಾಡಿನಲ್ಲಿ ಬ್ರಾಹ್ಮಣ ಮತ್ತು ವೀರಶೈವ ಪುರೋಹಿತಶಾಹಿಯು ಪ್ರಧಾನ ನೆಲೆಯಲ್ಲಿ ಧಾರ್ಮಿಕ ಶೋಷಕ ವರ್ಗವಾಗಿ ಉಳಿದು ಬಂದಿದೆ. ಜಿಲ್ಲೆಯಲ್ಲಿ ಈಗಲೂ ಲಿಂಗಾಯತ ಪುರೋಹಿತಶಾಹಿಯ ದಬ್ಬಾಳಿಕೆ ದಲಿತ ಮಹಿಳೆ ಮೇಲೆ ನಡೆಯುತ್ತಲೇ ಇದೆ.

೪.೨ ಊಳಿಗ ಮಾನ್ಯಶಾಹಿ ವ್ಯವಸ್ಥೆ ಮತ್ತು ದಲಿತ ಮಹಿಳೆ

ಚರಿತ್ರೆಯಲ್ಲಿ ಊಳಿಗಮಾನ್ಯತೆಯ ಪ್ರಾರಂಭದ ಪರಿಕಲ್ಪನೆಗೆ ಸಂಬಂಧಿಸಿದಂತೆ ಚರಿತ್ರೆಕಾರರಲ್ಲಿ ಗೊಂದಲಗಳಿವೆ. ಈ ಗೊಂದಲಗಳ ನಡುವೆಯೇ ಯಾವುದೇ ಅಂತಿಮ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಭಾರತದ ಚರಿತ್ರೆಗೆ ಸಂಬಂಧಿಸಿದಂತೆ ಊಳಿಗಮಾನ್ಯ ವ್ಯವಸ್ಥೆಯ ಕುರಿತು ಅನೇಕ ವಿದ್ವಾಂಸರು ಚರ್ಚೆ ನಡೆಸಿದ್ದಾರೆ. ಅವರಲ್ಲಿ ಡಿ.ಡಿ. ಕೋಸಾಂಬಿ ಅವರು ಮೊದಲ ಬಾರಿಗೆ ಊಳಿಗಮಾನ್ಯತೆಯ ಕುರಿತು ಚರ್ಚೆಯನ್ನು ಆರಂಭಿಸಿದ್ದಾರೆ.

ಊಳಿಗಮಾನ್ಯ ಎಂಬ ಪದ ಇಂಗ್ಲೀಷಿನ 'ಫ್ಯೂಡಲಿಸಂ' ಎಂಬ ಪದದ ರೂಪಾಂತರವಾಗಿದೆ. ಇಂಗ್ಲೀಷಿನ ಫ್ಯೂಡಲಿಸಂಗೆ ಊಳಿಗಮಾನ್ಯ ವ್ಯವಸ್ಥೆ ಎಂಬ ಕನ್ನಡ ಅನುವಾದ ಸರಿಯಾದುದಲ್ಲ. ಆದುದರಿಂದ ಭೂ ಮಾಲಿನ್ಯ ಪದ್ಧತಿ, ಸಾಮಂತ ಪದ್ಧತಿ, ಅರೆ ಊಳಿಗಮಾನ್ಯ ಪದ್ಧತಿ, ಮಧ್ಯಯುಗೀನ ಯೂರೋಪಿನಲ್ಲಿದ್ದ ಊಳಿಗಮಾನ್ಯ ಪದ್ಧತಿ ಇತ್ಯಾದಿ ಹೆಸರುಗಳಿಂದ ಕರೆಯಲಾಗುತ್ತದೆ. ಆದರೆ ಎಲ್ಲರೂ ಹೆಚ್ಚಾಗಿ ಊಳಿಗಮಾನ್ಯ ವ್ಯವಸ್ಥೆ ಎಂದೇ ಬಳಸುತ್ತಾರೆ.

"ಭಾರತದಲ್ಲಿ ಊಳಿಗಮಾನ್ಯ ಬಗ್ಗೆ ಚರ್ಚೆಯನ್ನು ಆರಂಭಿಸಿದ ಡಿ.ಡಿ. ಕೋಸಾಂಬಿಯವರು ತಮ್ಮ 'ಇಂಟ್ರಡಕ್ಷನ್ ಟು ದಿ ಇಂಡಿಯನ್ ಹಿಸ್ಟರಿ' ಗ್ರಂಥದಲ್ಲಿ ಗುಪ್ತ ಕಾಲದ ನಂತರ ಫ್ಯೂಡಲ್ ವ್ಯವಸ್ಥೆ ಮೇಲಿನಿಂದ ರಾಜ ಸಾಮಂತ ಸಂಬಂಧದಲ್ಲಿ ಹಾಗೂ ಕೆಳಗಿನಿಂದ ಜಮೀನ್ದಾರೀ ಊಳಿಗ ಸಂಬಂಧದಲ್ಲಿ ಕಾಣಿಸಿಕೊಂಡಿತು ಎಂಬುವುದಾಗಿ ವಿವರಿಸುತ್ತಾರೆ. ಆರ್.ಎಸ್. ಶರ್ಮರವರು ಫ್ಯೂಡಲಿಸಂನ ಪ್ರತಿಪಾದಕರಲ್ಲಿ ಅಗ್ರಗಣ್ಯರಾಗಿದ್ದಾರೆ. ಅವರು ಗುಪ್ತರ ನಂತರ ಕಾಲದ ಕೃಷಿ ವ್ಯವಸ್ಥೆಯನ್ನು ಊಳಿಗಮಾನ್ಯ ಅಥವಾ ಸಾಮಂತ ಪದ್ಧತಿ ಎಂದು ಕರೆದರು. ಊಳಿಗಮಾನ್ಯ ವ್ಯವಸ್ಥೆ ಮುಖ್ಯವಾಗಿ ಕೃಷಿ ಸಂಬಂಧಿ ಆರ್ಥಿಕ ವ್ಯವಸ್ಥೆಯ ರೂಪದಲ್ಲಿ ಕಂಡುಬರುತ್ತದೆ. ಪ್ರೊ. ಆರ್.ಎಸ್. ಶರ್ಮಾರವರ ಪ್ರಕಾರ ಭೂಮಿ ಉತ್ಪಾದನೆಯ ಮೂಲ ಆಕರ. ಇಂತಹ ಭೂಮಿಯಲ್ಲಿ ಮಾಲೀಕನಿಗಿದ್ದ ಹಕ್ಕು ಗೌಣವಾಗಿದ್ದರೂ ಭೂ ಒಡೆಯನಿಗಿದ್ದ ಹಕ್ಕು ಪೂರ್ಣವಾಗಿದ್ದಿತು. ಭೂ ದತ್ತಿಗಳು ಮತ್ತು ಕೊಡುಗೆಗಳು ಭೂ ಒಡೆತನ ಹಕ್ಕುಗಳನ್ನು ಸ್ಪಷ್ಟಪಡಿಸುತ್ತವೆ. ಭೂಮಿಯ ಮೇಲಿನ ಶ್ರೇಣೀಕೃತ ಹತೋಟಿ ಎರಡನೆ ಒಡೆಯರ ಏಳಿಗೆಗೆ ಕಾರಣವಾಯಿತು" (ರಾಜರಾಮ್ ಹೆಗಡೆ, ೨೦೦೬, ಪು. ೧೪೦). ಇವು ಬುಡಕಟ್ಟು ಕುಲಸಮಾಜಗಳ ನಾಶದ ಪ್ರತಿಫಲವಾದವು. ನಮ್ಮ ನಾಡಿನ ಊಳಿಗಮಾನ್ಯ ಕಾಲದ ರಾಜಕೀಯ ಸ್ಥಿತಿಗತಿಗಳನ್ನು ಚರಿತ್ರೆಯಲ್ಲಿ ಓದುತ್ತೇವೆ. ಕರ್ನಾಟಕವನ್ನು ವರ್ಗ ವ್ಯವಸ್ಥೆಗೆ ಒಳಪಡಿಸಿ, ಜಾತಿ ಸುಲಿಗೆಯನ್ನು ಪ್ರಾರಂಭ ಮಾಡಿದ್ದು, ಮೌರ್ಯ, ಶಾತವಾಹನ, ಗಂಗ, ಕದಂಬ ಮೊದಲಾದ ಅರಸು

ಮನೆತನಗಳು. ನಂತರ ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ಯಾದವ, ವಿಜಯನಗರ, ಮೈಸೂರು, ಆದಿಲ್‌ಶಾಹಿ, ಟಿಪ್ಪು, ಹೈದರ್ ಮೊದಲಾದ ವಂಶಗಳು ಮತ್ತು ದೊರೆಗಳ ಕಾಲದಲ್ಲಿ `ಫ್ಯೂಡಲಿಸಂ' ಹಲವಾರು ವಿಧದಲ್ಲಿ ಬೆಳೆಯುತ್ತ ಪರಿಷ್ಕಾರಗೊಳ್ಳುತ್ತ ಬಂದಿದೆ.

ಡಿ.ಡಿ. ಕೋಸಾಂಬಿಯವರು ಭಾರತದಲ್ಲಿನ ಊಳಿಗಮಾನ್ಯ ವ್ಯವಸ್ಥೆಯ ಶ್ರೇಣೀಕರಣವನ್ನು ಎರಡು ಹಂತಗಳಲ್ಲಿ ಗುರುತಿಸಿದ್ದಾರೆ.

೧. ಮೇಲಿನ ಹಂತದ ಊಳಿಗಮಾನ್ಯ ಪದ್ಧತಿ

೨. ಕೆಳಗಿನ ಹಂತದ ಊಳಿಗಮಾನ್ಯ ವ್ಯವಸ್ಥೆ

ಮೇಲಿನಂತಹ ವ್ಯವಸ್ಥೆಯಲ್ಲಿ ಮಹಾರಾಜ, ಮಹಾ ಸಾಮಂತ, ಸಾಮಂತ, ಉಪ ಸಾಮಂತ ಎಂದರೆ ಕೆಳಗಿನ ಹಂತದಲ್ಲಿ ಊಳಿಗಮಾನ್ಯ ವ್ಯವಸ್ಥೆಯಲ್ಲಿ ಜಮೀನ್ದಾರ, ಗೇಣಿದಾರರ ಹಾಗೂ ಜೀತಗಾರ ಎಂಬ ರೀತಿಯ ಶ್ರೇಣೀಕರಣ ಕಂಡುಬರುತ್ತದೆ. ಇದು ಎಲ್ಲಾ ಕಾಲಕ್ಕೂ ಅನ್ವಯಿಸುವಂತಹದ್ದು (ಅದೇ ಪು. ೧೪೦ ೧೪೧). ಇಡೀ ರಾಜವಂಶಗಳಲ್ಲಿ ಊಳಿಗಮಾನ್ಯಶಾಹಿ ಗಟ್ಟಿಯಾಗುತ್ತಾ ಬಂದಿದೆಯೇ ಹೊರತು ಎಲ್ಲೂ ಸಡಿಲವಾದ ಉದಾಹರಣೆಗಳು ಸಿಗುವುದಿಲ್ಲ.

"ರಾಜ ಪ್ರಭುತ್ವ ಪ್ರಾರಂಭದ ಅವಸ್ಥೆಯಲ್ಲಿ ವೈದಿಕ ಯಜ್ಞ ಯಾಗಾದಿಗಳೂ ತೀರ ಸಂಕೇತವಾಗಿ ಬೆಳೆದವು. ರಾಜರ ಅಧಿಕಾರವನ್ನು ಮಾನ್ಯ ಮಾಡುವ ಪಟ್ಟಾಭಿಷೇಕ ವಿಧಿ ಬೆಳೆಯಿತು. ಅಶ್ವಮೇಧ, ರಾಜಸೂಯ, ವಾಜಪೇಯ ಮುಂತಾದ ಹಲವಾರು ಯಾಗಗಳು ರಾಜತ್ವದ ವರ್ಧನೆಯನ್ನು ಮಾಡಿ ರಾಜನಲ್ಲಿ ಅತಿಮಾನುಷ ಶಕ್ತಿಯನ್ನು ತುಂಬುತ್ತವೆ ಎಂದು ನಂಬಿದ್ದರು. ಅವರ ನಂಬಿಕೆಯ ಜೊತೆ ಪ್ರಜೆಗಳಿಗೆ ಈ ಕುರಿತು ವಿಶ್ವಾಸ ಕುದುರಿಸುವ ಉದ್ದೇಶವೂ ಇತ್ತು. ರಾಜನೆಂದರೆ ವಿಷ್ಣುವಿನ ರೂಪವೇ ಆಗಿದ್ದಾನೆ. ಆತನಲ್ಲಿ ಅಷ್ಟ ದಿಕ್ಪಾಲಕರ ನಿಯತಿ ಮೈಗೂಡಿರುತ್ತದೆ ಎಂದು ಧರ್ಮಗ್ರಂಥಗಳು ಪ್ರತಿಪಾದಿಸಿದವು. ಅಂದರೆ 'ರಾಜ' ನೆಂಬುವವನು 'ದೇವ'ನ ನಿಯತಿಗಳನ್ನು ಭೂಲೋಕದಲ್ಲಿ ಕಾಯಲು ಬಂದವನು. ಭೂಲೋಕದಲ್ಲಿ ಮಳೆ- ಬೆಳೆ ಸರಿಯಾಗಿ ನಡೆದು ಉತ್ಪಾದನೆ ಸಮೃದ್ಧಿ ನೆಲಸಬೇಕಾದರೆ ಸಾಮಾಜಿಕ ಶಾಂತಿ, ಸುವ್ಯವಸ್ಥೆ ನೆಲಸಬೇಕಾದರೆ ಇಂಥ ಅತಿಮಾನುಷ ಶಕ್ತಿಯ ರಾಜ ಇರಬೇಕು ಎಂದು ನಂಬುವ ರಾಜ್ಯ ಸಂಸ್ಕೃತಿಯನ್ನು ಬೆಳೆಸಲಾಯಿತು" (ಡಾ. ಎಂ.ವಿ. ವಸು, ೨೦೦೬, ಪುಟ ೨೧). ಅದರ ಮೂಲಕ ಜನಸಾಮಾನ್ಯರ ಮೇಲೆ ಅನೇಕ ರೀತಿಯ ನೀತಿ ನಿಯಮಾವಳಿಗಳನ್ನು ತಂದು ಶೋಷಿಸಲಾಯಿತು.

ಭೂ ಮಾಲಿಕರು, ಅಗ್ರಹಾರಗಳು, ಮಠಗಳು, ದೇವಾಲಯಗಳು, ವ್ಯಾಪಾರಸ್ಥರು, ಕರ್ನಾಟಕದ ಊಳಿಗಮಾನ್ಯ ಕಾಲದ ಶೋಷಕ ವರ್ಗವಾಗಿವೆ. ಊಳಿಗಮಾನ್ಯತೆಗಿಂತ ಮೊದಲಿನ ವರ್ಗ ಸಮಾಜದಲ್ಲಿ ಪ್ರಮುಖ ಲಕ್ಷಣವಾಗಿದ್ದ ಮಹಿಳಾ ಅಧೀನತೆಯ ಊಳಿಗಮಾನ್ಯ ಸಮಾಜದಲ್ಲಿ ಮತ್ತಷ್ಟು ಸದೃಡೀಕರಿಸಲ್ಪಟ್ಟಿತು. ಶೋಷಿತ ವರ್ಗದ ಹೆಂಗಸರೂ, ಗಂಡಸರೂ ಆಳುವವರಾದ ಊಳಿಗಮಾನ್ಯ ಪ್ರಭುಗಳ ಸೇವೆ ಮಾಡಲು ಬಹಳಷ್ಟು ಕಷ್ಟ ಪಡುತ್ತಿದ್ದರು. ರಾಜಕೀಯವಾಗಿ ಸಮಾಜ ಬೆಳೆಯುತ್ತಿದ್ದ ಈ ಸಂದರ್ಭದಲ್ಲಿ ತತ್ವಶಾಸ್ತ್ರ, ಧರ್ಮ, ಸಂಸ್ಕೃತಿ ಇವು ರಾಜರ ಕೈಯಲ್ಲಿಯೇ ಎಂದರೆ ಅವರ ಆಜ್ಞೆಯ ಮೂಲಕವೇ ಬೆಳೆದವು. ಇವು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಊಳಿಗ ಮಾನ್ಯತೆಯನ್ನು ಹಾಡಿ ಹೊಗಳಿ ಸಮರ್ಥಿಸಿದವು. ಊಳಿಗಮಾನ್ಯ ಸಮಾಜದಲ್ಲಿ ಪುರುಷಾಧಿಪತ್ಯವು ಒಂದು ಸಿದ್ಧಾಂತವಾಗಿ ಅರಳಿತು. ಊಳಿಗಮಾನ್ಯಶಾಹಿಯು

ದಲಿತ ಮಹಿಳೆಯರನ್ನು ಗುಲಾಮರಾಗಿ ಮಾಡಿಕೊಂಡಿದ್ದರಿಂದ ಎರಡು ರೀತಿಯ ಪ್ರಯೋಜನವನ್ನು ಪಡೆದುಕೊಂಡಿತು.

೧. ಮಹಿಳೆಯರ ಪರಾಧೀನತೆಯು ಅವರ ಶ್ರಮದ ಉತ್ಪಾದನೆಯನ್ನು ಸುಲಭವಾಗಿ ಕಬಳಿಸುವ ಸದಾವಕಾಶವನ್ನು ಭೂಮಾಲಿಕರಿಗೆ ಒದಗಿಸಿತು.

೨. ಜಮೀನ್ದಾರರ ಕೃಪೆಯ ನೆರಳಿನಲ್ಲಿ ಅವರ ಆಜ್ಞಾಪಾಲಕರಾಗಿ ಬದುಕಬೇಕಾದ ದುಡಿವ ವರ್ಗದ ಮಹಿಳೆಯರು ನಿಗದಿತ ಕೂಲಿಯ ಖಾತ್ರಿಯೂ ಇಲ್ಲದೆ ತಮ್ಮ ಗಂಡಂದಿರ ಜೊತೆ ಕೂಡಿ ಶ್ರಮದಾಯಕ ಕೆಲಸಗಳನ್ನು ಸರಿಸಮಾನವಾಗಿ ಮಾಡುವುದು, ಅವರಿಗೆ ಸಹಾಯಕರಾಗಿ ಕೆಲಸ ಮಾಡುವುದು, ತಮ್ಮ ಗಂಡಂದಿರ ಮೂಲಭೂತ ಅವಶ್ಯಕತೆಗಳನ್ನು ಪೂರೈಸುವುದರಿಂದ ಇದು ಗಂಡಸರ ಕಷ್ಟದ ಕೆಲಸಗಳನ್ನು ಇನ್ನೂ ಹೆಚ್ಚು ಹೊತ್ತು ಮಾಡಿಸಿ ಶೋಷಿಸುವ ಅವಕಾಶವನ್ನು ಭೂಮಾಲೀಕರಿಗೆ ಒದಗಿತು.

ಇದರಿಂದ ತತ್ತರಿಸಿದ ದಮನಿತ ವರ್ಗದ ಮಹಿಳೆಯರು ತಾವು ಶೋಷಣೆಗೊಳಗಾಗಿ ಭೂಮಾಲೀಕರ ಪತ್ನಿಯರ ಸೇವೆಯನ್ನು ಮಾಡಬೇಕಾಯಿತು. ಎಲ್ಲಕ್ಕಿಂತ ಮುಖ್ಯವಾಗಿ ದಲಿತ ಮಹಿಳೆಯರು, ಭೂಮಾಲೀಕರ ಜಮೀನಿನಲ್ಲಿ ದುಡಿಯಲು ಮಕ್ಕಳನ್ನು ಹೆತ್ತು ಕೊಡಬೇಕಾಗಿತ್ತು. ಸಾಮಾನ್ಯವಾಗಿ ಇವರನ್ನು ಸಾಕಿ ಸಲುಹಲು ಕಷ್ಟವಿರದಿದ್ದ ಕಾರಣ ಇವರನ್ನು ಮಾಲೀಕರು ಒಂದು ಆಸ್ತಿಯಾಗಿ ಪರಿಗಣಿಸಿದರು. ಎಲ್ಲಾ ರಾಜ ವರ್ಗಗಳ ಕಾಲದಲ್ಲಿ ಬೆಳೆದು ಬಂದ ಧರ್ಮ, ತತ್ವ, ಸಂಸ್ಕೃತಿ, ಸಾಹಿತ್ಯಗಳೆಲ್ಲವೂ ಊಳಿಗಮಾನ್ಯ ಆರ್ಥಿಕತೆಯ ಸಹಾಯ ಮಾಡುವ, ಪ್ರೋತ್ಸಾಹಿಸುವ, ಹೊಗಳುವ ಕೆಲಸವನ್ನು ಮಾಡುತ್ತಲೇ ಬಂದಿವೆ.

ಇದನ್ನು ನಾವು ವೈದಿಕ, ಜೈನ ಧರ್ಮದ ಹಳಗನ್ನಡದ ಕೃತಿಕಾರರ ಕೃತಿಗಳಲ್ಲಿ ಗಮನಿಸಬಹುದು. ಹುಟ್ಟಿನಿಂದಲೇ ನಿರ್ಧಾರವಾಗುವ, ಎಂದಿಗೂ ಬದಲಾಯಿಸಲು ಸಾಧ್ಯವಾಗದೇ ಇರುವಂತಹ ಶ್ರೇಣೀಕರಣದಿಂದ ಕೂಡಿದ ಜಾತಿ ಪದ್ಧತಿಯು ಊಳಿಗಮಾನ್ಯಶಾಹಿ ವ್ಯವಸ್ಥೆಯಲ್ಲಿ ಸದೃಢಗೊಂಡಿತು. ಅಸ್ಪೃಶ್ಯತೆ, ಆಚರಣೆಗಳು, ಜೀತದಾಳು ಪದ್ಧತಿ ಹೆಚ್ಚಾಗಿ ಬೆಳೆದು ಈ ಕಾಲದಲ್ಲಿ ದಲಿತ ಮಹಿಳೆಯರು ಜಾತಿ, ಧರ್ಮದ ಪೆಟ್ಟಿಗೆ ಬಲಿಯಾಗಬೇಕಾಯಿತು.

ಪುರೋಹಿತಶಾಹಿ ಹಾಗೂ ಊಳಿಗಮಾನ್ಯಶಾಹಿ ಎರಡು ಒಟ್ಟೊಟ್ಟಿಗೆ ಸೇರಿಕೊಂಡೇ ದಲಿತ ಮಹಿಳೆಯನ್ನು ಶೋಷಿಸಿವೆ. ಊಳಿಗಮಾನ್ಯಶಾಹಿ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ತಾತ್ವಿಕ ಸಾಹಿತ್ಯದಲ್ಲಿ ಪುರುಷ ಮಹಿಮೆಯ ಬಗ್ಗೆ ಬಹಳ ಉತ್ಪ್ರೇಕ್ಷಿತ ವಿಚಾರಗಳಿವೆ. ವೇದಗಳು, ಉಪನಿಷತ್ತುಗಳು, ಅರಣ್ಯಕಗಳು, ರಾಜರ ಆಸ್ಥಾನದಲ್ಲಿ ರಚಿತವಾದ ಪಂಪ, ರನ್ನ, ಜನ್ನ, ಪೊನ್ನ, ನಾಗಚಂದ್ರ ಮುಂತಾದ ಕವಿಗಳು ತಮ್ಮ ಬಗ್ಗೆ ತಮ್ಮ ಆಶ್ರಯಿಸಿದ ರಾಜರ ಬಗ್ಗೆ ಹೊಗಳಿಕೆಯ ಮಾತುಗಳನ್ನಾಡಿದ್ದಾರೆಯೇ ವಿನಹ ಆ ಸಮಾಜದಲ್ಲಿ ಜನಸಾಮಾನ್ಯರ ಸ್ಥಿತಿಗತಿಗಳನ್ನು ಕುರಿತು ಹೇಳಿಲ್ಲ. ಯಾಕೆಂದರೆ ಅದು ಅವರ ಅಸ್ತಿತ್ವದ ಪ್ರಶ್ನೆಯಾಗಿತ್ತು. ರಾಜರನ್ನು ಹೊಗಳಿ, ಅವರ ಪ್ರಕಾರ ನಡೆದುಕೊಂಡು ವಿಧೇಯನಾದರೆ ಮಾತ್ರ ಕವಿಗೆ ರಾಜಾಶ್ರಯವಿರುತ್ತಿತ್ತು.

ಬೃಹದಾರಣ್ಯಕ ಉಪನಿಷತ್ತು, ಹೆಂಡತಿಯಾದವಳು ಗಂಡನ ಆಸೆಗಳನ್ನು ಪೂರೈಸದಿದ್ದಲ್ಲಿ ಅವಳನ್ನು ಕೈಗಳಿಂದಲೂ, ಕೋಲಿನಿಂದಲೂ ಹೊಡೆದು ಶಿಕ್ಷಿಸುವುದನ್ನು ಅಥವಾ ಅವಮಾನಗೊಳಿಸುವುದನ್ನು ಕೂಡ ಸಿಫಾರಸ್ಸು ಮಾಡಿದೆ. ಧರ್ಮವಂತೂ ಮಹಿಳೆಯರನ್ನು ಕೆಟ್ಟ ಆಸೆಗಳಿಗೂ, ವಿನಾಶಕ್ಕೂ ಮೂಲ ಕಾರಣವೆಂದು

ಚಿತ್ರಿಸುವುದು ಸರ್ವೇಸಾಮಾನ್ಯವಾದ ವಿಚಾರವಾಗಿತ್ತು. ದಲಿತ ಮಹಿಳೆಯರನ್ನು ತಮಗೆ ಬೇಕಾದಂತೆ ಬಗ್ಗಿಸಲು ಹಾಗೂ ಉಪನಿಷತ್ತುಗಳಲ್ಲಿನ ಹೇಳಿಕೆಗಳಂತೆ ಮಹಿಳೆಯನ್ನು ಮಹಿಳೆಯೇ ಶೋಷಣೆ ಮಾಡುವಂತೆ ಮಾಡಲು ಧರ್ಮವು ರಾಜರ ಕೈಯಿಂದಲೇ ಇಂತಹ ಕೆಲಸಗಳನ್ನು ಮಾಡುವಂತೆ ಪ್ರಚೋದಿಸುವ, ಅದು ರಾಜ್ಯಕ್ಕೆ ಕ್ಷೋಭೆಯನ್ನು ತಂದುಕೊಡುತ್ತದೆಂಬ ಸುಳ್ಳು ವದಂತಿಗಳನ್ನು, ಚಿತ್ರಣಗಳನ್ನು ಸೃಷ್ಟಿಸಲಾಗುತ್ತಿತ್ತು. ಇವೆಲ್ಲವೂ ದಲಿತ ಮಹಿಳೆಯನ್ನು ಹೆಚ್ಚಿನ ಶೋಷಣೆಗೆ ಒಳಪಡಿಸಿದವು. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಜನಪದ ಕಾವ್ಯ ಪರಂಪರೆ ಶೋಷಣೆಗೆ ಒಳಗಾದ ದಲಿತ ಮಹಿಳೆಯಿಂದಲೇ ಹುಟ್ಟಿ, ದಲಿತ ಮಹಿಳೆಯರ ಮೂಲಕವೇ ಬೆಳೆದುಬಂದಿರುವುದರಿಂದ ಬಡಜನತೆಯ ಸಾಂಸ್ಕೃತಿಕ ಬದುಕಿನ ಅಪಾರವಾದಂತಹ ಹಿನ್ನೆಲೆ ಅದಕ್ಕಿದೆ. ಅದರಲ್ಲಿರುವ ಹೆಚ್ಚಿನ ಭಾಗ ಹುಟ್ಟಿದ್ದು ಊಳಿಗಮಾನ್ಯ ವ್ಯವಸ್ಥೆಯ ಕಾಲಘಟ್ಟದಲ್ಲಿ, ವರ್ಗ- ವರ್ಣ ವ್ಯವಸ್ಥೆ ಹುಟ್ಟುವ ಮೊದಲಿನ ಕನ್ನಡ ಸಮಾಜದ ಜನಪದ ಉಳಿದಿರುವುದರ ಸಾಧ್ಯತೆ ತೀರ ಕಡಿಮೆ ಎಂದೇ ಹೇಳಬೇಕು.

ಇಲ್ಲಿ ಬಡತನ ನೋವು, ಸಾವು, ಸಂಕಟ- ದುಃಖ ಇವುಗಳನ್ನು ಬಿಂಬಿಸುವ ಸಾಹಿತ್ಯವೇ ಹೆಚ್ಚಾಗಿ ರೂಪುಗೊಂಡಿದೆ. ಕಾರಣ ಊಳಿಗಮಾನ್ಯ ವ್ಯವಸ್ಥೆಯ ಅಧಿಕಾರ, ಆಡಳಿತ, ರೀತಿ-ರಿವಾಜುಗಳ ಕ್ರೂರ ನಡತೆಯೇ ಇದಕ್ಕೆ ಕಾರಣವಲ್ಲದೇ ಮತ್ತೇನೂ ಇಲ್ಲ. ಅದಕ್ಕಾಗಿಯೇ ಬಡವರ, ದಲಿತರ, ಮಹಿಳೆಯರ ದೃಷ್ಟಿಯಿಂದ ಮಧ್ಯಕಾಲೀನ ಯುಗವನ್ನು ಕತ್ತಲೆಯ ಯುಗವೆಂದೇ ಕರೆಯಲಾಗುತ್ತದೆ.

ಬಡವರು ಸತ್ತರ ಸುಡಲಿಕೆ ಸೌದಿಲ್ಲ
ಒಡಲ ಬೆಂಕೀಲಿ ಹೆಣ ಬೆಂದು ಮಾದೇವಾ
ಬಡವರಿಗೆ ಸಾವು ಕೊಡಬೇಡ
(ಎಸ್.ಎಸ್. ಹಿರೇಮಠ, ಹೊಸತು, ೨೦೦೬).

ಇಲ್ಲಿ ಎರಡು ಬೆಂಕಿಗಳ ಪ್ರಸ್ತಾಪವಿದೆ. ಒಂದು ಸುಡಲಾರದಾಗಿದ್ದ ಒಳಗಿನ ಬೆಂಕಿ. ಇನ್ನೊಂದು ಸುಡಲು ಬೇಕಿದ್ದ ಹೊರಗಿನ ಬೆಂಕಿ. ಒಳಗಿನ ಬೆಂಕಿ ಅನಗತ್ಯ. ಹೊರಗಿನ ಬೆಂಕಿ ಅನಿವಾರ್ಯ. ಅನಿವಾರ್ಯವಾಗಿದ್ದ ಹೊರಗಿನ ಬೆಂಕಿಯನ್ನು ಪಡೆಯಲು ಸಾಧ್ಯವಾಗದ ಅಸಹಾಯಕತೆ, ಕಡು ಬಡತನ, ಒಳಗಿನ ಬೆಂಕಿಯನ್ನು ಹೊರಗೆಳೆದು ತಂದು ಸಂಸ್ಕರಿಸುವ ಅಗತ್ಯ ಕ್ರಿಯೆಯನ್ನು ಪೂರೈಸಲು ಆಶಿಸುತ್ತದೆ. ದಲಿತ, ಬಡವರ ಬದುಕಿನಲ್ಲಿ ಇದು ವಿಪರ್ಯಾಸ ಹಾಗೆಯೇ ಭಯಾನಕವಾದುದು.

ಅಸಾಹಯಕತೆಯೇ ದೈವದ ನಂಬುಗೆಗೆ ಕಾರಣ. ಸಾವಿನ ಸಂಕಟದ ಅತಿರೇಖವನ್ನು ದಾಟಿ ತಲುಪುವ ನಿರ್ಣಯ ಸಾವು ಕೊಡಬೇಡ ಎಂದು ಇದರರ್ಥ. ಬದುಕು ಕೊಡು ಎಂದಲ್ಲ. ಏಕೆಂದರೆ ಬದುಕಿದರೂ ಇಂತಹ ಪರಮಾವಧಿಯ ಸಂಕಟವನ್ನು ತಾಳಿಕೊಂಡು ಬದುಕಲು ಸಾಧ್ಯವಿಲ್ಲ ಎಂಬುವುದನ್ನು ಧ್ವನಿಸುತ್ತದೆ.

ಇವತ್ತಿಗೂ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿರುವ ದಲಿತ ಮಹಿಳೆಯರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ನಿರಂತರ ತುಳಿತಕ್ಕೆ ಒಳಪಟ್ಟು ಅನಕ್ಷರಸ್ಥರಾಗಿಯೇ ಮುಂದುವರೆಯುತ್ತಿದ್ದಾರೆ.

ಮಹಿಳೆಯರು ಸೇವೆ ಮಾಡಲಿಕ್ಕೆ ಮಾತ್ರ. ಅವರು ಮೊದಲಿಗೆ ಒಡೆಯರಿಗೆ ಸೇವೆ ಮಾಡಬೇಕು ನಂತರ ಗಂಡಂದಿರಿಗೆ ಸೇವೆ ಮಾಡಬೇಕು. ಮಹಿಳೆಯರಿಗೆ ಮದುವೆಯ ವಿಷಯದಲ್ಲಿ ಆಯ್ಕೆಯ ಅವಕಾಶವೇ ಇರಲಿಲ್ಲ. ಊಳಿಗಮಾನ್ಯ ಮದುವೆಯು ಹೆಣ್ಣು ವಿಧೇಯಳಾಗಿ ಏನನ್ನೂ ಪ್ರಶ್ನಿಸದೆ ಎಲ್ಲವನ್ನೂ

ಅನುಭವಿಸಿಕೊಂಡು ಹೋಗುತ್ತಾ ಅದು ಮುರಿದು ಬೀಳದಂತೆ ತಾಳ್ಮೆಯಿಂದ ಕಾಪಾಡಬೇಕಾದಂತಹ ಒಂದು ಸಾಮಾಜಿಕ- ಆರ್ಥಿಕ ಬಂಧನವಾಗಿತ್ತು. ಮಹಿಳೆಯರೆಲ್ಲರೂ ಹುಟ್ಟಿನಿಂದಲೇ ಕೀಳೆಂದೂ. ಹಿಂದಿನ ಜನ್ಮಗಳ ಪಾಪದ ಫಲವೆಂದೂ, ದಡ್ಡಿಯರೆಂದೂ, ಅವಳು ನಾಶಕ್ಕೆ ಮೂಲ. ಅದು ಕ್ರೂರ ಸತ್ಯವೆಂದು ಸ್ವತಃ ಅವರೇ ಒಪ್ಪಿಕೊಳ್ಳುವಂತೆ ಮಾಡಲಾಯಿತು. ಹೆಂಗಸರನ್ನು ನಿಕೃಷ್ಟವಾಗಿ ತಳಿಸುವ ಗಾದೆಗಳು ಈ ಕಾಲಘಟ್ಟದಲ್ಲಿಯೇ ಹುಟ್ಟಿಕೊಂಡವು.

- ಹೆಣ್ಣಿನ ಬುದ್ಧಿ ಮೊಣಕಾಲು ಕೆಳಗೆ
- ನಗುವ ಹೆಂಗಸನ್ನಾ ನಂಬ ಬಾರದು,
- ಹೆಂಗಸರ ಮಾತು ಮುಖ್ಯ ಅಲ್ಲ.
- ಹೆಣ್ಣು ಚಂಚಲೆ, ನಾಚಿಕೆ ಸ್ವಭಾವದವಳು, ಮೃದುತ್ವದವಳು
- ಹೆಣ್ಣಿನ ಸೆರಗಲ್ಲಿ ಮೂರುಕಾಸು ಇದ್ದರೆ ಎದುರಿಗೆ ಬರೋ ಗಂಡಸನ್ನಾ ಎದೆಗೆ ಒದಿಬೇಕು ಅನುಸುತ್ತಂತೆ.
- ಹೂಸಿದ್ದು ಯಾರು ಅಂದ್ರ ಮಾಸಲ ಸೀರೆಯೊಳು ಅಂದ್ರಂತೆ.

ಇಂತಹ ಗಾದೆಗಳೆಲ್ಲವೂ ಮಹಿಳೆಯನ್ನು ಹೀಯಾಳಿಸುವ ಅವಳ ಎಲ್ಲಾ ಚಟುವಟಿಕೆಗಳು ನಗಣ್ಯವೆಂದು ಸಾಧಿಸುವ ಹಿನ್ನೆಲೆಯಲ್ಲಿಯೇ ಪುರುಷಶಾಹಿ ಉದ್ದೇಶ ಪೂರ್ವಕವಾಗಿಯೇ ಸೃಷ್ಟಿಸಿದೆ.

"ಹೆಂಗಸರ ಬಾಯಿ ಎರಡು ರೀತಿಯಲ್ಲಿ ಪ್ರಸಿದ್ಧವಾಗಿದೆ. ಹೆಂಗಸರ ಬಾಯಲ್ಲಿ ಗುಟ್ಟುಳಿಯುವುದಿಲ್ಲ ಎಂಬುವುದು ಒಂದು ತಿಳುವಳಿಕೆಯಾದರೆ, ಹೆಂಗಸರ ಬಾಯಿಯ ಮುಂದೆ ನಿಲ್ಲುವುದು ಕಷ್ಟ ಎನ್ನುವುದು, ಇನ್ನೊಂದು ತಿಳುವಳಿಕೆ.

- ಹೆಂಗಸರ ಬಾಯಲ್ಲಿ ಮಾತು ನಿಲ್ಲದು, ಗಂಡಸರ ಕೈಯಲ್ಲಿ ಕೂಸು ನಿಲ್ಲದು
- ಪೋಲಿದನಕ್ಕೆ ಹಾಲು ಹೆಚ್ಚು ಕೂಲಿ ಮುಂಡೆಗೆ ನಾಲಿಗೆ ಹೆಚ್ಚು
- ತಿಗಳಗಿತ್ತಿ ಬಾಯಿ ಕೆಣಕಬೇಡ ಬೊಗಳೋ ನಾಯಿ ಹೊಡೀಬ್ಯಾಡ
- ಚಂಡಿ ಮುಂಡೆಗೆ ಕೈ ಹಾಕ ಬಾರದು

ಈ ಗಾದೆಗಳು ಹೆಂಗಸರ ಬಾಯಿಗೆ ಸಂಬಂಧಿಸಿದವು. ನಮ್ಮ ಸಂಸ್ಕೃತೀಕರಣ ಬದಲಾದರೆ ಗಂಡಸಿನ ಕೈಯಲ್ಲಿ ಕೂಸೂ ಉಳಿಯುತ್ತದೆ (ವಿಜಯಾದಬ್ಬೆ, ೧೯೯೭, ಪು. ೧೨೧). ಮನೆಯ ಹೊರ, ಒಳ ಎರಡು ಕೆಲಸಗಳೂ ಮಹಿಳೆಗೆ ಹೊರಿಸಿ ಗಂಡಸ ತಾನು ಹಾಯಾಗಿರಲು ರೂಪಿಸಿದ ಗಾದೆಗಳಿವು ಕೂಲಿ ಮಾಡುವವಳು ಬಾಯಿ ಮಾಡಬೇಕಾದ ಪ್ರಸಂಗ ಯಾಕೆ ಒದಗುತ್ತದೆ ಎಂಬುವುದನ್ನು ಈ ಗಾದೆಗಳು ನೆನಪಿಸಿಕೊಳ್ಳುವುದಿಲ್ಲ. ಬೈದೋರು ಮಾತ್ರ ಬರದಲ್ಲಿ ಬದುಕ ಬಹುದಾದ ಪರಿಸ್ಥಿತಿ ಇದ್ದಾಗ ಆ ಹೆಂಗಸನ್ನು ಮೂಕಿಯಾಗಿ ಮಾಡಿಬಿಟ್ಟರೆ ಅವಳ ಒಂದು ಅಸ್ತ್ರವನ್ನು ಕಿತ್ತುಕೊಂಡು ದುರ್ಬಲಳನ್ನಾಗಿಸಿದಂತಲ್ಲವೆ ಎಂಬ ಪ್ರಶ್ನೆ ಈಗ ಬರಬಹುದಾದರೂ ನಮ್ಮ ವರ್ಗ ವ್ಯವಸ್ಥೆಯ ರಾಕ್ಷಸ ಇದ್ಯಾವುದನ್ನು ತನ್ನ ಪರಿವೆಗೆ ತಂದುಕೊಳ್ಳುವುದಿಲ್ಲ. ಈ ಎಲ್ಲಾ ಗಾದೆಗಳಲ್ಲಿ ಮಾತಾಡುವ, ಬಹಿರಂಗವಾಗಿ ಮಾತಾಡುವ ಸ್ತ್ರೀಯರ ಬಗ್ಗೆ ಇರುವ ಅಸಂತುಷ್ಟ ಮನೋಭಾವವೂ ಗಮನಾರ್ಹ" (ಅದೇ ಪುಟ).

ಪ್ರಾರಂಭದಲ್ಲಿ ಹುಟ್ಟಿದ ಕನ್ಯಾದಕ್ಷಿಣೆ ಊಳಿಗಮಾನ್ಯ ವ್ಯವಸ್ಥೆಯಲ್ಲಿ ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡಿತು. ಕನ್ಯಾದಕ್ಷಿಣೆ ಎಂಬುವುದು ಅವಳ ದೈಹಿಕ, ಮಾನಸಿಕ ಶ್ರಮಕ್ಕೆ ಪರಿಹಾರ ರೂಪದಲ್ಲಿ ಕಟ್ಟಿದ ಬೆಲೆಯಾಗಿತ್ತು. ಮಹಿಳೆಗೆ ಮಾನಸಿಕ ಶ್ರಮ ಇರುವುದನ್ನು ಊಳಿಗಮಾನ್ಯ ವ್ಯವಸ್ಥೆ ನಂಬುವುದಿಲ್ಲ. ಅವಳು ಏನಿದ್ದರೂ ಗಂಡ ಹೇಳಿದ ಕೆಲಸಗಳನ್ನು ಮಾಡುವವಳು ಮಾತ್ರ. ಕನ್ಯಾದಕ್ಷಿಣೆಯು ಮಹಿಳೆ ಎಂದರೆ ಸ್ವಂತದ ಆಯ್ಕೆಯಿಲ್ಲದ ಸರಕಿನಂತೆ ಮಾರಬಹುದಾದ ಒಂದು ವಸ್ತು ಎಂಬುವುದನ್ನಷ್ಟೇ ಸೂಚಿಸುತ್ತದೆ. ಕೆಳ ಜಾತಿಗಳು ಮೇಲ್ಜಾತಿಗಳನ್ನು ಅನುಕರಿಸಿದಂತೆ ಈ ಎಲ್ಲಾ ಪದ್ಧತಿಗಳು ಕೆಳಜಾತಿಗಳಲ್ಲೂ ಹುಟ್ಟಿಕೊಂಡವು. ಕನ್ಯಾದಕ್ಷಿಣೆ ಎಂದರೆ ಹಣ ಕೊಟ್ಟು ವಧುವನ್ನು ಕೊಂಡುಕೊಂಡು ಬರುವುದು. ಅಂದರೆ ಅವಳನ್ನು ವಸ್ತುವಂತೆ ಮಾರಾಟ ಮಾಡುತ್ತಿದ್ದುದನ್ನು ಇದು ಸೂಚಿಸುತ್ತದೆ.

ಒಂದು ಕಡೆ ಹೆಣ್ಣನ್ನು ದೇವತೆ ಎಂದು ವರ್ಣಿಸಿದರೆ ಇನ್ನೊಂದು ಕಡೆ ಅವಳು ಕೇಡಿನ ಮೂಲ ಕಾರಣವೆಂದು 'ದೆವ್ವ'ವಾಗಿ ಚಿತ್ರಿಸಲ್ಪಡುತ್ತಿದ್ದ ಮಹಿಳೆಯರೆಲ್ಲರೂ ದಲಿತ ಮಹಿಳೆಯರೇ ಆಗಿದ್ದರು. ವ್ಯವಸ್ಥೆಗೆ ತಿರುಗಿ ಬಿದ್ದ ಮಹಿಳೆಯ ವ್ಯಕ್ತಿತ್ವದ ಮೇಲಿನ ಹಲ್ಲೆಯನ್ನು ನಡೆಸಲಾಗುತ್ತಿತ್ತು. ಮಹಿಳೆಯನ್ನು ಹಿಂಸಿಸಿ ನೋಯಿಸುವಂತಹ ನಾನಾ ತರಹದ ಮೂಢನಂಬಿಕೆಗಳು, ಸಂಪ್ರದಾಯಗಳು ಮತ್ತು ಆಚರಣೆಗಳನ್ನು ಯಾವುದೇ ರೀತಿಯ ಅಡೆತಡೆ ಇಲ್ಲದೆ ನಡೆಸಲಾಗುತ್ತಿತ್ತು. ತನ್ನ ಸಮುದಾಯದ ಪರವಾಗಿ ವ್ಯವಸ್ಥೆಗೆ ಸವಾಲೊಡ್ಡಿದ ಯಾವ ದಲಿತ ಮಹಿಳೆಯನ್ನು ಪ್ರಭುತ್ವ ಉಳಿಸಿಲ್ಲ. ಅವಳನ್ನು ಕೊಲೆ ಮಾಡುವುದರ ಮೂಲಕ ಅವಳನ್ನು ವಕ್ರವಾಗಿ ಅಂದರೆ ದೊಡ್ಡ ಕಣ್ಣು, ಉದ್ದನಾಲಿಗೆ, ಚದುರಿದ ತಲೆಯ ರೂಪದಲ್ಲಿ ಚಿತ್ರಿಸಿ ವ್ಯಂಗ್ಯಗೊಳಿಸದೆ ಎನ್ನಬಹುದು. ತಳಸಮುದಾಯಗಳ ಕಣ್ಣಿಂದ ನೋಡುವುದಾದರೆ ಇದರ ರೂಪ ಭಿನ್ನವಾಗಿ ಕಾಣಬಹುದು. ತಮ್ಮ ಸಮಸ್ಯೆಯ ಪರಿಹಾರಕ್ಕಾಗಿ ಹೋರಾಡಿದ, ದುಡಿದ ಮಹಿಳೆಯು ವ್ಯವಸ್ಥೆಗೆ ಬಲಿಯಾದ್ದರಿಂದ ಅದೇ ನೋವಿನಲ್ಲಿ ಕೊರಗಿ ಅದನ್ನು ತೋರ್ಪಡಿಸಿಕೊಳ್ಳಲಾಗದೆ ಆಚರಣೆಯಲ್ಲಿ ಅದೇ ಮಹಿಳೆ ವ್ಯವಸ್ಥೆಗೆ ವಿರುದ್ಧವಾಗಿ ಕೆಂಡಕಾರುತ್ತಿರುವ ರೀತಿಯಲ್ಲಿ ಸಮುದಾಯವೇ ಅವಳನ್ನು ಹಾಗೆ ಚಿತ್ರಿಸಿರಬೇಕು. ಅದರ ಮೂಲಕ ಸಂತಸ/ ನೆಮ್ಮದಿಗೊಂಡು ಉಸಿರು ಬಿಟ್ಟಿರಬೇಕು. ಕನಸಿನಲ್ಲಿ ವ್ಯವಸ್ಥೆಗೆ ತಿರುಗಿ ಬಿದ್ದು ತಾನು ಗೆದ್ದು ಸಂತಸ ಪಡೆದಿರಬೇಕು ಎನಿಸುತ್ತದೆ. ಎಲ್ಲಮ್ಮ ಮತ್ತು ಸಿರಿ ಕಾವ್ಯಗಳು ಇದಕ್ಕೆ ಆಧಾರವಾಗಿ ನಿಲ್ಲುತ್ತವೆ.

ಸವದತ್ತಿ ಎಲ್ಲಮ್ಮ ಹಾಗೂ ಮುನಿರಾಬಾದಿನ ಹುಲಿಗೆಮ್ಮ ಗ್ರಾಮ ದೇವತೆಗಳ ಕಥಾವೃತ್ತಾಂತರದ ಮೂಲಕ ಅಂದಿನ ಕಾಲದ ಊಳಿಗಮಾನ್ಯತೆಯನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ. ಸವದತ್ತಿ ಎಲ್ಲಮ್ಮನ ಕಥಾ ವೃತ್ತಾಂತದಲ್ಲಿ ಜಮದಗ್ನಿಯ ಕ್ರೂರ ಹಿಂಸೆಗಳು ಇಡೀ ಪುರುಷ ಪ್ರಧಾನತೆಯನ್ನು ಪ್ರತಿನಿಧಿಸುತ್ತವೆ. ಮುಖ್ಯ ವರ್ಗದವರ ಶೋಷಣೆ, ಕೆಳವರ್ಗದವರ ಸಹನೆ ಗೆರೆ ಎಳೆದಂತೆ ಎದ್ದು ಕಾಣುತ್ತಿತ್ತು. ವರ್ಣಸಂಘರ್ಷ-ವರ್ಗಸಂಘರ್ಷಗಳು ಕಾಣುತ್ತವೆ. ಇದು ಊಳಿಗಮಾನ್ಯಶಾಹಿಯ ಅಟ್ಟಹಾಸದ ವಕ್ರತೆಗೆ ಸಾಕ್ಷಿಯಾಗಿದೆ.

'ಶಾಂತಿ ಮಂತ್ರವನ್ನು ಪಠಿಸುವ ಈ ದೇಶದ ಅನೇಕ ಮುನಿಗಳು ಋಷಿಗಳು ತಪಸ್ವಿಗಳು ಅಶಾಂತಿ ವಾತಾವರಣವನ್ನು ಸೃಷ್ಟಿಸಿದರೆ ಇಲ್ಲಿ ಬಾಳಿದ ಸಾಮಾನ್ಯ ಮಹಿಳೆಯರು ದಲಿತ ಸ್ತ್ರೀಯರು ಶಾಂತಿ ಪಾಠ ಕಲಿಸಿದ್ದಾರೆ. ಮುನಿಗಳಾದವರೇ ರುಂಡ ಹಾರಿಸಲು ಆಜ್ಞಾಪಿಸಿ ಹಿಂಸೆಯನ್ನು ಮೆರೆದರೆ ಈ ಮಹಿಳೆಯರು ಅಹಿಂಸೆಯಿಂದ ತಮ್ಮ ಸೃಜನಶಕ್ತಿಯ ಸಾಧ್ಯತೆಗಳಿಂದ ಅವರು ಕಾರಣವಿಲ್ಲದೆ ರೇಣುಕೆಯನ್ನು ಅರಗಿಸಿ ಕೊಂಡಿದ್ದಾರೆ. ಜಮದಗ್ನಿ ಮುನಿ ಬಲವಾದ ಕಾರಣವಿಲ್ಲದೆ ರೇಣುಕೆಯ ರುಂಡವನ್ನು ಹಾರಿಸಲು

ಪರಶುರಾಮನಿಗೆ ಆದೇಶಿಸುವುದು ಪುರುಷರಾಮ ತಾಯಿಯ ರುಂಡವನ್ನು ಹಾರಿಸಿ ಆಜ್ಞೆ ಪಾಲಿಸುವುದು ಯಜಮಾನ ಸಂಸ್ಕೃತಿಯ ಹಿಂಸೆಯ ಪರಾಕಾಷ್ಠತೆಗೆ ಉದಾಹರಣೆಯಾಗಿದೆ. ರೇಣುಕೆ ಅಥವಾ ಎಲ್ಲಮ್ಮ ಪುರುಷ ಪ್ರಧಾನ ವ್ಯವಸ್ಥೆಯ ಈ ಹಿಂಸೆಯನ್ನು ಮೆಟ್ಟಿ ನಿಂತು, ಏಳು ರುಂಡಗಳಾಗಿ ಬೆಳೆದು ಜನ ಸಾಮಾನ್ಯರಿಂದ ಪೂಜೆಗೊಳ್ಳುವುದು ಅವೇ ಸಪ್ತ ಮಾತೃಕೆಯರಾಗಿ ಸಾಂಸ್ಕೃತಿಕ ಮಹತ್ವವನ್ನು ಸಾರುವುದು (ಡಾ. ಬಸವರಾಜ ಸಬರದ, ೨೦೦೫, ಪು. ೧೩). ಊಳಿಗಮಾನ್ಯ ಪುರುಷಶಾಹಿಯ ವಿರುದ್ಧ ಸೆಡ್ಡು ಹೊಡೆದು ನಿಲ್ಲುವ ಪ್ರಕ್ರಿಯೆಯನ್ನು ತೋರಿಸುತ್ತದೆ.

"ಹಸಿವೆಯಿಂದ ಬಳಲುತ್ತಿದ್ದ ಹುಲಿಗೆಮ್ಮ ಮಾತಂಗಿಯಂತಹ ದಲಿತ ಮಹಿಳೆಯರು ಬದನೇಕಾಯಿ ತಿಂದದ್ದಕ್ಕಾಗಿ ತೋಟದ ಗೌಡ ಅವರ ಮೂಗು ಮುಂದಲೆ ಕೊಯ್ಯುವುದು ಪುರುಷ ಪ್ರಧಾನ ವ್ಯವಸ್ಥೆಯ ಕರಾಳ ಮುಖಗಳ ದಾಖಲೆಯಾಗಿದೆ. ಇಲ್ಲಿ ವರ್ಗ ಸಂಘರ್ಷದ ಬೀಜಗಳನ್ನು ಕಾಣಬಹುದಾಗಿದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಗೌಡ- ಕುಲಕರ್ಣಿಯಂತಹ ಆಳುವ ವ್ಯವಸ್ಥೆಯ ಪ್ರತಿನಿಧಿಗಳು ದಲಿತ ಮಹಿಳೆಯನ್ನು ಶೋಷಿಸಿದ್ದಾರೆ ಎಂಬುವುದನ್ನು ಇದು ಅನಾವರಣಗೊಳಿಸುತ್ತದೆ (ಅದೇ ಪುಟ). ಪುರುಷರ ಹಂಗನ್ನು ತೊರೆಯುವ ದಿಟ್ಟತನವನ್ನು ಪ್ರತಿನಿಧಿಸುತ್ತದೆ. ಸಿರಿಯನ್ನು ಆಚರಣೆಯನ್ನಾಗಿ ಮಾಡುವ ಇಂದಿನ ದಲಿತ ವರ್ಗದ ಹೆಂಗಸರು ಸಾಮೂಹಿಕವಾಗಿ ದೈವಾವೇಶಕ್ಕೆ ಒಳಗಾಗುವ ಮತ್ತು ಇಡೀ ರಾತ್ರಿ ಕುಣಿದು, ಕಿರುಚಿ, ಎದ್ದು ಬಿದ್ದು ತನ್ನ ಮನದಾಳದ ಎಲ್ಲಾ ದುಗುಡಗಳನ್ನು ಹೊರ ಚೆಲ್ಲುವ ಕ್ರಿಯೆ ನಡೆಯುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿನ ಹೆಣ್ಣಿನ ಗೋಳಿನ ಪ್ರಕಟಣೆಗೆ ಈ ಆಚರಣೆ ಮಾಧ್ಯಮವಾಗಿದೆ.

ಸಿರಿ ಕಾವ್ಯದಲ್ಲಿ ಸಿರಿಯು ತನ್ನ ಗಂಡನನ್ನು ತೊರೆದು ಮರು ಮದುವೆಯಾಗುವುದು. ತನ್ನ ತಂದೆಯ ಪ್ರೀತಿಯ ಪುತ್ಥಳಿಯಾದ ಸಿರಿಯು ಸಿರಿವಂತನಾದ ಗಂಡನನ್ನು ಕೂಡಿ ಸುಖದಿಂದ ಇರಲಾರದೆ ಗಂಡಸಿನ ಪ್ರೇಮದಿಂದ ವಂಚಿತಳಾಗುತ್ತಾಳೆ. ೨ ನೇ ಗಂಡನ ಮನೆಯಲ್ಲಿಯೂ ತನ್ನ ಹೆರಿಗೆಯನ್ನು ತಾನೇ ಮಾಡಿ ಕೊಳ್ಳಬೇಕಾದ ಪ್ರಸಂಗ ಬರುತ್ತದೆ. ಕಥೆಯ ಪ್ರಕಾರ ಅವಳು ಹೆತ್ತು ಮಾಯವಾಗುತ್ತಾಳೆ. ವಾಸ್ತವವಾಗಿ ಸಾಯುತ್ತಾಳೆ. ಅನಂತರ 'ಸಿರಿ'ಯ ಮಗಳಾದ ಸೊನ್ನೆ ಕೂಡ ಯಾವುದೋ ಮನೆಯಲ್ಲಿ ಬೆಳೆಯಬೇಕಾಗುತ್ತದೆ. ಈ ಎಲ್ಲಾ ಅಂಶಗಳು ಹೆಣ್ತನದ ಹೃದಯವನ್ನು ಕಲಕುತ್ತವೆ. ಸಿರಿಕಾವ್ಯ ಪ್ರಭುತ್ವವನ್ನು ಎದುರಾಕಿಕೊಂಡ ದಲಿತ ಮಹಿಳೆಯರು ಪ್ರಭುಗಳಿಗೆ ಮಾಟಗಾರ್ತಿಯರಾಗಿ ಕಂಡಿದ್ದರಿಂದ ಅವರನ್ನು ಕೊಲೆಗೈಯಲಾಗುತ್ತಿತ್ತು. ಮೊದಲಲ್ಲಿ ಪವಿತ್ರವೆಂದು ತಿಳಿದಿದ್ದ ತಿಂಗಳ ಮುಟ್ಟನ್ನು ಅಶುದ್ಧವೆಂದೂ ತಿರುಚಲಾಯಿತು. ಮಕ್ಕಳನ್ನು ಹೆರುವ ಅವರ ಶಾರೀರಿಕ ಶಕ್ತಿಯನ್ನೇ ಅವರ ದೈಹಿಕವಾದ ಅಶಕ್ತತೆ ಎಂದೂ ಪರಿಗಣಿಸಲಾಯಿತು. ಅದೇ ಸಮಯದಲ್ಲಿ ಮಾತೃತ್ವವನ್ನು ವೈಭವೀಕರಿಸಲಾಗುತ್ತಿತ್ತು. ಇದು ಇವೆರಡರ ಪರವಾಗಿಯೂ ಇರದೇ, ಇವೆರಡರ ವಿರೋಧವಾಗಿಯೂ ಇರದೇ ಕಣ್ಣಾ ಮುಚ್ಚಾಲೆ ನಾಟಕವಾಡುತ್ತಿತ್ತು. ಮಕ್ಕಳನ್ನು ಹೆರದ ಮಹಿಳೆಯನ್ನು ಕೆಟ್ಟದಾಗಿ ನೋಡಲಾಗುತ್ತಿತ್ತು. ಇದರಿಂದ

ಸಂಜೆ ಕೊಟ್ಟು ಮುಂಜಾನೆ ಕೊಳ್ಳಯ್ಯ
ಬಂಜೆಂಬ ಶಬುದ ಬಿಡಿಸಯ್ಯ
ಆಗಲೆ ಕೊಟ್ಟು ಆಗಲೆ ಕೊಳ್ಳಯ್ಯ
ಬಂಜೆಂಬ ಶಬುದ ಬಿಡಿಸಯ್ಯ (ಗೋರೂರು ರಾಮಸ್ವಾಮಿ ಅಯ್ಯಂಗಾರ್, ೧೯೩೮, ಪು. ೨೧೧).

ಎಂದು ಆರ್ತಳಾಗಿ ಕೇಳಿ ಕೊಳ್ಳುವ ಈ ಪರಿ ಮಗುವಿನ ಹಂಬಲಕ್ಕಿಂತಲೂ 'ಬಂಜೆ' ಎಂಬ ಶಬ್ದದಿಂದ ಮುಕ್ತಿ ಪಡೆಯಲು ತವಕ ಪಡೆಯುತ್ತಿರುವ ಪ್ರತೀಕ ಕಾಣಿಸುತ್ತದೆ. ಮಕ್ಕಳಾದರೂ ಗಂಡು ಮಕ್ಕಳನ್ನೇ ಹೆರಬೇಕು ಇಲ್ಲದಿದ್ದರೆ ಸ್ವರ್ಗ ಪ್ರಾಪ್ತಿಯಾಗುವುದಿಲ್ಲ ಎಂದು ಹೇಳಲಾಗುತ್ತಿತ್ತು. ಜೊತೆಗೆ ಒತ್ತಡವೂ ಇರುತ್ತಿತ್ತು. ಕಾರಣ ಇದನ್ನು ಒಪ್ಪಿ ಇದರ ಜೊತೆ ರಾಜಿ ಮಾಡಿಕೊಂಡ ಜನಪದ ಮಹಿಳೆ ಈ ರೀತಿ ಹೇಳುತ್ತಾಳೆ.

ಹೆಣ್ಣು ಹುಟ್ಟಿದ ಮನಿ ಹೆಗ್ಗಣತ್ತಿದಾಂಗ

ಗಂಡಸ ಮಗ ಗಜಭೀಮ| ಹುಟ್ಟಿದರ

ಚಿಲಕ ಚಿತ್ತಾರ ನಗತಾದ (ಹಲಸಂಗಿ ಗೆಳೆಯರು, ೧೯೮೪, ಪು. ೯೧).

ಪ್ರಭುತ್ವದಲ್ಲಿ ಯಾವಾಗಲೂ ಯುದ್ಧಗಳು ಸಂಭವಿಸುತ್ತಿದ್ದರಿಂದ ಅಲ್ಲಿ ಹೋರಾಡಲು ಸೈನಿಕರ ಅವಶ್ಯಕತೆ ಬಹಳವಿದ್ದರಿಂದ ಇಂತಹ ನಂಬಿಕೆಯನ್ನು ಹುಟ್ಟುಹಾಕಲಾಗಿತ್ತು. ದಲಿತ ಮಹಿಳೆಯರು ಮಕ್ಕಳನ್ನು ಹೆತ್ತು ಸೈನ್ಯಕ್ಕೆ ಕಳುಹಿಸುವ ಕೆಲಸವನ್ನು ಕಡ್ಡಾಯವಾಗಿ ಮಾಡಬೇಕಾಗಿತ್ತು. ಇದರಿಂದಾಗಿ

ಹೆಣ್ಣು ಹಡೆದವ್ವನ ಹೆಮ್ಮೇನು ದೊಡ್ಡದು

ಹೆಣ್ಣು ಬಂದಾವೆ ತಿನಬಾರ| ಹೆಣ್ಣೀನ

ಹರಲಿ ಬಂದಾವ ಹೊರ ಬಾರ

(ಎಸ್.ಕೆ. ಕರೀಂಖಾನ್, ೧೯೮೨, ಪು. ೭೩) ಎಂದು ಹೆಣ್ಣು ಹಡೆದವರನ್ನು ತಿರಸ್ಕಾರವಾಗಿ ಕಾಣಲಾಗುತ್ತಿತ್ತು. ಹೆಣ್ಣಾಗಿ ಹುಟ್ಟಿ ಪ್ರಭುತ್ವದ ಹಿಂಸೆಯನ್ನು ತಾಳಲಾರದೇ ತನ್ನ ತಾಯಿಗೆ ಹೀಗೆ ಹೇಳುತ್ತಾಳೆ.

ಲೋಕಕಿಲ್ಲದ ಮಗಳ ಯಕ್ಹೆತ್ತೆ ತಾಯಮ್ಮ

ಲೋಕಾದ ಬಾಳು ನಮಗಿಲ್ಲ| ತಾಯಮ್ಮ

ಅಟ್ಟಿ ಬಿಡಿರಮ್ಮ ಅಡವೀಗೆ (ಸಂ. ಗುಂಡ್ಮಿ ಚಂದ್ರಶೇಖರ ಐತಾಳ್, ೧೯೭೩, ಪು. ೨೩೬).

ಇಲ್ಲಿ ಕಾಣುವ ನೋವು, ಅಸಹಾಯಕತೆ, ವಿಷಾದಗಳು ಹೆಣ್ಣಾಗಿ ಆಕೆ ಪಡುತ್ತಿರುವ ಕಷ್ಟಗಳು ಮುಂದೆ ಪಡಬೇಕಾದ ಕಷ್ಟಗಳನ್ನು ನೆನೆದು ಹೆಣ್ಣು ಹಾಗೂ ಹೆಣ್ಣು ಹೆತ್ತವರು ಕಣ್ಣೀರಿನಲ್ಲೇ ಬಾಳು ಕಳೆಯಬೇಕಾಗಿತ್ತು ಎಂಬುವುದನ್ನು ಸೂಚಿಸುತ್ತದೆ.

ಗಂಡಸರು ಮಾತ್ರ ಎಷ್ಟು ಹೆಂಡಂದಿರನ್ನು ಬೇಕಾದರೂ ಹೊಂದಿರಬಹುದಿತ್ತು. ರಾಜರು ತಮ್ಮ ಕಾಮ ದಾಹವನ್ನು ತಣಿಸಿಕೊಳ್ಳಲು ಅಂತಃಪುರದ ತುಂಬಾ ಹೆಂಗಸರನ್ನು ತುಂಬಿಕೊಂಡಿರುತ್ತಿದ್ದರು. ಅವರೆಲ್ಲರೂ ಹೆಚ್ಚಾಗಿ ದಮನಿತ ವರ್ಗದ ಜಾತಿಗಳವರೇ ಆಗಿರುತ್ತಿದ್ದ ಹೆಂಗಸರು ತಮ್ಮ ಹಾಡು ಮತ್ತು ನೃತ್ಯಗಳಿಂದ ಅವರ ಮನ ರಂಜಿಸಲು ಆಸ್ಥಾನಗಳಲ್ಲೂ 'ದೇವದಾಸಿ' ರೂಪದಲ್ಲಿ ದೇವಸ್ಥಾನಗಳಲ್ಲೂ ತುಂಬಿರುತ್ತಿದ್ದರು. ಅವರು ಶ್ರೀಮಂತ ವರ್ಗದ ಗಂಡಸರಿಗೆ ಲೈಂಗಿಕ ತೃಪ್ತಿಯನ್ನು ಕೊಡಬೇಕಾಗಿತ್ತು. ಆಳುವ ವರ್ಗದ ಗಂಡಸರು ಬಹುಪತ್ನಿತ್ವ, ವ್ಯಭಿಚಾರ ಆಚರಿಸುತ್ತಿದ್ದರಲ್ಲದೆ, ದಲಿತ ಮತ್ತು ಶೂದ್ರ ಹೆಂಗಸರನ್ನು ತಮ್ಮ ಇಚ್ಛಾನುಸಾರ ಬಳಕೆ ಮತ್ತು ವ್ಯಾಪಾರ ಮಾಡುತ್ತಾ ಸೂಳೆಗಾರಿಕೆಯನ್ನು ನಡೆಸುತ್ತಿದ್ದರು. ಬಡ ಮತ್ತು ದಮನಿತ ಜಾತಿಯ ಮಹಿಳೆಯರ ಲೈಂಗಿಕ ಶೋಷಣೆ ಮಾಡುವುದು ಮತ್ತು ಅವರನ್ನು ಅಡಿಯಾಳಾಗಿ ಮಾಡಿ ಕೊಳ್ಳುವುದು ಸರ್ವಸಮ್ಮತವಾಗಿತ್ತು. ಹೀಗೆ;

೧. ಕೌಟುಂಬಿಕ ಮೌಲ್ಯಗಳಿಂದ

೨. ಸಾಮಾಜಿಕ ಮೌಲ್ಯಗಳಿಂದ

೩. ಧಾರ್ಮಿಕ, ಮೌಲ್ಯಗಳಿಂದಲೇ

೪. ರಾಜಕೀಯ ಮೌಲ್ಯಗಳಿಂದ

ಮಹಿಳೆಯು ನಡೆಯಬೇಕು ಎಂಬುವುದನ್ನು ಊಳಿಗಮಾನ್ಯಶಾಹಿ ಹೇಳುತ್ತಾ ಅಮಾನವೀಯ ಆಚರಣೆಗಳನ್ನು ಜಾರಿಗೆ ತಂದಿತು. ಇವು ಯಾವುದೇ ರೀತಿಯ ಅಡೆ ತಡೆ ಇಲ್ಲದೆ ನಡೆಯುತ್ತಿತ್ತು. ದೇವದಾಸಿ, ಓಕುಳಿಯಾಟ, ಬೆತ್ತಲೆ ಸೇವೆಯಂತಹ ನಿಕೃಷ್ಟ ಆಚರಣೆಗಳನ್ನು ಜಾರಿಗೊಳಿಸುವ ಮೂಲಕ ದಲಿತ ಮಹಿಳೆಯರನ್ನು ಶೋಷಿಸಲು ಪ್ರಾರಂಭಿಸಿತು. ಇದರ ಮೂಲಕ ತಮಗನುಕೂಲವಾಗುವಂತೆ ತಮ್ಮ ಸ್ವೇಚ್ಛಾಚಾರಕ್ಕೆ ಧಕ್ಕೆ ಬರದಂತೆ ರೂಪರೇಷೆಗಳನ್ನು ಎಷ್ಟು ಬೇಕೋ ಅಷ್ಟನ್ನೂ ಸೃಷ್ಟಿಸಿಕೊಂಡರು. ಇವರು "ತಮ್ಮ ಧಾರ್ಮಿಕ ಮಡಿವಂತಿಕೆ ಹಾಳಾಗಬಾರದು, ತಮ್ಮ ಲೈಂಗಿಕ ಸ್ವೇಚ್ಛಾಚಾರಕ್ಕೆ ತಡೆ ಬಂದಿರಬಾರದು, ಅದು ಜನತೆಗೆ ವಿಕಾರವಾಗಿ ಕಂಡಿರಲೂ ಬಾರದು. ಈ ನೆಲೆಯಲ್ಲಿ ಲೈಂಗಿಕ ದಾಸಿಯರನ್ನು ರೂಢಿಸಿದರು. ದರ್ಶನಕ್ಕೆ ಯೋಗ್ಯವಾದ ತಾವು ಮುಟ್ಟಬಹುದಾದ ಮಧ್ಯಮ ಜಾತಿಯವರನ್ನು ಅಂಗಭೋಗದ ಸೂಳೆಯರು, ರಂಗಭೋಗದ ಸೂಳೆಯರು ಎಂದು ರೂಢಿಸಿ, ಘೋಷಿಸಿಕೊಂಡು ಬಂದರು. ಮಧ್ಯಮ ಜಾತಿಯಲ್ಲೇ ಶ್ರೇಷ್ಠತೆಗೆ ಸೇರಿದ ಪುರುಷರು ರಾಜಶಾಹಿ ಹಾಗೂ ಪುರೋಹಿತಶಾಹಿ ವ್ಯವಸ್ಥೆಯಡಿಯಲ್ಲಿ ಕೆಲಸ ಮಾಡುತ್ತ, ಸಣ್ಣ ಪುಟ್ಟ ಅಧಿಕಾರವನ್ನು ಅನುಭವಿಸುತ್ತಿದ್ದರು. ಈಗಾಗಲೇ ಮೇಲ್ವರ್ಗದ ಪುರುಷರು ಅನುಭವಿಸುತ್ತಿರುವ ಸ್ತ್ರೀಯರನ್ನು ಮುಟ್ಟಲು ಆಗದು, ತಮ್ಮ ಜಾತಿ ಹಾಗೂ ಧರ್ಮದ ಮಹಿಳೆಯರನ್ನು ಮುಟ್ಟಲು ಆಗದು, ತಮ್ಮ ಜಾತಿ ಹಾಗೂ ಧರ್ಮದ ಮಹಿಳೆಯರನ್ನು ಆ ವ್ಯವಸ್ಥೆಗೆ ತಳ್ಳಲಾಗದ ಸಂದಿಗ್ಧತೆಗೆ ಅವರು ಸಿಲುಕಿದರು. ಹಾಗಾಗಿ ತಮಗಿಂತ ಕೆಳ ಜಾತಿಯ ಶೂದ್ರರಲ್ಲಿ ಧಾರ್ಮಿಕ ಹೆಸರಿನಲ್ಲಿ 'ಬಸವಿ' ವ್ಯವಸ್ಥೆಯನ್ನು ಹುಟ್ಟು ಹಾಕಿ ತಮ್ಮ ಮೃಗೀಯ ಕಾಮನೆಯನ್ನು ತೃಪ್ತಿಪಡಿಸಿಕೊಂಡರು (ಡಾ. ಶೈಲಜಾ ಹಿರೇಮಠ, ೧೯೯೯, ಪು. ೧೩). ಮೇಲ್ವರ್ಗದ ಗಂಡಸರಲ್ಲಿ ಹೆಣ್ಣುಗಳ ಹತ್ತಿರ ಹೋಗುವ ವಿಷಯದಲ್ಲಿ ಸ್ಪರ್ಧೆ ಏರ್ಪಟ್ಟಿದ್ದರಿಂದ ಆಕರ್ಷಕ ಮೈ ಮಾಟ ಹೊಂದಿದ ದಲಿತ ಮಹಿಳೆಯನ್ನು ಕಂಡು ಸಹಿಸಲಾಗದ ಇವರು ಕೆಳ ಜಾತಿ ಮಹಿಳೆಯರೂ ದೇವದಾಸಿಯಾಗಬೇಕೆಂಬ ಧಾರ್ಮಿಕ ರೂಡಿಕೆಯನ್ನು ಹೊರಡಿಸಿದರು. ಮೇಲ್ಜಾತಿ/ಮೇಲ್ವರ್ಗ ದೇವದಾಸಿಯರು ದೇವರ ಸೇವೆಗಾಗಿದ್ದರೆ ದಲಿತ ಮಹಿಳೆ ಪ್ರಾರಂಭದಿಂದಲೂ ದೇವರ ಹೆಸರಿನಲ್ಲಿ ಸಮಾಜ ಸೂಳೆಯೇ ಆಗಿದ್ದು ಮಧ್ಯಮ ವರ್ಗದ ಹಾಗೂ ರಾಜನ ಆಸ್ಥಾನಕ್ಕೆ ಬಂದ ಅತಿಥಿಗಳ ದೇಹ ತೃಪ್ತಿಪಡಿಸುವವಳೇ ಆಗಿದ್ದಳು. ಇವರ ಅಂಗಗಳ ಸೌಂದರ್ಯವನ್ನು ಸವಿಯಲು ಬೆತ್ತಲೆ ಸೇವೆಯನ್ನು, ಓಕಳಿಯಾಟವನ್ನು ಆಡಿಸುತ್ತಾ ಸುಖಿಸುತ್ತಿದ್ದರು. ಪ್ರಭುತ್ವದ ಜೊತೆ ಮುಖಾಮುಖಿಯಾಗಲು ಧೈರ್ಯವಿಲ್ಲದ ಮಹಿಳೆ ಬಾರು ಕೋಲನ್ನು ಹಿಡಿದು ನೆಪ ಮಾತ್ರಕ್ಕೆ ಓಕಳಿ ಚೆಲ್ಲುವವರನ್ನು ಹೊಡೆಯಲು ಪ್ರಯತ್ನಿಸುವಲ್ಲಿಯೇ ಸಮಾಧಾನ ಪಟ್ಟುಕೊಳ್ಳಬೇಕಾಗಿತ್ತು. ಆದರೆ ಹೊಡೆಯಲು ಆಗುತ್ತಿರಲಿಲ್ಲ. ಇವಳ ಅಸಹಾಯಕತೆಯನ್ನು ನೋಡಿ ಅಟ್ಟಹಾಸದ ನಗುವನ್ನು ಬೀರುತ್ತಾ ಪ್ರಭುತ್ವವು ಮಧುವನ್ನು ಹೀರುತ್ತಿತ್ತು. ಇದಕ್ಕೆ ಧಾರ್ಮಿಕ ಲೇಪನ ಇದ್ದರಿಂದ ಇದನ್ನು ಎಲ್ಲರೂ ಒಪ್ಪಿಕೊಂಡಿದ್ದರು. ಕೆಲ ಮಹಿಳೆಯರು ಇದಕ್ಕೆ ವಿರೋಧ ತೋರಿಸಿದರೂ ಅವರನ್ನು ಬಲವಂತವಾಗಿ ದೇವದಾಸಿ ಮಾಡಲಾಗುತ್ತಿತ್ತು. ಇದರ ಕುರಿತು ಅಧ್ಯಯನ ಮಾಡಿದ ಎಡ್ಗರ್ ಥರ್‌ಸ್ಟನ್ 'ಪುರಾತನ ಹಿಂದೂ ಸಂಪ್ರದಾಯದಲ್ಲಿ ಏಳು ಬಗೆಯ ದೇವದಾಸಿಯರಿದ್ದರು.

೧. ದತ್ತ (ತನ್ನನ್ನು ತಾನೇ ದೇವಸ್ಥಾನಕ್ಕೆ ಅರ್ಪಿಸಿಕೊಳ್ಳುವವಳು)

೨. ವಿಕ್ರತ (ತನ್ನನ್ನು ತಾನು ಅದೇ ಉದ್ದೇಶಕ್ಕಾಗಿ ಮಾರಿಕೊಳ್ಳುವವಳು)

೩. ಭೃತ (ಕುಟುಂಬದ ಕಲ್ಯಾಣಕ್ಕಾಗಿ ದೇವಾಲಯಕ್ಕೆ ತನ್ನನ್ನು ತಾನು ಸೇವಕಿ ಎಂದು ಸಮರ್ಪಿಸಿಕೊಳ್ಳುವವಳು)

೪. ಭಕ್ತೆ (ಭಕ್ತಿಯಿಂದ ಸೇವೆ ಮಾಡುವವಳು)

೫. ಹುತ (ಆಮಿಷಗಳನ್ನು ತೋರಿಸಿ ದೇವಾಲಯಗಳಿಗೆ ಅರ್ಪಿಸಿದ ಸೇವಕಿ)

೬. ಅಲಂಕಾರ (ಅಲಂಕಾರದಲ್ಲಿ ನಿಪುಣೆಯಾದವಳು, ರಾಜರು ಇಂಥವರನ್ನು ದೇವಸ್ಥಾನಕ್ಕೆ ದಾನ ಮಾಡುತ್ತಿದ್ದರು)

೭. ರುದ್ರ ಗಣಿಕಾ ಅಥವಾ ಗೋಪಿಕಾ ದೇವಾಲಯದಲ್ಲಿರುವ ಸಂಗೀತ, ನೃತ್ಯ ಸೇವೆಗಾಗಿಯೇ ನೇಮಕಗೊಂಡಿದ್ದಳು! ಅದಕ್ಕಾಗಿ ಅವಳಿಗೆ ಪ್ರತಿ ತಿಂಗಳು ವೇತನವಿತ್ತು (ಎಡ್ಗರ್, ೧೯೮೭, ಪು. ೧೨೫) ಎಂದು ಹೇಳುತ್ತಾರೆ. ಇಲ್ಲಿ ರಾಜರು ಬಲವಂತವಾಗಿ ದೇವದಾಸಿ ಮಾಡುವುದು ಒಂದೆಡೆಯಾದರೆ, ಉಳಿದವರು ತಾವಾಗಿಯೇ ಅದನ್ನು ನಂಬಿ, ಭಕ್ತಿಯಿಂದ ಆಚರಿಸುವವರು ಇದ್ದಾರೆ. ಇದು ಪುರೋಹಿತ ಊಳಿಗಮಾನ್ಯಶಾಹಿ ಯಾವ ಪ್ರಮಾಣದಲ್ಲಿ ಇಂತಹ ಅಮಾನವೀಯ ಆಚರಣೆಗಳನ್ನು ಮನದಾಳಕ್ಕಿಳಿಸಿ ಬಿಟ್ಟಿದೆ ಎಂಬುವುದು ಗೊತ್ತಾಗುತ್ತದೆ. ಬೆತ್ತಲೆ ಸೇವೆ ಮಾಡುವವರು ತಮ್ಮ ಮನಸ್ಸಿನ ಬಯಕೆಗಳನ್ನು ಬೇಗ ಈಡೇರಲು ಈ ಹಿಂದೆ ಕಠೋರ ವ್ರತಗಳನ್ನು ಮಾಡುತ್ತಿದ್ದು, ದೇವರನ್ನು ಒಲಿಸಿಕೊಳ್ಳಲು ಕೆಲ ಕಠಿಣ ಆಚಾರಗಳನ್ನು ಪರಿಚಯಿಸುತ್ತಿದ್ದರು. ಮೊದಲೆಲ್ಲಾ ಇದು ಗುಪ್ತವಾಗಿಯೇ ನಡೆಯುತ್ತಿದ್ದರೂ ಮುಂದೆ ಪೂಜಾರಿಗಳ ಹೊಟ್ಟೆ ತುಂಬಲು ಮೇಲ್ವರ್ಗದವರಾದ ಗೌಡ, ಕುಲಕರ್ಣಿ, ಸಾಹುಕಾರರಿಗೆ ಮನರಂಜನೀಯ ವಸ್ತುವಾಗಲು ಈ ಬೆತ್ತಲೆ ಸೇವೆಯನ್ನು ಸಾಮೂಹಿಕವಾಗಿ ಬಹಿರಂಗವಾಗಿ ಆಚರಿಸುವ ವಿಧಾನವನ್ನು ತಂದಿದ್ದು ಊಳಿಗಮಾನ್ಯಶಾಹಿಯ ವಿಕೃತ ರೂಪವನ್ನು ಕುರಿತು ವಿವರಿಸುತ್ತದೆ (ಚನ್ನಣ್ಣ ವಾಲೀಕರ, ೨೦೦೨, ಪು. ೧೧೬). ಸವದತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆಯನ್ನು ಡಿ.ಎಸ್.ಎಸ್. ತನ್ನ ಹೋರಾಟದ ಮೂಲಕ ಪಡೆಯುತ್ತಿದ್ದ ಸಂದರ್ಭದಲ್ಲಿ ಈ ವಿಷಯ ತುಂಬಾ ಚರ್ಚೆಯಲ್ಲಿತ್ತು. ಆ ಸಂದರ್ಭದಲ್ಲಿ ಯು.ಆರ್. ಅನಂತಮೂರ್ತಿಯವರು ತಮ್ಮ ಬೆತ್ತಲೆ ಸೇವೆ ಯಾಕೆ ಕೂಡದು ಎಂಬ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ.

ಬೆತ್ತಲೆ ಸೇವೆ ಯಾಕೆ ಕೂಡದು? ಅಂದರೆ ಬೆತ್ತಲೆ ಸೇವೆ ಮಾಡಬೇಕು -ಬೆತ್ತಲೆ ಸೇವೆ ಮಾಡುವುದರಲ್ಲಿ ಯಾವುದೇ ತಪ್ಪಿಲ್ಲ. ಅದು ಸಹಜವೆಂಬಂತೆ ಅದನ್ನು ಸಮರ್ಥಿಸಲು ಅವರು ಕೊಡುವ ಕಾರಣಗಳು ಕ್ಷುಲ್ಲಕವೆನಿಸುತ್ತವೆ. "ದಿಗಂಬರ ಮುನಿಗಳನ್ನು ನಾವು ಸಹಿಸುವುದಿಲ್ಲವೇ? ಸಾವಿರಾರು ಇಂತಹ ಮುನಿಗಳು ಸೇರಿದ್ದಾಗ ನಮ್ಮ ಗತಿಸಿದ ಪ್ರಧಾನಿ ಇಂದಿರಾಗಾಂಧಿಯವರು ಅವರನ್ನು ನೋಡಿ ಅವರಿಂದ ಆಶೀರ್ವಾದವನ್ನು ಪಡೆಯಲಿಲ್ಲವೇ? ಹನ್ನೆರಡನೆಯ ಶತಮಾನದ ಅಕ್ಕಮಹಾದೇವಿಯ ಕಥೆಯಾದರೂ ಏನು? ಅವಳ ಬೆತ್ತಲೆಯನ್ನು ಟೀಕಿಸಿದ ಅಲ್ಲಮಪ್ರಭುವಿಗೆ ಅವಳು ನಿಮಗೆ ನೋವಾಯಿತೆಂದು ಮಾತ್ರ ನನ್ನ ಕೂದಲಿನಿಂದ ಗುಪ್ತಾಂಗಗಳನ್ನು ಮುಚ್ಚಿಕೊಂಡಿರುವುದು ಎಂದು ಹೇಳಲಿಲ್ಲವೇ? ನಾವು ಯಾಕೆ ಅಖಿಲ ಭಾರತ ವ್ಯಾಪ್ತಿಯ

ಮೇಲ್ಜಾತಿಯವರ ಆಚರಣೆಗಳನ್ನು ಮಾತ್ರ ಸಹಿಸಿಕೊಳ್ಳುತ್ತೇವೆ. ಆದರೆ ಕೆಳಜಾತಿಯವರ ಆಚರಣೆಗಳನ್ನು ಖಂಡಿಸುತ್ತೇವೆ? ನಾವು ಇವತ್ತು ಬೆತ್ತಲೆಯ ಚಿತ್ರವಿಲ್ಲದ ಜಾಹಿರಾತಿನಿಂದ ಏನನ್ನಾದರೂ ಮಾರುವುದುಂಟೇ? ಒಂದು ಸೋಪು, ಒಂದು ಟೂಥ್‌ಬ್ರಷ್, ಸ್ಕ್ರೂಡ್ರೈವರ್, ಒಂದು ಶಾಂಪು, ಯಾಕೆ ಒಂದು ಪ್ಲಾಸ್ಟಿಕ್ ಬಕೆಟನ್ನು ಮಾರಲು ಕೂಡ ನಾವು ಬೆತ್ತಲೆ ದೇಹವನ್ನು ಬಳಸುವುದಿಲ್ಲವೇ, ಬೆತ್ತಲೆ ದೇಹವನ್ನು ಖಂಡಿಸುವ ನಾವು ಯಾಕೆ ಸ್ಟ್ರಿಪ್ಟೀಸ್ ಕ್ಲಬ್‌ಗಳನ್ನು ಮರೆಯುತ್ತೇವೆ?"

ಒಪ್ಪಿಸುವ ಗುಣ ಇವರಲ್ಲಿ ಕರಗತವಾದಂತಿದೆ. ಇದನ್ನೇ ಬ್ರಾಹ್ಮಣ್ಯ ಮೌಲ್ಯಗಳು ಎನ್ನುವುದು. ಇನ್ನೇನು ಕೆಳಜಾತಿಗಳು ತಮ್ಮಲ್ಲಿರುವ ಜಡ್ಡನ್ನು ತೊರೆದು ಹೊರಗೆ ಬರಲೆತ್ನಿಸುವ ಹೊತ್ತಿನಲ್ಲಿಯೇ ಜಡ್ಡಿನಲ್ಲಿರುವುದು ಕೆಟ್ಟದ್ದಲ್ಲ, ಅದರಲ್ಲೇ ಬಿದ್ದು ಒದ್ದಾಡಿ ಎಂದು ಹೇಳಲು ಹೊರಟಿದ್ದಾರೆ. ಅದನ್ನು ನಂಬಿಸಲು ಇವರು ಉದಾಹರಣೆಗಳನ್ನು ಕೊಡುತ್ತಾ ಹೋಗುತ್ತಾರೆ.

ಹೆಣ್ಣಿನ ಸಮಸ್ಯೆಯನ್ನು ಕುರಿತು ಹೆಣ್ಣು ಮಾತನಾಡುವುದಕ್ಕೂ, ಹೆಣ್ಣಿನ ಸಮಸ್ಯೆ ಕುರಿತು ಗಂಡು ಮಾತನಾಡುವುದಕ್ಕೂ ವ್ಯತ್ಯಾಸವಿದೆ. ಜಾಹಿರಾತುಗಳಲ್ಲಿ ಮಹಿಳೆಯನ್ನು ಅರೆಬೆತ್ತಲೆಯಾಗಿ ಬಳಸಿಕೊಳ್ಳುವುದನ್ನು ಸ್ತ್ರೀವಾದಿ ವಿರೋಧಿಸಿದರೆ ಇಲ್ಲಿ ಲೇಖಕರು ಅದನ್ನು ನಾವು ಒಪ್ಪಿಕೊಂಡಿಲ್ಲವೇ ಎಂದು ಹೇಳುತ್ತಾರೆ. ಹೆಣ್ಣಿನ ಸಮಸ್ಯೆಯನ್ನು ಕುರಿತು ಗಂಡು ಮಾತನಾಡುವಾಗ ಕೆಲ ಕ್ಷಣಗಳಾದರೂ ಹೆಣ್ಣಾಗಿ ಯೋಚಿಸಬೇಕಾಗುತ್ತದೆ ಎಂಬ ಸೌಜನ್ಯವನ್ನು ಲೇಖಕರು ಇಲ್ಲಿ ಮರೆತಂತೆ ಗೋಚರವಾಗುತ್ತದೆ.

ಸ್ತ್ರೀವಾದಿಯ ಜೊತೆ ಲೇಖಕರು ಬೆತ್ತಲೆ ಪೂಜೆಯನ್ನು ಸಮರ್ಥಿಸಲು ಹೀಗೆ ಹೇಳುತ್ತಾರೆ. "ನಾವೂ ನೀವೂ ದುರದೃಷ್ಟವಶಾತ್ ಕಳೆದುಕೊಂಡಿರುವ ದೈವಿಕ ಶ್ರದ್ಧೆಯ ಉತ್ಕಟತೆಯನ್ನು ಆ ಬೆತ್ತಲೆ ಪೂಜೆಯವರಲ್ಲಿ ನೀವು ಯಾಕೆ ಕಾಣುವುದಿಲ್ಲ? ಅವರ ಪರವಶಕೆ ನಿಮಗೆ ಯಾಕೆ ಬೆಲೆಯುಳ್ಳದ್ದು ಎನಿಸುವುದಿಲ್ಲ. ನಮಗೆ ಹೆಣ್ಣಿನ ಬೆತ್ತಲೆ ದೇಹ ಒಂದೋ ಕಾಮವನ್ನು ಕೆರಳಿಸುತ್ತದೆ ಅಥವಾ ಒಬ್ಬ ಶಿಲ್ಪಿಯೋ, ಚಿತ್ರಕಾರನೋ ಅದನ್ನು ಬಿಡಿಸಿದರೆ ಕಲಾತ್ಮಕ ಅನುಭವ ಎನಿಸುತ್ತದೆ. ಆದರೆ ಬೆತ್ತಲೆಯಾಗಿ ಪೂಜಿಸುವವರಿಗೆ ಅದು ಕಲಾತ್ಮಕ ಅಭಿವ್ಯಕ್ತಿಯೂ ಅಲ್ಲ, ಕಾಮ ಪ್ರಚೋದಕವೂ ಅಲ್ಲ, ಇದಕ್ಕೆ ಏಕೆ ನಾವು ಭಾವನಾತ್ಮಕವಾಗಿ ಸ್ಪಂದಿಸುವುದಿಲ್ಲ? ಪ್ರಪಂಚದಲ್ಲಿ ಎಲ್ಲೂ ಇಲ್ಲದ್ದನ್ನು ಇಲ್ಲಿ ಕಾಣುತ್ತೇವೆ ಅಲ್ಲವೇ? ಬೆತ್ತಲೆ ದೇಹ ಪೂಜ್ಯವೆಂದು ಕಾಣುವುದು ಅಪರೂಪವಲ್ಲವೇ

ಲೇಖಕರು ತಾವು ಒಬ್ಬ ದಲಿತರಾಗಿದ್ದು ತಮ್ಮ ಮಕ್ಕಳು ದೇವದಾಸಿಯರಾಗಿದ್ದರೆ ಈ ಮಾತುಗಳನ್ನು ಹೇಳುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಆ ಸಮುದಾಯದ ಹೊರಗಿನವರು ಮಾತ್ರ ಈ ರೀತಿ ಹೇಳಲು ಸಾಧ್ಯವೇ ಹೊರತು ಆ ಸಮುದಾಯಕ್ಕೆ ಸಂಬಂಧಿಸಿದ ಯಾವೊಬ್ಬರು ಈ ರೀತಿ ಹೇಳಲು ಸಾಧ್ಯವಿಲ್ಲ. ಉಂಡವರಿಗೆ ಗೊತ್ತು ಅದರ ನೋವು ನಲಿವು ಎಂಬಂತೆ ಅನುಭವಿಸಿದವರಿಗೆ ಮಾತ್ರ ಅದು ಅರ್ಥವಾಗುತ್ತದೆ.

ದೇವನೂರು ಮಹಾದೇವ ಅವರು ಲೇಖಕರಿಗೆ ಈ ರೀತಿ ಹೇಳುತ್ತಾರೆ. "ನೋಡುವವರು ಬೆತ್ತಲೆಯಾಗಿದ್ದಲ್ಲಿ ಸೇವೆ ಮಾಡುವವರ ಬೆತ್ತಲೆಗೆ ತನ್ನ ವಿರೋಧವಿಲ್ಲ". ಸಮುದಾಯದ ಹೊರಗಿನವರು ಮಾತನಾಡುವುದಕ್ಕೂ ಸಮುದಾಯದ ಒಳಗಿನವರು ಮಾತನಾಡುವುದಕ್ಕೂ ಇಲ್ಲಿ ವ್ಯತ್ಯಾಸವನ್ನು ಗಮನಿಸಬಹುದು.

ಒಂದು ಕಡೆ ಮಹಿಳೆ ತನ್ನ ಗಂಡನನ್ನೂ ತೊರೆದು ಬೇರೆ ಗಂಡಸಿನ ಸಹವಾಸ ಬಯಸಿದರೆ -

ಗಂಡನ ಬಿಟ್ಟು ಮಿಂಡನ್ ಮಾಡ್ಬಳ

ರುಂಡನ ಹೊಡದು ರಣು ಮಾಯ- ಮಾಡುವ

ಗಂಡಿಲ್ಲ್ಯಾ ಅವಳ ಕುಲದಲ್ಲಿ॥ (ಸಂ॥ ಗುಂಡ್ಮಿ ಚಂದ್ರಶೇಖರ ಐತಾಳ್, ೧೯೭೩, ಪು. ೨೧೧) ಎಂದು ಊಳಿಗಮಾನ್ಯ ವ್ಯವಸ್ಥೆ ಅವಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುತ್ತಿತ್ತು. ತನ್ನ ಗಂಡ ಯಾರ ಹತ್ತಿರ ಹೋದರೂ ಅದರ ಬಗ್ಗೆ ಇವಳು ಸೊಲ್ಲು ಎತ್ತುವ ಹಾಗಿರಲಿಲ್ಲ.

ಪರಮಳ ದರಸರು ಪರನಾರಿಗ್ಹೋದರ

ಮನಿ ಮಡದಿ ಬಾಯಿ ಬಿಡಬ್ಯಾಡ ತಾವ್ತಮ್ಮ

ಮನ ಹೇಸಿ ಮನೆಗೆ ಬರತಾರ॥ (ಹಲಸಂಗಿ ಗೆಳೆಯರು, ೧೯೮೪, ಪು. ೧೩೩). ಎಂಬ ಉಪದೇಶವನ್ನು ವ್ಯವಸ್ಥೆ ಆಕೆಗೆ ನೀಡಿದೆ. ಇದಕ್ಕೆ ಬೇಸತ್ತು ಸೂಳೆಗಾರಿಕೆ ಮಾಡುವ ಗಂಡನನ್ನು ತಿದ್ದುವಾಗ ಮತ್ತೆ ಅವನು ಅದೇ ಕೆಲಸ ಮಾಡಿದಾಗ -

ಸೂಳಿ ಮನಿಗ್ಹೋಗ್ವವನ ಸುತಿ ಅವ್ನ ಜಲ್ಮಿವ

ನಾಳಿ ನೋಡವ್ವ ಬವಣೆಯ ಗುಡ್ಡಿ ಮ್ಯಾಲೆ

ಹುಡುಕುವ ಮದ್ದ ನರಕುತ್ತ॥ ಎಂದು ಸಿಟ್ಟಿನಿಂದ ಶಾಪ ಹಾಕುತ್ತಾಳೆ. ಶಪಿಸುತ್ತಾಳೆ.

ವರಗೇಡಿ ಒಗತನಕ ಕುಡಬ್ಯಾಡ ಹಡೆದವ್ವ

ವರನೋಡ ವರನ ಗುಣ ನೋಡ| ಮನಿಯಾನ

ಸಾಸಿವೆಕಾಳಷ್ಟು ರಿಣ ನೋಡ॥

ಮದುವೆಯಾಗುವುದಕ್ಕೆ ಮೊದಲು ತನಗೆ ಗಂಡ ಆಗುವವನನ್ನು ಕುರಿತು ತನ್ನ ತಾಯಿಗೆ ಹೇಳಿರುವುದನ್ನು ನೆನೆಸಿಕೊಳ್ಳುತ್ತಾಳೆ.

ಹೆಣ್ಣು ಮಕ್ಕಳ ದುಃಖ ಹೆತ್ತವ್ವ ಬಲ್ಲಳು

ಹುತ್ತ ದೊಳಗಿರೋ ಸರಪನ ಬೇಗೆಯ

ನೆತ್ತೀ ಮೇಲಿರುವ ಶಿವ ಬಲ್ಲ| (ಹಲಸಂಗಿ ಗೆಳೆಯರು, ೧೯೮೪, ಪು. ೫೫) ಎಂದು ತನ್ನ ಎಲ್ಲ ದುಃಖವನ್ನು ತಾಯಿ ಹತ್ತಿರ ಹೇಳಿಕೊಳ್ಳುತ್ತಾಳೆ. ಜನಪದ ಮಹಿಳೆ ತನ್ನ ದುಃಖವನ್ನು ಗಂಡಸಿನ/ ಗಂಡನ/ ಮೇಲ್ಜಾತಿ/ ಮೇಲ್ವರ್ಗದ ಮಹಿಳೆಯ ಹತ್ತಿರ ಹೇಳಿಕೊಂಡು ಮನಸ್ಸಿನ ಭಾರ ಕಡಿಮೆ ಮಾಡಿಕೊಂಡ ಉಲ್ಲೇಖಗಳು ಎಲ್ಲೂ ಸಿಗುವುದಿಲ್ಲ. ತಾಯಿ/ಗೆಳತಿಯ ಹತ್ತಿರ ಹೇಳಿಕೊಳ್ಳುವುದೇ ಜಾಸ್ತಿ. ಇದು ಊಳಿಗಮಾನ್ಯಶಾಹಿಯ ಜಾತಿ, ವರ್ಗ, ಲಿಂಗದ ಕುರಿತ ನಡವಳಿಕೆಯನ್ನು ಎತ್ತಿ ಹಿಡಿಯುತ್ತದೆಯಲ್ಲವೇ?

ಮೇಲ್ವರ್ಗದ ಗಂಡಸರು ತಮ್ಮ ಹೆಂಡತಿ ಮತ್ತು ಹೆಣ್ಣು ಮಕ್ಕಳಿಗೆ ಮಾತ್ರ ಕಟ್ಟುನಿಟ್ಟಿನ ಲೈಂಗಿಕ ನೀತಿ, ನಿಯಮಗಳನ್ನು ಪ್ರತಿಪಾದಿಸುತ್ತಿದ್ದರು. ಇದನ್ನು ಮುಖ್ಯವಾಗಿ ಆಸ್ತಿಯು ತಮ್ಮದೇ ಆದ ರಕ್ತ ಸಂಬಂಧ, ಜಾತಿ ಮತ್ತು ವರ್ಗದಲ್ಲೇ ಹರಿಯುವಂತೆ ನಿಯಂತ್ರಿಸುವ ಸಲುವಾಗಿ 'ಸತಿ ಪದ್ಧತಿ' ಎಂದರೆ ಗಂಡನ ಚಿತೆಯಲ್ಲಿ ಹೆಂಡತಿಯ ಸಜೀವ ದಹನವು ಮೇಲ್ಜಾತಿ, ಮೇಲ್ವರ್ಗದಲ್ಲಿ ಜಾಸ್ತಿ ಪ್ರಚಲಿತದಲ್ಲಿತ್ತು. ಕೆಳಜಾತಿಗಳಲ್ಲಿಯೂ

ಇದು ಪ್ರಚಲಿತವಿದ್ದರೂ ಅದರ ಪ್ರಮಾಣ ಕಡಿಮೆ ಇತ್ತು. ಯಾಕೆಂದರೆ ಕೆಳ ಜಾತಿಗಳಲ್ಲಿ ಗಂಡ ಸತ್ತ ನಂತರ ಬಸವಿಯಾಗಿ ದೇವರಿಗೆ ಬಿಡಲಾಗುತ್ತಿತ್ತು. ಕೆಳ ಜಾತಿಯ ಹೆಣ್ಣು ಮಕ್ಕಳೂ ಸಹ 'ಸತಿ'ಯಾಗಿ ಹೋದರೆ ಅವರ ಸಂಖ್ಯೆ ಕಡಿಮೆಯಾಗಿ, ರಾಜ್ಯದಲ್ಲಿ ದೇವದಾಸಿಯರ ಸಂಖ್ಯೆ ಕಡಿಮೆಯಾಗುತ್ತದೆ. ಇದು ರಾಜ್ಯಾಧಿಕಾರದ ಮೇಲೆ ಬೀರುವ ಪರಿಣಾಮವನ್ನು ಅರಿತ ರಾಜರು 'ಸತಿ ಹೋಗುವ' ವಿಷಯದಲ್ಲಿ ಕೆಳ ಜಾತಿಗಳಿಗೆ ಐಚ್ಛಿಕವನ್ನು ಇರಿಸಿದರು. ಮೇಲ್ವರ್ಗದ ಹೆಂಗಸರನ್ನು ಪರದೆ ಮತ್ತು ನಾಲ್ಕು ಗೋಡೆಗಳ ನಡುವೆಯೇ ಕಟ್ಟುನಿಟ್ಟಾಗಿ ಉಳಿಯುವಂತೆ ಮಾಡಿ ಅವರನ್ನು ಖಾಸಗಿ ಆಸ್ತಿಗಳಲ್ಲೇ ಅತ್ಯಂತ ಖಾಸಗಿಯಾದುದನ್ನಾಗಿ ನೋಡಲಾಗುತ್ತಿತ್ತು. ದಲಿತ ಮಹಿಳೆ ಜಾತಿಯಲ್ಲಿ, ವರ್ಗದಲ್ಲಿ ಕೆಳಗಿನವಳಾಗಿದ್ದರೂ ಲೈಂಗಿಕ ವಿಷಯದಲ್ಲಿ ಇದು ಯಾವುದೇ ತರಹದ ಅಡ್ಡಿಯನ್ನು ಉಂಟು ಮಾಡುತ್ತಿರಲಿಲ್ಲ. ದಲಿತ ಮಹಿಳೆ ಲೈಂಗಿಕ ವಿಷಯದಲ್ಲಿ ಸಮಾಜದ ಆಸ್ತಿಯಾಗಿದ್ದಳು. ಇಡೀ ದಲಿತ ಕುಟುಂಬ ಊರಿನ ಹೊರಗೆ ಜೀವಿಸುತ್ತಿದ್ದರೂ ಕೂಡ ಅಂತಹ ಮೈಲಿಗೆಗಳು ಇಲ್ಲಿ ಕೆಲಸ ಮಾಡುತ್ತಿರಲಿಲ್ಲ. ಶ್ರೀಮಂತ ಆಳುವ ಅಥವಾ ಭೂ ಮಾಲೀಕ ವರ್ಗದ ಮಹಿಳೆಯರು ತಾವು ಇಂಥ ಉಸಿರುಗಟ್ಟಿಸುವ ವಾತಾವರಣದಲ್ಲಿ ವರ್ಗ ಶೋಷಣೆಯ ವಿಷಯದಲ್ಲಿ ಇನ್ನಿತರ ಬಡ, ದಮನಕ್ಕೊಳಗಾದ ಮಹಿಳೆಯರ ಯಾವ ಸಮಸ್ಯೆಗಳಿಗೂ ಸ್ಪಂದಿಸದೇ ಇರುವುದು ಇಲ್ಲಿ ಗಮನಾರ್ಹ. ಇಂದೂ ಕೂಡ ಇದು ಬದಲಾಗಿಲ್ಲ ಎಂಬುವುದನ್ನು ಇಲ್ಲಿ ನೆನೆಸಿಕೊಳ್ಳಬಹುದು. ಆಗೆಲ್ಲ ಮೇಲ್ವರ್ಗದ ಮಹಿಳೆಯರು ತಮ್ಮ ಶೋಷಕ ವರ್ಗದ ಪರವಾಗಿಯೇ ಇರುತ್ತಾರೆ.

ಕರ್ನಾಟಕದಲ್ಲಿ ಸುಮಾರು ಕ್ರಿ.ಶ. ೪ ನೇ ಶತಮಾನದಿಂದ ಊಳಿಗಮಾನ್ಯತೆ ಬೆಳೆದು ಸದೃಢಗೊಂಡಿತು. ಹೇಯವಾದ ಶ್ರೇಣೀಕೃತ ಜಾತಿ ವ್ಯವಸ್ಥೆಯಲ್ಲಿ ಮೇಲಿನವರಾದ ಬ್ರಾಹ್ಮಣರ ಕೈಯಲ್ಲಿ ಮಠ ಮತ್ತು ದೇವಸ್ಥಾನಗಳ ರೂಪದಲ್ಲಿ ಆಸ್ತಿಯ ಭದ್ರವಾದ ಹಿಡಿತವಿತ್ತು. ಇವರು ದಮನವನ್ನು ಮನ್ನಿಸುವ ಮತ್ತು ತತ್ವಗಳನ್ನು ಜಾಣ್ಮೆಯಿಂದ ಪ್ರಚಾರ ಮಾಡುತ್ತಾ ಜನರನ್ನೂ ಆಳುವ ವರ್ಗದ ಅಧೀನರನ್ನಾಗಿಸಿದರು. ಜನರನ್ನು ನಿಷ್ಕ್ರಿಯಗೊಳಿಸಿದರು. ಈ ಸೇವೆಗೆ ಬದಲಾಗಿ ರಾಜರು ಮಠಾಧಿಪತಿಗಳಿಗೆ ಭೂಮಿ ಮತ್ತು ಹೆಂಗಸರನ್ನು ದಾನವಾಗಿ ಕೊಟ್ಟರು. ಕರ್ನಾಟಕದ ರಾಜ ಪ್ರಭುತ್ವದ ಪ್ರಾರಂಭದಿಂದಲೂ ಕರ್ನಾಟಕ ಚರಿತ್ರೆಯೂ ಭೂ ಆಧಾರಿತ ಅರ್ಥವ್ಯವಸ್ಥೆಯ ಲಕ್ಷಣಗಳನ್ನು ಸೂಚಿಸುತ್ತದೆ. ಇಲ್ಲಿ ವಿಕೇಂದ್ರಿತ ಊಳಿಗಮಾನ್ಯ ವ್ಯವಸ್ಥೆ ಇರುವುದನ್ನು ಕಾಣಬಹುದು. ಇಲ್ಲಿ ದಲಿತ ಮಹಿಳೆ ಭೂಮಿ, ಕಂದಾಯ, ದಾನ, ಹೆಚ್ಚುವರಿ ಉತ್ಪಾದನೆ ಹಾಗೂ ಭೂಮಾಲೀಕರ ಜೊತೆ ನಲುಗಿ ಹೋಗಿದ್ದಾಳೆ. ಈ ಅವಧಿಯಲ್ಲಿ ಊಳಿಗಮಾನ್ಯ ಲಕ್ಷಣಗಳನ್ನು ಸೂಚಿಸುವ ಅನೇಕ ನಿದರ್ಶನಗಳು ಸಿಗುತ್ತವೆ. ಅವುಗಳೆಂದರೆ ಸಾಮಂತ ಅರಸರುಗಳ ಪ್ರಾಬಲ್ಯ, ರಾಜಕೀಯ ಪ್ರೇರಿತ ನೂತನ ನೆಂಟಸ್ತಿಕೆಗಳು, ಬ್ರಾಹ್ಮಣರು- ಧಾರ್ಮಿಕ ಸಂಸ್ಥೆಗಳು ಅಧಿಕಾರ ವರ್ಗದವರಿಗೆ ಕೊಡಲಾಗುತ್ತಿದ್ದ ಭೂ ದಾನಗಳು, ಭೂ ಮಾಲಿಕ ಮಧ್ಯವರ್ತಿಗಳ ಹುಟ್ಟು, ಮಧ್ಯವರ್ತಿಗಳ ಸ್ವತಂತ್ರ್ಯ ಕಾರ್ಯನಿರ್ವಹಣೆ, ಉತ್ಪಾದಕ ವರ್ಗದ ಶೋಷಣೆ, ಬಲತ್ಕಾರದ ದುಡಿಮೆ ಮುಂತಾದವು (ಮೋಹನ ಕೃಷ್ಣ ರೈ, ೨೦೦೪, ಪು. ೩೮). ಎಲ್ಲಾ ರಾಜರುಗಳಿಗೂ ಸಾಮಂತರಿದ್ದುದರಿಂದ ಗ್ರಾಮ, ಹೋಬಳಿಯಂತಹ ಪ್ರವೇಶಗಳಲ್ಲಿ ರಾಜನ ಹೆಸರಿನಲ್ಲಿ ಸಾಮಂತರು ದಬ್ಬಾಳಿಕೆ ನಡೆಸುತ್ತಿದ್ದರು. ಇದು ವಿಕೇಂದ್ರೀಕೃತ ಊಳಿಗಮಾನ್ಯ ವ್ಯವಸ್ಥೆಯಾಗಿತ್ತು.

ಕರ್ನಾಟಕದಲ್ಲಿ ದಲಿತ ಮಹಿಳೆಯ ಮೇಲೆ ಊಳಿಗಮಾನ್ಯಶಾಹಿಯ ಪರಿಣಾಮ:

ಶಾತವಾಹನರ ಕಾಲದಲ್ಲಿ ವರ್ಣವ್ಯವಸ್ಥೆ ಮತ್ತು ವರ್ಗ ವ್ಯವಸ್ಥೆ ಜಾರಿಯಲ್ಲಿದ್ದರೂ ಅದು ಕಟ್ಟುನಿಟ್ಟಾಗಿ ಜಾರಿಯಲ್ಲಿರಲಿಲ್ಲ ಎಂದು ತಿಳಿಯಬಹುದು. ಯಾಕೆಂದರೆ ಗೌತಮಿ ಪುತ್ರ ಶಾತಕರ್ಣಿ ತನ್ನನ್ನು ವರ್ಣ ಸಂಕರವನ್ನು ಪಡೆದವನು ಎಂದು ಗುರುತಿಸಿಕೊಳ್ಳುತ್ತಾನೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರಿದ್ದುದನ್ನು ಗಮನಿಸಿದರೆ, ಇವರು ರಾಜನಿಂದ ಭೂ ದಾನಗಳನ್ನು ಪಡೆಯುವುದನ್ನು ಗಮನಿಸಿದರೆ ಕೆಳಜಾತಿ/ ಕೆಳವರ್ಗಗಳ ಸ್ಥಿತಿ ಉತ್ತಮ ರೀತಿಯಲ್ಲಿರಲಿಲ್ಲ ಎಂಬುವುದನ್ನು ತಿಳಿಯಬೇಕಾಗುತ್ತದೆ. ಕದಂಬರ ಕಾಲದಲ್ಲಿ ವರ್ಗ ಮತ್ತು ಜಾತಿಗಳು ಜಟಿಲತೆಯನ್ನು ಪಡೆದುಕೊಂಡವು. ಜನಸಾಮಾನ್ಯರನ್ನು ಇನ್ನಷ್ಟು ಶೋಷಣೆಗೆ ಒಳಪಡಿಸುತ್ತಿದ್ದವು. ಗಂಗರಸರನ್ನು ಚಾತುರ್ವರ್ಣಾಶ್ರಮ ರಕ್ಷಕರೆಂದು ಕರೆಯಲಾಗುತ್ತಿತ್ತು. ಇವೆಲ್ಲವೂ ಪ್ರತ್ಯಕ್ಷವಾಗಿ ದಲಿತ/ ದಲಿತ ಮಹಿಳೆಯರ ಮೇಲೆ ನಡೆದ ಶೋಷಣೆಯನ್ನು ತಿಳಿಸುವುದಿಲ್ಲ. ಅದನ್ನು ಪರೋಕ್ಷವಾಗಿ ತಿಳಿಸುತ್ತವೆ. ಚಾಲುಕ್ಯರ ಕಾಲದಿಂದ ವಿಜಯನಗರದ ಕಾಲದವರೆಗೂ ಪ್ರಭುತ್ವ ಬ್ರಾಹ್ಮಣರು ಸ್ಥಾಪಿಸಿದ ಮಠ ಮಾನ್ಯಗಳಡಿಯಲ್ಲಿಯೇ ದರ್ಬಾರು ಮಾಡಬೇಕಾಗಿದ್ದರಿಂದ ಪ್ರಭುತ್ವವೂ ಕೂಡ ಮಠ ಮಾನ್ಯಗಳ ಜೀತದಿಂದ (ನಿಯಮಾವಳಿಗಳನ್ನು ಪಾಲಿಸುವ) ಮುಕ್ತವಾಗಿರಲಿಲ್ಲ. ಅವರಿಗೆ ಸಾಕಷ್ಟು ಭೂದಾನ ಕೊಡುವುದರ ಮೂಲಕ ಅವರನ್ನು ತಮ್ಮ ಕಡೆ ಒಲಿಸಿಕೊಳ್ಳಲು ಪ್ರಯತ್ನ ಪಡುತ್ತಿದ್ದರು. ಕರ್ನಾಟಕದಲ್ಲಿ ಇಲ್ಲಿಯವರಿಗೆ ದಕ್ಕಿರುವ ಶಾಸನಗಳು ದಾನಶಾಸನಗಳೇ ಆಗಿವೆ. ಅಸ್ಪೃಶ್ಯರು ದಾನ ಕೊಡುವಷ್ಟು ಶ್ರೀಮಂತರಾಗಿರಲಿಲ್ಲ. ದಾನ ಪಡೆದುಕೊಳ್ಳುವುದಕ್ಕಂತೂ ಮೊದಲೇ ಅರ್ಹತೆ ಹೊಂದಿರಲಿಲ್ಲ.

"ಕಲ್ಯಾಣಿ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಮುನಿರಾಬಾದಿನ ಶಿಲಾಶಾಸನವೊಂದರಲ್ಲಿ, ಭೂಮಿಯನ್ನು ದಾನ ಕೊಡುವಾಗ ಅದರೊಡನೆ ಪುರುಷ ಮತ್ತು ಸ್ತ್ರೀ ಸೇವರಕರನ್ನು ಕೊಟ್ಟಿರುವುದಾಗಿ ಉಲ್ಲೇಖಿಸಲಾಗಿದೆ" (ಸಂ|| ಲಕ್ಷ್ಮಣ ತೆಲಗಾವಿ, ೧೯೯೧, ಪು. ೬೦೮).

"ದೇವಸ್ಥಾನಗಳಲ್ಲಿ ಕೆಲಸ ಮಾಡುತ್ತಿದ್ದ ದೇವಸೇವಕಿಯರು (ಸೂಳೆ ಸಮುದಾಯ) ಸೂಳೆದೆರೆ ಎನ್ನುವ ತೆರಿಗೆಯನ್ನು ಕೊಡಬೇಕಾಗಿತ್ತು. ಈ ತೆರಿಗೆಯನ್ನು ದೇವಾಲಯಗಳಿಗೆ ಬಿಟ್ಟು ಕೊಡಲಾಗುತ್ತಿತ್ತು. ಇದರಿಂದಾಗಿ ಇದೊಂದು ಆದಾಯವನ್ನು ತರುವ ವೃತ್ತಿಯಾಗಿತ್ತು ಎನ್ನುವುದು ತಿಳಿದು ಬರುತ್ತದೆ. ದೇವ ಸೇವಕಿಯರಿಗೆ ಮನೆ, ಭೂಮಿ, ದ್ರವ್ಯಗಳನ್ನು ದಾನವಾಗಿ ನೀಡಲಾಗುತ್ತಿತ್ತು. ಕ್ರಿ.ಶ ೮ ರಿಂದ ೧೪-ನೆಯ ಶತಮಾನಗಳ ಅವಧಿಯಲ್ಲಿ ಈ ರೀತಿಯಾದ ವಿವಿಧ ತೆರಿಗೆಗಳ ಉಲ್ಲೇಖಗಳು ಶಾಸನಗಳಲ್ಲಿ ಮತ್ತು ಸಾಹಿತ್ಯ ಕೃತಿಗಳಲ್ಲಿ ಅಪಾರ ಸಂಖ್ಯೆಯಲ್ಲಿ ಸಿಗುತ್ತವೆ. ಈ ತೆರಿಗೆಗಳು ಸಮಾಜದ ಎಲ್ಲಾ ವರ್ಗಗಳ ಮೇಲೂ ಹೇರಲ್ಪಟ್ಟಿದ್ದವು. ಆದರೆ ತೆರಿಗೆಗಳ ಸ್ವರೂಪ ಮತ್ತು ಪ್ರಮಾಣದಲ್ಲಿ ವ್ಯತ್ಯಾಸಗಳಿರುತ್ತಿದ್ದವು" (ಮೋಹನ ಕೃಷ್ಣ ರೈ, ೨೦೦೪, ಪು. ೨೫).

ಇವರ ಕಾಲದಲ್ಲಿ ವಿಧಿಸುತ್ತಿದ್ದ ತೆರಿಗೆಗಳಿಂದ ಅಂದು ರಾಜರು ಸಾಮಾನ್ಯ ಜನರನ್ನು ಯಾವ ರೀತಿ ಕಾಣುತ್ತಿದ್ದರು ಎಂಬುವುದನ್ನು ತಿಳಿಯಬಹುದು.

ಮನೆಯ ಮೇಲೆ ಹಾಕುತ್ತಿದ್ದ ತೆರಿಗೆ	- ಮನೆದೆರೆ
ಬಳಸುತ್ತಿದ್ದ ಉಪಕರಣಗಳ ಮೇಲಿನ ತೆರಿಗೆ	- ಅಡೆಕಲು ವಣ, ಅಚ್ಚಿನ ಕಮ್ಮಟದೆರೆ

ವೇಶ್ಯೆಯರ ಮೇಲಿನ ತೆರಿಗೆ	-	ಸೂಳೆದೆರೆ
ಸಾರ್ವಜನಿಕ ಕೆಲಸಗಳ ತೆರಿಗೆ	-	ಊರುಟ್ಟಿಗೆ
ಹಬ್ಬಕ್ಕೆಂದು ವಿಧಿಸುತ್ತಿದ್ದ ತೆರಿಗೆ	-	ಒಸಗೆ
ತಿಪ್ಪೆಗಳ ಮೇಲಿನ ಸುಂಕ	-	ತಿಪ್ಪೆಸುಂಕ
ದೈಹಿಕ ಶ್ರಮಕ್ಕೆ ವಿಧಿಸುತ್ತಿದ್ದ ತೆರಿಗೆ	-	ಬಿಟ್ಟಿ ಬೆಸ
ಪ್ರಾಣಿಗಳ ಮೇಲೆ ಸಾಮಾನು ಸಾಗಿಸುವುದರ ಮೇಲಿನ ತೆರಿಗೆ	-	ಬಿಲ್ಕೊಡೆ
ಮದುವೆಗಳ ಮೇಲಿನ ತೆರಿಗೆ	-	ಮದುವೆದೆರೆ
ಹೊಲೆಯರ ಮೇಲಿನ ತೆರಿಗೆ	-	ಹೊಲೆದೆರೆ
ರಾಣಿಯರು ಹಳ್ಳಿಗೆ ಬಂದಾಗ ಕೊಡಬೇಕಾದ ಕಾಣಿಕೆ	-	ದೇವಿದೆರೆ
ಯುವರಾಜನು ಊರಿಗೆ ಬಂದಾಗ ಕೊಡುವ ತೆರಿಗೆ	-	ಕುಮಾರ ಗದ್ಯಾಣ
ಹಿರಿಯ ಅಧಿಕಾರಗಳು ಊರಿಗೆ ಬಂದಾಗ ಕೊಡುವ ತೆರಿಗೆ	-	ಕಾಣಿಕೆ

ಆಡುಗಳ ಮೇಲಿನ ತೆರಿಗೆ (ಅದೇ ಪುಟ. ೨೬) ಕೊಡಬೇಕಾಗಿತ್ತು.

ಬಳ್ಳಾರಿಯ ಕುರುವತ್ತಿಯಲ್ಲಿ ದೊರೆತಿರುವ ಚಾಲುಕ್ಯರ ತ್ರಿಭುವನ ಮಲ್ಲದೇವನ ಕ್ರಿ.ಶ. ೧೦೯೯ ರ ಶಾಸನ ಹೀಗೆ ಹೇಳುತ್ತದೆ.

ಗ್ರಾಮದ ೨೦೦ ಮಹಾರಾಜನರು ಮತ್ತು ಗ್ರಾಮದ ಮುಖ್ಯಸ್ಥ ಕಾಳಿದಾಸನು ಲಕುಳೀಶ್ವರ ಪಂಡಿತರ ಸಮ್ಮುಖದಲ್ಲಿ ಅಭಿನವ - ಸೋಮೇಶ್ವರ ದೇವಸ್ಥಾನದಲ್ಲಿ ನಡೆಯುವ ಪೂಜೆ, ಉತ್ಸವ, ಧೂಪಗಳಿಗೆ ಮತ್ತು ತಪೋಧನರ ಊಟಕ್ಕೆ ಭೂಮಿ ಮತ್ತು ಗ್ರಾಮದಿಂದ ಹೊರಗೆ ಹೋಗುವ ಮತ್ತು ಒಳಗೆ ಬರುವ ಹುಲ್ಲು, ಸೌದೆ, ತರಕಾರಿ, ಹಣ್ಣು ಮತ್ತು ಹತ್ತಿಯ ಮೇಲೆ ವಿಧಿಸಿದ ತೆರಿಗೆ ಮತ್ತು ಹಣವನ್ನು ದಾನ ಮಾಡಿದ್ದನ್ನು ತಿಳಿಸುತ್ತದೆ. ಈ ಗ್ರಾಮವು ಸುರೇಶ್ವರ - ಪಂಡಿತನು ಆಳುತ್ತಿದ್ದ ಬೆಣ್ಣೆವೂರು ೧೨ ಕ್ಕೆ ಸೇರಿತ್ತು (ಆ್ಯನುವಲ್ ರಿಪೋರ್ಟ್ ಆನ್ ಎಫಿಗ್ರಫಿ). ಇವೆಲ್ಲವೂ ಜನಸಾಮಾನ್ಯರ/ದಲಿತರ ಮೇಲೆ ವಿಧಿಸುತ್ತಿದ್ದ ತೆರಿಗೆಗಳೇ ಆಗಿದ್ದವು ಎಂಬುವುದರಲ್ಲಿ ಸಂಶಯವಿಲ್ಲ. ಅತ್ಯಂತ ಕಡಿಮೆ ಆದಾಯ ಬರುವ ಎಲ್ಲಾ ಕೆಲಸಗಳಿಗೂ ತೆರಿಗೆಯನ್ನು ವಿಧಿಸುತ್ತಿದ್ದ ರಾಜರ ಮನಸ್ಥಿತಿ ಸಾಮಾನ್ಯರ ಜನ ಜೀವನ ಮೇಲೆ ಯಾವ ರೀತಿ ಇದ್ದಿತು ಎಂಬುವುದನ್ನು ಇದರ ಆಧಾರದ ಮೇಲೆ ಅವಲೋಕಿಸಿದರೆ ದಲಿತ ಮಹಿಳೆಯರ ಸ್ಥಿತಿ ತುಂಬಾ ಕಷ್ಟದಿಂದ ಕೂಡಿತ್ತು ಎಂಬುವುದು ತಿಳಿದು ಬರುತ್ತದೆ. ಈ ಸಂದರ್ಭದಲ್ಲಿ ಅನೇಕ ಪಂಗಡ, ಉಪ ಪಂಗಡಗಳು ಸಮಾಜದಲ್ಲಿ ಅಸ್ತಿತ್ವವೇ ಇಲ್ಲದ ರೀತಿಯಲ್ಲಿ ಬದುಕುತ್ತಿದ್ದವು. ಅಸ್ಪೃಶ್ಯರು ಎಂದು ಕರೆಯಿಸಿಕೊಂಡವರು ಸಮಾಜದಿಂದ ಬಹಿಷ್ಕೃತ ಗೊಂಡವರಂತೆ ಜೀವಿಸಬೇಕಾಗಿತ್ತು. ಅವರು ಹಳ್ಳಿಗಳಿಂದ ಮತ್ತು ಪಟ್ಟಣಗಳಿಂದ ಹೊರ ವಲಯಗಳಲ್ಲಿ ವಾಸಿಸಬೇಕಾಗಿತ್ತು. ಅಸ್ಪೃಶ್ಯರು ಊರಿನ ಹೊರಗಡೆ ಇರುತ್ತಿದ್ದರು ಎನ್ನುವ ಮಾಹಿತಿಯನ್ನು ನೀಡುವ ಕೆಲವು ಶಾಸನಗಳು ಲಭ್ಯವಿವೆ. ಕ್ರಿ.ಶ. ೧೧೨೫ ರ ಶಾಸನವೊಂದರಲ್ಲಿ 'ಪೊರಗೆ ಚಂಡಾಲಾಯಂ', ನೀರು ಸಾಗರಕ್ಕೆ ಹೋದ ಓಣಿಯಿಂದ ಪೊಡುವಲು ಹೊಲೇಗೇರಿಯಂ ಪೊಡು ಮುಖವಾಗಿ ಎನ್ನುವ ಮಾಹಿತಿ ಇದೆ (ಪೂರ್ವೋಕ್ತ, ಬಿ.ಕೆ.ಣ ೧-೨, ೨೦೧, ಕ್ರಿ.ಶ. ೧೧೨೫). ಶ್ರವಣ ಬೆಳಗೊಳ

ಮತ್ತು ಜಿನನಾಥಪುರ ಪಟ್ಟಣಗಳ ಹೊರವಲಯಗಳಲ್ಲಿ ಕೆಳಜಾತಿಯವರು ವಾಸಿಸುತ್ತಿದ್ದರು ಎನ್ನುವ ವಿವರವಾದ ಶಾಸನವೊಂದಿದೆ. ದಲಿತರ ಇವರ ವೃತ್ತಿಗಳನ್ನು ಮೇಲ್ ವರ್ಗಗಳೇ ನಿರ್ಧರಿಸುತ್ತಿದ್ದವು. ಊರ ಕಸವನ್ನು ಗುಡಿಸುವುದು, ಮರಣ ದಂಡನೆಗೆ ಒಳಗಾದವರನ್ನು, ಗಲ್ಲಿಗೇರಿಸುವುದು ಮುಂತಾದವು ಅಸ್ಪೃಶ್ಯರು ಮಾಡಬೇಕಾದ ಕೆಲಸಗಳಾಗಿದ್ದವು. ಅಸ್ಪೃಶ್ಯರನ್ನು ಪಶುಗಳಂತೆ ನೋಡಲಾಗುತ್ತಿತ್ತು. ಹೊಲಗಳಲ್ಲಿ ಕೆಲಸ ಮಾಡಲು ಇವರನ್ನು ಜೀತದಾಳುಗಳಾಗಿ ಮಾಡಿಕೊಳ್ಳಲಾಯಿತು. ಕೃಷಿಯಲ್ಲಿ ಹೆಚ್ಚಾಗಿ ದಲಿತ ಮಹಿಳೆಯರನ್ನು ಬಳಸಿಕೊಂಡು, ಅನಿವಾರ್ಯವಾದಾಗ ದಲಿತ ಪುರುಷರನ್ನು ಸೈನ್ಯದಲ್ಲಿ ಬಳಸಿಕೊಳ್ಳಲಾಗುತ್ತಿತ್ತು. ಇದು ಒಡೆಯನ ಒಡೆತನವನ್ನು ಇನ್ನಷ್ಟು ಗಟ್ಟಿಗೊಳಿಸಿತು. ತನಗೆ ಅನ್ನ ಹಾಕಿದ ಒಡೆಯನು ಮಡಿದರೆ ಇವರೂ ಕೂಡ ಮಡಿಯುತ್ತಿದ್ದರು. ಇದನ್ನು ವೇಳೆವಾಳಿ ಶಾಸನ ಶಿಲ್ಪಗಳು ಹೇಳುತ್ತವೆ.

'ವೇಳೆವಾಳಿ'ತನವು ಕೃತಜ್ಞತೆಯ ಪರಾಕಾಷ್ಠೆಯ ಆಚರಣೆ. ತಮಗೆ ಅನ್ನವಿಟ್ಟ ಒಡೆಯನು ಮಡಿದರೆ ತಾವೂ ಮಡಿಯುವುದಾಗಿ ಹಲವರು ಪ್ರತಿಜ್ಞೆ ಮಾಡಿಕೊಳ್ಳುತ್ತಿದ್ದರು. 'ಕಿಳ್ಗುಂಟೆ' ಎಂಬುವುದನ್ನು ಬೆಳವಡಿಚ ಮನೆಮಗತ್ತಿನ್ ಪ್ರೇಮಾಲಯ ಸುತನ್ ಕುಲಮುದ್ದ, ಮನೆಮುದ್ದ, ಪೊರೆದ ಮಗನ್ ಪ್ರಿಯಪುತ್ರ ಎಂದು ಕರೆಯುತ್ತಿದ್ದರು (ಡಾ. ಎಂ.ಎಂ. ಕಲಬುರ್ಗಿ, ೧೯೮೦, ಪು. ೧೩೮). ಈಗಲೂ ಬಳ್ಳಾರಿ ಜಿಲ್ಲೆಯಲ್ಲಿ ಗೌಡರ ಮನೆಗಳಲ್ಲಿ ಜೀತಕ್ಕಿರುವವರನ್ನು ಹಾಗೂ ಗೌಡರ ಮನೆಯಲ್ಲಿ ಸಾಂಪ್ರದಾಯಿಕ ವೃತ್ತಿ ಚಾಕರಿ ಮಾಡುವರನ್ನು 'ಮನೆಮಾದ್ರು' ಎಂದು ಕರೆಯುವುದನ್ನು ನೋಡಬಹುದು. ಇದರಿಂದಾಗಿಯೇ 'ವೇಳೆವಾಳಿ'ಯನ್ನು ದಲಿತ ಮಹಿಳೆ, ದಲಿತ ಪುರುಷರಿಬ್ಬರೂ ಮಾಡುತ್ತಿದ್ದರು ಎಂದು ಹೇಳಬಹುದಾಗಿದೆ. ಸಮುದಾಯದ ಕಲ್ಯಾಣಕ್ಕಾಗಿ, ಸತಿ ಮುಂತಾದ ಸ್ವೀಕೃತ ಮೌಲ್ಯಗಳನ್ನು ಇಟ್ಟುಕೊಂಡು ಕೆರೆಗೆ- ಕೋಟೆಗೆ ದಲಿತ ಮಹಿಳೆಯರನ್ನು ಬಲಿ ಕೊಡಲಾಗುತ್ತಿತ್ತು. ಊರಿನವರ ಉಪಯೋಗಕ್ಕಾಗಿ ಕೆರೆ ತೋಡಿಸುವುದು ಪುಣ್ಯಕಾರ್ಯವೆಂದು ನಂಬುತ್ತಿದ್ದ ಜನಪದರು ಊರಿಗೊಂದು ಕೆರೆಯನ್ನು ನಿರ್ಮಿಸುತ್ತಿದ್ದರು. ಯಾವುದೇ ಕಾರಣದಿಂದ ಅದರಲ್ಲಿ ನೀರು ಬಾರದೆ ಹೋದಲ್ಲಿ ಅಥವಾ ಕೆರೆಯ ಒಡ್ಡು ನಿಲ್ಲದೆ ಹೋದಾಗ ಬಲಿ ಕೊಟ್ಟರೆ ನೀರು ಬರುತ್ತದೆ, ಒಡ್ಡು ನಿಲ್ಲುತ್ತದೆ ಎನ್ನುವುದು ಅವರ ನಂಬಿಕೆ. ಇಂತಹ ನಂಬಿಕೆಗಳು ಆಚರಣೆಗಳಾಗಿ ಅದಕ್ಕೆ ಒಳಗಾದವರ ದುಗುಡ - ದುಮ್ಮಾನಗಳು ಹಾಡಾಗಿ ರೂಪುಗೊಂಡವು. ನಮ್ಮ ನಾಡಿನ ಹಲವು ಕಡೆಗಳಲ್ಲಿ ಇಂತಹ ಆಚರಣೆಯ ಕುರುವಾಗಿ ಕೆರೆಯ ದಡದಲ್ಲಿ ಇಂದಿಗೂ ಜಾತ್ರೆಗಳು ನಡೆಯುತ್ತಿವೆ.

ಇಂತಹ ಬಲಿ ಎಂಬುವುದು ಹಳೆಯದನ್ನು ಕಳೆದುಕೊಂಡು ಹೊಸದನ್ನು ಪಡೆಯುವುದೇ ಆಗಿದೆ. ಪ್ರೇಜರ್ ಈ ರೀತಿ ಹೇಳುತ್ತಾರೆ;

From his own sensections he conceives of life as an indestructiable kind of energy, which when is dis-appears in one form must necessarily reappeas in another, though in the new form it need not be immediately perceptible by us, in other words he in fers that death does not destroy the vital principal nor even the conscious personality, but merely trarsforms both of them in to other shapes which are not the less real becouse they commonly education the evidence of our senses (Frazer Sir James G, 1911-15 the Golden Bough, Vol 8, The spristes of the corn and the wild P-261-2).

ಪಾಪವನ್ನು ತೊಳೆಯುವ, ಕಳೆದುಕೊಳ್ಳುವ ಸಲುವಾಗಿ ಬಲಿದಾನ ನಡೆದುಕೊಂಡು ಬಂದಿರಬೇಕು ಎಂದು ಹೇಳುವುದು ಸರಿಯಲ್ಲ, ಇಲ್ಲಿ ಬಲಿಯಾಗುವವಳು, ಒಳಿತಿಗಾಗಿ ಪ್ರಾಣ ಅರ್ಪಿಸುವಳು. ಇಲ್ಲಿನ ಆಚರಣೆಗಳು ಲೌಕಿಕ ಬಲಿದಾನಗಳನ್ನು ನೆನಸಿಕೊಳ್ಳುತ್ತವೆ. ಇಲ್ಲಿ ಧರ್ಮವು ಪ್ರೇರಣೆ ನೀಡಿದರೂ, ಸಾಮಾಜಿಕ ಕಟ್ಟು, ಕಟ್ಟಳೆಗಳೇ ಮುಖ್ಯವಾಗುತ್ತವೆ. ಕೆರೆ, ಬಾವಿ, ಕೋಟೆಗಳಿಗೆ ಬಲಿ ಕೊಡುತ್ತಿರುವ ಕುರಿತು ಕಾವ್ಯಗಳಲ್ಲಿ ಊರಿನ ಹೆಸರು, ಪರಿಸರಗಳು ಬೇರೆ ಬೇರೆಯಾದರೂ ಒಟ್ಟಾರೆ ಘಟನೆಗಳಲ್ಲಿ ಭಿನ್ನತೆಯಿಲ್ಲ. ಕೆರೆಗೆ ಬಲಿಯಾಗುವುದರಲ್ಲಿ ನೀರು ಮಾಧ್ಯಮವಾದರೆ ಕೋಟೆಗೆ ಬಲಿಯಾಗುವಲ್ಲಿ ಕಲ್ಲು, ಮಣ್ಣು ಮಾಧ್ಯಮಗಳಾಗಿರುತ್ತವೆ.

ಕೆರೆಗೆ ಬಲಿಯಾದ ಕಥನ ಕಾವ್ಯಗಳಲ್ಲಿ `ಕೆರೆಗೆ ಹಾರ' ಕಥನ ತುಂಬಾ ಪ್ರಚಲಿತದಲ್ಲಿದೆ. ಮಲ್ಲನ ಗೌಡ ಕಟ್ಟಿಸಿದ ಕೆರೆಯಲ್ಲಿ ನೀರು ಬಾರದೇ ಇರುವುದರಿಂದ ಜೋತಿಷಿಗಳು ದೊಡ್ಡ ಸೊಸೆಯನ್ನು ಬಲಿ ಕೊಡಬೇಕೆಂದು ಕೇಳಿದಾಗ ಹಿರಿತನಕ ಯಾರಿಲ್ಲ ಎಂದು ದೊಡ್ಡ ಸೊಸೆಯನ್ನು ಬಲಿ ಕೊಡಲು ನಿರಾಕರಿಸುತ್ತಾನೆ. ಕಿರಿಯ ಸೊಸೆ ಬಾಗೀರಥಿಯನ್ನು ಬಲಿ ಕೊಡುತ್ತಾನೆ. ಹಿರೀ ಸೊಸೆಯೂ ಬೇರೆಯವರ ಮನೆಯಿಂದ ಬಂದವಳಲ್ಲವೇ ಅವಳಿಗೆ ಯಾಕೆ ಅಷ್ಟು ಪ್ರಾಮುಖ್ಯ ಕೊಡಲಾಯಿತು? ಹಿರಿಯ ಸೊಸೆ ಸತ್ತರೆ ತನ್ನ ಮಗ ವಿಧುರನಾಗುತ್ತಾನೆ ಎಂದು ಅವರಿಗೆ ಗೊತ್ತಿತ್ತು. ಕೊನೆಯ ಮಗ ವಿಧುರನಾದರೂ ಪರವಾಗಿಲ್ಲ ಎಂದು ನಿರ್ಧರಿಸಲು ಏನು ಕಾರಣ? ಈ ಎಲ್ಲಾ ಊಹೆಗಳು ಭಾಗೀರಥಿ ಮತ್ತು ಅವಳ ಗಂಡ ಮಾದೇವ ಗೌಡನ ಮನೆಗೆ ತೊತ್ತುಗಳಾಗಿ ಬಂದು ಅವರ ಮನೆ ಕೆಲಸ ಮಾಡಿಕೊಂಡಿದ್ದರು ಎಂಬುವುದನ್ನು ಹೇಳುತ್ತವೆ. ಆದ್ದರಿಂದಲೇ ಯಾವುದೇ ನಿರಾತಂಕವಿಲ್ಲದೇ ಅವಳನ್ನು ಬಲಿ ಕೊಡಲಾಯಿತು. ಬಲಿ ಹೋಗಲು ಇಷ್ಟವಿಲ್ಲದಿದ್ದರೂ ತನ್ನ ಒಡೆಯನ ಆಜ್ಞೆಯ ಮೇರೆಗೆ ಬಲಿ ಹೋಗಲೇಬೇಕಾಗುತ್ತದೆ. ಕಥನಗಳು ಕೆಲವು ವಿಷಯಗಳನ್ನು ಮರೆಮಾಡಿ ಹೇಳುತ್ತವೆ ಎಂಬುವುದನ್ನು ಗಮನಿಸಿ ಓದಬೇಕಾಗುತ್ತದೆ.

ಢಣಾಯಕನ ಕೆರೆ (ಬಳ್ಳಾರಿ) ತುಂಬಿ ಹರಿಯುತ್ತಾ ಅದು ನಿಲ್ಲುವ ಯಾವುದೇ ಸೂಚನೆಗಳು ಕಾಣಿಸದೇ ಇದ್ದರಿಂದ ಜೋಯಿಸರನ್ನು ಕೇಳಿ ತುಂಬು ಗರ್ಭಿಣಿಯಾದ ಕೆಂಚಮ್ಮನನ್ನು ಕೆರೆಗೆ ಹಾರವಾಗಿ ಕೊಡಲಾಯಿತು. ಇಂದಿಗೂ ಆ ಕೆರೆಯ ಏರಿಯ ಮೇಲೆ ಅವಳ ಗುಡಿ ಇದೆ. ಊರಿನ ಜನ ಅವಳ ಕಥೆಯನ್ನು ಹೇಳುತ್ತಾ ಸಾಧನೆ, ತ್ಯಾಗವನ್ನು ಹೇಳುತ್ತಾರೆ (ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ್ದು). ಇಲ್ಲಿಯೂ ಇವಳು ಮಾವನು ಎನಿಸಿಕೊಂಡವನಿಂದಲೇ ಮೋಸ ಹೋಗಿದ್ದಾಳೆ. ಕೆರೆಯಂತೆ ಕೋಟೆಯೂ ಮೊದಲು ಸೊಸೆಯನ್ನು ಬಲಿ ಕೇಳುವುದಿಲ್ಲ. ಕೋಟೆ ಕಟ್ಟಿಸಿದವನ ಕಿರು ಬೆರಳನ್ನು, ಅನಂತರ ಮಗ, ಆಮೇಲೆ ಮಗಳು, ಸೊಸೆಯ ಬಲಿ ಕೊನೆಯಲ್ಲಿ ಪಾವಿತ್ರ್ಯದಿಂದ ಕೂಡಿ ಆ ಊರಿನ ಹೆಣ್ಣು ಮಗಳು ಅಥವಾ ಗರ್ಭಿಣಿಯ ಬಲಿಯನ್ನು ಯಾಚಿಸುತ್ತದೆ. ಕೋಟೆಯ ನಿರ್ಮಾಣಕಾರ್ಯದಲ್ಲಿ ಹೀಗೆ ಅನೇಕ ಹೆಣ್ಣು ಮಕ್ಕಳ ಬಲಿ ನಡೆದು ಹೋಗಿದೆ. ಇಲ್ಲಿ ಪುರುಷ ಪ್ರಾಬಲ್ಯ ಊಳಿಗಮಾನ್ಯವು ಅಧೀನರನ್ನು ನಡೆಸಿಕೊಳ್ಳುವ ಮಾದರಿಯಾಗಿದೆ. ಬಲಿ ಹೋದವನ ಗಂಡ ಇದ್ದರೂ ಅವನು ಏನೂ ಮಾಡುವ ಹಾಗಿರಲಿಲ್ಲ. ಭಾಗೀರಥಿ ಕಥನದಲ್ಲೂ ಭಾಗೀರಥಿ ಹಾರವಾದಾಗ ಮಾದೇವ ಗೌಡನ ಮೇಲೆ ಯಾವುದೇ ರೀತಿಯ ಕಿರಿ ಕಿರಿಯನ್ನು ವ್ಯಕ್ತಪಡಿಸುವುದಿಲ್ಲ. ಹಾಗೇನಾದರೂ ಮಾಡಿದರೆ ನಾನು ಕೂಡ ಹಾರವಾಗುತ್ತೇನೆ ಎಂಬುವುದು ಅವನಿಗೆ ಗೊತ್ತಿತ್ತು. ಆ ಕಾರಣಕ್ಕಾಗಿಯೇ ಅವನು ಸತಿಯೊಂದಿಗೆ ಕೂಡಿಕೊಳ್ಳುತ್ತಾನೆ. ಇದು ಅವರ ಅಸಹಾಯಕತೆಯನ್ನು ತೋರಿಸುತ್ತದೆ. ಇದು ಪ್ರಭುತ್ವ ಇತಿಹಾಸದ ಉದ್ದಕ್ಕೂ ನಡೆದುಕೊಂಡು ಬಂದಿದೆ.

ಅತಿ ಹೆಚ್ಚಿನ ಬಲಿದಾನಗಳು ವಿಜಯನಗರ ಕಾಲದಲ್ಲಿ ನಡೆದಿದೆ. ಅದರಲ್ಲಿ ಮುಕ್ಕಾಲು ಮಹಾಸತಿಯನ್ನು ಕುರಿತವುಗಳೇ ಆಗಿವೆ.

ವಿಜಯನಗರ ರಾಜಧಾನಿಯಲ್ಲಿ ಅಸ್ಪೃಶ್ಯರೆಂದು ಕರೆಸಿಕೊಳ್ಳುತ್ತಿದ್ದ ಜನರ ಬದುಕು ಶೋಚನೀಯವಾಗಿದ್ದಿತು. ಹೊಲೆಯ ಮಾದಿಗರು ರಾಜಧಾನಿಯಿಂದ ಬಹು ದೂರ ವಾಸಿಸುತ್ತಿದ್ದರು. ಇವರು ಪ್ರತಿದಿನವು ರಾಜಧಾನಿಗೆ ನಿಗದಿತ ಸಮಯದಲ್ಲಿ ಬಂದು ಅಲ್ಲಿನ ಬೀದಿ, ಬಚ್ಚಲು ಇನ್ನಿತರ ಕೊಳಕಾಗಿದ್ದ ಪ್ರದೇಶಗಳನ್ನು ಸ್ವಚ್ಛಗೊಳಿಸಬೇಕಾಗಿತ್ತು. ಅದಕ್ಕೆ ತಪ್ಪಿದರೆ ಘೋರ ಶಿಕ್ಷೆಗೆ ಒಳಗಾಗಬೇಕಿತ್ತು. ಇವರು ರಾಜಧಾನಿಯನ್ನು ಪ್ರವೇಶಿಸಬೇಕಾದರೆ ಅನುಸರಿಸಬೇಕಾಗಿದ್ದ ಆಚರಣೆಗಳು ನಿಜಕ್ಕೂ ಅಮಾನುಷವಾಗಿದ್ದವು. ದಲಿತ ಮಹಿಳೆಯರ ಸ್ಥಿತಿ ಶೋಚನೀಯವಾಗಿತ್ತು. ದಲಿತ ಮಹಿಳೆಯರು ಆರೋಗ್ಯ ಹೀನರಾಗಿದ್ದರು ಎಂದು ಬಾರ್ಬೋಸ ತನ್ನ ಬರವಣಿಗೆಯಲ್ಲಿ ಹೇಳಿದ್ದಾನೆ.

ಹುಟ್ಟಾಳು, ಹೊಲೆಮಗ, ಮನೆಮಗತಿನ್ ಮುಂತಾದ ಶಬ್ದಗಳು ದಲಿತರ ಸೇವಕ ಪ್ರವೃತ್ತಿಯ ಸಂಕೇತಗಳು ಇವರೆಲ್ಲ ಇದೇ ಜೀವನವನ್ನೇ ಮಾಲೀಕರ ಅಧೀನದಲ್ಲಿ ಕಳೆಯಬೇಕಾಗಿತ್ತು. ಅವರಿಗೆ ಜನಸಾಮಾನ್ಯರ ಬದುಕಿಗಿಂತ ತನ್ನ ಸ್ವಾರ್ಥಕ್ಕೆ ದಲಿತರ ಜೀವನವನ್ನೇ ಬಲಿ ತೆಗೆದುಕೊಳ್ಳುತ್ತಿದ್ದರು. ಜೀವನ ನಿರ್ವಹಣೆಗೆ ಅನಿವಾರ್ಯವಾಗಿ ಮಾಲೀಕರ ಹೊಲಗಳಲ್ಲಿ ಕೆಲಸ ಮಾಡಬೇಕಾಗಿತ್ತು. ಮಾಲೀಕರು ಇವರನ್ನು ಜಮೀನು ಮಾರುವ ಸಂದರ್ಭದಲ್ಲಿ ಅಥವಾ ತನಗೆ ಬೇಕಿಲ್ಲದಿರುವಾಗ ಇನ್ನೊಬ್ಬರಿಗೆ ದೊರೆಯಬಹುದಿತ್ತು. ಅಂದರೆ ಇವರನ್ನು ಪಶುಗಳಂತೆ ಮಾರಾಟ ಮಾಡುತ್ತಿದ್ದರು. ವಿಜಯನಗರ ಕಾಲದಲ್ಲಿ ಗುಲಾಮ ಪದ್ಧತಿ ತಾಂಡವ ವಾಡುತ್ತಿತ್ತು. ಎಂಬುವುದಕ್ಕೆ ವಿದೇಶಿ ಪ್ರವಾಸಿಗರ ಬರವಣಿಗೆಗಳು ಪುಷ್ಠಿ ನೀಡುತ್ತವೆ. ಬಹುಪಾಲು ಈ ವ್ಯವಸ್ಥೆ ನಗರ ಕೇಂದ್ರಿತ ಪ್ರದೇಶದಲ್ಲಿ ಹೆಚ್ಚು ಚಾಲ್ತಿಯಲ್ಲಿತ್ತು ಎಂಬುವುದನ್ನು ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ರೈತರು ಕ್ರಮೇಣ ಭೂಮಿಯೊಂದಿಗೆ ಸಂಪರ್ಕ ಸಾಧಿಸಿದ್ದರಿಂದ ಸಹಜವಾಗಿ ಒಡೆಯರ ಆಳುಗಳಾಗಿ ಪರಿವರ್ತನೆ ಸಂಪರ್ಕ ಸಾಧಿಸಿದ್ದರಿಂದ ಸಹಜವಾಗಿ ಒಡೆಯರ ಆಳುಗಳಾಗಿ ಪರಿವರ್ತನೆಗೊಂಡರು. ಅಬ್ದುಲ್ ರಜಾಕ್ ಮತ್ತು ನಿಕೊಲೊ ಕೊಂಟಿ ಇವನ್ನು ಖಚಿತ ಪಡಿಸುತ್ತಾರೆ. ಕ್ರಿ.ಶ. ೧೪೭೦ ಶಾಸನವು ತಿಳಿಯಪಡಿಸುವಂತೆ ಬೀದರ್‌ನಲ್ಲಿ ಕಪ್ಪು ಜನರನ್ನು ಗುಲಾಮರಂತೆ ಮಾರಾಟ ಮಾಡುತ್ತಿದ್ದರು ಎಂಬುವುದರ ಬಗ್ಗೆ ಗಮನ ಸೆಳೆಯುತ್ತದೆ. ಈ ಗುಲಾಮರಲ್ಲಿ ಸ್ತ್ರೀ ಜೀತದಾಳುಗಳು ಸಹ ಸೇರಿದ್ದರು. ಹಾಗೆಯೇ ಹೊಲೆಯರು ಮೇಲ್ಜಾತಿಗಳ ಮಾಲೀಕರ ಸೇವಕರಾಗಿದ್ದರೆಂಬುವುದನ್ನು ಗಮನಿಸಬಹುದಾಗಿದೆ.

ವಿಜಯನಗರ ಕಾಲದಲ್ಲಿ 'ದೇವದಾಸಿ' ಪದ್ಧತಿಗೆ ರಾಜಕೀಯ ಸಾಮಾಜಿಕ ಮುದ್ರೆ ಬಿದ್ದಿದ್ದರಿಂದ ಎಲ್ಲಾ ವೃತ್ತಿಗಿಂತಲೂ ಇದು ಸ್ವಾಭಾವಿಕ ವೃತ್ತಿಯಾಗಿ ಬೆಳೆದು ಬಂತು. ದೇವದಾಸಿ ಪದ್ಧತಿ ಮೇಲ್ವರ್ಗ, ಮೇಲ್ಜಾತಿಗಳಷ್ಟೇ ಅಲ್ಲದೆ ಕೆಳವರ್ಗದವರಲ್ಲಿ 'ಬಸವಿ' 'ಲೇಸಿ'ಯಾಗಿ ಬೆಳೆದು ಬಂದಿತು. ಯುದ್ಧದ ಸಂದರ್ಭದಲ್ಲಿ ಸೈನಿಕರನ್ನು ಸೆಳೆಯುವ ಸಲುವಾಗಿ 'ಬಸವಿ'ಯರ ಸಂಖ್ಯೆಯನ್ನು ಹೆಚ್ಚಿಸಲಾಗುತ್ತಿತ್ತು. ವಿಜಯನಗರದ ರಾಜಧಾನಿ ವಿದ್ಯಾರಣ್ಯದಲ್ಲಿದ್ದ ಪ್ರಸಿದ್ಧ ಪೇಟೆಗಳಲ್ಲಿ ಅಚ್ಯುತಪೇಟೆಯೂ ಒಂದು ಅದನ್ನು ಸೂಳೆ ಬಜಾರ್ ಎಂದು ಕರೆಯಲಾಗುತ್ತದೆ. ಇಲ್ಲಿ ಮೇಲ್ಜಾತಿಯಾಗಿ ಮಧ್ಯಮ ಜಾತಿಯ ವೇಶ್ಯೆಯರು ಮಾತ್ರ ಇರುತ್ತಿದ್ದರು. ಅಸ್ಪೃಶ್ಯ ಮಹಿಳೆ ರಾಜಧಾನಿಯ ಒಳಗೆ ಬರಲು ಅನುಮತಿ ಇಲ್ಲದ ಕಾರಣ ಅವಳು ರಾಜಧಾನಿಯ ಹೊರಗೆ ಇದ್ದಳು. ಸೂಳೆ ಬಜಾರ್‌ಗೆ ಸಂಬಂಧಿಸಿದಂತೆ ಸಮಕಾಲೀನ ಕವಿಗಳು ವೇಶ್ಯೆಯನ್ನು

ಸುಳ್ಳಿನಂಗಡಿ, ಕಪಟ ಮೋಸ ಮಾಡುವ ಸ್ಥಳ ಎಂದು ಹೇಳಿದ್ದಾರೆ. ಅಂದು ವೇಶ್ಯೆಯರ ಸಹವಾಸ ಮಾಡಿದವರ ಬದುಕನ್ನು ಸೂಚಿಸುವ ಜಾನಪದ ಹಾಡುಗಳು ನಿಜಕ್ಕೂ ಇಂದಿಗೂ ಸಹ ಮನುಷ್ಯನ ಬದುಕಿಗೆ ನಿದರ್ಶನ:

ತುಂಬಿಟ್ಟು ಗುಪ್ಪುಂಟೆ ತವರಿಗೆ ಮುಪ್ಪುಂಟೆ
ದೊಂಬನಾ ಮನೆಗೆ ಕದವುಂಟೆ ಅಣ್ಣಯ್ಯ
ಸೂಳೇಯ ನಂಬಿದವಗುಂಟೆ ಸಂಸಾರ (ಚಿನ್ನಸ್ವಾಮಿ ಸೋಸಲೆ, ೨೦೦೫, ಪು. ೭೦).

ಎಂದು ಸೂಳೆಯ ಸಹವಾಸ ಸರಿಯಲ್ಲ ಎಂದು ಹೇಳುತ್ತಿರುವುದನ್ನು ನೋಡಿದರೆ ಅಂದಿನ ಸಂದರ್ಭದಲ್ಲಿ ಸೂಳೆಯರಿಗೆ ಇದ್ದ ಸ್ಥಾನಮಾನ ಅರ್ಥವಾಗುತ್ತದೆ. ಮೇಲ್ಜಾತಿ ಸೂಳೆಯ ಸ್ಥಿತಿಯೇ ಹೀಗಿರಬೇಕಾದರೆ ಇನ್ನು ಕೆಳಜಾತಿ ಮಹಿಳೆಯರ ಸ್ಥಿತಿಯನ್ನು ಊಹಿಸಬಹುದಲ್ಲವೇ? ೧೫೦೫ರ ಶಾಸನ ಹಾಗೂ ೧೪೬೦ ರ ಶಾಸನಗಳು ವಿಜಯನಗರದ ಹೊರಗೆ ಇದ್ದ ಹೊಲೇರ ಹಟ್ಟಿ, ಮಾದಿಗರ ಹಟ್ಟಿ, ಕೇರಿಗಳ ಮೇಲೆ ಅವರು ಮಾಡುತ್ತಿದ್ದ ಎಲ್ಲಾ ಕೆಲಸಗಳ ಮೇಲೂ ತೆರಿಗೆ ವಿಧಿಸಿದ ಬಗ್ಗೆ ಬೆಳಕು ಚೆಲ್ಲುತ್ತವೆ.

ವಿಜಯನಗರದ ಕಾಲದಲ್ಲಿ ದೇವದಾಸಿಯಾದವರಿಗೆ ಶಂಖ ಹಾಗೂ ಚಕ್ರದ ಮುದ್ರೆಯನ್ನು ಕಾಯಿಸಿ ಗುರುತಿಗಾಗಿ ಹಾಕಲಾಗುತ್ತಿತ್ತು. ಇದು ಸಂಪ್ರದಾಯವಾಗಿ ಬೆಳೆದು ಬಂದಿತ್ತು. ಶಂಖ ಚಕ್ರ ವಿಷ್ಣುವಿನ ಆಯುಧಗಳಾಗಿದ್ದು, ವೈಷ್ಣವ ಬ್ರಾಹ್ಮಣರೇ ಇದನ್ನು ಜಾರಿಗೊಳಿಸಿರುತ್ತಾರೆ ಎಂಬುವುದಕ್ಕೆ ಇವೇ ಬಹಳ ಮುಖ್ಯ ಆಧಾರಗಳಾಗಿ ನಿಲ್ಲುತ್ತವೆ. ಮೇಲ್ಜಾತಿಗಳಲ್ಲಿ ವೈಷ್ಣವ ದೇವರುಗಳಿಗೆ ಮಹಿಳೆಯರನ್ನು ದೇವದಾಸಿಯಾಗಿ ಬಿಡಲಾಗುತ್ತಿತ್ತು. ಆದರೆ ಕೆಳಜಾತಿಯ ಮಹಿಳೆಯರನ್ನು ವೈಷ್ಣವ ದೇವಾಲಯಗಳಿಗೆ ದೇವದಾಸಿಯಾಗಿ ಬಿಡುತ್ತಿರಲಿಲ್ಲ ಎಂಬುವುದನ್ನು ಗಮನಿಸಬೇಕು. ಇವರು ಕೇವಲ 'ಬಸವಿ', 'ಲೇಸಿ'ಯರು ಮಾತ್ರ. ಇವರು ಸಮಾಜ ಸೂಳೆಯರು. ಇವರನ್ನು ವ್ಯವಸ್ಥೆ ತುಂಬಾ ಕೆಟ್ಟದಾಗಿ ನಡೆಸಿಕೊಳ್ಳುತ್ತಿತ್ತು. ಇದರ ಎಲ್ಲಾ ನೋವುಗಳನ್ನುಂಡ ದಲಿತ ಮಹಿಳೆಯರಿಗೆ ಆಂಜನೇಯನ ದೇವಾಲಯದಲ್ಲಿ ಮುತ್ತನ್ನು ಯಾಕೆ ಕಟ್ಟಿಸುತ್ತಿದ್ದರು? ಆಂಜನೇಯನಿಗೂ- ದಲಿತ ಮಹಿಳೆಯರಿಗೂ ಇರುವ ಸಂಬಂಧವೇನು? ಎಂಬ ಕುತೂಹಲ ಬರದೇ ಇರದು. ಜನಪದ ಸಾಹಿತ್ಯದಲ್ಲಿನ ಆಧಾರದ ಮೂಲಕ ನೋಡುವುದಾದರೆ;

ಕರಿಯ ಬಂಡೆಯ ಮ್ಯಾಲೆ ಮದರಂಗ ಹೊಯ್ದಾನೆ
ಹರಿಯ ನಾಮದ ಹನುಮಣ್ಣ- ಲಂಕೆಯ
ಉರಿಸಿ ಬಂದೂರ ಒರಗ್ಯಾನೋ
ಕ್ಯಾಡಂಗ ನಿವನೆಂದು ಕೇಡು ನುಡಿಯಲೀ ಬೇಡಿ
ನೋಡಿರೆನವ್ವ ಅವನ ಸಾಹಸ- ಹಂಪಿಯ
ಕ್ಯಾಟೀಯ ಕಿತ್ತು ಉರಿದಾನೋ
ಇದು ಮಂಗನೆಂದು ಕುಂದು ನುಡಿಯಲೀ ಬೇಡಿ
ನೋಡಿರೆನವ್ವ ಅವನ ಸಾಹಸ ಹಂಪಿಯ
ಗುಡಿಯನ್ನೇ ಕಿತ್ತು ವೊಗೆದಾನು (ಡಾ. ಚಲುವರಾಜು, ೧೯೯೭, ಪು. ೪೧).

ದಲಿತ ಮಹಿಳೆಯರಿಗೆ ಹನುಮಂತನೇ ಹರಿ. ಲಂಕೆಯನ್ನು ಸುಟ್ಟು, ಸೀತೆಯನ್ನು ಕಾಪಾಡಿದ ಹನುಮಂತ ನಮ್ಮನ್ನೂ ಕೂಡ ಕಾಪಾಡುತ್ತಾನೆ ಎಂಬ ಆಶಯ ಈ ಮಹಿಳೆಯರಲ್ಲಿದೆ. ತಮ್ಮ ಈ ದುಃಸ್ಥಿತಿಗೆ ಕಾರಣವಾದ ಹಂಪಿ ಸಾಮ್ರಾಜ್ಯವನ್ನು ಶಪಿಸುತ್ತಾ ಹಂಪಿಯ ಕ್ವಾಟೀಯ ಕಿತ್ತು ಉರಿದಾನೋ, ಹಂಪಿಯ ಗುಡಿಯನ್ನೇ ಕಿತ್ತು ಒಗೆದಾನೋ... ಎಂದು ಹೇಳುವಲ್ಲಿ ಹನುಮಂತ ಹಂಪಿಯನ್ನು ನಾಶ ಮಾಡಿದ ಎಂಬ ಕನಸು ಕಾಣುತ್ತಾರೆ. ಇದು ಅವರ ಆಶಯ. ಪ್ರಭುತ್ವದ ವಿರುದ್ಧ ತಿರುಗಿ ಬೀಳದ ದುರ್ಬಲರಿಗೆ ಉಳಿದಿರುವುದು ಒಂದೇ ಆಶಯಗಳ ಮೂಲಕ ಕನಸು ಕಟ್ಟುವುದು, ಅದನ್ನು ಹಾಡಾಗಿಸುವುದು- ಈ ಮೂಲಕ ಯೋಚಿಸುವುದಾದರೆ ಈ ಕಾರಣಕ್ಕಾಗಿಯೇ ದಲಿತ ಮಹಿಳೆಯರು ಮುತ್ತನ್ನು ಆಂಜನೇಯನ ದೇವಸ್ಥಾನದಲ್ಲಿ ಕಟ್ಟಿಸಿಕೊಳ್ಳುತ್ತಿದ್ದಿರಬೇಕು. ಹಂಪಿಯ ಪರಿಸರದಲ್ಲಿ ಯಥೇಚ್ಛವಾಗಿ ಆಂಜನೇಯನ ವಿಗ್ರಹಗಳು, ಗುಡಿಗಳು ಕಾಣ ಸಿಗುವುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದಲ್ಲವೇ? ಸಮುದಾಯ ಯಾವಾಗಲೂ ವ್ಯವಸ್ಥೆಯ ವಿರುದ್ಧ ತಿರುಗಿ ಬಿದ್ದವರ ಪರವಾಗಿಯೇ ಇರುತ್ತದೆ. ಇದನ್ನು ಗ್ರಾಮದೇವತೆಗಳ ಹಿನ್ನೆಲೆಯಲ್ಲಿ ನೋಡುವುದು ಬಹುಮುಖ್ಯವಾಗುತ್ತದೆ. ಈಗಲೂ ನಾಯಕ ಜಾತಿಗೆ ಸೇರಿದವರು ಗುಪ್ತವಾಗಿ ಆಂಜನೇಯನ ದೇವಸ್ಥಾನದಲ್ಲಿಯೇ ಮುತ್ತನ್ನು ಕಟ್ಟಿಸುತ್ತಾರೆ. ಗಂಡು ಮಕ್ಕಳಿಗೆ ಮುದ್ರೆ ಒತ್ತಿಸುವುದೇ ಆಂಜನೇಯನ ಗುಡಿಯಲ್ಲಿ. ಇನ್ನುಳಿದಂತೆ ಗ್ರಾಮದೇವತೆಗಳ ಗುಡಿಗಳಲ್ಲಿಯೂ ಮುತ್ತು ಕಟ್ಟಿಸುತ್ತಾರೆ.

ವಿಜಯನಗರ ಕಾಲದಲ್ಲಿ ಜಾತಿ ಜಾತಿಗಳ ನಡುವೆ ನಡೆಯುತ್ತಿದ್ದ ದಬ್ಬಾಳಿಕೆ, ಹಲ್ಲೆ, ಹಿಂಸೆಯನ್ನು ಅರಿಯಲು ದಾಸರ ಕೀರ್ತನೆಗಳು, ಸರ್ವಜ್ಞನ ವಚನಗಳು ಸಹಾಯಕವಾಗುತ್ತವೆ.

ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯನೇನಾದರೂ ಬಲ್ಲಿರಾ|

ಇದು ಜಾತಿ ಜಾತಿಗಳ ನಡುವೆ ಘರ್ಷಣೆಗಳು ನಡೆಯುತ್ತಿದ್ದುದನ್ನು ಸೂಚಿಸುತ್ತದೆ.

ನಾನು ನೀನು ಎನ್ನದಿರೊ ಹೀನ ಮಾನವ
ಜ್ಞಾನದಿಂದ ನಿನ್ನ ನೀನೆ ತಿಳಿದು ನೋಡಲೊ
ಹೊನ್ನು, ಹೆಣ್ಣು, ಮಣ್ಣು ಮೂರು ನಿನ್ನದೇನಲೊ
ಅನ್ನದಿಂದ ಬಂದ ಕಾಮ ನಿನ್ನದೇನಲೊ
ಕರ್ಣದಿಂದ ಬಂದ ಘೋಷ ನಿನ್ನದೇನಲೊ

ರಾಜ್ಯಾಧಿಕಾರಕ್ಕಾಗಿ, ಭೂಮಿ, ಹೆಣ್ಣಿನ ವಿಷಯದಲ್ಲಿ ಪುರುಷ ಸಮರ್ಥನಾಗಿ ನಡೆದುಕೊಳ್ಳುತ್ತಿದ್ದುದರಿಂದ ಉನ್ನತ ಜಾತಿಯವರಿಗೆ ಸೂಕ್ಷ್ಮವಾಗಿ ಹೇಳಿದ್ದಾರೆ. ಕನಕದಾಸರು ತಮ್ಮ ರಾಮಧ್ಯಾನ ಚರಿತೆಯ ರಾಗಿ ಮತ್ತು ಭತ್ತದ ಪಾತ್ರಗಳು ಅಸ್ಪೃಶ್ಯ ಮತ್ತು ಸ್ಪೃಶ್ಯರ ನಡುವೆ ನಡೆದ ಘರ್ಷಣೆಯ ಕುರಿತು ತಿಳಿಸುತ್ತವೆ. ರಾಗಿ ಕೀಳೆಂದು ಗುರುತಿಸುವ ಪ್ರಭುತ್ವದ ನೀಚತನವನ್ನು ಬಯಲಿಗೆಳೆಯುತ್ತಾರೆ.

ಅಲ್ಲಾಖುದಾ ಎಂಬ ಅರ್ಥವನು ಅರಿಯದೆ
ಮುಲ್ಲಾ ಶಾಸ್ತ್ರದ ನೆಲೆಯ ಮುನ್ನರಿಯದೆ
ಕಳ್ಳ ಕೂಗನೆ ಕೂಗಿ ಬೊಗಳಿ ಬಾಯ್ದೆರೆವಂತ
ಕಳ್ಳಂಗೆ ತಾ ವೀರ ಸ್ವರ್ಗ ದೊರಕುವುದೆ

ಎಂಬುವುದರಲ್ಲಿ ಎಲ್ಲ ಧರ್ಮಗಳವರೂ ನಡೆದುಕೊಳ್ಳುತ್ತಿದ್ದ ದಬ್ಬಾಳಿಕೆಯ ಪರಿಯನ್ನು ಗಮನಿಸಬಹುದು. ಇದು ಕೊನೆಗೆ ಹೋಗಿ ತಲುಪುತ್ತಿದ್ದುದು ಜನಸಾಮಾನ್ಯರ ಮಹಿಳೆಯ ಮೇಲೆಯೇ.

ವಿಜಯನಗರದ ದಲಿತ ಮಹಿಳೆಯ ಸ್ಥಿತಿಗತಿಯನ್ನು ತಿಳಿಯಲು ಜನಪದ ಗೀತೆಗಳು ನಮಗೆ ತುಂಬಾ ಉಪಯುಕ್ತವಾಗುತ್ತವೆ.

ಅಕ್ಕ ಹಂಪಮ್ಮನ ಬಾಜರದಾಗ
ಕೋಲು ಕೋಲಣ್ಣ ಕೋಲೇ
ಪಕ್ಕಾನೆ ಆರ್‍ಯಾವೇ ಗಗನಕೆ ರನ್ನಾದ
ಕೋಲು ಕೋಲಣ್ಣ ಕೋಲೇ||
ಎಂಡಾನೇ ಕುಡಿಯೋರು
ಕಂಡಾನೇ ತಿನ್ನೋರು
ಕೋಲು ಕೋಲಣ್ಣ ಕೋಲೇ
ಬಂದೊಮ್ಮೆ ಕಿನ್ನಾರ ನುಡಿಸೋದು ರನ್ನದ
ಕೋಲು ಕೋಲಣ್ಣ ಕೋಲೇ||
ಬಂದೊಮ್ಮೆ ಕಿನ್ನಾರ ನುಡಿಸೋರು ಶರಣಾರು
ಕೋಲು ಕೋಲಣ್ಣ ಕೋಲೇ
ಆ ಇದ್ದು ಆರು ಹಂಪಿ ಸ್ಥಲದಲ್ಲಿ ರನ್ನಾದ
ಕೋಲು ಕೋಲಣ್ಣ ಕೋಲೇ||
ಕಟ್ಟು ಬಳ್ಳಿನಾಕಿ ಕಟ್ಯಾರು ಆದರವನ
ಕೋಲು ಕೋಲಣ್ಣ ಕೋಲೇ
ಆ ಇಟ್ಯಾರು ಮಾತಂಗಿಯ ಬಯಲಿಗಿ
ಕೋಲು ಕೋಲಣ್ಣ ಕೋಲೇ||
ಆ ಇಟ್ಯಾರು ಮಾತಗನ ಬಯಲಿಗಿ ಹಂಪಮ್ಮನ
ಕೋಲು ಕೋಲಣ್ಣ ಕೋಲೆ
ಆ ಕೊಟ್ಟು ಆಳೋತಾರಣ್ಣ ಅರಸರಿಗೆ ರನ್ನಾದ
ಕೋಲು ಕೋಲಣ್ಣ ಕೋಲೇ|| (ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ್ದು)

ಕೆಳಜಾತಿಯವರನ್ನು ಮೇಲ್ಜಾತಿಯವರು ನೋಡಿದ ತಕ್ಷಣ ಪಕ್ಕಕ್ಕೆ ಹಾರಿ ಹೋಗುತ್ತಿದ್ದರು. ಯಾಕೆಂದರೆ ಅವರು ಹೆಂಡ, ಮಾಂಸ ತಿನ್ನುವ ನೀಚರೆಂದು ಮೇಲ್ಜಾತಿಗಳು ಬಾವಿಸಿದ್ದರು. ವಿಜಯನಗರ ಕಾಲಕ್ಕಾಗಲೇ ಶಂಕರಾಚಾರ್ಯ, ಮಧ್ವಾಚಾರ್ಯರ ಉಪದೇಶಗಳು ವಿಸ್ತರಿಸಿದ್ದವು. ಗೋ ಭಕ್ಷಣೆಯನ್ನು ಕೂಡ,

ನಿಷೇಧಿಸಲಾಗಿತ್ತು. ಬ್ರಾಹ್ಮಣರೇ ಹೆಚ್ಚಾಗಿ ಇದ್ದ ಹಂಪಿಯ ಕ್ಷೇತ್ರದಲ್ಲಿ ಅಸ್ಪೃಶ್ಯರನ್ನು ಮಾತಂಗಿಯನ್ನು ಬಯಲಿಗಿಟ್ಟು ಹಿಂಸಿಸಲಾಗುತ್ತಿತ್ತು. ಹೀಗೆ ಕೊಟ್ಟ ಹಾಗೆಯೇ ಮಾಡಿ ಆಳುವ ಅರಸರಿಗೆ ಏನೆನ್ನಬೇಕು ಎಂದು ಜನಪದರು ಹಂಪಿಯ ಗ್ರಾಮ ದೇವತೆ ಹಂಪಮ್ಮನನ್ನು ಪ್ರಾರ್ಥಿಸುತ್ತಾರೆ.

'ದೇವಿ ತೊತ್ತಾಗಿ ಕಾದಳಯ್ಯೋ
ರೊಕ್ಕ ಇಲ್ಲದ ನಾವು ಬಡವರು ಹೋದರ
ಬಚ್ಚಿಟ್ಟು ಗಂಬರಯ್ಯೋ||
ಉಣ್ಣಾರ ಇದಾರ ಮನಿಗೆ ಆ ಲಕ್ಷ್ಮಿದೇವಿ
ತಣ್ಣಾಗಿ ಕಾದಳಯ್ಯೋ
ಉಣ್ಣಾ ಇಲ್ಲದ ನಾವು ಬಡವರೇ ಹೋದಾರ
ಮಣ್ಣು ಈಸಿಗೆಂಬರಯ್ಯೋ||
ರೊಟ್ಟಿ ಗುಗ್ಗರಿ ಬೇಳೆ ಮಕ್ಕಳಾ ಬಿಟ್ಟು ಕಚ್ಚುತಾರೆಯೋ
ಮಕ್ಕಳ ಗೋಳಾಟ ನೋಡಲಾರೆನೆ ಶಿವನೆ
ಗಕ್ಕಾನೇ ಮಳಿ ಕರಿಣಿಸು||
ಗಂಡ ಹೆಂಡಿರು ಕೂಡಿ ಗಾಣಿಗರ ಮನೆಯ್ಯಾಗ
ಇಂಗು ಹುಂಡಿ ಕದ್ದರಯ್ಯೋ
ಬಂಡಾಟ ಎದ್ದೇತು ಬಪ್ಪುದು ಮಳೆರಾಯ
ಹೆಂಡೆತ್ತಿ ಬರಬಾರದು||
ಬಂಡಾಟ ಹತ್ತೀತು ಬಪ್ಪರೀ ಮಳೆರಾಯ
ದಂಡೆದ್ದು ಬರಬಾರದು||
ತಾಳಿ, ಮೂಗುತಿ ಮಾರಿ ಬಡವಾರು ಬಾಳೇವು ಎಳೆದರಯ್ಯೋ
ನಾಳೆಗಿಲ್ಲ ಒಂದು ಬಾಳುವ ಚಿಂತಿಸ್ಯಾರ
ದೇವಾರ ಮಳೆ ಕರಿಣಿಸು|| (ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ್ದು)

ಅಸ್ಪೃಶ್ಯ ಬಡವರ ಸ್ಥಿತಿ ಹೇಗಿತ್ತು ಎಂಬುವುದನ್ನು ಇದು ಸಮರ್ಥವಾಗಿ ಹಿಡಿದಿಡುತ್ತದೆ. ಬಡತನ ತಾಳದೆ ಉಳ್ಳವರ ಮನೆಗೆ ಬಿಕ್ಷಕ್ಕೆ ಹೋದರೆ ಯಾರೂ ಕೊಡುತ್ತಿರಲಿಲ್ಲ. ಹಸಿವು ತಾಳಲಾರದೆ ಮಕ್ಕಳು ಮರಿ ಸೇರಿ ಗಾಣಿಗರ ಮನೆಯಲ್ಲಿ ಇಂಗು ಹುಂಡಿ ಕದ್ದುದರಿಂದ ಗಾಣಿಗರು ಇವರನ್ನು ಚೆನ್ನಾಗಿ ತಳಿಸಿದ ಪರಿ ಭಯಾನಕವಾಗಿತ್ತು. ಇವುಗಳನ್ನೆಲ್ಲಾ ನೆನಸಿಕೊಂಡು ಮಳೆರಾಯನಿಗಾಗಿ ಕೂಗಿಡುವುದು ಅವರ ಹಸಿವಿನ ಆರ್ತನಾದವನ್ನು ತಿಳಿಸುತ್ತದೆ.

ಕಂಪಿಲಿ ರಾಯದಾಗ ಹಂಪಿ ವಿರುಪನ ಶಾಪ
ದಂಪತಿಗೆ ಬಂತೋ ವನವಾಸ

ದಂಪತಿಗೆ ಬಂತೋ ವನವಾಸ ಕಂಪಿಲಿಯು
ಸಂಪಾಗಿ ಸಿಡಿತೋ ಹಾಳಾತೋ
ಬೆಚ್ಚಪ್ಪ ಲಿಂಗಯ್ಯ ಹೆಚ್ಚಿನ ಮಂತ್ರಿಗಳು
ರೊಚ್ಚಿನೊ ಕತ್ತಿ ರಣಕಟ್ಟಿ
ರೊಚ್ಚಿನೊ ಕತ್ತಿ ರಣಕಟ್ಟಿ ತುರುಕರು
ಹುಚ್ಚೆದ್ದು ಓಡಿ ರಣಬಿಟ್ಟು
ಮಾನವರು ಕಳಕೊಂಡು ಜನರೋಡಿದರಂದು
ಖೂನಿ ಮಾಡುದಕ ಮಾತಂಗಿ
ಖೂನಿ ಮಾಡುದಕ ಮಾತಂಗಿ ಹೆಣ್ಣೆಂದೆ
ಮಾನಗೇಡ್ಯಾಗಿ ಒಳಸಂಚು
ಕೊಂಕಣದ ಮಾತಂಗಿ ಬಿಂಕ ಮಾದಕ ಹುಡುಗಿ
ಕೊಂಕ ಗುಣದ್ಹೆಣ್ಣು ತುರುಕರಿಗೆ ಮನಸೋತು
ವಂಕಿ ಹಾಕ್ಯಾಳೋ ಕಂಪಿಲಿಗೋ
ರಾಮರಾಯನು ಬಿದ್ದು ನಾಮನಿರ್ನಾಮಾತೋ।
ಧುಮಧೂಮಾತೋ ಕಂಪಲಿಯು।
ಧುಮ ಧೂಮತೋ ಕಂಪಲಿಯ ನಾಯರ
ಹೋಮಿಕುಂಡಾತೋ ಕಿಚ್ಚಾತೋ
ಏಳುರಾಯರ ಗಂಡ ಗಾಳರಿಗೆ ಕಾಟಣ್ಣ
ತಾಳದೆಲೆ ಕೊಂಡ ಮಾತಂಗಿ
ತಾಳದೆಲೆ ಕೊಂಡ ಮಾತಂಗಿ ಒಡೆಯಾಗ
ಕಾಳಗದಿ ಕಾಡು ರಣಕಾಡು
ಕಂಪಿಲಿ ಹಾಳಾಗಿ ಕೊಂಪೆಯಾತು ಬರಿ
ಸಂಪತ್ತು ಹೋತು ತುರುಕರಿಗೋ
ಸಂಪತ್ತು ಹೋತು ತುರುಕರಿಗೋ- ಲಿಂಗಯ್ಯ
ಜಂಪಿಲ್ದ ಮಡಿದ ರಣಾದಾಗೋ। (ಮೂಲ: ವಿ. ಪ್ರಾಣೇಶ್‌ರಾವ್ ಸಂ. ರುದ್ರಪ್ಪ, ೨೦೦೫)

ಮಾತಂಗಿಯ ಮೇಲೆ ತುರುಕರಿಗೆ ಕಣ್ಣಾಗಿ ಅವಳನ್ನು ಪಡೆಯುವ ಸಲುವಾಗಿ ಅವಳ ಮೇಲೆ ಯುದ್ಧ ಸಾರುತ್ತಾರೆ. ಜೊತೆಗೆ ಬಚ್ಚಯ್ಯ ಲಿಂಗಯ್ಯ ರಾಮರಾಯರೆಲ್ಲರೂ ತುರುಕರ ವಿರುದ್ಧ ಕಾದಾಡಿ ಸೋತು ಇಡೀ ಕಂಪ್ಲಿ ಪ್ರದೇಶವನ್ನು ತುರುಕರಿಗೆ ವಹಿಸಿದ ಸಂದರ್ಭ ಇದು. ತುರುಕರ ಪ್ರಭುತ್ವದಲ್ಲಿ ಇಡೀ ದಲಿತ

ಸಮುದಾಯ ತತ್ತರಿಸಿ ಹೋಗಿರುತ್ತದೆ. ಇದೇ ಸಂದರ್ಭದಲ್ಲಿ ಶೈವ ವೈಷ್ಣವರಿಗೆ ಯುದ್ಧಗಳು ಅಧಿಕಾರಕ್ಕಾಗಿ ನಡೆಯುತ್ತಲೇ ಇತ್ತು. ಇದರಿಂದ ಹೆಚ್ಚು ದುಷ್ಪರಿಣಾಮವನ್ನು ಅನುಭವಿಸಿದವರು ದಲಿತ ಮಹಿಳೆಯರು.

ಅಸ್ಪೃಶ್ಯತೆಯನ್ನು ವಿರೋಧಿಸಿ ಮಧ್ಯಕಾಲೀನ ಸಂದರ್ಭದಲ್ಲಿ ಅನೇಕ ಚಳುವಳಿಗಳು ನಡೆದಿವೆ. ತಮಿಳುನಾಡಿನಲ್ಲಿ ನಾಯರ್‌ಗಳು ಮತ್ತು ಆಳ್ವಾರ್‌ಗಳು ನಡೆಸಿದ ಭಕ್ತಿ ಚಳುವಳಿಯ ಪ್ರಭಾವ ಕರ್ನಾಟಕದ ಮೇಲೆ ಸಾಕಷ್ಟು ಆಯಿತು. ಲಿಂಗಾಯತ ಚಳುವಳಿಗಿಂತ ಓಂದೆ ವ್ಯಾಪಕವಾಗಿ ಹಬ್ಬಿದ್ದ ನಾಥ ಪಂಥವು ಅಂದಿನ ಸಾಂಪ್ರದಾಯಿಕ ವೈದಿಕ ಧರ್ಮದ ಶ್ರೇಣೀಕೃತ ವ್ಯವಸ್ಥೆಯನ್ನು ಪ್ರತಿಭಟಿಸಿತು. ಅಸ್ಪೃಶ್ಯರ ಮೇಲೆ ಆಗುತ್ತಿರುವ ಶೋಷಣೆಯನ್ನು ವಿರೋಧಿಸುವ ಸಮಾನತೆಯನ್ನು ಸಾರುವ ಪ್ರಯತ್ನಗಳು ವೀರಶೈವ ಚಳುವಳಿಯ ಮೂಲಕ ಮತ್ತೊಮ್ಮೆ ಕಾಣಿಸಿಕೊಂಡವು. ಕರ್ನಾಟಕದ ಚರಿತ್ರೆಯಲ್ಲಿ ವೀರಶೈವ ಚಳುವಳಿಯು ಮೊಟ್ಟಮೊದಲ ಪ್ರಮುಖ ಊಳಿಗಮಾನ್ಯ ವಿರೋಧಿ ಅಂಶಗಳನ್ನು ಒಳಗೊಂಡಿತ್ತು. ಅದು ಕೆಲ ಮಹಿಳಾ ಪರ ಸುಧಾರಣೆಗಳನ್ನು ಪ್ರಚುರಪಡಿಸಿತು. ಮುಖ್ಯವಾಗಿ ಇದು ಮಹಿಳಾ ವಚನ ಕಾರ್ತಿಯರು ಧೈರ್ಯವಾಗಿ ತಮ್ಮ ವಿಚಾರಗಳನ್ನು ಮಂಡಿಸುವ ಅವಕಾಶವನ್ನು ಮಾಡಿಕೊಟ್ಟಿತು. ಕೆಲ ದಲಿತ ಮಹಿಳೆಯರನ್ನು ಒಳಗೊಂಡಂತೆ ಮಹಿಳೆಯರ ಸಂಖ್ಯೆ ಐವತ್ತಕ್ಕಿಂತ ಜಾಸ್ತಿ ಇದ್ದುದು ಗಮನಾರ್ಹ, ೩೩ ವಚನಕಾರ್ತಿಯರ ೧೧೦೪ ವಚನಗಳನ್ನು ವೀರಣ್ಣ ರಾಜೂರರವರು ಸಂಗ್ರಹಿಸಿದರೆ, ಇನ್ನೂ ೨೩ ಜನರ ವಚನಗಳನ್ನು ಪ್ರಕ್ಷಿಪ್ತ ವಚನಗಾರ್ತಿಯರನ್ನು ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ್ದಾರೆ.

ಸಾಮಾನ್ಯವಾಗಿ ವಚನ ಸಾಹಿತ್ಯ ಎಂದ ಕೂಡಲೇ ಎಲ್ಲರೂ ತಕ್ಷಣ ಮಾತನಾಡುವುದು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಬಗ್ಗೆ. ಉಳಿದವರನ್ನು ಆಮೇಲೆ ಗುರುತಿಸಲಾಗುತ್ತದೆ. ಈ ರಾಜಕಾರಣವನ್ನು ನಾವು ಮೊದಲು ಅರ್ಥ ಮಾಡಿಕೊಳ್ಳಬೇಕು. ಉಳಿದವರನ್ನು ಇಲ್ಲಿ ಮುಖ್ಯವಾಗಿ ಯಾಕೆ ಗುರುತಿಸಲಾಗುವುದಿಲ್ಲ?

ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ ವಚನ ಸಾಹಿತ್ಯದಲ್ಲಿಯೇ ಏಕೈಕ ದಲಿತ ವಚನಕಾರ್ತಿ-

ತೂಬರ ಬಳ್ಳಿಯಂತೆ ಉರಿವಾತ
ಹಸಿರು ತಂದು ಮಾಡುವಾತ
ಭಕ್ತರ ಕುಲವನೆತ್ತಿ ನಿಂದಿಸುವಾತ
ಒಡೆಯರೆಂಬ ತುಡುಗುಣಿಗಳು ಪೂಜೆಗೊಂಬಲ್ಲಿ
ಅವರ ಮನೆಗೆ ಹೂ, ಹಣ್ಣು, ಕಾಯಿ ಪತ್ರೆಗಳ ತರುವ
ಹೋಗುವ ಬರುವ ಊಳಿಗವ ಕೊಂಬಾತ ಭಕ್ತನಲ್ಲ.
'ಶಿವಭಕ್ತರು ಹೊತ್ತಾರೆ ಎದ್ದು ಗುರುಲಿಂಗ ಜಂಗಮಕ್ಕೆ
ಶರಣೆನ್ನದೆ ಮುನ್ನ ಬ್ರಾಹ್ಮಣನ ಕಂಡು ಶರಣಾರ್ಥಿ
ಎಂದಡೆ ಎಂಬತ್ನಾಲ್ಕು ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ
ಬಿಪ್ಪುದು ತಪ್ಪದು'

ಎಂದು ಹೇಳುವ ಕಾಳವ್ವೆಯ ಮಾತಿನಲ್ಲಿ ಶತಮಾನಗಳಿಂದ ತುಳಿಸಿಕೊಳ್ಳುತ್ತ ಬಂದ ನೊಂದವರ ನೋವಿನ ಧ್ವನಿ ಅಡಗಿದೆ. ಒಬ್ಬ ದಲಿತ ಹೆಣ್ಣು ಮಗಳು ಸ್ಥಾಪಿತ ವ್ಯವಸ್ಥೆಯ ಎದುರು ಹೀಗೆ ದಿಟ್ಟತನದಿಂದ ಧ್ವನಿ ಎತ್ತಿ ನಿಂತುದು ಶರಣರ ಚಳುವಳಿಯ ಸಾರ್ಥಕತೆಗೆ ಒಂದು ಜೀವಂತ ಸಾಕ್ಷಿಯಾಗಿದೆ.

ಬಸವ ಯುಗದವರೆಗೆ ಕರ್ನಾಟಕವನ್ನು ಹತ್ತು- ಹಲವು ಮತ ಧರ್ಮಗಳು ನಿಯಂತ್ರಿಸುತ್ತಿದ್ದವು. ಬ್ರಾಹ್ಮಣ ಯಜ್ಞ ಯಾಗಾದಿಗಳು, ಉಪವಾಸ ತತ್ವಗಳು, ಜೈನ ಧರ್ಮ- ಬೌದ್ಧ ಧರ್ಮದ ಕೆಲವು ದೇಹದಂಡನೆ, ಸನ್ಯಾಸ ಮೊದಲಾದ ತತ್ವಗಳು ಸಮಾಜವನ್ನು ಗೊಂದಲಕ್ಕೆ ಈಡು ಮಾಡಿದವು. ಇಂತಹವುಗಳನ್ನು ವಚನಗಳ ಮೂಲಕ ವಿಡಂಬಿಸಿದರು. ಅಂದಿನ ಜನ ಜೀವನವನ್ನು ಒಳ ಹೊಕ್ಕು ನೋಡಿ ನುಡಿದ ವಚನಗಳು ಯಾವುದೇ ದೇಶ, ಕಾಲದ ಪರಿಮಿತಿಗೊಳಪಡದೆ ಎಲ್ಲೆಡೆಯೂ ಎಂದೆಂದೂ ಚಿರಂತನವಾಗಿ ಬೆಳೆದವು. ಜಾಗತೀಕರಣದ ಇಂದಿನ ಸಂದರ್ಭದಲ್ಲಿಯೂ ಅತ್ಯಧಿಕ ವಚನಗಳು ಇಂದಿನ ಸಮಾಜದ ಜೀವಂತ ಸಮಸ್ಯೆಗಳಿಗೆ ಪರಿಹಾರ ತೋರಿಸುವ ಕೈದೀವಿಗೆಗಳಾಗಿವೆ.

ಜಾತಿಯ ಮೂಲಕ ಒಡೆದಾಳುವ ಯಜಮಾನ ಸಂಸ್ಕೃತಿಯನ್ನು ವಚನಕಾರರು ನಿರ್ಭೀತಿಯಿಂದ ಖಂಡಿಸಿದರು. ಮನುಷ್ಯ- ಮನುಷ್ಯರಲ್ಲಿ ಅಡ್ಡಗೋಡೆ- ಜಾತಿ- ಜಾತಿಯಲ್ಲಿ ಭೇದ ಹುಟ್ಟಿಸಿ ಮಾತಾಡುವುದನ್ನು ಖಂಡಿಸಿದರು.

ಬಸವಣ್ಣ - ಹಾರುವ ಮೊದಲು ಶ್ವಪಚ ಕಡೆಯಾಗಿ
ಭವಿಯಾದವನಲ್ಲ ನೊಂದೆ ಎಂಬೆ
ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೆ ಹೊಲೆಯ

ಅಕ್ಕಮಹಾದೇವಿ - ಕುಲದಲ್ಲಿ ಶೂದ್ರನಾದರೇನು ಮನದಲ್ಲಿ ಮಹಾದೇವ
ನೆಲೆಗೊಂಡವನೆ ವೀರಶೈವ ನೋಡಾ...

ಕುಲ ಮುಖ್ಯವಲ್ಲ ಮನುಷ್ಯತ್ವ ಮುಖ್ಯ ಎಂಬ ಸಾರವನ್ನು ಹೇಳುವುದು ಮುಖ್ಯವಾಗಿ ಇವರ ವಚನಗಳಲ್ಲಿ ಕಾಣಬಹುದು.

ಬೊಂತಾದೇವಿ - ಊರ ಒಳಗಣ ಬಯಲು ಊರ ಹೊರಗಣ ಬಯಲೆಂದುಂಟೆ
ಊರೊಳಗೆ ಬ್ರಾಹ್ಮಣ ಬಯಲು ಊರ ಹೊರಗೆ ಹೊಲೆ ಬಯಲೆಂದುಂಟೆ

ಅಸ್ಪೃಶ್ಯರು ಊರ ಹೊರಗೆ ಇದ್ದುದನ್ನು ಕಂಡು ಟೀಕಿಸಿದ ಪರಿ ಇದು. ಒಳ, ಹೊರ ಎಂಬ ಭೇದ ಸಲ್ಲದು ಎರಡೂ ಒಂದೇ ಎಂದು ಹೇಳುತ್ತಾಳೆ.

ಮಾದಾರ ಚೆನ್ನಯ್ಯ - ನಡೆನುಡಿ ಸಿದ್ಧಾಂತವಾದಲ್ಲಿ ಕುಲ ಸೂತಕವಿಲ್ಲ. ಆಚಾರವೇ ಕುಲ.

ನಮ್ಮ ಆಚಾರಗಳೇ ನಮ್ಮ ಜಾತಿ, ನಡೆ- ನುಡಿಗಳು ಚೆನ್ನಾಗಿದ್ದರೆ ನಮಗೆ ಜಾತಿಯ ಹಂಗು ಇರುವುದಿಲ್ಲ ಎಂಬುವುದನ್ನು ತಿಳಿಸುತ್ತಾರೆ. ಹೀಗೆ ವಚನ ಚಳುವಳಿಯ ಎಲ್ಲಾ ವಚನಕಾರರು ಅವೈಜ್ಞಾನಿಕ ತಿಳುವಳಿಕೆಗಳನ್ನು ಮೆಟ್ಟಿ ನಿಂತವರು. ಆದರೂ ಕೂಡ ಕೆಲವೊಮ್ಮೆ ಸಾಂಪ್ರದಾಯಿಕ ಪದ್ಧತಿಗಳಿಗೆ ಮಾರು ಹೋದುದನ್ನು ನೋಡಬಹುದು.

'ಶಿವನ ಪರಮ ಭಕ್ತನಾಗಿ ತನ್ನ ಬದುಕಿನಲ್ಲಿ ವರ್ಣ ಮತ್ತು ಲಿಂಗಭೇದ ಜಾತಿಯ ಸಂಬಂಧದ ಎಲ್ಲಾ ಅಸಮಾನತೆಗಳನ್ನು ಉಗ್ರವಾಗಿ ಹಾಗೂ ಪ್ರಜ್ಞಾಪೂರ್ವಕವಾಗಿಯೇ ವಿರೋಧಿಸುತ್ತಾ ಬಂದ ಬಸವಣ್ಣನವರು ಕೂಡ ತನ್ನ ಕೆಲವು ವಚನಗಳಲ್ಲಿ ಅನುಕೂಲಕ್ಕೆ ತಕ್ಕಂತೆ ಉಪಮೆ, ರೂಪಕಗಳನ್ನು ಬಳಸುವಾಗ ಸೂಳೆ ಮತ್ತು ಹಾದರದ ಬದುಕಿನ ಕೆಲವು ಹೆಣ್ಣುಗಳ ವಿವರಪೂರ್ಣ ಚಿತ್ರಗಳನ್ನು ನೀಡುತ್ತಾನೆ. ಗಂಡಿನ ಹಾದರವನ್ನು ಅಮರ ಪ್ರೇಮವೆಂತಲೂ, ಹೆಣ್ಣಿನ ಹಾದರವನ್ನು ಪರಮ ಪಾತಕವೆಂತಲೂ ಥಟ್ಟನೆ ಪರಿಗಣಿಸುವ ಒಂದು ಸಮಾಜದಲ್ಲಿ ಹೆಣ್ಣಿನ ಬಗೆಗೆ ಗೌರವ, ಅನುಕಂಪಗಳುಳ್ಳ ಯಾವುದೇ ವಿವೇಚನಾಪೂರ್ಣ ವ್ಯಕ್ತಿತ್ವವೊಂದು ಉಪಮೆ ರೂಪಕಾದಿಗಳಲ್ಲಿ ಕೂಡ ಹೆಣ್ಣನ್ನು ಬೇರೊಬ್ಬ ರಸ್ತೆಯಲ್ಲಿ ನಿಲ್ಲಿಸಿ ಸೀರೆ ಸುಲಿಯುವ, ಮನೆಯ ಗಂಡ ಬೆನ್ನಿಗೆ ಬಾರಿಸಿ ಚರ್ಮವನ್ನೇ ಸುಲಿಯುವ ಹಾಗೂ ಸೂಳೆಯ ಸಂಕಷ್ಟದ ವಿವರಗಳನ್ನು ನೀಡುವ ಒರಟು ಕೆಲಸಕ್ಕೆ ಸಲೀಸಾಗಿ ಕೈ ಹಚ್ಚಲಾರದು. ಆದರೆ ಬಸವಣ್ಣನ ಕೆಲವು ವಚನಗಳು ಅಂಥ ಸ್ಪಷ್ಟ ಚಿತ್ರಣವನ್ನು ನೀಡುತ್ತವೆ (ಕಾಳೇಗೌಡನಾಗವಾರ, ೧೯೮೦, ಪ್ರಸ್ತಾವನೆ).

ಕೂಸುಳ್ಳ ಸೂಳೆ ಧನದಾಸೆ ಗೊತ್ತೆಗೊಂಡರೆ

ಕೂಸಿಂಗಿಲ್ಲ, ಬೋಜಗಂಗಿಲ್ಲ

ಕೂಸನೊಮ್ಮೆ ಸಂತವಿಡುವಳು

ಬೋಜಗನನ್ನೊಮ್ಮೆ ನೆರೆವಳು

ಧನದಾಸೆ ಬಿಡದು ಕೂಡಲ ಸಂಗಮದೇವ

(ಪೂರ್ವೋಕ್ತ: ಕಾಳೇಗೌಡನಾಗವಾರ, ೧೯೮೦, ಪ್ರಸ್ತಾವನೆ).

ಹಾದರ ಬರೀ ಹಾದರವಾಗಿರುವುದಿಲ್ಲ. ಬಹುಪಾಲು ಹಾದರ ಹೊಟ್ಟೆಪಾಡಿನ ವಿಷಯವೇ ಆಗಿರುತ್ತದೆ. ಹಿಂದು ಮುಂದು ಇಲ್ಲದ ಅನಾಥ ಮಹಿಳೆ ಯಾವುದೋ ಕಾರಣಕ್ಕೆ, ಯಾರದೋ ಕ್ರೌರ್ಯಕ್ಕೆ ಬಲಿಯಾದ ಪರಿಣಾಮಕ್ಕೂ ಒಂದಕ್ಕೆ ಜನ್ಮವಿತ್ತಾಗ, ವ್ಯವಸ್ಥೆಯ ಬೇಲಿಯೊಳಗೆ ಬಂದಿಯಾಗಿ ಅದೇ ವೃತ್ತಿಯನ್ನು ಪ್ರಾರಂಭಿಸಿದಾಗ ಅದನ್ನು ಬಸವಣ್ಣನವರು ಮೇಲ್ನೋಟದಲ್ಲಿ ಮಾತ್ರ ನೋಡಿದ್ದಾರೆ ಎನಿಸುತ್ತದೆ. ಇಡೀ ವಚನ ಹೆಣ್ಣಿನ ತೊಳಲಾಟವನ್ನು ಎತ್ತಿ ಹಿಡಿಯುತ್ತದೆ. ಒಂದು ಕಡೆ ಕೂಸು, ಇನ್ನೊಂದು ಕಡೆ ತನಗೆ ಜೀವಿಸಲು ಆರ್ಥಿಕ ಸಹಾಯ ಮಾಡುವವನಿಗೆ ಸೇವೆ ಮಾಡುವ ಕೆಲಸದಲ್ಲಿ ನಿರತವಾಗಿರುವುದು, ಅದು ಅವಳ ಕೂಸಿನ ಭವಿಷ್ಯಕ್ಕಾಗಿಯೇ ಹೊರತು ತನ್ನ ಸ್ವಾರ್ಥದಿಂದಾಗಲಿ ಅಥವಾ ಧನದಾಸೆಯಿಂದಾಗಲಿ ಅಲ್ಲ ಎಂಬುವುದನ್ನು ತಿಳಿಯಬೇಕು. ಬಸವಣ್ಣನಂತವರೂ ಕೂಡ ಕೆಲವೊಮ್ಮೆ ಹೀಗೆ ನಡೆದುಕೊಂಡಿದ್ದರು ಎಂಬುವುದಕ್ಕೆ ಈ ವಚನ ಸಾಕ್ಷಿಯಾಗಿದೆ.

ಬ್ರಾಹ್ಮಣರ ಮಧುವಯ್ಯನಿಗೂ ಅಸ್ಪೃಶ್ಯರ ಹರಳಯ್ಯನ ಮಗಳಿಗೂ ವಿವಾಹ ಸಂಬಂಧ ಏರ್ಪಡಿಸಿ ಜಾತಿ ಸಂಕರಕ್ಕೆ ಎಡೆ ಮಾಡಿಕೊಟ್ಟರೂ ಅದೊಂದು ತಾತ್ಕಾಲಿಕ ಪ್ರಯತ್ನವಾಗಿಯೇ ಉಳಿಯಿತು. ರಾಜಪ್ರಭುತ್ವ ಮತ್ತು ಧಾರ್ಮಿಕ ಪ್ರಭುತ್ವಗಳು ಜಾತಿ ಸಂಕರವನ್ನು ಬಲವಾಗಿ ವಿರೋಧಿಸಿದವು. ಕಾರಣ ಮಧ್ಯಕಾಲೀನ ಕರ್ನಾಟಕದಲ್ಲಿ ಕಾಣಿಸಿಕೊಂಡ ಈ ಎಲ್ಲಾ ಚಳುವಳಿಗಳು ಜಾತಿ ವ್ಯವಸ್ಥೆಯನ್ನು ಹತ್ತಿಕ್ಕುವಲ್ಲಿ ಚಳುವಳಿಗಳು ಸೋತವು. ದಲಿತ ಮಹಿಳೆಯರಿಗೂ ಸಮಾನ ಅವಕಾಶವನ್ನು ಒದಗಿಸುತ್ತದೆ ಎಂಬ ಭರವಸೆಯನ್ನು ಬಿತ್ತರಿಸಿದ ಚಳುವಳಿಯ ಪತನ ದಲಿತ ಮಹಿಳೆಯರಿಗೆ ಬಾರಿ ಪೆಟ್ಟು ಕೊಟ್ಟಿತು. ವೈದಿಕ ಸಂಸ್ಕೃತಿಗೆ ಬದಲಿ ಸಾಮಾಜಿಕ

ಮಾದರಿಯನ್ನು ಒದಗಿಸುವತ್ತ ಹೊರಟ ವೀರಶೈವ ಆಂದೋಲನ ಕ್ರಮೇಣ ತನ್ನಲ್ಲೇ ಜಾತಿ ವ್ಯವಸ್ಥೆಯೊಂದನ್ನು ಹುಟ್ಟು ಹಾಕಿಕೊಂಡು ಅವರಲ್ಲಿಯೂ ಒಳಪಂಗಡಗಳು ಹುಟ್ಟಿಕೊಂಡವು.

ಇನ್ನೂ ಭಕ್ತಿ ಪಂಥವು ಶೂದ್ರರಿಗಾಗಿಯೇ ದುಡಿದರೂ ಸಮಾಜದಲ್ಲಿ ಗಟ್ಟಿಯಾಗಿ ನೆಲೆಸಿದ ಜಾತಿಯನ್ನು ಅಲುಗಾಡಿಸಲಾಗಲಿಲ್ಲ. ಹದಿನೆಂಟು ಮತ್ತು ಹದಿನಾರನೇ ಶತಮಾನದಲ್ಲಿ ಊಳಿಗಮಾನ್ಯಶಾಹಿಯ ವಿರುದ್ಧ ತೀವ್ರ ಹೋರಾಟ ಪ್ರಾರಂಭವಾಯಿತು. ದಮನಕ್ಕೊಳಗಾಗಿ ಬದುಕುತ್ತಿದ್ದರೂ ದಲಿತ ಮಹಿಳೆಯರು ಅದನ್ನು ಮೀರಿ ಈ ಚಳುವಳಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಚಳುವಳಿಯನ್ನು ಬಲಪಡಿಸಿದರೂ ಅದು ಶಾಶ್ವತವಾಗಿ ನಿಲ್ಲಲಿಲ್ಲ.

ಹದಿನೆಂಟನೇ ಶತಮಾನದಲ್ಲಿ ಹೈದರ್ ಮತ್ತು ಟಿಪ್ಪು ಇಬ್ಬರೂ ದಲಿತ ಮಹಿಳೆಯರಿಗೆ ಅನುಕೂಲವಾಗುವಂತಹ ಕೆಲವು ಸುಧಾರಣೆಗಳನ್ನು ಜಾರಿಗೊಳಿಸಿದರು. ಅವರ ಕಾಲದಲ್ಲಿ ಮದ್ಯಪಾನವು ನಿಷೇಧಿಸಲ್ಪಟ್ಟಿತು. ಇದರಿಂದ ದಲಿತ ಕುಟುಂಬಗಳ ಗಂಡಸರು ದುಡಿದ ಹಣವನ್ನು ಮನೆಗೆ ಕೊಡಲು ಪ್ರಾರಂಭಿಸಿದ್ದರು. ಸೂಳೆಯರಿಗೆ ನೂಲುವ, ನೇಯುವ, ಬಣ್ಣ ಹಾಕುವ ಮುಂತಾದ ಕೆಲಸಗಳಲ್ಲಿ ತರಬೇತಿ ಕೊಟ್ಟು ವಿವಿಧ ಉತ್ಪಾದನಾ ಕೇಂದ್ರಗಳಲ್ಲಿ ಉದ್ಯೋಗ ನೀಡಲಾಯಿತು. ಟಿಪ್ಪುವು ಕನ್ಯಾಬಲಿ ಮತ್ತು ನರಬಲಿಗಳನ್ನು ನಿಷೇಧಿಸಿದನು. ಈ ಬಲಿಗಳು ಮೂಢನಂಬಿಕೆಯಿಂದ ಕೂಡಿದ್ದು ನಿಜಾರ್ಥದಲ್ಲಿ ಧಾರ್ಮಿಕ ಮುಖವಾಡದ ಕೊಲೆಗಳೇ ಆಗಿದ್ದವು. ಇದಕ್ಕೆ ದಲಿತ ಗರ್ಭಿಣಿ ಅಥವಾ ಮುತ್ತೈದೆ ಮಹಿಳೆಯರನ್ನು ಬಳಸಿಕೊಳ್ಳಲಾಗುತ್ತಿತ್ತು ಎಂದು ಹೇಳುತ್ತಾರೆ. ಇಂತಹ ಅನಿಷ್ಟ ಪದ್ಧತಿಯನ್ನು ಟಿಪ್ಪು ನಿಷೇಧಿಸಿದ. ಭೂ ಸುಧಾರಣೆ ಜಾರಿಗೆ ತಂದಿದ್ದರಿಂದ ಮಹಿಳೆಯರೂ ಸೇರಿದಂತೆ ಎಷ್ಟೋ ಜೀತದಾಳುಗಳು ಬಿಡುಗಡೆ ಹೊಂದಿ ನೆಮ್ಮದಿಯ ಉಸಿರು ಬಿಟ್ಟರು.

ದೇವಾಲಯಗಳಿಗಷ್ಟೇ ತಮ್ಮ ನೃತ್ಯ ಪ್ರದರ್ಶನವನ್ನು ಸೀಮಿತಗೊಳಿಸಿಕೊಂಡಿದ್ದ ಅವರು ತಮ್ಮ ಧೋರಣೆಯನ್ನು ಬದಲಾಯಿಸಿಕೊಂಡು ೧೯ ಮತ್ತು ೨೦ನೆಯ ಶತಮಾನದಲ್ಲಿ ವೃತ್ತಿ ನಿರತ ನರ್ತಕಿಯರಾಗಿ ಬೆಳಕಿಗೆ ಬರತೊಡಗಿದರು. ಮೈಸೂರು ಒಡೆಯರ ಕಾಲದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರು ಪಟ್ಟಕ್ಕೆ ಬರುವುದರೊಂದಿಗೆ ಈ ಕಲೆಗೆ ರಾಜಾಶ್ರಯ ಒದಗಿಬಂತು. "ಬಸವಿಯನ್ನು ಅರ್ಪಿಸುವ ಪದ್ಧತಿ ಸಾಮಾನ್ಯವಾಗಿ ಕಿಳ್ಳೇಕ್ಯಾತರು, ಮಾದಿಗರು, ದೊಂಬರು, ಒಡ್ಡರು, ಬೇಡರು, ಕುರುಬರು ಮತ್ತು ಗೊಲ್ಲರಿಗೆ ಸೇರಿತ್ತು. ಮೈಸೂರಿನ ಮನುಕುಲ ಸಂಬಂಧ ಶಾಸ್ತ್ರದ ಪರಿವೀಕ್ಷಣೆಯ ಒಂದು ಕರಪತ್ರದಲ್ಲಿ ಜಾತಿ ಆಧಾರಿತ ಅರ್ಪಣೆಯನ್ನು ಕುರಿತು ವಿವರವಾಗಿ ಅಂಕಿ ಅಂಶಗಳನ್ನು ನೀಡಲಾಗಿದೆ (ಜೋಗನ್‌ಶಂಕರ್, ೧೯೯೩, ಪು. ೮೪). ವಸಾಹತುಶಾಹಿಯ ಸಂದರ್ಭದಲ್ಲಿ ಮಕ್ಕಳನ್ನು ಜೋಗತಿ ಮಾಡಲು ಬ್ರಿಟೀಷರಿಂದ ಒಪ್ಪಿಗೆಯನ್ನು ತೆಗೆದುಕೊಳ್ಳಲಾಗುತ್ತಿತ್ತು ಎಂದೂ ಸಹ ಹೇಳಲಾಗಿದೆ. ಇಲ್ಲೂ ಕೂಡ ಬಸವಿಯರ ಸ್ಥಿತಿ ನಿಕೃಷ್ಟದಿಂದ ಕೂಡಿತ್ತು.

೧೭೬೦ರಿಂದ ೧೭೯೯ರ ನಡುವೆ ವಸಾಹತುಶಾಹಿ ಅಕ್ರಮಣವನ್ನು ಹೈದರ್ ಮತ್ತು ಟಿಪ್ಪು ಪ್ರಬಲವಾಗಿ ವಿರೋದಿಸಿದರು. ಅವರು ಸೋಲಿನ ನಂತರ ಅವರ ಕಾಲದಲ್ಲಿ ಜಾರಿಗೆ ತರಲಾಗಿದ್ದ ಸುಧಾರಣೆಗಳೆಲ್ಲ ವಸಾಹತುಶಾಹಿ ಕಾಲದಲ್ಲಿ ತಲೆಕೆಳಗಾದವು. ಹೊಸ ಭೂಮಾಲೀಕ ಆಳುವ ವರ್ಗವಾದ ಮೈಸೂರು ಒಡೆಯರು ಬ್ರಿಟೀಷರೊಂದಿಗೆ ಶಾಮೀಲಾಗಿ ಮಠಗಳನ್ನು ಪುನರುತ್ಥಾನಗೊಳಿಸಿದರು. ಮತ್ತು ದೊಡ್ಡ ಸಂಖ್ಯೆಯಲ್ಲಿ

ಮಹಿಳೆಯರನ್ನು ಮಠದ ಆಸ್ತಿಯಾಗಿಸಲಾಯಿತು. ಕ್ರಮೇಣ ಅವರನ್ನು ಬ್ರಾಹ್ಮಣ ಭೂಮಾಲೀಕರು ಮತ್ತು ವ್ಯಾಪಾರಿಗಳಿಗಾಗಿ ಹರಾಜು ಮಾಡಲಾಗುತ್ತಿತ್ತು.

ವಸಾಹತುಶಾಹಿ ಇಲ್ಲಿನ ಸ್ಥಳೀಯ ಗೃಹ ಕೈಗಾರಿಕೆಗಳನ್ನು ನಾಶಪಡಿಸಿದಾಗ ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ತಳಸಮುದಾಯದ ಮಹಿಳೆಯರು ತೀವ್ರವಾದ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಒಂದೇ ಬಾರಿಗೆ ಬಂದೆರಗಿದ ಸಾಮೂಹಿಕ ನಿರುದ್ಯೋಗದ ಸಮಸ್ಯೆಯಿಂದಾಗಿ ಬಹಳಷ್ಟು ಮಹಿಳೆಯರು ಬೀದಿಗೆಸೆಯಲ್ಪಟ್ಟು ಅನಿವಾರ್ಯವಾಗಿ ಹರಾಜು ಮತ್ತು ವ್ಯಾಪಾರಕ್ಕೊಳಗಾದರು. ಮುಮ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಬೆಂಗಳೂರಿನಲ್ಲಿ ದಲಿತ ಮಹಿಳೆಯರನ್ನು ಮಾರಾಟ ಮಾಡಲಾಯಿತು. ಅವರ ದೇಹದ ಮೇಲೆ ಅವರು ಮಾರಾಟಕ್ಕಿರುವ ವೇಶ್ಯೆಯರು ಎಂಬುವುದನ್ನು ಸೂಚಿಸಲು ಮುದ್ರೆ ಒತ್ತಲಾಗುತ್ತಿತ್ತು. ೧೮೫೦ರ ದಶಕದಲ್ಲಿ ಭೀಕರ ಬಡತನದಿಂದಾಗಿ ದಲಿತ ಮಹಿಳೆಯರೆಲ್ಲರೂ ಗಣಿಗಾರಿಕೆ, ರಸ್ತೆನಿರ್ಮಾಣ ಮತ್ತು ತೋಟ- ನೆಡುತೋಪುಗಳಲ್ಲಿ ತೀರಾ ಅಗ್ಗದ ಕೂಲಿಗೆ ದುಡಿಯುವ ಅನಿವಾರ್ಯತೆಗೆ ಒಳಗಾದರು. ಅವರು ವಿಪರೀತ ಅಮಾನವೀಯ ಪರಿಸ್ಥಿತಿಯಲ್ಲಿ ದುಡಿಯುತ್ತಿದ್ದು ಅವರನ್ನು ಅತ್ಯಂತ ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತಿತ್ತು. ಲೈಂಗಿಕ ಕಿರುಕುಳವಂತು ನಿರಂತರವಾಗಿತ್ತು. ಕೆಲವೆಡೆ ಇಂತಹ ದಬ್ಬಾಳಿಕೆಯ ಕೆಲಸದ ವಾತಾವರಣಕ್ಕೆ ಹೊಂದಿಕೊಳ್ಳಲಾರದೆ ಇಲ್ಲಿಂದ ತಪ್ಪಿಸಿಕೊಂಡು ಹೋಗಲು ಪ್ರಯತ್ನಿಸಿದರೂ ಹಿಡಿದು ಹೊಡೆಯಲಾಗುತ್ತಿತ್ತು, ಬಂದಿಸಲಾಗುತ್ತಿತ್ತು, ಕೊಲ್ಲಲಾಗುತ್ತಿತ್ತು. ವಸಾಹತುಶಾಹಿ ಮತ್ತು ಸ್ಥಳೀಯ ಊಳಿಗಮಾನ್ಯ ದಲ್ಲಾಳಿಗಳ ಮಧ್ಯೆ ದಲಿತ ಮಹಿಳೆ ನಲಿಗಿ ಹೋದಳು.

ಮೈಸೂರು ಒಡೆಯರ ಕೊನೆಯ ಅರಸರು ಅಸ್ಪೃಶ್ಯ ಹೆಣ್ಣು ಮಕ್ಕಳಿಗಾಗಿಯೇ ಶಾಲೆಗಳನ್ನು ತೆರೆಯುವ ಮೂಲಕ ಅವರಿಗೆ ಶಿಕ್ಷಣವನ್ನು ಒದಗಿಸಿದರು. ಮೈಸೂರು ಜಿಲ್ಲೆಯಲ್ಲಿ ಈಗಲೂ ಶಿಕ್ಷಣ ಹೆಚ್ಚಾಗಿರಲು ಒಡೆಯರ ಕಾಣಿಕೆಯೇ ಮೇಲುಗೈ ಎಂದು ಹೇಳಬಹುದು.

ಬಳ್ಳಾರಿಯಲ್ಲಿ ದಲಿತ ಮಹಿಳೆಯರ ಮೇಲೆ ಊಳಿಗಮಾನ್ಯತೆಯ ಪರಿಣಾಮ:

ವಿಜಯನಗರ ಪತನದ ನಂತರ ಅಲ್ಲಿದ್ದ ತಳವಾರರು, ಸೈನಿಕರು, ದಂಡನಾಯಕರು ಸ್ವಾತಂತ್ರ್ಯ ಪಾಳೆಯಗಾರರಾಗಿ ಆಡಳಿತ ನಡೆಸಲು ಶುರು ಮಾಡಿದರು. ಆಕರಗಳ ಕೊರತೆಯಿಂದ ಇತಿಹಾಸಕಾರರು ಇಂತಹ ಪಾಳೆಯಗಾರರ ಇತಿಹಾಸವನ್ನು ಸರಿಯಾಗಿ ಕಟ್ಟಿಕೊಡಲಾಗಿಲ್ಲ. ಇನ್ನು ಜನ ಸಾಮಾನ್ಯ, ದಲಿತರ ಸ್ಥಿತಿಯ ಕುರಿತು ಇಲ್ಲಿ ಯಾವ ಮಾಹಿತಿಯೂ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಮೌಖಿಕ ಆಕರಗಳೇ ಮುಖ್ಯವಾಗುತ್ತವೆ. ಯಾವುದೋ ಒಂದು ಎಳೆ ಸಿಕ್ಕಿದರೆ ಅದರ ಮೂಲಕವೇ ಅವರ ಸ್ಥಿತಿಯನ್ನು ಹೇಳಬೇಕಾಗುತ್ತದೆ. ಆ ಘಟನೆಗಳ ಹಿಂದಿನ ಸ್ಥಿತಿಯನ್ನು ಅರ್ಥೈಸಿಕೊಳ್ಳುತ್ತಲೇ ದಲಿತ ಮಹಿಳೆಯ ಇತಿಹಾಸವನ್ನು ಕಟ್ಟಿಕೊಡಬೇಕಾಗುತ್ತದೆ.

ವಿಜಯನಗರದ ಅವನತಿಯ ನಂತರ ಸ್ವಾತಂತ್ರ್ಯವಾಗಿ ರಾಜ್ಯಾಡಳಿತದಲ್ಲಿ ಬಹುಪ್ರಖ್ಯಾತಿ ಪಡೆದ ಪಾಳೆಗಾರರೆಂದರೆ;

೧. ಗುಡೇಕೋಟೆ ಪಾಳೆಯಗಾರರು (ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಹೋಬಳಿ ಕೇಂದ್ರವಾಗಿದೆ).

೨. ಜರಿಮಲೆ ಪಾಳೆಯಗಾರರು (ಕೂಡ್ಲಿಗಿ ಹತ್ತಿರ ಇರುವ ಪುಟ್ಟ ಗ್ರಾಮ).

೩. ಉಜ್ಜಯಿನಿ ಪಾಳೆಯಗಾರರು (ಮೊದಲು ಇದು ಸಂಡೂರು ತಾಲ್ಲೂಕಿನಲ್ಲಿತ್ತು. ಈಗ ಇದು ಮೊಣಕಾಲ್ಮೂರು ತಾಲ್ಲೂಕಿನಲ್ಲಿದೆ).

೪. ವಡ್ಡು ದರೋಜಿ ಪಾಳೆಯಗಾರರು (ಹಿಂದೆ ಇದು ಬಳ್ಳಾರಿಯಲ್ಲಿ ಒಂದು ತಾಲ್ಲೂಕು ಕೇಂದ್ರವಾಗಿತ್ತು).

೫. ಬಾಣರಾವಿ ಪಾಳೆಯಗಾರರು (ಕೂಡ್ಲಿಗಿ ತಾಲ್ಲೂಕಿನಲ್ಲಿದೆ).

೬. ಕುಡುತಿನಿ ಪಾಳೆಯಗಾರರು (ಬಳ್ಳಾರಿಯಿಂದ ೧೦ ಕಿ.ಮೀ. ದೂರದಲ್ಲಿದೆ).

೭. ಹರಪನಹಳ್ಳಿ ಪಾಳೆಯಗಾರರು (ಇದು ಈಗ ದಾವಣಗೆರೆ ಜಿಲ್ಲೆಗೆ ಸೇರಿಕೊಂಡಿದೆ).

೮. ವೀರನದುರ್ಗ ಪಾಳೆಯಗಾರರು

೯. ಹಂಡೆ ಪಾಳೆಯಗಾರರು

೧೦. ಕಂಪ್ಲಿ ಪಾಳೆಯಗಾರರು

೧೧. ಸಂಡೂರು ಸಂಸ್ಥಾನದ ಅರಸರು (ಶಿವಾಜಿಯು ತಾವು ಗೆದ್ದ ಈ ಸಂಸ್ಥಾನವನ್ನು ತಮ್ಮವರೇ ಆದ ಘೋರ್ಪಡೆ ವಂಶಸ್ಥರಿಗೆ ಬಿಟ್ಟು ಕೊಟ್ಟಿದ್ದು).

ಇವರೆಲ್ಲರೂ ಹೆಚ್ಚು ಕಡಿಮೆ ಒಂದೇ ಅವಧಿಯಲ್ಲಿ ಇಡೀ ಬಳ್ಳಾರಿಯನ್ನು ತುಂಡು ತುಂಡಾಗಿ ಮಾಡಿಕೊಂಡು ಆಡಳಿತ ನಡೆಸುತ್ತಿದ್ದರು. ಇವರುಗಳ ನಡುವೆ ಸಾಮ್ರಾಜ್ಯಕ್ಕಾಗಿ ಕಿತ್ತಾಟಗಳು ನಡೆಯುತ್ತಲೇ ಇತ್ತು. ಸ್ಥಳೀಯ ಪಾಳೆಯಗಾರರಲ್ಲದ ಬ್ರಿಟೀಷರು, ಬಿಜಾಪುರದ ಸುಲ್ತಾನರು, ಹೈದರಾಬಾದ್‌ನ ನಿಜಾಮರೂ ಸಹ ಈ ಪ್ರದೇಶವು ಸಮೃದ್ಧಿಯಿಂದ ಕೂಡಿದ್ದರಿಂದ ಇದನ್ನು ವಶಪಡಿಸಿಕೊಳ್ಳಲು ಹವಣಿಸುತ್ತಿದ್ದರು. ಇವರೆಲ್ಲರ ನಡುವೆ ಬಳ್ಳಾರಿ ಪ್ರದೇಶ 'ಫುಟ್‌ಬಾಲ್' ಎಂಬಂತಾಗಿತ್ತು. ಒಮ್ಮೆ ಒಬ್ಬರ ಕೈಗೆ ಹೋದರೆ ಇನ್ನೊಮ್ಮೆ ಇನ್ನೊಬ್ಬರ ಕೈಗೆ ಯಾರು ಯುದ್ಧದಲ್ಲಿ ಜಯಗಳಿಸುತ್ತಿದ್ದರೊ ಸಾಮ್ರಾಜ್ಯ ಅವರ ಕಡೆ ಆಗುತ್ತಿತ್ತು. ಇಡೀ ಸಾಮ್ರಾಜ್ಯ ಯುದ್ಧಗಳಲ್ಲಿ ಮುಳುಗಿ ಹೋಗಿತ್ತು. ಜೀವನವೆಂದರೆ ಯುದ್ಧ, ಯುದ್ಧವೆಂದರೆ ಜೀವನವೆಂದಾಗಿತ್ತು. ಇದರ ನಡುವೆ ಜನಸಾಮಾನ್ಯರ ಸ್ಥಿತಿ ಅಧೋಗತಿಗಿಳಿದಿತ್ತು.

ಕಂಪ್ಲಿ ಪಾಳೆಯಗಾರರ ಆಳ್ವಿಕೆಯ ಸಂದರ್ಭದಲ್ಲಿ ಜನಸಾಮಾನ್ಯರ/ದಲಿತರ/ಮಹಿಳೆಯರ ಸ್ಥಿತಿ ಹೇಗಿತ್ತು ಎಂಬುವುದನ್ನು ನೆನೆಸಿಕೊಳ್ಳುತ್ತಾ ತಳಮಳಗೊಂಡ ಜನಪದ ಮಹಿಳೆ ಹೀಗೆ ಹೇಳುತ್ತಾಳೆ

ಬಳ್ಳಾರಿ ನೀ ನೋಡೆ ಬೆಳ್ಳಿ ಉಡೇವು ನೋಡ
ಬೆಳ್ಳಿನೆರಡು ಗಿಳಿನೋಡೆ| ತಂಗೆವ್ವ
ದಲ್ಲಾಳಿ ನೋಡೆ ದೌಲತ್ತು
ಕಂಪ್ಲಿಯನ್ನು ನೋಡೆ ಕೆಂಪು ಉಡೇವು ನೋಡೆ
ಕೆಂಪಾವೆರಡು ಗಿಳಿನೋಡೆ| ನನ ತಮ್ಮ
ಸಂಪನ್ನ ಬರುವ ನಡಿನೋಡೆ
ಕಂಪ್ಲಿ ಸಂತ್ಯಾಗ ವಜ್ರದ ಮಳಿಗ್ಯಾಗ
ಬಗ್ಗಿ ಸಣ್ಣಕ್ಕಿ ಆಳಿತನಾ| ರುದ್ರಣ್ಣ

ಹಬ್ಬಿನಾಗ್ಯೆತಿ ಚೆಲುವಕ್ಕಿ
ಹಂಪೆಗೆ ಹೊಳಿ ಚೆಂದ ಪಂಪಾಗೆ ಗುಡಿ ಚೆಂದ
ಹೇಮಕೂಟ ಚೆಂದ ಪರಸೀಗೆ| ಆನೆಗೊಂದಿ
ರಾಜರಿಗೆ ಚೆಂದ ಪ್ರಜೆಗಳು
ಉದ್ದನ್ನ ವೀರಭದ್ರ ಬಗ್ಗಿದರೆ ಬಸಣ್ಣ
ತಗ್ಗಿನಾಗಿರುವ ವಿರುಪಯ್ಯನ| ಗುಡಿ ಮುಂದ
ಗದ್ದಲಿಸಿ ತುಂಗೆ ಹರಿದಾಳ
ಹಾವಲ್ಲ ಅಂದ್ರೆ ಅರಣ್ಯೆಲ್ಲಾ ನಡುಗ್ಯೆತೆ
ಹಾವಲ್ಲ ಹಂಪಿ ಗುಡಿಮುಂದೆ| ತುಂಗಭದ್ರೆ
ಕೊಂಕು ಡೊಂಕಾಗಿ ಹರಿದಾಳೆ
ಬಸವಣ್ಣ ಹುಟ್ಯಾಲಿ ಹೊಸಪ್ಯಾಟಿ ಕಟ್ಯಾಲಿ
ರಸಬಾಳ ಕಬ್ಬು ಬೆಳೆಯಾಲಿ| ಕಂಪ್ಲಿಯ
ಬಸವನ ತೇರು ಎಳೆಯಲಿ
ಶರಣರು ಇರುವುದು ನೆಲೆ ನಮಗೆ ತಿಳಿಯಾದೆ
ನೆಲೆಮಾಳಿಗ್ಯಾಗಿರುವ ಪಂಪಾಪತಿ| ನೆಲಿಯು
ಮಾನವರಿಗಂತು ತಿಳಿದಾವೆ

ಇಡೀ ಗೀತೆಯಲ್ಲಿ ಪಾಳೆಯಗಾರರ ದಲ್ಲಾಳಿಗಳ ದೌಲತ್ತು ಹೇಗಿತ್ತೆಂಬುವುದನ್ನು ಕೆಲವೊಮ್ಮೆ ನೇರವಾಗಿ, ಕೆಲವೊಮ್ಮೆ ಸಂಕೇತಗಳ ಮೂಲಕ ಹೇಳುತ್ತಾಳೆ. ಕೆಂಪು ಉಡೇವು ಎಂಬುವುದು ಯುದ್ಧಗಳ ನಡುವೆ ರಕ್ತ ಮರುಗಟ್ಟಿರುವುದನ್ನು ಕುರಿತು ತಿಳಿಸುತ್ತದೆ. ದಲ್ಲಾಳಿ ತಾನು ಸಿರಿವಂತನಾದರೂ ಬಡವರ ಅಕ್ಕಿಯನ್ನು ಕಿತ್ತುಕೊಳ್ಳುವುದನ್ನು ಬಿಡಲಿಲ್ಲ. ರಾಜನಿಗೆ ಯಾವಾಗಲೂ ಪ್ರಜೆಗಳು ಚೆಂದ ಆದರೆ, ಪ್ರಜೆಗಳನ್ನು ರಾಜ ನೋಡಿಕೊಳ್ಳುತ್ತಿರಲಿಲ್ಲ. ೧೨ನೇ ಶತಮಾನದಲ್ಲಿ ಹುಟ್ಟಿ ಮೂಕರಾದ ಅಸ್ಪೃಶ್ಯರಿಗೆ ಬಾಯಿ ಬರುವ ಹಾಗೆ ಮಾಡಿ ತಾವು ಮನುಷ್ಯರೆಂದು ತಿಳಿಯುವ ಹಾಗೆ ಮಾಡಿದೆ ಬಸವಣ್ಣ ಮತ್ತೊಮ್ಮೆ ಹುಟ್ಟಲಿ, ಕಂಪ್ಲಿ ಹಾಳಾಗಿ ಬಸವಣ್ಣನೇ ಹೊಸದಾದ ಒಂದು ಪೇಟೆಯನ್ನು ಕಟ್ಟಲಿ ಎಂದು ಪಂಪಾಪತಿಗೆ ಮೊರೆ ಇಡುತ್ತಾಳೆ.

ಸಂಡೂರು ಸಂಸ್ಥಾನಕ್ಕೆ ಸಂಬಂಧಿಸಿದಂತೆ 'ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಬಿ. ಕೇಶವರಾಯರು ಹೇಳುವಂತೆ ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಸಂಡೂರು ಸಂಸ್ಥಾನದಿಂದ ಹೊರಕ್ಕೆ ಅಥವಾ ಹೊರಗಡೆಯಿಂದ ಸಂಡೂರು ಸಂಸ್ಥಾನದೊಳಗೆ ಯಾರೂ ಪ್ರವೇಶಿಸದಂತೆ ನಿರ್ಬಂಧ ವಿಧಿಸಲಾಗಿತ್ತು. ಸ್ವಾತಂತ್ರ್ಯ ಚಳುವಳಿಯ ಹೋರಾಟ ಹೊರಗೆ ನಡೆಯುತ್ತಿದ್ದರೆ ಅದರಲ್ಲಿ ಯಾರೂ ಭಾಗವಹಿಸುತ್ತಿರಲಿಲ್ಲ. ಅಲ್ಲಿನ ಸುದ್ದಿ ಸಂಸ್ಥಾನದೊಳಗೆ ಹಾಗೂ ಸಂಸ್ಥಾನದ ಸುದ್ದಿ ಹೊರಗಡೆ ಕೊಂಡೊಯ್ಯುವಂತಿರಲಿಲ್ಲ. ಸಂಸ್ಥಾನಿಕರಿಗೆ ಯುದ್ಧ ಭಯವೆಂದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದರೆ ಅವರು ಮನವರಿಕೆಯಾಗಿ ಎಲ್ಲಿ ನಮ್ಮ

ಮೇಲೆ ತಿರುಗಿ ಬೀಳುವರೋ ಎಂಬ ಭಯವಿತ್ತು' (ಸಂ. ಶೇಷಾದ್ರಿ, ಟಿ.ಆರ್.ಸಿ, ೧೯೯೮, ಪು. ೧೩೪). ಸಂಸ್ಥಾನದೊಳಗೆ ರಾಜರ ದಮನಕಾರಿ ಆಡಳಿತದಿಂದ ಜೀಸತ್ತ ಪ್ರಜೆಗಳು ಪ್ರಜಾಪ್ರಭುತ್ವಕ್ಕಾಗಿ ಹಾತೊರೆಯುತ್ತಿದ್ದರು. ಹೆಣ್ಣು ಮಕ್ಕಳು ಕೂಡ ರಾಜ್ಯದ ದೌರ್ಜನ್ಯಕ್ಕೆ ಬಲಿಯಾಗುತ್ತಿದ್ದರು (ಅದೇ ಪುಟ). ಯತ್ನಟ್ಟಿ (ತಾರಾನಗರ), ಹೊಸಳ್ಳಿ (ಭುಜಂಗ ನಗರ) ಜನರು ತಿರುಗಿ ಬಿದ್ದುದ್ದರಿಂದ ಇವರು ಅರಸರಿಗೆ ತಲೆ ನೋವಾಗಿ ಪರಿಣಮಿಸಿದ್ದರು. ಕಾರಣ ಇವರು ಅರಸುಗಳಿಂದ ಜೈಲು ಶಿಕ್ಷೆಯನ್ನು ಅನುಭವಿಸಬೇಕಾಗಿತ್ತು.

ಎಲ್ಲಾ ಪಾಳೆಯಗಾರರ ಕಾಲದಲ್ಲೂ ಹುಟ್ಟು, ಸಾವು, ಮಾಡುವ ಎಲ್ಲಾ ವೃತ್ತಿಗಳಿಗೂ ತೆರಿಗೆಗಳನ್ನು ಕೊಡಬೇಕಾಗಿತ್ತು ಎಂಬುವುದನ್ನು ಶಾಸನಗಳು ತಿಳಿಸುತ್ತವೆ. ವಿಜಯನಗರ ಪತನದ ನಂತರ ನಾಯಕರಾದ ಸ್ಥಳೀಯರಿಗೆ ರಾಜ್ಯವಾಳುವ ಅವಕಾಶ ದೊರೆಯಿತು ಎಂದು ಕೆಲವು ಇತಿಹಾಸಕಾರರು ನಾಯಕರ ಆಡಳಿತವನ್ನು ವೈಭವೀಕರಿಸುತ್ತಾರೆ. ಅವಕಾಶ ಎಂದರೆ ಯಾವ ಅವಕಾಶ ಜನಸಾಮಾನ್ಯರ ಮೇಲೆ ದಬ್ಬಾಳಿಕೆ ಮಾಡಿ ಅವರನ್ನು ಸುಲಿಯುವ ಅವಕಾಶವೇ? ರಾಜನ ಬಳಿ ನಲುಕಿದ ಅನುಭವವಿದ್ದ ನಾಯಕರು ತದನಂತರದಲ್ಲಿ ತಾವು ಪಾಳೆಯಗಾರರಾಗಿದ್ದಾಗ ಯಾಕೆ ಆ ರೀತಿ ನಡೆದುಕೊಂಡರು?

ಘೋರ್ಪಡೆ ಅರಸರು ತಮ್ಮ ಸಂಸ್ಥಾನದ ಜನಸಾಮಾನ್ಯರ ಎಲ್ಲಾ ಜಮೀನುಗಳನ್ನು ಕಿತ್ತುಕೊಂಡು ಅವರನ್ನು ಅತಂತ್ರದ ಸ್ಥಿತಿಗೆ ತಳ್ಳಿದರು. ಅವರು ಮತ್ತೆ ತಮ್ಮ ಭೂಮಿಯನ್ನು ತಾವು ಪಡೆದುಕೊಳ್ಳಲು ದೊಡ್ಡ ಭೂ ಹೋರಾಟಗಳನ್ನೇ ನಡೆಸಬೇಕಾಯಿತು. ಈಗಲೂ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದಲ್ಲಿ ಲಾಡ್, ಘೋರ್ಪಡೆ, ಸಿಂಗ್ ಇವರುಗಳ ಹೆಸರಿನಲ್ಲಿಯೇ, ಅವರ ವಶದಲ್ಲಿಯೇ ಅನೇಕರ ಜಮೀನುಗಳು ಸೇರಿ ಹೋಗಿವೆ. ಬರಗಾಲದ ಸಂದರ್ಭದಲ್ಲಿ ಒಂದು ರೊಟ್ಟಿ, ಒಂದು ಸಾರಾಯಿ ಪಾಕೀಟಿಗೆ ಇಡೀ ಜಮೀನನ್ನು ಮಾರಿದ ದಲಿತ ಭೂಪರಿದ್ದಾರೆ ಎಂಬುವುದಕ್ಕಿಂತ ಅವರನ್ನು ಮಾರುವ ಹಾಗೆ ಮಾಡಿ ಜಮೀನನ್ನು ಕಿತ್ತುಕೊಂಡ ಭೂ ಮಾಲೀಕ ಭೂಪರಿದ್ದರು ಎಂದು ಹೇಳಬೇಕು, ಈಗಲೂ ಇದ್ದಾರೆ. ಬಳ್ಳಾರಿ, ಸಿರುಗುಪ್ಪ ಭಾಗದಲ್ಲಿ ಆಂಧ್ರದ ರೆಡ್ಡಿಗಳು ದಲಿತರ ಜಮೀನನ್ನು ಕಬಳಿಸಿಕೊಂಡು ಒಬ್ಬೊಬ್ಬರು ೫೦೦ ರಿಂದ ೧೦೦೦ ಎಕರೆಗಳಂತೆ ಜಮೀನನ್ನು ಮಾಡಿಕೊಂಡಿದ್ದಾರೆ. ಇಡೀ ಹಳ್ಳಿಗಳ ಎಲ್ಲಾ ದರ್ಬಾರು ನಡೆಸುವವರು ಇಲ್ಲಿ ಆಂಧ್ರದ ರೆಡ್ಡಿಗಳೇ. ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಇವರು ಇದ್ದಾರೆ. ರಾಯಚೂರಿನಲ್ಲಿ ಇವರ ದರ್ಬಾರು ಹೆಚ್ಚಾಗಿದೆ. ಆಂಧ್ರದಲ್ಲಿ ರೆಡ್ಡಿಗಳ ದಬ್ಬಾಳಿಕೆ ಕಾರಣವಾಗಿಯೇ ಅಲ್ಲಿ ನಕ್ಸಲಿಸಂ ಹೆಚ್ಚಾಗಿದೆ.

ಊಳಿಗಮಾನ್ಯಶಾಹಿ ಎಂದ ತಕ್ಷಣ ನಾವು ಯಾವುದೋ ರಾಜರನ್ನು ಇಟ್ಟುಕೊಂಡೇ ಮಾತನಾಡುತ್ತೇವೆ. ನಮ್ಮಲ್ಲಿಯೇ ಇರುವ ಊಳಿಗಮಾನ್ಯಶಾಹಿಗಳ ಕುರಿತು ಮಾತನಾಡುವುದಿಲ್ಲ ಯಾಕೆ? ಊಳಿಗಮಾನ್ಯಶಾಹಿ ಈಗಲೂ ದಲಿತ ಮಹಿಳೆಯರ ಮೇಲೆ ತಮ್ಮ ಕರಾಳಬಾಹುಗಳನ್ನು ಚಾಚದೆ ಬಿಟ್ಟಿಲ್ಲ. ಇದರ ಪರಿಣಾಮ ಕುಟುಂಬದಲ್ಲಿ ಆದ ತಲ್ಲಣಗಳು ಭೀಕರವಾದವು. ಡಣಾಯಕನ ಕೆರೆಯ ಸಣ್ಣ ದುರುಗಮ್ಮ ಕುಟುಂಬದಲ್ಲಿ ಮೂರು ತಲೆಮಾರುಗಳಲ್ಲಿ ಆದ ತಲ್ಲಣಗಳು ಇಡೀ ದೇಶದ ದಲಿತ ಮಹಿಳಾ ಕುಟುಂಬದಲ್ಲಿ ಆದ ತಿರುವುಗಳೇ ಆಗಿವೆ.

ಸಣ್ಣ ದುರುಗಮ್ಮ (ತಾಯಿ): ನನ್ನ ಹೆಸ್ರು ಸಣ್ಣ ದುರುಗಮ್ಮ ರಿ. ನಮ್ಮದು ಏನ್ ಕೇಳ್ತಿಬಿಡಮ್ಮ ಬಾಳ ಕಷ್ಟಪಟ್ಟೀವಿ. ಮುಂಜಾಲಿ ಏಳು ಗಂಟೆಗಿ ಹೋದರ ರಾತ್ರಿ ಒಂಭತ್ತು ಗಂಟೆತನಕ ದುಡಿತಿದ್ವಿ. ಅವ್ರು ಒಂದು ರೊಟ್ಟಿ ಕೊಟ್ರೆ ತಿನ್ನಬೇಕು, ಜೀವ್ನ ಮಾಡಬೇಕು ನಾವು. ನಮ್ಮ ಅವ್ವನದೂ ಇದೇ ಪಡಿಪಾಟಲೆ. ಅವ್ರು ಬ್ಯಾಸಾಯ ಮಾಡ್ತಾ ಇದ್ರು. ನಮ್ಮದು ಒಂದು

ಎಕರೆ ಹೊಲ ಐತಿ. ನಮ್ಮದು ಇದೇ ಊರು. ನಮ್ಮ ಅವ್ವೋರದ್ದು ಇದೇ ಊರು. ಆಕಿನ್ನ ಮನೇಗೆ ಬಿಟ್ಟಿದ್ರು. ಅಪ್ಪ ಅವ್ವನ್ನೂ ಬಿಟ್ಟಿದ್ರಂತ. ನಮಗ ಮನ್ಯಾಗ ಬಿಟ್ಟಾಗ ನಾನು ಆಗ್ಲೇ ದೊಡ್ಡಾಕಿ ಆಗಿದ್ದೆ. ಅಂದಾಜು ಪ್ಯಾಗ ನನಗೆ 14-15 ವರುಸುದಾಗ ದೇವ್ರು ಕಟ್ಟಾರ ಇಲ್ಲೇ ಹುಲಿಗೆಮ್ಮನ ದೇವಸ್ಥಾನದಾಗ. ಹುಲಿಗಿ ಏನು ನಮಗೇನು ದೂರ ಏನು ಹತ್ರನೇ ಐತಿ ಆದರೆ ಅಲ್ಲಿಗೆ ಹೋಗ್ತೀವಿ. ದೇವ್ರು ಕಟ್ಟೋವಾಗ ಸುರಿಗಿ ಸುತ್ತುತಾರ. ಕಂಕಣ ಕಟ್ಟುತಾರ. ಅರಿಶಿಣಕೊಂಬು, ಹೂವು ಇಕ್ಕುತಾರ. ಮಲ್ಲಿಗಿ ಹೂವು ಕಂಕಣ ಐದು ಮುಗಿಸಿ ಹೇರ್ತಾರ, ಅದರಾಗ ನಮ್ಮನ್ನಾ ಕುಂದ್ರುಸೋದು. ಒಂಭತ್ತು ಮಂದಿ ಜೋಗಮ್ಮನ್ನೋರನ್ನಾ ಕರಕಂಡು, ಒಂಬತ್ತು ಪೂಜಿ, ಒಂಬತ್ತು ಕೊಬರಿ ಬಟ್ಲು, ಒಂಭತ್ತು ಉತ್ತುತ್ತಿ. ದುಂಡು ಅಡಿಕಿ, ಬಂಟನ ಬೀಜ, ಅರಿಶಿನಕೊಂಬು ಎಲ್ಲಾದೂ ಶಾನಿ ಬೇಕು ಅಲ್ಲಿಗಿ.

ಇಂಗ ಹೊಸದು ಇಂಗ ತಳಕ ಹೊರಿಸಿದರೆ ಇಂಗೇ ಒಂಬತ್ತು ಪೂಜಿ ಹಾಗಬೇಕು. ನಾವು ಇಲ್ಲಿ ನಮ್ಮೂರಿಂದಾನೇ ಮುಖ್ಯಸ್ಥನೇ ಕರಕಂಡು ಹೋಗಿ ದೇವ್ರನ್ನಾ ಕಟ್ಟಿಕೊಂಡು ಬರ್ತೀವಿ. ಲಗ್ನ ಆಗಾದರಾಗ ಸಾಪ್ರದಬ ಆಟು ಹಾಕ್ಕೆತಿ. ಈಗಿನ ಕಾಲಕ ಐದು ಸಾವಿರ ರೂಪಾಯಿ ಬರತ್ಕೆತಿ ದೇವ್ರು ಕಟ್ಟಾಕ.

ಮಿಂಡ್ರುಕ ಹುಟ್ಟಿದ ಸೂಳೇರು ಈಗ ಯಾರು ಮಾಡ್ತಾರ. ಎಲ್ಲರೂ ಗಂಡ ಗಂಡ ಅಂತ ಹೋತಾರ. ತಾಳಿ ಕಟ್ಟಿಕೆನಾಕ. ನೋಡ್ರಿ ಮನ್ಯಾಗ ಬಿಡೋದೇ ಚೇಸಿ ಅನಿಸ್ತೈತಿ. ಒಬ್ಬರ ಕೈಯಾಕ ಯಾಕ ಉರಿಯಬೇಕು. ಒಬ್ಬರ ಕೈಲಿನಾಗ ಉರೇದಕಿನ್ನಾ ನಮ್ಮ ಮನ್ಯಾಗ ನಾವು ಇದ್ದು ಕೈಲಿ ಆದಷ್ಟು ದುಡಿಕೊಂಡು ತಿಂದು, ನಾಕು ಮಕ್ಳು ಆದ್ರೆ ಮನೆಮುಂದಿ ಇರ್ತಾವ ಬುಡು ಅಂತ ಅನಿಸ್ತೈತಿ. ಒಂದು ಲೆಕ್ಕದಾಗ ಮದ್ವಿ ಆದ್ರ ಅಂತ ಇಟ್ಕುಕಂದ್ರು ಗಂಡಗಾರ ಸುಮ್ನಿ ಬಿಡ್ತಾನೇನು ತುಲ್ಲು ಹರೇತನಕ ಬಡೀತಾನ. ಇತ್ತ ಬಡಿಸಿಕನೂ ಬೇಕು, ದುಡ್ಡು ಅವ್ನ ನೋಡಿಕಂಬೇಕು. ಇದು ಯಾಕ ಬೇಕು ಅಂತೀನಿ. ಮೈದ್ನ ಬಡಿತಾನ, ಮಾವ ಬಡಿತಾನ, ಅತ್ತಿ ಬಡಿತಾಳ, ಎಲ್ರೂ ಬಡಿತಾರ ಈಗ ಯಾರೂ ಒದಿಸಿ ಕೊಂಬೋದಿಲ್ಲ. ನಮ್ಮ ಕಾಲದಾಗ ಇತ್ತು. ಈ ಕಾಲದಾಗ ಏನು ಇಲ್ಲ ಅವರಿಗೆ ತೋರಿಸೋದು ಬರೋದು. ನಮ್ಮ ಮನ್ಯಾಗ ಅನುಕೂಲ ಇಲ್ಲಮುಕ ಹಾಗೆ ಬಿಟ್ಟುಕಂದ್ರು. ಇಲ್ಲದಿದ್ದರೆ ಯಾವನಿಗಾದರೂ ಹಡ್ದುಕೊಡ್ತಿದ್ರು. ಮನ್ಯಾಗ ಗಂಡುಮಕ್ಳು ಇರಬೇಕಮ್ಮ ದುಡೇಕ. ಈಗ ಮನೆತಾಳ ಬಾಳೆಮಾಡೋಕ ಬೇಕು. ಬ್ಯಾಸಾಯ ಅದೋಟು. ಅವ್ರು ಇಲ್ಲದಕಾಸಿ ನಮ್ಮನ್ನಾ ಬುಟ್ಟುಕಂಡ್ರು. ನಮ್ಮ ಮನ್ಯಾಗ ಯಾರೋ ಗಂಡು ಮಕ್ಳು ಇದ್ದಿಲ್ಲ. ನಾವು ನಾಲಾರು ಇದ್ವಿ. ನನ್ನ ಮುಂದಿಲೋರು ಗಂಡುಮಕ್ಳು ಬದಿಕಿರೋದು. ಈಗ ಒಬ್ಬಾತನೇ ಇರೋದು ನನ್ನ ತಮ್ಮ. ಇಲ್ಲೀ ಅದಾನ ದುಡಿಯೋಕೋಗ್ತಾನ.

ನಾವು ನಾಕು ಜನಾನು ಇಂಗೇ ಕೂಲಿಗಿ ಹೋಗ್ತೋದು. ರೈತರು ಮನಿಗೀ ಮತ್ತೆ ನಮ್ಮ ಹೊಲದಾಗ ಕೆಲ್ಸ ಬಂದಾಗ ಹೊಲಕೆಲ್ಸಮಾಡಿಕೆನ್ನೋದು ಮಾಡ್ತೀವಿ. ಹೊಲದಾಗ ಜ್ವಾಳ, ಕಡಿಲಿ, ಇವು ಬೆಳಿತೀವಿ. ನನ್ನ ತಮ್ಮ, ನನ್ನ ಹಿರೇಮಗ, ನಮ್ಮ ಅಕ್ಕನ ಮಗ ಆತ ದನ ಕಾಯೋನು. ಆಗಿಲಿಂದ ಗೌಡ್ರು ಮನ್ಯಾಗ ಸಂಬ್ಳುಕ ಅದಾನ. ಹನ್ನೆರಡು ವರುಸ ಅದಿಮೂರು ವರುಸ ಆದ ಅವುನುಕ ಬರೀ ಹನ್ನೊಂದುನೂರು ರೂಪಾಯಿಕ ಹನ್ನೆರಡು ವರುಸ ದುಡುದಾನ. ಅಂಗ ದುಡ್ಡು ಜ್ವಾಪಾನ ಆಗೀವಿ ನಾವು.

ನನಗ ಐದು ಮಂದಿ ಮಕ್ಳು. ಐದುಮಂದ್ಯಾಗ ಎರಡೇ ಉಳಿದಿರೋದು. ಹುಲಿಗೆಮ್ಮ, ಪಾರ್ವತಮ್ಮ. ಪಾರ್ವತಮ್ಮನ್ನಾ ಹೊಸಪೇಟಿಗಿ ಕೊಟ್ಟಿದ್ವಿ. ಎರಡೇ ಹಡ್ದಲು. ಗಂಡ ಸತ್ತೋದ. ಕೆಮ್ಮು-ದಮ್ಮು-ಗೂರು ಅಂಗಾಗಿ ಸತ್ತೋದ. ಮತ್ತೆ ಎರಡು ಮಕ್ಳುನ ಮಗಳನ್ನಾ ಕರಕಂಬಂದು ಮನ್ಯಾಗ ಇಟ್ಕುಕೊಂಡಿದೀವಿ. ಆಕೆ ಸೊಸಿಗಳು, ಮೊಮ್ಮಕ್ಕಳು ಅದಾರ. ಮೊಮ್ಮಕ್ಕಳುಕು ಮದಿವಿ ಆಗೈತಿ. ಪಾರ್ವತಮ್ಮ ಅಂತೂ ಬಾಳ ಕಷ್ಟ ಪಟ್ಟಾಳ. ಆರು ವರ್ಷ ಗಂಡನ ಜ್ವಾಪಾನ ಮಾಡ್ಯಾಳ ಬರೀ ಬೇಲ್ದಾರ್ ಕೆಲ್ಸ ಮಾಡಿ ನನ್ನ ಮಗ್ಳು. ಗಂಡನ್ನ ಸಾಕಿ ಆತನೂ ಮೊದಲಿಗೆ ಎಲ್ಲ ಬ್ಯಾಸಯಕ ಹೋತಿದ್ದ.

ನನ್ನ ಎರಡನೇ ಮಗ್ಳು ಹುಲಿಗೆಮ್ಮನ್ನಾ 13 ವರುಸಕ ಮನ್ಯಾಗ ಬಿಟ್ವಿ. ದೊಡ್ಡಾಕಿ ಆಗಿದ್ಲು. ದೊಡ್ಡಾಕಿ ಆಗಿ ಮೂರು ನಾಲ್ಕು ವರುಸುದಾಗ ದೇವ್ರು ಕಟ್ಟೇವಿ. ನಮ್ಮ ಮನಿತನಕ ನಮಗ ಬೇಕು ನಾವು ಬಿಟ್ಟುಕೊಂಡಿವಿ. ಬ್ಯಾಲ್ಲಿ ಕೊಟ್ವಿ. ನಮ್ಮ ಅನುಕೂಲ ಆದಂಗ.

ಬಾರಿಕರು, ನಾಯಕರು, ಮಾದಗಿರಲ್ಲಿ ಜಾಸ್ತಿ ದೇವ್ರು ಕಟ್ಟಿದಾರ. ನಮ್ಮ ಕುಲದಾಗ ಮೊದಲಿನಿಂದ ನಡದೈತಿ ಬಿಡತಾರ. ಪೂರ್ವಾಕದಿಂದ ಬಂದೈತಿ ಅದು. ಈಗ ನಡೆಯುಸಿ ಇಲ್ಲ. ಬ್ಯಾರಿ ಜಾತಿಗಳಾಗ ಬಿಡಂಗಿಲ್ಲ. ನಾವು ಮೂಳಿಗಿ ತಿಂದುಗಂಬೋರು, ಬಿಟ್ಟುಕೊಂತೀವಿ ಅವ್ರು ನೀರು ಸಾರು ಕುಡೇರು ಯಾಕ ಬುಡುತಾರ. ಎರ್ಡು ರೂಪಾಯಿ ಕೊಡಲ್ಲಿ ಒಂದು ರೂಪಾಯಿ ಕೊಟ್ರು, ಯಾಕ ದುಡ್ಸುತಾರ, ಅವ್ರು ಅಂಗ ಬಾಣ ಶ್ಯಾಣೆಕಿರು. ಆರಾಣೆ ಮೂರಾಣೆಗೆ ಬಡವ್ರು ಕೂಡ ದುಡಿಸಿಕಂದು ತಿಂಬೋದು, ಮತ್ತಿ ಅವ್ರು ಗಂಟು ಕಟ್ತೋದು. ಅಂಗ ಕಲಿಬಾರ್ದು. ಒಬ್ಬರತೆಲಿ ಒಡಿಬಾರ್ದು. ನ್ಯಾಯನಾಗಿ ದುಡ್ಕಂದು ತಿಂದ್ರ ನ್ಯಾಯಲಿ ದೇವ್ರು ನಡಿಸಾದು. ದುಡಿಬೇಕು ಅಂಬೋ ಉಮ್ಮದು ಇತ್ತು ದುಡಿದೀವಿ. ಏನು ಅನ್ಸಿಲ್ಲ.

ಇಬ್ಬರೂ ಮಕ್ಳನೂ ಕೊಟ್ಟು ಬಿಟ್ರ ಜ್ವಾಪಾನ ಮಾಡೋರು ಯಾರು? ನಾನು ಸತ್ತು ಹೋದ್ರೆ ಎಂತಾವಾನ ಮಕ್ಳು ಇದ್ರ, ಎಂತದ್ದೂ ನಿಮ್ಮಂತಾವ್ರೋರು ಮನ್ಯಾಗ ದುಡ್ಡು ತಂದು ಗಂಜಿ ಬಸಿತಾರತಾಯಿ ಅಂತ. ಎರಡ್ನಾ ಕೊಟ್ರ ಗತಿ ಏನು? ಅದ ಕ್ಕೋಸ್ಗರನೇ ಬಿಟ್ಟೇವಿ. ಈಗ ನನಗಿ ಗಂಡು ಮಕ್ಳು ಇಲ್ಲ. ಅದಕೆ ಬಿಟ್ಟೇವಿ.

ಗಂಡುಮಕ್ಳು ಇಲ್ಲದೇ ಇರೋರು ಮಾತ್ರ ಬಿಡ್ತೇಕು. ಗಂಡುಮಕ್ಳು ಇರೋರು ಕೆಲಮಂದಿ ಬಿಡುತಾರ. ಉದ್ಯೋಗ ಇಲ್ಲದ್ದೋರು ಅವ್ರು. ಹೆಣ್ಣು ಮಕ್ಳನ ಮನ್ಯಾಗ ಬಿಟ್ರ ಮುಕಳಿಮಾರಿ ತೋಳಿತಾರ. ಜೋಪಾನ ಮಾಡ್ತಾರ. ಸೊಸಿಂದ್ರು ಬಂದಕಂದ್ರ ನೋಡಿಕೆಂತಾರಾ? ಅತ್ತೆ ಅಂತ. ಅವ್ರು ಇಲ್ಲ ಅಂದ್ರೆ ಅವ್ರನ್ನಾ ಯಾರು ನೋಡ್ತೇಕು. ಈಗ ನನಗಿ ಇಲ್ಲ. ಆಕಿ ಇದಾಳ ನೋಡಿಕೆಂತಾಳ. ಬ್ಯಾಕಿ ಇಲ್ಲದಿರೆ ನನ್ನ ಯಾರು ನೋಡ್ತೇಕು. ಬ್ಯಾನಿ, ಬೇಕರಿಕೆ, ಒಳ್ಳೇದು, ಕೆಟ್ಟದ್ದು ನಮ್ಮನ್ನಾ ಯಾರು ನೋಡಿಕೆಂಬೇಕು ಅದಕಾಗೇ ಬಿಟ್ಟುಕಂಡಿದ್ದು. ಗಂಡುಮಕ್ಳು ಇದ್ರ ಬುಡಬಾರ್ದು.

ನಮ್ಮ ಗಂಡು ಮಗ (ಜೊತೆಗಾರ) ಇಲ್ಲೇ ದುಡುದಾನ. ಹೋಗಾದು ಬರಾದು ಏನು ಇಲ್ಲ. ಆತನದು ಇರುಪಾಪುರ ಕೂಡ್ಲಿಗಿತಾಗ. ಈಗನೂ ಜೊತಿನಾಗೇ ಅದಾನ. ನಾವಿಬ್ಬರೂ ಬೇಸಿ ದುಡುಕಂದು ತಿಂದೀವಿ.

ಈಗ ಏನು ಕೆಲ್ಸ ಮಾಡಲ್ಲ, ಎಲ್ಲಾ ಬುಡುಬುರಿ ಆಗೇದಿ. ಈಗ ಎಲ್ಲಾ ಮಗ್ಳೇ ನೋಡಿಕೆಂತಾಳ. ನಾವು ಬರೀ ಬ್ಯಾಸಯಗಾರರು. ದುಡಿಯೋದು, ತಿನ್ನೋದು. ನಾವು ಏನು ದಂದಿ ಮಾಡಿಲ್ಲ. ನೆಲ್ಲು ಕೊಯ್ಯೋದು, ನೆಲ್ಲು ಬಡಿಯೋದು, ನೆಲ್ಲು ಹೋರೋದು, ಕಡಲಿ ಕಿತ್ತೋದು, ಸುಲೇದು, ಜ್ವಾಳ ಕೊಯ್ಯೋದು, ಗೂಕಡು ಹಾಕೋದು ಎಲ್ಲಾ ಮಾಡೀವಿ. ಮೂರು ಆಣೆ ನಾಲ್ಕು ಕೊಡ್ತಾ ಇದ್ರು. ಈಗೆಲ್ಲಾ ಜಾಸ್ತಿ ಮಾಡೇರ.

ಏನು ತಿಂಬಾಕ ಆಗ ಜವಾರಿಕಾಳು, ಇಷ್ಟು ಇಷ್ಟು ತೆನಿ, ನಾವು ಸಿಸ್ತು ಬೆಳಿತೀವಿ ಅಂದ್ರ ಆರು ಚೀಲ, ಐದು ಚೀಲ, ನಾಲ್ಕು ಚೀಲ ಇಷ್ಟೇ ಬೆಳೆತಿದ್ವಿ. ಯಾವಾಗ ಈ ಜ್ವಾಳ ಬಂದುವು ನೋಡು ಆಗಿಲಿಂದ ಬರ ಹರಿತು. ಈಗ ಎಲ್ಲಾ ಬಂದಾವಲ್ಲಾ ಅದೇನೋ ಜ್ವಾಳ ಅಂತಾರಿ ಎದು ನಂಬುರು (ಹೈಬ್ರಿಡ್). ಈ ಜ್ವಾಳ ಬಂದಾಗಲಿಂದ ಕೂಳು ಕೂಳು ಅಂದಂಗಾಗೈತಿ. ನಾವು ಬೆಳೆತಿದ್ದುದು ಬಾಳ ಗಟ್ಟಿ ಇತ್ತು. ಆರು ತಿಂಗ್ಳು ಫಲ ಅದು, ನಾಲ್ಕು ತಿಂಗ್ಳ ಫಲ ಇದಾತು. ಈಗನದು ಈಟುದ್ದ ತೆನಿ ಬುಡುತಾವ, ಈಸು ಕಾಳು ಬ್ಯಾಳಿ ಸಿಗತಾದ.

ಮೊದಲೆಲ್ಲಾ ಮನೆ ಮಾಡ್ತಿದ್ವಿ. ನಿಮ್ಮಂತವ್ರೋರ್ದು ಎರ್ಡು ಮೂರು ಮನಿ ಮಾಡಿದರ ಎರಡು ಮೂರು ಸೇರು ಕಾಳು ಸಿಗ್ತಾ ಇತ್ತು. ನಾವು ಅವ್ರು ಆಳುಗಳಾಗಿ ಕೆಲ್ಸ ಮಾಡ್ತಿವಲ್ಲಾ ಅವ್ರೇ ನಮ್ಗ ಬುಟ್ಟು ಬುಡುತಾರ ಕೊಡೋದಿಲ್ಲ. ಅವ್ರು ಬಾಗಕ ಏಸು ಮನಿ ಬರ್ತಾವ ಅದನ್ನೆಲ್ಲಾ ಅವ್ರೇ ಮಾಡಡೇ. ನನ್ನ ಬಾಗಕ ಏಸು ಮನಿ ಬರ್ತಾವ ಓಸು ನಾನೇ ಮಾಡಿಕೆಂತೀನಿ. ನನಗೂ

10-12 ಮನಿ ಅದಾವು. ನಾವು ದಾವರ ಪೂರಕ ಕೆಲ್ಸ ಮಾಡೀವಿ. ಇದು ಅಜ್ಜ ಮುತ್ತಜ್ಜರ ತಲೆಲಿಂದ ಬಂದೈತಿ. ಅವ್ರು, ಈಡಿಗರು, ಲಿಂಗಾಯತರು, ಬ್ರಾಮರು, ನಾಯ್ಕರು ಇಂತವರ ಹತ್ರನೇ ದುಡಿದೀವಿ. ನಮ್ಮೂರಗ ಇರೋ ಕುಲಗಳು ಇಷ್ಟೇದ.

ಹೊಲದಾಗ ಕೆಲ್ಸ ಮಾಡೋಕೋದರ ಕಾಳು ಬುಡುತಾರ. ಮತ್ತಿ ಬದುಕು ಮಾಡೋಕ ಹೋದರ ಕೂಲಿ ಕೊಡ್ತಾರ. ಚಿಕ್ಕೋಳಿಂದ ಬಾಳ ದುಡಿತೀನಿವ್ವ. ನನ್ನ ತಾಯಿ ಬಾಳ ದಡ್ಡೋದಿ ಹೆಣ್ಣುಮಗ್ಳು. ಬರ್‍ತಾ ಬರ್‍ತಾ ಬಾಳ ತ್ರಾಸ ಆದ್ಲು. ಕೆಲ್ಸಕ ಹೋಗಾಕ ಆತಿದ್ದಿಲ್ಲ. ನಾನೇ ದಿನ ದುಡುದು ಅಂಗೆ ದುಡಿದೀನಿ. ಎತ್ತು ಯಾವ ತರ ದುಡಿತಾವ ಅಂಗ ದುಡಿದೀನಿ.

ನನಗೂ ಚೆನ್ನಾಗಿಲ್ಲದಂಗ ಆಗೈತಿ. ಕೆಮ್ಮು, ದಮ್ಮು, ಜ್ವರ ಅಂಗೇ ಕುಂದುಕಂಡ್ರ ಮತ್ತಷ್ಟು ಜಾಸ್ತಿ. ಹೊರಾಕ ಹೋಂಟರ ಎಲ್ಲಾದು ಬುಟ್ಟು ಹೋಕೈತಿ. ಇವು ಅಂತ ಅಕ್ಕಿ ಬಾನ ನೀರು ಸಾರು ಕುಡಿತೀವಿ ನೋಡು ಮತ್ತಿಷ್ಟು ಜೆಷ್ಟು. ರೊಟ್ಟಿ ಚಟ್ನಿ ತಿಂದು ಹೊಂಡು ಹೆಂಗ ಇರ್‍ತೀಯಾ ಅಂಬೋದು ನೋಡ್ತೀನಿ. ಈಗ ಎಲ್ಲಾ ಒಂದರಾಗೂ ಉಸುರಿಲ್ಲ. ಅಕ್ಕಿಬಾನ, ನೀರುಬ್ಯಾಳಿ ಉಣ್ಣೋಕಿರಲ್ಲ. ನಮಗೆ ಏನು ಉಸುರಿಲ್ಲ. ನಾವು ಸೊಪ್ಪು ರೊಟ್ಟಿ ತಿಂದೋರು ಗಟ್ಟಿ. ನಾವು ಉಪ್ಪು ಹಾಕೆಂದು ತಿಂದೀವಿ. ಎಣ್ಣಿಪಣ್ಣಿ ಏನು ಹಾಕೆಂದು ಉಂಡಿಲ್ಲ. ಅಣ್ಣಿಸೊಪ್ಪು, ಕೋಳಿಜುಟ್ಟಿ ಸೊಪ್ಪು, ತಿರುಸಾಲಿ ಸೊಪ್ಪು ಇಂಥ ಸೊಪ್ಪುಗಳನ್ನು ಕುಚ್ಚಿಕೊಂಡು ಒಂದೊಂದು ರೊಟ್ಟಿ ತಿಂದೀವಿ. ನಮಗ ಇದ್ದ ಬಿಗುವು ಇವ್ರುಗಿ ಇಲ್ಲ. ರೊಟ್ಟಿ ಜಾಸ್ತಿ ಸಿಗ್ತಾ ಇದ್ದಿಲ್ಲ. ಎರ್‍ಡು ರೊಟ್ಟಿ ಸಿಗಬೇಕು ಅಂದ್ರ ಮಸ್ತು ಆಗೋಗಿತ್ತು. ಜ್ಯಾಳ ಬರೋತನ ಬರಗಾಲ ಇದ್ದಿದ್ದೇ. ಬಾಳ ಕಷ್ಟ. ಮಳಿ ಕಮ್ಮಿ ಇಲ್ಲಿ. ತಿನ್ನಾಕ ಇಲ್ಲದಾಗ ನೀರು ಕುಡ್ದು ಸುಮ್ನೆ ಮಕ್ಕಾಳಾದು. ಒಂದು ಊರು ಬಿಟ್ಟು ಒಂದು ಊರುನಾಗ ದುಡುಕಂದು ತಿಂದೀವಿ. ದರಗ, ಬ್ಯಾಲಕುಂದಿ, ನಾಗಲಾಪುರ ಈ ಕಡಿ ಎಲ್ಲಾ ಹೋಗೀವಿ. ದೂರ ಹೋಗಿದ್ದಿಲ್ಲ.

ನಮ್ಮ ಜೊತಿ ಇರೋ ಗಂಡ, ಮಗ ಕಟ್ಟಿಕೆಂದೀರಾ ಇದ್ರೂ ಉಣ್ಣೋ ಗಂಗಾಳ ತಗಂಡು ಬಡೀತಿದ್ದ. ಓಡಿ ಹೋಗಿ ಬಿಡ್ತಿದ್ದೆ. ನಾನು ಬೈತಿದ್ದಿಲ್ಲ. ಇಲ್ಲದ್ದು ಎಗರಾಡಿದ್ದರೆ ಕಿತ್ತುಕೆಂಡು ಹೋದರೆ ಏನು ಮಾಡ್ತೀಯಾ! ಇಷ್ಟು ಮಕ್ಳು ಕಟ್ಟಿಕೆಂಡು ನಾನು ಜೀವ್ನ ಮಾಡಾಕಿ. ಇಲ್ಲದ್ದು ಹೇಳಿದರೆ ಕೇಳ್ತಾರೇನು, ಸಾರಾಯಿ ಕುಡುದರ ಅಂಗಾ ಬಟ್ಟೆ ಬುಡಾದೇ ಬಚ್ಚಲದಾಗ ಬೆಳಗಾಗತಕಾನಾ, ತಿನ್ನೋದು ಮಕ್ಕಾಳೋದು ಕದ ಹಾಕೆಂದು.

ಮೊದ್ಲು ಒಬ್ಬಾತ ಹೆಣ್ಣು ಮಾಡಿದ್ದ. ಆತ ಹೋದ ಮ್ಯಾಲೆ ಈತ ಬಂದ. ಎರಡನೇತ. ಮೊದ್ಲೇ ಆತ ಸತ್ತ. ಆತ ಇದ್ದಿದ್ದರೆ ನಾನು ಮಾಡ್ತಾ ಇದ್ದಿಲ್ಲ. ಆತ ಸತ್ತಿದ್ದಕೆ ನಾನು ಮಾಡೀನಿ. ಆತನದು ನಾಗಲಾಪುರ. ದೊಡ್ಡ ಮಗ್ಳು ಆತಗ ಹುಟ್ಟಿರೋದು. ಎರ್‍ಡನೇತ ಬಂದಾಗಿಂದ ಇಬ್ಬರೂ ಜೊತೆನಾಗೇ ಅದೀವಿ. ತಾಯಿ ಒಂದು ವರುಸ ಹೋಗಿ ಎರ್‍ಡು ವರುಸುದಾಕ ಬಿತ್ತು ಅಂದ್ರ ಹಡದುಬುಡೋದೇ. ನಮ್ಮ ಎಲ್ಲಾರೂ ಅಷ್ಟೇ ನಾವು-ನಮ್ಮ ಅಕ್ಕ ಅಂಗೇ. ನಾನು ಅಂಗೇ, ನನ್ನ ಮಕ್ಳು ಅಂಗೇ ಎಲ್ಲಾರ್‍ರೂ ಅಂಗೇ, ನನ್ನ ಅವ್ವ, ನಮ್ಮ ಅಮ್ಮ ಎಲ್ಲೂನೂ ಮನಿನಾಗೇ ಬಿಟ್ಟದ್ರು. ಅವ್ರೂ ಅಂಗೇನಾ ಎರ್‍ಡ್ ವರುಸನಿಂದಿರಿಸಿರೋದು ದೊಡ್ಡೋರಾದಾಗ, ದೊಡ್ಡೋರಾಗಿ ಎರ್‍ಡು ವರುಸು ಆತು ಅಂದ್ರು. ಕೂಸು ಆಯಿತೇನೇ ತೊಟ್ಟಲು ಕಟ್ಟಿಬುಡಾದೇನೇ. ಈಗ ಕೆಂಚಮ್ಮನ್ನೂ, ಶಾಂತಮ್ಮನೂ ಅಂಗೇ ಬಿಟ್ಟೀವಿ, ಇಲ್ಲಕೀರಿ ಇವ್ರೂ ನಮ್ಮಂಗೇ ಹಡದುಬುಡೋರು. ಓದು-ಓದು ಅಂತ ಸುಲುದು ಹತ್ತಿದ್ವು.

ನಮಗ ಸಗಿಣಿ ಅಂದ್ರ ಬಂಗಾರ. ಇವ್ರು ಮುಟ್ಟಾದಿಲ್ಲ. ಇವ್ರು ನಮಗ ಸುಮ್ನಿ ಕುಂದ್ರಾಕ ಆಗಂಗಿಲ್ಲ. ಯಾವುದು ನೋಡ್ಲಿ, ಯಾವುದು ಬಿಡ್ಲಿ ಅನ್ನಿಸತೈತಿ. ನಮಗ ಏನು ಎಲಿ ಅಡಿಗಿ, ಕಾಫಿ, ಊಟ ಬಿಟ್ರ ಕ್ವಾಟಿ ಕೊಂಡು ಬುಡ್ತೀನಿ. ಇನ್ನೊಂದಲ್ಲ ಮತ್ತೊಂದಲ್ಲ ಸಾರಾಯಿ ಯಾವಾಗೂ ಒಂದೊಂದು ಸಲ ದಣಿವಿ ಹೆಚ್ಚಾದಾಗ ಅಷ್ಟೇ ಕೊಡಿತೀನಿ. ಯಾರಾನ ಹೆರಿಗೀಗಿ ಹೋಗಿರ್‍ತೀವಲ್ಲಾ ಅವ್ರು ಏನೇರಾ ಕೊಡಿಸಿದ್ರ ಕುಡುದುಬುಡುತೀನಿ. ಹಿಂದಕ ಮಾಡಿಸ್ತೀವಿ. ಮುಕಳಿ ಅಡಿ ಕೈ ಹಾಕಿತೀವಿ. ಮುಂದ ಒಬ್ಬರ್‍ರು ಇರ್‍ತಾರ ಹಿಂದ ಇಬ್ರು ಇರ್‍ತಾರ. ಮತ್ತಿ ನಾವು ದೇವ್ರು ಕಟ್ಟಿಕಂಡೀವಲ್ಲ, ಜೋಗೆಮ್ಮಾರು ಅಂತ ಕರಕೆಂಡೋಗ್ತಾರ.

ಮತ್ತೆ ಜೋಗು ಫಂಕ್ತಿಗೀ ಒಂದು ಪಾಕೀಟು ಇಕ್ಕೇ ಇಕ್ಕಾರ. ಬೆಳದಂತೋರು ನಿನ್ನಂತೋರು ಅದನ್ನಾ ತಗಂಡು ನಾವು ಅಲ್ಲಿ ಊಟ ಸಾಗಿಸಿಬುಡ್ತೀವಿ. ಹೆಂಗೀಗಂತೂ ಜೋಗಮ್ಮನೋರನ್ನಾ ಕರಸೇ ಕರಸತಾರ ಒಬ್ಬರು, ಇಬ್ಬರನ್ನಾ ಕರಸತಾರ. ಒಬ್ಬರು ಐದು ಜನಾನ ಕರಸುತಾರ. ಊರು ಎಲ್ಲಾರ ಹೆರಿಗೀಗೂ ಹೋಗೇ ಬೇಕು ನಾವು.

ಮನ್ಯಾಗ ಬುಡೋ ಪದ್ಧತಿನಾ ನಮ್ಮ ಮನ್ಯಾಗ ಸಿಲ್ಸಸಂಗಿಲ್ಲ ರೈತರಗ ನಮ್ಮ ಬುಟ್ರೆ ಕೆಲ್ಸ ಇಲ್ಲ. ಅವ್ರು ಮುಂಟ ಇರಬೇಕು. ನಾವು ಹಿಂದಿ ಇರ್ಬೇಕು ರೈತರಿಗಿ. ಈಗ ನಮ್ಮ ಕೆಂಚಮ್ಮ, ಶಾಂತನಾಗ ಯಾರನಾದರೂ ಒಬ್ಬರನ್ನಾ ಮನ್ಯಾಗ ಬುಡಾನ ಅಂದರ ಅವ್ರು ಕೇಳಿಲ್ಲ ನನ್ನ ಮಾತು. ನಾವು ಮಾಡಂಗಿಲ್ಲ ಅಂತಾರ. ರೈತರು ನಾವು ಬುಟ್ಟುಕಂತೀವಿ ಅಂತಾರ. ನಮಗ ಕಾರ್ಯವಾಕ ಬೇಕೇ ಬೇಕು. ನಿಮ್ಮ ಮನೆತನಕ ನಮಗಿ ಜೋಗಮ್ಮನೋರು ನಾವು ಬುಟ್ಟುಕಂಬೇಕು ಒಂದು ಅಂತಾರ. ರೈತರು ಈಗಾ ಅಂತಾರ ಬೇಕಾದ್ದು ಕಾನೂನು ಬರ್ಲಿ ನಮಗ ಹಿಂದಿ ಬೇಕಾ ನಾವು ಮುಂದಿ ಇದ್ರ ಅವ್ರು ಹಿಂದಿ ಅಂತೂ ಬೇಕಾ ಅಂತಾರ. ನಿನ್ನ ಯಾರು ಕೇಳೋರು ಅಂತಾರ ನನಗಿ. ನನಗ ಗಂಡು ಮಕ್ಳು ಇಲ್ಲ ಕೇಳು ಏನು ಎದಿರಿಕಿ ಏನು ಅಂತಾರ ಏನು ಮಾಡಬೇಕು...

ಸಣ್ಣ ದುರುಗಮ್ಮನ ಮಾತುಗಳು ಬಹಳ ನಿರ್ಲಿಪ್ತವಾಗಿ ಹೊರಟಿದ್ದವು. ಆ ಮಾತ್ರಕ್ಕೆ ಆ ಮಾತುಗಳನ್ನು ಬೇಕಾಬಿಟ್ಟಿಯಾಗಿ ಹೇಳುತ್ತಿದ್ದಳು ಎಂದಲ್ಲ. ಅಸಮಾದಾನ ಕೂಡ ಇರಲಿಲ್ಲ. ಹಿರಿಯರು ಏನು ಮಾಡ್ತಾರೆ, ಬದುಕು ಹೇಗ್ ಬರುತ್ತೆ ಹಾಗೆ ಇರುವುದು ಸರಿಯೆಂಬ ಯತಾರ್ಥ ಧೋರಣೆ ಅವರದಾಗಿತ್ತು. ರಾತ್ರಿಯ ಸಮಯ ಸುಮಾರು ೧೧ ಗಂಟೆಯಾಗಿತ್ತು. ಮಾತು ಶುರು ಹಚ್ಚಿದ್ದರು. ಅದಕ್ಕೆ ತಕ್ಕ ಹಾಗೆಯೇ ನಾನು ಪ್ರಶ್ನೆ ಕೇಳ್ತಾನೇ ಇದ್ದೆ. ನಾನು ಆ ರಾತ್ರಿ ಅವರ ಮನೆಯಲ್ಲಿಯೇ ಉಳಿದುಕೊಂಡು ಇವೆಲ್ಲಾವನ್ನು ವಿಚಾರಿಸಿದ್ದರಿಂದ ಅಕ್ಕಪಕ್ಕದ ಮನೆಯ ನಾಲ್ಕೈದು ಹೆಂಗಸರು ಬಂದು ಪಕ್ಕದಲ್ಲಿ ಕುಳಿತಿದ್ದರು. ನಮ್ಮನ್ನು ಕುತೂಹಲದಿಂದ ನೋಡುತ್ತಲೇ ಇದ್ದರು. ಆದರೆ ಸಣ್ಣ ದುರುಗಮ್ಮ ಯಾರನ್ನೂ ಕೇರ್ ಮಾಡದೆ ತನ್ನ ಎಲ್ಲಾ ಕಥೆಯನ್ನು ಹೇಳಿದರು.

ದೇವದಾಸಿ ಪದ್ಧತಿ ನನಗೆ ಹೆಚ್ಚು ದುಃಖ ಕೊಟ್ಟಿದೆ ಎಂದು ಯಾವ ಕ್ಷಣವೂ ಅವರಿಗೆ ಅನಿಸಿಯೇ ಇಲ್ಲ. ಅದು ಬೇಕೇ ಬೇಕು ಎಂಬ ವಾದ ಅವರಲ್ಲಿದೆ. ಇದನ್ನು ಪದ್ಧತಿಯಾಗಿ ಸ್ವೀಕರಿಸದೇ ವಿವಾಹದ ಪರ್ಯಾಯವಾಗಿ ಸ್ವೀಕರಿಸಿದ್ದಾರೆ. ತನ್ನ ಜೀವನದಲ್ಲಿ ಬಂದ ಗೆಳೆಯರು, ಊರಿನ ಗೌಡರು, ನಡೆದುಕೊಂಡ ರೀತಿ, ದುಡಿಮೆ, ಮನೆ ಯಾವುವೂ ಇವರಿಗೆ ಭಿನ್ನವಾಗಿ ಕಂಡಿಲ್ಲ. ಈ ಎಲ್ಲಾ ಕಾರಣಗಳು ಕೂಡ ನಾನು ಎಲ್ಲರಿಗಿಂತ ಭಿನ್ನವಾಗಿ ಇರುವ ಹಾಗೆ ಮಾಡಿದೆ ಎಂದು ಅವರಿಗೆ ಅನಿಸಿಲ್ಲ. ಆದರೆ ಇದು ಅವರ ಮಗಳ ವಿಷಯದಲ್ಲಿ ಸ್ವಲ್ಪ ಭಿನ್ನವಾಗಿ ಕಾಣುತ್ತದೆ.

ಹುಲಿಗೆಮ್ಮ (ಮಗಳು) : ನಾನು ಮೊದಲೆಲ್ಲಾ ಮ್ಯಾಕಿಮರಿ ಕಾಯ್ತಿದ್ದೆ. ಕಾಯ್ತ ಕಾಯ್ತ ಅಂಗಾ ಏಜ್ ಆದ್ನುವು ನನವು. ಅವಾಗ ಬುಡುಸಿಬಿಟ್ರು ನನಗಿ. ಇವ್ಳು ದೊಡ್ಡೋಳು ಆಗಂಗಿದಾಳ ಬ್ಯಾಡ ಅಂತೇಳಿ ನಮ್ಮ ಚಿಕ್ಕಪ್ಪನ ಮಗನ್ನಾ ಹಚ್ಚಿದ್ರು. ಅವಾಗ ನಾನು ಏನು ಮಾಡ್ತಿದ್ದನಂದ್ರ ಕೆಲ್ಸಕ ಹೋಗ್ತಿದ್ದುನಿ ಹೊರಗ. ಕೆಲ್ಸ ಹೋಗಿ ಒಂದು ವರುಸ ಅನ್ನೋದರಾಗ ಎಲ್ಲಾ ಕೆಲ್ಸ ಮಾಡೀನಿ ನಾನು. ಗೊಬ್ಬರ ಹೊತ್ತೀನಿ, ನೆಲ್ಲು ಕೊಯ್ದೀನಿ, ಜ್ವಾಳ ಕೊಯ್ದೀನಿ ಎಲ್ಲಾ ಕೊಯ್ದಿನಿ. ಎಲ್ಲಾ ಮಾಡಿಬಿಟ್ಟೆ ಅನ್ನೋದರಾಗ ನಾನು ಮೆಚರ್ಡ್ ಆದ್ನಿ. ಆಮ್ಯಾಲೆ ನಮ್ಮ ಅಮ್ಮೋರು ಹೊರಗ ಬುಡಲಿಲ್ಲ.

ನಮ್ಮಮ್ಮನ್ನಾ ಬುಟ್ಟು ದೊಡ್ಡಮ್ಮತಾಗ ಇದ್ದೆ ನಾನು. ಅವರಿಗೆ ಒಬ್ಬ ಮಗಳು. ನಮ್ಮ ಚಿಕ್ಕಪ್ಪೋರು ಇಬ್ರು ಬ್ಯಾರಿ ಆಗಿ ಬಿಟ್ರು. ನಮ್ಮ ಅಮ್ಮನೂ ಬ್ಯಾರಿ ಆಗಿಬಿಟ್ಟಳು. ಆಕಿ ನಮ್ಮ ದೊಡ್ಡಮ್ಮಗ ಅಡಿಗೆ ಮಾಡಾಕೂ ಬರಲಿಲ್ಲ. ಆ ರೀತ್ಯಾಗ

ಅದನ್ನಾ ಕೈ ಬಾಯಿ ಸುಟ್ಟುಕೊಂಡು ಮಾಡೋದಕಾಗ ನಾನು ಚಿಕ್ಕೋಳಿಂದ ದೊಡ್ಡಮ್ಮನತ್ರಾನೇ ಇದ್ದೆ. ಮಲಿಕೊಳ್ಳೋದು ಆಗ್ಲಿ, ಎದ್ದೇಳೋದು ಆಗ್ಲಿ ಆಕಿ ಜೊತಿ ಬುಟ್ಟು ಇರ್ತಾ ಇದ್ದಿಲ್ಲ ನಾನು. ಆ ತರ ನಾನು ಅಂಗಿ ಇರೋದಕಾಗೇ ದೊಡ್ಡಮ್ಮ ಬ್ಯಾರಿ ಅಲ್ಲ, ಅಮ್ಮ ಬ್ಯಾರಿ ಅಲ್ಲ ಅಂತ ಈ ರೀತಿ ತಿಳಕಂಡು ಇದ್ದೆ. ಚಿಕ್ಕಪ್ಪೋರು ಇಬ್ರಿಗೆ ಮದ್ವಿ ಆದ ಮ್ಯಾಲಿ ನಮ್ಮ ಅಮ್ಮ ನನ್ನು ಕರಕಂಬಂದ್ಲು. ಜನ ಎಲ್ಲಾರೂ ಹೇಳಿಬಿಟ್ರು ಈ ರೀತಿ ಹುಡ್ಗಿ ಒಣಗೋಗಿ ಬಿಟ್ಟೈತಿ. ಊಟ ಸರಿಯಾಗಿ ಆಗಂಗಿಲ್ಲ. ಟೈಮ್‌ಗೆ ಸರಿಯಾಗಿ ಬದುಕು ಬಾಳೆವು ಆಗತ್ತೈತಿ. ಬಾಳ ಬೋರು ಆಕೈತಿ ಅಂತ ನಮ್ಮ ಅಮ್ಮಗ ಕೆಲವ್ರು ಮಂದಿ ಹೇಳಿದ್ರು. ಅವಾಗ ನಮ್ಮ ಅವ್ವ ಬಂದು ಕರಕಂಬುಟ್ರು ನನ್ನ.

ಕರಕಂಬಂದು ಒಂದು ತಿಂಗ್ಳದಾಗ ನಾನು ಮೆಚರ್ಡ್ ಆಗಿ ಬಿಟ್ಟೆ. ಆಮ್ಯಾಲೆ ನನ್ನ ಹೊರ್ಗ ಕಳಿಸಲೇ ಇಲ್ಲ. ನಮ್ಮ ಅಕ್ಕ ಗಂಡನ ಮನಿಗಿ ಹೋಗಿಬಿಟ್ಲು. ಆಕಿ ಹನ್ನೊಂದು ವರುಸ ಅನ್ನೊಂಗ ಮೆಚರ್ಡ್ ಆಗೇಳ. ಹದಿಮೂರು ಅನ್ನೋಹಂಗ ಮದ್ವಿ. ನಮ್ಮ ಅಮ್ಮ ಅವಳ ಮದಿವಿನಾಗ ಒಂದು ಗಂಡು ಕೂಸು ಹಡದಿದ್ಲಂತ. ಒಂದು ಹೊಟ್ಟೆನಾಗ ಸತ್ತುಬಿದ್ದು. ಒಂದು ಕೂಸು ಹುಟ್ಟೈತು. ಅವಾಗ ನಮ್ಮ ಅಕ್ಕನ ಮದಿವಿ ಆತು. ಆಕಿ ಗಂಡನ ಮನಿಗಿ ಹೋದ್ಲು. ನಾನು ನಮ್ಮ ಅಪ್ಪ-ಅಮ್ಮನ ಜೋಡಿ ಇದ್ದುಕಂಡೆ. ಆಮ್ಯಾಲಿ ನಮ್ಮ ಮಾವ ನನ್ನ ಕರಕಂಡುಹೋಗಿಬಿಟ್ಟ. ಇವ್ರು ಎಲ್ಲಾರೂ ನಮ್ಮ ಚಿಕ್ಕಪ್ಪ ಅವರೆಲ್ಲಾರೂ ಮನ್ಯಾಗ ಬಿಡಬಾರ್ದು. ಅವ್ರು ಇವ್ರು ಕೇಳಾಕ ಬರ್ತಾರ ಕೊಡಬೇಕು ಅಂತ ಹೇಳಿ ಅವ್ರು ಮಾತಾಡ್ತಾ ಇದ್ರು. ಆಮ್ಯಾಲೆ ಕೇರ್‍ಯಾಗ ಯಜಮಾನ್ರು ಇಬ್ರು ಅವ್ವನ ಈಗ ಕೊಟ್ಟುಬಿಟ್ರ ಈಕೀನ ನೋಡೋರು ಯಾರು, ಅವಾಗ ಆ ರೀತಿ ಯಜಮಾನ್ರು ಕೂಡಿಕೆಂಡು ಮನ್ಯಾಗ ಮಾತಾಡ್ಯಾರ ಅಂಬೋ ಮಾತು. ಅವ್ರ ಜೊತಿಗಿ ಇರ್ಲೇ ಇಲ್ಲ ನಾನು. ಅವಾಗ ಅಂಗಿದ್ದಾಗ ಅವ್ರು ಮಾತಾಡಿಕೆಂಡು ಇಲ್ಲಿ ಊರಾಗ ಆಕಿನ ಬಿಡಬಾರ್ದು ಕೊಡಬೇಕು ಅಂತ ಮಾತಾಡಿಕೆಂಡಾರ. ಊರಾಗ ರೈತರು ಏನಂದಾರ, ಈಗ ನಾವು ದೇವ್ರು ಮಾಡೋ ಮುಂದೆ ನಮ್ಮ ಸಂಪ್ರದಾಯ ಒಬ್ಬ ಜೋಗಮ್ಮೋರು ಬೇಕೇ ಬೇಕೇ. ನಮ್ಮ ಮನೀಗಿ ಕಟ್ಟೆಮನಿ ಅಂತಾರ. ನಮ್ಮ ಮನಿಯಿಂದ ಒಬ್ಬ ಜೋಗಮ್ಮರು ಬೇಕೇ ಬೇಕು. ರೈತರಿಗೆ ಅಂಗಂತೇಳಿ ರೈತರು ನೆಲ್ಲು ಕೊಟ್ರು, ದುಡ್ಡು ಕೊಟ್ರು, ಪಸ್ಟ್ ಹೋಗಿ ಹುಲಿಗೆಮ್ಮನ ದೇವ್ರು ಕಟ್ಟಿಸಿಕೆಂಬನ್ರಿ ಅಂತ ರೈತರ ಆದ್ರು ತಗಂಡೋಗಿ ನಮ ಮಾವ. ಚಿಕ್ಕಪ್ಪ, ಅಪ್ಪೋರು ಕರಕಂಡೋಗಿ ಅಲ್ಲಿ ಹುಲಿಗೆಮ್ಮನತಾಗ ದೇವ್ರು ಕಟ್ಟಿಸಿಕೆಂದುಬಂದ್ರು. ದೇವ್ರು ಕಟ್ಟಿಸಿಕೆಂಬಂದು ಹನ್ನೊಂದು, ಹನ್ನೊಂದು ವರಿವರುಸ ಆಗಿತ್ತು ರಿ ನನಗಿ. ಅವಾಗ ಮನಿ ಸಂಸಾರ ಮಾಡಾಕ ಹತ್ತಿದ್ರು ಅವ್ರು. ಅವಾಗ ಹೊಂದಿಕಿ ಆತು. ಹದಿಮೂರು ವರುಸುಕ ಕೇಚಮ್ಮ ಹುಟ್ಟಿದ್ಲು. 15-16 ವರುಸುಕ ಎಲ್ಡು ಮಕ್ಕು ತಾಯಿ ನಾನು. 16 ವರುಸುಕೆಲ್ಲಾ ಆಪ್ರಿಷನ್ ಮಾಡಿಸಿಕೆಂಡೆ ಪ್ರೇಜ್ ಕೊಟ್ರು ಹಾಸ್ಪೇಲ್‌ನಾಗ ನನಗ. ಅವರ ಅಮ್ಮಗ ಗಂಡು ಮಕ್ಕಳು ಇಲ್ಲ ಅಂದ್ರ ಇವಳು ಎರ್ಡೇ ಹೆಣ್ಣು ಮಕ್ಕಳಿಗಿ ಆಪ್ರಿಷನ್ ಮಾಡಿಸಿಕಂಡಾಳ ಅಂತೇಳಿ ಪ್ರೇಜ್ ಕೊಟ್ರು ನನಗ. ನನ್ನ ಜೊತಿಗಿ ಬಂದೋರೆಲ್ಲಾ ವಾಪಸ್ಸು ಬಂದ್ರು. ಗಂಡು ಬೇಕು ನನಿಗೆ, ಹೆಣ್ಣು ಬೇಕು ಅಂತ, ಆದರೆ ನಾನು ಬರಲಿಲ್ಲ. ನಮ್ಮ ಅಪ್ಪ ಇಲ್ಲ, ಅಮ್ಮ ಇಲ್ಲ. ನಮ್ಮ ಮನೇರು ಯಾರ್‍ಯಾರು ಇಲ್ಲ. ನಾನೇ ಕೂಸನ್ನಾ ಎತ್ತಿಕೆಂಡು ಹೋದೆ. ಹಡದು ಆರೇ ದಿನ ಆಗಿತ್ತು. ಇಲ್ಲಿ ರೋಡ್‌ನಾಗ ಜೀಪು ಹತ್ತಿಕೆಂಡು ಹೋಗಿ ಆಪ್ರಿಷನ್ ಮಾಡಿಸಿಕೆಂಡ ಮ್ಯಾಲೆ ನಮ್ಮ ಅಮ್ಮೋರು ಬಂದಾರ. ಗಂಡು ಅಂದ್ರ ಅವ, ಹೆಣ್ಣು ಅಂದ್ರ ಅವ. ಮುಂದುವರುಸಬೇಕಲ್ಲ ಜಾಸ್ತಿ ಮಕ್ಕು ಆದರ ಹೆಂಗಪ್ಪ ಅಂತ ಭಯ ಇತ್ತು ರಿ, ನಮ್ಮ ಅಪ್ಪ, ಅಮ್ಮ ಜೊತಿಗಿ ಇರಬೇಕಲ್ಲಾ ಅದನ್ನೆಲ್ಲಾ ಕಷ್ಟ ತಿಳಕಂಡೆ, ಆಮೇಲೆ ನನಗೆ ಒಂಥರ ಅಸಹ್ಯಲ್ಲಾ ನಾನು ಜನರ ಹತ್ರ ಓಡಾಡಕ ಯೋಗಿತಿ ಇಲ್ಲದಂಗ ಆಗಿಬಿಡ್ತಿನಲ್ಲಾ ಬ್ಯಾಡ ಅಂತೇಳಿ ನಾನು ಒಬ್ಬಾತನೇ ಮಾಡಿದ್ದು. ಆತನದು ಹೊಸಪ್ಯಾಟಿ. ನಮ್ಮ ಜಾತಿನೇ ಆತನದು. ಮೊದಲಿಕೆಲ್ಲಾ ಚೆಂದಾಗೇ ನೋಡಿಕೆಂತಿದ್ರು. ನಮ್ಮ ಮನೀಗಿ ಬಂದು ಏಳು ವರುಸದಾಗ ಅವ್ರು ಮದೀವಿ ಆದ್ರು. ಅಂಗಾಗಿ ಒಟ್ಟು ನನಗ ಬಾಳ ಬೇಜಾರು ಅನಿಸಿಬಿಡ್ತು. ಎಲ್ಲಾ ಬಿಟ್ಟು ಅವರ ಪೋಟಾನ ಹೊಟ್ಯಾಗ ಇಟ್ಟು ಮಕ್ಕಂಡು ಇಡೀ ಮೂರು ತಿಂಗ್ಳು ನನಗಿ ಊಟಾನೂ ಇಲ್ಲ, ಕಣ್ಣು ತುಂಬಾ ನಿದ್ದೀನೂ ಇಲ್ಲ ಅವ್ರುದು ಮದಿವಿ ಆದ ಮ್ಯಾಲಿ. ಕಾಲೇಜಿ ಹುಡ್ಗರು ಎಲ್ಲಾ ಹೇಳಿದ್ರು, ಮದಿವಿ ಆಗಾಕ

ಮುಂಚೆ ನೀನು ಅವ್ರ ಮನೀಗಿ ಏನು ಹೋಗಿದ್ದಿಲ್ಲಾ, ಅವನೇ ಬಂದಿದ್ದನ್ನಾ ಈಗ ಹೆಂಗಾ ಮಕ್ಕು, ಆಗೇವಾ ನಾವು ಮದ್ವಿಗಿ ಅಡ್ಡಾ ಹಾಕ್ತೀವಿ. ನೀನು ರಡಿ ಆಗಿರು ಅಂದ್ರು.

ಆಗ ನಾನು ಏನು ತಿಳಕನ್ನಿ ಅಂದ್ರ ಈಗ ನನಗೂ ಎರ್ಡು ಹೆಣ್ಣು ಅದಾವ. ಈಗ ನನ್ನ ಮನೀಗಿ ದೀಪ ಹಚ್ಚತಾರ. ಈಗ ಅವ್ರು ಮನೀಗಿ ದೀಪ ಹಚ್ಚಾಕ ಬೇಕಲ್ಲಾ. ಈಗ ನಾನು ಆಫ್ರೇಷನ್ ಆಗಿ ಬಿಟ್ರೆ ಇನ್ನೂ ಮಕ್ಕು ಹಡದಿದ್ರೆ, ಒಂದನ್ನಾ ತಗಂಡೋಗಿ ಅಲ್ಲಿ ದೀಪ ಹಚ್ಚಿಕಂಬೋದಿತ್ತು. ಅದರಿಂದ ಒಬ್ಬರಿಗೆ ಅನ್ಯಾಯ ಆಗಬಾರ್ದು. ಬ್ಯಾಡ ಮದ್ವಿ ಆಗ್ಲಿ ಅಂತ ಇಲ್ಲಿಂದ ಒಂದು ಬಂಡಿ ಕಟ್ಟಿಗಿ, ಒಂದು ಚೀಲ ಜ್ವಾಳ, ಒಂದು ಚೀಲ ನೆಲ್ಲು ಹೇರಿ ಕಳಿಸೀನಿ ಅವರ ಮನೀಗಿ. ಮತ್ತೆ ಅಪ್ಪನ್ನಾ, ದೊಡ್ಡಪ್ಪನ್ನಾ, ಚಿಕ್ಕಪ್ಪನ್ನ, ಮಕ್ಕಳ್ನ ದೊಡ್ಡಮ್ಮನ ಮಕ್ಕಳ್ನಾ ಮದಿವಿಗಿ ಕಳಿಸಿದ್ನಿ ಅವರ ಮದಿವಿಗಿ. ಅವರ ಮದಿವಿ ಚಲ್ಲಾರಿನಾಗ ಆತು. ಅಂಗಾಗಿ ಎಲ್ಲಾ ತಿಳಕಂಡು ಎಷ್ಟಿದ್ದರೇ ಇಷ್ಟೇ ಅಲ್ಲಾ ಹೆಣ್ಣಿನ ಜೀವ್ನ ಅಂತೇಳಿ ಅವರೇ ನಮ್ಮ ಮಕ್ಕಳ್ನ ಶಾಲಿಗಿ ಹಚ್ಚಿದ್ರು. ಐದು ವರುಸುಕೆ ಟಿ.ಬಿ. ಡ್ಯಾಮ್‌ನಾಗ ಸ್ಕೂಲ್ ಮಾಸ್ತರು ಆತ. ಅವಾಗ ಏನು ಮಕ್ಳನ್ನಾ ಶಾಲಿಗಿ ಕಳಿಸಿದ್ದ ಅಂದರಾ, ಇಲ್ಲ ರೀ ಹಿಂಗ ವಾಪಸ್ಸು ಕಳಿಸಿಬಿಟ್ರು ಅಂದ್ರು. ಅವಾಗ ಅವರು ಒಂದು ಚೀಟಿ ಬರ್ದು ಕೊಟ್ರು. ಚೀಟಿ ಬರ್ದು ಕೊಟ್ಟದಿಂದೆ ಅವಾಗ ಅವ್ರು ಶಾಲಿಗಿ ಸೇರಿಸಿಕಂಡ್ರು ಈ ಮಗ್ಳನ್ನಾ.

ನಮ್ಮ ಅಕ್ಕನ್ನಾ ಹೊಸಪ್ಯಾಟಿಗೆ ಕೊಟ್ಟಿವಲ್ಲಾ ಅವರ ಪಕ್ಕದ ಮನಿ ಆತನೇ ಆತ. ನಾನು ಅಕ್ಕನ ಹತ್ರ ಹೋಗಿ ಬರ್ತಿದ್ದೆ, ಅಲ್ಲಾ ಅಂಗೇ ವಿಸ್ವಾಸ ಬೆಳಿಯಿತು, ಅಂಗೇ ಪ್ರೀತಿ ಬೆಳೆಸಿಕಂಡೀವಿ. ನಮ್ಮ ಶಾಂತ 9 ತಿಂಗ್ಳುವಳು ಇದ್ಲು. ಅವ್ರು ಮದಿವಿಗೆ ಆಕಿಗೆ ಒಂದು ವರುಸದಾಗ ಬಿದ್ದಿತ್ತು ನೋಡು ಅವಾಗ ನಾನು ರಾಟಿ ಟ್ರೈನಿಂಗ್ ಮಾಡ್ದೆ. ಚಾಕ್‌ಪೀಸ್, ಬತ್ತಿ, ಮಗ್ಗ ಇವು ಸಾಕೈದು ತರಬೇತಿ ಮಾಡೀನಿ. ಒಲಿಗೇರ್ಯಾಗ ಅಪ್ಪಳವ ಮಾಡೀವಿ, ಕಂಪ್ಲಿನಲ್ಲಿ ಚಾಕ್‌ಪೀಸ್, ಕಂಪ್ಲಿಗಿ ಆಕಡಿ ಊದಿನಬತ್ತಿ ಟ್ರೈನಿಂಗ್ ಮಾಡೀನಿ ಮರಿಯಮ್ಮನಹಳ್ಳಿಯಲ್ಲಿ ರಾಟಿ ಟ್ರೈನಿಂಗ್ ಮಾಡೀನಿ, ಹೊಸಪ್ಯಾಟಿನಾಗ ಮಗ್ಗ ಟ್ರೈನಿಂಗ್ ಇಷ್ಟು ಮಾಡಿದ್ದೆ. ಇದಕ್ಕೆಲ್ಲಾ ಸೀನಪ್ಪ ಅಂತ ಮೇನೇಜರ್ ಪ್ರೋತ್ಸಾಹ ಕೊಟ್ಟಿದ್ದು. ನೀವು ಇನ್‌ಟರ್‌ವ್ಯೂ ಬರ್ದು ಆಕಿದ್ರಿ. ನೀವು ಬರಬೇಕು ಅಂತೇಳಿದ್ರು.

ನಮ್ಮದು ಚಪ್ಪರದ ಮನಿ ಸುತ್ತರದು ಎಲ್ಲಾ ಸೀಗರಿಕಿ. ಆಮ್ಯಾಲಿ ಹೋಗಿ ಬರೋ ಜನಾ ಎಲ್ಲಾ ಅಂಗೇ ಕಾಣಿಸೋದೇ, ಏನೇನು ಊಟಕ ಮಾಡಿಕೆಂಡರೆ ಅದೆಲ್ಲಾ ಜನಕೆ ಕಾಣಿಸೋದೇ, ಒಲಿ ಒತ್ತಿ ಇಟ್ರೆ ಗಾಳಿ, ಮಳಿಗಿ ಅಂಗೇ ಬಗ್ ಅಂದುಬುಡೋದು. ಆ ರೀತಿ ಅಂಗಾತು.

ದಣಾಪುರದಾಗ ನಮ್ಮ ಬೀಗರು ಅದಾರ, ಅಲ್ಲಿ ಹೋಗಿ ನೋಡು ಮಾವ ನಮ್ಮ ಪರಿಸ್ಥಿತಿ ಇಂಗ ಐತಿ ಬರೋರು, ಹೋಗೋರು, ಒಳ್ಳೇರು, ಕೆಟ್ಟೋರು ಬರ್ತಿರ್ತಾರ ಮನೀಗಿ. ನಾನು ಈ ತರ ಇದ್ರೆ ನನಗಿ ಏನು ಆಗತೈತಿ ನನಗ ಅರ್ಜೆಂಟು ಮನಿ ಆಗಲೇಬೇಕು ಅಂತ ನಮ್ಮ ಮಾವನೋರ್ನಾ ಕೇಳಿಕಂಡೆ ಆಮೇಲೆ ಅವ್ರು ಒಂದು ಎತ್ತಿನ ಬಂಡಿ, ಒಬ್ಬ ಮನುಷ್ಯನ ಕಳಿಸಿದ್ರು. ಆವಾಗ ನಮ್ಮ ಅಪ್ಪ-ಅಮ್ಮ ಹೋಗಿ ಹಳೇ ಊರು ಅಂತ ಐತಿ ರಿ ಅಲ್ಲಿ ಕಲ್ಲು ಕಿತ್ತಿರು ಅಂದ್ರು, ನಾನು ರಾಟಿ ಟ್ರೈನಿಂಗ್ ಮಾಡಬೇಕು ಅವ್ರಿಗೆ ಕಟ್ಟಾಕ ದುಡ್ಡು ಕೊಡಬೇಕು ಆ ರೀತಿ ಮಾಡೇ ಅದೇನು ಗ್ಯಾಡಿ ಐತಲ್ಲಾ ಅಷ್ಟು ಗ್ಯಾಡಿ ಕಟ್ಟಿಸಿಕೆಂಡು ಮ್ಯಾಲಿ ಸಪ್ಪರ ಹಾಕಿಸಿಕಂದು ಇಂಗೇ ಜೀವ್ನ ಮಾಡಿಕಂತಾ ಬಂದೆ.

ಆಮೇಲೆ ನಮ್ಮ ಮನೆಯೋರು ಸೀಮೆನೆಣ್ಣೆ ಲೈಸೆನ್ಸ್ ಮಾಡಿಸಿದ್ರು. ಹೊಸಪ್ಯಾಟಿನಲ್ಲಿ ನಾನು ವಿಜಯ್‌ವೆಂಕಟೇಶ್ ಅಂತ ಡಾಕ್ಟರು. ನನಗ ಆರಾಮ ಇಲ್ಲದಾಗ ನಮ್ಮ ಮನಿ ಆತನ್ನಾ ಕರೇ ಕಳಿಸಿ ಈ ರೀತಿ ಇಂಗ ಅನ್ಯಾಯ ಆಗೈತಿ. ಈಕಿಗೆ ಯಾಕೊ ಯಂಗ ಅಂತ ಕೇಳಿದ್ರು ಡಾಕ್ಟರು. ಅವಾಗ ಈ ರೀತಿ ಇಂಗ ಹೊಸಪ್ಯಾಟಿಯೋರು ಬರ್ತಾರ, ಒಂದು ಏಳು ವರುಸುತಾನ ಇದ್ರು. ಆಮ್ಯಾಲಿ ಮದ್ವಿ ಆಗ್ಯಾರ. ಈಗ ಆಯಮ್ಮ ಅದರ ಚಿಂತಿ ತಗಂಡು ಜರ ತರಿಸಿಕೆಂಡಾಳ. ಒಟ್ಟಾ ಊಟ ಮಾಡಂಗಿಲ್ಲ.

ಒಬ್ಬರನ್ನಾ ಕಣ್ಣು ಬಿಟ್ಟು ನೋಡಂಗಿಲ್ಲ. ಅದಕ್ಕಾಗಿ ನಾವು ಆಸ್ಪತ್ರಿಗಿ ಕರಕಂದು ಬಂದೀವಿ ಅಂತೇಳ್ಯಾರ, ಎಲ್ಲಿ ಜಾಗ ಅಂದಾರ ಹೊಸಪ್ಯಾಟಿಲಿ ಅಂತ ಇವು ಅಂದಾರ. ಮತ್ತಿ ಅವ್ನು ಏನು ಕೆಲ್ಸ ಮಾಡ್ತಾನ ಸ್ಕೂಲ್ ಮಾಸ್ಟರ್, ಎಲ್ಲಿ ಟಿ.ಬಿ. ಡ್ಯಾಮ್‌ನಾಗ ಮತ್ತೆ ಅವಾಗ ಫೋನ್ ಹಚ್ಚಿದ್ರು ನಾನು ಆಸ್ಪತ್ರಿನಾಗ ಇರಾಕೆ ಕರೆಕಳಿಸಿಬಿಟ್ರು. ಕರೆಕಳಿಸಿ ಆಮ್ಯಾಲಿ ಅವ್ನನ್ನಾ ಕೇಳಿದ್ರು ಈ ರೀತಿ ಇಂಗ ಮಾಡಿದಲ್ಲಾ ಎಂಗಾ ಏನು ಅಂತ. ಇಲ್ಲಾ ಸಾರ್ ನಾನು ಕೊನಿ ದಪ ನೋಡಿಕೆಂದು ಹೋಗ್ತೀನಿ ಅಂತ ಹೇಳಿಬಿಟ್ಟ ಆತ. ಆಮ್ಯಾಲಿ ಈಕಿ ಆರಾಮ ಆಗಾಮಟ ಈಕಿದು ಟ್ಯಾಬ್‌ಲೆಟ್ ಎಲ್ಲಾ ನೋಡಿಕೆಂಬೇಕು ನೀನು ಅಂತೇಳಿದ್ರು.

ಆಮ್ಯಾಲಿ ಆತ ಇಲ್ಲಿಗಿ ವಾರಕೆ ಹದಿನೈದು ದಿವಸ ಬರೋದು, ಗಾಡಿ ತಗಂಬಂದು ಗಾಡಿಮ್ಯಾಲಿ ಹತ್ತಿಸಿಕಂಡೋಗಿ ಚೆನ್ನಾಗಿ ತೋರಿಸಿದ್ರು. ಮಾಡಿದ್ರು. ಮಕ್ಳು ಮೂರು ನಾಲ್ಕು ಓದೋಮಟಾನ ಇದ್ರು. ಆಮ್ಯಾಲಿ ಕೊನಿಗಿ, ನಾನು ದೊಡ್ಡೋರಾಗ ಮದ್ವಿ ಆಗೀನಿ ನಿನ್ನ ದಾರಿ ನೀನು ನೋಡಿಕ್ಯಾ, ನಮ್ಮ ದಾರಿ ನಾವು ನೋಡಿಕೆಂತೀವಿ ಅಂತೇಳಿ ಕಾಲೇಜು ಹುಡ್ಗರ ಕೈಯಲ್ಲಿ ಹೇಳಿಕಳಿಸಿದ್ರು. ಅಂಗಾದಾಗ ನಾನು ಏನು ಹೇಳೋದು, ಏನು ಮಾಡೋದು ಅವಾಗ ಕೆಂಚಮ್ಮ ಒಂಬತ್ತು ವರುಸುದೋಳು ಇದ್ಲು. ಹೋಗ್ಲಿ ಬಿಡು ಬ್ಯಾಡ ಅಂದುಕಂಡು ಸುಮ್ಮ ಆಗಬೇಕಲ್ಲಾ. ಕಟ್ಟಿದ ಗಂಡ ಆದ್ರ ಅವ್ನು ಯಾಕ ಬುಟ್ಟು ಹೋಗ್ತಾ ಇದ್ದಾ ಅದೇ ರೀತಿ ಈಗ ನಾವು ಕೆಲ್ಸ ಮಾಡಿಸ್ಕನ್ನಾಕ್ಕಿಂತ ಅಂಗಾನ ಇರೋದು ಒಂದು ವಾಸಿ. ಇಲ್ಲಿ ಗಂಡ ಕೊಡಿಸಿಕನ್ನೋದು ಒಂದು ವಾಸಿ. ಅಂಗೇ ಇದ್ದು ಬಿಟ್ಟ ಯಾವೋನು ತಂಟಿ ಇಲ್ಲದಂಗ. ಇನ್ನು ಮೇಲೆಲ್ಲಾ ಅನ್ನೋದು ಎಲ್ಲಾ ತಿಳಿಕಂಡು ನನ್ನ ಮಕ್ಳನ್ನಾ ಬುದ್ಧಿವಂತರು ಮಾಡಿಕೆಂಬೇಕು. ನಾನು ಮೇನ್ ಅಪ್ಪ, ಅಮ್ಮ, ಅಕ್ಕ, ಅಪ್ಪೋರು ಉಳಿದಾದರೂ ಅಂದ್ರ ನನಗಿ ಇಷ್ಟ ಇಲ್ಲ. ನನ್ನ ಮಕ್ಳು ಪ್ರೀತಿನೇ ಹೆಚ್ಚು. ಒಟ್ಟು ನನ್ನ ಮಕ್ಳು ಓದಬೇಕು. ಏನೇನ ಆಗಿರಲಿ ನನ್ನ ಮಕ್ಳನ್ನಾ ಒಂದು ದಾರೀಗಿ ನಿಂದರಿಸಿದ್ರ, ಕಾಲಮೇಲಿ ನಿಂದರಿಸಿದ್ರ ಮುಂದಿ ನನಗ ಜೆಲಿ ಇರತ್ಕೆತಿ. ದೇವದಾಸಿ ಅಲ್ಲ ಈಕಿ ಗಂಡಸು ಅನ್ನೋ ಲೆಕ್ಕಕ್ಕಾ ತೋರಿಸಬೇಕು ಅನ್ನೋ ಛಲ ಐತ್ರಿ ನನಗ. ಅವ್ರು ಎಷ್ಟಾನು ಓದ್ಲಿ, ನನ್ನ ಪ್ರಾಣ ಒತ್ತಿಕ್ಕಿ ಓದಿಸ್ತೀನಿ. ನನಗಿ ಎದಿಹೊಡದರೂ ಎರ್ಡು ಅಕ್ಷರ ಇಲ್ಲಮ್ಮ. ನಾನು ಓದಿಲ್ಲ. ಆದರೆ ನನ್ನ ಮಕ್ಳು ಇವ್ಳು ಸೆಕೆಂಡಿಯರ್ ಫೇಲ್ ಆದಾಗ ಎಂಟು ದಿನ ದಾರಿ ಕಾದೀನಿ ನಾನು. ನಾನು ಇರಬಾರ್ದು, ನಾನು ಸಾಯಬೇಕು, ನಾನು ಫೇಲ್ ಆದನಲ್ಲಾ ಅಂತ. ಇಡೀ ಕೇರಿಗೆ ಚಾಲೆಂಜ್ ನನ್ನ ಮಕ್ಳು ಓದಾಕ. ಆ ರೀತಿ ನಾನು ಏನು ಧೈರ್ಯ ಕೊಟ್ಯಾ ಏನಮ್ಮ. ನಿಮ್ಮ ಅಪ್ಪನ್ನಾ ಆಸ್ತಿನ ಕಳಕಂಡಿಲ್ಲ, ನಿಮ್ಮ ಅಮ್ಮನ್ನಾ ಆಸ್ತಿನ ಕಳಕಂಡಿಲ್ಲ, ಬಂಗಾರ ಕಳಕಂಡಿಲ್ಲ ಯಾಕ ಕೊರಗಬೇಕು, ಯಾಕ ಸಾಯಬೇಕು ಎರಡು ಸಲ ಅಲ್ಲ ನಾಕು ಸಲ ಕಟ್ಟಿ ಪಾಸು ಮಾಡಿಕೆಂಡು ಓದು, ನಾನು ಓದುಸ್ತೀನಿ ಅಂತೇಳಿ ಧೈರ್ಯ ಹೇಳೀನಿ.

ಇವ್ರ ಮದಿವಿ ಟೈಮ್ ಬಂದು ಮದಿವಿ ಆತು ಅಂದ್ರ ಇವರಿಗೆ ಏನಾರೂ ಗಂಡು ಕೂಸು ಆತು ಅಂದ್ರ ನಮ್ಮ ಮನೆತನಕ ಬಿಡ್ರಿ ಅಂತ ಮಾಡಿಕೆಂಡು ಹೋಗೋರಿಗಿ ಹೇಳ್ತೀನಿ. ಹೇಳಿ ಅವರಾಗಿ ಮತ್ತೆ ಕರುಣೆ ಬುಟ್ಟು ಕೊಡಬೋದು, ಕರುಣೆ ಬರಂಗಿಲ್ಲ ಅಂದ್ರ ಮತ್ತಿ ಇನ್ನೆಲ್ಲಾನ ಸಾಯಬೇಕು ಅಷ್ಟೇ, ಅಲ್ಲಿಗೆ ಕೊನೆ ನಿರ್ಧಾರ ನನ್ದು.

ಪ್ರತಿಯೊಂದು ಊಟ ಕೊಣ್ಣುಬೋದು, ಬಂಗಾರ ಕೊಣ್ಣುಬೋದು, ಮನಿ ಕೊಣ್ಣುಬೋದು, ನಾವು ಓದು ಕೊಣ್ಣೋಕಾಗುತ್ತಾ, ಆಗಂಗಿಲ್ಲ. ಯಮ್ಮ ನಾನು ನಾಕು ಅಕ್ಷರ ಓದಿದ್ರ ಇಂಗ ಇರ್ತಿದ್ದಿಲ್ಲ. ಓದಿಲ್ಲದೇ ನಾನು ಇಷ್ಟು ಬುದ್ಧಿ ಹೋಡಿಸೀನಿ. ಈಗ ಎಲ್ಲಾ ಊರಾಗಿ ಏನಂತಾರಂದ್ರ ಸೀಮೆನೆಣ್ಣೆ ಹುಲಿಗೆಮ್ಮನ ಮಕ್ಳು ಓದಿದಂಗ, ಓದಿಸಿದಂಗ ಯಾರು ಓದಿಲ್ಲ ಅಂತಾರ. ಈಗ ನನ್ನ ಮಕ್ಳು ಓದಿದಂಗ ಈ ಕೇರ್‍ಯಾಗ ಯಾರೂ ಓದಿಲ್ಲ.

ಕೆಂಚಮ್ಮ ನನ್ನ ಹೊಟ್ಟೆಲಿದ್ದಾಗ ಇಲ್ಲಿ ಸಾರಿ ದುರುಗಮ್ಮ ಅಂತ ಹೇಳಿ ಅಲ್ಲಿ ದೇವ್ರು ಐತಿ. ನಮ್ಮಮ್ಮ ಇವಳ ಡೆಲಿವರ್‍ಯಾಗ ನನ್ನ ಮೂರು ದಿನ ಆಸ್ಪತ್ರ್ಯಾಗ ಅಡ್ಮಿಂಟು ಮಾಡ್ಯಾರ. ಮೂರು ದಿನ ಕೂಸು ಮನ್ಯಾಗ ಐತಿ ಅವಾಗ ಬಾರಿ ಪ್ರೀತಿ ನಮ್ಮಮ್ಮಗ ನನ್ನ ಮ್ಯಾಲಿ. ಅವಾಗ ಏನು ಅಂದುಕಂದಾಳ ಅಂದ್ರ ನನ್ನ ಮಗ್ಳು, ನನ್ನ ಮೊಮ್ಮಗಳು ಚೆನ್ನಾಗಿದ್ರೆ ನಿನಗೆ ಹುಟ್ಟಿಗಿ ಹುಡಿಸಿ

ಅರಿಕೆ ತೀರಿಸ್ತೀನಿ ಅಂತೇಳಿ ಅಂಗಾ ಬೆತ್ತಲಿ ಸುತ್ತರಿದು ಬೇವಿನ ತಪ್ಪಲಿ ತಪ್ಪಲಿ ಕಟ್ಟಿತಾರ. ಅಂಗಾ ತಪ್ಪಲು ಕಟ್ಟಿ ಹುಟ್ಟಿ ಮರದಾಗ ಏನು ಒಂದು ಬಳಿ ಏನು ಒಂದು ಬಳಿ ಇಲ್ಲ, ಮೂಗುಬಟ್ಟು ಇಲ್ಲ, ಬಟ್ಟು ಇಲ್ಲ ಅಂಗಾ ತಿರುಗಿಸಿಬಿಡ್ತಾರ. ದುರುಗಮ್ಮಗ ಊರು ದೇವ್ರು. ದೊಡ್ಡದು ಬ್ಯಾಟಿ ಸಾಕ್ತಾರ, ಬ್ಯಾಟಿ ಸಾಕಿ ಅಂಗ ಆಕಿ ಮುಂದಿ ಕೊಯ್ತಾರ, ಕಡದುಬುಡ್ತಾರ ಅದನ್ನಾ ಅಂದುಕಂಡಿದ್ಲು ಅಂತ ನಮ್ಮಮ್ಮ. ಐದು ವರುಸುಕ ಬ್ಯಾಟಿ ಮಾಡೋದು. ವರುಸ-ವರುಸ ಎರ‍್ಡು ಮೂರು ಕೋಳಿ ತಗಂಡೋಗಿ ಒಂದು ಐದು, ಆರು ಸೇರು ಅಕ್ಕಿ ತಗಂಡೋಗಿ ಉರುಸೇವು ಮಾಡೋದು. ಆಮ್ಯಾಲಿ ಐದು ವರುಸುಕ ಒಂದು ಸಲ ಬ್ಯಾಟಿ ಮಾಡೋದು. ಆ ರೀತಿ ಇಂಗ ದುಡುಕಂತಾ, ದುಡುಕಂತಾ ನಾನು ಬಂದೆ. ದೇವ್ರನ ಶುಕ್ರವಾರ, ಮಂಗಳವಾರ ಅಂದ್ರ ಒಟ್ಟಾ ಇಲ್ಲಿ ಮೈ ತೊಳಕಂಡೋಳು ಆ ದೇವ್ರ ಮಕಾನ ನೋಡಾತನ, ಒಬ್ಬರ ಮಾರಿ ನೋಡುತ್ತಿದ್ದಿಲ್ಲ. ಇಟೀ ಸೂರಾ ಒಂದು ದಿನ ಇಂಗೇ ಮಾಡೀನಿ. ಅವಾಗಲಿಂದ ಒಂದು ಸಲ್ಪ ಸಡಾಕು ಐತಿ ನಂದು ಆ ದೇವತಿದು. ಎಲ್ಯಾನ ಕೇಳಲಿ ಹೆಣ್ಣು ದೇವತಿ ಕಾಟ ಐತಿ ಅಂತ ಹೇಳ್ತಾರ. ಅಕಿದು ಸಡಾಕು ಐತಿ ಅಂತ ಹೇಳ್ತಾರ, ಅದಕ್ಕಾಗಲೇ ಅದನ್ನಾ ದುಡೇದು ಬಿಟ್ಟಾ ಅಂದ್ರ ಮನ್ಯಾಗ ಜಗ್ಳ ಆಡೋದು, ಅಲ್ಲಿಗೋಗಲಾರದ ಬಿಟ್ನಿ ಅಂದ್ರ ನನಗೆ ಒಂದೇ ಹೇಟಿಗೆ ಆರಾಮು ಇಲ್ಲದಂಗ ಆಗಿಬುಡೋದು. ಆ ರೀತಿ ಅಂಗಾ ಆಗಾಕಾಗಿಲೆ ಅದನ್ನಾ ದೆವ್ವ, ದೆವ್ವ ಅಂತೇಳಿ ಈ ರೀತಿ ಪರಿಸಾರ. ಜನ, ಪ್ರಪಂಚಿಕ ಒಪ್ಪಿಸಿ ಹೆಂಗ ಜೀವ್ನ ಮಾಡೋದು, ನಮ್ಮ ಮನ್ಯಾಗ ಶಂಕಲಿಬಾಯಿ ಆದರೂ ಮುಚ್ಕಬೋದು, ಕೆಲವು ಇಂಗ ಅನ್ನೋದು, ಆ ರೀತಿ ಅನ್ನೋದು. ಈಕಗಿ ಏನು ಕಾಯಿಲಿ ಐತಿ ಏನೋ ಅನ್ನೋದು. ಅಂದು ಕಂಡ್ರೆ ಅವ್ರು ಬಾಯಾಗನ ಹೊಲಸು ಕಳದುಕಂಡ್ರು, ನಾನು ನ್ಯಾಯವಾಗಿದ್ದುದ್ದು ಕರೇವು. ಆದರೆ ನಾನು ನ್ಯಾಯವಾಗೇ ಇರೋದೇ, ಜಡ್ಡು ಇಲ್ಲ ಜಪಾಟು ಇಲ್ಲ ಏನೇನು ಇಲ್ಲ. ಎಲ್ಲಾ ಆರಾಮು ಇದೀನಿ.

ಪೂಜಾರಪ್ಪ ಮದ್ದು ಎಲ್ಲಾ ಕೊಟ್ಟಾನ ಅದು ನನಗ ಏನೂ ಆಗಂಗಿಲ್ಲ. ಒಂದು ತಾಯತ ಕಟ್ಟಿ ಇಕ್ಕಿದ್ರೆ, ಕೊಳ್ಳಾಗ ಕಟ್ಟಿದರೆ ಆ ತಾಯತಾನೇ ನಿಂತಿಲ್ಲ. ಮಂಗಳವಾರ ಕಟ್ಟಿದ್ದು ಶುಕ್ರವಾರ ತನ ಇರ‍್ಲೇ ಇಲ್ಲ. ಕೊಳ್ಳಗೂ ಕಿತ್ತು ಹೋಗಿದೀಯೇನು ಅಂತ ಕೇಳ್ದಾ ಪೂಜಾರಪ್ಪ. ನಾನು ಬಿಚ್ಚಿ ಹೋಗೋದಿಲ್ಲ ನನಗ ಆರಾಮ ಆಗಲಂತೇ ಅಲ್ಲಾ ನೀನು ಕಟ್ಟೀರೋದಪ್ಪ, ನಾನು ಯಾಕ ಬಿಚ್ಚಿ ಹೋಗಲಿ ಅದು ಇರಂಗಿಲ್ಲ ನನ್ನ ಹತ್ರ. ಒಂದು ಮೋಟ ಮದ್ದು ಯಾವುದು ಇಂತವಲ್ಲಾ ಬರ್ತಿರ್ತಾವಲ್ಲಾ ಅವು ಸಹ ತಗಂಬಂದಿಲ್ಲ ನನಗಿ. ಅಂಗಾ ಸಯ್ಯಂ, ಅಂಗೇ ಇರೋದು ನಾನು. ನಾನು ಏನೂ ಕಟ್ಕೋದಿಲ್ಲ, ಒಬ್ಬರ‍್ನ ಹೋಗಿ ಕೆಡಿಸೋದಿಲ್ಲ ನಾನು. ಯಾಕ, ಹೆಂಗ, ಏನು ಅಂತ ಶಿವ ಆದಂಗಿ ನೀನು ನೋಡಿಕೆಂಬೇಕು. ನಾನು ಅನಾತಳು, ನಿನ್ನ ಮಗ್ಳು ನೀನೇ ನೋಡಿಕೆನಪ್ಪ, ಎದ್ದರೆ ಅದೇ ದ್ಯಾನ, ನಿಂತರೆ ಅದೇ ದ್ಯಾನ, ಮಕ್ಕಂಡರೆ ಅದೇ ದ್ಯಾನ, ಊಟ ಹೆಚ್ಚೆಂದು ಅಂದ್ರೆ ನಿಂದತ್ವ ನಂದಲ್ಲ.

ಜಾತಿ ವಿಷಯಾಗ ಯಾರೂ ನಮ್ಮ ಹತ್ರ ಏನೂ ಮಾತಾಡಂಗಿಲ್ಲ. ನಾನು ಹೊರಗ ಹೋಗಿ ಬಿಟ್ರೆ ನಾನು ಕೊಚ್ಚಿ ಅಂಬೋದು ಗೊತ್ತು, ಜಗ್ಳ ಮಾಡ್ತಾಳ ಬಾರಿ ಅಂತ. ಇಲ್ಲಿಂದ ಅಲ್ಲಿ ಮಟ ನಮ್ಮನಿಗಳು. ಈಟು, ಈಟು ಗಂಡು ಹುಡ್ಗರು ಬರೋದಿಲ್ಲ ನಮ್ಮ ಕಡೀಗಿ, ವಯಸ್ಸು ಮಕ್ಳು ಬರೋದಿಲ್ಲ ನಮ್ಮ ಕಡೀಗಿ. ಅಯ್ಯೋ ಬಾರಿ ಪಿಚ್ಚಿ ಮುಂಡಿ ಆದಾಳು ಅಂತ ಅಂಜುದಾರೆ, ಬರೀ ನಮ್ಮ ಮಕ್ಳ ಮಕ ನೋಡಿದರೆ ನಾಕು ಏನೋ ಏನು ಐತಿ ಈ ಕಡೀಗಿ ಅಂತೀನಿ ನಾನು. ಇಂಗಾ ಓಡಾಡೋರನ್ನಾ ನೋಡಿದರೆ ಅದು ಸ್ಟ್ರಿಟ್ ನಂದು. ಅಂತಾ ಏನೂ ಗಮನ ಕೊಡಾದಿಲ್ಲ. ಅತ್ತಾ ಊರಾಳೋರು ಅಂದ್ರ ನನಗ ಬಾರಿ ಕ್ಲೋಜು ಫ್ರೆಂಡು ಇದ್ದಂಗ, ಏನು ಒಂದು ತಟ್ಯಾಗ ಊಟ ಮಾಡಾದು ಒಂದು ನಿಂತಿರತ್ತೈತಿ ಅಂಗ ನನಗಿ. ಇನ್ನು ಇದ್ದೋರಿಗೆ ಏನು ಮಾಡ್ತಾರೋ ಗೊತ್ತಿಲ್ಲ ನನಗಿ. ಚಾಸ್ಟೆ ಮಾಡಿದರ ಮಾಡ್ತಾರ, ಈಗ ನಿನಗ ಸರೀಗಿ ನಾನು ಇದ್ರ ನನ್ನ ಏನು ಮಾಡ್ತಾರ.

ನನ್ನ ಮನ್ಯಾಗ ಬಿಟ್ಟಾರ ಅಂತೇಳಿ ಊರು ಜನ ಎಲ್ಲಾ ನನ್ನ ಅವಾಗ ಹೆಂಗ ನೋಡ್ಯಾರ ತಿಳಿತ್ತಾ. ಬಾಳ ನೊಂದಿನಿ. ನಮ್ಮ ಫುಡ್ ಆಫೀಸರೇ ನಮ್ಮನ್ನಾ ಇದು ಮಾಡಿದ್ರು ಆದ್ರೆ ನಾನು ಒಪ್ಪಿರಲಿಲ್ಲ. ಫುಡ್ ಆಫೀಸರ್ ತಾಲ್ಲೂಕು ಆಫೀಸನಾಗ ಇದ್ರು.

ನಮಗ ಅಲರ್ಟ್‌ಮೆಂಟ್‌ಗೆ ದುಡ್ಡು ಕೊಡೋರು. ನಮಗಿ ಚೀಮಿನೆಣ್ಣಿಗೆ ಲೈಸೆನ್ಸ್ ಆಗಿತ್ತು. ರಿಸಿವಲ್ ಆಗದ್ದನ್ನಾ ಹೋಗಿ ಇಸಕಂಬರಬೇಕಲ್ಲಾ, ಹೋಗಿದ್ದೆ ನಾನು ಒಂದು ಮೂರು ನಾಲ್ಕು ಬಾರಿ ನೋಡ್ತಾನ ನನ್ನ. ಅವ್ನ ಹೆಣ್ಣು ಮಕ್ಕಿಗಿ ಟಿ.ಬಿ. ಇತ್ತು. ಅವುರುದು ಅತ್ತಾಗ ದಾವಣಗೇರಿ ಆ ಕಡಿ ಅವರೂರು. ಆ ವ್ಯಾರೋರು ಇಲ್ಲಿಗಿ ಟ್ರಾನ್ಸ್‌ಫರ್ ಆಗಿದ್ರು. ಅವ್ರು ಕರ್‍ರಗಿ, ದಪ್ಪನಾಗಿ ಮಸ್ತು ಇದ್ರು ಅವ್ರು. ಹೆಣ್ಣು ಮಕ್ಕನ್ನಾ ನೋಡಿದ್ರ ತೆಳ್ಳಗ ಅಂಗಾ ಟಿ.ಬಿ. ಪೇಸೆಂಟು. ಒಟ್ಟಾ ಸಂಸಾರ ಇಲ್ಲ ಅಂತ ಹೇಳಿದ್ರು ಡಾಕ್ಟರು. ಮರಿಯಮ್ಮನಹಳ್ಳಿನಾಗ ಹರಿಶಂಕರ ಅಂತೇಳಿ ಅವರನ್ನೆಲ್ಲಾ ವಿಚಾರ ಮಾಡ್ತಾರ. ವಿಚಾರ ಮಾಡಿ ಇಂಗ ದೇವದಾಸಿ ಆಯಮ್ಮ ಅಂದಾಗ, ರಿಸಿವಲ್ಲು ಕೊಟ್ಟು ಬಂದು ಚಲನ್ ಕಟ್ಟಿ ರಿಸಿವಲ್ ಕೊಟ್ಟು ಬಂದ್ವಿ. ಆಯ್ತುನಡಿ, ಆಯ್ತುನಡಿ ಅಂದನು. ಆಯ್ತು ಸಾರ್ ಅನ್ನಿ, ಬಂದ್ರು ಒಂದು ಎರ್ಡು ಮೂರು ಬಾರಿ ಬಂದ್ರು. ಹುಲಿಗೆಮ್ಮ, ಹುಲಿಗೆಮ್ಮ ಅಂದುಕಂಡು ಅವಾಗ ಎರ್ಡು ಸಲ ಮಖ ಬೇಟಿ ಆದ್ವಿ ಇಲ್ಲೇ, ಮತ್ತಿ ತಿರಗ ಒಂದು ಸಲ ಮರಿಯಮ್ಮನಹಳ್ಳಿನಾಗ ಮಕ ಬೇಟಿ ಆದೆ. ಇನ್ನೊಂದು ಸಲ ಆಮ್ಯಾಲಿ ಹೊಸಪೇಟೆಗಿ ಹೋಗಬೇಕು ಅಂತೇಳಿ ರಡಿ ಆಗಿದ್ದೆ. ನಿಮವು ಲೈಸೆನ್ಸ್ ಕೊಟ್ಟರೇನಪ್ಪ ಅಂತ ಲೈಸೆನ್ಸ್ ಇದ್ದೋರನೆಲ್ಲಾರನೂ ಕೇಳ್ದೆ ನಾನು. ನಮ್ದು ಕೊಟ್ರು, ನಿಮ್ದು ಕೊಟ್ರು ಆಗಲೆ ಕೊಟ್ಟು ಹದಿನೈದು ದಿನ ಆತು. ತಿಂಗ್ಳ ಆತು ಅಂತ ಈ ರೀತಿ ಹೇಳಕತ್ತಿದ್ರು. ಅಯ್ಯೋ ನಂದು ಯಾಕ ಲೈಸೆನ್ಸ್ ಕೊಟ್ಟಿಲ್ಲ ಅಂತೇಳಿ ಆಫೀಸ್‌ಗೆ ಹೋದೆ ಸಾರ್, ಲೈಸೆನ್ಸ್ ಕೊಡಲಿಲ್ಲಾ ಅಂದೆ. ನಿನ್ನ ಲೈಸೆನ್ಸ್ ಮನ್ಯಾಗದೆ ಬಾ ಹೋಗು ಅಂದ್ರು. ಕೂತಕ ಗಾಡಿ ಮ್ಯಾಲಿ ಅಂದ್ರು. ಅವಾಗ ನಾನು ಎಚ್ಚರ ಆದೆ. ಈಗ ಸಿಕ್ಕಪಟ್ಟಿ ಸಾಯಬರು ಬರ್‍ತಾ ಇರ್‍ತಾರ. ನಾವು ಒಂದು ಸಾರಿ ಜಾರಿ ಬಿದ್ವಿ ಅಂದ್ರ 'ಅವ್ನು' ಹಚ್ಚಿ ಮಾತಾಡ್ತಾರ ಈಗ. ನನ್ನ ಮಕ್ಕಳಿಗಿ ಮರ್ಯಾದೆ ಇಲ್ಲ, ಅಷ್ಟಕು ನಮ್ಮ ಮನೇರು ಇಲ್ಲೇ ತಿರಿಗಾಡ್ತಾ ಇರ್‍ತಾರ. ಪರುಸುರಾಮ್ ಅಂತೇಳಿ ಅವ್ರುಗೂ ಮರ್‍ಯಾದಿ ಸಿಗಂಗಿಲ್ಲ. ಯಾಕಪ್ಪ ಯಾಕಿದ್ವಿತ್ತು ಅಂತ ದೇವ್ರು ಬುದ್ದಿ ಕೊಟ್ಟ ಆಗಿನ ಟೈಮಿನಾಗ. ಮನೆಗೂ ಹೋಗಬಾರ್‍ದು, ಲೈಸೆನ್ಸ್‌ನ್ನೂ ಕೇಳಬಾರ್‍ದು ಅದು ಹೆಂಗ ತರತಾನ ಅಂಗ ಕೊಟ್ಟು ಹೋಗುತಾನ ಅವ್ನು. ಅವ್ನು ಟ್ರಾನ್ಸ್‌ಫರ್ ಆಗಬೇಕು ಅಂತ ನನ್ನ ಜೀವ್ನದಾಗ ಐತಿ. ಇವ್ನ ಜಲ್ದಿ ಆಗಬೇಕು. ಇಂತಾನು ನನ್ನ ಕೇಳೋನು ಇರಬಾರ್‍ದು ಅಂತ ಮನಸ್ಸಿನಾಗ ಬೈಯಿಕಂತಾ ಇದೀನಿ ನನ್ನ ಮನಸಿನಾಗ. ಬೈಕಳ್ಳೋದು ಫೇಲ್ ಆಗಂಗಿಲ್ಲ. ಅವಾಗೇನು ಕೇಳಿ ಬಂದು ಹದಿನೈದು ದಿನ ಆಗಿತ್ತು. ಅವಾಗ ಏ ಇಲ್ಲಿ ಮಂಜುನಾಥ ಸಾರ್ ಟ್ರಾನ್ಸ್‌ಫರ್ ಚಿತ್ರದುರ್ಗಕ ಹೋತಾರ ಅಂದ್ರು. ಮರಿಯಮ್ಮನಹಳ್ಳಿ ಹರಿಶಂಕರಪ್ಪನ ಕೈಗ ಕೊಟ್ಟು ಆಕಿ ದೊಡ್ಡಾಕಿ ಅದಾಳ. ಆ ತಾಯಿಗಿ ನಮಸ್ಕಾರ ಆಕಿ ಹತ್ರ ನೂರು ರೂಪಾಯಿ ಇಸುಕಂದು, ಲೈಸೆನ್ಸ್‌ಕೊಟ್ಟು, ಸೈನ್ ಮಾಡಿಸಿಕಂಡ್ರಿ ಅಂತೇಳಿ ಹೋದರಂತ. ಟ್ರಾನ್ಸ್‌ಫರ್ ಆಗಿ ಐದು-ಆರು ತಿಂಗ್ಳು ಆಗಲಿಲ್ಲ ಹಾರ್ಟ್ ಅಟೆಕ್ ಆಗಿ ಸತ್ತೋದ. ಒಂದು 500 ರೂಪಾಯಿ MIC ಬಾಂಡ್ ತಗಂಡೋಗಿ ಪೋಸ್ಟ್ ಆಫೀಸನ್ನಾಗ ಬಿಡಿಸಿಕೆಂಡು ನನ್ನ ಸೈನು ಎಡಗೈಲಿಂದ 1500 ತಗಂಡು ಮುಳಿಗಿಕೆಂಡ ನೀನು ಇದ್ದರ ಉದ್ದಾರ ಆಗಂಗಿಲ್ಲ ನಡಿ ಮುಂದ್ರಕ ಹುಟ್ಟಿದೋನೆ. ನೀನು ಹೆಂಗ ಸಾಯಿಬೇಕು ಅಂಗ ಸಾಯಿತೀಯ ಅನ್ನಿ. ಅಂಗೇ ಸತ್ತ ಅಂತ ತಾಲೂಕು ಆಫೀಸಿಗಿ ಪೋನ್ ಬಂತು. ಆ ರೀತಿ ನನ್ನ ಜಗ್ಗಿ ಜನ, ಸಕ್ಕತ್ ಜನ ಇದು ಮಾಡ್ಯಾರ.

ಊರಾಗೆ ಜನ ಅಷ್ಟಾಕ್ಕೊಂದು ಏನು ಇಲ್ಲ ನಮ್ಮ ಕಡೀಗಿ. ಆಗ ನಾನು ತುಂಬಾ ಚೆನ್ನಾಗಿದ್ದೆ. ಇಬ್ಬರ ಮಕ್ಳು ತಾಯಿ ಆದ್ರೂ ಅಂಗೆ ಕೆಂಪಗೆ ತೊಂಡೆ ಹಣ್ಣು ಇದ್ದಂಗೆ ಇದ್ದೆ.

ನಾನು ಒಂದು ಸಾರಿ ಎಲೆಕ್ಷನ್ ನಿಂತಿದ್ದೆ. 6 ನೇ ತಾರೀಖಿಗೆ ನಾಮಿನೇಷನ್ ಕೊಟ್ಟಿದ್ದು 26 ತನ ಕುಡೇರು, ತಿನ್ನೋರಗ ಕೊಡಿಸಿ, ತಿನ್ನಿಸಿ ಹದಿನಾರು ಸಾವರ ಕರ್ಸು ಆಯ್ತು. ಅಸ್ಟು ಕರ್ಸು ಮಾಡಿದರೂ ಸೋತುಬುಟ್ಟೆ. ನಮ್ಮ ಹುಡ್ಗಿ ಮೆಚಾರ್ಡ್ ಆಗಿದ್ದು, ಅವಾಗೇ ಕೆಂಚಮ್ಮ. ನಮಗಿ ಒಂದು ರೂಪಾಯಿ ರೊಕ್ಕ ಇಲ್ಲಮ್ಮ ಅವಾಗ ಅಷ್ಟು ಬಡತನ, ಬಾಳ ಕಷ್ಟ ಆಗಿ ನನಗ ಚೀಮಿನೆಣ್ಣೆ ಇಳಿಸಿಕನ್ನಾಕ ದುಡ್ಡು ಇಲ್ಲದಂಗ ಆತು. ಅವಾಗ ಈ ಮನೀನೂ ಕೊಟ್ರು ಸರಕಾರದಿಂದ. ನಮ್ಮ ಹುಡ್ಗಿದು ಒಂದು ಐದು ಸಾವರ ರೂಪಾಯಿ ಬಂತಾ ಮೆಚಾರ್ಡ್ ಆಗಿದ್ದು ಕರ್ಸು, ಮತ್ತೆ ಎಲೆಕ್ಷನ್ನಾಗ ಒಂದು 16,000 ರೂಪಾಯಿ ಬಂತಾ ಕರ್ಸು, ಮತ್ತೆ ಮಿನಿಸ್ಟರು ಮನಿ ಹಾಕಿ ಕಳಿಸಿದ್ರು ನಮಗ.

ಹುಲಿಗೆಮ್ಮ ಅಂತ ನಾನು. ನನ್ನ ವಿರುದ್ಧ ನಾಗಪ್ಪ ಅಂತ ಒಬ್ಬಾತ ನಿಂತಿದ್ದ. ಆತಗ ಮಿನಿಸ್ಟ್ರರು ಹುಲಿಗೆಮ್ಮನ್ನ ನಾನು ನಿಂದ್ರಿಸಿದೀನಿ ಆಕಿ ಗೆದ್ದರೆ ನನಗ ಸಂಬಂಧ. ನೀನು ಗೆದ್ದರ ನನಗ ಸಂಬಂಧ ಇಲ್ಲ ಅಂತ ಅಲ್ಲಿಂದಲೇ ಖಾಸಗಿ ಮಾತು ಕಳಿಸಿದ್ರು. ಅವಾಗ ನಾನು ಸೋತುಬಿಟ್ಟೆನಲ್ಲ ಅವಾಗ ಮಿನಿಸ್ಟರು ನನಗ ಈ ಮನಿ ಕೊಡಿಸಿದ್ರು. ಹೇ ಆಕಿಗೆ ಮನಿಕೊಡಾಕ ಆಕೇನು ಗೆದ್ದಳೇನು ಅಂಗ ಇಂಗ ಅಂತ ಅಂದು, ನಾವು ಗೆದ್ದೋರು ಆಕಿಗಿ ಕಟ್ಟಿಸಿ ಕೊಡ್ತೀವಿ ಮನಿ ಅಂತೇಳಿ ಅಂದ್ರು. ಅದಕ ನಾನು ನನ್ನ ಮನಿ ನಾನೇ ಕಟ್ಟಿಸಿಕೆಂತೀನಿ ಅಂತ ಹೇಳ್ದೆ. ಅದಕ ಅವರು ಹೇ ಅದೆಂಗ ಕಟ್ಟಿಸಿಕಂತೀಯಾ ನಾವು ಮೆಂಬರ್ಸ್ ಆಗೀವಿ, ನಮಗ ಇದ್ದ ಪವರ್ರು ನಿನಗ ಐತೇನು ಅಂಗ ಇಂಗ ಅಂತ ಬಾರಿ ಜೋರು ಮಾಡಿದ್ರು. ಮಿನಿಸ್ಟರು ಏನು ಹೇಳಿದ್ರು ನೋಡು ಹುಲಿಗೆಮ್ಮ ಎಲೆಕ್ಷನ್ ಮಾಡಿ ಸೋತಾಳ ಆಕಿ ಬಡವರು ಮಗಳು, ಗಂಡು ಮಕ್ಳು ಇಲ್ಲದಾಕಿ. ಆಕಿ ಅನ್ಯಾಯ ಆಗೇಳ ಅಂದ್ರ ಆಕಿ ಮನಿ ಜೊತಿಗಿ ಇನ್ನು ನಾಲ್ಕು ಮನಿ ಬಿಟ್ಟುಕೊಂಡು ಕಟ್ಟಿಸಿಕಂಡು ಸ್ವಲ್ಪ ತಗ್ಗಳ್ಳಿರಿ ಅನ್ನೋ ಮಾತು ಅವ್ರು ಹೇಳಿ ಕಳಿಸಿದ್ರು. ಬೇಲುದಾರರು ನಾನು ಕಟ್ತೀನಿ, ನೀನು ಕಟ್ತೀನಿ ಅಂದ್ರು. ಅದಕ ನನಗ ಇಷ್ಟ ಬಂದೋರು ಜೊತೆ ನಾನು ಕಟ್ಟಿಸಿಕಂತೀನಿ ಅಂತೇಳಿ ಮುಸಲಮಾನರ ಜೊತಿ ಕಟ್ಟಿಸಿಕಂಡೀನಿ.

ನಾನು ಎಲ್ಲಾರ ಹೋದ್ರೂ ನನಗ ಬೆಲಿ ಐತಮ್ಮ, ಬೆಲಿ ಕಳಕಂಡಿಲ್ಲ, ಇತ್ತತ್ತ ಬಾರಮ್ಮ ಅನ್ನೋ ಲೆಕ್ಕದಾಗ ಹೋಗೀನಿ ಹೊರತು, ನಾನು ಎಲ್ಲಿ ಹೋದ್ರೂ ಬಿಂಕ ತೋರಿಸಿಲ್ಲ. ನಾನು ಕೊಟ್ಟೋಳು ಅನಿಸಿಕಂಡಿಲ್ಲ. ನಾನು ಮೊದಲಿಂದ ಇಂಗೆ, ನಾನು ಎಲ್ಲಿ ಹೋದ್ರೂ ಸೆರುಗುಗ ಪಿನ್ನಾ ಮಾಡಿಲ್ಲ, ಇಂಗ ರವಂತಗ ಚೋಲಿ ಹುಟ್ಟಿಕಂಡಿಲ್ಲ. ಸುಳ್ಳು ಹೇಳಾದಿಲ್ಲ ಇಂಗೇ ಸೆರಗು ಮೈ ತುಂಬಾ ಮುಚ್ಚಿಕೆಂಡೇ ಇರ್ತೀನಿ. ನಮಸ್ಕಾರ ಸಾರ್ ಅಂತೀನಿ ಈ ಭಾವ ನಂದು.

ಅಯ್ಯೋ ಯಮ್ಮ ಟೇಷನ್ ಕಟ್ಟಿ ಹತ್ತಿಸಿದ್ರು ಬೀಮಿನೆಣ್ಣೆ ಕಾಲಾಗ ಬ್ಲಾಕ್ ಮಾರಿಕೆಂದು ತಿಂತಾಳ. ಎಣ್ಣೆ ಕೊಡು ಒಲ್ಲಳು ಅಂತೇಳಿ ಟೇಷನ್ ಕೊಟ್ರು. ಎಂದೂ ಅತ್ತಲಾರದ ಆಕಿ ನಾನು ಅತ್ತೀನಂದ್ರ ಇನ್ಸ್‌ಪೆಕ್ಟರು ತೋರಿಸಾದಿಲ್ಲೇನು ಕರಿಣೆ, ಅವರು ಅವಾಗ ಇವ್ರನೆಲ್ಲಾ ಜಾಡಿಸಿ ಇಕ್ಕಿ ಕಳಿಸಿದ್ರು. ಬಂಡಮುಂಡೆ ಮಕ್ಳಾ ನಮ್ಮಂತ ಸರ್ಕಲ್ ಇನ್ಸ್‌ಪೆಕ್ಟರ್ ಆದ್ರೂ ಸತಿಗೇ ಬಂಡ ಜೀವನ ಮಾಡಿದರ ಹೊಟ್ಟಿ ತುಂಬಿತ್ಕೆತಿ. ನನ್ನ ಹೆಂಡ್ತಿ ಮಕ್ಳದು. ನಮ್ಮಂತವರೇ ಬಂಡ ಜೀವ್ನ ಮಾಡುತೀವಂದ್ರ ಆಕಿ ಹೆಣ್ಣು ಮಗ್ಳು, ಎರ್ಡು ಮಕ್ಳು ಕಟ್ಟಿಕೆಂಡು ಓದುಸ್ತಾಳ ಅಂದ್ರ ಆಕಿ ಕಳ್ಳಿ ಎಂಗ ಲೈಸೆನ್ಸ್ ಐತಿ ಆಕಿ ಹತ್ರ. ಅದನ್ನಾ ಹಿಡೇಕ ನೀವ್ಯಾರು ಬಂಡ ಮುಂಡೆ ಮಕ್ಳ ಹೋಗರ್‌ಲೇ ತಿಕ್ಕ ಮುಚ್ಚಿಕೆಂಡು ಅಂದ್ರು ಸರ್ಕಲ್ ಇನ್ಸ್‌ಪೆಟ್ರು. ಆಮೇಲೆ ಒಳ ಕರುದ್ರು. ನಾನು ಆರಿ ಆರಿ ಸಂಕಟ ಬಂದುಬುಡ್ತು ಅತ್ತುಬುಟ್ಟೆ. ಅಮ್ಮ ಅಳಬ್ಯಾಡ ತಾಯಿ, ನಿನ್ನಂಗ ನನಗ ನಾಕು ಹೆಣ್ಣು ಅದಾವು. ನೀನು ಅತ್ತರ ನನ್ನ ಕೆಲ್ಸ ಟಾನ್ಸ್‌ಫರ್ ಆಗಿಬುಡತೈತಿ ಸರಕಾರದ್ದು ಇನ್‌ಸ್ಪೆಟ್ರು ಏನು ಮಾಡಿದ್ರೂ ಏನು ಅದಕ ಆಕಿ ಅಳ್ತಾಳೆ ಅಂತೇಳಿ ನನಗ ರಿಪೋರ್ಟ್ ಕೊಟ್ಟರ ಮುಗುದೋತು. ಕೆಲಸಾನಾ ಟಾನ್ಸ್‌ಪರ್ ಆಗತ್ಕೆತಿ ನೀನು ಹೆಣ್ಣು ಮಗ್ಳು ಹೋಗಿ ಬಾ ಅಂತೇಳಿ ಶಾಂತಿ ರೀತಿಯಿಂದ ಈ ರೀತಿಯಾಗಿ ಹೋಗಬೇಕು. ಶಾಂತಿಯಿಂದ ಜನಕ ಈ ರೀತಿಯಾಗಿ ಹೇಳಬೇಕು. ಹೊಂದಿಕೆಂಡು ಹೋಗಬೇಕು. ಅವ್ರು ಕುಡ್ದು ಗಲಾಟಿ ಮಾಡ್ತಾರ, ಗಲೀಜು ಮಾಡ್ತಾರ ಸಹಿಸ್ಕಂಬೇಕು ಅಂತ ಅಂದ್ರು. ಈಗ ಎಂಗೂ ಅಂಗೇ ಜೀವ್ನ ಮಾಡೀಕಂತ ಅದೀನಿ.

ಹುಲಿಗೆಮ್ಮನನ್ನು ಊರಿನ ಗೌಡರು ಕಾರ್ಯಕ್ಕೆ ಬೇಕು ಅಂತ ಹೇಳಿದ್ದಕ್ಕಾಗಿಯೇ ದೇವದಾಸಿಯಾಗಿ ಬಿಡಲಾಯಿತು. ಇಲ್ಲಿ ತನ್ನ ಸಮುದಾಯದ ಗಂಡಸರ ಬಲವಂತವೂ ಇತ್ತು ಅದಕ್ಕೆ ಶಾಸ್ತ್ರ ಎಂಬ ಕುತಂತ್ರದ ಪೊರೆ ಬೇರೆ ಹಚ್ಚಲಾಗಿತ್ತು. ಹುಲಿಗೆಮ್ಮ ದೇವದಾಸಿತನವನ್ನು ತಾಯಿಯು ಸ್ವೀಕರಿಸಿದಷ್ಟು ಸುಲಭವಾಗಿ ಸ್ವೀಕರಿಸಲಾಗಿಲ್ಲ. ದೇವದಾಸಿಯೆಂದರೇನೇ ಸೂಳೆ ಎಂದು ಹೇಳುವ ಸಮಾಜಕ್ಕೆ ತಲೆ ಕೆಡಿಸಿಕೊಂಡವಳಂತೆ ಕಾಣುತ್ತಾಳೆ. ಗೆಳೆಯನು ಬಿಟ್ಟು ಹೋದಾಗ ಅವನಿಗಾಗಿ ಕೊರಗುವುದು, ದಿನಗಟ್ಟಲೆ ಊಟ ಬಿಟ್ಟು ಕಾಯುವುದು, ಆ ಪ್ರೀತಿ ಅವಳಿಗೆ ಸಿಗದಿದ್ದಾಗ ಆ ಸಿಟ್ಟನ್ನು ಮಕ್ಕಳ ಮೇಲೆ ಬಿಡುವುದರ ಮೂಲಕ ಮಕ್ಕಳನ್ನು

ತುಂಬ ಬಂದೋಬಸ್ತಾಗಿ ಬೆಳೆಸುವುದರ ಮೂಲಕ ತೀರಿಸಿಕೊಳ್ಳುತ್ತಾಳೆ. ಗಂಡುಮಗುವಿಗಾಗಿ ಹಾತೊರೆದು ತನ್ನ ಕೊನೆ ಮಗಳು ಶಾಂತಳನ್ನು ದೇವದಾಸಿಯಾಗಿ ಬಿಡಲು ಒಪ್ಪಿಕೊಂಡು ನಂತರ ಜಾಗೃತಳಾಗಿ ನನ್ನ ಸಮಸ್ಯೆ ನನ್ನ ಮಗಳಿಗೆ ಬೇಡವೆಂದು ನಿರ್ಧರಿಸುತ್ತಾಳೆ. ತನ್ನ ಇಬ್ಬರೂ ಹೆಣ್ಣುಮಕ್ಕಳ ಏಳಿಗೆಗಾಗಿ ಶ್ರಮವಹಿಸುತ್ತಾಳೆ. ಚೆನ್ನಾಗಿ ಓದಿಸುತ್ತಾಳೆ. ದೇವದಾಸಿತನವನ್ನು ತನ್ನ ತಾಯಿಗೆ ಹೇಳಿಕೊಂಡಷ್ಟು ಸುಲಭವಾಗಿ ಹುಲಿಗೆಮ್ಮ ಹೇಳಿಕೊಳ್ಳಲಿಲ್ಲ. ಕೀಳರಿಮೆ, ನೋವು, ದುಃಖ ಎಲ್ಲವೂ ತನ್ನ ಬದುಕನ್ನು ಗಂಡುಮಕ್ಕಳಿಗಿಂತ ಭಿನ್ನವಾಗಿ ಕಟ್ಟಿಕೊಳ್ಳುವಲ್ಲಿ ಅದನ್ನು ಮೀರಿದ್ದಾಳೆ. ಅದನ್ನು ನಾನು ದೇವದಾಸಿ ಅಲ್ಲ, ಗಂಡಸು ಅನ್ನುವ ಲೆಕ್ಕಕ ತೋರಿಸಬೇಕು ಎನ್ನುವ ಮಾತು ತಿಳಿಸುತ್ತದೆ. ಇದು ಇವರ ಮಗಳಲ್ಲಿ ಇನ್ನೂ ಭಿನ್ನವಾಗಿ ಕಾಣುತ್ತದೆ.

ಕೆಂಚಮ್ಮ (ಮೊಮ್ಮಗಳು): ನಮ್ಮ ಅಜ್ಜಿ ನಮಗ ಯಾವಾಗೂ ಹೇಳ್ತಾ ಇದ್ಲು. ಏನಂತ ಅಂದ್ರೆ ನಾವು ಅಷ್ಟು ದುಡಿದೀವಿ. ಇಷ್ಟು ದುಡಿದೀವಿ ಅಂತ. ಮೊದಲಿಗೆ ಅವರು ಅಕ್ಕ ತಂಗೇರು ಇಬ್ಬರೂ ಜೋಗಮ್ಮರು. ನಮ್ಮ ಅಜ್ಜಿಗಿ ಬಾಳ ಅನ್ಯಾಯ ಮಾಡಿದಾರ ನಮ್ಮ ದೊಡ್ಡಜ್ಜಿ ಇಡಕಂದು ಓಡೆದು ದುಡಿದಿದ್ದು ಹೇಗಾನ ಅಪ್ರ ಹತ್ರ ಕಸಕಂಬಿಟ್ಟು ತಾನು ಕುಡಿದು ಮಜ ಮಾಡಾದು. ಎಲ್ಲಾ ಚಟಗಳೂ ಅದಾವ ನಮ್ಮ ದೊಡ್ಡಜ್ಜಿ ಅತ್ರ. ನಮ್ಮ ಅಜ್ಜಿ ಏನಪ್ಪ ಅಂದ್ರ ಅಂತ ದುಡ್ಡು ಇಸ್ಕಂಡಿರಲ್ಲ ಅಂತ ಹೊಟ್ಟೆಕಿಚ್ಚು ಪಡಾದಾಗ್ಲಿ, ಅಸಹ್ಯಪಡಾದಾಗ್ಲಿ ಇದಾವುದೂ ಇಲ್ಲ ನಮ್ಮ ಅಜ್ಜಿ ಹತ್ರ. ಆ ಅಜ್ಜಿ ಏನಪ್ಪ ಅಂದ್ರ ಸಾಕಷ್ಟು ತಾ ತಗಂಬಿಟ್ಟು ಸಾಕಷ್ಟು ಮಜ ಮಾಡ್ಯಾರ. ನಮ್ಮ ಅಜ್ಜಿ ಕೆಲ್ಸ ಹೋಗಿ ಹೊಟ್ಟೆ ಹಸಿವು ಆದರ ಗನ ಆಕಿಗಿ ಮಾಡೋ ಕೆಲ್ಸಕ ನೋಡಿ ಅವ್ರು ಇದು ಮಾಡಿ ಊಟ ಇಲ್ಲ ಅಂತೇಳಿ ಎಷ್ಟಕ್ಕೊಂದು ಜನ ಊಟಕ ಕೊಟ್ಟಿದ್ದಾರ ಅದನ್ನಾ ಬಾಳ ಹೇಳಿತ್ತು ನನಗೆ.

ನಮ್ಮ ಅಜ್ಜೀಗೆ ಯಾವಾಗ ನಮ್ಮ ತಾತ ನಮ್ಮ ಅಜ್ಜಿ ಜೊತೀಗಿ ಬಂದ ಆವಾಗಲಿಂದ ಅವರಿಬ್ಬರೂ ದುಡಿತವರೆ. ಅದರಗೂ ಹೇಳಿದ್ರು ಅವಾಗ ಕೂಡು ಕುಟುಂಬ ಅಲ್ಲಿನ ಗಂಡು ಮಕ್ಕಿಗಿ ಮದಿವಿ ಮಾಡಿನೇ ಎಲ್ಲರೂ ಹೊರಗ ಹೋಗಬೇಕು ಅಲ್ಲಿ ತನ ಯಾರೂ ಹೊರಗ ಹೋಗಂಗಿಲ್ಲ ಆ ತರ ಇತ್ತು. ಅವಾಗ ನಮ್ಮ ತಾತ, ನಮ್ಮ ಅಜ್ಜಿ ಇಬ್ಬರೂ ಹೊರಗ ಹೋಗಂಗಿಲ್ಲ ಆ ತರ ಇತ್ತು ಅವಾಗ. ನಮ್ಮ ತಾತ, ನಮ್ಮ ಅಜ್ಜಿ ಇಬ್ಬರೂ ಸೇರಿ ಬಿಟ್ಟು ಅವರ ತಮ್ಮನೋರ್ದು ಇಬ್ಬರ್ದೂ ಮದಿವಿ ಮಾಡಿ ಬೇರೆ ಆದ್ರು. ಬೇರೆ ಆದಾಗ ಅಜ್ಜಿ ದೂರ ಸರದುಬುಟ್ರು. ತಾತ ಬಾಳ ಕಷ್ಟಪಟ್ಟಿದಾರ ಆಗೆಲ್ಲಾ ನೆರಿಕಿ ಕಟ್ಟಿಕೆಂಡು ಗುಡುಸುಲು ಆಕಿಕೆಂಡು ಇಬ್ರೂ ದುಡ್ದು ಅಲ್ಲಿತನ ನಮ್ಮ ಅಮ್ಮ, ನಮ್ಮ ದೊಡ್ಡಜ್ಜಿ ಮನೆನಾಗೇ ಇದ್ರು. ಯಾವಾಗ ನಮ್ಮ ದೊಡ್ಡಜ್ಜಿ ಮಗ್ಳನ್ನಾ ಕೊಟ್ಟುಬುಟ್ರೋ ಅವಾಗಲಿಂದ ದೊಡ್ಡಜ್ಜಿಗೆ ಕಷ್ಟ ಆಗಿ ಅಮ್ಮ ಅಲ್ಲೇ ಇದ್ಲು. ಕೆಲ್ಸ ಮಾಡೋದು ದೊಡ್ಡಜ್ಜೀನ ನೋಡೋದು, ಮ್ಯಾಕಿ ಮೇಯಿಸಿಸ್ಕಂದು ಬರೋದು ಮಾಡಿಕಂಡು ಅಲ್ಲೇ ಇದ್ರು.

ತನ್ನ ಮಗ್ಳು ಮೆಚರ್ಡ್ ಆದಾಗ ಚೆನ್ನಾಗಿ ನೋಡಿಕಂಡೋಳು ನಮ್ಮ ಅಮ್ಮಗ ದೊಡ್ಡಮ್ಮಗ ಮೆಚರ್ಡ್ ಆದಾಗ ಸರಿಯಾಗಿ ನೋಡಿಕಂಡಿಲ್ಲ, ಏನು ತಂದಿಲ್ಲ, ಏನು ಮಾಡಿಲ್ಲ. ಈವಾಗನೂ ನಮ್ಮ ಅಮ್ಮ ಹೇಳಿಕೆಂಡು ದುಃಖಪಡ್ತಾರ. ನಮ್ಮ ಅಮ್ಮ, ನಮ್ಮ ದೊಡ್ಡಮ್ಮ ದುಡುದಂಗ ದೊಡ್ಡಜ್ಜಿ ಮಗ್ಳು ದುಡಿದಿಲ್ಲ ಆಕಿ. ಆಕಿನ ರಾಣಿತರ ನೋಡಿಕೆಂಡಾರ.

ಇದೆಲ್ಲಾ ಆದಮ್ಯಾಲೆ ನಮ್ಮ ಅಮ್ಮನ್ನಾ ಬಾಳ ಚಿಕ್ಕ ವಯಸ್ಸಿಗಿ ಮನ್ಯಾಗ ಬಿಟ್ಟಾರ. ಆಮ್ಯಾಲಿ ನಾವು ಹುಟ್ಟಿದ್ವಂತ. ನಮ್ಮ ಅಮ್ಮ ಆಪ್ರೇಷನ್ ಮಾಡಿಸ್ಕನ್ನಾಕ ಕಾರಣ ಏನು ಗೊತ್ತಾ? ಇಲ್ಲಿ ನಮ್ಮ ದೊಡ್ಡಜ್ಜಿಗೆ ಗಂಡು ಮಕ್ಳು ಇದಾರಲ್ಲಾ ಆ ಗಂಡುಮಕ್ಳುನಾಗ ಒಬ್ಬ ಮಗನ್ನಾ, ಒಬ್ಬನ್ನಾ ಗಂಡು ಮಗನಾಗಿ ಮಾಡಿಕೆಂಬೇಕು ಅಂತೇಳಿ ಅಮ್ಮನ ಆಸೆ. ನಮ್ಮ ಅಜ್ಜಿಗಿ ಏನು ಆತನ ಮಗ್ನ ಮಾಡಿಕೆಂಡರೆ ನಾಳಿ ಸೊಸಿರು ಬಂದ್ರ ಏನು ನೋಡಿಕೆಂತಾರ ನಮ್ಮನ್ನಾ. ಒಂದೊಂದು ಟೇಮು ನಮ್ಮ ಹೊಟ್ಟೇಲಿ ಹುಟ್ಟಿದ್ದು ಮಕ್ಳೇ ಬೇದ-ಭಾವ ಮಾಡ್ತಾವ ಇಂಥವಾಗ ಬೇರೆ ಮಕ್ಳು ಬೇದ-ಭಾವ ಮಾಡದಂಗ ಇರತಾರ ಅಂತೇಳಿ,

ನಮ್ಮ ದೊಡ್ಡಮ್ಮನ ಗಂಡ ಅಂಗ ಮಾಡೋದು ಬ್ಯಾಡ ಅಂತೇಳಿ ಆಗೋ ಅನ್ಯಾಯ ಎಲ್ಲಾ ನೋಡ್ತಾ ಇದ್ರೂ ಅದನ್ನೆಲ್ಲಾ ತಿಳಕಂಬಿಟ್ಟು, ಕಳ್ಳತನದಿಂದಲೇ ಅಮ್ಮನ್ನಾ ಕರಕಂಡೋಗಿ ದೇವ್ರುನ್ನಾ ಕಟ್ಟಿಸಿದ್ರಂತಾ ನಮ್ಮ ಅಮ್ಮನಿಗಿ, ನಮ್ಮ ದೊಡ್ಡಪ್ಪಾನೇ ಮಾಡಿಸಿದ್ದು.

ನಮ್ಮ ಅಮ್ಮ ಬಾಳ ದುಡುದಾರ. ಮೇಲಾಗಿ ಗಂಡುಮಕ್ಳು ಇಲ್ಲ. ಅವರ ಸಲುವಾಗಿ, ಗೌಡರು ಹೇಳಿದಂಗ ಒಬ್ರು ಬೇಕೇ ಬೇಕು. ನಮ್ಮ ಮನಿತಾನದಾಗ ಆ ತರನೇ ಇತ್ತಲ್ಲಾ ಅದಕೆ ನಮ್ಮ ಅಮ್ಮನ್ನಾ ದೇವ್ರುಗಿ ಬಿಟ್ರು. ಈಗೂನು ಗೌಡ್ರು ಹೇಳ್ತಾರ. ಅಜ್ಜಿಗಿ ಮೊಮ್ಮಕ್ಳನ್ನಾ ಮನ್ಯಾಗ ಬಿಡ್ರಿ ಅಂತ, ಆದ್ರ ನನಗಿ ಹೇಳಿಲ್ಲ ನಮ್ಮ ಅಮ್ಮನಿಗಿ ಹೇಳಿಲ್ಲ. ಯಾಕಂದ್ರ ವಾದಮಾಡಿತೀವಲ್ಲ ಅದರ ವಿರುದ್ದ ಅದಕ್ಕೆ ಬ್ಯಾಡ ಅಂತ ಸುಮ್ನೆ ಆಗ್ತಾರ ಅಷ್ಟೇ ಅವ್ರು.

ಮುಂಚೆ ಎಲ್ಲಾ ನಮ್ಮ ಅಮ್ಮನುಗೂ ಸಹ ಆಸೆ ಇತ್ತು. ಮನೆಗ್ಯಾ ಬುಡುಬೇಕು, ಮನೆಗ್ಯಾ ಬುಡುಬೇಕು ಅಂತಂದು ಹೇಳಿಬುಟ್ಟು ಒಂದು ಸರಿ ನಾವೂ ಸಹ ತೀರ್ಮಾನ ತಗಂಡಿವ್ವಿ. ಯಾಕಂದ್ರೆ ನಮ್ಮಮ್ಮ ನನ್ನನ್ನಾ ಓದಿಸ್ತಾಳೋ ಇಲ್ಲೋ ಅನ್ನೋ ಭಯಕ್ಕೋಸ್ಕರ ನಾನು ನಮ್ಮ ತಂಗಿನ ಬಿಟ್ರೇ ಆಯ್ತು ಅಂತೇಳಿ ನಾವು ಒಪ್ಪಿಗಿ ಕೊಟ್ಟಿದ್ರಿ. ಒಪ್ಪಿಗೀನೂ ಕೊಟ್ಟಿದ್ದು ಆಯ್ತು, ನನ್ನ ತಂಗಿನ ಒಪ್ಪಿಸಿದ್ದೂ ಆಯ್ತು ಅವಾಗ. ಕಟ್ಟಿಬಿಡಾನ ಅಂತಾ ಅಜ್ಜಿ ಹೇಳ್ತಾ ಇದ್ಲು. ಅಮ್ಮನೂ ಸಹ ಹೌದು ನನಗಿ ನೋಡಿಕೆನ್ನೋರು ಯಾರು ಇಲ್ಲದಿದ್ರೆ ನಾನು ಓದಿಸಾದಿಲ್ಲ ಅಂತ ಹಠ ತೆಗೆದು ಕೂಡ ಕುಂತಿದ್ಲು. ಇನ್ನೂ SSLC ನೇ ಅಲ್ಲಾ ಅದಾದ ಮೇಲೆ ಬಿಟ್ರೇ ಆಯ್ತು ಅಂತ ನಾನು ಈ ತರ ಸಮಾಧಾನ ಪಡ್ತಿಸಿದ್ವಿ. ನಾನು ಯಾವಾಗ I PUC ಮುಗಿಸಿದ್ನೋ ಅವಾಗಲಿಂದ ಚೆನ್ನಾ ಆಗಿ ಬಿಟ್ಲು ಅಮ್ಮ. ಯಾವ ಮನ್ಯಾಗೂ ಬುಡಲ್ಲ ಗಂಡನ ಮನೀಗಿ ಕೊಡ್ತೀವಿ ಅಂತ ನಿರ್ಧಾರ ಆಯ್ತು. ನಾವು ತಾಯಿ, ಮಗ್ಳು ಇಬ್ರೇ ಇದರ ಬಗ್ಗೆ ವಾದಿಸಿದ್ವಿ. ನಾನೊಂದು ಹಠ ತಗದು ಕೂತ್ಕಂಡೆ. ಮನ್ಯಾಗ ಬಿಟ್ರಿ ಅಂದ್ರೆ ಶಾಂತೀನ ಗಂಡನ ಮನಿಗಿ ಕೊಟ್ಟು ಬಿಟ್ಟು ನಾನು ಅಂಗೇ ಇರ್ತೀನಿ, ನಿಮ್ಮ ನೋಡೋ ಸಲುವಾಗೇ ಇರ್ತೀನಿ. ನಿಮ್ಮ ವಂಶ ಉದ್ದಾರ ಆಗಬೇಕು ಹೌದಿಲ್ಲ ಅದಕ ಶಾಂತಿನಷ್ಟೇ ಗಂಡನಮನಿಗಿ ಕಳಿಸಿ ನಾನು ಮನ್ಯಾಗ ಬಿಡಿಸಿಕಳ್ಳದೇನೇ ಮನ್ಯಾಗ ಕೆಲ್ಸ ಮಾಡಿಕೆಂತಾನೇ ಇರ್ತೀನಿ ಅಂತ ಹೇಳ್ದೆ. ಅವಾಗ ಇಲ್ಲ ಅದು ಬ್ಯಾಡ ಇಬ್ರುನೂ ಕೊಟ್ಟುಬಿಟ್ರೇ ಆಯ್ತು ಅಂತೇಳಿ ಮನಸ್ಸು ಬದಲಾಯಿಸಿದ್ರು. ಈವಾಗ ಅಜ್ಜಿನೂ ಅದರ ಬಗ್ಗಿ ಮಾತಾಡಲ್ಲ. ಬ್ಯಾಕೀರು ಯಾರಾರ ಬಂದರೆ ಗನ ಹೇಳ್ತಾಳೆ. ಇಲ್ಲಮ್ಮ ಮನ್ಯಾಗ ಬುಡುಬೇಕು. ಎದುಕಂದ್ರೆ ನಮ್ಮ ವಂಶ ಬೆಳಿಬೇಕಲ್ಲ ಅಂತ ಹೇಳ್ತಾರ. ಅದಕ್ಕೋಸ್ಕರನೇ ಅಂಗಿ ಮಾಡಬೇಕು ಅಂದುಕಂಡಿದ್ದು ಅದು ಆಗಲಿಲ್ಲ.

ಇವಾಗ ಏನು ಅಂತಾರ ಅಂದ್ರೆ ಬೇಗ ಕೊಟ್ಟು ಮದಿವಿ ಮಾಡಬೇಕು ಅಂತಾರ. ಫಸ್ಟ್ ನನ್ನಿಂದಲೇ ಇವರೆಲ್ಲಾ ಚೇಂಜ್ ಆಗಿದ್ದು. ನಮ್ಮ ಅಮ್ಮನ್ನಾ ನಾನು ಅವಾಗ ಅಜ್ಜಿಗೆ ಅಮ್ಮ ಹೇಳಿದ್ಲು.

ಮೊದಲೆಲ್ಲಾ ನಾನು ದೇವದಾಸಿ ಪದ್ಧತಿನ ಒಪ್ಪಿಕಳ್ತಾ ಇದ್ದೆ. ಯಾಕಂತ ಅಂದ್ರೆ ನನಗಿ ಅವಾಗ ಅಷ್ಟೊಂದು ಬುದ್ಧಿ ಇದ್ದಿಲ್ಲ. ಓದಬೇಕು ಅಂಬೋ ಒಂದು ಆಸಿ ಇತ್ತು ನನಗೆ. ಎಲ್ಲಿ ಸ್ಕೂಲ್ ಬಿಡಿಸಿಬಿಡ್ತಾರೋ ಏನೋ ಅಂತ ಬಾಳ ಭಯ ಇತ್ತು ನನ್ಗೆ. ಅದಕ್ಕೆ ಅಮ್ಮ ಹೇಳ್ತಾ ಇದ್ಲು. ನಿಮ್ಮನ್ನಾ ಓದಿಸಿದಂಗೆಲ್ಲಾ ನನಗಿ ಎದುರು ಆಗ್ತೀರಿ ಅಂದ್ರೆ ನಾನು ನಿಮಗ ಓದಿಸೋದೇ ಇಲ್ಲ ಅಂತ ಆಣೆ ಸಹ ಮಾಡಿಸಿದ್ರು. ಯಾವಾಗ ನಾನು ಈ ತರ ಮದಿವೀನೇ ಮಾಡಿಕಳಂಗಿಲ್ಲ ಅಂತ ಹೇಳಿದೆನಲ್ಲಾ ಅವಾಗಲಿಂದಲೂ ಇಬ್ರೂ ಚೇಂಜ್ ಆಗಿಬುಟ್ರು.

ತಂದಿಗಿ ಹುಟ್ಟಿದ ಮಕ್ಳೇನೇ ಎಷ್ಟು ಕೆಟ್ಟು ಕೆಲ್ಸ ಮಾಡ್ತಾರ. ಆದ್ರೆ ದೇವದಾಸಿ ಮಕ್ಕಳನ್ನಾ ದೇವ್ರು ಮಕ್ಳು ಅಂತ ನೆನಿಸ್ತಾರ. ನಾವು ಸ್ಕೂಲ್‌ಗೆ ಹೋಗಬೇಕಾದ್ರೆ 5 ನೇ ಕ್ಲಾಸ್ ಓದ್ತಾ ಇದ್ದೆ ಆಗ ಅಲ್ಲಿ ಏನಪ್ಪ ಅಂದ್ರೆ ನಮ್ಮಮ್ಮ ಸ್ಕೂಲ್‌ಗೆ ಹೋಗೋದು ಬುಟ್ಟು ಮನೇಲಿ ಇತ್ತಪ್ಪ ಅಂದ್ರೆ ನಮ್ಮಮ್ಮ ಬಡೀತಾ ಇತ್ತು ನನ್ಗೆ. ಸ್ಕೂಲ್‌ಗೆ ಹೋಗ್ರಿ, ಸ್ಕೂಲ್‌ಗೆ ಹೋಗ್ರಿ ಅಂತೆ ನಾವು

ಒಟ್ಟು ಸ್ಕೂಲ್ ಬಿಡ್ತಾ ಇದ್ದಿಲ್ಲ. ಆರನೇ ಕ್ಲಾಸು ಆದ ಮ್ಯಾಲಿ ಅಮ್ಮ ಹಾಸ್ಟಲ್‌ಗ ಸೇರಿಸಿಬೇಕು ಅಂತ ಮಾಡಿದ್ಲು. ಅದೆಲ್ಲಾ ಮಾಹಿತಿ ಕೊಟ್ಟಿದ್ದು ಗುರುಬಸಪ್ಪ ಮಾಸ್ಟರು ಅಂತ. ಅವರು ಚೆನ್ನಾಗಿ ಪಾಠ ಮಾಡ್ತಾ ಇದ್ರು. ನಮಗೆ ಪ್ರೋತ್ಸಾಹ ಕೊಡ್ತಾ ಇದ್ರು. ಎಲ್ಲಾ ಜಗ್ಗಿ ಒಡಿತಾ ಇದ್ರು. ಬಾಳ ಸ್ಟ್ರಿಕ್ ಇದ್ರು ಅವ್ರು. ನಮ್ಮೂರಗಿನೋರು ಜಗ್ಗ ಮಾಡ್ತೋಕೋತಾ ಇದ್ರು ಮಕ್ಕಳಿಗಿ ಒಡಿದ ತಕ್ಷಣ ಆದ್ರೆ ಅಮ್ಮ ಹೋತಾ ಇದ್ದಿಲ್ಲ. ಹೊಡಿವರೆ ಬುದ್ದಿ ಕಲಿತಾವ ಬುಡು ಅಂತೇಳುತ್ತಿದ್ಲು. ಅದಕ್ಕೆ ಅವರು ಬಾಳ ಇಷ್ಟ ಮಾಡ್ತಾ ಇದ್ರು. ಹುಲಿಗೆಮ್ಮ ನಿನಗ ತಿಳಿದಂಗ ಇಲ್ಲಿ ಯಾರಿಗೂ ತಿಳಿಯಲ್ಲ ನೋಡು ಅಂತ ಹೇಳ್ತಾ ಇದ್ರು. ನಮಗೆ ಸಾಕಷ್ಟು ಪ್ರೋತ್ಸಾಹ ಕೊಡ್ತಾ ಇದ್ರು. ಹಾಸ್ಟೆಲ್ ಇರೋದು ಮಾಹಿತೀನೇ ಗೊತ್ತಿಲ್ಲ ನಮಗ. ಹಾಸ್ಟೆಲ್ ಐತಿ ಅಂತ ಹೇಳಿದ್ದು ಅವ್ರು. ಸೇರಿಸಿರಿ ಅಂತ. ಅಮ್ಮ ಒಟ್ಟಾ ಇದು ಮಾಡಿಲ್ಲ ಹಾಸ್ಟೆಲ್‌ಗೆ ಸೇರಿಸಿದ್ರು. ಚೆನ್ನಾಗಿ ನೋಡಿಕಂಡಿದ್ದಾರೆ. ತಾಯಿ ಸ್ಥಾನದಲ್ಲಿ ನಿಂತುಕಂಡು ತಾಯಿನೂ ಆಗಿದಾರೆ. ಫ್ರೆಂಡುತರನೂ ಇದಾರೆ ನಮ್ಮಮ್ಮ.

SSLC ಮುಗಿದ ಮೇಲೆ ಕಾಲೇಜಿಗೆ ಹೋಗಬೇಕು ಅಂತ ನನ್ಗೆ ಆಸೆ ಇತ್ತು. ನಮ್ಮ ಮನೆಗ ನಮ್ಮ ದೊಡ್ಡಮ್ಮ ಮಕ್ಳು ಎಲ್ಲಾ ಬ್ಯಾಡ ಅಂದ್ರು ಮನಿನಾಗ ಗಂಡು ಮಕ್ಳು ಇದಾರ ಅಂದ್ರೆ ಅವ್ರು ಮಾತು ಕೇಳುಬೇಕಾ ಹೌದಾ! ನಮ್ಮ ಅಮ್ಮ ಮನಿನಾಗ ಏನು ಮಾಡ್ತಾ ಇತ್ತಪ್ಪ ಅಂದ್ರೆ, ಯಾರಾನಾ ಆಗಲಿ ನಮ್ಮ ಮೇಲೆ ಒಂದು ಮುಟ್ಯಾರಪ್ಪ ಅಂದ್ರೆ ಜಗ್ಗಕ ಹೋಗ್ತಾ ಇತ್ತು. ಯಾಕಂದ್ರೆ ಪಸ್ಟ್ ಎಲ್ಲಾ ಆಕಿನ ಇವರೆಲ್ಲಾ ಸೇರಿಕಂಡು ಹೊಡಿತಾ ಇದ್ರು. ದೊಡ್ಡಜ್ಜಿ ಮಕ್ಳನೇ ನಮ್ಮ ಅಮ್ಮಗ ಜಗ್ಗಿ ಹೊಡಿದಿದಾರ. ನಮ್ಮ ತಾತ ಹೊಡಿದಿರೋದಕ ಅಮ್ಮಗ ಕಿವಿ ಕೇಳಿಸಲ್ಲ ಈಗನೂ ಸರಿಯಾಗಿ ಕಿವಿ ನೋವು ಎಲ್ಲಾ ಐತಿ. ಅದಕ್ಕೋಸ್ಕರ ನಾವು ಅದೆಲ್ಲಾ ನೋಡಿಬಿಟ್ಟು ನಮ್ಮಗ ಬಾಳ ಬೇಜಾರು ಮಾಡಿಕಂಡಾಳ. ಚೀ! ನಮ್ಮ ಮಕ್ಳನೂ ಬಿಡಬಾರದು ಮನಿನಾಗ ಇದೇ ಪರಿಸ್ಥಿತಿ ಬರತ್ಯೆತಿ ಅಂತೇಳಿಬುಟ್ಟು ಮನ್ಯಾಗ ಬುಡೋದನ್ನಾ ಕೂಡ ತೆಗೆದಾಕಿಬುಟ್ಟು ಆ ಲೀಸ್ಟಲ್ಲೇ ಅದಕ್ಕೆ ನಮ್ಮ ಮಕ್ಳಗೂನೂ ಇದೇ ತರ ಲೂಸ್ ಕೊಟ್ಟುಕೊಂತ ಹೋದರೆ ಹೊಡಿತಾರ ಅಂತೇಳಿ ಎಲ್ಲಾರಿಗೂ ಜಗ್ಗಿ ಬೈತಿದ್ಲು. ಅದಕ್ಕೆ ಎಲ್ಲರೂ ನಮ್ಮನ್ನಾ ಮಾತಾಡಿಸಾಕ ಎದಿರಿಕೆಂತಾ ಇದ್ರು. ಯಾರಾದರೂ ಹೊಡಿದರೆ ಏನು ಕಳಕಂಡೀರಿ ನೀವು, ಎದುಕು ಹೊಡಿತೀರಿ ಅಂತ ಹಿಂಗೆ ಡೈರೆಕ್ಟಾಗಿ ಕೇಳ್ತಾಳ. ಹೊಡಿಬೇಕು ತಾನು ಹೊಡಿಬೇಕು, ಏನು ಮಾಡಿದರೂ ಹಾಕಿನೇ ಮಾಡಬೇಕು. ಅಂಗಿ ಬೆಳಿಸಾಳ ನಮ್ಮಮ್ಮ. SSLC ಪಾಸು ಆದ ಮ್ಯಾಲಿ ಹಾಸ್ಟಲ್‌ನಾಗ ಇದ್ವಿ. ನಮ್ಮೂರನಾಗನೋರು ಇದ್ರು. ಜಗ್ಗ ಅಂಗ ಇಂಗಿ ಇತ್ತು. ಆ ಹುಡ್ಗೀರು ಏನಪ್ಪ ಅಂದ್ರ ಬಾಳ ತಿರುಗ್ತಾ ಇದ್ರು. ಹೊಸಪೇಟೆನಾಗ ಗಂಡಿ ರಮೇಶ್ ಅಂತ ಇದ್ದ. ಆತನೂ COD ಅಂತ ಏನೇನೋ ಹೆಸರು ಹೇಳಿಬುಟ್ಟು ಹಾಸ್ಟೆಲ್‌ಗಿ ಬರೋದು. ಚೆನ್ನಾಗಿ ಕೊಡ್ತಾರ ಊಟ ಅಂತ ಕೇಳ್ತಾ ಇದ್ದ. ಹುಡ್ಗೀರುನೂ ಅಲ್ಲಿಗಿ ಹೋಗ್ತಾ ಇದ್ರು. ಆತ ರೆಕಮೆಂಡ್ ಮೇಲೆ ಸ್ಕೂಲ್‌ಗೆ ಸೇರಿಸ್ತಾನೆ ಅಂತೇಳಿಬುಟ್ಟು ಎಷ್ಟು ಜನ ಹುಡ್ಗೀರು ಮತ್ತಿ ಆತನ ರೆಕಮೆಂಡ್ ಮೇಲೆ ಪಾಸಾಗ್ತಾರೆ ಎಷ್ಟೋ ಜನ ಹುಡ್ಗೀರು ಅಂತೇಳಿ ಬಾಳ ಇತ್ತು. ಅದಕ ಹುಡ್ಗೀರೆಲ್ಲಾ ಅಲ್ಲಿಗಿ ಹೋಗ್ತಾ ಇದ್ರು. ಅದಕ ನಮ್ಮಮ್ಮ ಅಂಗೆಲ್ಲಾ ಹೋಗಬಾರ್ದು ನೀನು ಓದಿಕೆಂತಾ ಇಲ್ಲೇ ಇರಬೇಕು ಚೆನ್ನಾಗಿ. ಗಂಡು ಮಕ್ಳು ಜೊತ್ಯಾಗ ಜಾಸ್ತಿ ಮಾತಾಡಬಾರ್ದು ಅಂತ ಇದೆಲ್ಲಾ ಬಾಳ ಸ್ಟ್ರಿಕ್ ಮಾಡಿದಾರ ನಮ್ಮಮ್ಮ.

ಒಟ್ಟು SSLC ನಲ್ಲಿ ನಾವು ಎಲ್ಲಿ ಹೊರಗಿ ಹೋಗ್ತಾ ಇದ್ದಿಲ್ಲ. ಅಂಗಾಗಿ ಅಂಗೇ ಓದಿ ನಮ್ಮ ರಿಸಲ್ಟ್ ಪಾಸಾಯಿತು. ಒಂಬತ್ತು ಜನ ಇದ್ರು ಹಾಸ್ಟಲ್‌ನಾಗ ಹುಡ್ಗೀರು SSLC ನೋರು. ಅದರಲ್ಲಿ ನಂದೊಂದೇ ಪಾಸಾಯಿತು. ಅದಕ್ಕೆ ಅಮ್ಮಗ ಖುಷಿ ಆಯ್ತು. ಊರುನೋರು ಎಲ್ಲಾ ಬಾಳ ಖುಷಿಪಟ್ರು. ಎದುಕ ಅಂದರ ಆ ಹುಡಿಗಿ ತಿರುಗ್ತಾ ಇದ್ದಿಲ್ಲ. ಚೆನ್ನಾಗಿ ಓದಿ ಪಾಸಾಗ್ಯಾಳ. ಒಂಬತ್ತು ಹುಡ್ಗೀರಾಗ ಆಕಿ ಒಬ್ಬಾಕಿನೇ ಪಾಸಾಗಿರೋದು ರಿಯಲಿ ಗ್ರೇಟ್ ಅನ್ನೋರು. ಇಂಗಾಗಿ ಅಮ್ಮನೂ ಮುಂದೆ ಓದಿಸಬೇಕು ಅಂದುಕಂಡ್ಲು. ಜನಾನೂ ಹೇಳಿದ್ರು. ನಮ್ಮ ಮಗಳು ಈ ಕೇರಿಗೆಲ್ಲಾ SSLC ಮೊದಲು ಪಾಸಾಗ್ಯಾಳ. ಈ ಮೊದಲು ಯಾರೂ ಪಾಸಾಗಿರಲಿಲ್ಲ. ಇದಕ್ಕೊಸ್ಕರ ನೀನು ಆ ಹುಡ್ಗೀನ ಕಾಲೇಜುಕ ಸೇರಿಸಲೇ ಬೇಕು ಅಂತಂದು ಹೇಳಿದ್ರು.

ಮತ್ತೆ ಹೌದಲ್ಲ ಮಗ್ಳನ್ನಾ ಸೇರಿಸಬೇಕು ಅಂತಂದು ಹೇಳಿ ಅಣ್ಣೋರನ್ನಾ, ಅಜ್ಜೀರನ್ನಾ ಕೇಳಿದ್ಲು. ಕೇಳಿದ್ರ ಹೆಣ್ಣುಮಕ್ಳನ ಎಷ್ಟು ಓದಿಸೀದ್ರೂ ಅಷ್ಟೇನಮ್ಮ ಅಂತಂದು ಹೇಳಿದ್ರು. ಆಗಿಲೂನು ಕೇಳಾಕ ಬಂದಿದ್ರು ನನಗೆ. ಕೇಳಾಕ ಬಂದಿದ್ದರೂನೂ ಸಹ ಅದು ಏನಾಯ್ತು ಅಂದ್ರೆ ನಮ್ಮ ಅಮ್ಮ ಇಡಕಂಡು ನಮ್ಮ ದೊಡ್ಡಮ್ಮನ್ನಾ ಕೇಳಿದ್ಲು ಏಂಗ ಕೊಡಾನಾ ಬ್ಯಾಡ ಅಂತಂದು ಹೇಳಿ ಎದುಕ್ಕಾ ಅಂತ ಅಂದ್ರೆ ನಮಗ ಊಟ ಕೊಟ್ಟಿದ್ಲು ನಮ್ಮ ದೊಡ್ಡಮ್ಮನೇ. ನಮಗೆ ಎಲ್ಲಾನು ಮಾಡಿದ್ಲು ನಮ್ಮ ದೊಡ್ಡಮ್ಮನೇ ನಮ್ಮಮ್ಮ ಏನು ನಮ್ಮ ಖರ್ಸು ನೋಡಿಕಳ್ಳೋದು ಇಲ್ಲಂದ್ರೆ ಕೊಡಾದು. ನಮ್ಮ ದೊಡ್ಡಮ್ಮ ಇದ್ದುಕಂಡು ಇಲ್ಲ ಈ ಹುಡ್ಗ ಸರಿಗಿಲ್ಲ ಅಂತಂದು ಹೇಳಿದ್ಲು. ಇಲ್ಲ ನಮಗ ಈ ಸಂಬಂಧ ಇಷ್ಟ ಇಲ್ಲ ಅಂತಂದು ಹೇಳಿ ಆ ಸಂಬಂಧಾನ ಕಳಿಸಿಬುಟ್ರು. ಅವಾಗ ಏನಾಯ್ತಪ್ಪ ಅಂದ್ರೆ ಕಾಲೇಜಿಗೆ ಬ್ಯಾಡ ಏನಕ ಹೆಣ್ಣು ಮಕ್ಳನ್ನಾ ಓದುಸೋದು ಎಷ್ಟು ಓದಿಸಿದ್ರು ಅಷ್ಟೇ ಅಂತಂದು ಹೇಳಿದ್ಲು. ಆದ್ರೆ ಅಮ್ಮ ಕೇಳಿಲ್ಲ. ನಮ್ಮ ಮಗ್ಳನ ಸೇರಿಸ್ತೀನಿ ಅಂತಂದು ಹೇಳಿ ಕಾಲೇಜಿಗೆ ಸೇರಿಸಿದ್ಲು. ನನಗ ಸೆಕೆಂಡ್ ಪಿ.ಯು.ಸಿ.ನಾಗ ಫೇಲ್ ಆಗಿಬುಡ್ತು. ಅವಾಗ ನನಗೆ ತುಂಬಾ ಬೇಜಾರು ಆಯ್ತು. ನಾನು ಹುಟ್ಟಿದಾಗಲಿಂದ ಫೇಲ್ ಅನ್ನೋ ಶಬ್ದ ಒಂದು ಸಾರಿನೂ ಕೇಳಿಲ್ಲ. ಬಾಳ ಬೇಜಾರು ಆಯ್ತು. ಕಷ್ಟನೂ ಪಟ್ಟಿದ್ನಪ್ಪ ಹೇಳಬೇಕು ಅಂದ್ರೆ ಇಂಗ್ಲೀಷ್‌ನಾಗ ನಾನು ಅಷ್ಟು ಇದ್ದಿಲ್ಲ. ಇಂಟಲಿಜೆಂಟಲ್ಲ. ಕನ್ನಡದಾಗ ಸಕ್ಕತ್ತಾಗಿ ಓದುತೀನಿ. ಇಂಗ್ಲೀಷ್‌ನಾಗ ನನಗೆ ಏನು ಅಂದ್ರೆ ಏನೂ ಗೊತ್ತಿಲ್ಲ.

II PUC ನಾಗ ಚಂದ್ರಶೇಖರ್ ಸಾರ್ ಮಾಡಿದಾಗ ಸ್ವಲ್ಪ ಕಲಿತೆ. ಇಂಗ್ಲೀಷ್‌ನ ಕನ್ನಡದಾಗ ಹೇಳಿದ್ರೆ ಚೆನ್ನಾಗಿ ಅರ್ಥ ಮಾಡಿಕಂತಾ ಇದ್ದೀನಿ. ಆದ್ರೆ ಇಂಗ್ಲೀಷ್‌ನಾಗ ನನಗೆ ಆಗ್ತಾ ಇದ್ದಿಲ್ಲ. ಅದರ ಸಲುವಾಗಿ ಚೆನ್ನಾಗಿ ಓದಿದೆ. ಅದರ ಸಲುವಾಗಿ ಮೇಡಮ್‌ನೋರು ಸಹಾ ಸಾಕಷ್ಟು ಹೆಲ್ಪ್ ಮಾಡಿದ್ರು ನಿಜವಾಗ್ಲು. ಅಷ್ಟೆಲ್ಲಾ ಮಾಡಿದರೂ ರಿಸಲ್ಟ್ ಫೇಲ್ ಆಗಿಬಿಟ್ಟಾಲ್ಲ ಅದಕ್ಕೆ ಬಾಳ ಬೇಜಾರು ಆಗಿ ಬಿಡ್ತು ನನಗೆ. ನಾನು ಇರಬಾರದು ಸಾಯಬೇಕು ಅಂತಾನೇ ಅಂದುಕಂಡಿದ್ದೆ. ಆ ತರ ಇದಾದಾಗ ಅಮ್ಮ ಇದ್ದುಕಂಡು ಬಾಳ ಧೈರ್ಯ ಹೇಳಿದ್ಲು ನನಗೆ. ನೋಡಮ್ಮ ಕೊಟ್ಟು ದುಡುದು ಖರ್ಚು ಮಾಡಿರೋಕಿ ನಾನು. ನೀನು ಸುಮ್ನೆ ಓದಾಕ ಬಂದಿರೋದು ಇದಲ್ಲಾ, ಇನ್ನೊಂದು ಸಾರಿ ಕಟ್ಟಿ ಪಾಸು ಮಾಡಿಕಾ ನೀನು ಅಂತ ಬಾಳ ಧೈರ್ಯ ಹೇಳಿ ಸಮಾಧಾನ ಮಾಡ್ಯಾಳ.

ನಮ್ಮೂರಲ್ಲಿ ಓದಬೇಕಾದರ ನನಗ ದೇವದಾಸಿ ಅಂದ್ರೆ ಏನು ಅಂತ ಅಷ್ಟೇನು ಗೊತ್ತಿದ್ದಿಲ್ಲ. ಸುಮ್ಮನಿರುತಿದ್ದೆ. ದೇವದಾಸಿ ಅಂತಂದ್ರೂನೂ ಗೊತ್ತಿದ್ದಿಲ್ಲ. ಯಾರಾದರೂ ನಿಮ್ಮಪ್ಪ ಯಾರು ಅಂತ ಅಂದರೂನೂ ನಾನು ನಮ್ಮಪ್ಪನ ಹೆಸ್ರು ಹೇಳ್ತಾ ಇದ್ದಿಲ್ಲ. ನಮ್ಮ ಅಪ್ಪ ಇಲ್ಲ ನಮ್ಮಮ್ಮ ಇದಾರ ಅಂತ ಹೇಳ್ತಾ ಇದ್ದೆ. ನಾನು ಹೈಸ್ಕೂಲ್‌ಗೆ ಹೊಸಪ್ಯಾಟಗಿ ಸೇರಿದೆ. ಅಲ್ಲಿ ತುಂಬಾ ಜನ ದೇವದಾಸಿ ಮಕ್ಕಳನೂ ಇದ್ರು. ಅದರಲ್ಲಿನೂ ಅಷ್ಟೊಂದು ಏನು ಇದು, ನೋವು ಅಂತ ನನಗ ಅನಿಸಿಲ್ಲ. ಯಾಕಂದ್ರೆ ನನ್ನ ತರ ನೋವು ಇರೋರು ತುಂಬಾ ಜನ ನನ್ನ ಜೊತಿಗಿ ಇದ್ರು.

ಯಾವಾಗ ನಾನು ಕಾಲೇಜು ಲೆವೆಲ್ಲಿಗಿ ಬಂದಿನಲ್ಲಾ ಅವಾಗ ಅರಿವಾಯ್ತು ದೇವದಾಸಿ ಅಂದರೆ ಏನು, ಹೆಂಗೆ ಅಂತ ಬಾಳ ಬೇಜಾರು ಆಯ್ತು. ಅದುವರಿಗೆ ಗೊತ್ತಿರಲಿಲ್ಲ. ಸಖಿನಾಗ ಕೂಡ ಕೆಲವೊಂದು ವಿಷಯಗಳನ್ನು ದೇವದಾಸಿ ಬಗ್ಗಿ ಹೇಳಿದ್ರು. ಅವಾಗ ಒಂಥರಾ ಚೀ ಅನಿಸಿತು ನನಗೆ. ಚೀ ಹೆಂಗ ಆಗಿಬುಡುತಲ್ಲಾ ಅಂತ ಆದರೂ ನನ್ನ ತಾಯಿನಾ ದೇವದಾಸಿ ಅಂದ್ರೆ ಯಾರೂ ನಂಬಲ್ಲ. ಹೆಸ್ರು ಬಿದ್ದು ಬಿಟ್ಟದಿಯಲ್ಲಾ ಅದ್ಕೆ ಏನು ಮಾಡೋಕಾಗತ್ತೈತಿ.

ನಾನು II PUC ಪೇಲ್ ಆದ ಮೇಲೆ ಪ್ರೋತ್ಸಾಹಕ ಕೆಲಸ ಮಾಡೋಕೋದೆ. ಬಾಲಕಾರ್ಮಿಕ ಮಕ್ಕಳಿಗೆ ಪಾಠ ಮಾಡೋಕೆ ಹೋದೆ. ಅಲ್ಲಿ ಬಾಳ ಜನ ದೇವದಾಸಿಯರು ಇದ್ರು. ಮತ್ತೆ ರಾಯಚೂರುನಾಗ ಒಂದು ಟ್ರೈನಿಂಗ್‌ಗೆ ಹೋಗಿದ್ದೆ. ಮತ್ತೆ ಸಂಘದಲ್ಲಿ ಸಹ ಹೋಗಿದ್ದೆ. ಅಲ್ಲಿ ಸಹ ನನ್ನ ತಾಯಿ ದೇವದಾಸಿನಾ ಅಂತ ಕೇಳ್ತಾ ಇದ್ರು ಅವಾಗ. ನಾನು ಹೌದು ಅಂತ

ಹೇಳಾಕ ಒಂಥರಾ ಅನಿಸ್ತಾ ಇತ್ತು. ಇನ್ನೂ ಕೆಲವ್ರು ನಮ್ಮಪ್ಪನ ಹೆಸ್ರು ಏನು ಅಂತ ಕೇಳಿದ್ರಕ್ಕೆ ಹೆಸರು ಹೇಳ್ತಾ ಇದ್ದಿಲ್ಲ ನಾನು. ನಮ್ಮಪ್ಪ ಸತ್ತೋಗಿಬಿಟ್ಟಾನ ಅಂತ ಹೇಳ್ತಾ ಇದ್ದೆ.

ದೇವದಾಸಿ ಮಗ್ಳು ಅಂತ ಹೇಳಿಕಳ್ಳಾಕ ನನಗೆ ಅಸಹ್ಯ ಅನಿಸುತ್ತೆ. ಆದರೂ ನನ್ನ ತಾಯಿನ ನೆನಿಸಿಕಂಡ್ರೆ ನನ್ನ ತಾಯಿ ಬಗ್ಗಿ ಹೇಳಿಕಳ್ಳಬೇಕಲ್ಲ ಅನಿಸ್ತೈತಿ. ಈ ದೇವದಾಸಿ ಅನ್ನೋದನ್ನಾ ನೆನಿಸಿಕಂಡರೆ ಅಷ್ಟು ಸಿಟ್ಟು ಬರತೈತಿ ನನಗೆ. ತುಂಬಾ ಬೇಜಾರಾಗುತ್ತೆ, ಅಳು ಬರುತ್ತೆ ನನಗೆ.

ನಮ್ಮ ತಾಯಿನ ದೇವದಾಸಿ ಮಾಡಬಾರದಾಗಿತ್ತು. ದೊಡ್ಡೋರು ಮಾಡಿದ್ದರಲ್ಲಾ ಅವರನ್ನಾ ತುಂಬಾ ಬೈಬೇಕು ಅನಿಸ್ತೈತಿ. ಆಫೀಸಿನಾಗ ದೇವದಾಸಿ ಬಗ್ಗಿ ಮಾತಾಡೋವಾಗ ಒಂಥರ ಅನಿಸ್ತಾ ಇತ್ತು. ನಾನು ತಲೆ ಬಗ್ಗಿಸ್ಕಂಬಿಡ್ತಾ ಇದ್ದೆ. ತುಂಬಾ ಇನ್‌ಸೆಲ್ಟ್ ಆಗ್ತಾ ಇತ್ತು.

ನಮ್ಮಪ್ಪನ ಬಗ್ಗಿ ನನಗೆ ಏನು ಗೊತ್ತಿಲ್ಲ. ನಾನು ಚಿಕ್ಕೋರು ಇದ್ದಾಗ ಇದ್ದರಂತೆ ಅಷ್ಟೆ. ಇದುವರಿಗೂ ಅವರು ನಮಿಗಿ ಏನೂ ಮಾಡಿಲ್ಲ. ಮನ್ನೆ ದ್ವಿತೀಯ ಪಿ.ಯು.ಸಿ ಇದ್ದಾಗ ಬಂದಿದ್ದರು. ಏನು ಕೆಲ್ಸದ ಮ್ಯಾಲಿ, ನಾನು ಆತನ್ನಾ ಅಪ್ಪ ಅಂತಂದು ಕರದಿಲ್ಲ. ನನ್ನ ತಾಯಿ ನನಗೆ ಏದ್ರಲ್ಲಿ ಕಡಿಮಿ ಮಾಡಿಲ್ಲ. ತಂದಿ ಇಲ್ಲ ಅನ್ನೋ ಕೊರಗು ನಮಿಗಿ ಬರದೇ ಇರೋತರ ನೋಡಿಕಂಡಾಳ. ಅದಕ ನಮಿಗಿ ಅದರ ಚಿಂತಿ ಯಾವೊತ್ತು ಬಂದಿಲ್ಲ.

ನಮ್ಮಮ್ಮ ಸಾಕಷ್ಟು ಸಾರಿ ನೊಂದುಕಂಡು ಹೇಳಿಕಂಡಾಳ. ನಾನು ಮನ್ಯಾಗ ಬಿಡಿಸಿಕಂಡು ನಿಮಗ ತಂದಿ ಇಲ್ಲದಂಗಾತು ಅಂತ. ಅಮ್ಮಗ ಗಂಡು ಮಕ್ಳು ಇಲ್ಲದ ಚಿಂತಿ. ಅಮ್ಮಗ ಅಪ್ಪ ಇದ್ದಿದ್ದರೆ ಅಷ್ಟು ಚೆನ್ನಾಗಿ ನೋಡಿಕಂತಾ ಇದ್ರಲ್ಲಾ ಅಂತಾ ನನಗೂ ಒಂದೊಂದು ಸಲ ಅನಿಸ್ತೈತಿ. ಆದ್ರೆ ನಮ್ಮ ತಾಯಿ ಬಾಳ ದುಃಖ ಪಡ್ತಾ ಇದ್ರು. ಏದುಕ ಅಂದ್ರೆ ಪ್ರತಿಯೊಂದು ಕೆಲ್ಸಾನೂ ನಮ್ಮ ತಾಯಿನೇ ನಿಂತು ಮಾಡಬೇಕಲ್ಲ. ಹೆಣ್ಣು ಮಕ್ಳು ಮಾಡೋದು, ಗಂಡು ಮಕ್ಳು ಮಾಡೋದು ಎಲ್ಲಾನೂ ಅಮ್ಮನೇ ಮಾಡಬೇಕು. ಅದಕ್ಕೋಸ್ಕರನೇ ನಮ್ಮಮ್ಮ ಅಳ್ತಾ ಇತ್ತು. ತಂದಿ ಇದ್ದಿದ್ದರೆ ಇಂಗಿ ಆಗ್ತಾ ಇದ್ದಿಲ್ಲ ಅಂತ ಜಗ್ಗಿ ಅಳ್ತಾ ಇರ್ತಾಳ. ಆದ್ರೆ ನನಗೆ ಹೌದು ಅಂಗಿ ಅನಿಸಿಲ್ಲ. ತಂದಿ-ತಾಯಿ ಎರಡು ಕೆಲಸಾನೂ ನಮ್ಮ ತಾಯಿನೇ ಮಾಡ್ತಾಳ ಅದಕೆ ನನಗೆ ತಂದಿ ಬ್ಯಾಡ ಅನಿಸ್ತೈತಿ. ಆದ್ರೆ ನಮ್ಮ ತಾಯಿಗೆ ಎಲ್ಲಾ ಕೆಲ್ಸಗಳೂ ವಜ್ಜೆ ಅನಿಸ್ತೈತಿ ಅದಕ ನಮ್ಮ ತಾಯಿ ಗಂಡನ ಬಯಸ್ತಾಳ. ನನಗಂತೂ ಬೇಕಾಗಿಲ್ಲ ತಂದೆ.

P.U.C ಮುಗಿದ ಮೇಲೆ ಫೋತ್ನಾಳಕ ಹೋಗಿ ಕೆಲ್ಸ ಮಾಡಬೇಕು ಅಂತ ನಿರ್ಧಾರ ಮಾಡ್ದೆ. ಪಿ.ಯು.ಸಿ ಫೇಲ್ ಆದ ಮ್ಯಾಲಿ ಅದಕ್ಕೋಸ್ಕರ ಬಾಗಲವಾಡದಾಗ ಹೋಗಿ ಬಾಲಕಾರ್ಮಿಕ ಮಕ್ಕಳಿಗೆ ಟೀಚರ್ ಕೆಲ್ಸ ಮಾಡ್ತಾ ಇದ್ದೆ. ಮೊದಲು ಅಂಜಿಕಿ ಬಂತು ಎಂಗಪ್ಪ ಇಷ್ಟು ದೂರ ಅಂತಂದು ಹೇಳಿ. ಆದರೆ ದೇವ್ರು ಇದಾನ ಬುಡು ಕಾಪಾಡಾಕ ಅಂತ ತುಂಬಾ ಧೈರ್ಯ ತಂದುಕಂಡೆ. ಬರ್ತಾ ಬರ್ತಾ ಅಲ್ಲಿನೇ ಚೆನ್ನಾಗಿ ಹೊಂದಿಕಂಡೆ. ತುಂಬಾ ಮನೆ ಕಡೆ ಧ್ಯಾಸ ಆಗಲಿಲ್ಲ. ಜಾಸ್ತಿ ಚಿಂತಿ ಇರಲಿಲ್ಲ. ನಮ್ಮಮ್ಮ ನಾನು ದೂರ ಹೋಗಿದೀನಂದ್ರೆ ಒಂದು ನಿಮಿಷನೂ ಇರಲ್ಲ. ಫೋನ್ ಮಾಡಿ ಮಾತಾಡಿದ್ಲು. ಸ್ವಲ್ಪ ದಿನ ಆದ ಮ್ಯಾಲಿ ತಾನೇ ಕೇಳಿಕಂದು ಬಂದು ಬಿಡುತಾಳ. ಯಾಕಂದ್ರೆ ಅಲ್ಲಿ ವಾತಾವರಣ ಹೇಗಿರುತ್ತೋ ಏನು? ಅಲ್ಲಿ ಗಂಡು ಮಕ್ಳು ಎಂಗಿರುತಾರೋ ಏನೋ. ನಾನು ನಮ್ಮಮ್ಮಗ ಬಾಗಲವಾಡ ಅಡ್ರಸ್ ಕೊಟ್ಟಿದ್ದಿಲ್ಲ. ಹೆಂಗೋ ನನ್ನ ತಂಗೀನ ಕರಕಂಡು ಹುಡಿಕಿಕಂಡು ಬಂದ್ಲು.

ಆಗ ನನಗೆ ಒಂದು ಛಲ ಹುಟ್ಟಿತು. ನಮಿಗಿ ಯಾಕ ಹಿಂಗ ಮಾಡ್ತಾರೆ ಅಂತ ಅವಾಗಿಂದ ತುಂಬಾ ಧೈರ್ಯ ಬಂತು. ನಾನು ಮನೆ, ಹಾಸ್ಟೆಲ್‌ನಾಗ ಇದ್ದಾಗ ಧೈರ್ಯ ಇರಲಿಲ್ಲ. ಎಲ್ಲೂ ಹೊರಗ ಓಡಾಡ್ತಾ ಇರಲಿಲ್ಲ. ಫೋತ್ನಾಳಕ್ಕೋದ ಮ್ಯಾಲಿ, ಆಫೀಸ್ ಪರಿಚಯ ಆದ ಮೇಲೆ ಬಾಳ ಓಡಾಡೀನಿ. ನನದು ಪಿ.ಯು.ಸಿ ಫೇಲ್ ಆದ ಮ್ಯಾಲಿ ಸಾಕಷ್ಟು ಜನ ನನಗಿ ಮನಿಸಿಗೆ

ಬಾಳ ನೋವು ಆಗೋತರ ಮಾತಾಡ್ಯಾರು ಅದನ್ನಾ ಚಾಲೆಂಜಾಗಿ ತಗಂಡು ಓದಿ ಪಾಸು ಮಾಡ್ದೆ. ಆದರೆ ನಾನು ಒಬ್ಬರ ಮುಂದೆನೂ ಹೇಳಲ್ಲ ಇಂಗ ಅಂದಾರೆ ಅಂತ. ಅವತ್ತು ಕೂತುಕಂಡು ಜಗ್ಗಿ ಅತ್ತುಬಿಟ್ಟೆ. ಆ ಮಾತುಗಳನ್ನೆಲ್ಲಾ ನೆನಿಸಿಕಂಡು ಮೊದಲು ನಾನು ಬಾಳ ಸೋಮಾರಿತನನೆಲ್ಲಾ ನೆನಿಸಿಕಂಡು ಅತ್ತೆ. ಮತ್ತೆ ಬುದ್ಧಿ ಬಂತು ಇಂಗ್ಲೀಷ್ ಪಾಸು ಮಾಡಿಕಂಡೆ. ಮನೆಯಲ್ಲಿನ ಎಲ್ಲಾ ಪರಿಸ್ಥಿತಿಗಳನ್ನು ನೆನಸಿಕೊಂಡು ಅದನ್ನು ಮೀರಬೇಕು ಅನಿಸಿದೆ. ಬದುಕನ್ನು ಛಾಲೆಂಜಾಗಿ ತಗಂಡೀನಿ.

ದೇವದಾಸಿ ಮಗಳು ಎಂದು ಹೇಳಿಕೊಳ್ಳುವುದಕ್ಕೆ ಬೇಜಾರು ಆಗುತ್ತಿದೆ. ನಾಚಿಕೆ ಆಗುತ್ತೆ ಎಂದು ಕೆಂಚಮ್ಮ ದೇವದಾಸಿ ಪದ್ಧತಿಯ ಕುರಿತು ತುಂಬ ಅಳುಕಿನಿಂದ ಹೇಳುತ್ತಿದ್ದಳು. ದೇವದಾಸಿ ಎಂದರೆ ತುಂಬಾ ಕೆಟ್ಟದ್ದು, ವ್ಯವಸ್ಥೆ ರೂಪಿಸಿದ ಕುತಂತ್ರ ಎಂದು ಕೆಂಚಮ್ಮನ ತಲೆಮಾರಿನವರಿಗೆ ತಿಳಿದಿದೆ. ಕೆಂಚಮ್ಮ ದೇವದಾಸಿ ಪದ್ಧತಿಯನ್ನು ಹೆಚ್ಚು ದ್ವೇಷಿಸುತ್ತಾಳೆ. ನನ್ನ ಅಪ್ಪ ಇಲ್ಲ, ಸತ್ತೋದ ಎಂದು ಇಡೀ ಪುರುಷಶಾಹಿಯ ಮೇಲೆ ಸೇಡು ತೀರಿಸಿಕೊಳ್ಳಲಾಗದೆ ಅಸಹಾಯಕಳಾಗುತ್ತಾಳೆ. ಈಗಲೂ ಊರಿನ ಗೌಡ ನಮ್ಮ ಕಾರ್ಯಕ್ಕೆ ನಿಮ್ಮ ಮನೆಯ ಒಬ್ಬ ಬಸವಿ ಹೆಣ್ಣು ಮಗಳು ಬೇಕು ಎಂದು ಕೇಳಿದಾಗ, ಕೆಂಚಮ್ಮ ಕೆಂಡಮಂಡಲವಾಗಿದ್ದಳು. ಗೌಡರೆಲ್ಲರನ್ನೂ ಎದುರು ಹಾಕಿಕೊಳ್ಳುವ ತಾಕತ್ತು ಬೆಳೆಸಿಕೊಂಡಿದ್ದಾಳೆ. ಇದು ಅವರ ಅಜ್ಜಿ ಹಾಗೂ ತಾಯಿಯಲ್ಲಿ ಕಾಣುವುದಿಲ್ಲ. ತನಗಾದ ಇಡೀ ನೋವನ್ನು ಮೀರಲು ಓದನ್ನು ಮುಂದು ಮಾಡಿಕೊಂಡಿದ್ದಾಳೆ. ತಿಳುವಳಿಕೆ ಬಂದ ಹಾಗೆ ತನ್ನ ತಾಯಿ ದೇವದಾಸಿಯಾದರೂ ತಮ್ಮನ್ನು ಬೆಳೆಸಿರುವ ಕುರಿತು ಅವಳಿಗೆ ಹೆಮ್ಮೆ ಇದೆ. ಇಡೀ ದೇವದಾಸಿ ಪದ್ಧತಿಯನ್ನು ನಿಲ್ಲಿಸಿಬಿಡಬೇಕು. ಆ ವಿಷಯದ ಕುರಿತು ಎಲ್ಲರೂ ಕೆಲಸ ಮಾಡಬೇಕು. ಆ ಕೆಲಸವನ್ನು ನಾನು ಮಾಡಬೇಕು ಎಂಬ ಛಲವಿದೆ.

ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ, ಕೂಡ್ಲಿಗಿಗಳಲ್ಲಿ ದೇವದಾಸಿಯರಾಗಿರುವ ಕುಟುಂಬಗಳು ಸಾಕಷ್ಟು ಇವೆ. ಅವುಗಳಲ್ಲಿ ನಾಯಕ, ಮಾದಿಗ ಕೇರಿಗಳೇ ಹೆಚ್ಚು. ಇವರು ಸಾಕಷ್ಟು ಮಂದಿ ಬಯಲಾಟದ ಪಾತ್ರಧಾರಿಗಳಾಗಿ ನಾಟಕದ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದಾರೆ.

ಈ ಜಿಲ್ಲೆಯಲ್ಲಿ ತಮ್ಮ ಬಡತನದ ಬೇಗೆಯನ್ನು ನೀಗಿಸಿಕೊಳ್ಳಲು ನಟಿಯರಾಗಿ ಸೇವೆ ಮಾಡುತ್ತಿರುವವರನ್ನು ಕಾಣಬಹುದು. ಈ ಜಿಲ್ಲೆಯಲ್ಲಿ ಈ ರೀತಿ ನಟಿಯರಾಗಿ ತಮ್ಮ ವೃತ್ತಿಯನ್ನು ಸ್ವೀಕರಿಸಿರುವವರು ಹೆಚ್ಚಾಗಿ ನಾಯಕ ಜನಾಂಗದ ನಟಿಯರು. ಅವರನ್ನು ಬಿಟ್ಟರೆ 2ನೇ ಸ್ಥಾನದಲ್ಲಿ ಹೊಲೆಮಾದಿಗರು ಬರುತ್ತಾರೆ. ಇವರು ಬರೀ ಬಡತನಕ್ಕಷ್ಟೇ ರಂಗಪ್ರವೇಶ ಮಾಡಿರುವವರಲ್ಲದೆ, ಪಾರಂಪರಿಕ ವೃತ್ತಿಯಾಗಿ ಮುಂದುವರಿಸಿಕೊಂಡು ಹೋಗಲು, ಕೆಳಜಾತಿಯಾಗಿರುವ ಕಾರಣಕ್ಕಾಗಿ ವ್ಯವಸ್ಥೆಯ ಒತ್ತಡಗಳಿಗೆ ಸಿಲುಕಿಯೂ ಸಹ ರಂಗಪ್ರವೇಶ ಮಾಡಿದ್ದಾರೆ. ಸಮಾಜದಿಂದ ಇವರ ಪಾತ್ರಗಳಿಗೆ ಗೌರವ ಸಿಗುತ್ತಿದೆಯೇ ಹೊರತು ಇವರ ಖಾಸಗಿ ಜೀವನಕ್ಕಲ್ಲ. ಇವರು ದೇವದಾಸಿಯಾಗಿ ನಂತರ ರಂಗಪ್ರವೇಶ ಮಾಡುವುದರಿಂದ ಇವರನ್ನು ವ್ಯವಸ್ಥೆ ಸೂಳೆಯರೆಂದೇ ಗುರುತಿಸುತ್ತಿದೆ. ಇದರಿಂದ ಇವರು ಯಾವಾಗಲೂ ಮಾನಸಿಕವಾಗಿ ತೊಳಲಾಟದಲ್ಲಿಯೇ ಇರುತ್ತಾರೆ. ರಂಗದ ಒಳಗೆ, ಹೊರಗೆ ಎರಡೂ ಕಡೆ ಇವಳ ಮೇಲೆ ಸತತವಾಗಿ ಲೈಂಗಿಕ ಶೋಷಣೆ ನಡೆಯುತ್ತಿರುವುದರಿಂದ ಇವರ ಬದುಕು ಅತಂತ್ರ ಸ್ಥಿತಿಯಿಂದ ಕೂಡಿದೆ. ಸುಜಾತ ಅಕ್ಕಿಯವರು ಬಳ್ಳಾರಿ ಜಿಲ್ಲೆಯ ರಂಗನಟಿಯರು ಎಂಬ ತಮ್ಮ ಸಂಶೋಧನಾ ಕೃತಿಯಲ್ಲಿ ಈ ರೀತಿಯ ರಂಗನಟಿಯರ ಕುರಿತು ವಿಶೇಷವಾದ ಅಧ್ಯಯನವನ್ನು ಮಾಡಿದ್ದಾರೆ.

ಬಯಲಾಟದಲ್ಲಿ ಪಾತ್ರ ಮಾಡುವ ಹೆಣ್ಣು ಮಕ್ಕಳನ್ನು ಅವರು ಯಾವುದೇ ತಪ್ಪು ಮಾಡದಿದ್ದರೂ ಅವರನ್ನು 'ಸೂಳೆ'ಯ ಹಾಗೆ ನೋಡುತ್ತಾರೆ. ನಾಟಕ ಮಾಡುವವರು ಸೂಳೆಯರಾಗುತ್ತಾರೆ. ಸೂಳೆಯರು

ಮಾತ್ರ ನಾಟಕ ಮಾಡುತ್ತಾರೆ ಎಂಬ ನಂಬಿಕೆ ಇಡೀ ಜಿಲ್ಲೆಯಲ್ಲಿ ತುಂಬಿದೆ. ಈಗಿನ ತಲೆಮಾರಿನ ಹುಡುಗಿಯರು ಶಾಲ ಕಾಲೇಜುಗಳಲ್ಲಿ ನಾಟಕಕ್ಕೆ ಸೇರಿಕೊಂಡರೆ ಹಳ್ಳಿಗಳಲ್ಲಿ ಏನು ಬಯಲಾಟಕ ಸೇರಿ ಸೂಳೆ ಆಗ್ತೀಯೇನು ಎನ್ನುವುದು ಇಲ್ಲಿ ಸಾಮಾನ್ಯ.

ಕೆಲವು ದಲಿತ ಹೆಣ್ಣು ಮಕ್ಕಳು ಮುಕ್ತವಾಗಿ ಲೈಂಗಿಕ ಸ್ವಾತಂತ್ರ್ಯವನ್ನು ಹೊಂದಿದ್ದಾರೆ. ಅದು ಅವರ ಪರಿಸರ ಸಂದರ್ಭಗಳಲ್ಲಿ ಅನಿವಾರ್ಯವಾಗಿರುವಂತಹದ್ದು. ಆದರೆ ಅದನ್ನ ಅತ್ಯಂತ ಆಶ್ಚರ್ಯಕರವಾಗಿ ನೋಡುವ ಅವಶ್ಯಕತೆ ಇಲ್ಲ. ಬಸವಿ, ದೇವದಾಸಿ, ಲೇಸಿಯರಿಗೆ ಲೈಂಗಿಕ ಮುಕ್ತತೆಗೆ ಸಮಾಜದಿಂದ ಒಪ್ಪಿಗೆ ಸಿಕ್ಕಿರುತ್ತದೆ ಆದರೆ 'ಸೂಳೆ'ಯರಿಗೆ ಸಮಾಜದಿಂದ ಒಪ್ಪಿಗೆ ಸಿಕ್ಕಿರುವುದಿಲ್ಲ. ದೇವದಾಸಿ ಎಂಬುವುದು ವೃತ್ತಿಯಲ್ಲ. ಇದು ಪದ್ಧತಿ ಪರಂಪರೆಯಿಂದ ಬೆಳೆದುಕೊಂಡು ಬಂದ ಪುರೋಹಿತಶಾಹಿ, ಊಳಿಗಮಾನ್ಯಶಾಹಿ ವ್ಯವಸ್ಥೆಯ ಕೊಡುಗೆ. ಕೆಲವರು ಇದನ್ನೇ ವೃತ್ತಿಯಾಗಿಸಿಕೊಂಡಿದ್ದಾರೆ. ಆದರೆ ಇವರ ಸಂಖ್ಯೆ ಇಲ್ಲಿ ತುಂಬಾ ಕಡಿಮೆ ಇದೆ.

ಕೂಡ್ಲಿಗಿ, ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿಗಳಲ್ಲಿ ಕೆಂಪು ಬೀದಿಗಳಿರುವಂತೆ ಉಳಿದ ತಾಲ್ಲೂಕುಗಳಲ್ಲಿ ಏಕಿಲ್ಲ ಎಂದು ಯೋಚಿಸುವುದಾದರೆ, ಕೂಡ್ಲಿಗಿ, ಮರಿಯಮ್ಮನಹಳ್ಳಿ, ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು ಮಳೆಯಾಧಾರಿತ ಪ್ರದೇಶಗಳು. ಮಳೆ ಇದ್ದಾಗ ಮಾತ್ರ ಅಲ್ಲಿ ಕೂಲಿ ಸಿಗುತ್ತದೆ, ಮಳೆ ಇಲ್ಲದೇ ಇರುವ ಸಮಯದಲ್ಲಿ ಕೂಲಿ ಇಲ್ಲ. ಅವಾಗ ಕೂಲಿಗಾಗಿ ಎಲ್ಲಿಗಾದರೂ ಗುಳೆ ಹೋಗಬೇಕಾದಂತಹ ಸಂದರ್ಭ ಬರುತ್ತದೆ. ಗುಳೆ ಹೋಗಲು ಆಗದೇ ಇರುವ ಹೆಣ್ಣು ಮಕ್ಕಳು ಅನಿವಾರ್ಯವಾಗಿ ಇಂತಹ ಕಾರ್ಯಕ್ಕೆ ಇಳಿದಿರಬೇಕು. ಅದೇ ಬಳ್ಳಾರಿ, ಸಂಡೂರು, ಹೊಸಪೇಟೆ ತಾಲ್ಲೂಕುಗಳು ತುಂಗಭದ್ರ ಕಾಲುವೆಗಳಿಂದ ಕೂಡಿದ ವರ್ಷದ ಮುಕ್ಕಾಲು ಪಾಲು ನೀರಿನಿಂದ ಕೂಡಿದ ಪ್ರದೇಶಗಳಾಗಿದ್ದು ಕೂಲಿ ಎಥೇಚ್ಛವಾಗಿ ಸಿಗುತ್ತಿದ್ದರಿಂದ ಇಲ್ಲಿ ಕೆಂಪು ದೀಪಗಳು ಇಲ್ಲದೇ ಇರಬಹುದು. ಈ ರೀತಿಯಾಗಿ ಕಡಾಖಂಡಿತವಾಗಿ ಹೇಳುವುದಕ್ಕೆ ಬರುವುದಿಲ್ಲ. ಯಾಕೆಂದರೆ ಇಂತಹವರನ್ನು ಗುರುತಿಸುವುದು ಅಷ್ಟು ಸುಲಭವಲ್ಲ.

ಇವತ್ತಿಗೂ ಅನೇಕ ಕಾರಣಗಳಿಂದಾಗಿ ದೇವದಾಸಿಯನ್ನು ಮಾಡಲಾಗುತ್ತಿದೆ;

* ಮನೆಯಲ್ಲಿ ಗಂಡು ಮಕ್ಕಳಿಲ್ಲದಾಗ ಮನೆಯ ಜವಾಬ್ದಾರಿ ನಿರ್ವಹಿಸಲು
* ಮನೆತನ ಬೆಳೆಯಲು
* ತಾಯಿಯನ್ನು ನೋಡಿಕೊಂಡು ಹೋಗಲು
* ನೋಡಲು ಸುಂದರವಾಗಿ ಇಲ್ಲದಿದ್ದರೆ, ಅಂಗವಿಕಲರಾಗಿದ್ದರೆ
* ಯಾರೂ ಬಂದು ವಧುವನ್ನು ಕೇಳದಿದ್ದರೆ
* ಋತು ಮತಿಯಾಗದೇ ಇದ್ದಾಗ
* ತುಂಬಾ ಬಡತನವಿದ್ದಾಗ

ಈ ಎಲ್ಲಾ ಕಾರಣಗಳಿಂದ ಇವತ್ತಿಗೂ ಜಿಲ್ಲೆಯಲ್ಲಿ ದೇವದಾಸಿಯರನ್ನು ಮಾಡಲಾಗುತ್ತಿದೆ. ಇವರ ಜೀವನ ಅತ್ಯಂತ ಹೀನಾಯಸ್ಥಿತಿಗೆ ತಲುಪಿದೆ. 'ಸೂಳೆ' ಎನ್ನುವ ಪಟ್ಟವನ್ನು ಕಟ್ಟಿ ಅವರನ್ನು ಮಾನಸಿಕ

ಹಿಂಸೆಗೆ ತಳ್ಳುತ್ತಿದ್ದಾರೆ. ಇವರಿಗೂ ಎಲ್ಲರ ಹಾಗೆ ಆಸೆ ಆಕಾಂಕ್ಷೆಗಳಿರುತ್ತವೆ. ಆದರೆ ಜೀವನದಲ್ಲಿ ಶಾಶ್ವತವಾಗಿ ಕೈ ಹಿಡಿಯುವ ವ್ಯಕ್ತಿ ಬರುವುದಿಲ್ಲ. ಆದರೂ ಅವಳನ್ನು ನಂಬಿಸಿ ಅವಳಿಂದ ಎಲ್ಲಾ ಸುಖಗಳನ್ನು ಪಡೆದು ಅವಳಿಂದ ಇನ್ನೊಂದು ಜೀವ ಬರುವ ಮುನ್ನವೇ ಅವಳನ್ನು ಕೈಬಿಟ್ಟು ಹೋಗುತ್ತಾರೆ. ಜಗತ್ತಿನಲ್ಲಿ ಆಸರ ಇಲ್ಲದ ಇವರು ಬದುಕು ಕೊನೆಯವರೆಗೂ ಹೀಗೆ ಸಾಗುತ್ತದೆ. ಆದಾಗ್ಯೂ ಎಲ್ಲರೂ ಅದೇ ರೀತಿ ಇರುವುದಿಲ್ಲ. ಅಂದರೆ ಕೆಲವರು ಅದರ ವಿರುದ್ಧ ಪ್ರತಿಭಟಿಸುತ್ತಾರೆ. ತಮ್ಮ ಜೀವನ ತಾವೇ ರೂಪಿಸಿಕೊಳ್ಳುತ್ತಾರೆ. ಇನ್ನೂ ಕೆಲವು ಮಹಿಳೆಯರು ಅಥವಾ ಯುವತಿಯರು ಮದುವೆಯಾಗಲು ಇಚ್ಛಿಸುತ್ತಾರೆ. ಆದರೆ ಇವರನ್ನು ಮದುವೆಯಾಗಲು ಯಾರು ಮುಂದೆ ಬರುತ್ತಾರೆ? ಯಾರೂ ಮದುವೆಯಾಗಲು ಮುಂದೆ ಬರುವುದಿಲ್ಲ. ಯಾಕೆಂದರೆ ಇವರು ದೇವದಾಸಿಯರು. ಇವರು ಮದುವೆಯಾಗುತ್ತೇನೆ ಎಂದರೆ ಅವರು ಮೊದಲು ತಮ್ಮ ಸಮುದಾಯದ ಗಂಡಸರನ್ನೇ ಎದುರಿಸಬೇಕು. ಎರಡನೆಯದಾಗಿ ಉಳಿದ ಸಮುದಾಯದ ಗಂಡಸರನ್ನು ಎದುರಿಸಬೇಕಾಗಿದೆ. ಇದನ್ನೇ ಪುರುಷರ ವಿಷಯಕ್ಕೆ ಸಂಬಂಧಿಸಿದಂತೆ ಇಬ್ಬಗೆಯ ಹೊಣೆ ಎನ್ನುವುದು.

ದೇವದಾಸಿಯಾಗುವುದು/ ಮುತ್ತು ಕಟ್ಟಿಸುವುದು

ದೇವ್ರಿಗೆ ಬಿಡೋದಕ್ಕ ಮನೆ ಮಗ್ಳು ದೇವದಾಸಿ, ಬಸವಿತನ ಅಂತಾರ. ಈ ಮೂರು ಎದಕ್ಕಂದ್ರೆ ಬಸವಿ ಅಂಬಲೋರ್ದ ದೇವದಾಸಿ ಅಂತಾರ. ಬಸವಿ ಅಂದ್ರ ಮರ್ಯಾದಿ ಕಮ್ಮಿ ಬರ್ತೈತಿ. ದೇವದಾಸಿ ಅಂದ್ರ ಸ್ವಲ್ಪ ಜಾಸ್ತಿ ಮರ್ಯಾದಿ ಬರ್ತೈತಿ ಅಂತ ಬಸವಿ ಅಂದ್ರ ಸಣ್ಣ ಜಾತಿ ಅಂತಿವಲ್ಲ, ಹರಿಜನ ಅಂತ ಹಂಗ. ದೇವದಾಸಿ ಅಂದ್ರ ಬ್ಯಾಡ್ರು, ಕುರುಬ್ರು ಅಂತಿವಲ್ಲ ಅಂಗೆ ಇದ್ರಾಗೆ ಮೇಲೆ ಕೆಳಗೆ ಅಂತ ಇರ್ರೈತಿ ಮರ್ಯಾದಿ ಅಂತ ನಾವು ಮಾತಾಡ್ತಿವಲ್ಲ ಆ ತರಕ್ಕೆ ದೇವದಾಸಿ ಈ ಬಸವಿತನಕ್ಕೆ ಮರ್ಯಾದಿ ಸಿಗಂಗಿಲ್ಲ.

ಈ ಬಸವಿನ ಎಂಗ ಬಿಡ್ತಾರಂದ್ರ ಬ್ಯಾರೆ ಬ್ಯಾರೆ ಜಾತಾಗ ಹನುಮಂತಪ್ಪಂದು ಮುದ್ರೆ ಹಾಕ್ತಾರೆ. ಗಂಡು ಮಕ್ಳು ಅವರೇ ಬಂದು ಮನೆತನಕ ಇದ್ಹೋಗ್ತಾರೆ. ಕೆಲವು ಮನಿಗಳಾಗ, ಯಾರೂ ಇಲ್ಲ ಅಂದು ಸಣ್ಣ ಹುಡ್ಗಿ ಇರ್ಲಿಕ್ಕೆ ಹುಲಿಗೆಮ್ಮ ಅಂತ ಇರ್ತಾಳಲ್ಲ ಹುಲಿಗ್ಯಾಗ, ಅಲ್ಲಿ ಹೋಗಿ ಐದು ಮನೇರ ಜೋಗಮ್ಮನೋರನ್ನಾ ಕರಕಂಬಂದು ಬಿಳಿ ಸೀರಿ, ಬಿಳಿ ಕುಬುಸು ತಂದು ಮತ್ತೆ ಅವ್ರಿಗೋಸ್ಕರ ಕಣವುಗಳ ತಂದು ಹೊಳ್ಗಿ ಮನೆ ದಿನಿಸಿ ಅಡುಗೆ ಮಾಡಿ ಹುಲಿಗ್ಯಾಗ ಅಡ್ಗಿಗಿ ಇಟ್ಟು, ಅವ್ರಿಗಿ ಊಟ ಹಾಕ್ಸಿ ಅಲ್ಲಿಂದವಿಡಿದೂ ಜೋಗಮ್ಮನವರಿಗೂ ಬಸವಿ ಬಿಡ್ತಾರಲ್ಲ ಆ ಹೆಣ್ಮಕ್ಳು ನೀರಾಕೆಂಡು ಅಂಗೆ ನಮಸ್ಕಾರ ಹಾಕೆಂತಾ ಹೋಗ್ತಾರ. ಹಾಕೆಂತಾ ಹೋಗಿ ಅಲ್ಲಿ ಅದೇನೋ ಐದು ದೇವ್ರು ಇರ್ತಾವ ಮತ್ತೆ ಅವ್ನೆಲ್ಲ ತಗಂಬಂದು ತಾಳಿ ತಗಂಡು ನಿನ್ನ ಹೆಸರೇಳಿ ಕಟ್ತುತೀನಿ ಅಂತ ಜೋಗಮ್ಮನವ್ರೆ ಕಟ್ಟುತಾರೆ ಹುಲಿಗ್ಯಾಗ ಇದೇ ತರ ನೇಮಿಸೋದು. ಮನ್ಯಾಗ ಮನ್ಯಾಗ ನೇಮಿಸೋಕಾಗಲ್ಲ. ವರ್ಷಕ್ಕೊಂದ್ಸಾರಿ ಬ್ಯಾಟಿ ಮಾಡಬೇಕು, ಮನ್ಯಾಗ ಶಾಂತಿ ಸಮಾಧಾನ ಬರತೈತಿ. ಒಬ್ಬೊಬ್ಬರಿಗೆ ಜೀವನದಾಗ ಬಾಳ ಸತ್ಯದಿಂದ ನಿತ್ಯದಿಂದ ಪೂಜಿ ಮಾಡಿದ್ರ ಅವರ ಜೀವನದಾಗ ಹುಲಿಗೆಮ್ಮನೇ ಮಾತಾಡಿ ಬಿಡಾಳ. ಆ ತರ ಒಬ್ಬೊಬ್ಬರು ಕಷ್ಟ ಪಟ್ಟು ಜೀವನದಲ್ಲಿ ಬೇಡಿಕೆಂಡಿರ್ತಾರ. ಒಬ್ಬೊಬ್ರು ಮಾಮೂಲು ನಮ್ಮ ಜೀವನ ಇಷ್ಟೆ ಬಿಡು ಊಟ ಮಾಡೋದು ಕೆಲ್ಸಕೋಗೋದು ಬರೋದು ಇಷ್ಟೆಲ್ಲಾ ಆಕಿ ಹೆಸರೇಳ್ಕೊಂಡು ಬದಕ್ತಿವಲ್ಲ ಅಂದು ಮಾಮೂಲಿ ಬದುಕ್ತಾರ ಅಂತ ತನಗೆ ದೇವರಿಗೆ ಬಿಟ್ಟದನ್ನಾ ಅಂಬಮ್ಮ ವಿವರಿಸಿದ್ಲು.

ಆದರೆ ಈಗ ದೇವದಾಸಿ ಬಿಡುವುದು ತಪ್ಪು ಅದು ಕಾನೂನು ಬಾಹಿರ ಎಂಬುದು ಬಂದಾಗಿನಿಂದ ದೇವರನ್ನು ಕರಿಸಿ ಮನೆಯಲ್ಲಿಯೇ ಮುತ್ತು ಕಟ್ಟಿಸುತ್ತಾರೆ. ಮೊದಲಿಗೆ ಹೋಲಿಸಿದರೆ ಈಗ ಅದರ ಪ್ರಮಾಣ ಕಡಿಮೆ

ಇದೆ. ಕಾನೂನು ಮಾಡಿದವರನ್ನಾ ಬೈಯುತ್ತಾರೆಯೇ ಹೊರತು ಈ ಪದ್ಧತಿ ಯಾಕಿದೆ? ಇದರಿಂದ ನಮಗಾಗುವ ತೊಂದರೆಗಳೇನು ಎಂಬಿತ್ಯಾದಿಯಾಗಿ ಯಾರು ಯೋಚಿಸುವುದಿಲ್ಲ. ಇದು ನಮ್ಮ ಪದ್ಧತಿ ಎಂದೇ ಮಾತಾಡುತ್ತಾರೆ. ಮೊದಲನೆ ತಲೆಮಾರಿಗೆ ಹಣಕ್ಕೆ ಮುಖಾಮುಖಿಯಾದವರೂ ಕೂಡ ಇದರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಿಲ್ಲ. ಥಣಾಪುರದ ಪಿ.ಯು.ಸಿ ಓದಿರುವ ಅನ್ನಪೂರ್ಣ ತಂದೆಯ ಬಲವಂತದಿಂದ ದೇವದಾಸಿಯಾಗಿ ೨೦ ವರ್ಷಕ್ಕೆ ಇಬ್ಬರು ಮಕ್ಕಳ ತಾಯಿಯಾಗಿದ್ದಾಳೆ. ಈ ವ್ಯವಸ್ಥೆಗೆ ವಿರುದ್ಧವಾಗಿ ಶಿಕ್ಷಣ ಯಾವ ಪಾತ್ರವನ್ನು ನಿರ್ವಹಿಸುತ್ತಿದೆ?

ಜಿಲ್ಲೆಯ ದಲಿತ ಕುಟುಂಬಗಳಲ್ಲಿ ನೂರಾರು ಮಕ್ಕಳು ಬಾಲ್ಯವಿವಾಹಕ್ಕೆ ಒಳಗಾಗಿ ತಮ್ಮ ಬಾಲ್ಯದ ಹಕ್ಕುಗಳಿಂದ ವಂಚಿತರಾಗಿದ್ದಾರೆ. ಸಾಮೂಹಿಕ ವಿವಾಹಗಳು ಬಾಲ್ಯವಿವಾಹ ನಡೆಸುವ ಕೇಂದ್ರಗಳಾಗಿವೆ. ೧೯೨೯ರಲ್ಲಿಯೇ ನಮ್ಮ ದೇಶದಲ್ಲಿ ಬಾಲ್ಯವಿವಾಹ ನಿಷೇಧ ಕಾಯಿದೆ ಜಾರಿಗೆ ತರಲಾಗಿದ್ದರೂ ಅನೇಕ ವರ್ಷಗಳಿಂದ ಈ ಸಂಗತಿಗೆ ಸಂಬಂಧಿಸಿದಂತೆ ಅನೇಕರು ಕೆಲಸ ಮಾಡುತ್ತಿದ್ದರೂ ಈ ಪದ್ಧತಿಯ ನಿರ್ಮೂಲನೆ ಆಗದೇ ಇರುವುದು ನಮ್ಮ ಮುಂದೆ ಇರುವ ದುರಂತ. ದಲಿತ ಕುಟುಂಬಗಳಲ್ಲಿಯೇ ಯಾಕೆ ಬಾಲ್ಯ ವಿವಾಹಕ್ಕೆ ಹೆಚ್ಚಾಗಿ ನಡೆಯುತ್ತವೆ ಎಂದು ನೋಡುವುದಾದರೆ ಅಲ್ಲಿ ಇರುವ ಅನಕ್ಷರತೆ, ಅಜ್ಞಾನ, ಮೂಢನಂಬಿಕೆ, ಬಡತನಗಳ ಪ್ರತಿಫಲ ಇದು ಎಂದು ಗೊತ್ತಾಗುತ್ತದೆ.

ಇನ್ನೂ ಮದುವೆಯಾದ ಹೆಣ್ಣು ಮಕ್ಕಳ ಸ್ಥಿತಿ ಮೈಮುರಿವ ಹೊಲದ ದುಡಿತ, ಮನೆಯ ಒಳಗೆ ಗಂಡನ ಕುಡಿತ, ಬಾಸುಂಡೆ ಬರುವ ಬಡಿತ ಎಲ್ಲವುಗಳನ್ನು ಇವಳು ಎದುರಿಸಬೇಕು. ಮನೆಯಲ್ಲಿ ಗಂಡ ಸಂಪಾದಿಸಿ ತಂದ ಹಣದಲ್ಲಿ ಅರ್ಧ ಹಣದಲ್ಲಿ ಕುಡಿದು ಇನ್ನುಳಿದ ಅರ್ಧ ಹಣವನ್ನು ತಂದು ಹೆಂಡತಿಯ ಕೈಗೆ ಕೊಡುತ್ತಾನೆ. ಮಕ್ಕಳೂ ಸಹ ತಮ್ಮ ತಮ್ಮ ದುಡಿಮೆಯ ಹಣವನ್ನು ತಾಯಿಯ ಕೈಗೆ ಒಪ್ಪಿಸುತ್ತಾರೆ. ಇಡೀ ಕುಟುಂಬದ ನಿರ್ವಹಣೆಯಲ್ಲಿ ತಾಯಿಯ ಜವಾಬ್ದಾರಿಯೇ ಮುಖ್ಯವಾಗಿರುತ್ತದೆ. ಕುಟುಂಬದ ಹೊರಗೆ ಏರ್ಪಡುವ ಸಾಮಾಜಿಕ ಕೆಲಸಗಳ ಜವಾಬ್ದಾರಿಯನ್ನು ಸಾಮಾನ್ಯವಾಗಿ ಗಂಡಸರು ಮತ್ತು ಹೆಂಗಸರು ಇಬ್ಬರೂ ವಹಿಸಿಕೊಳ್ಳುತ್ತಾರೆ. ಎಮ್ಮೆ ಮತ್ತು ಆಕಳುಗಳಂತಹ ಸಾಕು ಪ್ರಾಣಿಗಳ ನಿರ್ವಹಣೆಯ ಹಾಲಿನ ಉತ್ಪಾದನೆಯ ಕೆಲಸ ಕಾರ್ಯಗಳನ್ನು ಸಾಮಾನ್ಯವಾಗಿ ಸ್ತ್ರೀಯರೇ ನೋಡಿಕೊಳ್ಳುತ್ತಾರೆ. ಹಬ್ಬ ಹರಿದಿನ ಜಾತ್ರೆಗಳ ಸಂದರ್ಭದಲ್ಲಿ ಮಾಡುವ ವಿಶೇಷ ಅಡುಗೆಯ ತಯಾರಿಯನ್ನು ಸ್ತ್ರೀಯರೇ ಮಾಡುತ್ತಾರೆ. ಒಂದೆರಡು ತಲೆಮಾರುಗಳ ಹಿಂದೆ ಅವಿಭಕ್ತ ಕುಟುಂಬಗಳಾಗಿ ಮಾರ್ಪಾಟಾಗಿವೆ. ಇವರೆಲ್ಲರೂ ಬೇರೆ ಕುಟುಂಬಗಳ ಜೊತೆ ಸಂಘರ್ಷ ಬಂದಾಗ ತಾವೆಲ್ಲರೂ ಒಂದೇ ಆಗುತ್ತಾರೆ. ಇವರ ಕುಟುಂಬಗಳಲ್ಲಿ ಕೌಟುಂಬಿಕ ಸಾಮರಸ್ಯವಿದೆ.

ಮೇಲ್ನೋಟಕ್ಕೆ ದಲಿತ ಮಹಿಳಾ ಕೌಟುಂಬಿಕ ರಚನೆಯಲ್ಲಿ ಮಾತೃಪ್ರಧಾನ ವ್ಯವಸ್ಥೆ ತೋರಿದರೂ ಅಂತರ್ಯದಲ್ಲಿ ಪುರುಷಪ್ರಧಾನತೆಯನ್ನು ಜಾಗೃತಿಯಿಂದ ಕಾಯ್ದುಕೊಂಡಿದೆ. ಈಗ ದಲಿತ ಕುಟುಂಬಗಳಲ್ಲಿ ಮಾತೃಪ್ರಧಾನತೆ ಇದೆ ಎಂದು ಹೇಳುವುದು ಒಂದು ಮಿಥ್ಯೆಯಾಗಿದೆ.

ಊಳಿಗಮಾನ್ಯಶಾಹಿ, ಬಂಡವಾಳಶಾಹಿಗಳು ಸೇರಿಕೊಂಡು ದಲಿತರಿಗಿರುವ ಅಲ್ಪಸ್ವಲ್ಪ ಜಮೀನುಗಳನ್ನು ಕಬಳಿಸುತ್ತಿದ್ದಾರೆ. ಇದರಿಂದ ಸಾಗುವಳಿದಾರರ ಕೈಯಲ್ಲಿ ದಲಿತರ ಭೂಮಿ ತಲುಪಿ ದಲಿತರೆಲ್ಲರೂ ಕೃಷಿಕಾರ್ಮಿಕರಾಗಿ ಮಾರ್ಪಟ್ಟಿದ್ದಾರೆ.

ಬಳ್ಳಾರಿ ಜಿಲ್ಲೆ ಶ್ರಮಶಕ್ತಿಯ ವಿಂಗಡಣೆ ೧೯೯೧ - ೨೦೦೧

ವರ್ಷ	ಸಾಗುವಳಿದಾರರು	ಕೃಷಿಕಾರ್ಮಿಕರು	ಕೌಟಂಬಿಕ ಕೆಲಸಗಾರರು	ಇತರೆ ಶೇಕಡಗಳಲ್ಲಿ
೧೯೯೧	೩೨.೮೧	೪೧.೪೯	೧.೪೧	೨೪.೨೯
೨೦೦೧	೨೭.೭೫	೩೯.೧೦	೨.೭೬	೩೦.೪೪

(Karnataka at a glance 2000-2001 Directorate of Economic and Statastics, Bangalore.)

ಮೇಲಿನ ಪಟ್ಟಿಯ ವಿವರಣೆಯನ್ನು ನೋಡುವುದಾದರೆ ೧೯೯೧-೨೦೦೧ರ ವರೆಗಿನ ೧೦ ವರ್ಷಗಳಲ್ಲೂ ಸಾಗುವಳಿದಾರರ ಪ್ರಮಾಣ ಹೆಚ್ಚಾಗಿಯೇ ಇದೆ. ಅಂದರೆ ೧೯೯೧ರಲ್ಲಿ ೩೨.೮೧ ಇದ್ದರೆ ೨೦೦೧ರಲ್ಲಿ ೨೭.೭೫ ಸಾಗುವಳಿದಾರರಿದ್ದಾರೆ. ಆದರೆ ಕೃಷಿಕಾರ್ಮಿಕರ ಪ್ರಮಾಣ ೧೯೯೧ರಲ್ಲಿ ೪೧.೪೯ ಇದ್ದರೆ, ೨೦೦೧ ರಲ್ಲಿ ೩೯.೧೦ಯಷ್ಟು ಕೃಷಿಕಾರ್ಮಿಕರು ಇದ್ದಾರೆ. ೧೦ ವರ್ಷಗಳ ಹಿಂದೆ ಕೃಷಿಕಾರ್ಮಿಕರು ಹೆಚ್ಚಾಗಿದ್ದು, ಈಗ ಆ ಕೃಷಿಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ ಎಂಬುವುದು ಅವರು ಭೂಮಿಯನ್ನು ತೆಗೆದುಕೊಂಡಿದ್ದಾರೆ. ಹಾಗೂ ಇತರ ಉನ್ನತ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂದಲ್ಲ. ಜಿಲ್ಲೆಯ ಗಣಿಗಾರಿಕೆಯ ಪರಿಣಾಮದಿಂದ ಗಣಿ ಕೆಲಸಗಾರರಾಗಿಯೂ ಕೆಲಸ ಮಾಡುತ್ತಿದ್ದಾರೆಂಬುವುದನ್ನು ತೋರಿಸುತ್ತದೆ. ಪಟ್ಟಿಯಲ್ಲಿ ತಿಳಿಸಿರುವ ಇತರೆ ಚಟುವಟಿಕೆಗಳಲ್ಲಿ ಗಣಿಗಾರಿಕೆ ಇದೆ ಎಂಬುವುದನ್ನು ಗಮನಿಸಬೇಕು.

ಗ್ರಾಮೀಣ ಕಾರ್ಮಿಕರ ಭೂ ಒಡೆತನ

ಕುಟುಂಬಗಳು	೧೯೭೪-೭೫		೧೯೯೩-೯೪	
ಭೂಮಿ ಇರುವವರು	ದಲಿತರು	ಇತರರು	ದಲಿತರು	ಇತರರು
	೪೪.೩೮%	೫೫.೯೭%	೩೫.೦೫%	೮೧.೧೯%
ಭೂ ರಹಿತರು	೫೫.೬೫%	೪೪.೦೨%	೬೪.೯೫%	೧೮.೮೧%
ಒಟ್ಟು	೫೭.೪೧%	೫೫.೬೯%	೫೯.೪೮%	೩೦.೧೫%

(ಮೂಲ: ಗ್ರಾಮೀಣ ಕಾರ್ಮೀಕ ಪರಿಕಲ್ಪನೆ, ಗ್ರಾಮೀಣ ಕಾರ್ಮಿಕ ಕುಟುಂಬಗಳ ಸಾಮಾನ್ಯ ಲಕ್ಷಣಗಳ ವರದಿ ಕಾರ್ಮಿಕ ಬ್ಯೂರೋ, ಕಾರ್ಮಿಕ ಸಚಿವಾಲಯ ಸಿಮ್ಲಾ)

ಮೇಲಿನ ಪಟ್ಟಿಯನ್ನು ಗಮನಿಸುವುದಾದರೆ ಭೂ ಒಡೆತನ ಇತರರಿಗಿಂತ ದಲಿತರಲ್ಲಿ ಕಡಿಮೆ ಪ್ರಮಾಣದಲ್ಲಿದೆ. ಭೂ ಒಡೆತನ ದಲಿತ ಪುರುಷರಿಗೇ ಇಲ್ಲದಿರುವಾಗ ಇನ್ನು ದಲಿತ ಮಹಿಳೆಯರಿಗೆ ಭೂಮಿ ಎಲ್ಲಿಂದ ಬರಬೇಕು. ದಲಿತ ಮಹಿಳೆಯರಲ್ಲಿ ಭೂ ಒಡೆತನವನ್ನು ಹುಡುಕುವುದು ಆಗುವುದಿಲ್ಲ. ನಿರಾಶ್ರಿತ ಮನೆಗಳ ಹಂಚಿಕೆಯ ಸಂದರ್ಭದಲ್ಲಿ ಕೆಲವು ದಲಿತ ಮಹಿಳೆಯರಿಗೆ ಮಾತ್ರ ಮನೆ/ಜಾಗದ ಪ್ರಮಾಣ

ಪತ್ರಗಳನ್ನು ಹಂಚಲಾಗಿದೆ. ಅಲ್ಪಸ್ವಲ್ಪ ಜಮೀನನ್ನು ಹೊಂದಿರುವ ದಲಿತರು ಕೂಡ ಎಸ್.ಇ. ಜಡ್ (Special Economic Zone) ನಿಂದಾಗಿ ಭೂಮಿಯು ಬಂಡವಾಳಶಾಹಿಗಳ ಕೈಗೆ ತಲುಪುತ್ತಿದೆ. ಬಡವರಿಗೆ ದುಡ್ಡಿನ ಆಮಿಷ ಒಡ್ಡಿ ಬಲವಂತವಾಗಿಯೂ, ಹೆದುರಿಸಿಯೂ ಭೂಮಿಯನ್ನು ಕಬಳಿಕೆ ಮಾಡುತ್ತಿದ್ದಾರೆ. ಹೀಗ ಕಬಳಿಸಿಕೊಂಡ ಜಮೀನಿನಲ್ಲಿಯೇ ಮತ್ತೆ ಹೋಗಿ ದಲಿತರು ತಮ್ಮ ಜಮೀನಿನಲ್ಲಿಯೇ ಕೃಷಿಕೂಲಿಗಳಾಗಿ, ಗಣಿಕೂಲಿಗಳಾಗಿ ಕೆಲಸ ಮಾಡಬೇಕಾದ ಸ್ಥಿತಿ ಒದಗಿದೆ. ಈಗ ದಲಿತ ಕುಟುಂಬಗಳಲ್ಲಿ ಆಗುತ್ತಿರುವ ಕೃಷಿ ಕೂಲಿ ಅವಲಂಬನೆ, ಗಣಿಕೂಲಿ ಅವಲಂಬನೆ ಏರಿಕೆಯಾಗುತ್ತಿರುವುದು ದಲಿತರು ತಮ್ಮ ಭೂಮಿ ಕಳೆದುಕೊಂಡಿರುವುದನ್ನು, ಕಳೆದುಕೊಂಡ ಪರಿಣಾಮವನ್ನು ಸೂಚಿಸುತ್ತದೆ. ಕೃಷಿ, ಗಣಿಗಳಲ್ಲಿ ದಿನಗೂಲಿಗಳಾಗಿ ಹೆಚ್ಚಾಗಿ ದಲಿತ ಮಹಿಳೆಯರೇ ದುಡಿಯುತ್ತಿದ್ದಾರೆ.

ದಿನಗೂಲಿಗಳು ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ ಎಂದರೆ ಅಭದ್ರತೆ. ದಿನಗೂಲಿಗಳು ದಿನವೂ ದುಡಿಮೆಯನ್ನು ಎದುರು ನೋಡಬೇಕಾಗಿರುತ್ತದೆ. ದಿನಗೂಲಿಗಳಿಗೆ ಸಂಬಂಧಿಸಿದಂತೆ ತಾತ್ಕಾಲಿಕ ನಿರುದ್ಯೋಗ ಮತ್ತು ಉದ್ಯೋಗ ಎರಡೂ ಏಕ ಕಾಲದಲ್ಲಿ ಸಂಭವಿಸುತ್ತಿರುತ್ತವೆ. ಉದ್ಯಮಪತಿಗಳು ದುಡಿಮೆಗಾರರನ್ನು ಅಭದ್ರ ಸ್ಥಿತಿಯಲ್ಲಿಡಲು ಪ್ರಯತ್ನಿಸುತ್ತಾರೆ. ಇದರಿಂದ ಕೂಲಿಯನ್ನು ಅತ್ಯಂತ ಕೆಳಮಟ್ಟದಲ್ಲಿ ಕಾಯ್ದುಕೊಳ್ಳಬಹುದು. ಗ್ರಾಮೀಣ ಕೃಷಿ ಕ್ಷೇತ್ರದಲ್ಲಿ ದುಡಿಮೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳು ಮೌಖಿಕವಾಗಿರುತ್ತವೆ. ಈ ಮೌಖಿಕ ಒಪ್ಪಂದಗಳು ಭೂಮಾಲೀಕರಿಗ ಅನುಕೂಲಕರವಾಗಿರುತ್ತವೆ ವಿನಃ ದಿನಗೂಲಿಗಳಿಗಲ್ಲ. ಗ್ರಾಮೀಣ ಪ್ರದೇಶದಲ್ಲಿ ಕೃಷಿಗೆ ಸಂಬಂಧಿಸಿದ ದಿನಗೂಲಿಗಳಿಗೆ ಯಾವುದೇ ಬಗೆಯ ಕಾನೂನಿನ ರಕ್ಷಣೆ ಇಲ್ಲ. ಸಾಮಾಜಿಕ ಭದ್ರತೆ ಎಂಬುವುದಿಲ್ಲ. ದಣಿಗಳ/ಭೂಮಾಲಿಕರ ಕೃಪೆ ದೊರೆಯಬಹುದು ಆದರೆ ಇಂತಹ ಕೃಪೆಯು ದಿನಗೂಲಿಗಳಿಗೆ ಸಂಕೋಲೆಯಾಗಿರುತ್ತದೆ (ಸಂ. ಕೋಟಿಗಾನಹಳ್ಳಿ ರಾಮಯ್ಯ, ೨೦೦೫, ಪು.೧೭). ಆ ಸಂಕೋಲೆಗಳಿಂದ ಅವರು ಬಿಡಿಸಿಕೊಳ್ಳುವುದು ಅಷ್ಟು ಸುಲಭವಲ್ಲ.

ಅಲ್ಪಸಂಖ್ಯೆಯಲ್ಲಿರುವವರು ದೇಶದಲ್ಲಿ ಬಹುಸಂಖ್ಯೆಯಲ್ಲಿರುವವರ ಶ್ರಮವನ್ನೂ, ಬುದ್ಧಿಯನ್ನೂ, ಮೊಟಕುಗೊಳಿಸುವ ಹುನ್ನಾರವನ್ನು ಮಾಡುತ್ತಿದ್ದಾರೆ. ಇಂತಹ ಒತ್ತಡವನ್ನು ದಲಿತ ಮಹಿಳೆ ಅನುಭವಿಸಿದಷ್ಟು ದಲಿತ ಪುರುಷ ಅನುಭವಿಸಲಾರ. 'ದುಡಿಮೆಯ ಒತ್ತಡವು ಪರಿಶಿಷ್ಟ ಮಹಿಳೆಯರಿಗೆ ಅಧಿಕವಾಗಿದೆ. ಪರಿಶಿಷ್ಟರಿಗೆ ಸಂಬಂಧಿಸಿದಂತೆ ದುಡಿಮೆಯ ವ್ಯಾಪ್ತಿ ಸೀಮಿತವಾದುದು. ಅಲ್ಲಿ ವಿಕಲ್ಪಗಳು ತುಂಬಾ ಕಡಿಮೆ. ಪರಿಶಿಷ್ಟ ಮಹಿಳೆಯರ ದುಡಿಮೆ ಅವಕಾಶಗಳು ತುಂಬಾ ಸೀಮಿತವಾಗಿವೆ. ಲಿಂಗಶಾಹಿ ವಿಚಾರ ಪ್ರನಾಳಿಕೆಯಿಂದಾಗಿ ಕೌಟಂಬಿಕ ದುಡಿಮೆಯನ್ನು ಅವರು ನಿರ್ವಹಿಸಬೇಕಾಗಿದೆ. ಅಸ್ಪೃಶ್ಯತೆ ಮತ್ತು ಬಡತನದ ಕಾರಣವಾಗಿ ಅವರು ಮನೆಯ ಹೊರಗೆ ಕೂಲಿಯನ್ನು ಮಾಡಬೇಕಾಗಿದೆ. ವಲಸೆ ಹೋಗುವುದು ಪುರುಷರಿಗೆ ಸಮಸ್ಯೆಯಲ್ಲ ಆದರೆ ಕೌಟಂಬಿಕ ದುಡಿಮೆಯ ಜವಾಬ್ದಾರಿ ಹಾಗೂ ಮಕ್ಕಳ ಮತ್ತು ವೃದ್ಧರ ಪಾಲನೆಯ ಜವಾಬ್ದಾರಿಯು ಮಹಿಳೆಯರ ಮೇಲಿರುವುದರಿಂದ ಮಹಿಳಾ ದುಡಿಮೆಗಾರರು ವಲಸೆ ಹೋಗುವುದು ಸಾಧ್ಯವಾಗುವುದಿಲ್ಲ' (ಅದೇ ಪು. ೧೮).

ಹೀಗೆ ಅವಳ ದುಡಿಮೆಯ ಸ್ಥಿತಿ, ಜಾತಿ, ಬಡತನ ಅವಳನ್ನು ಅನಕ್ಷರತೆಯಲ್ಲಿಯೇ ಉಳಿಸಿದೆ. ಮೂಲ ಜನಗಣತಿ ೧೯೯೧ ಡಾಟ್ ಬೇಸ್ ಆನ್ ಶೆಡ್ಯೂಲ್ಡ್ ಕ್ಯಾಸ್ಟ್ ಲಿಟ್ರಸಿ ಇನ್ ಇಂಡಿಯಾವು ಪರಿಶಿಷ್ಟ ಜಾತಿಯ ಸಾಕ್ಷರತೆಯ ಶೇಕಡ ೩೦ ಕ್ಕಿಂತ ಕಡಿಮೆ ಇರುವ ರಾಜ್ಯ ಮತ್ತು ಜಿಲ್ಲೆಗಳನ್ನು ಗುರುತಿಸಿದೆ. ಅದು ಕರ್ನಾಟಕದ


ಬಳ್ಳಾರಿಯಲ್ಲಿ ಸಾಕ್ಷರತೆಯು ೨೯.೬೦ ರಷ್ಟು ಇದೆ ಎಂದು ಹೇಳಿದೆ. ಕರ್ನಾಟಕದಲ್ಲಿ ಅತ್ಯಂತ ಕಡಿಮೆ ಸಾಕ್ಷರತೆ ಇರುವ ಜಿಲ್ಲೆಗಳಲ್ಲಿ ಬಳ್ಳಾರಿಯು ೩ನೇ ಸ್ಥಾನದಲ್ಲಿದೆ (ಮೊದಲನೆ ಸ್ಥಾನ ರಾಯಚೂರು, ಶೇ. ೨೧.೨೪, ಗುಲ್ಬರ್ಗಾ ಶೇ. ೨೫.೨೨). ಇಲ್ಲಿ ಅನಕ್ಷರತೆಯಿಂದ ಕೂಡಿರುವವರು ಹೆಚ್ಚಾಗಿ ದಲಿತ ಮಹಿಳೆಯರೇ ಎಂಬುವುದನ್ನು ಅದು ಗುರುತಿಸಿದೆ.

ಬಳ್ಳಾರಿ ಜಿಲ್ಲೆಯ ಜನಸಂಖ್ಯೆ ಮತ್ತು ಸಾಕ್ಷರತೆ

ವಿವರಗಳು	ಒಟ್ಟು	ಮಹಿಳೆಯರು	ಪುರುಷರು
ಜಿಲ್ಲೆಯ ಒಟ್ಟು ಜನಸಂಖ್ಯೆ	೨೦೨೭೧೪೦	೯೯೭೪೨೬	೧೪೨೯೭೧೪
ಜಿಲ್ಲೆಯ ಒಟ್ಟು ಸಾಕ್ಷರತೆ	೫೭.೪%	೪೫.೩%	೬೯.೨%
ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ	೩೦೪೨೧೮	೧೮೫೬೮೨	೧೧೮೫೩೬
ಪರಿಶಿಷ್ಟ ಜಾತಿಯ ಒಟ್ಟು ಸಾಕ್ಷರತೆ	೭೨೪೩೧	೨೦೮೯೨	೫೧೫೩೯
ಪರಿಶಿಷ್ಟ ಪಂಗಡ ಒಟ್ಟು ಜನಸಂಖ್ಯೆ	೩೬೪೬೩೮	೧೮೦೯೭೬	೧೮೩೬೬೨
ಪರಿಶಿಷ್ಟ ಪಂಗಡದ ಒಟ್ಟು ಸಾಕ್ಷರತೆ	೩೧೧೮೯	೦೮೭೪೦	೨೨೪೪೯

(ಮೂಲ: ೨೦೦೧ರ ಅಂಕಿಅಂಶಗಳು)

ಮೇಲಿನ ಅಂಕಿಅಂಶಗಳನ್ನು ಪರಿಶೀಲಿಸಿದಾಗ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಾಕ್ಷರತೆ ಅವರ ಜನಸಂಖ್ಯೆಗೆ ಹೋಲಿಸಿ ನೋಡಿದಾಗ ತುಂಬಾ ಕಡಿಮೆ ಇದೆ. ದಲಿತರಲ್ಲಿಯೇ ಲಿಂಗಸಂಬಂಧಿ ಆಯಾಮಗಳಲ್ಲಿ ಸಾಕ್ಷರತೆಯನ್ನು ನೋಡಿದರೆ ಜಾತಿಯ ಜೊತೆಗೆಯೇ ಇರುವ ಲಿಂಗದ ಕಾರಣವೂ ದಲಿತ ಮಹಿಳೆಯ ಪರಿಸ್ಥಿತಿಯನ್ನು ಅತ್ಯಂತ ಕನಿಷ್ಟವಾಗಿಸಿದೆ. ದಲಿತೇತರರಿಗೆ ಹೋಲಿಸಿದರೆ ದಲಿತ ಮಹಿಳೆಯ ಸಾಕ್ಷರತೆ ಕನಿಷ್ಟ ಪ್ರಮಾಣದಲ್ಲೂ ಇಲ್ಲ ಎಂಬುವುದು ತಿಳಿಯುತ್ತದೆ. ಇದು ದಲಿತ ಮಹಿಳೆಗೆ ಅಸ್ಪೃಶ್ಯ ಆಚರಣೆ ಕಂಟಕವಾಗಿ ಪರಿಣಮಿಸಿದೆ ಎಂಬುವುದನ್ನು ಸೂಚಿಸುತ್ತದೆ. ಅದನ್ನು ಹೀಗೆ ನೋಡಬಹುದು.



ದಲಿತ ಮಹಿಳೆಗೆ ಇರುವ ಅಸ್ಪೃಶ್ಯತೆಯೇ ಅವಳು ಮಾಡುವ ಪ್ರತಿಯೊಂದು ಚಟುವಟಿಕೆಗಳನ್ನು ನಿರ್ಧರಿಸುತ್ತಿರುತ್ತದೆ. ಅವಳು ಯಾವ ಹಾದಿಯನ್ನು ಆಯ್ಕೆ ಮಾಡಿಕೊಳ್ಳುವಾಗಲೂ ಅಸ್ಪೃಶ್ಯತೆಯು ಕಂಟಕ ಪ್ರಾಯವಾಗಿಯೇ ಬಂದು ನಿಲ್ಲುತ್ತದೆ. ಅವಳ ಜೀವನ ವಿಧಾನವನ್ನೇ ಅಸ್ಪೃಶ್ಯತೆ ನಿರ್ಧರಿಸುತ್ತದೆ. ಈಗ.

ತುಂಬಾ ಬದಲಾಗಿದೆ ಹಾಗೆ ಹೀಗೆ ಏನೆಲ್ಲಾ ಮಾತನಾಡುತ್ತೇವೆ. ಜಾತಿ ಇನ್ನು ಗಟ್ಟಿಗೊಳ್ಳುತ್ತಿದೆಯೇ ಹೊರತು ಸಡಿಲವಾದಂತೆ ಕಾಣುತ್ತಿಲ್ಲ. ಇನ್ನು ಮುಂದೆ ಜಾತಿ ಇನ್ನೂ ಗಟ್ಟಿಗೊಳ್ಳುತ್ತದೆ. ಅಂಬೇಡ್ಕರವರು ಅಂತರ್‌ಜಾತಿಯಿಂದ ಜಾತಿಯನ್ನು ನಾಶ ಮಾಡುವ ಕನಸು ಕಂಡರು. ಆದರೆ ಅದು ಏನಾಯ್ತು? ಅವರದ್ದೂ ಕೂಡ ಒಂದು ಜಾತಿಯಾಗಿ ಬೆಳೆಯತೊಡಗಿತು. ಇನ್ನು ಮುಂದೆಯೂ ಸಹ ಜಾತಿಗಳ ಸಂಖ್ಯೆ ಹೆಚ್ಚಾಗುತ್ತದೆಯೇ ಹೊರತು ಕಡಿಮೆಯಾಗುವುದಿಲ್ಲ. ಬೇರೆ ಜಾತಿಗಳಿಗೆ ಹೇಗೋ ಏನೋ ದಲಿತರಿಗೆ ಮಾತ್ರ ಜಾತಿ ಎನ್ನುವುದು ಬೆನ್ನು ಹತ್ತಿದ ಬೇತಾಳದಂತೆ ಹಿಂಬಾಲಿಸುತ್ತಲೇ ಇರುತ್ತದೆ. ಈಗ ಜಾತಿ ಇಲ್ಲದ ಮನುಷ್ಯನ ಅಸ್ತಿತ್ವವೇ ಇಲ್ಲ ಎಂಬಂತಾಗಿದೆ. ದಲಿತ ಮಹಿಳೆಯ ಲೈಂಗಿಕತೆಯನ್ನು ಜಾತಿಯೇ ನಿರ್ಧರಿಸುತ್ತದೆ. ಇದು ಉಳಿದ ವಿಷಯಗಳಿಗಿಂತಲೂ ಅವಳನ್ನು ಹೆಚ್ಚು ಶೋಷಣೆಗೆ ನೂಕಿದೆ.

೪.೩ ಲೈಂಗಿಕ ದೌರ್ಜನ್ಯ ಮತ್ತು ದಲಿತ ಮಹಿಳೆ

ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಸಂರಚನೆಗಳಲ್ಲಿ ತಳಸ್ತರದಲ್ಲಿರುವ ಸಮುದಾಯಗಳು ಸದಾ ಶೋಷಣೆ-ದೌರ್ಜನ್ಯಗಳಿಗೆ ಒಳಗಾಗುತ್ತಲೇ ಬಂದಿವೆ. ದಲಿತ ಮಹಿಳೆಯಂತೂ ಶತಮಾನಗಳುರುಳಿದರೂ ಅದೇ ಹಿಂಸಾತ್ಮಕ ವಾತಾವರಣದಲ್ಲಿ ಬಳಲುತ್ತಿದ್ದಾರೆ, ಬದುಕುತ್ತಿದ್ದಾರೆ.


ಬಡವರ ಮೇಲೆ ಬಲ್ಲಿದವರ, ಇಲ್ಲದವರ ಮೇಲೆ ಉಳ್ಳವರ, ದುರ್ಬಲರ ಮೇಲೆ ಸಬಲರ ದೌರ್ಜನ್ಯ ದಬ್ಬಾಳಿಕೆಗಳು ನಿರಂತರವಾಗಿ ನಡೆದುಕೊಂಡು ಬರುತ್ತಲೇ ಇದೆ. ಇತ್ತೀಚಿನ ದಿನಗಳಲ್ಲಿ ಇಂಥ ಸಂಗತಿಗಳು ಲೆಕ್ಕವಿಲ್ಲದಷ್ಟು ಇವೆ. ಇವರಾರೂ ಚರಿತ್ರೆಯಲ್ಲಿ ಸಹಜೀಯ ಭಾಗವಾಗಲಿಲ್ಲ. ವಿಷಾಧದ ಸಂಗತಿ ಎಂದರೆ ಅದು ಮುಗಿದು ಹೋದ ಅಧ್ಯಾಯವಾಗದೆ, ಇವತ್ತಿಗೂ ಮರುಕಳಿಸುತ್ತಿರುವುದು ಚರಿತ್ರೆ ಮತ್ತು ವರ್ತಮಾನದ ಪುಟಗಳಿಂದ ಇಂಥಹ ಕೆಲವು ಸಿಹಿ ಸಂಗತಿಗಳು ಉಳಿಯುವಂತಾಗಿವೆ.

ಲೈಂಗಿಕ ಕಿರುಕುಳ ಎಂಬುವುದು ೨೧ನೇ ಶತಮಾನದಲ್ಲಿ ಹುಟ್ಟಿಕೊಂಡ ಶಬ್ದವಾಗಿದೆ ಎಂದು ಕೆಲವರು ಹೇಳುತ್ತಾರೆ. ಪದದ ಬಳಕೆ ೨೧ನೇ ಶತಮಾನವಾಗಿರಬಹುದು. ಆದರೆ 'ಲೈಂಗಿಕ ಕಿರುಕುಳ' ಪ್ರಕ್ರಿಯೆ ೨೧ನೇ ಶತಮಾನದ್ದಲ್ಲ. ಇತಿಹಾಸದ ಉದ್ದಕ್ಕೂ ಮಹಿಳೆಯರು, ಪುರುಷರ ಅದರಲ್ಲೂ ಅಧಿಕಾರದಲ್ಲಿರುವ ಪುರುಷರ ಕೈಯಲ್ಲಿ ಅಸಂಬದ್ಧವಾದ ಅನಾಗರೀಕವಾದ ಬೇಜವಾಬ್ದಾರಿಯುತ ಲೈಂಗಿಕ ಕಿರುಕುಳಕ್ಕೆ ಒಳಗಾಗಿರುವುದನ್ನು ನಾವು ಈಗಾಗಲೇ ಚರ್ಚೆಗೆ ಒಳಪಡಿಸಿ ವಿಶ್ಲೇಷಿಸಲಾಗಿದೆ. ಸಮಾಜವು ಇದನ್ನು ಸ್ವಾಭಾವಿಕ ಕ್ರಿಯೆ ಎಂದೂ, ಪುರುಷರಿಗೆ ದಕ್ಕಬೇಕಾದ ಅನಿವಾರ್ಯ ಕ್ರಮವೆಂದು ಭಾವಿಸಲಾಗಿದೆ. ಮಹಿಳೆಯು ಇದನ್ನು ಅನುಭವಿಸಿಕೊಂಡು ಹೋಗುವುದು ಮಹಿಳೆಯರ ಧರ್ಮ ಎಂದು ಮಹಿಳೆಯನ್ನು ನಂಬಿಸಲಾಗಿದೆ. ಪುರುಷರಿಂದಾಗುವ ಅಲ್ಪ ಸ್ವಲ್ಪ ತೊಡಕುಗಳಿಗೆ ತಲೆಕೆಡಿಸಿಕೊಳ್ಳಬಾರದು, ಸುಮ್ಮನಿದ್ದು ಬಿಡಬೇಕು. ಎಂದು ಅವರನ್ನು ಇನ್ನಷ್ಟು ಕುಗ್ಗಿಸುವ ಕೆಲಸಗಳು, ಸುತ್ತಮುತ್ತಲಿನವರ ಸಲಹೆಗಳು ನಡೆಯುತ್ತಲೇ ಇರುತ್ತವೆ. ಆದುದರಿಂದಾಗಿ ಕೆಟ್ಟ ಪರಿಸರದಲ್ಲಿ ಕೆಲಸದಲ್ಲಿ ತಾರತಮ್ಯ ಸಹಿಸುವುದರ ಜೊತೆಗೆ ಲೈಂಗಿಕ ಕಿರುಕುಳ ಹಾಗೂ ದೌರ್ಜನ್ಯವನ್ನು ಅವರು ಅನುಭವಿಸಿಕೊಂಡು ಹೋಗಬೇಕಾಗಿದೆ.

'ಸರ್ಕಾರದ ಇತ್ತೀಚಿನ ಸಮೀಕ್ಷೆಯೊಂದರ ಪ್ರಕಾರ ೪೦೭ ಮಿಲಿಯನ್ ಭಾರತೀಯರು ಬಡತನ ರೇಖೆಗಿಂತ ಕೆಳಗಿನ ಜೀವನ ನಡೆಸುತ್ತಿದ್ದಾರೆ. ಆದರೆ ಅಂಕಿಅಂಶಗಳು ಪೂರ್ಣ ಸ್ಥಿತಿಯನ್ನು ಬಿಚ್ಚಿಡುವುದಿಲ್ಲ (ಜಾಗೃತಿ

ಡಿಸೆಂಬರ್ ೨೦೦೨). ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿರುವವರಲ್ಲಿ ಅತಿ ಹೆಚ್ಚು ಜನ ದಲಿತರು (ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ) ಈ ಕುಟುಂಬಗಳಲ್ಲಿ ಒಳ ಮತ್ತು ಹೊರಗೆ ಸಂಬಂಧಿಸಿದ ಇಡೀ ಕೆಲಸವನ್ನು ನಿಭಾಯಿಸುವವಳು ದಲಿತ ಮಹಿಳೆಯೇ ಹಾಗೆಯೇ ತನ್ನ ಗಂಡಂದಿರು ಸೋಮಾರಿಗಳಾಗಿರುವುದರಿಂದ ಅಥವಾ ಬೇರೆಡೆ ಹೋಗಿರುವುದು ಅಥವಾ ಕುಡಿತ ಹೆಚ್ಚಾಗಿರುವುದಕ್ಕೆ ಕಾರಣ ಮಳೆ ಇಲ್ಲದಿರುವುದು, ಕುಡಿಯಲು ಕೂಲಿ ಸಿಗದೇ ಇರುವುದು, ಹೊಟ್ಟೆ ಪಾಡಿನ ಪ್ರಶ್ನೆ ಕಾರಣ. ಇಲ್ಲಿ ಹೆಣ್ಣು ಮಕ್ಕಳೇ ಮನೆಯ ಯಜಮಾನತಿಯರು. ದಲಿತ ಮಹಿಳೆಯರೇ ಇದ್ದಾರೆ. ಬಹುಸಂಖ್ಯೆಯ ಕೆಲಸಗಾರರ ಮೇಲೆ ಅಲ್ಪಸಂಖ್ಯೆಯ ಕೆಲಸಗಾರರ ದಬ್ಬಾಳಿಕೆಯು ಅವರನ್ನು ದೌರ್ಜನ್ಯಕ್ಕೀಡಾಗುವಂತೆ ಮಾಡಿದೆ.


ಜಾತಿಯ ಘರ್ಷಣೆಗಳಿಗೆ ಸಂಬಂಧಿಸಿದಂತೆ ಅತ್ಯಂತ ಹೆಚ್ಚು ಶೋಷಣೆಗೆ ಒಳಗಾಗುವರೆಂದರೆ ದಲಿತ ಮಹಿಳೆಯರೇ. ಮೇಲ್ಜಾತಿ ಗಂಡಸರಿಂದಲೇ ಹೆಚ್ಚು ಶೋಷಣೆಗೆ ಒಳಗಾಗುತ್ತಿರುತ್ತಾರೆ. ಜಾತಿಯನ್ನು ಅತ್ಯಂತ ಭದ್ರ ರೀತಿಯಲ್ಲಿ ಬಲಪಡಿಸಿಕೊಂಡಿರುವ ಈ ಸಮಾಜದಲ್ಲಿ ದಲಿತ ಮಹಿಳೆ ಲಿಂಗ, ವರ್ಗ, ಜಾತಿಗಳಿಂದ ಶೋಷಣೆಗೆ ಒಳಗಾಗುತ್ತಲೇ ಇರುತ್ತಾಳೆ.



ಮೇಲಿನ ಚಿತ್ರದಂತೆ ವರ್ಗ, ಲಿಂಗ, ವರ್ಣ, ಜಾತಿಗಳು ಸುಳಿಗಳ ರೀತಿಯಲ್ಲಿ ಅವಳ ಸುತ್ತ ತಿರುಗುತ್ತಲೇ ಇರುತ್ತವೆ. ಅವಳು ಆ ಸುಳಿಗಳಿಂದ ಎಂದೆಂದಿಗೂ ಹೊರಬರಲು ಸಾಧ್ಯವೇ ಇಲ್ಲ ಎಂಬಂತೆ. ಲಿಂಗವನ್ನು ಮೆಟ್ಟಿನಿಂತರೂ, ಜಾತಿ ಬಿಡುವುದಿಲ್ಲ, ಜಾತಿಯನ್ನು ಮಟ್ಟಿ ನಿಂತರೆ ಲಿಂಗ ಬಿಡುವುದಿಲ್ಲ. ಹೀಗೆ ಅವಳಿಗೆ ಒಂದರ ನಂತರ ಇನ್ನೊಂದು ಸುಳಿಗೆ ಸಿಕ್ಕು ಹಾಕಿಸುತ್ತಲೇ ಇರುತ್ತವೆ. ಕನಿಷ್ಠ ಪ್ರಮಾಣದಲ್ಲಿಯೂ ಸಹ ದಲಿತ ಮಹಿಳೆಯರು ಈ ಮೂರು ನೆಲೆಗಳನ್ನು ಮೆಟ್ಟಿ ನಿಲ್ಲಲು ಸಾಧ್ಯವಾಗಿಲ್ಲ. ಹಾಗೆಯೇ ಇವು ಒಂದನ್ನು ಬಿಟ್ಟು ಇನ್ನೊಂದು ಇರದು ಎಂಬಂತೆ ಏಕಕಾಲಕ್ಕೆ ಲಿಂಗ, ವರ್ಗ, ಜಾತಿಗಳು ಅವಳನ್ನು ಸುತ್ತುವರಿದೇ ಇರುತ್ತವೆ. ಇವಳ ದೌರ್ಜನ್ಯಕ್ಕೆ ಇತರ ಕಾರಣಗಳಿದ್ದರೂ ಅವು ಇವುಗಳ ನಂತರ ಇರುತ್ತವೆ ಎಂಬುವುದನ್ನು ಮುಖ್ಯವಾಗಿ ಗಮನಿಸಬೇಕಾಗುತ್ತದೆ.

ಸಾಮಾಜಿಕ ಮತ್ತು ಆರ್ಥಿಕ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಳಗಿರಿಸಲ್ಪಟ್ಟವರು ದಲಿತರು. ಸಾವಿರಾರು ವರ್ಷಗಳಿಂದ ಹಿಡಿದು ಇಂದಿನ ವರ್ತಮಾನದಲ್ಲೂ ಅದು ಇತಿಹಾಸದ ಪ್ರತಿಬಿಂಬವಾಗಿ ಇದೆಯೇ ಹೊರತು ಬದಲಾಗಿಲ್ಲ. ಇದು ದಲಿತ ಮಹಿಳೆಯರ ಮೇಲಿನ ಹೋರಾಟದ ಹೊರೆಯಾಗಿದೆ. ಯಾಕೆಂದರೆ ಅವರು ತಮ್ಮ ಸಮುದಾಯದಲ್ಲಿ ಗಂಡನಿಂದ ದೌರ್ಜನ್ಯಕ್ಕೆ ಒಳಗಾಗಿ ದುರ್ಬಲಳಾಗಿರುತ್ತಾಳೆ.

ದಲಿತ ಮಹಿಳೆಯರ ಮೇಲೆ ನಡೆಯುವ ಶೋಷಣೆಯ ಪಥವನ್ನು ಈ ರೀತಿಯಾಗಿ ಗುರುತಿಸಬಹುದು;



ಕೃಷಿಕಾರ್ಮಿಕ ದಲಿತ ಹೆಣ್ಣು ಮಕ್ಕಳ ಪಾಲಿಗೆ ಭೂ ಮಾಲೀಕರು, ಅವರ ಏಜೆಂಟರು ಲೈಂಗಿಕ ಕಿರುಕುಳ, ಎಸಗುವ ದೈಹಿಕ ಹಲ್ಲೆಗಳು ವೃತ್ತಿದೌರ್ಜನ್ಯಗಳೇ ಆಗಿವೆ. ಹೀಗೆ ದೌರ್ಜನ್ಯಗಳಿಗೆ ಒಳಗಾದ ಮಹಿಳೆಯರಿಗೆ ಕಾನೂನು ಕಟ್ಟಳೆಗಳಾವುವು ಸಹಾಯವಾಗಿಲ್ಲ. ಹೆಚ್ಚಿನ ಸಂಖ್ಯೆಯಲ್ಲಿ ಕೂಲಿಕಾರರಾಗಿ ಗಣಿಗಳಲ್ಲಿ, ರಸ್ತೆ ಕೆಲಸ, ರೈಲ್ವೆ ಕೆಲಸಗಳಲ್ಲಿ ಜಾಡಮಾಲಿಗಳಾಗಿ ಕೂಡ ದುಡಿಯುವ ಮಹಿಳೆಯರ ಲೈಂಗಿಕ ಶೋಷಣೆ ನಿರಂತರವಾಗಿ ನಡೆಯುತ್ತಿದೆ.

ಸ್ವಾತಂತ್ರ್ಯದ ಐದು ದಶಕಗಳ ನಂತರ ಎಂಥ ಭಾರತ ನಿರ್ಮಾಣವಾಗಿದೆ ಎಂದು ಹೊರಳಿ ನಿಂತು ಯೋಚಿಸಿದರೆ ನಿರಾಸೆಯ ನಿಟ್ಟುಸಿರು ಹೊರಬರುತ್ತದೆ. ಹೆಚ್ಚಿನ ಶ್ರಮದಲ್ಲಿ, ಕೀಳು ವೃತ್ತಿಗಳಲ್ಲಿ ತೊಡಗಿರುವ ದಲಿತ ಮಹಿಳೆಯರ ಸ್ಥಿತಿ ಏನಾಗಿದೆ? ಎಂಬುವುದು ಮುಖ್ಯ. ಔದ್ಯಮೀಕರಣವಾದಂತೆ ಹೆಚ್ಚು ಹೆಚ್ಚು ಮಹಿಳೆಯರು ಕಾರ್ಖಾನೆಗಳಲ್ಲಿ, ಪ್ಲಾಂಟೇಷನ್‌ಗಳಲ್ಲಿ ಸಾಮಾಗ್ರಿ ಉತ್ಪಾದನಾ ಘಟಕಗಳಲ್ಲಿ ಸಾರ್ವಜನಿಕ ಸೇವಾ ವಿಭಾಗಗಳಾದ ಹೋಟೆಲ್, ಅಂಗಡಿ, ಇನ್ನಿತರ ಕಡೆಗಳಲ್ಲಿ ಕೆಲಸ ಮಾಡುತ್ತಿದ್ದು ಎಲ್ಲಾ ಕಡೆಗಳಲ್ಲೂ ಕೆಲಸದ ಪರಿಸ್ಥಿತಿಯಿಂದ ಮತ್ತು ಪರಿಸರದಿಂದ ಲೈಂಗಿಕ ಶೋಷಣೆ, ಕಿರುಕುಳ, ದಲಿತ ಮಹಿಳೆಯರು ತಪ್ಪದೇ ಅನುಭವಿಸಲೇಬೇಕಾದ ಒಂದು ವಾತಾವರಣ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಇದಕ್ಕೆ ಪ್ರತ್ಯಕ್ಷವಾದ ಕಾರಣಗಳನ್ನು ನೋಡುವುದಾದರೆ;

ಪ್ರತಿ ಎರಡು ಗಂಟೆಗೊಬ್ಬ ದಲಿತ ಮಹಿಳೆ ಕಿರುಕುಳಕ್ಕೊಳಗಾಗುತ್ತಾಳೆ. ಪ್ರತಿ ದಿನ ಎರಡು ದಲಿತರ ಮನೆಗಳು ಬೆಂಕಿಗೆ ಆಹುತಿಯಾಗುತ್ತಿವೆ. ಪ್ರತಿ ದಿನ ಮೂರು ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾಗುತ್ತಾರೆ (ಡಾ.ಎಸ್.ಎಂ. ಮಂಗಳ, ೨೦೦೩, ಜಾಗೃತಿ). ಮತ್ತೊಂದು ವರದಿಯ ೧೯೯೧ರ ಅಂಕಿ-ಅಂಶಗಳ ಪ್ರಕಾರ ೨೧೩೬೨ ದೌರ್ಜನ್ಯಗಳು ದಲಿತರ ಮೇಲೆ ನಡೆದಂತಹುಗಳಾಗಿವೆ. ೧೦೬೭ ದಲಿತ ಮಹಿಳೆಯರು ಅತ್ಯಾಚಾರಕ್ಕೊಳಗಾದವರು. ೭೩೧ ದಲಿತರ ಕೊಲೆಯಾಗಿದೆ. ೬೪೫ ಘಟನೆಗಳಲ್ಲಿ ದಲಿತರ ಮನೆ ಹಾಗೂ ಆಸ್ತಿ ಪಾಸ್ತಿಗಳಿಗೆ ಬೆಂಕಿ ಇಡಲಾಗಿದೆ (Dalit women, leela kumar B.M. 1995). ಕರ್ನಾಟಕದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಮೇಲೆ ಜಾತಿಯ ಕಾರಣಕ್ಕಾಗಿ ಆಗಿರುವ ಅಪರಾಧಗಳನ್ನು ಹೀಗೆ ನೋಡಬಹುದು.

ಕರ್ನಾಟಕದ ಪರಿಶಿಷ್ಟ ಜಾತಿಯವರ ಮೇಲೆ ಜಾತಿ ಕಾರಣಕ್ಕಾಗಿ ಆಗಿರುವ ಅಪರಾಧಗಳು

ವರ್ಷ	ಕೊಲೆಗಳು	ನೋಯಿಸುವುದು		ಅತ್ಯಾಚಾರ	ಅಪಹರಣ	ದರೋಡೆ	ದೋಚುವುದು	ಆಸ್ತಿನಾಶ	ನಾಗರಿಕ ಹಕ್ಕುಗಳಡಿ ದಾಖಲಾದ ಅಪರಾದ	ದೌರ್ಜನ್ಯ ಕಾಯಿದೆ ಅಡಿ ದಾಖಲಾದ ಅಪರಾಧಗಳು	ಇತರೆ ಅಪರಾಧಗಳು	ಒಟ್ಟು ಅಪರಾಧಗಳು
		ಘೋರವಾಗಿ	ಅಲ್ಪವಾಗಿ									
೧೯೯೮	೧೧	೦೫	೨೬	೧೦	೦೧	೦೧	೦೦	೦೪	೧೭೨	೯೯೭	೪೫	೧೨೭೨
೧೯೯೯	೧೧	೦೦	೨೭	೦೫	೦೦	೦೦	೦೦	೦೮	೮೫	೧೧೫೦	೧೦	೧೨೯೬
೨೦೦೦	೧೧	೦೩	೧೦	೧೬	೦೨	೦೦	೦೦	೦೧	೧೦೦	೧೧೭೬	೧೦	೧೩೨೯
೨೦೦೧	೧೪	೦೫	೨೯	೧೧	೦೧	೦೦	೦೦	೦೪	೧೦೪	೧೧೨೯	೦೮	೧೩೦೫
೨೦೦೨	೦೫	೦೧	೦೨	೦೫	೦೦	೦೦	೦೦	೦೦	೨೧	೧೮೬	೦೧	೨೨೧
ಒಟ್ಟು	೫೨	೧೪	೯೪	೪೭	೦೪	೦೧	೦೦	೧೭	೪೮೨	೪೬೩೮	೭೪	೫೪೨೩
ಪರಿಶಿಷ್ಟ ಪಂಗಡ												
೧೯೯೮	೧೪	೦೦	೦೯	೦೧	೦೦	೦೦	೦೦	೦೦	೦೦	೫೨	೦೯	೭೫
೧೯೯೯	೦೩	೦೦	೦೦	೦೧	೦೦	೦೦	೦೦	೦೦	೦೦	೫೩	೦೩	೬೦
೨೦೦೦	೦೬	೦೦	೦೩	೦೨	೦೦	೦೦	೦೦	೦೦	೦೦	೫೦	೦೩	೬೪
೨೦೦೧	೦೦	೦೦	೦೦	೦೩	೦೦	೦೦	೦೦	೦೦	೦೩	೫೮	೦೨	೬೬
೨೦೦೨	೦೦	೦೦	೦೩	೦೦	೦೦	೦೦	೦೦	೦೦	೦೦	೧೪	೦೦	೧೭
ಒಟ್ಟು	೧೩	೦೦	೧೫	೦೭	೦೦	೦೦	೦೦	೦೦	೦೩	೨೨೭	೧೭	೨೮೨


ಮೂಲ: (Crime in India National Aime Records Bureau Ministry of Home Affairs)

ಮೇಲಿನ ಅಂಕಿ-ಅಂಶಗಳಲ್ಲಿ ದಲಿತರ ಮೇಲೆ ನಡೆದಿರುವ ದೌರ್ಜನ್ಯಗಳನ್ನು ಗಮನಿಸಿದರೆ ಪರಿಶಿಷ್ಟ ಜಾತಿಯ ದಲಿತ ಮಹಿಳೆಯರ ಮೇಲೆ ನಡೆದಿರುವ ಅತ್ಯಾಚಾರ ಅಪಹರಣಗಳು ಭೀಕರವಾಗಿವೆ. ದಲಿತ ಪುರುಷನಿಗಿಂತಲೂ ದಲಿತ ಮಹಿಳೆ ಹೆಚ್ಚು ಆಘಾತಕ್ಕೆ ಒಳಗಾಗುತ್ತಾಳೆ ಎಂಬುವುದಕ್ಕೆ ಈ ಅಂಕಿ-ಅಂಶಗಳು ಸಾಕ್ಷಿಯಾಗಿವೆ.

೧೯೯೪ ಏಪ್ರಿಲ್ ೨೨ ರಂದು ನಡೆದ ರಾಜ್ಯಸಭೆಯ ಪ್ರಶ್ನೋತ್ತರ ಸಂದರ್ಭದಲ್ಲಿ ಹೊರ ಬಂದ ಅಂಕಿ-ಅಂಶಗಳ ಪ್ರಕಾರ ೬೨,೦೦೦ ದೌರ್ಜನ್ಯಗಳು ನಡೆದಿದ್ದು, ಅದರಲ್ಲಿ ೫೨,೦೦೦ ದೌರ್ಜನ್ಯಗಳು (ಜಾಗೃತಿ, ೨೦೦೩, ಡಾ. ಎನ್.ಎಂ. ಮಂಗಳ) ಪರಿಶಿಷ್ಟ ಜನಾಂಗದ ಮೇಲೂ ನಡೆದಂತಹ ಘಟನೆಗಳಾಗಿವೆ. ಈ ಮೇಲೆ ತಿಳಿಸಿದ ದೌರ್ಜನ್ಯಗಳಲ್ಲೂ ಹೆಚ್ಚಾಗಿ ದಲಿತ ಮಹಿಳೆಯರೇ ಬಲಿಪಶುಗಳಾಗುತ್ತಿರುವುದು ಇನ್ನೂ ಹೆಚ್ಚು ಶೋಚನೀಯವಾಗಿದೆ.

ದಲಿತ ಪುರುಷರನ್ನು ಕೊಲೆ ಮಾಡುವುದು, ಮನೆಗೆ ಬೆಂಕಿ ಹಚ್ಚುವುದು ಆಗಲೀ ಕುಟುಂಬದ ಮೇಲಾಗುವ ಯಾವುದೇ ರೀತಿಯ ಕಷ್ಟ-ನಷ್ಟಗಳು ಇವೆಲ್ಲವೂ ಹೆಚ್ಚಾಗಿ ಮಹಿಳೆಯರ ಸ್ಥಿತಿಗತಿಯ ಮೇಲೆ ಹಾಗೂ ಮಕ್ಕಳ ಮೇಲೆ ಹೆಚ್ಚು ಪರಿಣಾಮ ಬೀರುವಂತಹವು. ಆಗ ಅಂತಹ ಕುಟುಂಬದ ಬದುಕು ಬೀದಿಗಿಳಿಯುತ್ತದೆ. ಮಕ್ಕಳು ಬೀದಿ ಪಾಲಾಗುತ್ತಾರೆ. ಇಂತಹ ಸಂದರ್ಭದಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕವಾಗಿ ಹೇಗೆ ಇಡೀ ದಲಿತ ಸಮುದಾಯದ ಮೇಲೆ ದೌರ್ಜನ್ಯದ ಪರಿಣಾಮ ಕುಟುಂಬಗಳಲ್ಲಿ ದಲಿತ ಮಹಿಳೆಯರ ಬದುಕನ್ನು ಅಧೋಗತಿಗೆ ಇಳಿಸುತ್ತಿದೆ.

ದಲಿತ ಮಹಿಳೆ ಯಾಕೆ ದೌರ್ಜನ್ಯಕ್ಕೆ ಒಳಗಾಗುತ್ತಾಳೆ?



ದಲಿತ ಮಹಿಳೆಯರ ಮೇಲೆಯೇ ಏಕೆ ದೌರ್ಜನ್ಯಗಳು ನಡೆಯುತ್ತಿವೆ ಎಂಬುವುದನ್ನು ಮುಖ್ಯವಾಗಿ ಗಮನಿಸುವುದಾದರೆ, ಇಲ್ಲಿ ಜಾತಿಯೊಂದೇ ಮುಖ್ಯ ಪಾತ್ರ ವಹಿಸುತ್ತದೆ ಎಂಬುವುದನ್ನು ಗಮನಿಸಬೇಕಾಗುತ್ತದೆ. ಯಾಕೆಂದರೆ ದೇಶದಲ್ಲಿ ದಲಿತರು ಮಾತ್ರ ಬಡವರಿಲ್ಲ, ದಲಿತರು ಮಾತ್ರ ಅವಿದ್ಯಾವಂತರಲ್ಲ, ಇತರ ಜಾತಿಗಳಲ್ಲಿಯೂ, ವರ್ಗಗಳಲ್ಲಿಯೂ, ಬಡವರಿದ್ದಾರೆ, ಅವಿದ್ಯಾವಂತರಿದ್ದಾರೆ. ಆದರೆ ಇವರೆಲ್ಲರಿಗೂ ಹೋಲಿಸಿದರೆ ದಲಿತ ಮಹಿಳೆಯು ಜಾತಿ ಲಿಂಗದ ಕಾರಣಕ್ಕಾಗಿ ಹೆಚ್ಚಿನ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಇದರಲ್ಲಿ ಯಾವುದೇ ಕಲ್ಪನೆ ಇಲ್ಲ. ಕಟ್ಟುಕಥೆಯಲ್ಲ. ದೇಶದ ಯಾವುದೇ ಮೂಲೆಯಲ್ಲೂ ದಲಿತ ಮಹಿಳೆಯರಿಗೆ ಸಂಬಂಧಿಸಿದಂತೆ ಇದು ಸತ್ಯ. ಇವರು ಕೀಳು ಎಂಬ ಕಾರಣಕ್ಕಾಗಿ ಇವರನ್ನು ಪ್ರಾಣಿಗಳಂತೆ ನಡೆಸಿಕೊಳ್ಳಲಾಗುತ್ತದೆ.

ಇಂತಹ ವಿಷಯಗಳಿಗೆ ಸಂಬಂಧಿಸಿದಂತೆ ದಿನ ಪತ್ರಿಕೆ, ವಾರ ಪತ್ರಿಕೆ, ರೇಡಿಯೋ, ಟೆಲಿವಿಷನ್‌ಗಳಲ್ಲಿ ದಿನವೂ ವಾರ್ತೆಗಳು ಬಿತ್ತರವಾಗುತ್ತಿರುತ್ತವೆ. ಯಾರಿಗೂ ಸ್ಪಷ್ಟತೆ ಇರದ ಹಾಗೆ ಪತ್ರಿಕೆಗಳಲ್ಲಿ ಇಂತಹ ಘಟನೆಗಳನ್ನು ಮಧ್ಯವೋ ಕೊನೆಯ ಪುಟದಲ್ಲೋ ಪ್ರಕಟಿಸಿದರೆ ಟಿ.ವಿ, ರೇಡಿಯೋದಲ್ಲಿ ಕೆಲವೇ ಸೆಕೆಂಡುಗಳು ಮಾತ್ರ ಇಂತಹ ಘಟನೆಗಳಿಗೆ ಸಂಬಂಧಿಸಿದಂತೆ ಮಾತನಾಡಲಾಗುತ್ತದೆ. ಇವುಗಳಲ್ಲಿ ಕೊನೆಯ ಘಟನೆಗಳು ಮುಖ್ಯವಾಹಿನಿಯ ಘಟನೆಗಳನ್ನು ಯಾವಾಗಲೂ ಅಣುಚುತ್ತಲೇ ಇರುತ್ತವೆ. ಆದರೆ ಇದರ ಯಾವ ಅರಿವು ಅಂತಹ ಕಾರ್ಯಕ್ರಮಗಳನ್ನು ನಿರೂಪಿಸುವವರಲ್ಲಿ, ಜೋಡಿಸಿರುವವರಲ್ಲಿ, ಸಂಗ್ರಹಿಸಿರುವವರಲ್ಲಿ ಇರುವುದಿಲ್ಲ. ಇದು ಈಗ ಇರುವ ಮಾಧ್ಯಮಗಳ ಜೊತೆಗಿರುವ ದುರಂತ. ಆದರೆ ಐಶ್ವರ್ಯ ರೈ ಯಾವುದೋ ಹೊಸ ಸೀರೆ ಕೊಂಡಾಗ ಅದರ ದುಬಾರಿ ಬೆಲೆಯನ್ನು ಅಚ್ಚರಿಯಂತೆ ಮುಖಪುಟದಲ್ಲಿ, ಮುಖ್ಯ ವಾರ್ತೆಗಳಲ್ಲಿ ಪ್ರಕಟಿಸಲಾಗುತ್ತದೆ. ಬಡವರ ಬೆವರು, ಹಸಿವುಗಳನ್ನೇ ಬಂಡವಾಳವಾಗಿಸಿಕೊಂಡ ಬಂಡವಾಳಶಾಹಿ ಪುರುಷೋತ್ತಮರಿಗೆ ಹೇಗೆ ತಾನೇ ಅರ್ಥವಾಗಬೇಕು?

ಇಂದಿಗೂ ಸಾಮಾಜಿಕ ಬಹಿಷ್ಕಾರಗಳು, ಹತ್ತು ಹಲವು ಕಾರಣಗಳಿಂದ ದಲಿತರನ್ನು ಶೋಷಿಸುತ್ತಿವೆ. ಸಣ್ಣ ಪುಟ್ಟ ತಪ್ಪುಗಳಿಗೂ ಅಮಾನುಷವಾಗಿ ಥಳಿಸುವುದರಿಂದ ಹಿಡಿದು ಕೊಲೆ ಮಾಡುವವರೆಗೆ ಹಿಂಸೆಗಳು ನಡೆಯುವ ಸಾಕಷ್ಟು ಪ್ರಕರಣಗಳನ್ನು ಉದಾಹರಿಸಬಹುದಾಗಿದೆ. ಲೈಂಗಿಕ ಕಿರುಕುಳದಲ್ಲಿ ಭೂಮಿಯಿಲ್ಲದ ದಲಿತ ಮಹಿಳೆಯರೇ ಸಾಮಾಜಿಕ ಏಣಿ-ಶ್ರೇಣಿಯಲ್ಲಿ ಭೂ ಮಾಲಿಕ ಬಂಡವಾಳಶಾಹಿಗಳ ಕಾಮ ಲಾಲಸೆಗೆ ಬಲಿಯಾದವರು. ದಲಿತರು ಸಂಘಟಿತರಾಗಿ ಮಾಲಿಕರನ್ನು ಹೆಚ್ಚಿನ ಕೂಲಿ ಕೇಳಿದ್ದಕ್ಕೆ, ಕೆಲಸ ಮಾಡುವ ಉತ್ತಮ ವಾತಾವರಣಕ್ಕೆ ಒತ್ತಾಯಿಸಿದರೆ, ಮಾಲೀಕರು ಮುಖ್ಯ ಕಾರ್ಯಕರನ್ನು ಲೈಂಗಿಕವಾಗಿ ಹಿಂಸಿಸುತ್ತಾರೆ. ದೌರ್ಜನ್ಯಗಳು ದಲಿತ ಮಹಿಳೆಯರ ಮೇಲೆಯೇ ಪ್ರತಿನಿತ್ಯ ನಡೆಯುವ ವಿಚಾರಗಳಾಗಿವೆ. ಅತ್ಯಾಚಾರ, ಹಿಂಸೆ, ದೌರ್ಜನ್ಯಗಳು, ಅಪಹರಣ ಮುಂತಾದುವುಗಳಿಂದ ದಲಿತ ಮಹಿಳೆಯರನ್ನು ಸಾಮಾಜಿಕವಾಗಿ ಇನ್ನೂ ಕೆಳಮಟ್ಟಕ್ಕೆ ತುಳಿಯುತ್ತಾ ಅವರ ಮೇಲಿನ ದೌರ್ಜನ್ಯಗಳು ಹೆಚ್ಚು ಹೆಚ್ಚು ಸಂಭವಿಸುತ್ತಿವೆ. ದಲಿತ ಮಹಿಳೆಯರ ದುರಂತ ಕಥೆಗಳು ಒಂದಲ್ಲ ಎರಡಲ್ಲ, ಸಾವಿರಾರು. ಗುರುತಿಸಲ್ಪಡುವಂತಹವು ಸಾವಿರಾದರೆ ಗುರುತಿಸದೇ ಇರುವ, ಬೆಳಕಿಗೆ ಬರದೇ ಇರುವ ಘಟನೆಗಳು ಲಕ್ಷಾನುಲಕ್ಷವೆಂದೇ ಹೇಳಬೇಕಾಗುತ್ತದೆ.

ದೌರ್ಜನ್ಯಗಳು ಅನೇಕ ವಿಷಯಗಳಿಗೆ ಸಂಬಂಧಿಸಿದಂತೆ ನಡೆಯುತ್ತಿರುತ್ತವೆ. ಅವುಗಳೆಂದರೆ: ೧. ಭೂಮಿ, ೨. ಆಸ್ತಿ, ೩. ನೀರಿಗೆ ಸಂಬಂಧಿಸಿದ ಸಂಗತಿಗಳು, ೪ ವೇತನ ಪಾವತಿ, ೫. ಸಾಲ, ೬. ಜೀತ, ೭. ಒತ್ತಾಯ

ಕೂಲಿ ಪದ್ಧತಿ, ೮. ಮನುಷ್ಯನ ಘನತೆಗೆ ಸಂಬಂಧಪಟ್ಟ ವಿಚಾರ, ೯. ಹೀನಾಯ ಕೆಲಸಗಳನ್ನು ಮಾಡುವಂತೆ ಒತ್ತಾಯ ಹೇರುವುದು, ೧೦. ದಲಿತ ಮಹಿಳೆ ಮೇಲೆ ದಬ್ಬಾಳಿಕೆ ಹಿಂಸೆ ಮತ್ತು ಅತ್ಯಾಚಾರ, ೧೧. ಅಸ್ಪೃಶ್ಯತೆ-ಜಾತಿಯ ಕಾರಣಕ್ಕಾಗಿ ಇವುಗಳಿಗೆಲ್ಲಾ ಆರ್ಥಿಕ, ಸಾಮಾಜಿಕ, ರಾಜಕೀಯ, ಲೈಂಗಿಕ ಸಂಗತಿಗಳು ಹೆಣೆದುಕೊಂಡಿರುತ್ತವೆ. ಇವೆಲ್ಲವೂ ದಲಿತ ಪುರುಷರಿಗಿಂತ ದಲಿತ ಮಹಿಳೆಯರ ಮೇಲೆ ಹೆಚ್ಚು ದುಷ್ಪರಿಣಾಮವನ್ನು ಬೀರುತ್ತವೆ.

೧೨.೦೨.೨೦೦೦ ರಂದು ಕೋಲಾರದ ಕಂಬಾಲ ಪಲ್ಲಿಯಲ್ಲಿ ದಲಿತರ ಗುಡಿಸಲುಗಳಿಗೆ ಬೆಂಕಿ ಹಚ್ಚಿ ದಲಿತರನ್ನು ಸುಡುತ್ತಿದ್ದಾಗ ಬೆಂಕಿ ನಂದಿಸಲು ಬಂದ ಅಗ್ನಿ ಶಾಮಕ ದಳವನ್ನು ಊರೊಳಗೆ ಪ್ರವೇಶಿಸದಂತೆ ತಡೆದವರು ಊರಿನ ಮೇಲ್ಜಾತಿ ಮಹಿಳೆಯರು ಎಂದು ಓದಿದಾಗ ಕ್ಷಣಕಾಲ ಕಣ್ಣು ಮಬ್ಬಾಗುತ್ತದೆ (ಸಂವಾದ ಫೆಬ್ರವರಿ ೨೦೦೭). ಈ ಹಿನ್ನೆಲೆಯಿಂದಲೇ ಲಿಂಗ ಕಾರಣಕ್ಕೆ ಮಹಿಳೆಯರೆಲ್ಲರೂ ಒಂದೇ ಅಲ್ಲವೆಂಬುವುದನ್ನು ಗಮನಿಸಬೇಕು. ಕಂಬಾಲಪಲ್ಲಿಯ ದುರಂತಕ್ಕೆ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗಗಳ ದೌರ್ಜನ್ಯ ವಿರೋಧಿ ವಿಶೇಷ ನ್ಯಾಯಲಯ ನೀಡಿರುವ ತೀರ್ಪು ದಲಿತರನ್ನು ವ್ಯವಸ್ಥೆ ಹೇಗೆ ಕಾಣುತ್ತಿದೆ ಎಂಬುವುದಕ್ಕೆ ಒಂದು ಉದಾಹರಣೆಯಾಗಿದೆ. ಬಲಿಷ್ಠರಿಗೆ ಕಾನೂನನ್ನು ಹೇಗೆ ಬಳಸಿಕೊಳ್ಳಬೇಕು ಎಂದು ಹೇಳಲು ಜನ ಇದ್ದಾರೆ. ಆದರೆ ತುಳಿತಕ್ಕೊಳಪಟ್ಟವರಿಗೆ ಅವರ ನೋವಿಗೆ ಯಾರು ನಾಲಿಗೆಯಾಗಬಲ್ಲರು? ಕಣ್ಣು ಮುಂದೆ ಅನ್ಯಾಯ ನಡೆದರೂ ಬಾಯಿ ಮುಚ್ಚಿಕೊಂಡು ತೆಪ್ಪಗಿರಬೇಕು ತಪ್ಪಿದರೆ ತಲೆದಂಡ. ಕಂಬಾಲಪಲ್ಲಿ ಪ್ರಕರಣದಲ್ಲಿ ದುಷ್ಟ ಶಕ್ತಿಗಳ ಕಾಲಿಗೆ ಗೆಜ್ಜೆ ಕಟ್ಟಿದವರು ತೆರೆಮರೆಯಲ್ಲಿ ಕೇಕೆ ನಕ್ಕಿರಬೇಕು (ಸಂವಾದ ಅದೇ). ಇಂದಿಗೂ ಸಹ ಈ ಘಟನೆ ಕಂಬಾಲ ಪಲ್ಲಿಯ ದಲಿತರ ಎದೆಗೂಡುಗಳಲ್ಲಿ ಡವಡವಿಸುತ್ತಲೇ ಇದೆ ಎಂದಿಗೂ ನಿಲ್ಲದ ಹಾಗೆ.

ಇತ್ತೀಚೆಗೆ ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣ ತಾಲೂಕಿನ ಹಗರಿ ಹಳ್ಳಿಯ ಜೀತದಾಳುಗಳ ಕಾಲುಗಳಿಗೆ ಸರಪಳಿ ಹಾಕಿ ಅವರಿಂದ ದುಡಿಸಿಕೊಳ್ಳುತ್ತಿದ್ದ ಪ್ರಸಂಗವನ್ನು ಕೇಳುತ್ತಿದ್ದರೆ ಎಂಥವರಿಗೂ ಕರಳು ಮಿಡಿಯುತ್ತದೆ ಇದಕ್ಕೆ ಯಾರು ಸ್ಪಂದಿಸುತ್ತಾರೆ? ಇವರಿಗೆ ನ್ಯಾಯ ಸಿಗುವುದೇ... ಎಲ್ಲವೂ ಪ್ರಶ್ನಾರ್ಥಕವಾಗಿ ಉಳಿಯುವವವೇ ವಿನಃ ಉತ್ತರ ಸಿಗುವುದಿಲ್ಲ.

ಮಾರ್ಚ್ ೧೩. ೨೦೦೫ ರಂದು ಬಳ್ಳಾರಿ ಜಿಲ್ಲೆಯ ಬೈರಗಾಮನದಿನ್ನಿ ಗ್ರಾಮದಲ್ಲಿ ಕ್ಷುಲ್ಲಕ ಕಾರಣಕ್ಕಾಗಿ, ದಲಿತ ಮಹಿಳೆ ಗಂಗಮ್ಮರನ್ನು ವಿವಸ್ತ್ರಗೊಳಿಸಿ ಸವರ್ಣೀಯರು ದೌರ್ಜನ್ಯ ನಡೆಸಿದ್ದಾರೆ. ಜಗಳಕ್ಕೆ ನೆಪ ಗಂಗಮ್ಮ ತೀರಿಸಬೇಕಿದ್ದ ೪ ರೂ ಬಾಕಿಯಾದರೂ (ಜಾಗೃತಿ, ಏಪ್ರಿಲ್, ೨೦೦೫) ನಿಜವಾದ ಕಾರಣ ಬೇರೆಯೇ ಆಗಿತ್ತು. ಎಲ್ಲಾ ದಿನ ಪತ್ರಿಕೆಗಳು ಸಾಲ ತೀರಿಸಿಲ್ಲದ ಕಾರಣ ದೌರ್ಜನ್ಯಕ್ಕೆ ಒಳಗಾಗಿದ್ದಳೆಂದು ಬರೆದಿದ್ದವು. ಪಂಚಾಯಿತಿ ಚುನಾವಣೆಯಲ್ಲಿ ಮೇಲ್ಜಾತಿಯವರ ವಿರುದ್ಧ ದಲಿತರು ಸ್ಪರ್ಧೆಗಿಳಿದಿದ್ದೇ ಕಾರಣವಾಗಿತ್ತು. ಇದಕ್ಕೆ ಪ್ರತಿಕ್ರಿಯಿಸಲು ಮೊದಲು ಸಿಗುವುದು, ಬಳಸಿಕೊಳ್ಳುವುದು ಮಹಿಳೆಯರನ್ನೇ ತಾನೇ. ಇಂತಹ ಘಟನೆಗಳು ಮೇಲ್ಜಾತಿಗಳಲ್ಲಿ ನಡೆದರೆ ಅವರು ದಲಿತ ಮಹಿಳೆಯರನ್ನು ಬಳಸಿಕೊಂಡಷ್ಟು ಸುಲಭವಾಗಿ ಮೇಲ್ಜಾತಿಯ ಮಹಿಳೆಯರನ್ನು ಬಳಸಿಕೊಳ್ಳುವುದಿಲ್ಲ. ಅಲ್ಲಿ ಸ್ವಜಾತಿ ಪ್ರಶ್ನೆ ಮುಖ್ಯವಾಗಿರುತ್ತದೆ. ಕೆಳಜಾತಿಯ ಪುರುಷರೂ ಸಹ ಜಾತಿಯ ಹೆದರಿಕೆಯ ಕಾರಣದಿಂದ ಮೇಲ್ಜಾತಿಯ ಮಹಿಳೆಯರನ್ನು ಅಷ್ಟು ಬೇಗ ಮುಟ್ಟಲು ಆಗುವುದಿಲ್ಲ. ಆದರೆ ಮೇಲ್ಜಾತಿಯ ಪುರುಷರಿಗೆ ಈ ತರಹದ ಯಾವುದೇ ಅಡ್ಡಿ ಆತಂಕಗಳೇ ಇರುವುದಿಲ್ಲ.

ಬಳ್ಳಾರಿಯಲ್ಲಿಯೇ ಈ ಘಟನೆ ನಡೆಯುವುದಕ್ಕೆ ಮೊದಲು ವಣೇನೂರಿನಲ್ಲಿ ಎರ್ರಮ್ಮ ಎಂಬುವವರ ಮೇಲೆ ಅಮಾನುಷವಾಗಿ ಹಲ್ಲೆ ಮಾಡಲಾಗಿತ್ತು. ಇದನ್ನು ಮಾಡಿದವರೂ ಕೂಡ ಮೇಲ್ಜಾತಿಯ ಪುರುಷರೇ. ನಂತರ ಚಿಂತಾಮಣಿಯ ಅಂಗನವಾಡಿ ಕಾರ್ಯಕರ್ತೆಯರನ್ನು, ಅರೆನಗ್ನಗೊಳಿಸಿದ ಪ್ರಕರಣ, ಚಿಕ್ಕಮಂಗಳೂರಿನ ಜೀತಗಾರ ಕುಟುಂಬದ ಮಹಿಳೆಯರನ್ನೂ, ಅರೆನಗ್ನಗೊಳಿಸಿ ಅವಮಾನಗೊಳಿಸಿದ ಘಟನೆಗಳು, ಸಂಗನಕಲ್ಲುವಿನ ಘಟನೆ, ಹೀಗೆ ಸಾಲಾಗಿ ಇಂತಹ ದುರ್ಘಟನೆಗಳು ದಾಖಲಾಗಿವೆ. ಇಂತಹ ಘಟನೆಗಳಿಗೆ ಸಂಬಂಧಿಸಿದ ಹಲವಾರು ಕಡೆ ಡಿ.ಎಸ್.ಎಸ್. ಸಂಘಟನೆ ಹೋರಾಟ ಮಾಡಿದೆ. ಆದರೆ ಅವೆಲ್ಲದರ ಹೊರತಾಗಿ ನೆಪಮಾತ್ರಕ್ಕೆ ಕ್ರಮ ತೆಗೆದುಕೊಂಡಂತೆ ಮಾಡಿ ಅಧಿಕಾರಿಗಳು ಸುಮ್ಮನಾಗುತ್ತಿದ್ದಾರೆ.

ಇತರರ ಕುತಂತ್ರ ಪ್ರೇರಣೆಯಿಂದ ನಾಯಕ ಮತ್ತು ಮಾದಿಗರ ನಡುವೆ ಹುಡುಗಿಯ ವಿಷಯವಾಗಿ ಕಮಲಾಪುರದಲ್ಲಿ ನಡೆದ ಘಟನೆ ಸಾಕಷ್ಟು ಗುಡಿಸಲುಗಳನ್ನು ಸುಟ್ಟು ಹಾಕಿತು. ವಿಜಯನಗರದ ಕಾಲದಲ್ಲಿ ಸೈನ್ಯದಲ್ಲಿ ಇದ್ದ ನಾಯಕರು ಇಂದಿಗೂ ಸಹ ಅಂತಹದೇ ಒಂದು ಗತ್ತನ್ನು ಉಳಿಸಿಕೊಂಡು ಬಂದಿದ್ದಾರೆ. ಈ ಭಾಗದಲ್ಲಿ ನಾಯಕರ ಡಾಮಿನೆಟ್ ಇದೆ. ನಾಯಕರೇ ಮಾದಿಗರ ಗುಡಿಸಲುಗಳಿಗೆ ಬೆಂಕಿ ಹಚ್ಚಿದರು. ಮಾದಿಗ ಮಹಿಳೆ, ಮಕ್ಕಳು, ಮುದುಕರು ಕಂಗಲಾಗಿ ಹೋದರು. ಈ ಘಟನೆಗೆ ಸಂಬಂಧಿಸಿದಂತೆ ಸತ್ಯ ಶೋಧನಾ ಸಮಿತಿ ರಚಿಸಲಾಯಿತು. ಈ ಸಮಿತಿಯ ಕೆಲವು ಅಂಶಗಳನ್ನು ಸಾಮರಸ್ಯಕ್ಕಾಗಿ ಸೂಚಿಸಿತು. ಅದರಲ್ಲಿ ಒಂದು ಅಂಶ ಈಗಿದೆ. ದಲಿತ ಸಂಘಟನೆಗಳು ಮತ್ತು ಇತರ ಜಾತಿ ಸಂಘಟನೆಗಳು ಈ ಘಟನೆಯ ಸೂಕ್ಷ್ಮತೆ ಮತ್ತು ವಾಸ್ತವಾಂಶಗಳನ್ನು ಕಡೆಗಾಣಿಸಿ ಬೇಜವಾಬ್ದಾರಿ ಹೇಳಿಕೆಗಳ ಸಮರವನ್ನು ನಡೆಸುತ್ತಿರುವುದು ಮಾದಿಗ ಮತ್ತು ನಾಯಕರ ನಡುವಿನ ಕಂದಕ ಹೆಚ್ಚಾಗಲು ಕಾರಣವಾಗುತ್ತಿದೆ. ಅಲ್ಲದೆ ಈ ಪರಿಸ್ಥಿತಿ ಹೀಗೆ ಮುಂದುವರೆದರೆ ಇದು ರಾಜ್ಯದ ಇನ್ನಿತರ ಭಾಗಗಳಿಗೂ ಹರಡುವ ಸಾಧ್ಯತೆಯನ್ನು ಸಮಿತಿ ಆತಂಕದಿಂದ ಗುರುತಿಸಬಯಸುತ್ತದೆ (ಸಮರ, ಫೆಬ್ರವರಿ, ೨೦೦೩). ಈ ಘಟನೆಗೆ ಕಾರಣವಾದ ಒಳಸುಳಿಗಳನ್ನು ಸಮಿತಿ ನೀಡಲಿಲ್ಲ. ಇದು ಎಸ್.ಸಿ/ಎಸ್.ಟಿ ದಲಿತರ ಘಟನೆ. ಇದನ್ನು ಹೆಚ್ಚು ಟೀಕಿಸುವುದು ಬೇಡವೆಂದು ಸುಮ್ಮನಾಗಿರಬೇಕು. ಈ ಘಟನೆಗೆ ಕಾರಣವಾದ ಪ್ರಭುತ್ವದ ಪ್ರೇರಣೆಯನ್ನು ವಿವರಿಸಲಿಲ್ಲ. ರಾಜಕಾರಣಗಳು ತಮ್ಮ ಬೇಳೆ ಬೇಯಿಸಿಕೊಳ್ಳುವ ಸಲುವಾಗಿಯೇ ಚಿಕ್ಕ ಘಟನೆಯನ್ನು ದೊಡ್ಡ ಘಟನೆಯಾಗಿ ಮಾಡಿದರು.

ಬಡತನ, ಅಸಹಾಯಕತೆಗಳನ್ನೇ ಬಂಡವಾಳವಾಗಿ ಮಾಡಿಕೊಂಡಿರುವ ಕೆಲವು ದಲ್ಲಾಳಿಗಳು ಸುಂದರ ದಲಿತ ಹೆಣ್ಣು ಮಕ್ಕಳಿಗೆ ಹುಸಿ ಆಸೆ ಆಮಿಷಗಳನ್ನು ತೋರಿಸಿ ದುಡ್ಡು ಸಂಪಾದನೆಯನ್ನು ಸುಲಭವಾಗಿ ಮಾಡಬಹುದು ಎಂದು ಹೇಳಿ ಬಾಂಬೆ, ಕಲ್ಕತ್ತಾ, ಪೂನಾ ಮುಂತಾದುವುಗಳ ಕಡೆ ಕಳುಹಿಸುತ್ತಾ, ವೇಶ್ಯಾವಾಟಿಕೆಯಲ್ಲಿ ತೊಡಗಿಸುತ್ತಾ ಬಿಸಿನೆಸ್ ಮಾಡುತ್ತಿದ್ದಾರೆ. ಮಧ್ಯವರ್ತಿಗಳಿಗೆ ಹಣ ಕೊಟ್ಟು ದೇವದಾಸಿಯನ್ನಾಗಿ ಬಿಡಿಸಿ (ಅವರ ಮನೆಯವರನ್ನು ಒಪ್ಪಿಸಿ) ಕೊಂಡು, ನೀನು ದೇವದಾಸಿಯಲ್ಲ, ನೀನು ಯಾರ ಜೊತೆ ಬೇಕಾದರೂ ಇರಬಹುದು. ಊರಿನಲ್ಲಿ ಇದ್ದರೆ ೧೦- ೧೫ ರೂಪಾಯಿಗಳಿಗೆ ದುಡಿಯಬೇಕು. ದೊಡ್ಡ ದೊಡ್ಡ ನಗರಗಳಿಗೆ ಹೋದರೆ ಹೆಚ್ಚು ದುಡಿಯಬಹುದು ಎಂಬ ಆಮಿಷವನ್ನು ತೋರಿಸುತ್ತಿದ್ದಾರೆ. ಹಾಗೆಯೇ ಅವರನ್ನು ದೊಡ್ಡ ನಗರಗಳಿಗೆ ಕಳುಹಿಸುತ್ತಿದ್ದಾರೆ. ಬಾಗಲಕೋಟೆ ಪಕ್ಕದ ಚಿಕ್ಕಹಳ್ಳಿಯ ತಿಪ್ಪವ್ವ ಇದಕ್ಕೆ ಸಂಬಂಧಿಸಿದಂತೆ ಹೀಗೆ ಹೇಳುತ್ತಾಳೆ "ನನಗೂ ಮೊದಲು ತುಂಬಾ ಆಸೆ ಇತ್ತು ರೀ. ನಾನು ಕೂಡ ಅವರಂತೆ ಬಾಂಬೆಗೆ ಹೋಗಬೇಕು, ಜಗ್ಗಿ ರೊಕ್ಕ ಸಂಪಾದಿಸಬೇಕು, ಹೈ ಹೀಲ್ಡ್ ಸ್ಲಿಪ್ಪರ್ ಹಾಕಬೇಕು, ಸೈಡು ಸೆರಗು ಬಿಡಬೇಕು, ವಾಚ್, ಉಂಗುರ, ಬಂಗಾರದ ಸರ ಹಾಕಬೇಕು ಅಂತ. ಆದ್ರ ಹೋಗಕಾಗಲಿಲ್ಲ.

ನನ್ನ ದೇವದಾಸಿ ಬಿಟ್ಟ ಮ್ಯಾಲ ಅವ್ವನಿಗೆ ಕಣ್ಣು ಕಾಣಸದ ಹಾಗೆ ಆದ ಮೇಲೆ ಅವ್ವನ ನೋಡಿಕಳ್ಳೋರು ಯಾರೂ ಇಲ್ಲ ಅಂತ ಮನೆಗೆ ಒಬ್ಬರು ಬಂದರು ಅವರ ಜೊತೇನೇ ಇದ್ದು ಬಿಟ್ಟೇನಿ. ನಮ್ಮ ಊರಿನಾಗ ನಮ್ಮ ಮಂದಿ (ಮಾದ್ರು) ಜಗ್ಗಿ ಜನ ಬಾಂಬೆಗೆ ಹೋಗಿದಾರ ಅಲ್ಲಿಂದಲೇ ರೊಕ್ಕ ಕಳಿಸ್ತಾರ, ಬರೋವಾಗ ಜಗ್ಗಿ ರೊಕ್ಕ ತಗಂಬರ್ತಾರ. ಅವರನ್ನಾ ಆಗ ನೋಡಿದರೆ ನನಗೂ ಅನಿಸೈತಿ ಅಲ್ಲಿಗೆ ಹೋಗಬೇಕು ಅಂತ. ಅವ್ವನಿಂದ ಹೋಗಾಕ ಆಗಂಗಿಲ್ಲ. ಅಲ್ಲೇನೂ ದೊಡ್ಡ ಜಡ್ಡುಗಳು ಬರ್ತಾವಂತ ಭಯ ಆಗತೈತಿ. ನಮಗೂ ಕೂಡ ಇಲ್ಲಿರೋ ಚೈತನ್ಯ ಸಂಘಟನೆಯೋರು ಬಂದು ಕಾಂಡೋಮ್ ಕೊಡ್ತಾರ ತಪ್ಪದೇ ಬಳಸಿ ಅಂತ. ಆದ್ರೆ ಯಾರೂ ಬಳಸೋ ಹಾಗಿಲ್ಲ. ನಾನೇಕ ನಿನಗ ರೊಕ್ಕ ಕೊಡೋದು ಇದನ್ನಾ ಹಾಕಿಕಳ್ಳಾಕೇನೂ ಅಂತ ಗದರಿಸ್ತಾರ. ಸ್ವಲ್ಪ ಪುಸಲಾಯಿಸಿ ಹೇಳಿದರ ಹಾಕಂತಾರ. ಮುಂದ ಸ್ವಲ್ಪ ಕೊಯ್ದು ಬಿಸಾಕತಾರ. ಏನು ಮಾಡಬೇಕು ಹೊಟ್ಟೆಪಾಡು, ನಾವು ಮಾದ್ರು ಆದ್ರೂ ನೋಡ್ರಿ ಲಿಂಗಾಯತ ಗಂಡ ಮಕ್ಳು ನಮ್ಮ ಹತ್ರ ಬರತಾರ. ರಾತ್ರಿ ಜಾತಿ ಪಾತಿ ನೋಡಂಗಿಲ್ಲ ಕಾಲು ಸಹ ನೆಕ್ಕುತಾರ ರೀ. ಬೆಳಗಿಗ ನೋಡ್ರಿ ಎಲ್ಲೂ ಇಲ್ಲದೇ ಇರೋ ಜಾತಿನೋ ಬಂದು ಬಿಡತೈತಿ. ಅವರ ಹೆಂಗಸರು ಬಂದು ನಮಗ ಬೈತಾರ, ಅವರ ಗಂಡಗ ಬೈಲಿ ನಮಗ ಯಾಕ ಬೈಬೇಕು. ನನ್ನ ಜೊತಿನೇ ಸಲ್ಪ ದಿನ ಇದ್ದ ಗಂಡ ತೀರಿಕೆಂಬಿಟ್ಟ ಎಲ್ಲರೂ ನಿನಗೂ ಏಡ್ಸ್ ಬಂದೈತಿ ಅಂತ ಅಂದ್ರು. ನಾನು ಜಗ್ಗಿ ಎದರಿದ್ದೆ, ಆಸ್ಪತ್ರಿನಾಗ ತೋರಿಸಿಕಂಡೆ ಇರಲಿಲ್ಲ. ಈಗ ಚೈತನ್ಯ ಸಂಘಟನೆಯಲ್ಲಿ ಕೆಲಸ ಮಾಡ್ತೀನಿ" ಅಂತ ಅಂದ್ಲು.

ದಲ್ಲಾಳಿಗಳ ಕಪಟತನ ಎಂತಹ ಮುಗ್ಧ ಮನಸುಗಳನ್ನು ನಾಶ ಮಾಡಿ ಲೈಂಗಿಕ ಕೂಪಕ್ಕೆ ತಳ್ಳಿಬಿಡುತ್ತದೆ. ಸ್ವತಃ ದಲಿತ ಮಹಿಳೆಯರೇ ಆ ಕೆಲಸವನ್ನು ಒಪ್ಪಿಕೊಂಡು ಕೆಲಸ ಮಾಡುವ ಹಾಗೆ ಮಾಡುವ ದಲ್ಲಾಳಿಗಳು ಇನ್ನೂ ಯಾವ ರೀತಿಯ ಕೆಲಸ ಮಾಡುತ್ತಿರಬೇಕು. ಇದು ಬಳ್ಳಾರಿಯಲ್ಲಿಯೂ ಸಹ ನಡೆಯುತ್ತಿದೆ. ಆದರೆ ಅದನ್ನು ಅಷ್ಟು ಬೇಗ ಗುರುತಿಸಲು ಸಾಧ್ಯವಾಗುವುದಿಲ್ಲ. ಎಲ್ಲವೂ ಒಳಗೊಳಗೆ ನಡೆಯುತ್ತಲೇ ಇರುತ್ತವೆ. ಇಂತಹ ಕೆಲಸಗಳಿಗೆ ಅಡ್ಡಿ ಬರುವವರನ್ನು ಹತ್ತಿಕ್ಕಲು ದಲ್ಲಾಳಿಗಳ ಹಿಂದೆ ರೌಡಿಗಳ ಗ್ರೂಪೇ ಇರುತ್ತದೆ. ಕೂಡ್ಲಿಗಿ, ಮರಿಯಮ್ಮನಹಳ್ಳಿ, ಹಂಪಿಯ ಭಾಗದಲ್ಲಿ ಇದು ಹೆಚ್ಚಾಗಿದೆ ಎಂದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನುಭವಕ್ಕೆ ಬಂತು. ಆದರೆ ಇದರ ಕುರಿತು ಯಾರೂ ಅಷ್ಟು ಬೇಗ ಬಾಯಿಬಿಡುವುದಿಲ್ಲ. ಇಲ್ಲಿನ ಗಣಿಗಾರಿಕೆಯಿಂದ ಲೈಂಗಿಕ ವ್ಯವಹಾರಗಳು ವಿಚಿತ್ರವಾಗಿ ಶುರುವಾಗಿಬಿಟ್ಟಿವೆ. ಎಷ್ಟೋ ಅಮಾಯಕ ಹೆಣ್ಣುಗಳು ಇದರ ಕೂಪಕ್ಕೆ ಸಿಲುಕುತ್ತಿರುವುದು ನಿಜವಾಗಿಯೂ ದುರಂತ.

ನಿತ್ಯಕರ್ಮಗಳಿಗೆ ಹೋಗಲು ಶೌಚಾಲಯಗಳಿಲ್ಲದ ಕಾರಣ ಆಕೆ ಹೊರಗಡೆಯೇ ಕೆಲವು ಜಮೀನು, ತೋಪು, ಕಾಲುವೆಗಳಿಗೆ ಹೋಗಬೇಕಾಗಿದೆ. ಮೈನಿಂಗ್‌ನಿಂದ ಮೈನಿಂಗ್ ಏರಿಯಾಗಳಲ್ಲಿ ಸ್ಪಾಂಜಾಗಳು ಊರಿನ ಸುತ್ತ ಇವೆ. ಹೊಲ ಚಿಕ್ಕ ಚಿಕ್ಕ ಗಿಡ, ಮರಗಳು ಎಲ್ಲಾ ಹಾಳಾಗಿವೆ. ನಮಗೆ ಸೆಂಡಾಸ್‌ಗೆ ಹೋಗಿ ಕೂತುಕೊಂಡರೆ ನೋಡಿಕೊಂಡಿದ್ದ ಹುಡುಗರು ಕಲ್ಲಲ್ಲಿ ಹೊಡಿತಾರೆ. ನಾವು ರಾತ್ರಿ ಹೊತ್ತು ಮಾತ್ರ ಸೆಂಡಾಸುಗೆ ಹೋಗಬೇಕು, ಬೆಳಗಿನ ಟೈಂ ಅವಸರ ಆದ್ರೂ ಅಂಗೇ ಬಿಗಿ ಹಿಡಿಬೇಕು ತುಂಬಾ ಕಷ್ಟ ಆಗತೈತಿ. ನಮ್ಮ ಕಷ್ಟ ಯಾರಿಗೂ ಬೇಡ ಅಂತ ಗಾದಿಗನೂರಿನ ಶಾರದಮ್ಮ ಮತ್ತು ಶಕುಂತಲ ತುಂಬಾ ಬೇಸರದಿಂದ ಹೇಳುತ್ತಾರೆ. ಮೈನಿಂಗ್ ಏರಿಯಾದಲ್ಲೇ ಅಲ್ಲದೆ ಎಷ್ಟು ಊರುಗಳಲ್ಲಿ ಕೆಲಸ ಮಾಡುವ ಸ್ಥಳಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಮಹಿಳೆಯರೆಲ್ಲರೂ ಇದೇ ಕಷ್ಟವನ್ನು ಅನುಭವಿಸುತ್ತಿದ್ದಾರೆ.

ಮನೆ ಕಟ್ಟಡ, ಲಾರಿ ಲೋಡ್ ಮಾಡುವಾಗ ಪುರುಷರು ಹೇಳಿದಂತೆ ಮಹಿಳೆಯರು ಸಹಕರಿಸದಿದ್ದರೆ ಅವರಿಗೆ ತಲೆಯ ಮೇಲೆ ಪುಟ್ಟಿ ಎತ್ತುವಾಗ ಕುಕ್ಕುತ್ತಾರೆ. ಕತ್ತು ಮುರಿಯುವ ರೀತಿಯಲ್ಲಿ. ಸುಳ್ಳು ಸುಳ್ಳ ಚಾಡಿಗಳನ್ನು ಗುತ್ತಿಗೆದಾರರಿಗೆ ಹೇಳಿ ಅವರಿಂದ ಬೈಯಿಸುವ ಕೆಲಸಗಳನ್ನು ಪುರುಷರು ಮಾಡುತ್ತಿರುತ್ತಾರೆ. ಕೆಲವೊಮ್ಮೆ ಸುಂದರವಾದ ಹೆಣ್ಣು ಮಕ್ಕಳಿಗೆ ಸ್ವತಃ ಮಾಲಿಕನೇ ಕಣ್ಣಾಕಿ ಬರಲು ಹೇಳುತ್ತಾನೆ. ಬರದಿದ್ದರೆ ಕೆಲಸದಿಂದ ತೆಗೆದು ಹಾಕುತ್ತೇನೆಂದು ಬೆದರಿಸುವ, ಕೆಲಸದಿಂದ ತೆಗೆಯುವ ಕೆಲಸಗಳು ನಡೆಯುತ್ತಿರುತ್ತವೆ. ಇದು ದಲಿತ ಮಹಿಳೆಯ ಹೊಟ್ಟೆ ಬಟ್ಟೆ ಪ್ರಶ್ನೆಯಾಗಿರುವುದರಿಂದ (ಎದುರಿಸಲು ಧೈರ್ಯವಿಲ್ಲದೆ) ಅಸಹಾಯಕಳಾಗಿ ಇವೆಲ್ಲವನ್ನೂ ಸಹಿಸಿಕೊಳ್ಳಲೇ ಬೇಕಾಗುತ್ತದೆ. ಇದನ್ನು ಇತರ ಗಂಡಸರು ನೋಡಿ ರಕ್ಷಿಸುವ ನಾಟಕವಾಗಿ ತಾವು ಅವಳನ್ನು ಲೈಂಗಿಕವಾಗಿ ಬಳಸಿಕೊಳ್ಳಲು ಹಾತೊರೆಯುತ್ತಾರೆ.

ದಲಿತ ಮಹಿಳೆಯರಿಗೆ ಸಂಬಂಧಿಸಿದಂತೆ ಸರ್ಕಾರವು ಇಂದಿಗೂ ಸಹ ದಮನಕಾರಿಗಳ, ದೌರ್ಜನ್ಯ ಎಸಗುವವರ ರಕ್ಷಕನಂತೆ ವರ್ತಿಸುತ್ತಿದೆ. ಈ ದಿಸೆಯಲ್ಲಿ ಹಲವು ನೀತಿಗಳನ್ನು ರೂಢಿಸುವ ಸರ್ಕಾರ ದಲಿತರನ್ನು ಸಾಮಾಜಿಕ, ಆರ್ಥಿಕವಾಗಿ, ಭೌತಿಕವಾಗಿ, ಶೈಕ್ಷಣಿಕವಾಗಿ ತೀರಾ ಹಿಂದುಳಿದಿರುವಂತೆ ಮಾಡಿ ಅವರು ಅನಾರೋಗ್ಯಕಾರಿ ವಾತಾವರಣದಲ್ಲಿ ಬದುಕುವಂತೆ ಮಾಡಿದೆ.

'ಸಂವಿಧಾನದ ೧ ರಿಂದ ೪ನೇ ವಿಧಿಗಳು ೬,೭,೧೦ನೇ ವಿಧಿಗಳು ೧೧,೧೨,೧೩ ಮತ್ತು ೧೯ನೇ ವಿಧಿಗಳಡಿಯಲ್ಲಿ ಸರ್ಕಾರಕ್ಕೆ ದಲಿತರ ಭದ್ರತೆ ಮತ್ತು ಕಲ್ಯಾಣ ಕುರಿತು ವಿಶೇಷ ಜವಾಬ್ದಾರಿ ಇದೆ. ಸರ್ಕಾರಕ್ಕೆ ತನ್ನ ಸಂವಿಧಾನಿಕ ಕರ್ತವ್ಯಗಳನ್ನು ನಿಭಾಯಿಸಲು ಅನುಕೂಲವಾಗುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಸ್ಪೃಶ್ಯತಾ ವಿರೋಧಿ ಕಾನೂನುಗಳನ್ನು ರೂಢಿಸಲಾಗಿದೆ. ಆದರೆ ಈಗಿರುವ ಸ್ಥಿತಿಯೇ ಬೇರೆ. ಸರ್ಕಾರವು ದಲಿತರನ್ನು ರಕ್ಷಿಸಿ ನ್ಯಾಯ ಒದಗಿಸುವಲ್ಲಿ ಸೋತಿದೆ. ಇಲ್ಲಿ ಮೇಲ್ಜಾತಿಗಳ ಮತ್ತು ಪುರುಷಪ್ರಧಾನ ವ್ಯವಸ್ಥೆಯ ನಡವಳಿಕೆಗಳು ಇಡೀ ಸರ್ಕಾರವನ್ನು ಎಷ್ಟರಮಟ್ಟಿಗೆ ನಿಯಂತ್ರಿಸಿವೆ ಎಂದರೆ ಮೇಲ್ಜಾತಿಯ ಜನ ಇಂದಿಗೂ ದಲಿತರ ಮೇಲೆ ಹಲ್ಲೆ ಮಾಡುತ್ತಿದ್ದಾರೆ. ನ್ಯಾಯಕ್ಕಾಗಿ ದೌರ್ಜನ್ಯದ ವಿರುದ್ಧ ಕೋರ್ಟಿಗೆ ಹೋದರೂ ಅಲ್ಲೂ ದಲಿತರ ವಿರುದ್ಧವಾಗಿ ತೀರ್ಪುಗಳು ಬರತೊಡಗಿವೆ. (ಕಂಬಾಲಪಲ್ಲಿ ದುರಂತಕ್ಕೆ ಬಂದ ಕೋರ್ಟಿನ ತೀರ್ಪು ಅಮಾನುಷವಾದುದು).

ದಲಿತ ಮಹಿಳೆಯರ ಮೇಲೆ ನಡೆಯುವ ಹಿಂಸಾತ್ಮಕ ಹಲ್ಲೆಗಳಲ್ಲಿ ಪೋಲಿಸರು, ಅಧಿಕಾರಿಗಳೂ ಶಾಮೀಲಾಗಿರುವ ಅನೇಕ ಪ್ರಕರಣಗಳು ಜೀವಂತ ಉದಾಹರಣೆಯಾಗಿವೆ. ಎಷ್ಟೋ ಬಾರಿ ದಲಿತರ ಮೇಲಿನ ಕೇಸುಗಳೇ ದಾಖಲಾಗುವುದಿಲ್ಲ. ದಾಖಲಾಗಿರುವ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿರುವುದು ಅತ್ಯಂತ ಕಡಿಮೆ. ಅತ್ಯಂತ ಕಡಿಮೆ ಪ್ರಮಾಣದಲ್ಲಿ ಬಳಸಲ್ಪಟ್ಟಿರುವ ಕಾನೂನೆಂದರೆ ಪರಿಶಿಷ್ಟ ಜಾತಿ/ಪಂಗಡಗಳ ಮೇಲೆ ದೌರ್ಜನ್ಯ ತಡೆ ಕಾಯ್ದೆ (ಜಾಗೃತಿ: ಡಿಸೆಂಬರ್, ೨೦೦೨).

ಇಂದು ತೀವ್ರವಾಗಿ ನಡೆಯುತ್ತಿರುವ ಮಹಿಳಾ ಚಳುವಳಿಗಳು ಸಂಘಸಂಸ್ಥೆಗಳು ಮಹಿಳಾ ಪರ ಹೋರಾಟಗಾರರೆಲ್ಲರೂ ದಲಿತ ಮಹಿಳೆ, ದಲಿತರ ಬಗ್ಗೆ ದಿನ ನಿತ್ಯ ನಡೆಯುತ್ತಿರುವ ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡುವಲ್ಲಿ ನಿರುತ್ಸಾಹವನ್ನು ತೋರಿವೆ. ಇದಕ್ಕೆ ಕಾರಣ 'ಜಾತಿ'. ಜಾತಿಯ ಕಾರಣಕ್ಕೆ ಮಹಿಳೆಯರನ್ನು ಇಬ್ಭಾಗವಾಗಿ ನೋಡಲಾಗುತ್ತಿದೆ. ಬಂಜಗೆರೆ ಜಯ ಪ್ರಕಾಶ್‌ರವರು 'ಅನುದೇವ

ಹೊರಗಣವನು...' ಕೃತಿಯಲ್ಲಿ ಬಸವಣ್ಣನ ತಾಯಿಯನ್ನು ಕುರಿತು ಕೆಟ್ಟದಾಗಿ ಬರೆದಿದ್ದಾರೆ, ಅದನ್ನು ಸುಟ್ಟು ಹಾಕಬೇಕು, ಮುಟ್ಟುಗೋಲು ಹಾಕಬೇಕು ಎಂದು ಪ್ರತಿಕ್ರಿಯಿಸಿ ಕೆಂಡ ಮಂಡಲವಾದ ಮಹಿಳೆ ಆಯೋಗದ ಪ್ರಮೀಳಾ ನೇಸರ್ಗಿಯವರು ಬಳ್ಳಾರಿ ಗಂಗಮ್ಮನನ್ನು ಬೆತ್ತಲೆಗೊಳಿಸಿ ಅವಮಾನಿಸಿದಾಗ ಯಾಕೆ ಪ್ರತಿಕ್ರಿಯಿಸಲಿಲ್ಲ. ಗಂಗಮ್ಮ ವಾಸ್ತವದಲ್ಲಿ ಬದುಕುತ್ತಿರುವವಳು, ಇದು ಅವಳ ಭವಿಷ್ಯದ ಪ್ರಶ್ನೆಯಲ್ಲವೇ? ಎಂದೋ ಬಾಳಿ ಬದುಕಿ ಈಗ ಇಲ್ಲವಾದ ಬಸವಣ್ಣನ ತಾಯಿಗೆ ಸಂಬಂಧಿಸಿದ ವಿಷಯವು ಗಂಗಮ್ಮನಿಗಿಂತಲೂ ಮುಖ್ಯವೆಂದು ನನಗನಿಸುವುದಿಲ್ಲ. ಹಾಗೆ ಬಸವಣ್ಣನ ತಾಯಿಯನ್ನು ಅಲ್ಲಗಳೆಯುತ್ತಿದ್ದೇನೆ ಎಂದಲ್ಲ. ನಮಗೆ ವಾಸ್ತವ ಮುಖ್ಯವಲ್ಲವೇ? ಕರ್ನಾಟಕದಲ್ಲಿಯೇ ಅಲ್ಲಾ ದೇಶದಲ್ಲಿಯೇ ತೀವ್ರವಾಗಿ ನಡೆಯುತ್ತಿರುವ ಮಹಿಳಾ ಚಳುವಳಿಗಳಾಗಲಿ, ಮಹಿಳಾ ಅಧ್ಯಯನಗಳಾಗಲಿ ದಲಿತ ಮಹಿಳೆಯನ್ನು ಮುಖ್ಯವೆಂದು ಪರಿಗಣಿಸಿಲ್ಲ. ದಲಿತ ಮಹಿಳೆ ಅವರಿಗೆ ಯಾವೊತ್ತು ಮುಖ್ಯ ಎಂದು ಅನ್ನಿಸಲೇ ಇಲ್ಲ. ಇನ್ನೂ ದಲಿತ ಚಳುವಳಿಗಳು ದಲಿತ ಮಹಿಳೆಯನ್ನು ವಿಶೇಷವಾಗಿ ಪರಿಭಾವಿಸಿವೆ ಎಂದು ಹೇಳಲಾಗುವುದಿಲ್ಲ. ಯಾಕೆಂದರೆ ದಲಿತ ಚಳುವಳಿಯೂ ಪುರುಷಶಾಹಿ ಮೌಲ್ಯಗಳನ್ನು ಹೊರತಾಗಿಸಿ ಹುಟ್ಟಿಕೊಂಡಿರಲಿಲ್ಲ. ಅವಳ ಅಸ್ತಿತ್ವದ ಪ್ರಶ್ನೆ ಮುಖ್ಯ ಎಂದು ಪರಿಗಣಿಸಲೇ ಇಲ್ಲ.

ದಲಿತ ಚಳುವಳಿ ಇಬ್ಭಾಗವಾಗಿ ಹರಿದು ಹಂಚಿಹೋಗಿರುವುದು ಮತ್ತೆ ಸಂಘಟನೆಯಾಗದೇ ಇರುವುದು, ಅನಕ್ಷರತೆ, ಕಾನೂನಿನ ಬಗ್ಗೆ ದಲಿತ ಮಹಿಳೆಯರಿಗೆ ಯಾವುದೇ ಅರಿವಿಲ್ಲದಿರುವುದು, ಇಡೀ ಸಮಾಜವೇ ಇವರನ್ನು ಕೀಳು ದೃಷ್ಟಿಯಿಂದ ನೋಡುತ್ತಿರುವುದು ಇವರ ಮೇಲಿನ ಕಿರುಕುಳ, ದೌರ್ಜನ್ಯಗಳು ಹೆಚ್ಚಾಗಲು ಕಾರಣಗಳಾಗಿವೆ. ಸಾಮಾಜಿಕ ಅತ್ಯಾಚಾರಗಳು, ರಾಜಕೀಯ ಹಾಗೂ ಧಾರ್ಮಿಕ ವಿಚಾರಗಳನ್ನು ಮುಂದಿಟ್ಟುಕೊಂಡು ಮಾಡುವಂತಹ ಈ ಎಲ್ಲಾ ದೌರ್ಜನ್ಯಗಳು ಭೀಕರವಾಗಿರುವಂತಹವು. ಈ ಕಾರಣದಿಂದ ದಲಿತ ಮಹಿಳೆಯರೆಲ್ಲರೂ ಸೇರಿ ಆರ್ಥಿಕ, ಸಾಮಾಜಿಕ ಸಬಲತೆಯ ಜೊತೆಗೆ ಸ್ವಾಭಿಮಾನದ ನೆಲೆಯಲ್ಲಿ ಅವರು ಸಂಘಟಿತರಾಗಬೇಕಾಗಿದೆ. ಆ ಮೂಲಕ ಚಳುವಳಿಯನ್ನು ರೂಪುಗೊಳಿಸಿ ತಮ್ಮ ಮೇಲಿನ ದೌರ್ಜನ್ಯಗಳ ವಿರುದ್ಧ ತಿರುಗಿ ಬಿದ್ದು ತಾನು ಈ ರೀತಿ ಆಗಲು ಕಾರಣವಾದ ವ್ಯವಸ್ಥೆಗೆ ತನ್ನ ಶಕ್ತಿಯನ್ನು ಅರ್ಥೈಸಬೇಕಾಗಿದೆ.

ಅಧ್ಯಾಯ ೫. ದಲಿತ ಮಹಿಳಾ ಚಳುವಳಿ ಮತ್ತು ಸಬಲೀಕರಣ

ಅಧ್ಯಾಯ ೫
ದಲಿತ ಮಹಿಳಾ ಚಳುವಳಿ ಮತ್ತು ಸಬಲೀಕರಣ

೫.೧ ದಲಿತ ಚಳುವಳಿ ಮತ್ತು ದಲಿತ ಮಹಿಳೆ:

ದಲಿತ ಚಳುವಳಿ ಮತ್ತು ದಲಿತ ಮಹಿಳೆ ವಿಷಯಕ್ಕೆ ಸಂಬಂಧಿಸಿದಂತೆ, ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ? ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು? ದಲಿತ ಚಳುವಳಿಯಲ್ಲಿ ಅವಳ ಪಾತ್ರವೇನು? ಎಂಬ ಅಂಶಗಳ ಆಧಾರದ ಮೇಲೆ ದಲಿತ ಚಳುವಳಿ ಮತ್ತು ದಲಿತ ಮಹಿಳೆ ವಿಷಯವನ್ನು ಕುರಿತು ಚರ್ಚಿಸಬಹುದಾಗಿದೆ.

ಮೊದಲಿಗೆ ದಲಿತ ಚಳುವಳಿಯ ಚರಿತ್ರೆಯನ್ನು ಪರಿಶೀಲಿಸೋಣ; ದಲಿತ ಚಳುವಳಿಯ ಇತಿಹಾಸವನ್ನು ನಾವು ಬುದ್ಧನಿಂದ ಮೊದಲುಗೊಂಡು ಗುರುತಿಸಬಹುದು. ಸಮಾಜದಿಂದ ಹೆಚ್ಚು ಕೀಳು ಎನಿಸಿಕೊಂಡ ದಲಿತರಿಗೂ ತನ್ನ ಚಿಂತನೆಗಳನ್ನು ವಿಸ್ತರಿಸಲು ಬುದ್ಧ ಪ್ರಯತ್ನಿಸಿದ. ಪ್ರಾರಂಭದಲ್ಲಿ ಮಹಿಳೆಯನ್ನು ಸೇರಿಸಿಕೊಳ್ಳಬೇಕೋ ಬೇಡವೋ ಎಂಬ ಅನುಮಾನಗಳಿದ್ದ ಈ ಧರ್ಮವು ಪ್ರಾರಂಭದಲ್ಲಿ ಮಹಿಳೆಯನ್ನು ನಿರಾಕರಿಸಿ ನಂತರದ ದಿನಗಳಲ್ಲಿ ಮಹಿಳೆಯೂ ಕೂಡ ಮೋಕ್ಷಕ್ಕೆ ಯೋಗ್ಯಳು ಎಂಬುವುದನ್ನು ಸಾರಿತು. ಇನ್ನು ದಲಿತರ ವಿಷಯದಲ್ಲಿ ಅಪೂರ್ವವಾದ ಸಾಂಸ್ಕೃತಿಕ ಕ್ರಾಂತಿ ನಡೆದದ್ದು ೧೨ನೇ ಶತಮಾನದಲ್ಲಿ ಬಸವಣ್ಣನವರ ಕಾಲದಲ್ಲಿ. 'ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿಯೂ ಕೂಡ ಧರ್ಮದ ಪ್ರತಿಪಾದನೆಗಾಗಿ ದಲಿತರನ್ನು ಬಳಸಿಕೊಳ್ಳಲಾಗಿದೆ ಎನ್ನುವುದು ಗಮನಕ್ಕೆ ಬಾರದಿರದು. ಇಲ್ಲಿಯ ತತ್ವಗಳು ದಲಿತರನ್ನು ಉದ್ಧಾರ ಮಾಡುವುದಕ್ಕಾಗಿಯೇ ಬಂದಿವೆ ಎಂದು ವಾದಿಸುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಬದಲಾಗಿ ತಾತ್ವಿಕ ಪ್ರತಿಪಾದನೆಗೋಸ್ಕರ ದಲಿತರನ್ನು ತಮ್ಮ ತೆಕ್ಕೆಯಲ್ಲಿ ಹಿಡಿದಿಟ್ಟುಕೊಂಡಿದ್ದು ಕಂಡುಬರುತ್ತದೆ. ವೀರಶೈವ ಧರ್ಮದ ಬಸವಣ್ಣನವರ ಆಲೋಚನಾ ಕ್ರಮ ನಿಷ್ಕಲ್ಮಶವಾದುದು, ಶುದ್ಧವಾದುದು. ಆದರೆ ವ್ಯವಸ್ಥೆಯನ್ನು ತಮ್ಮಂತೆ ಶುದ್ಧವಾಗಿ ಕಾಪಾಡಿಕೊಂಡು ಹೋಗಲು ಸಾಧ್ಯವಾಗಲಿಲ್ಲ' (ಸಂ. ಅರವಿಂದ ಮಾಲಗತ್ತಿ, ೨೦೦೩, ಪು.೧೮). ಈ ಚಳುವಳಿಯ ಬಗ್ಗೆ ಎಷ್ಟೇ ವಿಮರ್ಶೆ ಮಾಡಿದರೂ ಕೂಡ ಕೆಲವು ದಲಿತ ಮಹಿಳೆಯರಿಗಾದರೂ ಈ ಚಳುವಳಿಯಲ್ಲಿ ಭಾಗವಹಿಸಲು ಅವಕಾಶವಿತ್ತು ಎಂಬುವುದು ಸತ್ಯ. ಇದಕ್ಕೆ ಅವರ ವಚನಗಳೇ ಸಾಕ್ಷಿ.

೧೭ನೇ ಶತಮಾನದಲ್ಲಿ ದಾಸರು ದಲಿತರಿಗೆ ಹರಿಜನ ಎಂದು ನಾಮಕರಣ ಮಾಡಿ ಹರಿಜನರನ್ನು ಸಹ ತಮ್ಮ ಕಡೆ ಎಳೆದುಕೊಂಡು ವಾಸ್ತವತೆಯನ್ನು ಅರ್ಥೈಸುವ ಪ್ರಯತ್ನ ಮಾಡಿದರು. ಆಗಿನ ಸಂದರ್ಭದಲ್ಲಿ ವೈಷ್ಣವ ಪಂಥ ವಿಸ್ತಾರವಾಗಿಯೂ, ಗಟ್ಟಿಯಾಗಿಯೂ ಇದ್ದದ್ದರಿಂದ ಇವರ ಚಳುವಳಿಯು ಅಷ್ಟು ಫಲಪ್ರದವಾಗಲು ಸಾಧ್ಯವಾಗಲಿಲ್ಲ.

ಬ್ರಿಟೀಷರ ಆಳ್ವಿಕೆ ಭಾರತದಲ್ಲಿ ಬಹಳ ಜನಕ್ಕೆ ಕೆಲವು ಅನುಕೂಲಕರವಾದ ಕೆಲಸವನ್ನು ಮಾಡಿತು. ೨೦೦ ವರ್ಷಗಳ ಆಡಳಿತ ನಡೆಸಿದ ಬ್ರಿಟೀಷರು ಮುಖ್ಯವಾಗಿ ವಿದ್ಯಾಭ್ಯಾಸ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಿದರು. ಇದರ ತಿಳುವಳಿಕೆಯನ್ನು ಹಾಗೂ ಇದರ ನೋವನ್ನುಂಡ ದಲಿತರು ದೇಶದ ಹಲವೆಡೆಗಳಲ್ಲಿ ಕ್ರಿಯಾಶೀಲವಾಗಿ ಯೋಚಿಸಲು ಪ್ರಾರಂಭಿಸಿದರು. ಈ ಕಾರಣವಾಗಿ ಇಂಡಿಯಾ ದೇಶದಲ್ಲಿ ಬೇರೆ ಬೇರೆ ಕಡೆ ದಲಿತ ಚಳುವಳಿಗಳನ್ನು ೧೯೨೦ ರ ಸುಮಾರಿನಲ್ಲಿ ಕಾಣಬಹುದಾಗಿದೆ. ಇವುಗಳಲ್ಲೆಲ್ಲಾ ಅಂಬೇಡ್ಕರ್

ಮಹಾರಾಷ್ಟ್ರದಲ್ಲಿ ಆರಂಭಿಸಿದ ಚಳುವಳಿ ಅತ್ಯಂತ ಪ್ರಬಲವಾಗಿತ್ತು. 'ಅಂಬೇಡ್ಕರವರ ಸಾಮಾಜಿಕ ಆಲೋಚನೆಗಳು ವರ್ಣ, ಜಾತಿ ಮತ್ತು ಅಸ್ಪೃಶ್ಯತೆ ಈ ವಿನ್ಯಾಸದಲ್ಲಿ ಬಿಚ್ಚಿಕೊಳ್ಳುತ್ತವೆ. ಅಂಬೇಡ್ಕರವರು ಭಾರತೀಯ ಸಮಾಜವನ್ನು ಈ ಮೂರು ನೆಲೆಗಳಲ್ಲಿ ವಿವರಿಸಿಕೊಂಡಿದ್ದಾರೆ. ಚಾತುರ್ವರ್ಣ ವ್ಯವಸ್ಥೆಯನ್ನು ಆಧಾರವಾಗಿಟ್ಟುಕೊಂಡು ವರ್ಣದ ನೆಲೆಯಲ್ಲಿ ಭಾರತೀಯ ಸಮಾಜವನ್ನು ಕುರಿತು ಚಿಂತಿಸಿದ್ದಾರೆ. ಸಾಮಾಜಿಕ ರಚನೆಯನ್ನು ಪಿರಾಮಿಡ್ಡ್ ಆಕೃತಿಗೆ ಹೋಲಿಸಿದ್ದಾರೆ. ಈ ಪಿರಮಿಡ್ಡಿನಲ್ಲಿ ಅತ್ಯಂತ ಕೆಳಗಿರುವವರು ಬಹುಸಂಖ್ಯಾತರು. ಜಾತಿ, ಶೋಷಣೆ, ಹಿಂಸೆ, ಅವಮಾನ ಮುಂತಾದವು ಮೇಲಿನವರಿಂದ ಒತ್ತಾಯ ಪೂರ್ವಕವಾಗಿ ದಲಿತರ ಮೇಲೆ ಹೇರಲ್ಪಟ್ಟಿವೆ. ಅದು ಮಾತ್ರವಲ್ಲ ಅದರಿಂದ ಬಿಡಿಸಿಕೊಳ್ಳಲಾರದಂತೆ ಹೇರಲ್ಪಟ್ಟಿವೆ. ಹೀಗೆ ಜಾತಿ ಅಸ್ಪೃಶ್ಯತೆಯ ಅವಮಾನ, ಹಿಂಸೆ ಮುಂತಾದ ಅನೈಸರ್ಗಿಕ ಸಂಬಂಧಗಳನ್ನು ನೈಸರ್ಗೀಕರಿಸಲಾಗಿದೆ ಎಂದು ಅಂಬೇಡ್ಕರವರು ಭಾವಿಸಿದರು' (ಸಂ. ಡಾ. ಟಿ.ಆರ್. ಚಂದ್ರಶೇಖರ್, ೨೦೦೫, ಪು. ೩೨೭). ತಮ್ಮ ಚಳುವಳಿಯ ಉದ್ದಕ್ಕೂ ಅಂಬೇಡ್ಕರವರು ಮಹಿಳೆಯ ವಿಷಯ ಬಂದಾಗ ಸಾರ್ವತ್ರಿಕವಾಗಿಯೇ ಮಾತನಾಡುತ್ತಾರೆ. ವರ್ಣವ್ಯವಸ್ಥೆಯ ಜಾತಿ ಶ್ರೇಣೀಕರಣವನ್ನು ಗಂಡಸರ ಹಿನ್ನೆಲೆಯಿಂದಲೇ ನಿರ್ವಚಿಸಿದ್ದಾರೆ. ಇದು ಕೆಳಜಾತಿಯ ಮಹಿಳೆಯ ಕಾರಣದಿಂದ ಕೆಳಜಾತಿಯ ಮಹಿಳೆಯರ ಮೇಲೆ ಭೀರಿದ ಪರಿಣಾಮವನ್ನು ಪ್ರತ್ಯೇಕವಾಗಿ ಗುರುತಿಸುವುದಿಲ್ಲ. ದಲಿತ ಮಹಿಳೆಯರೂ ಕೂಡ ಜಾತಿ ಶ್ರೇಣೀಕರಣದ ಹಿನ್ನೆಲೆಯಲ್ಲಿ ವಿಂಗಡಿಸಲ್ಪಟ್ಟಿದ್ದಾರೆ. ಪುರುಷರಿಗೆ ಹೋಲಿಸಿದರೆ ಅವರಿಗೂ ಕೂಡ ಪುರುಷರಿಗಿಂತ ಭಿನ್ನವಾದ ಸಮಸ್ಯೆಗಳಿರುವುದನ್ನು ಇವರು ವಿಶೇಷವಾಗಿ ಗಮನಿಸಿದಂತೆ ಕಾಣುವುದಿಲ್ಲ. ಪ್ರಾರಂಭದಿಂದ ಇಂದಿನವರಿಗೂ ದಲಿತ ಚಳುವಳಿಗಳು ಮಾಡಿರುವುದು ಇದನ್ನೇ ಎಂಬುವುದರಲ್ಲಿ ಅನುಮಾನವಿಲ್ಲ. ಆದರೂ ಆಸಂದರ್ಭದಲ್ಲಿ ಜಾತಿಯಿಂದ ದೂರವಾಗಬೇಕಾದ ಅನಿವಾರ್ಯತೆ ಇದ್ದಿದ್ದರಿಂದ ಎಲ್ಲಾ ಮಹಿಳೆಯರನ್ನು ಸೇರಿಸಿ ಒಗ್ಗೂಡಿಸಿ ಚಳುವಳಿ ಮಾಡುವ ರಾಜಕಾರಣವನ್ನು ಅಂಬೇಡ್ಕರವರು ಮಾಡಿದರು. 'ಆ ಕಾಲದಲ್ಲಿ ದಲಿತರ ನಾಯಕರಾಗಿದ್ದ ಅಂಬೇಡ್ಕರ್ ಮಹಾರಾಷ್ಟ್ರದಲ್ಲಿ ಮುಖ್ಯವಾಗಿ ಮಹಾರ್ ಜನಾಂಗದ ಮಧ್ಯೆ ಪ್ರಭಾವವನ್ನು ಬೆಳೆಸಿಕೊಂಡು ಒಟ್ಟು ಇಂಡಿಯಾದ ದಲಿತರ ಭೂ ಸಮಸ್ಯೆಗಳೊಟ್ಟಿಗೆ ಹೋರಾಟವನ್ನು ನಡೆಸಲಿಲ್ಲ. ಇವರು ದಲಿತರ ಭಾವನಾತ್ಮಕ ಸಮಸ್ಯೆಗಳನ್ನು ತೆಗೆದುಕೊಂಡು ಅನೇಕ ದಲಿತರನ್ನು ಸಂಘಟಿಸಿದರೂ ಎಲ್ಲಾ ದಲಿತ ಸಮೂಹವನ್ನು ತಲುಪಲಾಗಲಿಲ್ಲ. ಈಗಲೂ ದೇಶದ ನಾನಾ ಭಾಗದ ದಲಿತರಿಗೆ ಅಂಬೇಡ್ಕರ್ ಹೋರಾಟಗಳು ತಿಳಿದೇ ಇಲ್ಲ. ಆದರೂ ಅಂಬೇಡ್ಕರ್ ನಡೆಸಿದ ಹೋರಾಟ ಬಂಡವಾಳಶಾಹಿ ಪ್ರಜಾಪ್ರಭುತ್ವ ಚೌಕಟ್ಟಿನೊಳಗಿದ್ದು, ಕೆಲವು ಸವಲತ್ತುಗಳನ್ನು ಪಡೆಯುವಲ್ಲಿ ಪರ್ಯಾವಸಾನವಾಯಿತು. ಆದರೆ ಈ ಪರಿಹಾರ ಎಲ್ಲಾ ದಲಿತರ ಅಗತ್ಯವಾಗಿರಲಿಲ್ಲ' (ಎಲ್. ಹನುಮಂತಯ್ಯ, ೨೦೦೫, ಪು. ೧೭೩). ಆದರೂ ದಲಿತ ಚಳುವಳಿಗೆ ಗಟ್ಟಿಯಾದ ಬುನಾದಿಯನ್ನು ಹಾಕಿದವರೆಂದರೆ ಅಂಬೇಡ್ಕರ್ ಎನ್ನುವುದರಲ್ಲಿ ಅನುಮಾನವಿಲ್ಲ.

ಅತ್ಯಂತ ಮುಖ್ಯವಾಗಿ ಇಂಡಿಯಾದಲ್ಲಿ ಜಾತಿ ವ್ಯವಸ್ಥೆಗೆ ವಿರುದ್ಧವಾಗಿ ಹೋರಾಟ ನಡೆಸಿದವರಲ್ಲಿ ಜ್ಯೋತಿಬಾ ಫುಲೆ ಮತ್ತು ಅವರ ಶ್ರೀಮತಿಯವರ ಶ್ರಮ ಶ್ಲಾಘನೀಯ. ಅವರ ಕಾಲದಲ್ಲಿಯೇ ಸಮಾಜದ ಎಲ್ಲಾ ನಿಂದನೆಗಳನ್ನು ಒತ್ತುಕೊಂಡು ದಲಿತ ಹೆಣ್ಣುಮಕ್ಕಳಿಗಾಗಿ ಶಾಲೆಯನ್ನು ತೆರೆದು ಅಕ್ಷರ ದಾಸೋಹವನ್ನು ಮಾಡುವುದರ ಮೂಲಕ ತಿಳುವಳಿಕೆಯನ್ನು ಮೂಡಿಸಿದ ಕೀರ್ತಿ ಫುಲೆ ದಂಪತಿಗಳಿಗೆ ಸಲ್ಲುತ್ತದೆ. ಹೀಗಾಗಿ ನಾವು ದಲಿತ ಮಹಿಳಾ ಚಳುವಳಿಯ ಎಳೆಗಳನ್ನು ಹುಡುಕಾಟ ನಡೆಸಿದರೆ ಅಂಬೇಡ್ಕರ್ ಹಾಗೂ ಫುಲೆಯವರ

ಪ್ರಭಾವವನ್ನು ಪರಿಗಣಿಸದೆಯೇ ದಲಿತ ಮಹಿಳೆಯ ಕುರಿತು ಮಾತನಾಡಲು ಸಾಧ್ಯವೇ ಇಲ್ಲ. ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಈ ಸಮಸ್ಯೆಗೆ ಪರಿಹಾರ ಕೊಡಲು ಹೋರಾಡಿದ ಡಾ. ರಾಮ್‌ಮನೋಹರ್ ಲೋಹಿಯರವರನ್ನು ದಲಿತ ಚಳುವಳಿಗೆ ಪ್ರೇರಕವಾದ ಶಕ್ತಿಗಳು ಎಂದು ಗುರುತಿಸಬಹುದು. ಅಂಬೇಡ್ಕರರನ್ನು ಬಿಟ್ಟರೆ ಇವರೆಲ್ಲಾ ಮೇಲ್ಜಾತಿ ನಾಯಕರು. ಆದರೆ ಇವರೆಲ್ಲಾ ಆರ್ಥಿಕ ಅಸಮಾನತೆಯನ್ನು ಪರಿಗಣಿಸದೆಯೇ ಕೇವಲ ಜಾತಿ ಅಸಮಾನತೆಯನ್ನು ಕುರಿತು ಹೋರಾಟ ಮಾಡಿದ್ದರಿಂದ ಇವರ ಹೋರಾಟಗಳು ಗೆಲುವು ಕಾಣುವುದರಲ್ಲಿ ಸೋತವು.

ಮಹಾರಾಷ್ಟ್ರದ ದಲಿತ ಫ್ಯಾಂಥರ್ಸ್ ಆಂಧ್ರಪ್ರದೇಶದ ದಿಗಂಬರ ಕಾವ್ಯ, ವಿಪ್ಲವ ಸಾಹಿತ್ಯ, ನಕ್ಸಲ್ ಬಾರಿ ಹೋರಾಟಗಳು ಕರ್ನಾಟಕದ ಚಳುವಳಿಗೆ ಪೂರಕವಾಗಿ ನಿಂತವು. ೧೯೭೦ರಿಂದೀಚೆಗೆ ಕರ್ನಾಟಕದ ದಲಿತ ಚಳುವಳಿ ಹೊಸ ರೂಪ ಪಡೆಯಿತು. ೧೯೭೦ರಲ್ಲಿ ಬಿ. ಶ್ಯಾಮಸುಂದರವರು ಬೀಮಸೇನ ಎಂಬ ಸಂಘಟನೆಯನ್ನು ಹೈದರಾಬಾದ್ ಕರ್ನಾಟಕದಲ್ಲಿ ಹುಟ್ಟುಹಾಕಿದರು. ಬೀಮಸೇನ ಸುಮಾರು ೨,೦೦,೦೦೦ ಸದಸ್ಯರನ್ನು ಒಳಗೊಂಡಿತ್ತು ಎಂದು ಹೇಳಲಾಗಿದೆ. ಬೀಮಸೇನ ತನ್ನದೇ ಆದ ಸಂವಿದಾನ, ಚಿಂತಕರ ಚಾವಡಿಯನ್ನು ಹೊಂದಿತ್ತು. ದಲಿತರ ಮೇಲಾಗುವ ದೌರ್ಜನ್ಯವನ್ನು ತಪ್ಪಿಸಲು ಅವರಿಗೆ ಸ್ವರಕ್ಷಣೆಯ ತರಬೇತಿ ಸಹ ಕೊಡಲಾಗಿತ್ತು. ಕ್ರಾಂತಿಕಾರಿ ನಾಯಕರು ಹಿಂದೂದೇವಾಲಯಗಳನ್ನು ಸುಡಲು ಪ್ರಾರಂಭಿಸಿದರು. ಇದರಿಂದಾಗಿ ಹೈದರಾಬಾದ್ ಕರ್ನಾಟಕದಲ್ಲಿ ಈ ಸಂಘಟನೆ ಅಶಾಂತಿಗೆ ಕಾರಣವಾಯಿತು. ಜಾತಿಯ ಸಂಘರ್ಷಗಳು ಹೆಚ್ಚಾಗ ತೊಡಗಿದಾಗ ನಿಜಲಿಂಗಪ್ಪ ಮತ್ತು ದೇವೇಂದ್ರ ಪಾಟೀಲರ ಸರಕಾರ ಬೀಮಸೇನ ಚಟುವಟಿಕೆಗಳನ್ನು ನಿಷೇದಿಸಿತು. ಶ್ಯಾಮಸುಂದರವರು ನಿಧನರಾದಾಗ ಇದು ನೆಲ ಕಚ್ಚಿತು (ದಯಾನಂದಮನೆ, ೨೦೦೧, ಪು. ೮೩೮).

ಶ್ರೀ. ಡಿ. ದೇವರಾಜ್ ಅರಸುರವರು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದಾಗ, ಹಾವನೂರು ವರದಿ ಬಂದಾಗ ಆ ವರದಿಯು ದಲಿತ ಹಿಂದುಳಿದವರ ಪರ ಇದೆ ಎಂದು ತಿಳಿದುದಕ್ಕಾಗಿ ದಲಿತ ಚಳುವಳಿಯ ಮುಖಂಡರೆಲ್ಲರೂ ಆ ತಿಳಿವನ್ನು ವಿಸ್ತರಿಸಿದರು. ೧೯೭೩ರಲ್ಲಿ ನಡೆದ ಬಸವಲಿಂಗಪ್ಪನವರ ಬೂಸಾ ಪ್ರಕರಣವು ಈಗಿನ ಕನ್ನಡ ಸಾಹಿತ್ಯ ಉಳ್ಳವರ ಸಾಹಿತ್ಯವಾಗಿದೆ. ಅಲ್ಲಿ ದಲಿತರಿಗೆ ಸಂಬಂಧಿಸಿದಂತೆ ಏನೂ ಇಲ್ಲ. ಆದ್ದರಿಂದ ಸಾಹಿತ್ಯವು ಬೂಸಾ ಎಂದು ಹೇಳಿದರು. ಅದೇ ಸಂದರ್ಭದಲ್ಲಿ ಮಲ ಹೊರುವ ಪದ್ಧತಿಯನ್ನು ನಿಷೇಧ ಮಾಡಲು ಕಾಯ್ದೆಯನ್ನು ಹೊರಡಿಸಿದರು. ಈ ಕಾರಣಕ್ಕಾಗಿ ದಲಿತೇತರರು ಅವರ ವಿರುದ್ಧ ಕಿಡಿಕಾರ ತೊಡಗಿದರು. ಈಗಾಗಲೇ ಇದ್ದ ದಲಿತ ನಾಯಕರಿಗೆ ಇದು ಹೆಚ್ಚು ಸ್ಫೂರ್ತಿಯಾಗತೊಡಗಿತು. ಅಸ್ಪಷ್ಟವಾಗಿದ್ದ ದಲಿತ ಚಳುವಳಿಯು ಒಂದಷ್ಟು ಸ್ಪಷ್ಟತೆಯನ್ನು ಪಡೆದುಕೊಳ್ಳುವಲ್ಲಿ ಇದು ಸಹಕರಿಸಿತು. ಇಲ್ಲಿ ಇದ್ದ ನಾಯಕರುಗಳೆಲ್ಲ ದಲಿತರ ಸ್ವಾಭಿಮಾನವೆಂಬಂತೆ ದಲಿತ ಸಾಹಿತ್ಯವನ್ನು ರಚಿಸಲು ಶುರು ಮಾಡಿದರು. ಈ ಕಾರಣಕ್ಕಾಗಿಯೇ ದಲಿತ ಸಾಹಿತ್ಯದ ಮೂಲಕವೇ ದಲಿತ ಚಳುವಳಿಯನ್ನು ಗುರುತಿಸಲಾಗುತ್ತದೆ. ೧೯೭೩ ಆಗಸ್ಟ್ ೨೫, ೨೬ ರಂದು ಮೈಸೂರಿನಲ್ಲಿ ಜಾತಿ ವಿಮೋಚನಾ ಸಮ್ಮೇಳನ ನಡೆಯಿತು. ವೈಚಾರಿಕ ಮನಸ್ಸುಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದವು. ಅವರಲ್ಲಿ ಮುಖ್ಯವಾಗಿ ಗುರುತಿಸಬೇಕೆಂದರೆ ಪಿ. ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ದೇವನೂರು ಮಹಾದೇವ, ಸಿದ್ಧಲಿಂಗಯ್ಯ, ಕೆ. ರಾಮದಾಸ್, ಶ್ರೀ ಕೃಷ್ಣ ಆಲನಹಳ್ಳಿ ಮೊದಲಾದವರು. ಹೀಗೆ ವೈಚಾರಿಕ ಮನಸ್ಸುಗಳು ಒಂದೆಡೆ ಸೇರಿದ್ದರಿಂದ ವೈಚಾರಿಕತೆಯ ಹಿನ್ನೆಲೆಯನ್ನು ಸಿದ್ಧಾಂತವಾಗಿಸುವಲ್ಲಿ ಯೋಚಿಸಲಾಯಿತು.

೧೯೭೪ರಲ್ಲಿ ಭದ್ರಾವತಿಯಲ್ಲಿ ಪ್ರೊ. ಬಿ.ಕೃಷ್ಣಪ್ಪನವರ ನೇತೃತ್ವದಲ್ಲಿ ದಲಿತ ಸಂಘರ್ಷ ಸಮಿತಿ ರೂಪ ತಳೆಯಿತು. ಶಿಕ್ಷಣಕ್ಕೆ ತೆರೆದುಕೊಂಡ ಮೊದಲನೇ ತಲೆಮಾರಿನ ದಲಿತ ಯುವಕರೆಲ್ಲಾ ಕ್ರಿಯಾಶೀಲವಾಗಿ ಚಳುವಳಿಯಲ್ಲಿ ಭಾಗವಹಿಸಿ ಅನೇಕ ದಲಿತರಿಗೆ ಎಲ್ಲಾ ರೀತಿಯಲ್ಲೂ ನ್ಯಾಯ ಒದಗಿಸಲು ಶ್ರಮ ವಹಿಸಿದರು. ದಲಿತ ವರ್ಗಗಳಲ್ಲಿ ಅರಿವು ಮೂಡಿಸುತ್ತಾ ಸಂಘಟನೆಯ ಮಹತ್ವವನ್ನು ಮನಗಾಣಿಸಿಕೊಟ್ಟರು. ಭೂ ಹೋರಾಟಗಳನ್ನೂ, ಅಸ್ಪೃಶ್ಯತೆ, ಜಾತಿಯತೆ ವಿರುದ್ಧ ಸಂಘರ್ಷಗಳನ್ನು ನಡೆಸಿದರು. ಆದರೆ ಇಂತಹ ಸಮಸ್ಯೆಗಳು ಯಾಕೆ ನಡೆಯುತ್ತವೆ ಎಂಬ ವಿಶ್ಲೇಷಣೆಯನ್ನು ದಲಿತ ಚಳುವಳಿ ಮಾಡಲಿಲ್ಲ. ಈ ಸಂದರ್ಭದಲ್ಲಿ ಅನೇಕ ಒಕ್ಕೂಟಗಳೂ ಶುರುವಾದವು. ಅವುಗಳೆಂದರೆ ದಲಿತ ವಿದ್ಯಾರ್ಥಿ ಒಕ್ಕೂಟ, ದಲಿತ ನೌಕರರ ಒಕ್ಕೂಟ, ದಲಿತ ಕಾರ್ಮಿಕರ ಒಕ್ಕೂಟ ಮುಂತಾದವು. ಇವುಗಳ ಮೂಲಕ ದಲಿತ ವಿದ್ಯಾವಂತರಲ್ಲಿ ಸ್ವಾಭಿಮಾನವನ್ನು ಬಡಿದೆಬ್ಬಿಸಿದರು. ೧೯೮೭ರಲ್ಲಿ ದೇವನೂರು ಮಹಾದೇವರವರು ಸಂಚಾಲಕರಾಗಿದ್ದಾಗ ಅವರು ಜನತಾದಳಕ್ಕೆ ಬೆಂಬಲವನ್ನು ಸೂಚಿಸಿದರು. ಈ ಕಾರಣಕ್ಕಾಗಿ ದಲಿತ ಸಂಘರ್ಷ ಸಮಿತಿ ಒಡೆದು ಎರಡು ಭಾಗಗಳಾಗಿ ವಿಂಗಡಣೆಯಾಯಿತು. ಮತ್ತೆ ಅದರಲ್ಲಿ ಕರ್ನಾಟಕ ಸಮತಾ ಸೈನಿಕ ದಳ ಮತ್ತು ಪ್ರಗತಿಪರ ಜಾತಿವಾದಿ ಸಂಘಟನೆಗಳು ರೂಪ ತಳೆದವು. ಮತ್ತೆ ಅದರಲ್ಲಿಯೇ ಮಾದಿಗ ದಂಡೋರ ಮೀಸಲಾತಿ ಹೋರಾಟ ಶುರುವಾಗಿ ಹೊಲೆ ಮಾದಿಗರ ಮಧ್ಯೆಯೇ ದೊಡ್ಡ ಕಂದರ ಏರ್ಪಟ್ಟಿತು. ಇದರಲ್ಲಿ ಒಂದು ಬಣ ಬಿ.ಎಸ್.ಪಿ.ಗೆ ಸೇರಿತು ಇನ್ನೊಂದು ಬಣ ಜನತಾದಳಕ್ಕೆ ಸೇರಿತು. ಮತ್ತೊಂದು ಬಣ ಕಾಂಗ್ರೇಸ್‌ಗೆ ಸಹಕರಿಸಿತು. ಹೊಲೆಯ ದಲಿತ ಮಹಾ ಸಭಾ, ಮಾದಿಗ ಮೀಸಲಾತಿ ಹೋರಾಟ ಸಮಿತಿಗಳು ಪ್ರತ್ಯೇಕವಾಗಿಯೇ ಗುರುತಿಸಿಕೊಂಡವು. ಹೀಗೆ ಚಳುವಳಿಯಲ್ಲಿ ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಭಿನ್ನಾಭಿಪ್ರಾಯ ಮೂಡಲು ಶುರುವಾಯಿತು. ಅನೇಕ ನಾಯಕರು ಸರ್ಕಾರದ ಮಂತ್ರಿಗಳ ಮನೆ ಬಾಗಿಲು ಕಾಯುತ್ತಾ ಚೇರಮನ್‌ಗಿರಿ ದಕ್ಕಿಸಿಕೊಳ್ಳಲು ಹೆಣಗಿದರು. ಇದರಿಂದ ಇಡೀ ಚಳುವಳಿ ಛಿದ್ರವಾಯಿತು. ಇದಕ್ಕೆ ಕಾರಣಗಳನ್ನು ಹೀಗೆ ಪಟ್ಟಿ ಮಾಡಬಹುದು.

ನಾಯಕರಲ್ಲಿನ ಒಳಜಗಳ, ಸದಸ್ಯರ ನಿರಸಾಕ್ತಿ, ಸ್ವಾರ್ಥ ಮನೋಭಾವನೆ, ತತ್ವರಹಿತ ಸಿದ್ಧಾಂತ, ಉದ್ದೇಶ ರಹಿತ ಸಂಘಟನೆ, ಅಧಿಕಾರಕ್ಕಾಗಿ ನಾಯಕರಲ್ಲಿನ ಪೈಪೋಟಿ, ತ್ಯಾಗರಹಿತ ಮನೋಭಾವನೆ, ಕಾಲು ಎಳೆಯುವಿಕೆ, ಜಾತಿ-ಉಪಜಾತಿಗಳ ಜಗಳ, ಗೊಂದಲ, ಅಸ್ಪಷ್ಟತೆ, ಮೇಲು-ಕೀಳುಗಳ ಅಸಂಬದ್ಧವಾದಗಳು, ಸಂಘಟನೆ ದಾರಿಗಳ ಸ್ವರೂಪದ ಕುರಿತು ಸ್ಪಷ್ಟತೆ ಇಲ್ಲದಿರುವುದು, ಸ್ವಯಂ ಆಲೋಚನೆ ಕೊರತೆ, ಹಿಂದಿನಿಂದ ಹೊಂದಿಕೊಂಡು ಮೈಗೂಡಿಸಿಕೊಂಡು ಬಂದಿರುವಂತಹ ಕೀಳರಿಮೆ, ವೃತ್ತಿ- ಪ್ರವೃತ್ತಿ, ವಿಭಜಿತ ಕೇರಿಗಳು, ಅಜ್ಞಾನ, ದೂರದೃಷ್ಟಿ ಇಲ್ಲದಿರುವುದು, ವಿಶಾಲವಾಗಿ ಯೋಚಿಸದಿರುವುದು, ಪರಸ್ಪರ ಅಪನಂಬಿಕೆ, ನಾಯಕ ಬಲದ ಕೊರತೆ, ನಾಯಕರನ್ನು ಅನುಮಾನಾಸ್ಪದವಾಗಿ ನೋಡುವುದು, ಅರ್ಹತೆ ಇಲ್ಲದೆ ಅಧಿಕಾರಕ್ಕಾಗಿ ಹವಣಿಸುವುದು, ಎಲ್ಲರೂ ಒಟ್ಟಿಗೆ ಸೇರಲು ಇಲ್ಲದ ಕೇಂದ್ರ ಸ್ಥಾನಗಳು, ಪರಸ್ಪರ ಕಷ್ಟ-ಸುಖಗಳಲ್ಲಿ ಭಾಗಿಯಾಗದಿರುವುದು ಈ ಎಲ್ಲಾ ಕಾರಣಗಳು ಚಳುವಳಿಯನ್ನು ಛಿದ್ರಗೊಳಿಸಿತು.

ಈಗಲೂ ಕೂಡ ಹೊಲೆಯ ಮತ್ತು ಮಾದಿಗರು ಪ್ರತ್ಯೇಕವಾಗಿಯೇ ಚಳುವಳಿಯಲ್ಲಿ ಗುರುತಿಸಿಕೊಳ್ಳುತ್ತಿದ್ದಾರೆ. ೭೦, ೮೦ರ ದಶಕದಲ್ಲಿದ್ದ ದಲಿತ ಚಳುವಳಿಯ ಆಶೋತ್ತರಗಳು, ಹಿತಾಸಕ್ತಿಗಳು, ಸಂವೇದನಾ ತೀವ್ರತೆಗಳು ಇಂದು ದುರ್ಬಲವಾಗಿವೆ. ದಲಿತ ದೃಷ್ಟಿಕೋನದಲ್ಲಿ ಶೋಷಣೆಯ ಸ್ವರೂಪಗಳೇನು? ಶೋಷಣೆಯ ಸಂಬಂಧಿತ ವಿನ್ಯಾಸಗಳೇನು? ಮತ್ತು ಪರ್ಯಾಯಗಳೇನು? ಎಂಬ ಮೂಲಭೂತವಾದ ಪ್ರಶ್ನೆಗಳನ್ನು ದಲಿತ ಚಳುವಳಿ ಬಗೆಹರಿಸಿಕೊಂಡಿಲ್ಲ (ಸಂ. ಟಿ.ಆರ್. ಚಂದ್ರಶೇಖರ್, ೨೦೦೫, ಪು. ३೮೦).

ಇದರಿಂದಾಗಿ ಹೋರಾಟದ ತೀವ್ರತೆ ಚಳುವಳಿಯೊಳಗೆ ತುಂಬಾ ದಿನಗಳ ಕಾಲ ಉಳಿದುಕೊಳ್ಳಲಾಗಲಿಲ್ಲ. ಈ ಕಾರಣದಿಂದ ಈಗಲೂ ಸಹ ಉಳಿದುಕೊಳ್ಳಲಾಗುತ್ತಿಲ್ಲ. ಚಳುವಳಿ ಒಡೆದು ಹೋಗಿ ಈಗ ಅವುಗಳ ಸಂಖ್ಯೆ ಅರ್ಧ ಡಜನ್‌ನಿಂದ, ಒಂದು ಡಜನ್‌ಗೆ ಏರಿದೆ. ಈಗ ದಲಿತ ಚಳುವಳಿಗಳು ಪಡೆದುಕೊಂಡಿರುವ ಸ್ವರೂಪ ವಿಚಿತ್ರವಾದುದು. ಸಂಘಟನೆಯ ಹೆಸರಿನಲ್ಲಿ ಚಳುವಳಿಯ ಆಶಯಗಳನ್ನು ರೌಡಿಜಮ್‌ಗೆ ಬದಲಾಯಿಸಿರುವುದನ್ನು ಕಾಣಬಹುದು. ಇಡೀ ಚಳುವಳಿಯೂ ವ್ಯವಹಾರವಾಗಿ ಮಾರ್ಪಟ್ಟಿದೆ. ಲಾಭದ ಉದ್ದೇಶ ಮುಖ್ಯವೆ ಹೊರತು ಆಶಯ ಮುಖ್ಯವಲ್ಲ ಎಂಬಂತಾಗಿದೆ. ಕ್ರಿಯಾಶೀಲವಾಗಿ ಕೆಲಸ ಮಾಡುತ್ತಿದ್ದಂತಹ ಸಂದರ್ಭದಲ್ಲಿ ಕೂಡ ನಗರಕೇಂದ್ರಿತ ದಲಿತರಿಗೆ ವಿಶೇಷವಾದ ಒತ್ತನ್ನು ಕೊಡಲಾಯಿತು. ದಲಿತರು ಸರಕಾರಿ ನೌಕರಿಗಳನ್ನು ಪಡೆದುಕೊಳ್ಳುವಲ್ಲಿನ ಸಮಸ್ಯೆಗಳನ್ನೇ ಅತೀ ಮುಖ್ಯವೆಂದು ಪರಿಗಣಿಸಿತು. ಈಗಾಗಲೇ ಸರಕಾರಿ ನೌಕರಿ ಇರುವವರ ಮುಂಬಡ್ತಿಗಳ ಕುರಿತು ಹೋರಾಟವನ್ನು ಮಾಡುವುದರಲ್ಲಿಯೇ ಹೆಚ್ಚು ತಲೆ ಕೆಡಿಸಿಕೊಂಡಿತು. ಇದಕ್ಕೆ ಹೋಲಿಸಿದರೆ ಹಳ್ಳಿಗಾಡಿನಲ್ಲಿ ಹಸಿರು ಕಾರ್ಡು ಇಲ್ಲದೆ ತಿನ್ನುವುದಕ್ಕೆ ಏನು ಇಲ್ಲದ ಉಪವಾಸದಲ್ಲಿ ಸಾಯುವ ದಲಿತ ಕುಟುಂಬದ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಡಿ.ಎಸ್.ಎಸ್. ಕೇಂದ್ರಗಳೆಲ್ಲವೂ ನಗರಕೇಂದ್ರದಲ್ಲಿಯೇ ಇದ್ದವು. ಅಲ್ಲಿನ ನಾಯಕರೆಲ್ಲರೂ ನಗರದಲ್ಲಿರಬೇಕೆಂದು ಬಯಸುತ್ತಿದ್ದರು. ಸಮಸ್ಯೆಗಳು ಬಂದಾಗ ಮಾತ್ರ ಅಂತಹ ಸ್ಥಳಗಳಿಗೆ ಬೇಟಿ ಕೊಡುತ್ತಿದ್ದರು. ಸಮಸ್ಯೆಗಳು ಉದ್ಭವಿಸುವ ಮೊದಲೆ ಸಮಸ್ಯೆಗಳು ಬಂದರೆ ಹೇಗೆ ಎದುರಿಸಬೇಕು ಎಂಬ ಮುಂದಾಲೋಚನೆ ಮತ್ತು ಕ್ರಮಗಳನ್ನು ಕುರಿತು ಎಂದೂ ಯೋಚಿಸಲಿಲ್ಲ. ಹೋರಾಟ ಮಾಡುವ ಸಮಯದಲ್ಲಿಯೂ ನಾಯಕನಾಗಿ ಗುರುತಿಸಿಕೊಳ್ಳುವುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡುತ್ತಿದ್ದರಿಂದ ಸಮಸ್ಯೆಯ ಸ್ವರೂಪ ಇನ್ನಾವುದೋ ರೂಪ ಪಡೆದುಕೊಳ್ಳುತ್ತಿತ್ತು. ಇವುಗಳನ್ನು ಪರಿಶೀಲಿಸುವೆಡೆ ಚಳುವಳಿ ಅಷ್ಟಾಗಿ ತಲೆ ಕೆಡಿಸಿಕೊಳ್ಳಲಿಲ್ಲ. ಈಗ ಜನರಿಗೆ ಡಿ.ಎಸ್.ಎಸ್.ನ ಮೇಲೆ ನಂಬಿಕೆ ಕಡಿಮೆಯಾಗಿದೆ ಎನ್ನುವುದಕ್ಕಿಂತ ಇಲ್ಲವಾಗಿದೆ ಎಂದು ಹೇಳಬೇಕಾಗುತ್ತದೆ.

ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ? ಅಲ್ಲಿ ಅವಳ ಪಾತ್ರವೇನೆಂಬುವುದನ್ನು ಪರಿಶೀಲಿಸೋಣ;

ದಲಿತ ಚಳುವಳಿಯಲ್ಲಿ ಎಲ್ಲೂ ಸಹ ದಲಿತ ಮಹಿಳೆ ಮುಖ್ಯ ಪಾತ್ರದಲ್ಲಿ ಕಾಣಿಸಿಕೊಳ್ಳಲೇ ಇಲ್ಲ. ೧೯೮೯ರಲ್ಲಿ ದಲಿತ ಚಳುವಳಿಗಾರರೆಲ್ಲಾ ಸೇರಿ ದಲಿತ ಮಹಿಳಾ ಒಕ್ಕೂಟವನ್ನು ಸ್ಥಾಪಿಸಿ ಅದಕ್ಕೆ ರಾಜ್ಯ ಸಂಚಾಲಕರಾಗಿ ಆರ್. ಭಾರತಿ ರಾಜಣ್ಣ ಮತ್ತು ಸಂಘಟನಾ ಸಂಚಾಲಕಿಯಾಗಿ ಕೆ. ಗಂಗಮ್ಮ ಕೆಂಪಯ್ಯ ಅವರನ್ನು ನೇಮಿಸಿದರು. ಇದರ ರೂಪರೇಷೆ, ನೀತಿನಿಯಮಾವಳಿಗಳನ್ನು ರೂಪಿಸಿದವರು ಪುರುಷರೇ ಆಗಿದ್ದರಿಂದ ಇದು ಗಟ್ಟಿಯಾಗಿ ಕೆಲವು ದಿನಗಳ ಕಾಲ ನಿಲ್ಲಲು ಸಾಧ್ಯವಾಗಲಿಲ್ಲ. ಇದಕ್ಕಿಂತಲೂ ಮುಖ್ಯವಾದುದೆಂದರೆ ಈ ಸಂಘಟನೆಯ ನಾಯಕಿಯರೆಲ್ಲ ದಲಿತ ಸಂಘಟನೆಯ ನಾಯಕರ ಹೆಂಡತಿ ಹಾಗೂ ಬಂಧುಗಳೇ ಹೊರತು ಹಳ್ಳಿಗಾಡಿನ ದಲಿತ ಮಹಿಳೆಯರಲ್ಲ. ಅನಕ್ಷರಸ್ಥ ದಲಿತ ಮಹಿಳೆಯರನ್ನು ತಲುಪುವ ಮೊದಲೇ ಇದು ನೆಲಕಚ್ಚಿತು. ದಲಿತ ಚಳುವಳಿಯಲ್ಲಿ ಎಲ್ಲೂ ಸಂಘಟನಾತ್ಮಕ ವಿಭಾಗಗಳು ಇಲ್ಲ. ದಲಿತ ಚಳುವಳಿಯಲ್ಲಿ ದಲಿತ ಮಹಿಳೆಯರ ಪಾತ್ರ ಪರಿಣಾಮಕಾರಿಯಾಗಿ ಇಲ್ಲ. ಚಳುವಳಿಯ ಆರಂಭಿಕ ಹಂತಗಳಲ್ಲಿ ಪ್ರಕರಣದ ಆಧಾರದ ಮೇಲೆ ಭಾವನಾತ್ಮಕವಾಗಿ ಜನರನ್ನು ಸಂಘಟಿಸಿ ಹೋರಾಟಕ್ಕೆ ಇಳಿಸಲಾಯಿತು. ಇದು ದಲಿತರ ಮೇಲೆ ನಡೆದ ಹಲ್ಲೆ, ದೌರ್ಜನ್ಯ, ಕೊಲೆ, ಮಾನಭಂಗ, ಬಹಿಷ್ಕಾರ ಮುಂತಾದವುಗಳಿಗೆ

ಸಂಬಂಧಿಸಿದಂತೆ ಪ್ರತಿಭಟನೆ ನಡೆಯುತ್ತಿರಬೇಕಾದರೆ ಅಲ್ಲಿ ದಲಿತ ಮಹಿಳೆಯನ್ನು ಸಂಖ್ಯೆಯಾಗಿ ಹಾಗೂ ಸಂಘಟನೆಯನ್ನು ಸ್ಪ್ರಾಂಗ್ ಮಾಡಿಕೊಳ್ಳಲಿಕ್ಕೆ ಮಾತ್ರ ಬಳಸಿಕೊಳ್ಳಲಾಯಿತು. ಸಂಘಟನೆಯಲ್ಲಿ ಮಹಿಳೆಯರಿದ್ದಾರೆ ಎಂದ ಮಾತ್ರಕ್ಕೆ ಸಂಘಟನೆಯಲ್ಲಿ ಅವರಿಗೆ ಸಮಾನತೆ ಕೊಡಲಾಯಿತು ಎಂದು ಹೇಳಲು ಆಗುವುದಿಲ್ಲ. ಯಾವುದೇ ಚಳುವಳಿಗಳು ಮಹಿಳೆಯನ್ನು ಬಿಟ್ಟು ಚಳುವಳಿ ಮಾಡಿದರೆ ಅದು ಸ್ಟ್ರಾಂಗ್ ಆಗುವುದಿಲ್ಲ. ದಲಿತ ಚಳುವಳಿ ಪ್ರಜ್ಞಾಪೂರ್ವಕವಾಗಿಯೇ ದಲಿತ ಮಹಿಳೆಯರನ್ನು ತಮ್ಮ ಸಂಘಟನೆಯಲ್ಲಿ ಮುಖ್ಯ ಪಾತ್ರಗಳಲ್ಲಿ ಸೇರಿಸಿಕೊಳ್ಳಲಿಲ್ಲ ಎಂದು ಕಡಾಖಂಡಿತವಾಗಿ ಹೇಳಬಹುದು. ಆದರೆ ದಲಿತ ಮಹಿಳೆಯರಿಗಾಗಿ ದಲಿತ ಚಳುವಳಿ ಏನೂ ಮಾಡಿಲ್ಲ ಎಂದು ಹೇಳಲು ಆಗುವುದಿಲ್ಲ.

ದಲಿತ ಮಹಿಳೆ ಸಂಘಟನೆಯಲ್ಲಿ ಪಾಲ್ಗೊಳ್ಳಲು ಅವಳಿಗೆ ಅನೇಕ ಸಮಸ್ಯೆಗಳಿದ್ದವು. ಅವು ಹಲವಾರು. ಅವಳ ಸಾಮಾಜಿಕತೆ, ಆರ್ಥಿಕತೆ, ರಾಜಕೀಯ, ಶೈಕ್ಷಣಿಕ ಸ್ಥಿತಿ ಮೊದಲಾದವುಗಳಿಂದ ಮೂಲ ಸಮಸ್ಯೆಗಳನ್ನು ಗುರುತಿಸಿಕೊಳ್ಳಬಹುದು. ದಲಿತ ಕುಟುಂಬದಲ್ಲಿ ಇಡೀ ಕುಟುಂಬದ ಜವಾಬ್ದಾರಿ ದಲಿತ ಮಹಿಳೆಯ ಮೇಲೆಯೇ ಇರುವುದರಿಂದ ಈ ಜವಾಬ್ದಾರಿಯಿಂದ ಅವಳು ಹೊರಗೆ ಬರಲು ಅಷ್ಟು ಸುಲಭವಾಗುವುದಿಲ್ಲ. ದಲಿತ ಮಹಿಳೆ ಚಳುವಳಿಯಲ್ಲಿ ಭಾಗವಹಿಸಲು ತನ್ನ ಕುಟುಂಬದ ಪುರುಷನನ್ನೇ ಮೊದಲು ಎದುರಿಸಬೇಕಾಯಿತು. ಕುಟುಂಬಗಳ ಸಾಮಾನ್ಯವಾದ ಸ್ವಭಾವವೆಂದರೆ ಹೋರಾಟ, ಸಂಘಟನೆ, ಚಳುವಳಿಗಳಲ್ಲಿ ಪುರುಷರು ಮಾತ್ರ ಭಾಗವಹಿಸಬೇಕು ಅಲ್ಲಿ ಮಹಿಳೆಯರು ಹೋಗಬಾರದು ಎಂಬ ಲಕ್ಷ್ಮಣ ರೇಖೆಯನ್ನು ಹಾಕಲಾಗಿರುತ್ತದೆ. ಈ ರೇಖೆಯನ್ನು ದಾಟಲು ದಲಿತ ಮಹಿಳೆಗೆ ಆಗಲಿಲ್ಲ.

ದಲಿತ ಚಳುವಳಿಯಲ್ಲಿ ಶಿಕ್ಷಣ ಪಡೆದವರು ಮಾತ್ರ ಹೆಚ್ಚಾಗಿ ಭಾಗವಹಿಸುತ್ತಿದ್ದರು. ಅನಕ್ಷರಸ್ಥ ದಲಿತರು ಚಳುವಳಿಯ ಹತ್ತಿರ ಸುಳಿಯಲು ಹಿಂದುಮುಂದು ನೋಡುತ್ತಿದ್ದರು. ಶಿಕ್ಷಣ ಪಡೆದವರನ್ನು ನೋಡಿದ ಅನಕ್ಷರಸ್ಥ ದಲಿತ, ದಲಿತ ಮಹಿಳೆಯರು ಅವರಿಂದ ದೂರ ಉಳಿಯಲು ಯೋಚಿಸಿದರೆ ಹೊರತು ಅವರ ಹತ್ತಿರ ಹೋಗುವ ಯೋಚನೆ ಮಾಡಲಿಲ್ಲ ಎಂಬುವುದಕ್ಕಿಂತ ದಲಿತ ನಾಯಕರೂ ಸಹ ಅಕ್ಷರಸ್ಥ ಮತ್ತು ಅನಕ್ಷರಸ್ಥರ ಮಧ್ಯೆ ಒಂದು ನಿಗಧಿತ ಸ್ಥಾನವನ್ನು ಕಾಯ್ದುಕೊಂಡರೇನೊ ಅನಿಸುತ್ತದೆ. ಚಳುವಳಿಯ ನಾಯಕರೆಲ್ಲರೂ ಜಾತಿಯನ್ನು ಮೀರುವ ದೃಷ್ಟಿಯಿಂದಲೂ, ಶೋಷಣೆಗೆ ಒಳಪಡಿಸಿದ ಮೇಲ್ಜಾತಿಯ ಮೇಲೆ ಸೇಡು ತೀರಿಸಿಕೊಳ್ಳಲು, ಜಾತಿಯನ್ನು ಹೋಗಲಾಡಿಸುವ ಆಶಯವನ್ನು ಹೊತ್ತು ಅಂತರ್‌ಜಾತಿ ವಿವಾಹಗಳನ್ನು ಮಾಡಿಕೊಂಡರು. ದಲಿತ ನಾಯಕರೆಲ್ಲರೂ ಸಾಮಾನ್ಯವಾಗಿ ಬ್ರಾಹ್ಮಣ ಮಹಿಳೆಯರನ್ನೇ ಮದುವೆ ಮಾಡಿಕೊಂಡರು. ಇದರ ಪರಿಣಾಮ ಜಾತಿ ನಾಶವಾಗುವುದರ ಬದಲು ಹೊಸ ಜಾತಿಗಳು ಹುಟ್ಟಿಕೊಂಡು ಅವು ಗಟ್ಟಿಯಾಗತೊಡಗಿದವು. ಮೊದಲನೇ ತಲೆಮಾರಿನ ಮೂಲಕ ಅಕ್ಷರದ ಜಗತ್ತಿಗೆ ತೆರೆದುಕೊಂಡು ಆರ್ಥಿಕ ಸಬಲರಾದ ಇವರು ತಮ್ಮ ಇಡೀ ಸಮುದಾಯವನ್ನು ಮರೆತು ತನ್ನ ಸಂಪನ್ಮೂಲವನ್ನು ಬೇರೊಂದು ಸಮುದಾಯದ ಏಳ್ಗೆಗಾಗಿ ವಿನಿಯೋಗಿಸಿದ್ದು ದಲಿತ ಮಹಿಳೆಗೆ ಬಾರೀ ಹೊಡೆತ ಕೊಟ್ಟಿತು. ತನ್ನ ಕುಟುಂಬದ ಮಹಿಳೆಯರ ಬೆಳವಣಿಗೆಗಾಗಿ ದಲಿತನಾಯಕರು ಯಾವ ಕ್ರಮಗಳನ್ನು ಕೈಗೊಂಡರು? ದಲಿತ ಪುರುಷ ಬ್ರಾಹ್ಮಣ ಮಹಿಳೆಯನ್ನು ವಿವಾಹವಾದ ಹಾಗೆಯೇ ಮೇಲ್ಜಾತಿಯ ಪುರುಷ ಕೆಳಜಾತಿಯ ಮಹಿಳೆಯರನ್ನು ಏಕೆ ವಿವಾಹವಾಗುವುದಿಲ್ಲ? ಇಂತಹ ವಿವಾಹಗಳು ಏರ್ಪಟ್ಟರೂ ಅವು ಸಫಲವಾಗುವುದಿಲ್ಲ. ಇದಕ್ಕೆ ಆರ್ಥಿಕ, ರಾಜಕೀಯ ಕಾರಣಗಳಿಗಿಂತ ಹೆಚ್ಚಾಗಿ ಸಾಮಾಜಿಕ ಸಾಂಸ್ಕೃತಿಕ ಕಾರಣಗಳೇ ಮುಖ್ಯವಾಗಿವೆ. ಸರ್ಕಾರದಿಂದ

ಬರುವ ಧನಸಹಾಯಕ್ಕಾಗಿ ಆಸೆ ಪಟ್ಟು ಕೆಲವರು ಮದುವೆಯಾದರೂ ಸ್ವಲ್ಪದಿನಗಳಲ್ಲೇ ಆ ಮದುವೆ ಮುರಿದು ಬೀಳುತ್ತಿತ್ತು. ಈ ಎಲ್ಲಾ ಕಾರಣಗಳೂ ದಲಿತ ಮಹಿಳೆ ದಲಿತ ಚಳುವಳಿಗೆ ಹತ್ತಿರವಾಗದಂತೆ ಮಾರ್ಪಡಿಸಿದವು.

ಸ್ವಲ್ಪಮಟ್ಟಿಗೆ ಶಿಕ್ಷಣಕ್ಕೆ ತೆರೆದುಕೊಂಡ ದಲಿತ ಮಹಿಳೆಯರು ಜಾತಿ, ಲಿಂಗ, ಮುಜುಗರಗಳಿಗೆ ಒಳಗಾಗಿ ಸಂಘಟನೆಯೊಳಗೆ ಹೋಗಲಾಗಲಿಲ್ಲ. ಆಗ ಅವರಿಗಿದ್ದ ಅರಿವಿನ ಕೊರತೆಯೂ ಅವರು ಸಂಘಟನೆಯಲ್ಲಿ ಭಾಗವಹಿಸದ ಹಾಗೆ ಮಾಡಿತು. ದಲಿತ ಚಳುವಳಿ ಯಾವ ಶಿಕ್ಷಣವನ್ನು ಸಂಘಟನೆಗೆ ಜ್ಞಾನ, ವರ ಎಂದು ಪರಿಗಣಿಸಿದೆಯೊ ಅದರೊಳಗೆ ಸಂಘಟನೆಗೆ ಶಾಪವಾಗಿರುವ ಗುಣಗಳಿರುವುದು ಒಂದು ವ್ಯಂಗ್ಯ (ಬಿ.ಎಂ. ಪುಟ್ಟಯ್ಯ, ೨೦೦೫, ಪು. ೩೪೯). ಸಂಘಟನೆಯೊಳಗೆ ಹೋದರೆ ಜಾತಿಯು ಗೊತ್ತಾಗುತ್ತದೆ ಎಂಬ ಹಿಂಜರಿಕೆಯೂ ಕಾರಣವಿರಬಹುದು. ದಲಿತ ಚಳುವಳಿಯೂ ಇಂತಹ ಹಿಂಜರಿಕೆಗಳನ್ನು ಹೋಗಲಾಡಿಸುವಲ್ಲಿ ಪ್ರಯತ್ನ ಪಟ್ಟರೂ ಇಂತಹ ಹಿಂಜರಿಕೆಗಳು ಇನ್ನೂ ಗಟ್ಟಿಗೊಳ್ಳಲು ಕಾರಣಗಳೇನಿರಬಹುದು ಎಂಬುವುದು ವ್ಯವಸ್ಥೆಯ ನಿರೂಪಣೆಯ ಗಟ್ಟಿತನವನ್ನು ತೋರಿಸುತ್ತದೆ.

ದಲಿತ ಚಳುವಳಿ ದಲಿತ ಮಹಿಳೆಯ ಮೇಲೆ ಆಗುವ ಕೌಟುಂಬಿಕ ದಮನವನ್ನು ಅಷ್ಟಾಗಿ ಪರಿಗಣಿಸಿಲ್ಲ. ಅಲ್ಲೇ ಅತ್ಯಾಚಾರಗಳ ಸಂದರ್ಭದಲ್ಲಿ ನಿರ್ದಿಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಾಗೂ ಸಾಮಾನ್ಯವಾಗಿಯೂ ಹೋರಾಟದ ಹಾಡುಗಳನ್ನು ರಚಿಸಿ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿದರು. ಇಂತಹ ಹೋರಾಟದ ಹಾಡುಗಳನ್ನು ರಚಿಸಿದವರೆಲ್ಲಾ ಪುರುಷರೇ, ಹಾಡಿದವರೂ ಕೂಡ ಪುರುಷರೇ. ಚಳುವಳಿಯ ಉದ್ದಕ್ಕೂ ಕೂಡ ದಲಿತ ಮಹಿಳೆಯರ್ಯಾರೂ ಇಂತಹ ಹಾಡುಗಳನ್ನು ರಚಿಸಲಿಲ್ಲ. ಯಾರೂ ಹಾಡಲಿಲ್ಲ. ಚಳುವಳಿಯ ಉದ್ದಕ್ಕೂ ದಲಿತ ಮಹಿಳೆ ನಾಯಕಿಯಾಗಿಯೂ, ನಿರ್ಣಯಗಳನ್ನು ತೆಗೆದುಕೊಳ್ಳುವ ಸ್ಥಾನದಲ್ಲಿಯೂ ದಲಿತ ಮಹಿಳೆ ನಮಗೆ ಎಲ್ಲೂ ಕಾಣಿಸುವುದಿಲ್ಲ ಏಕೆ? ಇದಕ್ಕೆ ಕಾರಣವೇನು? ಈ ವಿಷಯಕ್ಕೆ ಸಂಬಂಧಿಸಿದಂತೆ ಮೇಲ್ಜಾತಿಯವರಿಗಿಂತಲೂ ಹೆಚ್ಚಾಗಿ ದಲಿತ ಕುಟುಂಬದ ಪುರುಷನ ಜವಾಬ್ದಾರಿ ಏನು? ಮೇಲ್ಜಾತಿಯವರ ಹತ್ತಿರ ತಲೆಬಾಗಿ ನಡೆದುಕೊಳ್ಳುವ ಕೆಳಜಾತಿಯ ಪುರುಷ ತನ್ನ ಕುಟುಂಬದ ಮಹಿಳೆಯ ಮೇಲೆ ನಡೆಸುವ ಹಲ್ಲೆಯನ್ನು ದಲಿತ ಚಳುವಳಿ ಎಲ್ಲೂ ಮಾತನಾಡಲಿಲ್ಲ ಯಾಕೆ? ದಲಿತ ನಾಯಕರು ಇಂತಹ ಸ್ವ ವಿಮರ್ಶೆಯನ್ನು ಯಾಕೆ ಮಾಡಿಕೊಳ್ಳಲಾಗಲಿಲ್ಲ? ಮೇಲ್ಜಾತಿಯ ದಬ್ಬಾಳಿಕೆಗಳನ್ನು ಕುರಿತು ಹೇಳುತ್ತಲೇ ತಮ್ಮ ಸಮುದಾಯದಲ್ಲೇ ಇರುವ ದಬ್ಬಾಳಿಕೆಗಳನ್ನು ಮರೆಮಾಚಿಸಲು ಪ್ರಯತ್ನಿಸುತ್ತಿದ್ದರೇ? ಇದು ಪ್ರಜ್ಞಾಪೂರ್ವಕವಾಗಿಯೂ, ಅಪ್ರಜ್ಞಾಪೂರ್ವಕವಾಗಿಯೂ ನಡೆಯುತ್ತಲೇ ಇತ್ತು. ಇಂತಹ ಎಳೆಗಳನ್ನು ಗುರುತಿಸಿಕೊಳ್ಳಲು ದಲಿತ ಚಳುವಳಿಗೆ ಯಾಕೆ ಸಾಧ್ಯವಾಗಲಿಲ್ಲ?

ದಲಿತ ಚಳುವಳಿಯು ಎಸ್.ಸಿ/ಎಸ್.ಟಿ, ವಿದ್ಯಾರ್ಥಿ/ನಿ ಹಾಸ್ಟೆಲ್‌ಗಳಲ್ಲಿ ತಮ್ಮ ಸಂಪನ್ಮೂಲಗಳನ್ನು ಹುಡುಕಿಕೊಂಡಿತು. ಅಲ್ಲಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆದುಕೊಂಡಿದ್ದರೂ ವಿದ್ಯಾರ್ಥಿಗಳು ಭಾಗವಹಿಸಿದಂತೆ ವಿದ್ಯಾರ್ಥಿನಿಯರು ಚಳುವಳಿಯಲ್ಲಿ ಯಾಕೆ ಭಾಗವಹಿಸಲಾಗಲಿಲ್ಲ? ಇದು ಈಗಲೂ ಇರುವ ಮುಖ್ಯ ಸಮಸ್ಯೆ. ದಲಿತ ಚಳುವಳಿಯು ತಾನು ಮಾಡುವ ಹೋರಾಟ ತನಗೆ ಎದುರಾಗಿದ್ದು ಹಳ್ಳಿಗಳಲ್ಲಿ ಜಮೀನುದಾರರನ್ನು ಎದುರಿಸಿದಂತಹ ಸಂದರ್ಭದಲ್ಲಿ ಹಳ್ಳಿಗಳಲ್ಲಿ ದಲಿತರು ಹೆಚ್ಚಾಗಿ ಜಮೀದಾರರ ಜಮೀನುಗಳಲ್ಲಿ ಕೆಲಸ ಮಾಡುತ್ತಿರುತ್ತಾರೆ. ಅಲ್ಲಿ ಆದ ಶೋಷಣೆಯ ವಿರುದ್ಧ ಚಳುವಳಿ ಕ್ರಮ ತೆಗೆದುಕೊಂಡಾಗ ಅದರ ದುಷ್ಪರಿಣಾಮವನ್ನು ಅನುಭವಿಸುತ್ತಿದ್ದವಳೆಂದರೆ ದಲಿತ ಮಹಿಳೆಯೇ. ಯಾಕೆಂದರೆ ಕೂಲಿ ವಿಷಯಕ್ಕೆ

ಸಂಬಂಧಿಸಿದಂತೆ ಅನಿವಾರ್ಯವಾಗಿ ಜಮೀನು ಇಲ್ಲದ ಕಾರಣ ಅವಳು ಮತ್ತೆ ಜಮೀನುದಾರನ ಜಮೀನಿನಲ್ಲಿಯೇ ಕೂಲಿ ಮಾಡಬೇಕಾದಂತಹ ಸಂದರ್ಭವಿರುವುದರಿಂದ ಇದು ಪ್ರತಿಕೂಲ ಪರಿಣಾಮವಾಗಿ ಮಾರ್ಪಟ್ಟಿತು. ಇಂತಹ ಸಮಸ್ಯೆಗಳನ್ನು ಜಾಣ್ಮೆಯಿಂದ ಎದುರಿಸುವ ಚತುರತೆ ದಲಿತ ಚಳುವಳಿಗಳಲ್ಲಿ ಕಾಣಿಸುವುದೇ ಇಲ್ಲ. ಇದಕ್ಕೆ ಸಂಬಂಧಿಸಿದಂತೆ ಚಳುವಳಿ ತೀವ್ರ ಹೋರಾಟಗಳನ್ನು ಸಾಕಷ್ಟು ಸಲ ಮಾಡಿದೆ. ಅನೇಕ ಹೋರಾಟಗಳಲ್ಲಿ ಗೆಲುವನ್ನೂ ಸಹ ಸಾಧಿಸಿದೆ. ಇದನ್ನು ಬಿಟ್ಟು ಇದಕ್ಕೆ ಸಂಬಂಧಿಸಿದ ಬೇರೆ ಯಾವುದೇ ಕಾರ್ಯಕ್ರಮಗಳನ್ನು ಚಳುವಳಿ ಹಮ್ಮಿಕೊಳ್ಳಲಿಲ್ಲ (ಪರ್ಯಾಯ). ಇದು ದಲಿತ ಮಹಿಳೆಗೆ ಬಾರೀ ಹೊಡೆತ ಕೊಟ್ಟಿತು. ದಲಿತ ಮಹಿಳೆಯ ಪ್ರಶ್ನೆ ಬಂದಾಗ ನಿಜವಾಗಿಯೂ ಸಮಸ್ಯೆಯನ್ನು ಅನುಭವಿಸುತ್ತಿರುವ ದಲಿತ ಮಹಿಳೆಯ ಅಭಿಪ್ರಾಯವನ್ನು ತಿಳಿದುಕೊಳ್ಳುವ ಪ್ರಜಾಸತ್ತಾತ್ಮಕ ನಡವಳಿಕೆಯನ್ನು ದಲಿತ ಸಂಘಟನೆಗಳು ತೋರಲಿಲ್ಲ.

ದಲಿತ ಚಳುವಳಿಯು ದಲಿತ ಮಹಿಳೆಯರನ್ನು ಸಮಾನವಾಗಿ ಕಾಣುವುದರ ಮೂಲಕ ಅವರ ಬೆಳವಣಿಗೆಗೆ ಕಾರಣವಾಗಿದೆ ಎಂದು ಕೆಲವರು ವಾದಿಸುತ್ತಾರೆ. ಹಾಗೆ ಬೆಳವಣಿಗೆ ಹೊಂದಿದ ಮಹಿಳೆಯರು ಯಾವ ವರ್ಗದವರು ಎಂಬುವುದನ್ನು ಮುಖ್ಯವಾಗಿ ಗಮನಿಸಬೇಕಾಗಿದೆ. ದಲಿತ ಚಳುವಳಿಯ ಪ್ರಭಾವದಿಂದ ದು. ಸರಸ್ವತಿ, ಎಂ. ಸುಮಿತ್ರ, ಸಮತಾದೇಶಮಾನೆಯವರು ವಿಶೇಷವಾಗಿ ದಲಿತ ಮಹಿಳಾ ಸಂಶೋಧಕರಾಗಿ. ಬರಹಗಾರರಾಗಿ ಗುರುತಿಸಿಕೊಂಡಿದ್ದಾರೆ ಎಂದು ಹೇಳಬಹುದು. ಆದರೆ ಅಂತಹವರ ಸಂಖ್ಯೆ ಎಷ್ಟು ಇದೆ. ಒಂದು ಎರಡು ಉದಾಹರಣೆಗಳನ್ನಿಟ್ಟುಕೊಂಡು ಅದನ್ನು ಇಡೀ ದಲಿತ ಮಹಿಳಾ ಲೋಕಕ್ಕೆ ಅನ್ವಯಿಸಿ ಹೇಳುವುದು ತಪ್ಪಾಗುತ್ತದೆ.

ದಲಿತ ಸಂಘಟನೆಗಳು ಪುರುಷಾಧಿಪತ್ಯವನ್ನು ಓರೆಗೆ ಹಚ್ಚಲಿಲ್ಲ. ದಲಿತ ಮಹಿಳೆಯರ ಬಿಡುಗಡೆ ಎಲ್ಲವೂ ನಮ್ಮಿಂದಲೇ ಆಗುತ್ತದೆ ಎಂಬ ಭ್ರಮೆ ಅವರಿಗೆ ಇತ್ತು. ಸಮಾಜದಲ್ಲಿ ಹೆಣ್ಣಿಗೆ ಹಾಕಿರುವ ಸೀಮಾರೇಖೆಯ ಬಗ್ಗೆ ಚಿಂತಿಸಲು, ಚರ್ಚಿಸಲು ಮಹಿಳೆಯರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಹಾಗೂ ಈ ಬಗ್ಗೆ ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಹಾಗೂ ತಿದ್ದಿಕೊಳ್ಳಲು ದಲಿತ ಪುರುಷರು ತಯಾರಿರಲಿಲ್ಲ. ಇಡೀ ಚಳುವಳಿಯಲ್ಲಿಯೇ ಜಾತಿ ನ್ಯಾಯ ಮಾತ್ರ ಇತ್ತೇ ಹೊರತು ಲಿಂಗ ನ್ಯಾಯವಿರಲಿಲ್ಲ. ಜಾತಿಯ ಹಿನ್ನೆಲೆಯಿಂದಲೇ ಪುರುಷ, ಮಹಿಳೆ ಇಬ್ಬರೂ ಒಂದೇ ಎಂದು ಸಮಸ್ಯೆಗಳನ್ನು ಸಾರ್ವತ್ರೀಕರಿಸಿದ್ದು ದಲಿತ ಚಳುವಳಿಯ ಮುಖ್ಯ ತೊಡುಕುಗಳಲ್ಲಿ ಒಂದು ಎಂದು ಹೇಳಬಹುದು. ಇದು ಚಳುವಳಿಯ ಆಶಯಕ್ಕೆ ವ್ಯತಿರಿಕ್ತವಾಗಿದೆ. ಇದರ ಬಗ್ಗೆ ದಲಿತ ಚಳುವಳಿ ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗುತ್ತದೆ.

ಮಹಿಳಾ ಚಳುವಳಿಯೂ ಕೂಡ ದಲಿತ ಮಹಿಳೆಯನ್ನು ಮುಖ್ಯವೆಂದು ಪರಿಗಣಿಸಲೇ ಇಲ್ಲ. ದಲಿತ ಚಳುವಳಿಯು ಜಾತಿಯ ಹಿನ್ನೆಲೆಯಿಂದ ಪುರುಷ ಮತ್ತು ಮಹಿಳೆಯರ ಸಮಸ್ಯೆಗಳನ್ನು ಸಾರ್ವತ್ರೀಕರಿಸಿದಂತೆ ಮಹಿಳಾ ಚಳುವಳಿಯು ಲಿಂಗದ ಹಿನ್ನೆಲೆಯಿಂದ ಮೇಲ್ಜಾತಿಯ ಮಹಿಳೆ, ಕೆಳಜಾತಿಯ ಮಹಿಳೆಯರ ಸಮಸ್ಯೆಗಳನ್ನು ಸಾವ್ರತ್ರೀಕರಿಸಿದ್ದು ಮಹಿಳಾ ಚಳುವಳಿಯ ಮುಖ್ಯ ತೊಡಕುಗಳಲ್ಲಿ ಒಂದೆಂದು ಹೇಳಬಹುದು. ಮಹಿಳಾ ಚಳುವಳಿಯೂ ದಲಿತ ಮಹಿಳೆಯನ್ನೂ ಸಹ ಪರಿಗಣಿಸಲಾಗುತ್ತಿದೆ ಎಂದು ಹೇಳಲಾಗುತ್ತಿದೆ ಅಷ್ಟೆ. ಚಳುವಳಿಯಲ್ಲಿ ಮುಖ್ಯ ಪಾತ್ರದಲ್ಲಿರುವವರು, ನಿರ್ಣಯಗಳನ್ನು ತೆಗೆದುಕೊಳ್ಳುವವರು ಮೇಲ್ಜಾತಿಯ ಮಹಿಳೆಯರೇ ಆಗಿದ್ದಾರೆ. ಇಲ್ಲಿ ದಲಿತ ಮಹಿಳೆಗೆ ಯಾವುದೇ ರೀತಿಯ ಅವಕಾಶಗಳು ದೊರೆತಿಲ್ಲ. ಮಹಿಳಾ

ಚಳುವಳಿಯ ಸಕ್ರಿಯತೆಯು ಬಹುಪಾಲು ವರದಕ್ಷಿಣೆ, ಪುರುಷಾಧಿಪತ್ಯ, ಸತಿ ಪದ್ಧತಿ ಉದ್ಯೋಗಸ್ಥ ಮಹಿಳೆಯರ ಸಮಸ್ಯೆಗಳನ್ನೇ ಮುಖ್ಯ ಎಂದು ಪರಿಗಣಿಸುತ್ತದೆ. ಇದಕ್ಕಿಂತಲೂ ಭಿನ್ನವಾದ ದಲಿತ ಮಹಿಳೆಗಿರುವ ಸಮಸ್ಯೆಗಳನ್ನು ಮಹಿಳಾ ಚಳುವಳಿಯು ಮುಖ್ಯವೆಂದು ಪರಿಗಣಿಸುವುದೇ ಇಲ್ಲ. ದಲಿತ ಮಹಿಳೆಯರು ಜಾತಿಯ ಕಾರಣಕ್ಕಾಗಿ ದಲಿತ ವರ್ಗದ ಕಕ್ಷೆಯಲ್ಲಿ ಸೇರಿಕೊಳ್ಳುವ ಬದಲು ಲಿಂಗದ ಕಾರಣದ ಹಿನ್ನೆಲೆಯಿಂದ ಮಹಿಳಾ ಚಳುವಳಿಯನ್ನು ಸೇರಿಕೊಳ್ಳುವುದು ಸೂಕ್ತ ಎಂಬ ಆಶಯ ಮಹಿಳಾ ಚಳುವಳಿಯಲ್ಲಿ ಮನೆ ಮಾಡಿದೆ. ಮಹಿಳಾ ಚಳುವಳಿಯು ಪುರುಷಾದಿಪತ್ಯವನ್ನು ವಿಮರ್ಶೆ ಮಾಡಿದ ಹಾಗೆ ಬ್ರಾಹ್ಮಣಶಾಹಿಯನ್ನು ವಿಮರ್ಶೆಗೆ ಒಳಪಡಿಸುವುದಿಲ್ಲ.

ಈ ಸಂದರ್ಭದಲ್ಲಿ ಸ್ತ್ರೀ ಬವಣೆಯನ್ನು ಪ್ರಧಾನ ಚರ್ಚೆಯಾಗಿಟ್ಟುಕೊಂಡು ಹೊರಬಂದ ಬಹುಪಾಲು ಸಾಹಿತ್ಯ ಅಧ್ಯಯನಗಳು ದಮನಿತ ವರ್ಗದ ಮಹಿಳೆಯರನ್ನು ಸ್ವಾತಂತ್ರ್ಯ ಮತ್ತು ಶಕ್ತಿಯ ನೆಲೆಯಲ್ಲಿ ನಿರ್ವಚಿಸಿವೆ. ಮೇಲ್ಜಾತಿ, ಮೇಲ್ವರ್ಗದ ಸ್ತ್ರೀಯರನ್ನು ಶೋಷಣೆಯ ನಿಲುಮೆಯಲ್ಲಿ ವ್ಯಾಖ್ಯಾನಿಸುತ್ತ ಅವರ ಬಂಧಿತ ಬದುಕಿನ ಮುಕ್ತಿಯ ಆಶಯ ಮಾದರಿಗಳನ್ನಾಗಿ ಕೆಳಸಮುದಾಯದ ಹೆಣ್ಣುಮಕ್ಕಳ ಜೀವನ ಶೈಲಿಯನ್ನು ಕಟ್ಟಿಕೊಡುತ್ತವೆ. ಕೆಳಜಾತಿಯ, ಕೆಳವರ್ಗದ ಮಹಿಳೆಯರ ಮಾತೃವಂಶಿಯರು, ಪ್ರತಿಭಟಿಸುವ ಛಾತಿವುಳ್ಳವರು, ಬಂಧನದ ಬದುಕಿಗೆ ಅಳವಡದವರು, ಕುಟುಂಬದಲ್ಲಿ ಮತ್ತು ಅವರ ಸಮಾಜದಲ್ಲಿ ಉನ್ನತ ಸ್ಥಾನ-ಮಾನ ಉಳ್ಳವರು ಎನ್ನುವ ಗ್ರಹಿಕೆಯನ್ನೇ ಇದುವರೆಗಿನ ಅಧ್ಯಯನಗಳು ಕಟ್ಟಿಕೊಟ್ಟಿವೆ. ಡಿ.ಆರ್. ನಾಗರಾಜ್ ಅವರಂತಹ ಸಾಂಸ್ಕೃತಿಕ ಚಿಂತಕರು ಕೂಡ ಶೂದ್ರಾತಿಶೂದ್ರ ಲೋಕಗಳಲ್ಲಿ ಸ್ತ್ರೀಶಕ್ತಿ ಮಾನ್ಯತೆ ಇದೆ ಎಂದು ನಂಬುತ್ತಾರೆ. ಮೇಲ್ಜಾತಿ/ಮೇಲ್ವರ್ಗದವರು ಶೂದ್ರ ಮತ್ತು ದಲಿತ ಮಹಿಳೆಯರ ಕುರಿತು ನೀಡುವ ಈ ಬಗೆಯ ನಿರ್ವಚನಗಳು, ಕೆಳಸಮುದಾಯದ ಮಹಿಳೆಯರು ಶೋಷಿತರು ಎಂದು ಆಲೋಚಿಸಲು ಯಾವುದೇ ರೀತಿಯ ಅವಕಾಶವನ್ನು ನೀಡುವುದಿಲ್ಲ. ಮೇಲ್ಜಾತಿ/ಮೇಲ್ವರ್ಗದ ಸ್ತ್ರೀಯರು ದೌರ್ಜನ್ಯಕ್ಕೆ ಒಳಗಾದವರು ಎನ್ನುವ ಗ್ರಹಿಕೆಯು ಅವರ ಸಮಸ್ಯೆಗಳನ್ನು ಕೇಳಿಸಿಕೊಳ್ಳುವ ಒಲವನ್ನು ಸಮಾಜದಲ್ಲಿ ಹುಟ್ಟುಹಾಕುತ್ತವೆ (ಸಂವಾದ, ೨೦೦೪, ಪು. ೫೨-೫೬). ಮಹಿಳಾ ಅಧ್ಯಯನಗಳು ಇದನ್ನು ಚಾಚುತಪ್ಪದೆ ಪಾಲಿಸುತ್ತಿವೆ. ಈ ಕಾರಣದಿಂದ ದಲಿತ ಮಹಿಳಾ ಅಧ್ಯಯನಗಳು ಇದಕ್ಕಿಂತ ಭಿನ್ನವಾದ ದಾರಿಗಳನ್ನು ಹುಡುಕಿಕೊಳ್ಳಬೇಕಾಗಿದೆ.

ಈ ಕಾರಣದಿಂದಾಗಿ ದಲಿತ ಮಹಿಳೆಯು ಜಾತಿ ಕಾರಣಕ್ಕಾಗಿ ದಲಿತ ಚಳುವಳಿಯ ಮೂಲಕ ಗುರುತಿಸಿಕೊಳ್ಳಬೇಕೊ ಅಥವಾ ಲಿಂಗದ ಹಿನ್ನೆಲೆಯಿಂದ ಮಹಿಳಾ ಚಳುವಳಿಗಳ ಮೂಲಕ ಗುರುತಿಸಿಕೊಳ್ಳಬೇಕೊ ಎಂಬುವುದರಲ್ಲಿ ಸ್ಪಷ್ಟತೆ ಸಿಗಬೇಕಾಗಿದೆ. ದಲಿತ ಮಹಿಳೆಗೆ ಸಂಬಂಧಿಸಿದಂತೆ ಮಹಿಳಾ ಚಳುವಳಿ ಆತ್ಮವಿಮರ್ಶೆಯನ್ನು ಮಾಡಿಕೊಳ್ಳಬೇಕಾಗಿದೆ. ಇದು ಈಗಿರುವ ತುರ್ತು.

ಜಾಗತೀಕರಣ ಪ್ರಕ್ರಿಯೆಯಲ್ಲಿ ದಲಿತ ಮಹಿಳೆಯ ಜೀವನ ಅನೇಕ ಪಲ್ಲಟಗಳಿಗೆ ಒಳಗಾಗುತ್ತಿದೆ. ತೀವ್ರ ಅಸಡ್ಡೆಗೆ ತುತ್ತಾಗಿರುವ ಕೃಷಿ, ಗಣಿ, ಕಟ್ಟಡನಿರ್ಮಾಣ, ಜಾಡಮಾಲಿ ಕ್ಷೇತ್ರ ಮೊದಲಾದ ಕ್ಷೇತ್ರಗಳಲ್ಲಿ ಕಾರ್ಯನಿರತರಾಗಿರುವ ಕೋಟ್ಯಾಂತರ ದಲಿತ ಮಹಿಳೆಯರ ಸ್ಥಿತಿ ಶೋಚನೀಯವಾಗಿದೆ. ಈ ನಿಟ್ಟಿನಲ್ಲಿ ದಲಿತ ಮಹಿಳೆಯ ಹಿನ್ನೆಲೆಯಿಂದ ಅಭಿವೃದ್ಧಿ ಮಾದರಿಗಳನ್ನು ನೋಡಬೇಕಿದೆ, ಆ ಮೂಲಕವೇ ಪ್ರಶ್ನೆ ಮಾಡಬೇಕಿದೆ.

೫.೨ ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ:

ದಲಿತ ಮಹಿಳೆಗೆ ಇರುವ ಸಮಸ್ಯೆಗಳು ಮತ್ತು ಸವಾಲುಗಳ ಹಿನ್ನೆಲೆಯಲ್ಲಿ ಹಾಗೂ ದಲಿತ ಚಳುವಳಿ ಮತ್ತು ಮಹಿಳಾ ಚಳುವಳಿಗಳು ದಲಿತ ಮಹಿಳೆಯನ್ನು ನಿರ್ಲಕ್ಷಿಸಿರುವ ಹಿನ್ನೆಲೆಯಲ್ಲಿ ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆಯನ್ನು ಕುರಿತು ಯೋಚಿಸಬೇಕಾಗಿದೆ. ಭಾರತದ ಪಟ್ಟಭದ್ರ ಹಿತಾಸಕ್ತಿಯನ್ನು ಹೊಂದಿರುವ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆ, ಅದಕ್ಕೆ ತಕ್ಕ ಹಾಗೇ ಇರುವ ಸಾಮಾಜಿಕ ಅಂತಸ್ತು, ಸಮಾಜದೊಳಗಿನ ಸ್ಥಾನ, ಹಾಗೆಯೇ ಅವುಗಳಿಗೆ ಹೊಂದಿಕೊಂಡಂತೆ ಇರುವ ನೀತಿ- ನಿಯಮಗಳು, ಲೋಕ-ರೂಢಿಗಳು ಇವುಗಳನ್ನು ಒಪ್ಪಿಕೊಂಡು ಸಾಮಾಜಿಕ ಬದುಕನ್ನು ನಿಯಂತ್ರಿಸುವ ಮತ್ತು ನಿಯಂತ್ರಣಕ್ಕೆ ಒಳಗೊಳ್ಳುವ ಸಮುದಾಯಗಳು ಸಾಕಷ್ಟು ಸಮಸ್ಯೆಗಳನ್ನು ಹೆದರಿಸುತ್ತಿವೆ. ಇವುಗಳ ಹಿನ್ನೆಲೆಯಲ್ಲಿ ದಲಿತ ಮಹಿಳಾ ಚಳುವಳಿಗಳ ಆಶಯಗಳನ್ನು ಕುರಿತು ಕ್ರಿಯಾಯೋಜನೆಗಳನ್ನು ರೂಪಿಸುವ ತುರ್ತು ಇದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಡೆಸುವಂತಹ ಬದುಕು ಅಸಮಾನತೆಯ ಸಾಂಪ್ರದಾಯಿಕ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ವೈರುದ್ಯಗಳು ಕಂಡುಬರುತ್ತವೆ. ಇವುಗಳು ಇರುವ ವ್ಯವಸ್ಥೆಯನ್ನು ಪ್ರಶ್ನಿಸುವಂತಹದ್ದಾಗಿದ್ದು ಸಾಮುದಾಯಿಕ ಸಮಾನತೆಗಳು ಎಲ್ಲಿಯವರಿಗೂ ಸಿಗುವುದಿಲ್ಲವೊ ಅಲ್ಲಿಯವರೆಗೆ ಜಾತಿ ವ್ಯವಸ್ಥೆ ಇರುತ್ತದೆ. ಹಕ್ಕನ್ನು ಆಡಳಿತಾತ್ಮಕವಾಗಿ ಪಡೆಯುವತ್ತ ದಲಿತ ಮಹಿಳಾ ಚಳುವಳಿಯು ಮುಖ ಮಾಡಬೇಕಾಗಿದೆ. ಪ್ರಸ್ತುತದಲ್ಲಿ ದಲಿತ ಮಹಿಳಾ ಚಳುವಳಿಯನ್ನು ಮಾತನಾಡುವಾಗ ದಲಿತ ಮಹಿಳಾ ಚಳುವಳಿಗಳು ಇಲ್ಲ. ಅವುಗಳನ್ನು ಕಟ್ಟಬಯಸುವ ಆಶಯವನ್ನಿಟ್ಟುಕೊಂಡೇ ನಾವು ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆಯನ್ನು ಕುರಿತು ಮಾತನಾಡಬೇಕಾಗಿದೆ. ಅನೇಕ ಎನ್.ಜಿ.ಓ ಗಳು ದಲಿತ ಮಹಿಳಾ ಚಳುವಳಿಯನ್ನು ರೂಪಿಸುವ ಬರದಲ್ಲಿ ಕೆಲಸ ಮಾಡುತ್ತಿವೆ. ಅಕಾಡೆಮಿಕ್ ಕ್ಷೇತ್ರವೂ ಸಹ ದಲಿತ ಮಹಿಳಾ ಪರಿಕಲ್ಪನೆಗಳನ್ನು ಕುರಿತು ಕ್ರಿಯಾ ಯೋಜನೆಗಳನ್ನು ರೂಪಿಸುತ್ತಿವೆ. ಇವೆರಡರಲ್ಲಿಯೂ ತೊಡಕುಗಳಿವೆ. ಒಂದು ಆರ್ಥಿಕ ಲಾಭವನ್ನು ದೃಷ್ಟಿಯಲ್ಲಿರಿಸಿಕೊಂಡು ಮಾಡಿದರೆ ಇನ್ನೊಂದು ವೈಯಕ್ತಿಕ ಬೆಳವಣಿಗೆಯ ದೃಷ್ಟಿಯಿಂದ ದಲಿತ ಮಹಿಳೆಯನ್ನು ಉಚಿತವಾದ ಸಂಪನ್ಮೂಲವಾಗಿಸಿಕೊಳ್ಳುತ್ತಿವೆಯೇನೊ ಎನಿಸುತ್ತದೆ. ಇವುಗಳೇನೇ ಇದ್ದರೂ ಕರ್ನಾಟಕದ ಮಟ್ಟಿಗೆ ದಲಿತ ಮಹಿಳಾ ಚಳುವಳಿಗಳು ರೂಪಗೊಳ್ಳಲು ಆಗಿಲ್ಲ. ಇತರ ಚಳುವಳಿಗಳಲ್ಲಿ ಮುಖ್ಯ ಪಾತ್ರಗಳಲ್ಲಿ ದಲಿತ ಮಹಿಳೆ ಇಲ್ಲ ಎಂಬುವುದು ಸತ್ಯ.

ವೈಚಾರಿಕತೆ ಕಡಿಮೆ ಇದ್ದು ಸಾಂಪ್ರದಾಯಿಕ ಕಟ್ಟು ಕಟ್ಟಳೆಗಳು ದಲಿತ ಮಹಿಳೆಯನ್ನು ಬಂದಿಸಿರುವುದರಿಂದ ಹಾಗೂ ಅವುಗಳನ್ನು ಪೋಷಿಸಿಕೊಂಡು ಬಂದಿರುವ ದಲಿತ ಸಮುದಾಯಗಳಿಗೆ ಪ್ರಜಾಪ್ರಭುತ್ವದ ಸಾಮಾಜಿಕ ನ್ಯಾಯ ಮತ್ತು ಸೌಲಭ್ಯಗಳು ಇನ್ನೂ ಗೊತ್ತಿಲ್ಲ. ಹಾಗೆಯೇ ಅವರಿಗೆ ಗೊತ್ತಾಗದಂತಹ ವಾತಾವರಣವೂ ಕೂಡ ಇದೆ. ಇವು ಆರ್ಥಿಕ ಅಸಮಾನತೆ, ಭೂ ಹೀನತೆ, ಉದ್ಯೋಗ ಹೀನತೆ ಸೌಲಭ್ಯ ಹೀನತೆಯಿಂದ ಬಳಲುತ್ತಿವೆ. ಇಂತಹ ಸಾಂಸ್ಕೃತಿಕ ವಾತಾವರಣದಲ್ಲಿ ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ಇದೆ. ದಲಿತ ಮಹಿಳೆಯು ಇತರ ಮಹಿಳೆಯರಿಂದ, ಮೇಲ್ಜಾತಿಯ ಪುರುಷರಿಂದ, ತನ್ನ ಸಮುದಾಯದ ಪುರುಷರಿಂದಲೂ ಆಗುತ್ತಿರುವ ಶೋಷಣೆಯನ್ನು ಪ್ರಶ್ನಿಸಲು ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ಇದೆ. ಇದರ ಮೂಲಕ ಅವರು ತಮ್ಮ ಸಮಸ್ಯೆಯನ್ನು ತಾವೇ ಬಗೆಹರಿಸಿಕೊಳ್ಳಬೇಕಾಗಿದೆ.

ದಲಿತ ಮಹಿಳೆಗೆ ಇರುವ ಸಮಸ್ಯೆಗಳು, ಸವಾಲುಗಳು ಹಲವಾರು. ಅವುಗಳನ್ನು ಮೀರಬೇಕಾದರೆ ದಲಿತ ಮಹಿಳೆಯರೆಲ್ಲಾ ಸೇರಿ ಸಂಘಟಿತರಾಗಬೇಕಾಗಿದೆ. ದಲಿತ ಮಹಿಳೆಯ ಸಮಸ್ಯೆ ಮತ್ತು ಸವಾಲುಗಳು ಈ ರೀತಿಯಾಗಿವೆ;

೧. ಮಹಿಳೆಯ ಕಾರಣದಿಂದ ಆಗುತ್ತಿರುವ ಅಸ್ಪೃಶ್ಯತೆಯ ಅವಮಾನ ಮತ್ತು ಜಾತಿಯ ದೌರ್ಜನ್ಯ.

೨. ಕೃಷಿ, ಕಾರ್ಖಾನೆ ಮತ್ತಿತರ ಕೆಲಸ ಮಾಡುವ ಸ್ಥಳಗಳಲ್ಲಿ ವೇತನ, ಕೂಲಿ ತಾರತಮ್ಯ ಹಾಗೂ ಲೈಂಗಿಕ ಕಿರುಕುಳ.

೩. ಆಳವಾಗಿ ಬೇರೂರಿರುವ ಅನಕ್ಷರತೆ, ಅಜ್ಞಾನ ಮತ್ತು ಮೂಢನಂಬಿಕೆ.

೪. ವ್ಯವಸ್ಥೆಯ ಹುನ್ನಾರಕ್ಕೆ ಒಳಗಾಗಿ ರೂಪಗೊಂಡ ದೇವದಾಸಿ ಪದ್ಧತಿ.

೫. ರಾಜಕೀಯ ಪ್ರಾತಿನಿಧ್ಯ ಮತ್ತು ಸ್ವಾತಂತ್ರ್ಯ ನಾಯಕತ್ವಕ್ಕೆ ಮನ್ನಣೆ ಇಲ್ಲದಿರುವುದು.

೬. ದಲಿತ ಸಂಘಟನೆ ಹಾಗೂ ಸ್ವಯಂ ಸೇವಾ ಸಂಸ್ಥೆಗಳಲ್ಲಿ ದಲಿತ ಮಹಿಳೆಯರಿಗೆ ಸೂಕ್ತ ಪ್ರಾತಿನಿಧ್ಯ ಇಲ್ಲದಿರುವುದು.

೭. ದಲಿತ ಮಹಿಳೆಯರಿಗೆ ಹಕ್ಕು ಮತ್ತು ಕಾನೂನಿನ ತಿಳುವಳಿಕೆ ಕಡಿಮೆ ಇರುವುದು.

೮. ಮಾನಸಿಕ ಕೀಳರಿಮೆ, ಧಾರ್ಮಿಕ ಮೌಢ್ಯ, ಬಾಲ್ಯವಿವಾಹ ಪದ್ಧತಿ.

೯. ಭೂಮಿ ಇಲ್ಲದಿರುವುದು, ಅಲ್ಪ-ಸ್ವಲ್ಪ ಭೂಮಿಯಲ್ಲೂ ಸಮಾನ ಪಾಲು ದೊರೆಯದಿರುವುದು.

೧೦. ಉಚಿತ ಹಾಗೂ ಕಡ್ಡಾಯ ಶಿಕ್ಷಣದಿಂದ ವಂಚಿತರಾಗಿರುವುದು.

೧೧. ಆರೋಗ್ಯದ ಬಗ್ಗೆ ಅರಿವಿಲ್ಲದಿರುವುದು ಮತ್ತು ಆರೋಗ್ಯದ ಹಕ್ಕುಗಳು ಎಟುಕದೇ ಇರುವುದು.

೧೨. ಪುರುಷ ಪ್ರಧಾನ ಸಮಾಜ ಹಾಗೂ ಬ್ರಾಹ್ಮಣ ಸಂಸ್ಕೃತಿಯ ಬಿಗಿ ಹಿಡಿತ.

೧೩. ಮಹಿಳೆಯರ ಸ್ವಸಹಾಯ ಗುಂಪುಗಳು ಮೇಲ್ಜಾತಿಯವರ ನಿಯಂತ್ರಣದಲ್ಲಿದ್ದು ದಲಿತ ಮಹಿಳೆಯರನ್ನು ಪ್ರತಿಭಟನೆ ಇತ್ಯಾದಿಗಳಲ್ಲಿ ಸಂಖ್ಯೆಯನ್ನಾಗಿ ಬಳಸಿಕೊಳ್ಳುತ್ತಿರುವುದು.

೧೪. ಕೌಟುಂಬಿಕ ದೌರ್ಜನ್ಯ ಕಾಯಿದೆಯಲ್ಲಿ ದಲಿತ ಮಹಿಳೆಯರಿಗೆ ವಿಶೇಷ ಗಮನ ನೀಡದಿರುವುದು.

೧೫. ದಲಿತ ಮಹಿಳೆಯನ್ನು ಪ್ರತಿನಿಧಿಸುವ ದಲಿತ ಮಹಿಳೆಯರದೇ ಆದ ಸಂಘಟನೆ, ವೇದಿಕೆ ಅಸ್ತಿತ್ವದಲ್ಲಿ ಇಲ್ಲದೇ ಇರುವುದು.

೧೬. ದಲಿತ ಮಹಿಳೆಯರ ಕುರಿತು ಸಮಾಜ ಅವರಿಗೆ ದುಡಿಮೆಯ ಸ್ವಾತಂತ್ರ್ಯ, ಲೈಂಗಿಕ ಸ್ವಾತಂತ್ರ್ಯವಿದೆ ಎಂದು ತಪ್ಪಾಗಿ ಅರ್ಥ ಮಾಡಿಕೊಂಡಿರುವುದು.

ಮೇಲಿನ ಎಲ್ಲಾ ಕಾರಣಗಳಿಂದಾಗಿ ದಲಿತ ಮಹಿಳೆ ತನ್ನ ಸಮಸ್ಯೆಗಳನ್ನು ತಾನೇ ಬಗೆಹರಿಸಿಕೊಳ್ಳುವ ಸಲುವಾಗಿ ದಲಿತ ಮಹಿಳಾ ಚಳುವಳಿಯನ್ನು ತಾನೇ ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

೫.೩ ದಲಿತ ಮಹಿಳಾ ಚಳುವಳಿಯ ಸಾಧ್ಯತೆಗಳು ಮತ್ತು ರಾಜಕೀಯ ಪ್ರಶ್ನೆ:

ಈ ದೇಶದಲ್ಲಿ ದಲಿತರು ಆಳುವ ಸಮುದಾಯವಾಗಬೇಕೆಂಬ ಕನಸ್ಸನ್ನು ಅಂಬೇಡ್ಕರವರು ಕಂಡಿದ್ದರು. ಮಧ್ಯಪ್ರದೇಶದ ಬಹುಜನ ಸಮಾಜಪಕ್ಷವು ಅಂಬೇಡ್ಕರವರ ಕನಸ್ಸನ್ನು ನನಸು ಮಾಡಿತು ಎಂದು ಹೇಳಬಹುದು. ಈ ಪಕ್ಷದ ನೇತಾರಳಾದ ಮಾಯಾವತಿಯವರು ಕಾನ್ಸಿರಾಮರವರ ಪ್ರೋತ್ಸಾಹದ ಮೇರೆಗೆ ಮಧ್ಯಪ್ರದೇಶದ ಮುಖ್ಯಮಂತ್ರಿಯಾದುದು ಭಾರತದ ಚರಿತ್ರೆಯಲ್ಲಿ ಅದ್ವಿತೀಯವಾದುದು.ಇದನ್ನು ಮುಖ್ಯವಾಗಿ ದಲಿತ ಮಹಿಳಾ ರಾಜಕಾರಣದ ಹಿನ್ನೆಲೆಯಲ್ಲಿಯೇ ಚರ್ಚಿಸಬೇಕಾಗಿದೆ. ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ದಲಿತ ಮಹಿಳೆಯೊಬ್ಬರು ಮುಖ್ಯಮಂತ್ರಿಯಾಗಿರುವುದು ನಿರ್ಲಕ್ಷಿಸುವಂತಹ ವಿಷಯವಲ್ಲ. ಇಡೀ ದಲಿತ ಮಹಿಳಾ ಸಮುದಾಯಕ್ಕೆ ಮಾಯಾವತಿಯವರು ಮನೋಬಲವನ್ನು ತಂದುಕೊಟ್ಟಿದ್ದಾರೆ. ಮಹಿಳಾ ಸ್ವಾತಂತ್ರ್ಯ ಹೋರಾಟದ ವಿವಿಧ ಕಾಣಿಕೆಗಳನ್ನು ವಿವಿಧ ಚರಿತ್ರೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾ ಹೋದರೆ ದಲಿತ ಮಹಿಳೆ ವಿಮೋಚನೆ ಮತ್ತು ಮಹಿಳಾ ವಿಮೋಚನೆ ಅಂಬೇಡ್ಕರರ ರಾಜಕೀಯ ವಿಚಾರಧಾರೆಯಿಂದ ಮಾತ್ರ ಸಾಧ್ಯ.

ಸಮಾಜದ ಅಮೂಲಾಗ್ರ ಬದಲಾವಣೆ, ಒಟ್ಟು ಶೋಷಿತರ ವಿಮೋಚನೆಯು ಕ್ರಾಂತಿಕಾರಕ ಮಾರ್ಗವಾಗಿದೆ. ಕ್ರಾಂತಿಕಾರ ಮಾರ್ಗದ ವ್ಯಾಖ್ಯಾನ ಅಂಬೇಡ್ಕರರ ಪ್ರಕಾರ ಶಸಸ್ತ್ರ ದಂಗೆ ಮತ್ತು ಶಸಸ್ತ್ರಗಳನ್ನು ಉಪಯೋಗಿಸದೇನೇ ಪ್ರಜಾಸತ್ತಾತ್ಮಕ ಮತ್ತು ಅಹಿಂಸಾತ್ಮಕ ದಂಗೆ, ಬಂಡವಾಳಶಾಹಿವಾದ ಹಾಗೂ ಇವತ್ತಿನ ಹೊಸ ಜಾಗತೀಕರಣದ ಹಿನ್ನೆಲೆಯಲ್ಲಿ ನಡೆಯುತ್ತಿರುವಂತಹ ಬಹುರಾಷ್ಟ್ರೀಯ ಕಂಪನಿಗಳ ನೂತನ ಸವಾಲುಗಳನ್ನು ಒಟ್ಟಾರೆ ತೆಗೆದುಕೊಂಡಾಗಲೂ ಕೂಡ ಭಾರತೀಯ ಪ್ರಜಾತಂತ್ರವನ್ನು, ಭಾರತೀಯ ಸಂಸತ್ತನ್ನು ಶೋಷಿತರು ತಮ್ಮ ಕೈಯಲ್ಲಿ ತೆಗೆದುಕೊಳ್ಳಲಿಕ್ಕೆ ಶಸಸ್ತ್ರ ದಂಗೆ ಅಗತ್ಯವಿಲ್ಲ. ಕಾರಣ ಇಡೀ ಜಗತ್ತಿನಲ್ಲಿ ಮೊಟ್ಟಮೊದಲು ಕಮಿನಿಷ್ಟ್ ಸರ್ಕಾರ ಕೇರಳದಲ್ಲಿ ರಚನೆಯಾದಾಗ ಅದನ್ನು ಎಲ್ಲರೂ ಶಸ್ತ್ರಾಸ್ತ್ರವಾದ ದಂಗೆ ಎಂದು ಕರೆದರು. ಆದರೆ ಅದು ಅಂಬೇಡ್ಕರವರು ಹೇಳಿದಂತಹ ಒಂದು ಪ್ರಜಾಸತ್ತಾತ್ಮಕ ಅಹಿಂಸಾತ್ಮಕವಾದಂತಹ ದಂಗೆ. ಅಂಬೇಡ್ಕರವರು ಮಹಿಳೆಯರಿಗೆ ಕೊಟ್ಟಂತಹ ಮತದಾನದ ಹಕ್ಕನ್ನು ಗಾಂದೀಜಿಯವರು ನಿರಾಕರಿಸಿದಾಗ ಅಂಬೇಡ್ಕರವರು ಶೋಷಿತ ಮಹಿಳೆಯರ ಪರವಾಗಿಯೇ ಹೋರಾಟ ಮಾಡಿ ಮತದಾನದ ಹಕ್ಕನ್ನು ಜಾರಿಗೆ ಬರುವಂತೆ ಮಾಡಿದರು. ಇದೇ ಓಟಿನ ಹಕ್ಕನ್ನು ಪ್ರಯೋಗಿಸಿಯೇ ಮಧ್ಯಪ್ರದೇಶದಲ್ಲಿ ಮಾಯಾವತಿಯವರು ಸಿ.ಎಮ್ ಆಗಿದ್ದು. ಇದು ಎಲ್ಲಾ ರಾಜ್ಯ, ಜಿಲ್ಲೆಗಳಲ್ಲಿಯೂ ನಡೆಯಬೇಕಿದೆ.

ಬಿಹಾರದಲ್ಲಿ ನಕ್ಸಲ್‌ಕ್ರಾಂತಿ ವಿಫಲವಾಗಿದೆ. ನಕ್ಸಲ್ ಮೂಲಕ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂಬ ಆರೋಪವಿದೆ. ದಲಿತರು ಹೆಚ್ಚು ಶೋಷಣೆಗೆ ಒಳಗಾದ ಕಾರಣ ಅದರ ಸೇಡನ್ನು ತೀರಿಸಿಕೊಳ್ಳಲು ದಲಿತರು ನಕ್ಸಲರಾಗಿ ಪರಿವರ್ತನೆಯಾಗುತ್ತಿದ್ದಾರೆ. ದೇಶದ ಯಾವುದೇ ಸಾಮಾಜಿಕ ಚಳುವಳಿಗಳಲ್ಲಿಯೂ ದಲಿತ ಮಹಿಳೆ ಇಲ್ಲದಿದ್ದರೂ ನಕ್ಸಲ್ ಬಾರಿ ಹೋರಾಟಗಳಲ್ಲಿ ಹೆಚ್ಚು ಪ್ರಮಾಣದಲ್ಲಿ ದಲಿತ ಮಹಿಳೆಯರನ್ನು ಕಾಣಬಹುದಾಗಿದೆ. ಅಂತಹದರಲ್ಲಿ ಪ್ರಸಿದ್ಧವಾಗಿರುವವರೆಂದರೆ ಆಂಧ್ರಪ್ರದೇಶದ ವಸೆರಾಹುಲಮ್ಮ. ಇಂತಹ ಕ್ರಾಂತಿಕರಾಕ ಮಾರ್ಗವನ್ನು ಬಿಟ್ಟು ವ್ಯವಸ್ಥೆಯಲ್ಲಿಯೇ, ವ್ಯವಸ್ಥೆಯೊಟ್ಟಿಗೆ ಇದ್ದು ತಮ್ಮ ಹಕ್ಕುಗಳನ್ನು ಚಲಾಯಿಸುವ ಚತುರತೆಯನ್ನು, ಗಟ್ಟಿತನವನ್ನು ದಲಿತ ಮಹಿಳೆ ತಂದುಕೊಳ್ಳಬೇಕಾಗಿದೆ.

ಮಹಿಳೆಯರು ತಮ್ಮ ಸಾಂಸ್ಥಿಕ ಬೇರೆ ಬೇರೆ ರಚನೆಗಳಲ್ಲಿ ಪಾಲ್ಗೊಳ್ಳುವಿಕೆಯೂ ಆಗಬೇಕಾಗಿದೆ. ಇದಕ್ಕೆ ಸಂಬಂಧಿಸಿದಂತೆ ಎರಡು ರೀತಿಯ ವಾದಗಳನ್ನು ನಾವು ನೋಡಬಹುದು. ಸ್ವಾತಂತ್ರ್ಯದ ನಂತರದಲ್ಲಿ ಮಹಿಳೆಯರೆಲ್ಲರೂ ಹೊರಗಡೆ ಬಂದಿದ್ದಾರೆ. ದಲಿತ ಮಹಿಳೆಯರು ಹೆಚ್ಚಿನ ಸ್ವಾತಂತ್ರ್ಯವನ್ನು ಹೊಂದಿದ್ದು ಆರ್ಥಿಕ ಸ್ವಾವಲಂಬನೆಯನ್ನು ಹೊಂದಿದ್ದಾರೆ ಎಂಬ ಪೂರ್ವಗ್ರಹಗಳನ್ನು ಹುಟ್ಟುಹಾಕಲಾಯಿತು. ಈ ಕಾರಣದಿಂದಲೇ ದಲಿತ ಮಹಿಳೆಯರಿಗೆ ಮೀಸಲಾತಿ ಬೇಡ ಎಂಬ ಚರ್ಚೆಗಳು ನಡೆದವು. ನಾವು ಇದನ್ನು ಹೇಗೆ ನೋಡಬೇಕು? ಕೆಲವರಂತೂ ಮೇಲ್ಮಟ್ಟದಲ್ಲಿ ದಲಿತ ಮಹಿಳೆಯರಿಗೆ ಮೀಸಲಾತಿ ಬೇಡ ಗ್ರಾಮೀಣ ಮಟ್ಟದಲ್ಲಿ ಮಾತ್ರ ಕೊಡೋಣ ಎಂಬುವ ಮಾತುಗಳನ್ನು ಹಾಡುತ್ತಾರೆ. ಗ್ರಾಮೀಣದಲ್ಲಿರುವಂತೆ ನಗರಪ್ರದೇಶದಲ್ಲಿಯೂ ದಲಿತ ಮಹಿಳೆ ಅದೇ ತರನಾದಂತಹ ಕಷ್ಟವನ್ನು ಅನುಭವಿಸುತ್ತಿದ್ದಾಳೆ ಎಂಬುವುದನ್ನು ಇಂತಹವರು ಯಾಕೆ ಪರಿಗಣಿಸುತ್ತಿಲ್ಲ. ದಲಿತ ಮಹಿಳೆಯರಿಗೂ ಶೇಕಡ ೩೦ ರಷ್ಟು ಮೀಸಲಾತಿ ಕೊಡಬೇಕೆಂಬ ಪ್ರಸ್ತಾಪ ಬಂತು ಹಲವಾರು ಸರ್ಕಾರಗಳು ಬಂದು ಹೋದವು ಆದರೆ ಇದನ್ನು ಪಾಸು ಮಾಡಲಿಕ್ಕೆ ಯಾರಿಗೂ ಆಗಲಿಲ್ಲ. ಮಹಿಳಾ ಮೀಸಲಾತಿ ಪ್ರಶ್ನೆಯನ್ನು ನೋಡಿದರೆ ೧೦ ವರ್ಷಗಳಿಂದಲೂ ಇದರ ಕುರಿತು ಸಾಕಷ್ಟು ಚರ್ಚೆಗಳು ನಡೆಯುತ್ತಿವೆ. ಇದು ಒಂದು ರೀತಿಯಲ್ಲಿ ಒಳ್ಳೆಯದೇ ಆಯಿತು. ಇದರ ಮಾದರಿಯನ್ನೇ ಇಟ್ಟುಕೊಂಡು ಬೇರೆ ಬೇರೆ ಸಮುದಾಯಗಳು, ಬೇರೆ ಬೇರೆ ಗುಂಪುಗಳು ಬೇರೆ ಬೇರೆ ಕಾರಣಗಳನ್ನು ಇಟ್ಟುಕೊಂಡು ಮೀಸಲಾತಿಯನ್ನು ಕೇಳುತ್ತಿವೆ. ಪಾರ್ಲಿಮೆಂಟಿನಲ್ಲಿ ಹೆಚ್ಚು ಹಿಂದುಳಿದ ವರ್ಗಗಳು ಕಾಣಿಸಿಕೊಳ್ಳುತ್ತಿರುವುದರಿಂದ ಅವರ ಒಳಗಡೆಯೂ ಕೂಡ ವರ್ಗಗಳನ್ನು ವಿಂಗಡಿಸುವುದರ ಮೂಲಕ ಮೀಸಲಾತಿಯನ್ನು ಕೊಡಬೇಕೆಂಬ ಚರ್ಚೆಗಳಾದವು. ಕೆಲವು ಸ್ತ್ರೀವಾದಿಗಳಂತೂ ಇದರ ವಿರುದ್ಧ ಕೆಂಡ ಕಾರಿದರು. ಇದು ಮಹಿಳೆಯರ ಮೇಲೆಯೇ ಮಹಿಳೆಯರನ್ನು ಎತ್ತಿ ಕಟ್ಟುವ ಪುರುಷಶಾಹಿಯ ಉನ್ನಾರ ಎಂದರು. ಎಲ್ಲಾ ಮಹಿಳೆಯರ ಸಮಸ್ಯೆಗಳನ್ನು ಒಂದೇ ತಕ್ಕಡಿಯಲ್ಲಿ ಹಾಕಿ ತೂಗಲು ಸಾಧ್ಯವಿಲ್ಲದ ಕಾರಣ ಮಹಿಳೆಯರಲ್ಲಿಯೂ ಕೂಡ ಒಳ ಮೀಸಲಾತಿ ಜಾರಿಗೊಳ್ಳಲೇಬೇಕು. ಶೇಕಡ ೩೩ ರಷ್ಟು ಮಹಿಳಾ ಮೀಸಲಾತಿಯೇ ಇನ್ನೂ ಜಾರಿಗೊಂಡಿಲ್ಲ. ಇನ್ನೂ ಒಳಮೀಸಲಾತಿಯನ್ನು ಕೇಳಿದರೆ ಈಗ ಕೊಡಬೇಕಾದ ಮೀಸಲಾತಿಯು ನಿಂತುಹೋಗುತ್ತದೆ. ಬರೀ ಜಗಳಗಳಲ್ಲಿಯೇ ಕಾಲಹರಣವಾಗುತ್ತದೆಂದು ಕೆಲವರು ಒಳ ಮೀಸಲಾತಿ ಬೇಡ ಎಂಬುವುದಕ್ಕೆ ಹೀಗೆ ಬೇರೆ ಬೇರೆ ಉತ್ತರಗಳನ್ನು ಹೇಳುತ್ತಿರುತ್ತಾರೆ. ಅವರೆಲ್ಲರೂ ಮೇಲ್ಜಾತಿಯ ಹೊಟ್ಟೆ ತುಂಬಿದವರೇ ಆಗಿರುತ್ತಾರೆ.

ಈ ರಾಷ್ಟ್ರದ ಬಹುಸಂಖ್ಯಾತ ಮಹಿಳೆಯರಲ್ಲಿ ರಾಜಕೀಯ ಜಾಗೃತಿ ಸೊನ್ನೆಯನ್ನು ದಾಟದಿರುವಾಗ, ಬೆರಳೆಣಿಕೆಯಷ್ಟು ಮಹಿಳೆಯರು ರಾಜಕೀಯದಲ್ಲಿ ಉದ್ದೇಶಿತ ಮೀಸಲಾತಿಯ ಫಲಾನುಭವಿಗಳಾಗಲು ಹವಣಿಸುತ್ತಿರುವುದು ಒಂದು ದುರಂತ. ಗ್ರಾಮಪಂಚಾಯಿತಿಗಳಲ್ಲಿ ಈಗಾಗಲೇ ಜಾರಿಯಲ್ಲಿರುವ ಮಹಿಳಾ ಮೀಸಲಾತಿ ಉಸಿರು ಕಟ್ಟುವ ಸ್ಥಿತಿ ತಲುಪಿರುವುದನ್ನು ಕಾಣುತ್ತಿದ್ದೇವೆ. ಪರಿಶಿಷ್ಟರಿಗೆ ಮೀಸಲಾತಿ ನೀಡಿ ಅವರನ್ನು ನೆಪಮಾತ್ರಕ್ಕೆ ಆ ಸ್ಥಾನದಲ್ಲಿ ಕೂರಿಸಿ ಅವರ ಅಧಿಕಾರದ ಲಾಭವನ್ನು ಪಡೆಯುವ ಮೇಲ್ವರ್ಗದ ರಾಜಕಾರಣೀಗಳಿಗೇನು ಕಡಿಮೆ ಇಲ್ಲ (ಡಿ.ಎಸ್. ವೀರಯ್ಯ, ೨೦೦೫, ಪು. ೫೩-೫೪). ಇಂತಹ ಸ್ಥಿತಿಗಳನ್ನು ಅರ್ಥೈಸುವ ನಿಟ್ಟಿನಲ್ಲಿ ಚಳುವಳಿ ಕೆಲಸ ಮಾಡಬೇಕಾಗಿದೆ. 'ಒಂದು ವೇಳೆ ಮಹಿಳಾ ಮೀಸಲಾತಿ ಈ ರಾಷ್ಟ್ರಕ್ಕೆ ಅನಿವಾರ್ಯವಾದಲ್ಲಿ ಎಲ್ಲಾ ವಿಧಾನಸಭೆ ಹಾಗೂ ಸಂಸತ್ತುಗಳಲ್ಲಿ ದಲಿತ ಮಹಿಳೆಯರ ಪ್ರಾತಿನಿಧ್ಯತೆಯು ಅಷ್ಟೇ ಮುಖ್ಯವಾಗಿ ಆಗಬೇಕಾಗಿದೆ. ಉದ್ದೇಶಿತ ಕೇಂದ್ರದ ೩೩ ಭಾಗ ಮೀಸಲಾತಿಯಲ್ಲಿ ದಲಿತರ ಮೀಸಲಾತಿ

ಇಲ್ಲದಿದ್ದರೆ ಇಂತಹ ಮೀಸಲಾತಿಯ ಸೌಲಭ್ಯದಿಂದ ದಲಿತ ಮಹಿಳೆಯರನ್ನು ವಂಚಿಸಿದಂತಾಗುತ್ತದೆ. ಈ ವರ್ಗವನ್ನು ಮುಖ್ಯವಾಹಿನಿಯಿಂದ ದೂರವಿಟ್ಟಂತಾಗುತ್ತದೆ. ಈ ನಿಟ್ಟಿನಲ್ಲಿ ಪರಿಶಿಷ್ಟರಿಗೆ ಮಹಿಳಾ ಮೀಸಲಾತಿಯಲ್ಲಿ ಸಿಂಹಪಾಲು ಸಿಗಬೇಕಾಗುತ್ತದೆ. ಕಾರಣ ದಲಿತ ಮಹಿಳೆಯರು ಮುಂದುವರಿದ ಮಹಿಳೆಯರ ಜೊತೆ ಪೈಪೋಟಿ ಮಾಡಲಾಗುವುದಿಲ್ಲ. ಅವರನ್ನು ಈ ರಾಷ್ಟ್ರ ರಾಜಕಾರಣದಿಂದ ಹೊರಗಿಟ್ಟಂತಾಗುತ್ತದೆ. ಒಂದು ವೇಳೆ ಮಹಿಳೆ ಮೀಸಲಾತಿ ಈ ರಾಷ್ಟ್ರಕ್ಕೆ ಅನಿವಾರ್ಯವಾದರೆ ಅಂತಹ ಮೀಸಲಾತಿಯಲ್ಲಿ ಹೆಚ್ಚು ಪಾಲು ದಲಿತ ಮಹಿಳೆಯರಿಗೆ ದಕ್ಕಬೇಕಾಗುತ್ತದೆ (ಅದೇ). ವ್ಯವಸ್ಥೆ ಅವರನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಂಡು ಹೋಗುತ್ತಿರುವುದನ್ನು ತಪ್ಪಿಸಿಕೊಳ್ಳಲು ಒಳಮೀಸಲಾತಿ ಅಗತ್ಯ ತುಂಬಾ ಇದೆ ಇದರಿಂದ ಮಾತ್ರ ತಳಸಮುದಾಯದ ಮಹಿಳೆಯರು ಒಂದಷ್ಟು ಬದಲಾವಣೆಯ ದಾರಿಯನ್ನು ಕಾಣಬಹುದಾಗಿದೆ.

ಉದಾರೀಕರಣದ ನೆಲೆಯಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಇಲ್ಲಿ ನೆಲೆಯೂರುವುದಾದರೆ ಆ ಕಂಪನಿಗಳಲ್ಲಿ ಶೇ. ೧೮ ರಷ್ಟು ಪ್ರಮಾಣದ ಉದ್ಯೋಗಗಳನ್ನು ದಲಿತರಿಗೆ ಮೀಸಲಾಗಿಡುವಂತೆ ಸರ್ಕಾರ ಸೂಚಿಸಬೇಕು. ಹೀಗೆ ಖಾಸಗಿ ಸಂಸ್ಥೆಗಳಲ್ಲಿ ಶೋಷಿತ ವರ್ಗಕ್ಕೆ ಮೀಸಲಾತಿ ನೀಡುವುದು ಹೊಸತೇನಲ್ಲ. ಅಮೇರಿಕದ ಕೆನಿಡಿಯನ್ ಸರ್ಕಾರ ಅಲ್ಲಿಯ ಕರಿಯರಿಗೆ ಇಂತಹ ಮೀಸಲಾತಿ ಲಭ್ಯವಾಗುವಂತೆ ನೋಡಿಕೊಂಡಿದೆ. ಆದ್ದರಿಂದ ಇಲ್ಲಿ ಕಾಲಿಡುವ ಕೋಕಾಕೋಲಾದಂತಹ ಸಂಸ್ಥೆಗಳಾಗಲಿ, ಇನ್ಯಾವುದೇ ಬಹುರಾಷ್ಟ್ರೀಯ ಕಂಪನಿಗಳಾಗಲಿ ಇಲ್ಲಿರುವ ಪಿರಿಶಿಷ್ಟರಿಗೆ, ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ ಇಂತಿಷ್ಟು ಪ್ರಮಾಣದ ಉದ್ಯೋಗವನ್ನು ಮೀಸಲಾಗಿಡಬೇಕು. ಅದೇ ರೀತಿ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳು ಏನಿವೆ, ಅಲ್ಲಿಯೂ ಅದೇ ರೀತಿ ಮೀಸಲಾತಿಯನ್ನು ದೊರಕಿಸಿಕೊಡಬೇಕು (ಯು.ಆರ್. ಅನಂತಮೂರ್ತಿ, ೨೦೦೫, ಪು. ೮೬). ಇಂತಹ ಕೆಲಸಗಳನ್ನು ಗಿಟ್ಟಿಸಿಕೊಳ್ಳಲು ದಲಿತ ಮಹಿಳೆ ಅಕ್ಷರಸ್ಥಳಾಗಬೇಕಾಗಿದೆ.

ದಲಿತ ಮಹಿಳೆಯು ಶಿಕ್ಷಣವನ್ನು ಪಡೆಯುವುದರ ಮೂಲಕ ಜಾಗೃತಳಾಗಲು ಸಾಧ್ಯ. ಅದರ ಮೂಲಕ ತನ್ನ ಮೇಲೆ ಆಗುವ ಹಲ್ಲೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ಯಾಕೆಂದರೆ ಶಿಕ್ಷಣವನ್ನು ಪಡೆದುಕೊಂಡ ಮಹಿಳೆಯು ಮಾತ್ರ ತನ್ನ ಮೇಲಾಗುವ ಶೋಷಣೆಯ ವಿರುದ್ಧ ಸೊಲ್ಲೆತ್ತಿ ಆ ಮೂಲಕ ಅದಕ್ಕೆ ಪರಿಹಾರವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಹೋರಾಟವನ್ನು ಮಾಡಬಲ್ಲಳು ಇಲ್ಲಿಯವರಿಗೂ ದಲಿತ ಮಹಿಳೆ ನಿಕೃಷ್ಟ ಜೀವನವನ್ನು ನಡೆಸುತ್ತಿರುವುದಕ್ಕೆ ಅವಳ ಅನಕ್ಷರತೆಯ ಅರಿವಿನ ಕೊರತೆಯೇ ಮುಖ್ಯ ಕಾರಣ. ಬದುಕಿನಲ್ಲಿ ಬೇರೆ ಬೇರೆ ರೀತಿಯ ಬದಲಾವಣೆಗಳಾಗುವಾಗ, ಬೇರೆ ಬೇರೆ ರೀತಿಯಾದಂತಹ ಪ್ರಭಾವಗಳು ತಲೆದೂರುವಾಗಲೂ ಕೂಡ ಈ ಬೇರೆ ಬದಲಾವಣೆಗಳಿಗೆ ಬೇರೆ ಪ್ರಭಾವಗಳಿಗೆ ತನ್ನನ್ನು ಒಡ್ಡಿಕೊಂಡು ತಾನು ದಾಸ್ಯಳಾಗುವಂತಹ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವಂತಹ ನಿಟ್ಟಿನಲ್ಲಿ ಕೂಡ ಈ ಶಿಕ್ಷಣ ಎಂಬುವುದು ಮಹಿಳೆಗೆ ಸಹಾಯಕವಾಗುತ್ತದೆ.

ನೂರಾರು ವರ್ಷಗಳಿಂದ ದಲಿತರನ್ನು ಸಾರ್ವಜನಿಕ ಕ್ಷೇತ್ರಗಳಿಂದ, ಶಿಕ್ಷಣದಿಂದ, ಆರ್ಥಿಕ ಸಂಪನ್ಮೂಲಗಳಿಂದ ದೂರವಿಡಲಾಗಿದೆ. ಇವೆಲ್ಲವೂ ಕೇವಲ ನೆಪಗಳು. ಆದರೆ ಈ ಮೀಸಲಾತಿಯು ರಾಜಕೀಯ ಅಡಿಯಲ್ಲಿ ತೆಗೆದುಕೊಳ್ಳುವಾಗಲೂ ಕೂಡ ಇದು ಅನಿವಾರ್ಯವಾದಂತಹ ಪಾಲಿಸಿಯಾಗಿದೆ. ಈ ದೇಶದಲ್ಲಿ ಚರಿತ್ರೆ ಆರಂಭದ ಕಾಲದಿಂದಲೂ ಮೀಸಲು ವ್ಯವಸ್ಥೆ ಇತ್ತು. ಅದು ಸಮಾಜದ ಕೆಲವೇ ಜನರನ್ನು ಲಕ್ಷ್ಯಿಸುವಂತಹ ಉದ್ದೇಶವನ್ನಿರಿಸಿಕೊಂಡಿದ್ದಲ್ಲ, ಮೀಸಲು ತತ್ವ ಎಂಬುವುದು ಸಮಾಜದಲ್ಲಿ ಸಮಾನತೆಯನ್ನು ಬಯಸುವಂತಹ ತತ್ವವಾಗಿದೆ.

ಇತರರು ಮೀಸಲಾತಿಯನ್ನು ಕೆಟ್ಟದಾಗಿ ವಿಮರ್ಶೆ ಮಾಡಿದರೂ ಕೂಡ ಮೀಸಲು ನಿಯಮವನ್ನು ಒಂದಿಲ್ಲ ಒಂದು ನೆಲೆಯಲ್ಲಿ ಉಳಿಸಿಕೊಳ್ಳಲೇ ಬೇಕಾದಂತಹ ಸಂದರ್ಭವಿದೆ. ಇವತ್ತು ನಮ್ಮಲ್ಲಿ ಅಪಸ್ವರಗಳು ನೌಕರಿಗಳ ಕುರಿತಾಗಿ ಇದೆಯೇ ವಿನಃ ರಾಜಕೀಯವಾದಂತಹ ಎಂ.ಎಲ್.ಎ, ಎಂ.ಪಿ ಸೀಟುಗಳಿಗೆ ಕುರಿತಾಗಿ ಇಲ್ಲ ಯಾಕೆಂದರೆ ಅಲ್ಲಿ ಸೊಲ್ಲು ಎತ್ತಲಾರದವರು ಬಂದರೂ ರಾಜಕಾರಣಗಳಿಗೆ ಬಹಳ ಖುಷಿ. ಇಂತಹ ರಾಜಕಾರಣವನ್ನು ಪ್ರಜ್ಞಾಪೂರ್ವಕವಾಗಿ ಜಾಗೃತಿಯಿಂದ ಗಮನಿಸಬೇಕಾಗುತ್ತದೆ. ರಾಜಕಾರಣದಲ್ಲಿ ಈಗಿರುವ ದಲಿತರು ಎಂತಹ ಅಧಿಕಾರಗಳನ್ನು ಹೊಂದಿದ್ದಾರೆ. ಕಾನೂನಿನ ಮೂಲಕ ಅಂತಹ ಅಧಿಕಾರಗಳನ್ನು ಹೊಂದಿದ್ದರೂ ಆ ಅಧಿಕಾರಗಳನ್ನು ಅವರು ಜಾರಿಗೊಳಿಸಲು ಸಾಧ್ಯವಾಗುತ್ತಿದೆಯೇ? ಇಲ್ಲದಿದ್ದರೆ ಯಾಕೆ ಇಲ್ಲ? ದಲಿತ ಮಹಿಳಾ ಅಧಿಕಾರಿಗಳ ಸಂಖ್ಯೆ ಯಾಕೆ ಕಡಿಮೆ ಇದೆ? ಇದಕ್ಕಿರುವ ತೊಡಕುಗಳೇನು? ಎಂಬುವುದನ್ನು ಯೋಚಿಸಬೇಕಾಗಿದೆ. ಮಹಿಳೆ ರಾಜಕೀಯವಾದಂತಹ ಹಕ್ಕು ಅಧಿಕಾರಗಳಲ್ಲಿ ಆಕೆ ಭಾಗವಹಿಸುವ ಮುಖಾಂತರ ದೇಶದ ಅಭಿವೃದ್ಧಿಯಲ್ಲಿ ಬಹುಮುಖ್ಯ ಪಾತ್ರವಹಿಸಲು ಸಾಧ್ಯ. ಅದು ಯಾಕೆ ಸಾಧ್ಯವಾಗುತ್ತಿಲ್ಲ?

ಇವತ್ತು ನಾವೆಲ್ಲರೂ ನಮ್ಮ ನಮ್ಮ ಉಪಜಾತಿಗಳಡಿಯಲ್ಲಿಯೇ ಸಂಘಟಿತರಾಗುತ್ತಿದ್ದೇವೆ. ಸಂಘಟಿತರಾಗಬೇಕೂ ಕೂಡ. ಜಾತಿ ಎಂಬುವಂತಹದ್ದು ಇನ್ನೂ ಹೆಚ್ಚು ಮೌಲ್ಯಿಕವಾದಂತಹ ಅಂಶವಾಗುತ್ತಿದೆ. ನಮ್ಮಲ್ಲಿ ಅದು ಇನ್ನೂ ಚಲಾವಣೆಯಲ್ಲಿಯೇ ಉಳಿದುಕೊಂಡು ಹೋಗುತ್ತಿದೆ. ಸಂಘಟನೆ ಎಂಬುವುದು ಜಾತಿಯ ಮಿತಿಯಲ್ಲಿಯೇ ಗಟ್ಟಿಗೊಂಡರೆ ಅದು ಬಹಳ ನಿರರ್ಥಕವಾದುದು ಮತ್ತು ಆಳುವ ವರ್ಗಕ್ಕೆ ಬಹಳ ಅನುಕೂಲವಾದಂತಹ ಪರಿಕರವಾಗಿ ಪರಿಣಮಿಸುತ್ತದೆ. ಆದರೆ ಸಂಘಟನೆ ಜಾತಿಯ ನೆಲೆಯಿಂದ ಆರಂಭಗೊಂಡರೂ ಕೂಡ ಅದು ಇಡಿಯಾಗಿ ಶೋಷಿತ ಸಮುದಾಯಗಳ ಸಹಕಾರದೊಂದಿಗೆ ವಿಸ್ತೃತವಾದಂತಹ ವ್ಯಾಪ್ತಿಯನ್ನು ಪಡೆದುಕೊಳ್ಳಲಾರದೇ ಹೋದರೆ ಸಂಘಟನೆಗೆ ಯಾವುದೇ ಅರ್ಥ ಉಳಿಯಲಾರದೇ ಹೋಗುತ್ತದೆ. ಮೇಲ್ಜಾತಿಯ ಹೆಣ್ಣು ಮಕ್ಕಳು, ಕೆಳಜಾತಿಯ ಹೆಣ್ಣು ಮಕ್ಕಳನ್ನು ಸಮಾನವಾಗಿ ನೋಡುವುದಕ್ಕೆ ಸಾಧ್ಯವಾದರೆ ಅದಕ್ಕೆ ಒಂದು ಅರ್ಥ ಬರುತ್ತದೆ. ದಲಿತ ಮಹಿಳೆ ಶಿಕ್ಷಣವನ್ನು ಪಡೆಯುವಂತಹದ್ದು ಅನಿವಾರ್ಯ. ಆ ಮೂಲಕ ಆಕೆ ಸಂಘಟಿತಳಾಗಿ ಇಡಿಯಾಗಿ ಪ್ರಬಲವಾದಂತಹ ಒಂದು ಶಕ್ತಿಯಾಗಿ ದೇಶದ ಅಭಿವೃದ್ಧಿಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವಂತಹ ಸಂದರ್ಭವನ್ನು ಎಲ್ಲರು ಕಲ್ಪಿಸಿಕೊಡಬೇಕಾಗಿದೆ.

ದಲಿತ ಮಹಿಳೆಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸಬೇಕಾಗಿದೆ. ನ್ಯಾಯಾಂಗದ ದೋಷಗಳನ್ನು ಎನರ್ಜಿಯಾಗಿ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ಜಮೀನು ಹಕ್ಕಿಗೆ ಸಂಬಂಧಿಸಿದಂತೆ ಗ್ರ್ಯಾಂಟ್‌ಲ್ಯಾಂಡ್ ಎಂದು ಮೈಸೂರು ನಾಲ್ವಡಿ ಕೃಷ್ಣರಾಜ ಅರಸರು ಮೊದಲು ಭೂರಹಿತರಿಗೆ ಜಮೀನು ವಿತರಿಸುವ ಕೆಲಸವನ್ನು ಮಾಡಿದರು. ಇಲ್ಲಿ ದಲಿತ ಮಹಿಳೆಯರಿಗೆ ಜಮೀನು ಬರಲೇ ಇಲ್ಲ. ಜಮೀನು ಕೆಳುವ ಬಡವನಿಗೆ ಮಾತ್ರ ಜಮೀನು. ಅದರಲ್ಲೂ ಗಂಡಸರಿಗೆ ಮಾತ್ರ ಗ್ರಾಂಟು. ಇದು ಈಗ ಬದಲಾಗಿದೆ ಎಂದು ಹೇಳಲಾಗುವುದಿಲ್ಲ. ಇದನ್ನೇ ನಾನು ಹೇಳುತ್ತಿರುವುದು ದಲಿತ ಮಹಿಳೆಯ ವಿಷಯದಲ್ಲಿ ವ್ಯವಸ್ಥೆ ಯಥಾಸ್ಥಿತಿಯನ್ನು ಕಾಯ್ದುಕೊಂಡು ಬಂದಿದೆ ಎಂದು. ೧೯೭೮ರಲ್ಲಿ ಯಾವುದೇ ಜಮೀನು ದಲಿತರದ್ದೇ ಆಗಿದ್ದು ಅದು ವ್ಯಾಪಾರವಾದಲ್ಲಿ ಅದು ಮತ್ತೆ ವಾಪಾಸು ದಲಿತರಿಗೆ ಕೊಡಬೇಕೆಂಬ ಕಾನೂನುಗಳು ಬಂದವು. ಇವುಗಳು ಎಷ್ಟರಮಟ್ಟಿಗೆ ಜಾರಿಗೊಂಡವು ಎಂದು ನೋಡಿದರೆ ದಲಿತರು ಒಂದು ಸಾರಾಯಿ ಪ್ಯಾಕೇಟಿಗೂ ಜಮೀನನ್ನು ಮಾರಿದ ದಾಖಲೆಗಳು ನಮಗೆ ಸಿಗುತ್ತವೆ. ಆಸ್ತಿಯ ವಿಷಯದಲ್ಲಿ ಹೆಣ್ಣುಮಕ್ಕಳಿಗೆ ಆಸ್ತಿ ಸಿಗಲಿಲ್ಲ,

ಬದಲಿಗೆ ಒದೆ ದೊರೆಯಿತು. ಈಗ ಸಾರಾಯಿ, ಶಿಕ್ಷಣ, ಕೌಟುಂಬಿಕ ಚಳುವಳಿ ಮಾಡಬೇಕಾದಲ್ಲಿ ಭೂಮಿ ಚಳುವಳಿ ಮಾಡಲೇಬೇಕಾಗಿದೆ. ಅದಕ್ಕೆ ಈ ಕೆಳಗಿನ ನಿಯಮಗಳು ಪಾಲಿಸಬೇಕು.

೧. ಎಲ್ಲಿ ಗೋಮಾಳ ಜಮೀನುಗಳು ಇವೆ ಎಂಬುವುದನ್ನು ಪತ್ತೆ ಮಾಡಬೇಕು

೨. ಗ್ರ್ಯಾಂಟ್ ಜಮೀನಿನಲ್ಲಿ ಗಂಡ ಮತ್ತು ಹೆಂಡತಿಯ ಹೆಸರು ಇರಲೇಬೇಕು.

೩. ಅವಳ ಒಪ್ಪಿಗೆ ಇಲ್ಲದೆ ಏನೂ ಮಾಡುವ ಹಾಗಿಲ್ಲ.

೪. ಮಹಿಳೆಯ ಹೆಸರಿನಲ್ಲಿಯೇ ಜಮೀನು ಇರಬೇಕು.

೫. ಭೂಮಿತಿ ಕಾಯಿದೆಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.

೬. ಪ್ರತಿಯೊಂದು ತಾಲ್ಲೂಕು ಆಫೀಸಿನಲ್ಲಿ ಹೋಗಿ ಎಷ್ಟು ಗೋಮಾಳು ಜಮೀನುಗಳಿವೆ, ಎಷ್ಟು ಜಮೀನುಗಳಲ್ಲಿ ವ್ಯವಸಾಯ ಆಗುತ್ತಿದೆ ಎಂಬುವುದನ್ನು ಕಂಡುಹಿಡಿಯಬೇಕು. ಆನಂತರ ದಲಿತ ಮಹಿಳೆಯರಿಂದ ಅರ್ಜಿ ಹಾಕಿಸಬೇಕು.

ದಲಿತರ ಆಸ್ತಿಗಳೆಲ್ಲವೂ ಬ್ರಾಹ್ಮಣ, ಗೌಡ, ಲಿಂಗಾಯತರ ಹೆಸರಿನಲ್ಲಿ ಇರುತ್ತವೆ. ದಲಿತರು ಅವರ ಜಮೀನಿನಲ್ಲಿ ಕೂಲಿಗಳಾಗಿ ಮಾತ್ರ ದುಡಿಯುತ್ತಿರುತ್ತಾರೆ. ೧೫ ವರ್ಷಗಳ ಕಾಲ ಯಾರು ಒಂದೇ ಜಮೀನಿನಲ್ಲಿ ದುಡಿಯುತ್ತಾರೋ ಅವರೇ ಆ ಜಮೀನಿಗೆ ವಾರಸುದಾರರು. ಜೀತ ಕೆಲಸಕ್ಕೆಂದು ದಲಿತರ ಜಮೀನನ್ನು ಪಡೆದುಕೊಂಡಲ್ಲಿ ಅದು ಅಪರಾಧವಾಗುತ್ತದೆ. ಗೋಮಾಳ ಜಮೀನುಗಳನ್ನು ಸರ್ಕಾರ ಪಡೆದುಕೊಂಡಲ್ಲಿ ಅದರ ಪುರಾವೆಗಳನ್ನು ನೋಡಿ ಸರ್ಕಾರದ ಜೊತೆ ವಾದ ಮಾಡಬೇಕಾಗಿದೆ.

ಸರ್ಕಾರಿ ಹುದ್ದೆಗಳಲ್ಲಿರುವ ದಲಿತರ ಅಂಕಿ-ಅಂಶಗಳನ್ನು ತೆಗೆದುಕೊಂಡೇ ಯಾವಾಗಲೂ ದಲಿತರ ಸ್ಥಿತಿಯನ್ನು ಹೇಳಲಾಗುತ್ತದೆ. ಆದರೆ ಎಷ್ಟು ಜನ ಜೀತಕ್ಕಿದ್ದಾರೆ? ಎಷ್ಟು ಜನ ಮಹಿಳೆಯರು ಬೇರೆಯವರ ಮನೆಗಳಲ್ಲಿ, ಮನೆ ಕೆಲಸ ಮಾಡುತ್ತಿದ್ದಾರೆ? ಎಷ್ಟು ಜನ ಮಹಿಳೆಯರು ಜಾಡಮಾಲಿಗಳಾಗಿದ್ದಾರೆ? ಎಂಬುವುದರ ಬಗ್ಗೆ ನಮಗೆ ಅಂಕಿ-ಅಂಶಗಳು ಅಷ್ಟಾಗಿ ಸಿಗುವುದಿಲ್ಲ. ಇದು ಹೀಗೆ ಯಾಕೆ ಆಗುತ್ತದೆ?

೧೯೯೫ ರಲ್ಲಿ ಸಾರಾಯಿಯನ್ನು ಸರ್ಕಾರ ನಿಷೇಧ ಮಾಡಿತ್ತು. ಮತ್ತೆ ಅದನ್ನು ಜಾರಿಗೊಳಿಸಲಾಯಿತು. ಮತ್ತೆ ಈಗ ೨೦೦೭ ರಲ್ಲಿ ಸಾರಾಯಿಯನ್ನು ನಿಷೇಧಗೊಳಿಸಲಾಗಿದೆ. ಮತ್ತೆ ಇದು ಜಾರಿಗೊಳ್ಳದಂತೆ ಕಾಯ್ದುಕೊಳ್ಳಬೇಕಾಗಿದೆ. ಸಾರಾಯಿ ನಿಷೇಧ ಮಾಡಿದಾಗಿನಿಂದಲೂ ಪ್ಯಾಕೇಟಿಗೆ ೧೪ ರೂಪಾಯಿಗೆ ಕುಡಿಯುತ್ತಿದ್ದವರು ಈಗ ಅದೇ ಕುಡಿತಕ್ಕೆ ಹೆಚ್ಚು ಹಣವನ್ನು ಸಂಗ್ರಹಿಸಬೇಕಾಗಿರುವುದರಿಂದ ಇದು ಕುಟುಂಬಕ್ಕೆ ಹೆಚ್ಚು ಹೊಡೆತ ಕೊಟ್ಟಿದೆ. ಇದರಿಂದ ವೈನ್ ಶಾಪುಗಳನ್ನು ರದ್ದು ಮಾಡಬೇಕಾಗಿದೆ. ಅದರ ವಿರುದ್ಧ ಚಳುವಳಿ ನಡೆಯಬೇಕಾಗಿದೆ.

ಉಳಿತಾಯದ ಹೆಸರಿನಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ಮಾಡಿ ಈಗಾಗಲೆ ಸಾಸಿವೆ, ಜೀರಿಗೆ ಡಬ್ಬಿಯಲ್ಲಿ ಉಳಿತಾಯ ಮಾಡುವ ಮಹಿಳೆಯರಿಗೆ ಉಳಿತಾಯ ಮಾಡುವ ರೀತಿಯನ್ನು ಹೇಳಿಕೊಡಲಾಗುತ್ತಿದೆ. ಉಳಿತಾಯವನ್ನು ಮಾಡದ, ಅದರ ಬಗ್ಗೆ ನಿರ್ಲಕ್ಷ್ಯತನವಿರುವ ಪುರುಷರ ಗುಂಪನ್ನು ಸರ್ಕಾರ ಯಾಕೆ ಮಾಡಲಿಲ್ಲ? ಉಳಿತಾಯ ಮಾಡಿ ಎಂದು ಯಾಕೆ ಒತ್ತಾಯಿಸಲಿಲ್ಲ? ಸರ್ಕಾರದ ಯೋಜನೆಗಳಿಗೆ ಮಹಿಳೆಯರು

ಪ್ರಯೋಗಶಾಲೆಗಳಾಗಿದ್ದಾರೆಯೇ? ಇದನ್ನು ನಾವು ಹೇಗೆ ಪರಿಭಾವಿಸಬೇಕು? ಇದನ್ನು ಪೋಟಮ್ಮನವರು ಜಾರಿಗೊಳಿಸಿದರು ಎಂದು ಹೇಳಲಾಗುತ್ತದೆ. ಆದರೆ ಅವರ ಯೋಚನೆಗಳ ಮೇಲೆ ಪುರುಷ ಅಧಿಕಾರಿಗಳ ಯೋಚನೆಗಳು ಒತ್ತಡ ತಂದಿರಬಹುದು. ಸರ್ಕಾರದ ಉನ್ನತ ಅಧಿಕಾರದಲ್ಲಿ ಹೆಚ್ಚಿನ ದಲಿತ ಮಹಿಳೆಯರೇನಾದರು ಇದ್ದಿದ್ದರೆ ಇಂತಹ ಯೋಜನೆಗಳು ಇನ್ನು ಭಿನ್ನರೂಪದಲ್ಲಿ ಇರುತ್ತಿದ್ದವೋ ಏನೊ?

ಮತಾಂತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ದಲಿತ ಮಹಿಳೆ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಬುದ್ಧಿಜೀವಿ ದಲಿತರು ಬೌದ್ಧ ಧರ್ಮವನ್ನು ಸ್ವೀಕರಿಸಿ ಅಂಬೇಡ್ಕರವರನ್ನು ಅನುಸರಿಸಿದರೆ, ದಲಿತ ಮಹಿಳೆ ಶೋಷಣೆಗೆ ಪ್ರತಿಕಾರ ತೀರಿಸಿಕೊಳ್ಳುವಲ್ಲಿನ ಅಸಹಾಯಕತೆ, ತನ್ನ ನೋವುಗಳನ್ನು ಮರೆಯಲು ಕ್ರೈಸ್ತ ಧರ್ಮಕ್ಕೆ ಮತಾಂತರವಾಗುತ್ತಿದ್ದಾಳೆ. ದಲಿತರು ಯಾವುದೇ ಧರ್ಮಕ್ಕೆ ಮತಾಂತರ ಹೊಂದಿದರೂ ಅಸ್ಪೃಶ್ಯತೆಯಿಂದ ತಪ್ಪಿಸಿಕೊಳ್ಳಲು ಆಗುತ್ತಿಲ್ಲ. ಮತಾಂತರದ ನಂತರ ದಲಿತರು ದಲಿತ ಕ್ರಿಶ್ಚಿಯನ್ನರು, ದಲಿತ ಮುಸ್ಲಿಮರು, ದಲಿತ ಬೌದ್ಧರಾಗುತ್ತಾರೆಯೇ ಹೊರತು ಕ್ರಿಶ್ಚಿಯನ್ನರು, ಮುಸ್ಲಿಮರು, ಬೌದ್ಧರು ಆಗುವುದಿಲ್ಲ. ಈ ನಿಟ್ಟಿನಲ್ಲಿ ಮೀಸಲಾತಿಯನ್ನು ಕಳೆದುಕೊಂಡು ಎರಡೂ ಧರ್ಮಗಳಿಂದಲೂ ಅಸ್ಪಶ್ಯತೆಯನ್ನು ಅನುಭವಿಸುತ್ತಾರೆ. ನಮ್ಮ ಜಾತಿಯಲ್ಲಿಯೇ ಇದ್ದು ಅದನ್ನು ಮೀರುವ ಛಲವನ್ನು ಮನೋಬಲವನ್ನು ದಲಿತ ಮಹಿಳೆ ತಂದುಕೊಳ್ಳಬೇಕಾಗಿದೆ. ಮತಾಂತರದ ದಲಿತ ಮಹಿಳೆಯರ ಹಕ್ಕುಗಳ ಕುರಿತು ಚರ್ಚೆ ವಾಗ್ವಾದಗಳು ನಡೆಯಬೇಕಿದೆ. ಆ ನಿಟ್ಟಿನಲ್ಲಿಯೇ ಚಳುವಳಿ ರೂಪಗೊಳ್ಳಬೇಕಿದೆ.

ದಲಿತ ಮಹಿಳೆಯು ತನ್ನ ಅನನ್ಯತೆಯ ಗುರುತನ್ನು ಬಿಟ್ಟುಕೊಡದೆ ಸಂಘಟಿತರಾಗಬೇಕಾಗಿದೆ. ಇಲ್ಲಿ ಅಕ್ಷರಸ್ಥ, ಅನಕ್ಷರಸ್ಥ, ಉದ್ಯೋಗಸ್ಥ, ಹಳ್ಳಿಗಾಡಿನಲ್ಲಿ ವಿವಿಧ ಕೆಲಸಗಳನ್ನು ಮಾಡುವ ಎಲ್ಲಾ ದಲಿತ ಮಹಿಳೆಯರ ಆಶಯಗಳು ಈ ಸಂಘಟನೆಗಿರಬೇಕು. ಪ್ರತ್ಯೇಕವಾಗಿ ದಲಿತ ಮಹಿಳಾ ಚಳುವಳಿಯನ್ನು ರೂಪಿಸಿಕೊಳ್ಳಬೇಕಾಗಿದೆ. ಪ್ರತ್ಯೇಕ ಎಂದ ತಕ್ಷಣ ದಲಿತ ಚಳುವಳಿ ಮಹಿಳಾ ಚಳುವಳಿಗಳ ವಿರುದ್ಧವಲ್ಲ. ಇವೆರಡರ ಅಂಶಗಳನ್ನು ಸೂಕ್ತ ರೀತಿಯಲ್ಲಿ ಪರಾಮರ್ಶಿಸಿ ಇದರ ಜೊತೆಗೆ ತನ್ನ ಸೃಜನಶೀಲ ಅಂಶಗಳನ್ನು ಸೇರಿಸಿಕೊಳ್ಳಬೇಕಾಗಿದೆ. ಬದುಕು ಬದಲಿಸುವತ್ತ ಪರ್ಯಾಯಗಳನ್ನು ರೂಪಿಸಿಕೊಳ್ಳಬೇಕಾಗಿದೆ. ಇಲ್ಲಿ ಮೊದಲ ಆದ್ಯತೆ ಶಿಕ್ಷಣ ಮತ್ತು ಆರ್ಥಿಕ ಸ್ವಾವಲಂಬನೆಗೆ ಕೊಡಬೇಕಾಗಿದೆ. ಸಮಸ್ಯೆಗಳ ವಿರುದ್ಧ ಹೋರಾಡುವುದರ ಜೊತೆಗೆ ಅವುಗಳನ್ನು ವಿಮರ್ಶಿಸುವ, ಇತರರಿಗೆ ಅರ್ಥೈಸುವ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಇಲ್ಲಿ ನೀತಿ ನಿಯಮಾವಳಿಗಳನ್ನು ರೂಪಿಸುವವರು ದಲಿತ ಮಹಿಳೆಯರೇ ಆಗಬೇಕಾಗಿದೆ. ಉಳಿದವರು ಪೂರಕ ಸ್ವರೂಪದಲ್ಲಿರಬೇಕು. ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಿಂದಾಗುವ ಯಾವುದೇ ಪರಿಣಾಮಗಳು ಬಂದರೂ ಅಲ್ಲಿ ತನ್ನ ಅಸ್ಥಿತ್ವವನ್ನು ಕಾಯ್ದುಕೊಳ್ಳುವ, ಚಳುವಳಿಯನ್ನು ಸತತವಾಗಿ ಮುಂದುವರಿಸಿಕೊಂಡು ಹೋಗುವ ಛಲ ಬೆಳೆಸಿಕೊಳ್ಳಬೇಕಾಗಿದೆ.

ಪ್ರಸ್ತುತ ಅಧ್ಯಾಯಕ್ಕೆ ಸಂಬಂಧಿಸಿದಂತೆ ದಲಿತ ಚಿಂತಕರು, ದಲಿತ ಹೋರಾಟಗಾರರಿಗೆ ಕೆಲವು ಪ್ರಶ್ನೆಗಳನ್ನು ಕಳಿಸುವುದರ ಮೂಲಕ ಉತ್ತರವನ್ನು ಪಡೆದುಕೊಂಡು ಅವರ ಚಿಂತನೆಗಳನ್ನು ನನ್ನ ಚಿಂತನೆಗಳ ಜೊತೆ ಒಟ್ಟುಗೂಡಿಸಿಯೇ ಇಲ್ಲಿಯವರಿಗಿನ ಚರ್ಚೆ ಮಾಡಲಾಯಿತು. ದಲಿತ ಮಹಿಳಾ ಚಳುವಳಿಗೆ ಸಂಬಂಧಿಸಿದಂತೆ ದಲಿತ ಲೇಖಕರಿಗೆ, ಚಿಂತಕರಿಗೆ ಇರುವ ಅಭಿಪ್ರಾಯಗಳು ಹೀಗಿವೆ;

ದಲಿತ ಮಹಿಳಾ ಚಳುವಳಿಗೆ ಸಂಬಂಧಿಸಿದ ಪ್ರಶ್ನಾವಳಿ

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನ ಏನು? ಅದು ಯಾವ ರೀತಿಯದ?

೩. ದಲಿತ ಚಳುವಳಿಯ ಅವಶ್ಯಕತೆ ಇದೆಯೇ?

೪. ದಲಿತ ಮಹಿಳಾ ಚಳುವಳಿ ಯಾವ ಸ್ವರೂಪದಲ್ಲಿ ಇರಬೇಕು ಎಂದು ನಿಮಗನಿಸುತ್ತದೆ?

ನಿಮ್ಮ ನಾಲ್ಕೂ ಪ್ರಶ್ನೆಗಳು ನೇರವಾಗಿ ಮತ್ತು ನಿರ್ದಿಷ್ಟವಾಗಿ ದಲಿತ ಚಳುವಳಿ ಹಾಗೂ ದಲಿತ ಮಹಿಳೆಯರಿಗೆ ಸಂಬಂಧಿಸಿವೆ. ಹಾಗಾಗಿ ದಲಿತ ಸಮೂಹದ ವಸ್ತುನಿಷ್ಠ ಪರಿಸ್ಥಿತಿಯ ಸಾಮಾನ್ಯ ಗ್ರಹಿಕೆ ಹಾಗೂ ದಲಿತ ಚಳುವಳಿಯ ಹಿಂದಿರುವ ರಾಜಕೀಯ ದೃಷ್ಟಿಕೋನದ ಸಾಮಾನ್ಯ ಗ್ರಹಿಕೆಯ ನೆರವಿನಿಂದ ಇದಕ್ಕೆ ಪ್ರತಿಕ್ರಿಯಿಸಬೇಕಾಗುತ್ತದೆ.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ ಎಂಬ ಪ್ರಶ್ನೆಗೆ ಉತ್ತರಿಸುವ ಮೊದಲು ದಲಿತ ಚಳುವಳಿಯು ದಲಿತರನ್ನು ಹೇಗೆ ಪರಿಭಾವಿಸಿದೆ ಎಂಬುದನ್ನು ಪರಿಶೀಲಿಸಬೇಕು. ಕರ್ನಾಟಕದಲ್ಲಿ ದಲಿತ ಚಳುವಳಿಗೆ ಸುಮಾರು ೩೦ ವರುಷಗಳ ಇತಿಹಾಸವಿದೆ. ಈ ೩೦ ವರುಷಗಳಲ್ಲಿ ದಲಿತ ಚಳುವಳಿ ದಲಿತರನ್ನು ಪರಿಭಾವಿಸಿರುವ ಕ್ರಮ ಒಂದೇ ರೀತಿ ಇಲ್ಲ. ದಲಿತ ಹೋರಾಟದ ಆರಂಭದ ದಿನಗಳಲ್ಲಿ ದಲಿತರ ಮೇಲೆ ಭೂಮಾಲಿಕರು ನಡೆಸುತ್ತಿದ್ದ ಹಲ್ಲೆ. ಕೊಲೆ, ಸುಲಿಗೆ, ಅತ್ಯಾಚಾರ, ಮಾನಭಂಗ, ಬಹಿಷ್ಕಾರ ಮುಂತಾದ ಬಿಡಿಬಿಡಿಯಾದ ಪ್ರಕರಣಗಳನ್ನು ಬಿಡಿಬಿಡಿಯಾಗಿ ಡಿ.ಎಸ್.ಎಸ್. ವಿರೋಧಿಸುತ್ತ ಬಂತು. ಅಂತಹ ಪ್ರಕರಣಗಳು ಯಾಕೆ ಜರುಗುತ್ತವೆ? ಅದಕ್ಕೆ ಸಮಾಜದಲ್ಲಿರುವ ಮೂಲಭೂತ ಕಾರಣಗಳು ಯಾವುವು? ಎಂಬುದನ್ನು ಕುರಿತು ಡಿ.ಎಸ್.ಎಸ್ ಎಲ್ಲಿಯೂ ಎಂದೂ ಆಲೋಚಿಸಲೇ ಇಲ್ಲ. ಹಾಗಾಗಿ ಹಲ್ಲೆ, ಕೊಲೆ, ಸುಲಿಗೆ, ಅತ್ಯಾಚಾರ, ಮಾನಭಂಗ, ಬಹಿಷ್ಕಾರ ಮುಂತಾದವು ನಡೆಯಬಾರದು; ಒಂದು ವೇಳೆ ಅವು ನಡೆದರೂ, ಅಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರಿಗೆ ಸರಕಾರಿ ಇಲಾಖೆಗಳ ಮೂಲಕ ಶಿಕ್ಷೆ ಆಗಬೇಕು ಎಂದು ಒತ್ತಾಯಿಸಲಾಯಿತು. ಧರಣಿ, ಸತ್ಯಾಗ್ರಹ, ಪ್ರತಿಭಟನೆ ಮುಂತಾದುವನ್ನು ನಡೆಸಲಾಯಿತು. ಹಕ್ಕೊತ್ತಾಯ ಪತ್ರ ಕೊಡಲಾಯಿತು. ಅಂದರೆ ಮೊದಲ ಹಂತದಲ್ಲಿ ಡಿ.ಎಸ್.ಎಸ್‌ಗೆ ದಲಿತರು ಕಂಡಿದ್ದೇ ಅವರು ನಾನಾ ರೀತಿಯ ಅನ್ಯಾಯಗಳಿಗೆ, ಮೋಸಕ್ಕೆ ಬಿಡಿಬಿಡಿಯಾಗಿ ಒಳಗಾಗುತ್ತಿದ್ದಾರೆ ಎಂಬ ಸಾಮಾನ್ಯ ಗ್ರಹಿಕೆಯ ಮೇಲೆ ಎರಡನೆ ಹಂತದಲ್ಲಿ, ಸರಕಾರಿ ಸವಲತ್ತುಗಳನ್ನು ದಲಿತರು ಪಡೆಯಬೇಕು, ಅವುಗಳನ್ನು ಬಳಸಿಕೊಂಡು ಅವರು ಪ್ರಗತಿಯಾಗಬೇಕು ಎಂಬ ಒತ್ತಾಸೆಯೇ ಮುಂಚೂಣಿಗೆ ಬಂತು. ಮೊದಲ ಹಂತದಲ್ಲಿ ಶಿಕ್ಷಣ ಪಡೆದವರು, ಅವರಲ್ಲಿ ನೌಕರಿ ಪಡೆದವರು, ಕೆಲವು ದಲಿತ ಸಾಹಿತಿಗಳು ದಲಿತ ಹೋರಾಟದ ನಾಯಕತ್ವ ವಹಿಸಿದರು. ಆ ನಾಯಕರು ಕೇರಿಗಳ ದಲಿತರ ಸಾಮಾನ್ಯ ಮತ್ತು ಮುಖ್ಯ ಸಮಸ್ಯೆಗಳ ಕಡೆಗೆ ಆಸಕ್ತಿ ತೋರಿಸಲಿಲ್ಲ. ಅವರ ಆಸಕ್ತಿ ಬಹುತೇಕ ನಗರ ಕೇಂದ್ರಿತ ನೌಕರಸ್ಥ ಮತ್ತು ಮಧ್ಯಮ ವರ್ಗದ ದಲಿತರ ಹಿತಾಸಕ್ತಿಗಳನ್ನು ಕೇಂದ್ರೀಕರಿಸುತ್ತ ಬಂತು. ದಲಿತ ನಾಯಕರ ಈ ಹಿತಾಸಕ್ತಿ ಕೇರಿಗಳಲ್ಲಿ ಜೀತ ಮಾಡುವ, ಕೂಲಿ ಮಾಡುವ ದಲಿತರನ್ನು ಕೇದ್ರೀಕರಿಸಲಿಲ್ಲ. ಇತ್ತೀಚಿನ ಉದಾಹರಣೆ ಕೊಡುವುದಾದರೆ, ಕಳೆದ ಎರಡು

ವರ್ಷಗಳಿಂದ ಬಡ ದಲಿತರು ಪಡಿತರ ಚೀಟಿಗಳಿಗಾಗಿ ಪರದಾಡುತ್ತಿದ್ದಾರೆ. ಕರ್ನಾಟಕದ ಯಾವ ದಲಿತ ಸಂಘಟನೆಯೂ ಇದನ್ನು ಒಂದು ರಾಜ್ಯವ್ಯಾಪ್ತಿ ಕಾರ್ಯಕ್ರಮವನ್ನಾಗಿ ಕೈಗೆತ್ತಿಕೊಳ್ಳಲಿಲ್ಲ.

೮೦ ರ ದಶಕದಲ್ಲಿ ಬಿಡಿಬಿಡಿಯಾಗಿ ಕೆಲವು ಭೂ ಹೋರಾಟಗಳನ್ನು ಡಿ.ಎಸ್.ಎಸ್ ನಡೆಸಿತು. ದಲಿತರು ಭೂಮಿಯಿಂದ ವಂಚಿತರಾಗಿರುವುದೇ ಅವರ ಮುಖ್ಯ ಸಮಸ್ಯೆಯಾಗಿದ್ದರೂ ಭೂ ಹೋರಾಟಕ್ಕೆ ನಂತರದ ದಿನಗಳಲ್ಲಿ ಡಿ.ಎಸ್.ಎಸ್ ಗಮನ ಕೊಡಲೇ ಇಲ್ಲ. ಈಗ ದಲಿತ ಚಳುವಳಿ ಎಂಬುದು ಇಲ್ಲ. ಬಿಡಿಬಿಡಿಯಾದ ದಲಿತ ಸಂಘಟನೆಗಳಿವೆ. ಅವು ಬಹುತೇಕ ಬೆಂಗಳೂರಿನಲ್ಲಿ ಕೇಂದ್ರೀಕೃತಗೊಂಡಿವೆ. ದಲಿತ ಸೌಕರ್ಯ ವರ್ಗಾವಣೆ, ಮುಂಬಡ್ತಿ ಇತ್ಯಾದಿ ವಿಷಯಗಳಿಗೆ ಕೆಲವು ದಲಿತ ಸಂಘಟನೆಗಳು ಸೀಮಿತವಾಗಿವೆ. ಇನ್ನು ಉಳಿದಂತೆ ಸರಕಾರಿ ಇಲಾಖೆಗಳ ಕೆಲವು ಸೌಲಭ್ಯಗಳನ್ನು ದಲಿತರಿಗೆ ಕೊಡಿಸಲು ಮಧ್ಯವರ್ತಿ ಏಜೆಂಟ್‌ಗಳಾಗಿ ದಲಿತ ಹೋರಾಟ ತನ್ನನ್ನು ತಾನು ಹೊಂದಿಸಿಕೊಳ್ಳುತ್ತಿದೆ. ಹಾಗಾಗಿ ಸಾಮಾನ್ಯ ದಲಿತರ ಪರಿಸ್ಥಿತಿ ದಲಿತ ಹೋರಾಟಕ್ಕೆ ಮುಖ್ಯವಾಗಿಲ್ಲ. ಬದಲಾಗಿ ಹೊಟ್ಟೆ ತುಂಬಿದ ದಲಿತರ ಪ್ರಶ್ನೆಗಳು ಅದಕ್ಕೆ ಮುಖ್ಯವಾಗಿವೆ.

ಇದಿಷ್ಟು ವಿವರಣೆಯ ಮೂಲಕ ದಲಿತ ಹೋರಾಟವು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ? ಎಂಬ ನಿಮ್ಮ ನಿರ್ದಿಷ್ಟ ಪ್ರಶ್ನೆಗೆ ಬರಬಹುದು. ನಿಮ್ಮ ಪ್ರಶ್ನೆಯಲ್ಲಿ ಅನೇಕ ಬಗೆಯ ದಲಿತ ಮಹಿಳೆಯರಿದ್ದಾರೆ ಎಂಬ ಗ್ರಹಿಕೆ ಇಲ್ಲ. ಬದಲಾಗಿ ಎಲ್ಲ ದಲಿತ ಮಹಿಳೆಯರೂ ಒಂದೇ ರೀತಿ ಇದ್ದಾರೆ ಎಂಬ ಗ್ರಹಿಕೆ ಇದೆ. ಹಾಗಾಗಿಯೇ ನಿಮ್ಮ ಪ್ರಶ್ನೆಯ ರೂಪ ದಲಿತ ಚಳುವಳಿ ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ? ಎಂದಿದೆ.

ದಲಿತ ಮಹಿಳೆ ಒಂದೇ ರೀತಿ ಇಲ್ಲ ಎಂಬುದನ್ನು ಮೊದಲು ಗ್ರಹಿಸೋಣ. ಜೀತ ಮಾಡುವ ದಲಿತ ಮಹಿಳೆಯರು, ಕೂಲಿ ಮಾಡುವ ದಲಿತ ಮಹಿಳೆಯರು, ಬೇರೆಯವರ ಮನೆಗಳಲ್ಲಿ ಮನೆಗೆಲಸ ಮಾಡುವ ದಲಿತ ಮಹಿಳೆಯರು, ವಿವಿಧ ಹಾಸ್ಟೆಲ್‌ಗಳಲ್ಲಿರುವ ದಲಿತ ಮಹಿಳೆಯರು, ಅರೆ ಉದ್ಯೋಗ ಮಾಡುವ ದಲಿತ ಮಹಿಳೆಯರು, ಸಣ್ಣಪುಟ್ಟ ನೌಕರಿ ಮಾಡುವ ದಲಿತ ಮಹಿಳೆಯರು, ಸರಕಾರಿ ಕೆಲಸ ಮಾಡುವ ದಲಿತ ಮಹಿಳೆಯರು - ಹೀಗೆ ಪಟ್ಟಿ ವಿಸ್ತಾರವಾಗುತ್ತ, ಸಂಕೀರ್ಣವಾಗುತ್ತ ಬೆಳೆಯುತ್ತದೆ. ಈ ಎಲ್ಲ ದಲಿತ ಮಹಿಳೆಯರೂ ಒಂದೇ ಅಲ್ಲ. ಈ ಎಲ್ಲ ದಲಿತ ಮಹಿಳೆಯರ ಸಮಸ್ಯೆಗಳೂ ಒಂದೇ ಅಲ್ಲ.

ದಲಿತರಲ್ಲೇ ಅನೇಕ ಸ್ತರವಿನ್ಯಾಸಗಳಿವೆ. ಆದರೆ ದಲಿತ ಹೋರಾಟ ಹೊಟ್ಟೆ ತುಂಬಿದ ದಲಿತರನ್ನು ಮಾತ್ರವೇ ದಲಿತರೆಂದು ಪರಿಭಾವಿಸಿದೆ. ಅದೇ ರೀತಿ ದಲಿತ ಮಹಿಳೆಯರಲ್ಲೂ ಅನೇಕ ಸ್ತರವಿನ್ಯಾಸಗಳಿವೆ. ಆದರೆ ದಲಿತ ಹೋರಾಟ ಈ ಸ್ತರವಿನ್ಯಾಸಗಳನ್ನು ಪರಿಗಣಿಸಿಲ್ಲ. ಹಾಗಾಗಿ ಎಲ್ಲೋ ಬೆಂಗಳೂರಲ್ಲೊ, ಮೈಸೂರಲ್ಲೊ ಯಾವುದಾದರೂ ನೌಕರಿ ಮಾಡಿಕೊಂಡಿರುವ, ಸಾಹಿತ್ಯ ಬರೆಯುವ, ಮಾಧ್ಯಮಗಳಿಗೆ ಪರಿಚಯವಿರುವ ಕೆಲವರನ್ನು ಮಾತ್ರ 'ದಲಿತ ಮಹಿಳೆ' ಎಂದು ಪರಿಭಾವಿಸಿದೆ. ಬೇರೆ ಬೇರೆ ವಲಯಗಳಲ್ಲಿ ನಾನಾ ಕೆಲಸಗಳಲ್ಲಿ ತೊಡಗಿರುವ ದಲಿತ ಮಹಿಳೆಯರಲ್ಲಿ ಯಾರಿಗಾದರೂ, ಏನಾದರೂ ತೊಂದರೆ, ಅನ್ಯಾಯ ಇತ್ಯಾದಿಗಳಾದರೆ ಆ ಸಮಸ್ಯೆಗಳನ್ನು ಸರಕಾರಿ ವ್ಯಾಪ್ತಿಯಲ್ಲಿ ನಿರ್ವಹಿಸುವ ಭಾಗವಾಗಿಯಷ್ಟೆ ದಲಿತ ಮಹಿಳೆಯನ್ನು ಪರಿಭಾವಿಸಲಾಗಿದೆ. ಆದರೆ ಜೀತ ಮಾಡುವ, ಕೂಲಿ ಮಾಡುವ ದಲಿತ ಮಹಿಳೆಯರನ್ನು (ದಲಿತ ಮಹಿಳೆಯರಲ್ಲಿ ಇವರ ಸಂಖ್ಯೆಯೇ ಅಪಾರ ಎಂಬುದನ್ನು ಮುಖ್ಯವಾಗಿ ಗಮನಿಸಬೇಕು) ದಲಿತ ಮಹಿಳೆಯರೆಂದು ದಲಿತ ಹೋರಾಟ ಇದುವರೆಗೂ ಪರಿಗಣಿಸಿಲ್ಲ. ದಲಿತರ ಸಮಸ್ಯೆಗಳೇನು ಎಂಬುದನ್ನು ಮುಖ್ಯವಾಗಿ ಪರಿಗಣಿಸದೇ ಇರುವುದರಿಂದ, ದಲಿತ ಮಹಿಳೆಯರ ಸಮಸ್ಯೆ ಏನು ಎಂಬುದನ್ನು ಪ್ರತ್ಯೇಕವಾಗಿ ಇದುವರೆಗೂ ಡಿ.ಎಸ್.ಎಸ್ ಗಮನಿಸಿಲ್ಲ.

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನ ಏನು? ಅದು ಯಾವ ರೀತಿಯದು?

ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ನಿರ್ದಿಷ್ಟವಾಗಿ ಪಟ್ಟಿ ಮಾಡಿ ಹೇಳುವಂತಹ ಯಾವ ಪ್ರಯೋಜನವೂ ಆಗಿಲ್ಲ. ದಲಿತರಲ್ಲಿ ಕೆಲವರಿಗೆ ದಲಿತ ಚಳುವಳಿಯಿಂದ ಆಗಿರಬಹುದಾದ ಪ್ರಯೋಜನಗಳ ಒಂದು ಭಾಗ ದಲಿತ ಮಹಿಳೆಗೂ ದಕ್ಕಿರಬಹುದು. ಅದನ್ನು ಬಿಟ್ಟರೆ ನಿರ್ದಿಷ್ಟವಾಗಿ ದಲಿತ ಮಹಿಳೆಯರಿಗೆ ಇಂತಹ ಪ್ರಯೋಜನ ಆಗಿದೆ ಎಂಬುದನ್ನು ತೋರಿಸಿ ಹೇಳಲು ಖಚಿತ ನಿದರ್ಶನಗಳಿಲ್ಲ.

ದಲಿತ ಹೋರಾಟದ ಆರಂಭದ ದಿನಗಳಲ್ಲಿ ಡಿ.ಎಸ್.ಎಸ್ ದಲಿತ ಕೇರಿಗಳಲ್ಲಿ ಜಾಥಾ ನಡೆಸುತ್ತಿತ್ತು. ಅಲ್ಲಿ ಕೋಟಿ ಕೋಟಿ ಬಾಧೆಗಳಲ್ಲಿ ಲಕ್ಷಾಂತರ ನೋವುಗಳಲ್ಲಿ ನೀ ಹುಟ್ಟಿ ಬೆಳೆದೆಯಮ್ಮ ನನ ತಂಗಿ ಅನುಸೂಯ... ಎಂಬ ಹಾಡನ್ನು ಮತ್ತು ತಾಳಿ ಕಟ್ಟುವ ಮುನ್ನ ತವರು ತೊರೆಯುವ ಮುನ್ನ ಬಾಳು ಮುಗಿಯಿತು ತಂಗಿ ನನ್ನ ಕೂಲಿಯ ತಂಗಿ... ಎಂಬ ಹಾಡುಗಳನ್ನು ಹಾಡಲಾಗುತ್ತಿತ್ತು. ಈ ಹಾಡುಗಳು ದಲಿತ ಮಹಿಳೆಯರ ಹೃದಯಗಳನ್ನು ಕಲಕಿದ್ದವು. ಅವರನ್ನು ದಲಿತ ಸಂಘಟನೆಗೆ ಆಕರ್ಷಿಸಿದ್ದವು. ಆದರೆ ಈ ಕಾವ್ಯವನ್ನು ಮುಂದಿನ ದಿನಗಳಲ್ಲಿ ಡಿ.ಎಸ್.ಎಸ್. ಒಂದು ಅಜೆಂಡವಾಗಿ ತೆಗೆದುಕೊಳ್ಳಲೇ ಇಲ್ಲ. ಪರಿಣಾಮವಾಗಿ ದಲಿತ ಮಹಿಳೆಯರನ್ನು ಇಡೀ ಹೋರಾಟಕ್ಕೆ ಹೊರಗಿನವರಾಗಿ ಪರಿಗಣಿಸಲಾಯಿತು. ದಲಿತ ಮಹಿಳೆಯರಲ್ಲಿರುವ ಶೋಷಣೆಯ ಅನುಭವಗಳನ್ನು ಮತ್ತು ಶೋಷಣ ವಿರೋಧಿ ಪ್ರತಿರೋಧಗಳನ್ನು ದಲಿತ ಹೋರಾಟ ತನ್ನ ಶಕ್ತಿಯನ್ನಾಗಿ ಸಂಘಟಿಸಿಕೊಳ್ಳಲೇ ಇಲ್ಲ. ಇದು ಒಂದು ಕಡೆ ದಲಿತ ಮಹಿಳೆಯರಿಗಾದ ನಷ್ಟವಾದರೆ; ಮತ್ತೊಂದು ಕಡೆ ಇದು ದಲಿತ ಹೋರಾಟಕ್ಕಾದ ನಷ್ಟವೂ ಹೌದು.

೩. ದಲಿತ ಚಳುವಳಿಯ ಅವಶ್ಯಕತೆ ಇದೆಯೇ?

ಈ ಪ್ರಶ್ನೆಯನ್ನು ದಲಿತ ಹೋರಾಟದ ಒಳಗಿನಿಂದ ಮತ್ತು ದಲಿತ ಹೋರಾಟದ ಹೊರಗಿನಿಂದ ಕೇಳಬಹುದು. ಇವೆರಡೂ ಪ್ರತ್ಯೇಕ ಪ್ರತ್ಯೇಕ ವಿವರಣೆ ಬಯಸುವ ಪ್ರಶ್ನೆಗಳು. ನೀವು ಕೇಳಿರುವ ಪ್ರಶ್ನೆ ದಲಿತ ಹೋರಾಟದಿಂದ ಹೊರಗೆ ಹುಟ್ಟಿದೆ. ಇದು ಯಾಕೆ ಎಂಬುದನ್ನು ನಂತರ ವಿವರಿಸುತ್ತೇನೆ. ಆದರೆ ಅದಕ್ಕೆ ದಲಿತ ಹೋರಾಟದ ಒಳಗಿನಿಂದ ಉತ್ತರಿಸಬೇಕಾಗಿದೆ. ದಲಿತ ಹೋರಾಟದ ಒಳಗಿನಿಂದ ಈ ಪ್ರಶ್ನೆಯನ್ನು ಕೇಳುವುದಾದರೆ, ದಲಿತ ಹೋರಾಟದ ಉತ್ಕೃಷ್ಟ ಅವಧಿಯಲ್ಲಿ ಅಥವಾ ದಲಿತ ಹೋರಾಟವು ಪ್ರಬಲವಾಗಿ ಬೆಳೆದ ಸ್ಥಿತಿಯಲ್ಲಿ ಈ ಪ್ರಶ್ನೆಯನ್ನು ಕೇಳಬಹುದು. ಆದರೆ ಈಗ ಪರಿಸ್ಥಿತಿ ಏನಾಗಿದೆ? ರಾಜ್ಯದಾದ್ಯಂತ ದಲಿತ ಸಂಘಟನೆಗಳು ಛಿದ್ರಛಿದ್ರವಾಗಿ ಹೋಗಿವೆ. ಅವುಗಳ ನಡುವೆ ತಾತ್ವಿಕವಾದ ಯಾವ ಸಂಬಂಧಗಳೂ ಇಲ್ಲ. ಹಾಗಾಗಿ ಹರಿದು ಹಂಚಿಹೋಗಿರುವ ದಲಿತ ಸಂಘಟನೆಗಳು ಒಂದು ಸಂಘಟನೆಯಾಗಿ, ಒಂದು ಹೋರಾಟವಾಗಿ ಮಾರ್ಪಡಬೇಕಿದೆ. ಇದು ದಲಿತ ಹೋರಾಟಗಳ ಮುಂದಿರುವ ಸಾಮಾನ್ಯ ಸವಾಲು. ಇಂತಹ ಸ್ಥಿತಿಯಲ್ಲಿ 'ದಲಿತ ಮಹಿಳಾ ಚಳುವಳಿಯ ಅವಶ್ಯಕತೆ ಇದೆಯೇ?' ಎಂದು ಕೇಳಿದರೆ, ಹೋರಾಟದ ದೃಷ್ಟಿಕೋನದಲ್ಲಿ ಈ ಪ್ರಶ್ನೆಯನ್ನು ಕೇಳುವ ಭೌತಿಕ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಲ್ಲ ಎಂದಷ್ಟೆ ಹೇಳಬಹುದು.

ಇನ್ನು, ಈ ಪ್ರಶ್ನೆ ದಲಿತ ಹೋರಾಟದ ಹೊರಗೆ ಹುಟ್ಟಿದೆ ಎಂದು ಹೇಳಿದೆ. ಏನು ಹಾಗೆಂದರೆ? ಇಂದು ಮಹಿಳಾ ಪ್ರಶ್ನೆ, ಮಹಿಳಾ ಚಿಂತನೆ, ಮಹಿಳಾ ಹೋರಾಟ ಮುಂತಾದವು ಹೊಟ್ಟೆ ತುಂಬಿದವರ ಮನರಂಜನ

ಕಾರ್ಯಕ್ರಮದ ಭಾಗವಾಗಿವೆ. ಮಾತೆತ್ತಿದರೆ ಪುರುಷನನ್ನು ಮಹಿಳಾ ವಿರೋಧಿ ಎಂದೇ ಗ್ರಹಿಸಲಾಗುತ್ತಿದೆ. ಮಹಿಳಾ ಸ್ವಾತಂತ್ರ್ಯ ಎಂಬುದನ್ನು ಮಹಿಳೆಯ ಸ್ವೇಚ್ಛೆಗೆ ಪರ್ಯಾಯವಾಗಿ ದುರುಪಯೋಗಪಡಿಸಿಕೊಳ್ಳಲಾಗುತ್ತಿದೆ. ಮಹಿಳೆಯರ ಮೇಲಿನ ಅನುಕಂಪದಲ್ಲೇ ಎನ್.ಜಿ.ಓಗಳು ಈ ಕೆಲಸವನ್ನು ಪ್ರಗತಿಪರ ಎಂಬಂತೆ ಮಾಡುತ್ತಿವೆ. ಇದು ಶೈಕ್ಷಣಿಕ ಮತ್ತಿತರ ವಲಯಗಳಲ್ಲಿ ಪರಿಗಣಿಸುವ ಒಂದು ಮುಖ್ಯ ವಿಷಯವಾಗಿ ತೋರಿಸಿಕೊಳ್ಳುತ್ತಿದೆ. ಸೌಲತ್ತುಗಳ ವಂಚಿತರೂ, ಪ್ರೌಢ ವಯಸ್ಸಿನವರೂ ಹೆಣ್ಣುಮಕ್ಕಳ ಅಸಾಮಾನ್ಯ ಶೋಷಣೆಯ ಅನುಭವಗಳನ್ನು ಸರಕಾಗಿ ಬಳಸಿಕೊಳ್ಳಲಾಗುತ್ತಿದೆ. ಮತ್ತೊಂದು ಕಡೆ ವ್ಯವಸ್ಥೆಯ ಶೋಷಕ ವರ್ಗದ ವಿರುದ್ಧ ತಿರುಗಬೇಕಿದ್ದ ಈ ಸಮೂಹದ ಹೆಣ್ಣು ಮಕ್ಕಳ ಪ್ರತಿರೋಧದ ಶಕ್ತಿಯನ್ನು ನಯವಾಗಿ ಪುರುಷರ ಮೇಲೆ ತಿರುಗಿಸಲಾಗುತ್ತಿದೆ. ಈ ಮೂಲಕ ರಾಜಕೀಯ ಆರ್ಥಿಕ ಶೋಷಣೆಯನ್ನು ನಯವಾಗಿ ಮುಚ್ಚಿಡುವಂತೆ ಮಾಡಲಾಗುತ್ತಿದೆ. ಈ ಹೆಣ್ಣುಮಕ್ಕಳು ಇದೇ ತಮ್ಮ ಬಿಡುಗಡೆಯ ದಾರಿ ಎಂದು ನಂಬುವಂತೆ ಮಾಡಲಾಗುತ್ತಿದೆ. ಈ ಮಾತನ್ನು ಹೇಳುವಾಗ ವೀರ ತೆಲಂಗಾಣ ಹೋರಾಟದಲ್ಲಿ ಭೂಮಿ ಮತ್ತು ರಾಜ್ಯಾಧಿಕಾರಕ್ಕಾಗಿ ಹೋರಾಡಿ ಮಡಿದ ಅಸಂಖ್ಯ ಅಮರವೀರ ಮಹಿಳೆಯರು ನನ್ನ ಮುಂದಿದ್ದಾರೆ. ಹೊಟ್ಟೆ ತುಂಬಿದವರು ಮಹಿಳಾ ಪ್ರಶ್ನೆಯನ್ನು ಮನರಂಜನ ಕಾರ್ಯಕ್ರಮವನ್ನಾಗಿ ಮಾಡಿಕೊಂಡಿರುವ ವಲಯದಿಂದ ಅಪ್ರಜ್ಞಾಪೂರ್ವಕ ಸ್ಥಿತಿಯಲ್ಲಿ ಮಹಿಳೆಯ ಪ್ರತ್ಯೇಕತೆಯ ಪ್ರಶ್ನೆಗಳು ಹುಟ್ಟುತ್ತಿವೆ.

ಡಾ. ಬಿ.ಎಂ. ಪುಟ್ಟಯ್ಯ
ಹಿರಿಯ ಶ್ರೇಣಿ ಪ್ರಾಧ್ಯಾಪಕರು,
ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೧. ದಲಿತ ಚಳುವಳಿ ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

'ದಲಿತ' ಎಂಬ ಸಾಮಾಜಿಕ ದಮನಕ್ಕೊಳಗಾದ ಸಮುದಾಯವನ್ನು ತನ್ನ ಕಾಳಜಿಯ ಮುಖ್ಯ ಕೇಂದ್ರವನ್ನಾಗಿಸಿಕೊಂಡ ದಲಿತ ಚಳುವಳಿ.

ದಲಿತ ಮಹಿಳೆಯನ್ನು ದಮನಿತ ಸಾಮಾಜಿಕ ವ್ಯಕ್ತಿಯಾಗಿ ಪರಿಭಾವಿಸಿದೆ. ಆಕೆ ದಲಿತಳಾಗಿರುವುದರ ಜೊತೆಗೆ ಮಹಿಳೆಯೂ ಆಗಿರುವುದರಿಂದ ಆಕೆ ಅನುಭವಿಸುವ ಯಾತನೆ ಎರಡು ಪಟ್ಟಿನದು ಎಂಬ ರೀತಿಯ ತಾತ್ವಿಕ ಸ್ಪಷ್ಟತೆಯನ್ನು ಅದು ಪ್ರಕಟಿಸಿದಂತಿಲ್ಲ. ಆ ಮಾತಿಗೆ ಬಂದರೆ ೭೦ ೮೦ ರ ದಶಕದಲ್ಲಿ ಆರಂಭವಾದ ರೈತ, ದಲಿತ, ಬಂಡಾಯ ಚಳುವಳಿಗಳು ಮಾತ್ರವಲ್ಲದೆ, ಅವಕ್ಕೂ ಹಿಂದಿನ ಮಾರ್ಕ್ಸ್‌ವಾದಿ ನೆಲೆಗಟ್ಟಿನ ಹಲವಾರು ಪಕ್ಷ ಮತ್ತು ಸಮುದಾಯ ಸಂಘಟನೆಗಳೂ ಕೂಡ ಈ ಬಗೆಯ ತಾತ್ವಿಕ ನಿಲುವನ್ನು ಸ್ಪಷ್ಟಪಡಿಸಿರಲಿಲ್ಲ ಎಂಬುದಿಲ್ಲಿ ಗಮನಾರ್ಹ.

ದಲಿತ ಎಂಬ ಸಾಮಾಜಿಕ ಸಮೂಹದಲ್ಲಿ ಆಕೆಯೂ ಶೋಷಿತಳಾದ್ದರಿಂದ ಸಿಗಬೇಕಾದ ಗಮನ ಮಾತ್ರ ಸಹಜವಾಗಿ ಈವರೆಗೆ ಸಿಕ್ಕಿದೆ ಎಂಬುದನ್ನು ನಾವು ಗಮನಿಸಬಹುದು. ಶೋಷಿತ ಸಂವೇದನೆಯಲ್ಲಿ ಮಹಿಳಾ ಸಂವೇದನೆ ಎಂಬುದು ಮತ್ತಷ್ಟು ತಳ ಸ್ವರೂಪದ್ದು ಎಂಬ ಗ್ರಹಿಕೆ ಹೆಚ್ಚು ಕ್ರಿಯಾಶೀಲವಾಗಿದ್ದಲ್ಲಿ ದಲಿತ ಸಂಘಟನೆಗಳ ಮುಂಚೂಣಿಯಲ್ಲಿ ಕೆಲವರಾದರೂ ದಲಿತ ಮಹಿಳಾ ನಾಯಕಿಯರು ರೂಪುಗೊಂಡಿರುತ್ತಿದ್ದರು. ಈಗಿರುವ ಯಾವ ದಲಿತ ಸಂಘಟನೆಯಲ್ಲಿಯೂ ಮಹಿಳೆಯರು ಪ್ರಧಾನ ನಾಯಕತ್ವದಲ್ಲಿ ಇಲ್ಲವೆಂಬುದು

ವಿಷಾದನೀಯ. ಉತ್ತರ ಪ್ರದೇಶದ ಬಿ.ಎಸ್.ಪಿ.ಗೆ ಈಗ ಮಾಯಾವತಿಯವರ ನೇತೃತ್ವವಿದೆ. ಕಾನ್ಷಿರಾಮರ ಉತ್ತರಾಧಿಕಾರಿಯಾಗಿ ಮೂಡಿ ಬಂದ ಮಾಯಾವತಿಯವರು ಮಹಿಳಾ ನಾಯಕಿ ಎಂಬುದಕ್ಕಿಂತ ಹೆಚ್ಚಾಗಿ ದಲಿತ ನಾಯಕಿಯಾಗಿಯೇ ಚಾಲ್ತಿಯಲ್ಲಿದ್ದಾರೆ.

ಇದು ವಿಚಿತ್ರವೇನೂ ಅಲ್ಲ. ಸಾಮಾಜಿಕ ಸಮಸ್ಯೆಗಳ ನಿರ್ವಹಣೆಯಲ್ಲಿ ಅತ್ಯಂತ ಪ್ರಧಾನ ಸ್ವರೂಪದ ಸಮಸ್ಯೆಯೇ ಮೊಟ್ಟ ಮೊದಲು ಗುರುತಿಸಲ್ಪಡುತ್ತದೆ. ನಂತರದಲ್ಲಿ ಕ್ರಮವಾಗಿ ಅದರ ವಿಶಿಷ್ಟ ಸಮಸ್ಯೆಗಳು ಗುರುತಿಸಲ್ಪಡುತ್ತವೆ. ದಲಿತ ಮಹಿಳೆ ದಲಿತಳಾದುದರಿಂದ ಅನುಭವಿಸುವ ಬಡತನ, ದಮನ, ಶೋಷಣೆ, ಅವಮಾನಗಳು ಮುಖ್ಯ ಪ್ರಶ್ನೆಯಾಗಿ ಈವರೆಗೆ ಹೆಚ್ಚು ಪರಿಶೀಲಿಸಲ್ಪಟ್ಟಿವೆ. ಆಕೆ ಮಹಿಳೆಯೂ ಆಗಿರುವುದರಿಂದ ಎದುರಿಸುವ ಇಬ್ಬಗೆಯ ದಮನ ಈಗ ಹೆಚ್ಚು ಚರ್ಚೆಗೊಳ್ಳಬೇಕಾಗಿದೆ.

ದಲಿತ ಚಳುವಳಿ ದಲಿತ ಮಹಿಳೆಯ ಮೇಲಿನ ಕೌಟುಂಬಿಕ ದಮನವನ್ನು ಅಷ್ಟಾಗಿ ಗಮನಿಸದಿರುವುದಕ್ಕೆ ಬೇರೆ ಕೆಲವು ಕಾರಣಗಳೂ ಇದ್ದಂತಿವೆ ಎಂಬುದನ್ನು ನಾನಿಲ್ಲಿ ಗಮನಿಸುತ್ತಿದ್ದೇನೆ. ಭೂ ಒಡೆತನದ ಕುಟುಂಬಗಳಲ್ಲಿ ಇರುವ ಮಹಿಳೆಯ ಸ್ಥಾನಮಾನದ ಪ್ರಶ್ನೆ ನೋಡಿದರೆ ದಲಿತ ಮಹಿಳೆ ಹೆಚ್ಚಿನ ಸಲ ಸ್ವತಃ ಕೂಲಿ ದುಡಿಯುವವಳಾದ್ದರಿಂದ ಮಹಿಳೆಯಾಗಿ ಅನುಭವಿಸುವ ಅತಂತ್ರತೆ ಸಾಪೇಕ್ಷವಾಗಿ ಸ್ವಲ್ಪ ಕಡಿಮೆ. ಹಾಗೆಯೇ ದಲಿತ ಗಂಡಸಿಗೆ ಸಾಮಾನ್ಯ ಸಾಮಾಜಿಕ ವಿದ್ಯಮಾನಗಳ ನಿರ್ವಹಣೆಯಲ್ಲಿ ಹೇಳಿಕೊಳ್ಳುವಂತಹ ಪಾತ್ರ ಇರುವುದಿಲ್ಲವಾದುದರಿಂದ ಆ ವಿಷಯದಲ್ಲಿ ಒಬ್ಬ ಗಂಡಸಾಗಿ ಆತ ದಲಿತ ಮಹಿಳೆಗೆ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಲ್ಲ ಎಂದು ದೂರುವುದು ಸ್ವಲ್ಪ ಕಷ್ಟಕರವಾಗುತ್ತದೆ.

ಲೈಂಗಿಕತೆಗೆ ಸಂಬಂಧಪಟ್ಟ ದಮನದ ವಿಷಯದಲ್ಲಿ ದಲಿತ ಮಹಿಳೆ ಭೂ ಒಡೆತನದ ಜಾತಿಗಳ ಮಹಿಳೆಗೆ ಹೋಲಿಸಿದರೆ ಆಕೆ ದಲಿತ ಬಡವಿಯಾದುದರಿಂದ ಶೋಷಣೆಗೊಳಪಡುವ ಸಂದರ್ಭಗಳೇ ಹೆಚ್ಚು ಕಣ್ಣಿಗೆ ಬೀಳುತ್ತವೆ. ಹಾಗೆ ಆ ಮಹಿಳೆಯನ್ನು ಶೋಷಣೆಗೊಳಪಡಿಸುವ ಗಂಡಸರು ಮೇಲ್ಜಾತಿಯ ಧನಿಕರಾಗಿರುತ್ತಾರೆ ಎಂಬ ಅಂಶವೇ ಮೇಲ್ಮೈಯಲ್ಲಿರುವುದನ್ನು ಕೂಡ ನಾವಿಲ್ಲಿ ಗಮನಿಸಬೇಕು.

ಇದೇನೇ ಆದರೂ ಕೌಟುಂಬಿಕ ಸಂಬಂಧಗಳಲ್ಲಿ ದಲಿತ ಮಹಿಳೆ ಅನುಭವಿಸುತ್ತಿರುವ ದೈಹಿಕ ಹಿಂಸೆಯ ತೀವ್ರತೆಯನ್ನು, ಲಿಂಗ ತಾರತಮ್ಯದ ಪರಿಗಣನೆಗಳನ್ನು ನಾವು ನಿರ್ಲಕ್ಷಿಸುವಂತಿಲ್ಲ. ಕುಡುಕ ಗಂಡ ಅಥವಾ ಖಾಯಿಲೆ ಪೀಡಿತ ಅಶಕ್ತ ಗಂಡನಿಂದಾಗಿ ಇಡೀ ಕುಟುಂಬ ನಿರ್ವಹಣೆಯ ಜವಾಬ್ದಾರಿ ಹೊರಬೇಕಾಗಿ ಬಂದಿರುವ ದಲಿತ ಮಹಿಳೆಯರ ಸಂಖ್ಯೆ ಹೆಚ್ಚಾಗಿದೆ. ದಲಿತ ಚಳುವಳಿ ಇವುಗಳನ್ನೂ ಪ್ರಮುಖ ಅಂಶಗಳೆಂಬಂತೆ ಪರಿಗಣಿಸಿ ದಲಿತ ಮಹಿಳೆಯರ ಸಮಸ್ಯೆಗಳನ್ನು ಕೈಗೆತ್ತಿಕೊಳ್ಳುವ ಪ್ರತ್ಯೇಕ ಕಾರ್ಯಸೂಚಿಯನ್ನು ಇನ್ನೂ ರೂಪುಗೊಳಿಸಿಕೊಳ್ಳಬೇಕಾಗಿದೆ.

೨. ದಲಿತ ಚಳುವಳಿಯಿಂದ ದಲಿತ ಮಹಿಳೆಗೆ ಆಗಿರುವ ಪ್ರಯೋಜನವೇನು? ಅದು ಯಾವ ರೀತಿಯದು?

ದಲಿತ ಚಳುವಳಿ ನಮ್ಮ ಸಮಾಜದ ಹಲವಾರು ದಮನಿತ ಜಾತಿಗಳಿಗೆ ಒಂದು ಸ್ವಾಭಿಮಾನವನ್ನು ತಂದುಕೊಟ್ಟಿದೆ. ಸಂಘಟನಾತ್ಮಕ ಪ್ರಯತ್ನಗಳಿಂದ ಪ್ರತಿಭಟಿಸುವ ಹಾಗೂ ತನ್ನ ಹಕ್ಕುಗಳಿಗಾಗಿ ಆಗ್ರಹಿಸುವ ಗುಣಗಳನ್ನೂ ಒದಗಿಸಿದೆ. ದಮನಿತ ಜಾತಿಯಲ್ಲಿ ಹುಟ್ಟಿದ್ದು ತನ್ನ ಅಪರಾಧವಲ್ಲ ಎಂಬ ಆರೋಗ್ಯವಂತ ಚಿಂತನೆಯನ್ನೂ ಒದಗಿಸಿದೆ. ದಲಿತ ಮಹಿಳೆಗೆ ದಲಿತ ಸಮುದಾಯದ ಸದಸ್ಯಳಾಗಿ ಶಿಕ್ಷಣದ ಅವಕಾಶ

ಪಡೆಯುವ ಉದ್ಯೋಗದಲ್ಲಿ ಮೀಸಲಾತಿ ಪಡೆಯುವ, ಕಾನೂನುಬದ್ಧ ರಕ್ಷಣೆ ಹೊಂದುವ ಜಾಗೃತಿಯನ್ನು ಉಂಟುಮಾಡಿದೆ.

ಈ ವಿಷಯದಲ್ಲಿ ಹೆಣ್ಣು ಗಂಡು ಎಂಬ ಪ್ರಜ್ಞಾಪೂರ್ವಕ ತಾರತಮ್ಯವನ್ನು ದಲಿತ ಚಳುವಳಿ ಮಾಡಿಲ್ಲ. ಹಾಸ್ಟೆಲ್ ಸಮಸ್ಯೆಯೆಂದರೆ ವಿದ್ಯಾರ್ಥಿ ಹಾಸ್ಟೆಲ್ ಅಥವಾ ವಿದ್ಯಾರ್ಥಿನಿ ಹಾಸ್ಟೆಲ್ ಯಾವುದೇ ಆಗಿರಲಿ ಹೋರಾಟದ ಕಾರ್ಯಕ್ರಮವನ್ನು ಕೈಗೊಂಡಿದೆ. ವಿದ್ಯಾರ್ಥಿನಿ ಹಾಸ್ಟೆಲ್ ನಿವಾಸಿಗಳಿಗೆ ಅವರು ಮಹಿಳೆಯರಾದುದರಿಂದ ಬೇರೆ ಬಗೆಯ ಕೆಲವು ಸಮಸ್ಯೆಗಳು ಇರಬಹುದು ಎಂಬ ತಿಳುವಳಿಕೆಯಿಂದ ಪ್ರತ್ಯೇಕ ಕಾರ್ಯಕ್ರಮ ರೂಪಿಸಿಲ್ಲ ಎಂಬುದೇನೋ ನಿಜ. ಹಾಗೆಯೇ ಹಾಸ್ಟೆಲ್ ಹುಡುಗರು ಚಳುವಳಿಯಲ್ಲಿ ಕ್ರಿಯಾಶೀಲರಾದಷ್ಟು ಪ್ರಮಾಣದಲ್ಲಿ ಹಾಸ್ಟೆಲ್ ಹುಡುಗಿಯರು ಆಗಿಲ್ಲ ಎಂಬುದೂ ನಿಜ. ದಲಿತತನವನ್ನು ಹೇರಿದ ಜಾತಿ ಸಮಾಜದ ದುಷ್ಟತನ ದಲಿತ ಚಳುವಳಿಯ ಕಣ್ಣಿಗೆ ಬಿದ್ದಿದೆ. ಮನಸ್ಸಿಗೆ ನಾಟಿದೆ. ಅದೇ ಸಮಯದಲ್ಲಿ ಅದೇ ಜಾತಿ ಸಮಾಜ ಕಲಿಸಿರುವ ಪುರುಷಾಧಿಪತ್ಯದ ಧೋರಣೆ ಎಂಬ ದೋಷ ಇನ್ನೂ ದಲಿತ ಚಳುವಳಿಯ ಮುಖ್ಯ ಪರಿಶೀಲನೆಯಾಗಿ ರೂಪುಗೊಂಡಿಲ್ಲ.

೩. ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆ ಅವಶ್ಯಕತೆ ಇದೆಯೇ? ಇಲ್ಲವೇ? ಯಾಕೆ?

ಪ್ರತ್ಯೇಕ ದಲಿತ ಮಹಿಳಾ ಚಳುವಳಿ ಅವಶ್ಯಕತೆ ಇದೆ. ಹಾಗೆಯೇ ರೈತ ಮಹಿಳಾ ಚಳುವಳಿ, ಕಾರ್ಮಿಕ ಮಹಿಳಾ ಚಳುವಳಿ, ಹಿಂದುಳಿದ ಜಾತಿ ಮಹಿಳಾ ಚಳುವಳಿ ಎಲ್ಲವೂ ಅವಶ್ಯಕವೇ. ಯಾಕೆಂದರೆ ಮಹಿಳೆಗೆ ಎರಡು ಬಗೆಯ ಅಸ್ಮಿತೆಗಳಿವೆ. ಆಕೆ ಸೇರಿರುವ ಸಾಮಾಜಿಕ ಪಂಗಡದ್ದು ಒಂದು, ಆಕೆ ನೈಸರ್ಗಿಕವಾಗಿ ಪಡೆದಿರುವ ಲಿಂಗತ್ವದ್ದು ಇನ್ನೊಂದು.

ಲಿಂಗತ್ವ ಎನ್ನುವುದು ಈಗ ಕೇವಲ ನೈಸರ್ಗಿಕ ಭಿನ್ನತೆ ಮಾತ್ರವಾಗಿ ಉಳಿದಿಲ್ಲ. ನೂರಾರು ವರ್ಷಗಳಿಂದ ಅದು ಸಾಮಾಜಿಕ ತಾರತಮ್ಯದ ತಳಹದಿಯೂ ಆಗಿ ಬೆಳೆದಿದೆ. ಹಾಗಾಗಿ ದಲಿತ ಚಳುವಳಿಯ ಒಂದು ಕ್ರಿಯಾಶೀಲ ಘಟಕವಾಗಿ ಪ್ರತ್ಯೇಕ ದಲಿತ ಮಹಿಳಾ ಚಳುವಳಿಯೂ ಬೇಕು.

ವರದಕ್ಷಿಣೆ ಸಮಸ್ಯೆ, ಕೌಟಂಬಿಕ ಹಿಂಸೆ, ಲೈಂಗಿಕ ಕಿರುಕುಳ ಮುಂತಾದುವು. ಈಗ ದಲಿತ ಸಮುದಾಯಕ್ಕೆ ಸೇರಿದ ಮಧ್ಯಮ ವರ್ಗಗಳಲ್ಲಿ ಸಾಮಾನ್ಯ ಸಮಸ್ಯೆಯಾಗತೊಡಗಿವೆ. ಇವುಗಳಲ್ಲದೆ, ಲಿಂಗತ್ವಕ್ಕೆ ಸಂಬಂಧಪಟ್ಟ ಅಸಮಾನತೆಗಳು, ತಾರತಮ್ಯಗಳು ಕೂಡ ಮೇಲ್ಜಾತಿ ಸಮಾಜದ ಅನುಕರಣೆಯಿಂದಾಗಿ ದಲಿತ ಸಮುದಾಯದೊಳಗೆ ಬೇರುಬಿಡತೊಡಗಿವೆ. ಈ ಕಾರಣದಿಂದಾಗಿಯೇ ಎಲ್ಲ ಸಮುದಾಯಗಳ ನಡುವೆಯೂ ಮಹಿಳಾ ಚಳುವಳಿ ಒಂದು ಪ್ರತ್ಯೇಕ ಘಟಕವಾಗಿ ರೂಪುಗೊಳ್ಳಬೇಕು. ಅದೇ ಸಮಯದಲ್ಲಿ ಸಾಮಾನ್ಯಾಂಶಗಳ ವಿಷಯದಲ್ಲಿ ಅದು ದಲಿತ ಚಳುವಳಿಯೊಂದಿಗೆ ಸಂಯೋಜಿತವೂ ಆಗಿರಬೇಕು.

೪. ದಲಿತ ಮಹಿಳಾ ಚಳುವಳಿ ಯಾವ ಸ್ವರೂಪದಲ್ಲಿರಬೇಕು?

ದಲಿತ ಮಹಿಳಾ ಚಳುವಳಿ ಹೇಗಿರಬೇಕು ಎಂಬುದನ್ನು ನಿರ್ದಿಷ್ಟವಾಗಿ ಮಹಿಳಾ ಚಳುವಳಿಯ ಚಿಂತಕರು ಹಾಗೂ ಕ್ರಿಯಾಶೀಲ ದಲಿತ ಮಹಿಳೆಯರು ರೂಪಿಸಿದರೆ ಸೂಕ್ತವಾಗಿರುತ್ತದೆ. ದಲಿತ ಮಹಿಳೆ 'ದಲಿತ' ಪರಿಕಲ್ಪನೆಯ ಅವಿಭಾಜ್ಯ ಅಂಗ. ಅದನ್ನು ಬಿಟ್ಟುಕೊಡಬಾರದು. ಹಾಗೆಯೇ ಬಹಳ ಸಲ ಎಲ್ಲಾ ಮಹಿಳೆಯರೂ

ಒಂದಿಲ್ಲೊಂದು ರೀತಿಯಲ್ಲಿ ಮಹಿಳೆ ಎಂಬ ಕಾರಣಕ್ಕೆ ದಲಿತ ಪರಿಸ್ಥಿತಿಯಲ್ಲಿರುವವರು. ಈ ಎರಡೂ ಅಂಶಗಳನ್ನು ಸೂಕ್ತ ರೀತಿಯಲ್ಲಿ ಪರಿಭಾವಿಸಿಕೊಂಡು ಅದಕ್ಕೆ ಅನುಗುಣವಾದ ಸ್ವರೂಪವನ್ನು ರೂಪಿಸಿದರೆ ಸೂಕ್ತ.

ಅವರೆಲ್ಲ ಸೇರಿ ರೂಪಿಸುವ ದಲಿತ ಮಹಿಳಾ ಚಳುವಳಿಗೆ ನಮ್ಮಂತಹವರು ಬೆಂಬಲ ಸೂಚಿಸಬೇಕು. ಬೆಂಬಲ ಸೂಚಿಸಿ ಅವರ ಕಾರ್ಯಕ್ರಮ ಗಟ್ಟಿಗೊಳಿಸುವ ದಿಸೆಯಲ್ಲಿ ಶ್ರಮಿಸಬೇಕಾಗಿರುವುದು ಮೊದಲ ಹಂತ. ಅದು ಜಾರಿಗೊಳ್ಳುವ ಹಂತದಲ್ಲಿ ನಮಗೆ ಕಂಡುಬರುವ ಕೆಲವು ಅಭಿಪ್ರಾಯಗಳನ್ನು ಅವರ ಜೊತೆ ಹಂಚಿಕೊಳ್ಳಲು ಪ್ರಯತ್ನಿಸಬಹುದು. ಆದರೆ ಯಾವುದೇ ಕಾರಣಕ್ಕೂ ದಲಿತ ಮಹಿಳಾ ಚಳುವಳಿ ಪುರುಷರ ನಾಯಕತ್ವದಲ್ಲಿ ರೂಪುಗೊಳ್ಳಬಾರದು.

ಪುರುಷರನ್ನೂ ಒಳಗೊಂಡು ಅದು ಬೆಳೆಯಬೇಕೆಂಬುದು ಸರಿಯಾದುದಾದರೂ ಪುರುಷರ ಪಾಲ್ಗೊಳ್ಳುವಿಕೆ ಪೂರಕ ಸ್ವರೂಪದಲ್ಲಿರಬೇಕೇ ಹೊರತು ನೀತಿನಿಯಮಾವಳಿ ರೂಪಿಸುವ ರೀತಿಯಲ್ಲಿ ಅಲ್ಲ.

ಡಾ. ಬಂಜಗೆರೆ ಜಯಪ್ರಕಾಶ
ಕುಂಬಾರ ಕಾಲೋನಿ,
ಹಾರೋಹಳ್ಳಿ - ೫೬೨ ೧೧೨,
ಕನಕಪುರ ತಾ. ಬೆಂ. ಗ್ರಾ.ಜಿ.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

ಬೇರೆ ಚಳುವಳಿಗೆ ಹೋಲಿಸಿದರೆ ದಲಿತ ಚಳುವಳಿ ದಲಿತ ಮಹಿಳೆಯನ್ನು ಸಮಾನ ಗೌರವದಿಂದ ನೋಡಿದೆ. ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಭಾಗವಹಿಸಿರುವುದು ದಲಿತ ಚಳುವಳಿಯಲ್ಲಿಯೇ. ಧಾರ್ಮಿಕ ಅನುಕರಣೆಯಿಂದಾಗಿ ದಲಿತ ವ್ಯಕ್ತಿ, ದಲಿತ ಮಹಿಳೆಯನ್ನು ಅಧೀನದಲ್ಲಿಟ್ಟುಕೊಂಡಿರುವುದು ನಿಜ. ಆರ್ಥಿಕ ಹಾಗೂ ಅಧಿಕಾರ ರಾಜಕಾರಣದಲ್ಲಿ ದಲಿತ ವ್ಯಕ್ತಿ ಮತ್ತು ಮಹಿಳೆ ಸಮ ನೆಲೆಯಲ್ಲಿ ಇದ್ದಾರೆ.

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು? ಅದು ಯಾವ ರೀತಿಯದು?

ದಲಿತ ಚಳುವಳಿಯಿಂದ ದಲಿತ ಮಹಿಳೆಗೆ ಪ್ರತ್ಯೇಕ ಅನುಕೂಲ ಆಗಿದೆ ಎಂದು ಹೇಳಲಾರೆ. ಸಾಂಪ್ರದಾಯಿಕ, ಧಾರ್ಮಿಕ ಶಿಕ್ಷಣದ ಜೊತೆಗೆ ದಲಿತ ಚಳುವಳಿಯ ಉದ್ದೇಶಿತ ಶಿಕ್ಷಣ ಅವರಿಗೆ ದೊರೆತಿರುವುದೇ ಲಾಭ. ಶಿಕ್ಷಣದಲ್ಲಿ ದಲಿತ ಮಹಿಳೆಯರಿಗೆ ಪುರುಷರಷ್ಟೇ ಅವಕಾಶ ಪಡೆಯುವ ಬಾಗಿಲು ತೆರೆದಿದೆ.

೩. ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆ ಅವಶ್ಯಕತೆ ಇದೆಯೇ? ಇಲ್ಲವೇ? ಯಾಕೆ?

ದಲಿತ ಮಹಿಳಾ ಚಳುವಳಿ ದಲಿತ ಪುರುಷನ ವಿರುದ್ಧ ಆಗಬೇಕಿದೆ. ಮಹಿಳಾ ಚಳುವಳಿಗಳ ಸಂದರ್ಭದಲ್ಲಿ ಅವಕಾಶಗಳ ದೃಷ್ಟಿಯಿಂದ ದಲಿತ ಮಹಿಳಾ ಚಳುವಳಿಯ ಆದ್ಯತೆಗಳು ಬೇರೆಯಾಗಿವೆ. ಮಹಿಳಾ ಚಳುವಳಿ ಅವಳಿಗೆ ವಿಶೇಷ ಆದ್ಯತೆಯನ್ನು ಕೊಡಬೇಕಿದೆ. ಉದಾಹರಣೆ: ೩೩% ಮಹಿಳಾ ಮೀಸಲಾತಿಯಲ್ಲಿ ಅವಳಿಗೆ ಆದ್ಯತೆ ಇರಲೇಬೇಕು.

೪. ದಲಿತ ಮಹಿಳಾ ಚಳುವಳಿಯು ಯಾವ ಸ್ವರೂಪದಲ್ಲಿರಬೇಕು ಎಂದು ನಿಮಗನಿಸುತ್ತದೆ?

ಅದು ಗಂಡು ವಿರೋಧಿ ಆಗುವುದಕ್ಕಿಂತ ಅವರಿಗಿರುವ ಸಾಂಸ್ಕೃತಿಕ ಗಂಡಾಂತರಗಳ ವಿರುದ್ಧ ನಡೆಯಬೇಕು.

ಜಾಗತೀಕರಣ ಪ್ರಕ್ರಿಯೆಯಲ್ಲಿ ಅಮೂಲ್ಯ ವಸ್ತುಗಳಾದ ಭೂಮಿ, ಪ್ರಕೃತಿ ಮತ್ತು ಹೆಣ್ಣು ಬಹುಬೇಗ ಮಾರುಕಟ್ಟೆ ಮಾಲುಗಳಾಗುತ್ತಿವೆ. ಅದರಲ್ಲಿ ಈ ಮುಗ್ಧ ಅವಿದ್ಯಾವಂತ ಹಾಗೂ ಬಡತನದಲ್ಲಿರುವ ದಲಿತ ಮಹಿಳೆಯರು ಬಹುಬೇಗ ಬಿಕರಿಯಾಗುವ ಅಪಾಯವಿದೆ. ಶಿಕ್ಷಣ ಕೊಡುವುದೇ ಮೊದಲ ಚಳುವಳಿಯಾಗಬೇಕು. ಆರ್ಥಿಕ ಸ್ವಾವಲಂಬನೆಗೆ ಸ್ಥಳೀಯ ಗೃಹ ಕೈಗಾರಿಕೆಗಳನ್ನು ಆಶ್ರಯಿಸಬೇಕು.

ಉದ್ಯೋಗ ವಿಚಾರ ಮೊದಲು, ಮುಂಜಿ ಮದುವೆ ಆಮೇಲೆ ಎನ್ನುವಂತಿರಬೇಕು. ಹೆಣ್ಣಿನ ಬದುಕು ಗಂಡಿಗಾಗಿ ಮಾತ್ರವಲ್ಲ ತನಗಾಗಿ ಎನ್ನುವ ನಿಲುವು ಬೇಕು.

ಪ್ರೊ. ಹಿ.ಶಿ. ರಾಮಚಂದ್ರೇಗೌಡ
ನಿರ್ದೇಶಕರು, ಕನ್ನಡ ಅಧ್ಯಯನ ಕೇಂದ್ರ,
ಮಾನಸ ಗಂಗೋತ್ರಿ, ಮೈಸೂರು ವಿ.ವಿ,
ಮೈಸೂರು.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ದಲಿತ ಪುರುಷರಷ್ಟೇ ಅವಕಾಶ ಸಿಕ್ಕಿದೆ. ಬದುಕಿನ ರಂಗದಲ್ಲಿ ಲಿಂಗ ಬೇಧಗಳನ್ನು ಹೊಡೆದು ಹಾಕಿ ದಲಿತ ಚಳುವಳಿ ಮಹಿಳೆಯರಿಗೆ ಸ್ವಾತಂತ್ರ್ಯ, ಸಮಾನತೆ ನೀಡಿದೆ. ಇದಕ್ಕೆ ಬಿಟಿ ಲಲಿತಾನಾಯಕ್, ಎಚ್. ಗಿರಿಜಮ್ಮ, ಇಂದಿರಾ ಕೃಷ್ಣಪ್ಪ, ಕಮಲಾ ಹಂಪನಾ, ಡಾ. ಸಮತಾ ದೇಶಮನೆ, ದು.ಸರಸ್ವತಿ, ಡಾ.ಎಂ. ಸುಮಿತ್ರಾ ಅವರ ಬದುಕು ಬರಹಗಳಿಂದ ತಿಳಿಯಬಹುದಾಗಿದೆ.

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು? ಅದು ಯಾವ ರೀತಿಯದು?

ದಲಿತ ಚಳುವಳಿ ದಲಿತ ಮಹಿಳೆಯರನ್ನು ವಚನಕಾರರು, ಸೂಳೆ ಸಂಕವ್ವೆಯನ್ನು ವಚನಕಾರ್ತಿಯಾಗಿ, ಶರಣೆಯನ್ನಾಗಿ ಕಂಡಂತೆ ಕಾಣುತ್ತಿದೆ. ಆದರೆ ಇದು ಬದುಕು ಬರಹ ಬಲ್ಲ ಜನಾಂಗಗಳಲ್ಲಿವೆ. ಇನ್ನೂ ಹಳ್ಳಿಗಾಡಿನ ಅನಕ್ಷರಸ್ಥ, ಬಡತನದ ಮಧ್ಯದ ಜನರಲ್ಲಿ ಹೆಣ್ಣಿನ ಶೋಷಣೆ, ಹೀನಾಯಗಳು ಹಾಗೆ ಇವೆ.

೩. ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆಯ ಅವಶ್ಯಕತೆ ಇದೆಯೇ? ಇಲ್ಲವೇ? ಯಾಕೆ?

ದಲಿತ ಮಹಿಳೆ ಸಂಪೂರ್ಣವಾಗಿ, ಸಮಗ್ರವಾಗಿ ಬೆಳವಣಿಗೆ ಹೊಂದಲು ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆಯ ಅಗತ್ಯವಿದೆ. ಪುರುಷರ ಜೊತೆ ಕೂಡಿ ಇದ್ದರೆ ಐವತ್ತು ಶತಮಾನಗಳು ಕಳೆದರೂ ಏಳ್ಗೆ ಆಗದು. ಅದಕ್ಕೆ ಇಂದಿರಾ ಕೃಷ್ಣಪ್ಪ, ಮಾವಳ್ಳಿ ಶಂಕರ್ ಅವರು ಹೋದ ತಿಂಗಳು ಬೆಂಗಳೂರಿನಲ್ಲಿ ಕರ್ನಾಟಕ ಮಹಿಳಾ ಚಳುವಳಿ ರಚಿಸಿದ್ದು ಗೌರವಾರ್ಹವಾದುದು.

೪. ದಲಿತ ಮಹಿಳಾ ಚಳುವಳಿಯ ಯಾವ ಸ್ವರೂಪದಲ್ಲಿರಬೇಕು ಎಂದು ನಿಮಗನಿಸುತ್ತದೆ?

ದಲಿತ ಮಹಿಳಾ ಚಳುವಳಿ ಪುರುಷ ವಿರೋಧಿಯಾಗದೇ ತನ್ನ ಏಳ್ಗೆಗಾಗಿ ದುಡಿಯಬೇಕು. ಉಸಿರಿಗೆ ಉಸಿರಾಗಿರುವ ಮಹಿಳೆಯರ ಸಕಲ ಶ್ರೀಸಾಮಾನ್ಯರ ಬದುಕು ಬದಲಿಸುವತ್ತಾ ಚಳುವಳಿ ಪರ್ಯಾಯಗಳನ್ನು ಹುಡುಕಿಕೊಳ್ಳಬೇಕು. ಪುರುಷರ ನಿಯಮಾವಳಿಗಳನ್ನು ರೂಢಿಸುವಲ್ಲಿ ಸೇರಿಸಿಕೊಳ್ಳಬಾರದು. ಹೆಸರಿಗೆ ಬೇರೆಯಾಗಿದ್ದರೂ ಸಾಮೂಹಿಕವಾಗಿ ಚಳುವಳಿಗಳು ಒಬ್ಬರ ಸುಖ ದುಃಖವನ್ನು ಇನ್ನೊಬ್ಬರು ಅರ್ಥಮಾಡಿಕೊಂಡು ಒಟ್ಟಾಗಿ ಹೋರಾಡುವುದು ಒಳ್ಳೆಯದು.

- ಚನ್ನಣ್ಣ ವಾಲೀಕಾರ.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

೭೦ ರ ದಶಕದಲ್ಲಿ ಹುಟ್ಟಿದ ದಲಿತ ಚಳುವಳಿ ಆಗೀನ ಸಾಮಾಜಿಕ, ಆರ್ಥಿಕ, ಅಸಿಷ್ಪತೆಗಳ ಸವಾಲುಗಳು ಪ್ರತ್ಯೇಕವಾಗಿ ದಲಿತ ಮಹಿಳೆಯನ್ನು ಕಾಡದೇ, ಇಡೀ ದಲಿತ ಸಮುದಾಯವನ್ನೇ ಸವಾಲಾಗಿ ಸ್ವೀಕರಿಸುವ ಪರಿಸ್ಥಿತಿಯಲ್ಲಿ ದಲಿತ ಮಹಿಳೆ ಸಾಮುದಾಯದ ಒಂದು ಅಂಶವಾಗಿಯೇ ಆ ಸವಾಲುಗಳಿಗೆ ಪ್ರತಿಕ್ರಿಯಿಸುತ್ತಿದ್ದಳು. ಕಾರಣ ಆಕೆಗೆ ಸಪರೇಟ್ ಎನ್ನುವ ಸ್ಥಿತಿ ಆಗಿ ಅನಿವಾರ್ಯವಾಗಿರಲಿಲ್ಲ. ಯಾಕೆಂದರೆ ಸಾಮಾಜಿಕ ಬಹಿಷ್ಕಾರ, ಕೊಲೆ, ಸುಲಿಗೆ ದಬ್ಬಾಳಿಕೆ, ದೌರ್ಜನ್ಯ ಇವುಗಳು ಇಡಿಯಾಗಿ ಇಡೀ ದಲಿತ ಸಮುದಾಯವೇ ಎದುರಿಸಬೇಕಾದಾಗ ಆಕೆ ಕೂಡ ಆ ಸಮಾಜದ ಒಂದು ಭಾಗವಾಗಿಯೇ ಅದರಲ್ಲಿ ಇದ್ದ ಕಾರಣ ಹೋರಾಟಕ್ಕೆ ತನ್ನದೇ ಆದ ಛಾಪನ್ನು ಆಕೆ ಹೊಂದಿದ್ದಳು. ಅದು ಕೆಲವು ಸಮಯದಲ್ಲಿ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಇದ್ದವು.

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು? ಅದು ಯಾವ ರೀತಿಯದು?

ದಲಿತ ಚಳುವಳಿ ಇಡೀ ದಲಿತ ಸಮುದಾಯಕ್ಕೆ ಒಂದು ಸ್ವಾಭಿಮಾನದ ಸಂಕೇತವನ್ನು ಮೂಡಿಸಿತಲ್ಲದೆ, ಕರ್ನಾಟಕದ ಇತಿಹಾಸದಲ್ಲೇ ಯಾವ ಚಳುವಳಿಗಳೂ ಕೂಡ ಪ್ರಜ್ಞಾ ಪೂರಕವಾಗಿ ಸಾಮಾಜಿಕ, ಅಸಮಾನತೆಗಳ ವಿರುದ್ಧ, ಹೋರಾಡಲು ಪಣ ತೊಡದ ಅಂದಿನ ಸ್ಥಿತಿಯಲ್ಲಿ ೭೦ ರ ದಶಕದಲ್ಲಿ ಸಾಂಸ್ಕೃತಿಕ ಬದುಕಿನಲ್ಲಿ ವಿಶೇಷವಾಗಿ ದಲಿತರ ಗುಡಿಸಲುಗಳಲ್ಲಿ ಹೋರಾಟದ ಹಾಡುಗಳು ವಿಶೇಷವಾಗಿ ದಲಿತರ ಮಹಿಳೆಯರ ದಿನ ನಿತ್ಯದ ಸೂಕ್ತಿಗಳಾಗಿದ್ದವು. ಲಚುಮಮ್ಮೋ... ಅನಸೂಯ... ಸೆರಗು ಸೊಂಟಕೆ ಸುತ್ತಿಕೋ... ಸಿಂಹದಂತೆ ನಡೆದು ಬನ್ನಿ... ಮುಂತಾದ ಹಾಡುಗಳು ಅವರನ್ನು ತಮ್ಮ ವಿಮೋಚನೆಯ ದಿಕ್ಕನ್ನು ಕಂಡುಕೊಳ್ಳಲು ಸಹಾಯ ಆದ ಕಾರಣ ದಲಿತ ಮಹಿಳಾ ಘಟಕಗಳು ಪ್ರಾರಂಭವಾಗಿ ಅನಸೂಯಮ್ಮನ ರೇಪ್ ಕೇಸು ಇಡೀ ಕರ್ನಾಟಕ ಸರಕಾರವನ್ನೇ ಅಲ್ಲಾಡಿಸಿದ ಘಟನೆ ಒಂದು ಐತಿಹಾಸಿಕ ಸಾಕ್ಷಿ. ಆ ಕಾರಣದಿಂದಲೇ ಚಂದ್ರಗುತ್ತಿ ಜಾತ್ರೆಯ ಸಂದರ್ಭದಲ್ಲಿ ನಡೆಯುವ ದೇವದಾಸಿ ಪದ್ಧತಿಯನ್ನು ಹೆಂಡ ಬೇಡ ಎಂದಿತು. ದೇವದಾಸಿ ವಿರೋಧಿ ಹೋರಾಟವನ್ನು ಮಾಡಿತು. ಅಂತರ್‌ಜಾತಿ ವಿವಾಹ, ದೇವದಾಸಿ ವಿವಾಹ, ಮಹಿಳಾ ಹಾಸ್ಟಲ್‌ಗಳ ಸಮಸ್ಯೆಗಳ ಇತ್ಯರ್ಥ ಅನೇಕ ಬದಲಾವಣೆಗಳ ನಾಂದಿಗೆ ದಲಿತ ಸಂಘಟನೆ ಬುನಾದಿಯಾಯಿತು.

೩. ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆಯ ಅನಿವಾರ್ಯತೆ?

ದಲಿತ ಚಳುವಳಿಯು ಹುಟ್ಟಿನ ಸಂದರ್ಭದಲ್ಲಿ ಮಹಿಳಾ ಸಂಘಟನೆಯ ಪ್ರತ್ಯೇಕತೆಯ ಅವಶ್ಯಕತೆ ಎದ್ದು ಕಾಣಲಿಲ್ಲ. ಯಾಕೆಂದರೆ ಅಂದು ನಡೆಯುವ ಎಲ್ಲಾ ದಬ್ಬಾಳಿಕೆಗಳು ಪ್ರತ್ಯೇಕವಾಗಿರದೇ ಇಡೀ ದಲಿತ ಸಮುದಾಯವನ್ನು ಜಾತಿವಾದಿಗಳು ಟಾರ್ಗೆಟ್ ಮಾಡುತ್ತಿದ್ದರು. ಕಾರಣ ಅಂದು ಸಂಘಟನೆಯ ಭಾಗವಾಗಿಯೇ ಆಕೆ ಅದರಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಿದ್ದಳು. ಯಾವಾಗ ಅನಸೂಯಮ್ಮನ ದೌರ್ಜನ್ಯ, ಶೇಷಗಿರಿಯಪ್ಪನ ಕೊಲೆ ಪ್ರಕರಣಗಳು ಬಯಲಾದವೋ ಆಗ ದಲಿತ ಮಹಿಳಾ ಸಂಘಟನೆಯ ಅಸ್ತಿತ್ವದ ಅನಿವಾರ್ಯತೆ ಕಂಡು ಬಂದ ಕಾರಣ ದಲಿತ ಸಂಘಟನೆಯ ಅಡಿಯಲ್ಲೇ ಅದು ತನ್ನನ್ನು ಗುರುತಿಸಿಕೊಳ್ಳುವುದರ ಜೊತೆಗೆ ಹೋರಾಟದ ದಾರಿಯಲ್ಲಿ ಮುನ್ನಡೆಯ ತೊಡಗಿತು.

೪. ದಲಿತ ಮಹಿಳಾ ಚಳುವಳಿಯು ಯಾವ ಸ್ವರೂಪದಲ್ಲಿರಬೇಕು?

ಈಗಿನ ಪರಿಸ್ಥಿತಿಯಲ್ಲಿ ದಲಿತ ಚಳುವಳಿ ತನ್ನದೇ ಆದ ಸ್ವಾತಂತ್ರ್ಯವನ್ನು ಹೊಂದಿರಬೇಕು. ಇಂದಿನ ಖಾಸಗೀಕರಣ ಮತ್ತು ನಗರೀಕರಣದ ಪರಿಸ್ಥಿತಿಯಲ್ಲಿ ಮಹಿಳೆಯ ಪಾತ್ರ ಬಹಳ ಪ್ರಮುಖವಾದದ್ದರಿಂದ ಸಮಾಜ ಬದಲಾವಣೆಯ ಮುಂಚೂಣಿಯಲ್ಲಿ ಆಕೆ ಅನಿವಾರ್ಯವಾಗಿ ಚಳುವಳಿಯಲ್ಲಿ ತೊಡಗಿಕೊಳ್ಳಬೇಕು. ವರದಕ್ಷಿಣೆ ಪದ್ಧತಿ, ಲೈಂಗಿಕ ಕಿರುಕುಳ, ವೇಶ್ಯಾವಾಟಿಕೆ, ಪುರುಷಪ್ರಧಾನ ಸಾಮಾಜಿಕ ಪರಿಕೆಗಳು, ಲಿಂಗ ಭ್ರೂಣ ಹತ್ಯೆ, ಅನಕ್ಷರತೆ, ಮಹಿಳಾ ಮೀಸಲಾತಿ ಹೀಗೆ ಅನೇಕ ಸಮಸ್ಯೆಗಳು ಅನಿವಾರ್ಯವಾಗಿ ಮಹಿಳಾ ಸಮುದಾಯ ಎದುರಿಸಬೇಕಾದ ಅನಿವಾರ್ಯತೆ ಇದ್ದ ಕಾರಣ ಸಮಾಜದ ಅರ್ಧ ಭಾಗವಾಗಿರುವ ಮಹಿಳೆ ಸಮಾಜ ಬದಲಾವಣೆಯಲ್ಲಿ ತನ್ನದೇ ಆದ ಪಾತ್ರವನ್ನು ಅವಳು ನಿರ್ವಹಿಸಲೇಬೇಕಾದ ಅನಿವಾರ್ಯತೆ ಎದ್ದು ಕಾಣುತ್ತದೆ. ಯಾಕೆಂದರೆ ಸರ್ಕಾರದ ಪಾಲಿಸಿಗಳನ್ನು ನ್ಯಾಯಾಂಗದ ದೋಷಗಳನ್ನು ಕೂಡ ಇಂದು ಎನರ್ಜಿಯಾಗಿ ತೆಗೆದುಕೊಳ್ಳಬೇಕಾದ ಅನಿವಾರ್ಯತೆ ಇದೆ.

ಪಿ. ದಾನಪ್ಪ
ದಲಿತ ಹೋರಾಟಗಾರರು,
ಗಾಂಧಿನಗರ, ಮಸ್ಕಿ,
ರಾಯಚೂರು ಜಿಲ್ಲೆ.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನ ಏನು? ಅದು ಯಾವ ರೀತಿಯದು?

೩. ದಲಿತ ಚಳುವಳಿಯ ಅವಶ್ಯಕತೆ ಇದೆಯೇ?

೪. ದಲಿತ ಮಹಿಳಾ ಚಳುವಳಿ ಯಾವ ಸ್ವರೂಪದಲ್ಲಿ ಇರಬೇಕು ಎಂದು ನಿಮಗನಿಸುತ್ತದೆ?

ಎಲ್ಲಾ ಪ್ರಶ್ನೆಗಳನ್ನು ಒಟ್ಟಿಗೆ ಸೇರಿಸಿ ಪ್ರತಿಕ್ರಿಯಿಸುವ ಪ್ರಯತ್ನ ಮಾಡುತ್ತೇನೆ. ಸಾಮಾಜಿಕ ಚಳುವಳಿಗಳು ಸಮಾಜವೊಂದರ ಭಾಗವಾಗಿಯೇ ಹುಟ್ಟಿಕೊಂಡಿರುತ್ತವೆ. ಹಾಗಾಗಿ ಅದರ ಗುರಿಗಳು, ಪರಿಭಾಷೆಗಳು ಆಯಾ ಸಮಾಜದ ರಾಜಕೀಯ, ಆರ್ಥಿಕ ಹಿನ್ನೆಲೆಯನ್ನಾಧರಿಸಿಯೇ ರೂಪಗೊಂಡಿರುತ್ತದೆ. ಅವುಗಳ ಸೈದ್ಧಾಂತಿಕ ನೆಲೆಗಟ್ಟಿನ ದೂರಗಾಮಿತ್ವವು ಅದರ ವ್ಯಾಪ್ತಿಯೊಳಗೆ ಆಲೋಚಿಸುತ್ತಿರುತ್ತದೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ ೧೯೯೦ರ ದಶಕದವರೆಗೂ ದಲಿತ ಹಾಗೂ ಮಹಿಳಾ ಚಳುವಳಿಗಳೆರಡೂ ಏಕ ಕೇಂದ್ರಿತ ಹಾಗೂ ಏಕಾಕಾರದ ಗುರುತಿನೊಂದಿಗೆ ವ್ಯವಹರಿಸಿದ್ದಾಗಿದೆ. ಮಹಿಳಾ ಚಳುವಳಿಯು ಲಿಂಗಾಧಾರಿತ ಗುರುತನ್ನು ಮಾತ್ರ ಪ್ರಾಮಾಣ್ಯವಾಗಿಯೂ, ದಲಿತ ಚಳುವಳಿಯು ಜಾತಿ ಗುರುತನ್ನು ಅಂತಿಮವಾಗಿಯೂ ಪರಿಭಾವಿಸಿ ತಮ್ಮ ಚಟುವಟಿಕೆಯನ್ನು ಕೈಗೊಂಡಿವೆ.

೧೯೯೦ರ ನಂತರದಲ್ಲಿ ಆಧುನಿಕೋತ್ತರ ಚಿಂತನೆಯ ಪ್ರಭಾವದಿಂದಾಗಿ ಸಾಮಾಜಿಕ ಚಳುವಳಿಗಳ ಏಕಾಕಾರದ ಗ್ರಹಿಕೆ ಕುರಿತಂತೆ ಪ್ರಶ್ನೆಗಳು ಹುಟ್ಟಿಕೊಂಡವು ಆದರೆ ಈ ಸಂದರ್ಭದಲ್ಲಿ ಎರಡೂ ಚಳುವಳಿಗಳು ಆತ್ಮ ವಿಮರ್ಶೆಗೆ ತೊಡಗುವುದಕ್ಕಿಂತ ಹೆಚ್ಚಾಗಿ ಪರಸ್ಪರ ಆರೋಪ, ಪ್ರತ್ಯಾರೋಪಕ್ಕೆ ಹೆಚ್ಚಿನ ಗಮನವಿತ್ತಂತೆ ಬಾಸವಾಗುತ್ತದೆ. ತಮ್ಮನ್ನು ತಾವು ಸಾಭೀತುಪಡಿಸಿಕೊಳ್ಳುವ ಕಾರಣಕ್ಕಾಗಿ ತಮ್ಮ ತಮ್ಮ ಚಳುವಳಿಗಳಲ್ಲಿ

ದಲಿತ ಮಹಿಳೆಯ ಗುರುತನ್ನು, ಅಸ್ಮಿತ್ವವನ್ನು ಹುಡುಕಿ ತೋರಿಸುವ ಪ್ರಯತ್ನ ಮಾಡಿವೆ. ಹಾಗೆಯೇ ತಮ್ಮಲ್ಲಿನ ಏಕತೆಗೆ ಭಂಗ ತರುವ ಈ ಒಳಗುರುತುಗಳ ಬಗ್ಗೆ ಆತಂಕಗೊಂಡಿವೆ. ಸೈದ್ಧಾಂತಿಕ ಸೂಕ್ಷ್ಮತೆ ಹಾಗೂ ರಾಜಕೀಯ ಅಖಂಡತೆಗಳನ್ನು ಒಟ್ಟೊಟ್ಟಿಗೆ ಕೊಂಡೊಯ್ಯಬಲ್ಲ ಹೋರಾಟದ ಕಾರ್ಯತಂತ್ರವೊಂದನ್ನು ಆವಿಷ್ಕಾರಿಸಿಕೊಳ್ಳಲಾರದ ಅಸಹಾಯಕತೆಯೇ ಈ ಆತಂಕಕ್ಕೆ ಕಾರಣವಾಗಿರಬಹುದಾಗಿದೆ. ಬಹುಶಃ ಲಿಂಗ ಹಾಗೂ ಜಾತಿ ಅಸಮಾನತೆಗಳನ್ನು ಪರಸ್ಪರ ಪೂರಕವಾಗಿಸಿಕೊಂಡು ಮೇಲು ವರ್ಗದ ಪುರುಷರು ತಮ್ಮ ಹಿತಾಸಕ್ತಿಯನ್ನು ಈಡೇರಿಸಿಕೊಳ್ಳುತ್ತಿರುವ ಸಂಗತಿಯನ್ನು ವಿವರಿಸಿಕೊಳ್ಳಲು ಸಾಧ್ಯವಾದರೆ ಈ ಆತಂಕದಿಂದ ಬಿಡುಗಡೆ ಹೊಂದಬಹುದಾಗಿದೆ. ಈ ಹೊತ್ತು ಸಮುದಾಯದಲ್ಲಿರುವ ಬಹು ಗುರುತುಗಳನ್ನು ಅನುಸಂಧಾನಗೊಳಿಸಿಕೊಂಡು ಸಾಮುದಾಯಿಕ ಚಳುವಳಿಯೊಂದನ್ನು ಪರಿಧಿಗೆ ತಳ್ಳಲ್ಪಟ್ಟಿರುವ ಜನರ ಹಿತಾಸಕ್ತಿಗನುಗುಣವಾಗಿ ರೂಪಿಸಬೇಕಿದೆ. ಈ ಚಳುವಳಿಯ ತಳಹದಿ ಹಾಗೂ ನಾಯಕತ್ವಗಳೆರಡೂ ದಲಿತ ಮಹಿಳೆಯದಾಗಬೇಕು. ಏಕೆಂದರೆ ಇದು ಏಕಕಾಲಕ್ಕೆ ಸಮಸ್ಯೆಯ ಮೂಲವನ್ನು ಹಾಗೂ ದಲಿತ ಮತ್ತು ಮಹಿಳಾ ಚಳುವಳಿಗಳೆರಡರ ಪೂರ್ವಾಗ್ರಹಗಳನ್ನು ಭೇದಿಸುವುದಾಗುತ್ತದೆ. ಅಂದರೆ ದಲಿತ ಮಹಿಳಾ ಚಳುವಳಿಯೆಂಬುದು ದಲಿತ ಹಾಗೂ ಮಹಿಳಾ ಚಳುವಳಿಗಳೆರಡನ್ನು ಬೆಸೆಯುವ ಒಂದು ಅಖಂಡತೆಯ ಪರಿಕಲ್ಪನೆಯಾಗಬೇಕೇ ಹೊರತು ಪ್ರತ್ಯೇಕ ಚಳುವಳಿಯಾಗಿ ಅಲ್ಲ.

ಎಂ. ಉಷಾ

ಪ್ರವಾಚಕರು, ಭಾಷಾಂತರ ಅಧ್ಯಯನ ವಿಭಾಗ,

ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೧. ದಲಿತ ಚಳುವಳಿಯು ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?

೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನ ಏನು? ಅದು ಯಾವ ರೀತಿಯದು?

೩. ದಲಿತ ಚಳುವಳಿಯ ಅವಶ್ಯಕತೆ ಇದೆಯೇ?

೪. ದಲಿತ ಮಹಿಳಾ ಚಳುವಳಿ ಯಾವ ಸ್ವರೂಪದಲ್ಲಿ ಇರಬೇಕು ಎಂದು ನಿಮಗನಿಸುತ್ತದೆ?

ಇಲ್ಲಿಯವರಿಗೂ ಯಾವುದೇ ಚಳುವಳಿಗಳಿರಬಹುದು, ಚಳುವಳಿಗಳು ಸಕ್ಸಸ್ ಆಗುವುದಕ್ಕೆ, ಹೋರಾಟವನ್ನು ಸ್ಟ್ರಾಂಗ್ ಮಾಡುವುದಕ್ಕೆ, ಮಹಿಳೆಯರನ್ನು ಬಳಸಿಕೊಳ್ಳಲಾಗಿದೆ. ಚಳುವಳಿಗಳು ಯಾವುದೇ ಆಗಿರಬಹುದು ಅವು ಮಹಿಳೆಯರನ್ನು ಬಿಟ್ಟು ಚಳುವಳಿ ಮಾಡಿದರೆ ಅವು ಸಕ್ಸಸ್ ಆಗುವುದಿಲ್ಲ. ಮಹಿಳೆಯರು ಅಲ್ಲಿ ಇದ್ದಾರೆ ಎಂದ ಮಾತ್ರಕ್ಕೆ ಅವರ ಬಗ್ಗೆ ಕನ್ಸರ್ನ್ ಏನು ಇರಲ್ಲ. ಅಲ್ಲಿ ನನ್ನ ಸಮಸ್ಯೆ ಎಂಬುವುದು ಪುರುಷನದೇ ಆಗಿರುತ್ತದೆ.

ದಲಿತ ಚಳುವಳಿಯನ್ನು ನಾವು ಅಂಬೇಡ್ಕರಿಂದಲೇ ಗುರುತಿಸುತ್ತೇವೆ. ಅಂಬೇಡ್ಕರವರು ಮಹಿಳೆಯರ ಬಗ್ಗೆ ಮಾತನಾಡಿದ್ದಾರೆ. ಆದರೆ ಅವರು ಮಹಿಳೆಯರ ವಿಷಯದಲ್ಲಿ ಜನರಲ್ ಆಗಿ ಮಾತನಾಡಿದ್ದಾರೆ. ಸಮಾಜದಲ್ಲಿನ ಜಾತಿ ಶ್ರೇಣೀಕರಣವನ್ನು ಗಂಡಸರ ಮೂಲಕವೇ ಗುರುತಿಸುತ್ತಾರೆ. ಅದು ಮಹಿಳೆಯರ ಮೇಲೆ ಬೀರಿದ ಪರಿಣಾಮವನ್ನು ಗುರುತಿಸುವುದಿಲ್ಲ. ಮಹಿಳೆಯರು ಕೂಡ ಜಾತಿ ಶ್ರೇಣೀಕರಣವಾಗಿ ವಿಂಗಡಿಸಲ್ಪಟ್ಟಿದ್ದಾರೆ. ಆ ವಿಂಗಡಣೆಗೆ ಅನುಗುಣವಾಗಿ ಅವರಿಗೂ ಸಮಸ್ಯೆಗಳಿವೆ, ವೇದನೆಗಳಿವೆ ಎಂಬುವುದನ್ನು ಗುರುತಿಸಿಲ್ಲ. ದಲಿತ ಚಳುವಳಿಗಳು ಇಲ್ಲಿಯವರಿಗೂ ಮಾಡಿರುವುದು ಇದನ್ನೇ.

ಮೇಲ್ಜಾತಿ ಗಂಡಸರಿಂದ ನಮ್ಮ ಹೆಣ್ಣು ಮಕ್ಕಳ ಮೇಲೆ ಶೋಷಣೆ ನಡೆದಿವೆ ಎಂದು ಹೇಳುತ್ತಾರೆ. ಆದರೆ ಸ್ವತಃ ತಾವು ತಮ್ಮ ಮಹಿಳೆಯರ ಮೇಲೆ ನಡೆಸುವ ಶೋಷಣೆ ಬಗ್ಗೆ ಹೇಳುವುದಿಲ್ಲ. ಮೇಲ್ಜಾತಿ ಪುರುಷಶಾಹಿ ಮೌಲ್ಯಗಳ ಜೊತೆಗೆ ಸ್ವಜಾತಿ ಪುರುಷಶಾಹಿ ಮೌಲ್ಯಗಳನ್ನು ನಿರಾಕರಿಸಿದಾಗ ಮಾತ್ರ ಸಮಾನತೆ ಬರಲು ಸಾಧ್ಯ. ದಲಿತ ಚಳುವಳಿ ತುಂಬಾ ಸ್ಟ್ರಾಂಗ್ ಆಗಿ ನಡೆಯುತ್ತಿದ್ದ ಸಂದರ್ಭದಲ್ಲಿ ದಲಿತ ಹೋರಾಟಗಾರರೆಲ್ಲಾ ಬೇರೆ ಜಾತಿ ಮಹಿಳೆಯರನ್ನು ಮದುವೆಯಾದರು. ಇದು ದಲಿತ ಮಹಿಳೆಯರಿಗೆ ತುಂಬಾ ಹೊಡೆತ ಕೊಟ್ಟಿತು. ಅಂತರ್‌ಜಾತಿ ವಿವಾಹದಿಂದ ಜಾತಿ ಬದಲಾಯಿತೆ ಎಂದು ನೋಡಿದರೆ ಜಾತಿ ಬದಲಾಗಿಲ್ಲ. ಇನ್ನು ಗಟ್ಟಿಯಾಗಿದೆ. ತಳಸಮುದಾಯದ ಮಹಿಳೆಯರನ್ನು ಯಾವ ಮೇಲ್ಜಾತಿ ಪುರುಷರು ಮದುವೆಯಾಗುವುದಿಲ್ಲ ಯಾಕೆ? ಒಬ್ಬ ಸುದಾರಿತ ದಲಿತ ಪುರುಷ ತಮ್ಮ ಸಮುದಾಯದ ಮಹಿಳೆಯನ್ನೇ ಮದುವೆಯಾಗಿ ಆ ಸಮುದಾಯವನ್ನೇ ಸುಧಾರಿಸುತ್ತಾ ಹೋಗಬೇಕು. ಆದರೆ ದಲಿತ ಚಳುವಳಿಯ ನಾಯಕರಾರು ಈ ಕೆಲಸವನ್ನು ಮಾಡಲಿಲ್ಲ. ದಲಿತ ಚಳುವಳಿ ಎಡವಿದ್ದೇ ಅಲ್ಲಿ.

ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ತುಂಬಾ ಇದೆ. ಆದರೆ ಆ ಚಳುವಳಿ ರಾಜಕೀಯ ಅಜೆಂಡಾವನ್ನು ಹಿಡಿಯಬಾರದು. ರಾಜಕೀಯ ಅಜೆಂಡಾ ತೆಗೆದುಕೊಂಡರೆ ಅಂತಹ ಚಳುವಳಿ ಕೊಲ್ಯಾಪ್ಸ್ ಆಗುತ್ತದೆ. ಅದು ಸಾಮಾಜಿಕ ಚಳುವಳಿಯಾಗಿಯೇ ಉಳಿದುಕೊಳ್ಳಬೇಕು. ದಲಿತ ಸ್ತ್ರೀವಾದವನ್ನು ದಲಿತ ಪುರುಷರು ಕಟ್ಟುವುದು ಅಪಾಯ ಅವರು ತಮಗೆ ಹೇಗೆ ಬೇಕೋ ಹಾಗೆ ಕಟ್ಟುತ್ತಾರೆ. ದಲಿತ ಮಹಿಳಾ ಚಳುವಳಿಯನ್ನು ದಲಿತ ಮಹಿಳೆಯರೇ ಮಾಡಬೇಕು. ಅಲ್ಲಿ ದಲಿತ ಮಹಿಳೆಯರ ಬಗ್ಗೆ ಕಾಳಜಿ ಇರುವ ಎಲ್ಲರೂ ಅದರಲ್ಲಿ ಭಾಗವಹಿಸಬಹುದು. ದಲಿತ ಸ್ತ್ರೀವಾದ ಜಾತಿ ಹಿಡಿದುಕೊಂಡು ಹೋದರೆ ಕಷ್ಟ. ದಲಿತ ಮಹಿಳೆಯರು ಎಚ್ಚರಗೊಳ್ಳಬೇಕು. ಅವರ ಬಗ್ಗೆ ಅವರೇ ಮಾತನಾಡಬೇಕು. ಪ್ರತ್ಯೇಕವಾಗಿಯೇ ಚಳುವಳಿ ರೂಪಗೊಳ್ಳಬೇಕು. ದಲಿತ ಮಹಿಳಾ ಚಳುವಳಿಯಲ್ಲಿ ದಲಿತ ಮಹಿಳೆಯರದೇ ನಾಯಕತ್ವವಿರಬೇಕು. ನೀತಿನಿಯಮಾವಳಿಯನ್ನು ಅವರೇ ರೂಪಿಸುವಂತಾಗಬೇಕು.

ಡಾ. ಶೈಲಜಾ ಹಿರೇಮಠ
ಪ್ರವಾಚಕರು,
ಮಹಿಳಾ ಅಧ್ಯಯನ ವಿಭಾಗ,

ಅಧ್ಯಾಯ ೬. ಸಮಾರೋಪ

ಅಧ್ಯಾಯ - ೬
ಸಮಾರೋಪ

ಜಗತ್ತಿನ ಶ್ರೀಮಂತ ರಾಷ್ಟ್ರಗಳು ಜಾಗತೀಕರಣವನ್ನು ಆಹ್ವಾನಿಸಿಕೊಂಡು ಅಪ್ಪುಗೆಯನ್ನು ಮಾಡಿಕೊಳ್ಳುತ್ತಿರುವ ಸಂದರ್ಭದಲ್ಲಿಯೇ ಭಾರತದಂತಹ ಬಡ ದೇಶಗಳು ಜಾಗತೀಕರಣವನ್ನು ವಿರೋಧಿಸುತ್ತಿವೆ. ಕ್ರಿ.ಪೂ. ಕಾಲದಿಂದಲೂ ನಮ್ಮ ಸಂಸ್ಕೃತಿಯ ಮೇಲೆ ಜಾಗತೀಕ ಸಂಸ್ಕೃತಿಗಳ ದಾಳಿ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಹೊರ ಸಂಸ್ಕೃತಿಗಳನ್ನು ಅತ್ಯಂತ ವಿವೇಚನೆಯಿಂದ ನೋಡುವ ನಮ್ಮ ಸಂಸ್ಕೃತಿ ಜಾಯಮಾನಕ್ಕೆ ಒಗ್ಗುವ ವಿಚಾರಗಳನ್ನು ಸ್ವೀಕರಿಸಿ, ಒಲ್ಲದ ವಿಚಾರಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾ ಬಂದಿದೆ. ಆದರೂ ಜಾಗತೀಕರಣ ತನ್ನ ಕರಾಳ ಬಾಹುಗಳನ್ನು ವಿಸ್ತರಿಸಿ ತಮ್ಮ ಪರಿಣಾಮಗಳನ್ನು ಬೀರಿದೆ. ದಲಿತ ಸಂಸ್ಕೃತಿಗೆ ಜಾಗತೀಕರಣ ಬಹು ದೊಡ್ಡ ಸವಾಲನ್ನೊಡ್ಡಿದೆ. ಜಾಗತೀಕರಣ ಪ್ರಹಾರಕ್ಕೆ ಇಡೀ ದೇಸೀ ಸಂಸ್ಕೃತಿ ಅಲ್ಲಾಡುತ್ತಿದೆ. ಇನ್ನೂ ದಲಿತ ಸಂಸ್ಕೃತಿಗಳು ಇದರ ಪರಿಣಾಮಗಳನ್ನು ಬೀಕರವಾಗಿ ಅನುಭವಿಸುತ್ತಿವೆ.

ಜಾಗತೀಕರಣವು ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಲಯಗಳ ಎಲ್ಲದರಲ್ಲೂ ಸಂಕೀರ್ಣವಾಗಿ ಹಬ್ಬಿ ಹೋಗಿರುವುದರಿಂದ ದಲಿತರಿಗೆ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚಾಗಿ ಹೋಗಿವೆ. ಇದು ದಲಿತರನ್ನು ಸಾಯಲೂ ಬಿಡದೆ, ತ್ರಿಶಂಕು ಸ್ಥಿತಿಯಲ್ಲಿ ಉಸಿರುಗಟ್ಟಿಸಿದೆ. ಜಾತಿಯ ಕಾರಣದಿಂದ, ಲಿಂಗದ ಕಾರಣದಿಂದ, ಕೆಲಸದ ಸ್ಥಿತಿಯ ಕಾರಣದಿಂದ ದಲಿತ ಮಹಿಳೆ ಇನ್ನಷ್ಟು ನೋವನ್ನು ಅನುಭವಿಸುವಂತಾಗಿದೆ. ಅಭಿವೃದ್ಧಿಯ ಪಥ ಎಂದು ನಂಬಿರುವಂತಹ ಸ್ಥಳಗಳಿಂದ ದಲಿತರು ಹೆಚ್ಚಿನ ತಾರತಮ್ಯಕ್ಕೆ, ಅಸ್ಪೃಶ್ಯತೆಗೆ ಒಳಗಾಗಿದ್ದಾರೆ.

ಸರ್ಕಾರವು ಜಾರಿಗೆ ತಂದಿರುವ ಉದಾರೀಕರಣದ ಆರ್ಥಿಕ ನೀತಿಯಿಂದಾಗಿ ಬಳ್ಳಾರಿ ಜಿಲ್ಲೆಯಾದ್ಯಂತ ಗಣಿಗಾರಿಕೆಗೆ ಸಂಬಂಧಿಸಿದ ಅನೇಕ ಕೈಗಾರಿಕೆಗಳು ತಲೆ ಎತ್ತಿವೆ. ಇವುಗಳು ದಲಿತ ಕುಟುಂಬಗಳ ಮೇಲೆ ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ. ಇಂತಹ ಗಣಿ ಮತ್ತು ಕೈಗಾರಿಕೆಗಳಲ್ಲಿ ದಲಿತ ಮಹಿಳೆಯರಿಗೆ ಕಡಿಮೆ ಕೂಲಿಗಳನ್ನು ಕೊಡುವುದರ ಮೂಲಕ ಹೆಚ್ಚಿನ ಲಾಭವನ್ನು ಗಳಿಸಲಾಗುತ್ತಿದೆ. ಅನಕ್ಷರತೆ, ಅಜ್ಞಾನ, ಬಡತನದಿಂದ, ಜಾತಿಯ ಅಸ್ಪೃಶ್ಯತೆಯಿಂದ ತತ್ತರಿಸುತ್ತಿರುವ ದಲಿತರು ಇಂತಹ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದರಿಂದ ಅವರ ಜೀವನ ಮಟ್ಟದ ದುಃಸ್ಥಿತಿಯನ್ನು ಇನ್ನಷ್ಟು ಹೆಚ್ಚಾಗಿಸಿದೆ. ಅವರಿಗೆ ಲಾಭ, ಉತ್ತಮ ಜೀವನ ಕನಸು, ಆಕಾಶ ಕುಸುಮ.

ಹೈದ್ರಾಬಾದ್ ಕರ್ನಾಟಕದ ಒಂದು ಜಿಲ್ಲೆಯಾದ ಬಳ್ಳಾರಿಯಲ್ಲಿ ಹೆಣ್ಣು ಮಕ್ಕಳು ಶಿಕ್ಷಣ ಕಲಿಯುವುದು ಕಠಿಣ ಪರಿಸ್ಥಿತಿಯಿಂದ ಕೂಡಿದೆ. ಅದರಲ್ಲಿ ದಲಿತ ಮಹಿಳಾ ಶಿಕ್ಷಣ·ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ದಲಿತರು ಮತ್ತು ದಲಿತೇತರರ ಮಧ್ಯೆ ಇರುವ ಸಾಕ್ಷರತೆಯ ಪ್ರಮಾಣವನ್ನು ನೋಡಿದರೆ ಇದರ ನಿಜವಾದ ಸ್ವರೂಪ ಅರ್ಥವಾಗದೆ ಇರದು. ಹಿಂದೆ ಇದಕ್ಕೆ ಜಾತಿ, ಅಸ್ಪೃಶ್ಯತೆಯ ಹುಟ್ಟು ಕಾರಣವಾದರೆ ಇಂದು ಅದರ ಜೊತೆ ಜಾಗತೀಕರಣದ ಪರಿಣಾಮಗಳು ಬಂದು ಸೇರಿಕೊಂಡಿವೆ.

ದಲಿತ ಮಹಿಳೆಯರು ದಿನವಿಡೀ ದುಡಿಯುವುದರಿಂದ ಅವರು ಮನೆಯಲ್ಲಿ ಸಣ್ಣ ಮಕ್ಕಳನ್ನು ನೋಡಿಕೊಳ್ಳಲು ದೊಡ್ಡ ಮಕ್ಕಳನ್ನು ಶಾಲೆಗೆ ಕಳುಹಿಸುವುದಿಲ್ಲ. ಮಕ್ಕಳನ್ನು ಸಹ ದುಡಿಯಲು ಕರೆದುಕೊಂಡು

ಹೋದರೆ ದುಡಿಯುವ ಕೈಗಳು ಹೆಚ್ಚಾಗಿ, ಕೂಲಿಯೂ ಹೆಚ್ಚಾಗುತ್ತದೆ ಎಂದು ಭಾವಿಸುತ್ತಾರೆ. ಆದರೆ ದುರಂತವೆಂದರೆ ದುಡಿಯುವ ಕೈಗಳು ಹೆಚ್ಚಾದಂತೆ ಆರೋಗ್ಯಕ್ಕಾಗಿ ಖರ್ಚು ಮಾಡುವುದೂ ಸಹ ಹೆಚ್ಚಾಗುತ್ತದೆ. ಇವರು ದಿನಕ್ಕೆ ೧೨ ರಿಂದ ೧೪ ಗಂಟೆಗಳ ಕಾಲ ಕೆಲಸವನ್ನು ಮಾಡುವುದರಿಂದ ಇವರ ಆರೋಗ್ಯ ಭಯಾನಕ ಕೂಪಕ್ಕೆ ಇಳಿದಿದೆ. ಗಣಿಗಾರಿಕೆಯಲ್ಲಿ ಯಾವುದೇ ಸೇಫ್ಟಿ ಮೆಜೆರ್ಸ್ ಇಲ್ಲದೆ ಕೆಲಸ ಮಾಡುವುದರಿಂದ ಇವರಿಗೆ ಕಾಯಿಲೆಗಳು ಬಹಳ ಬೇಗ ಅಂಟಿಕೊಳ್ಳುತ್ತವೆ. ಇವರಿಗೆ ಬಹಳ ಬೇಗ ಬರುವ ಕಾಯಿಲೆಗಳೆಂದರೆ ಟಿ.ಬಿ, ಕಿಡ್ನಿ ಫೇಲೂರ್, ತಲೆ ನೋವು, ಚರ್ಮ ಸಂಬಂಧಿ ಕಾಯಿಲೆ, ಶ್ವಾಸಕೋಶ ಕಾಯಿಲೆಗಳು.

ಜಿಲ್ಲೆಯಲ್ಲಿ ಗಣಿಗಾರಿಕೆ ಹಾಗೂ ಹಂಪಿಯು ಪ್ರವಾಸೋದ್ಯಮವು ಗರಿಷ್ಠ ಪ್ರಮಾಣದಲ್ಲಿ ವಿಸ್ತರಿಸುತ್ತಿರುವುದರಿಂದ ಇತರೆಡೆಗಳಿಂದ ವಲಸೆ ಬರುವ ಜನರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ವೇಶ್ಯಾ ವೃತ್ತಿಯು ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಇದಕ್ಕೆ ಬಹಳ ಬೇಗ ಹೆಚ್ಚಿನ ಸಂಖ್ಯೆಯಲ್ಲಿ ಬಲಿಯಾಗುವವರು ಬಡ ದಲಿತ ಮಹಿಳೆಯರು. ಕೆಲವರು ಬಲವಂತವಾಗಿ ಈ ನರಕದ ಕೂಪಕ್ಕೆ ಬಿದ್ದರೆ ಇನ್ನು ಕೆಲವರು ಬಡತನ, ವ್ಯವಸ್ಥೆಯ ಮೋಸದಿಂದ ಇದರ ಸುಳಿಗೆ ಸಿಲುಕಿದ್ದಾರೆ. ಇಡೀ ಕರ್ನಾಟಕದಲ್ಲಿ ಏಡ್ಸ್ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಬಳ್ಳಾರಿ ಮೂರನೇ ಸ್ಥಾನವನ್ನು ಪಡೆದುಕೊಂಡಿರುವುದನ್ನು ಗಮನಿಸಿದರೆ ಇದರ ಭೀಕರ ಸ್ಥಿತಿ ಅರ್ಥವಾಗದೇ ಇರದು. ಎಚ್.ಐ.ವಿಗೆ ಒಳಗಾದ ದಲಿತ ಮಹಿಳೆಯರು ಅತ್ತ ಮನೆಯವರ ಸಂಪರ್ಕವನ್ನು ಕಳೆದುಕೊಂಡು ಇತ್ತ ನಂಬಿ ಬಂದವರ ಸಂಬಂಧವನ್ನು ಕಳೆದುಕೊಂಡು ಸಾಯುವ ಧೈರ್ಯವಿಲ್ಲದೆ ಬದುಕನ್ನು ಭೀಕರವಾಗಿ ಅನುಭವಿಸುತ್ತಿದ್ದಾರೆ. ಆದರೆ ಅಷ್ಟು ಸಾಮಾನ್ಯವಾಗಿ ಇಂತಹ ವಿಷಯಗಳನ್ನು ಮಹಿಳೆಯರು ಹೇಳಿಕೊಳ್ಳುವುದಿಲ್ಲ. ಹಣದ ಆಸೆಗಾಗಿ ಪುರುಷರೇ ಮಧ್ಯವರ್ತಿಗಳಾಗಿದ್ದುಕೊಂಡು ವೇಶ್ಯಾ ವೃತ್ತಿಯನ್ನು ಮಾಡಿಸುತ್ತಿದ್ದಾರೆ ಎಂದು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಮಾಹಿತಿ ಸಿಕ್ಕಿತು. ಆದರೆ ಅದರ ಸ್ವರೂಪವನ್ನು ಅಷ್ಟು ಬೇಗ ಕಂಡು ಹಿಡಿಯಲು ಆಗುವುದಿಲ್ಲ. ಆ ರೀತಿಯ ಸಾಹಸಕ್ಕೆ ಕೈ ಹಾಕಿದವರ ಪಾಡು ಏನಾಯ್ತು ಎಂಬುವುದನ್ನು ಕೂಡ ಅವರು ಹೇಳಿದರು. ಇದಕ್ಕೆ ಪ್ರತ್ಯೇಕವಾದ ಅಧ್ಯಯನದ ಅವಶ್ಯಕತೆ ಇದೆ. ಹಂಪಿ ವೇಶ್ಯಾವಾಟಿಕೆಗೆ ಸಬಂಧಿಸಿದಂತೆ ಸುಧಾ, ತರಂಗ ವಾರ ಪತ್ರಿಕೆಗಳಲ್ಲಿ ೩, ೪ ಲೇಖನಗಳು ಈಗಾಗಲೆ ಪ್ರಕಟವಾಗಿವೆ. ಆದರೆ ಗಣಿಗಾರಿಕೆ ವಿಷಯಕ್ಕೆ ಸಂಬಂಧಿಸಿದಂತೆ ನಡೆಯುವ ವ್ಯಬಿಚಾರವನ್ನು ಇನ್ನೂ ಯಾರು ಅನಾವರಣಗೊಳಿಸಿಲ್ಲ. ಇದಕ್ಕೆ ಕಾರಣ ಈಗ ಸರಕಾರ ನಡೆಸುವವರ ಕೈಯಲ್ಲಿಯೇ ಗಣಿಗಾರಿಕೆ ಇರುವುದು ಆಗಿರಬಹುದು. ಬೇಲಿಯೇ ಎದ್ದು ಹೊಲವನ್ನು ಮೇದರೆ, ಬೇಲಿಯೇ ಹೊಲವನ್ನು ಮೇದಿದೆ ಎಂದು ಕಂಡು ಹಿಡಿಯುವುದಾದರೂ ಹೇಗೆ?

ಗಣಿಗಾರಿಕೆಯಿಂದ ರೋಗಗಳು ಹೆಚ್ಚಾದಂತೆ ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳು ಹೆಚ್ಚಾಗಿವೆ. ಆದರೆ ಅಲ್ಲಿ ಅಧಿಕ ಪ್ರಮಾಣದ ಹಣ ಕೇಳುವುದರಿಂದ ಬಡತನದಲ್ಲಿ ನಲುಗುವ ದಲಿತರ್‍ಯಾರು ಅಲ್ಲಿಗೆ ಹೋಗಲು ಸಾಧ್ಯವಿಲ್ಲ. ಅಷ್ಟೋ, ಇಷ್ಟೋ ನೋಡುವ ಸರ್ಕಾರೀ ಆಸ್ಪತ್ರೆಗೆ ಹೋಗಿ ತೋರಿಸಬೇಕು. ಇಲ್ಲದಿದ್ದರೆ ಮನೆಯಲ್ಲಿಯೇ ರೋಗದ ಕೂಪದಲ್ಲಿ ನರಳಾಡಬೇಕು. ಆರ್ಥಿಕ ಸುಧಾರಣೆಯ ಕಾರ್ಯಕ್ರಮಗಳನ್ನು ಎಲ್ಲಾ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಕೈಗೊಂಡಿರುವ ಸರ್ಕಾರವು, ಆರೋಗ್ಯ ಕ್ಷೇತ್ರದಲ್ಲಿ ಬಿಗಿ ಬಂದೋಬಸ್ತಾಗಿ, ಬಡವರ ಆರೋಗ್ಯಕ್ಕಾಗಿ ಖರ್ಚು ಮಾಡುತ್ತಿದ್ದ ಹಣದಲ್ಲಿ ಕಡಿತ ಮಾಡಿರುವುದರಿಂದ ಇದರ ಪರಿಣಾಮವನ್ನು ನೇರವಾಗಿ ದಲಿತ ಮಹಿಳೆಯೇ ಅನುಭವಿಸುತ್ತಿದ್ದಾಳೆ.

೧೯೯೧ ರಲ್ಲಿ ಭಾರತ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ಆಧಾರಿತ ಹೊಸ ಆರ್ಥಿಕ ನೀತಿಯನ್ನು ಒಪ್ಪಿಕೊಂಡಿರುವ ಪರಿಣಾಮವು ದಲಿತರು ತಮ್ಮ ಭೂಮಿಯನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಗಣಿಗಾರಿಕೆಯಿಂದ ಭೂಮಿಯ ಬೆಲೆ ಹೆಚ್ಚಾಗಿದ್ದು ಅಲ್ಪ ಸ್ವಲ್ಪ ಜಮೀನನ್ನು ವಿಧಿ ಇಲ್ಲದೆ ದಲಿತರು ಕಳೆದುಕೊಂಡಿದ್ದಾರೆ. ಗಣಿಗಾರಿಕೆಯಲ್ಲಿ, ಕೃಷಿಯಲ್ಲಿ ಯಂತ್ರಗಳನ್ನು ಬಳಸುತ್ತಿರುವುದರಿಂದ ದಲಿತ ಮಹಿಳೆಯರಿಗೆ ಕೆಲಸವಿಲ್ಲದೆ ಹಾಗೆ ಕಡಿಮೆ ಕೂಲಿಗೆ ಹೆಚ್ಚು ಕೆಲಸ ಮಾಡಬೇಕಾಗಿದೆ. ಇದು ಅವರನ್ನು ಇನ್ನಷ್ಟು ಬಡತನಕ್ಕೆ ಸಿಲುಕಿಸಿದೆ. ಗಣಿಗಾರಿಕೆಯ ಮಧ್ಯವರ್ತಿಗಳು ಭೂಮಿಯನ್ನು ಕಬಳಿಸಿ ಅದರಲ್ಲಿ ಡಿಗ್ಗಿಂಗ್ ಮಾಡುವುದರ ಮೂಲಕ ಹೋಲ್‌ನ್ನು ತೆಗೆಯುತ್ತಾ ಭೂಮಿಯ ಮೇಲೆ ರೇಪ್ ಮಾಡಲು ಹೊರಟಿದ್ದಾರೆ. ಇದು ಅತಿಯಾದ ಭೂಮಿಯ ನಾಶಕ್ಕೆ ಕಾರಣವಾಗಿದೆ. ಭೂಮಿ, ಕಾಡುಗಳ ನಾಶ ಗಣಿಗಾರಿಕೆಯಿಂದಲೇ ಆಗುತ್ತಿರುವುದರಿಂದ ದಲಿತ ಮಹಿಳೆ ೭, ೮ ಕಿ.ಮೀ ದೂರದಿಂದ ಕಟ್ಟಿಗೆ ತರಬೇಕಾದ ಸಂದರ್ಭವಿದೆ.

ದಲಿತ ಮಹಿಳೆಯ ಅಸಂಘಟಿತ ಕ್ಷೇತ್ರವು ಅವಳನ್ನು ಇನ್ನಷ್ಟು ಶೋಷಣೆಗೆ ಒಳಪಡಿಸಿದೆ. ಬಂಡವಾಳಶಾಹಿ ಬೆಳವಣಿಗೆಯಿಂದ ಗಣಿಗಾರಿಕೆಯ ನಾಯಕರು, ಮಧ್ಯವರ್ತಿಗಳಿಗೆ ವರದಾನವಾಗಿ ಮಾರ್ಪಟ್ಟಿದೆ. ಆದರೆ ಜಾಗತೀಕರಣ ದಲಿತರ ದುಡಿಮೆಯನ್ನು ಮಣ್ಣಾಗಿಸಿ ಕಣ್ಣು ಒರೆಸುವ ಕೆಲಸ ಮಾಡುತ್ತಿದ್ದರೂ ಅದು ದಲಿತರಿಗೆ ಅರ್ಥವಾಗದೇ ಇರುವ ಹಾಗೆ ಬಂಡವಾಳಶಾಹಿ ವರ್ಗ ನಡೆದುಕೊಳ್ಳುತ್ತಿದೆ. ಇದರಿಂದ ಜಿಲ್ಲೆಯ ದಲಿತ ಮಹಿಳೆಯರ ಕುಟುಂಬಗಳು ಇತರ ನಗರಗಳಿಗೆ ವಲಸೆ ಹೋಗಿವೆ, ಹೋಗಲು ಶುರು ಮಾಡಿವೆ. ಅಲ್ಲಿ ಇವರ ಸ್ಥಿತಿ ಹೇಗಿರುತ್ತದೆ? ಇವರು ಇನ್ನಷ್ಟು ದುಃಸ್ಥಿತಿಗೆ ಸಿಲುಕುವುದಿಲ್ಲವೆ? ಜಾಗತೀಕರಣದ ಕಾರಣದಿಂದಲೇ ಹೆಚ್ಚಾಗಿ ದಲಿತ ಮಹಿಳೆಯ ಮೇಲೆ ದೌರ್ಜನ್ಯ, ಮಾನಭಂಗ, ಅತ್ಯಾಚಾರಗಳು ನಡೆಯುತ್ತಿವೆ. ಆದರೆ ದುರಂತವೆಂದರೆ ಪರಮಾವಧಿಯ ಬುದ್ಧಿ ಜೀವಿಗಳು ಜಾಗತೀಕರಣದಿಂದ ದಲಿತರು ಮುಂದುವರಿಯಲು ಸಾಧ್ಯವಾಗಿದೆ ಎಂದು ಹೇಳುತ್ತಾರೆ. ಆದರೆ ಆ ಮುಂದುವರಿಕೆಯ ಪ್ರಮಾಣ ಎಷ್ಟು ಎಂದು ಯೋಚಿಸಿದರೆ ವಾಸ್ತವ ಸ್ಥಿತಿ ಅರ್ಥವಾಗುತ್ತದೆ. ಜಾಗತೀಕರಣದ ಉಪಯೋಗವನ್ನು ಕುರಿತು ಅದೇ ಶ್ರೇಷ್ಠ ಎಂದು ಮಾತನಾಡುವ ಕೆಲವು ಬುದ್ಧಿ ಜೀವಿಗಳ ವಾದವು ಮೂರ್ಖತನದ ಪರಮಾವಧಿ ಅಲ್ಲದೆ ಮತ್ತೇನಲ್ಲ.

ಸಮಾಜದಲ್ಲಿಯೇ ಕೀಳು ಎನಿಸಿಕೊಂಡ ಕಸಗೂಡಿಸುವ ಕೆಲಸವನ್ನು ಸಹ ಜಾಗತೀಕರಣ ಬಿಟ್ಟಿಲ್ಲ. ಜಾಡಮಾಲಿ ವೃತ್ತಿಯನ್ನು ಖಾಸಗೀಕರಣಗೊಳಿಸಲಾಗುತ್ತಿದೆ. ಟೆಂಡರ್‌ಗಳನ್ನು ಕರೆಯುವುದರ ಮೂಲಕ ಗುತ್ತಿಗೆದಾರರಿಗೆ ಅದನ್ನು ಒಪ್ಪಿಸಲಾಗುತ್ತಿದೆ. ಈ ಕ್ಷೇತ್ರದಲ್ಲಿ ದಲಿತ ಮಹಿಳೆಯೇ ಹೆಚ್ಚಾಗಿ ದುಡಿಯುತ್ತಿರುವುದರಿಂದ ಗುತ್ತಿಗೆದಾರರಿಂದ, ಮೇಲಿನ ಅಧಿಕಾರಿಗಳಿಂದ ದಲಿತ ಮಹಿಳೆ ಹೆಚ್ಚು ಶೋಷಣೆಯನ್ನು ಅನುಭವಿಸುತ್ತಿದ್ದಾಳೆ. ವ್ಯವಸ್ಥೆಯ ಪ್ರತಿ ಹಂತದಲ್ಲಿಯೂ ಶೋಷಣೆಗೆ ಒಳಗಾಗಿರುವವಳು ದಲಿತ ಮಹಿಳೆಯೇ ಆಗಿರುವುದರಿಂದ ಪ್ರಸ್ತುತ ಅಧ್ಯಯನದಲ್ಲಿ ಬಳ್ಳಾರಿ ಜಿಲ್ಲೆಯನ್ನು ವ್ಯಾಪ್ತಿಯಾಗಿರಿಸಿಕೊಂಡು ದಲಿತ ಮಹಿಳೆಯ ಸಾಮಾಜಿಕ, ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಲಾಗಿದೆ.

ಬಳ್ಳಾರಿ ಜಿಲ್ಲೆಯಲ್ಲಿ ದಲಿತ ಮಹಿಳೆಯರ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಅವರು ಇತರರಿಗಿಂತ ಹೆಚ್ಚಾಗಿ ಶೋಷಣೆಗೆ ಒಳಗಾಗಿರುವುದರಿಂದ ಅವರ ಈ ಕೆಳಗಿನ ಬೇಡಿಕೆಗಳನ್ನು ಈಡೇರಿಸಬೇಕಾಗಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದಲಿತ ಮಹಿಳೆಯರು ಮುಂದೊಡ್ಡಿರುವ ಬೇಡಿಕೆಗಳಿವು. ನಾನು ಇಲ್ಲಿ ಕೇವಲ ನಿರೂಪಕಿ ಮಾತ್ರ.

ಬೇಡಿಕೆಗಳು

* ಸ್ವಂತ ಉದ್ಯೋಗವನ್ನು ಮಾಡಲು ಇರುವ ಕಡೆಯೇ ಸ್ವಂತ ಉದ್ಯೋಗವನ್ನು ನಿರ್ಮಿಸಿಕೊಡಬೇಕು.
* ಸ್ವಂತ ಉದ್ಯೋಗ ಮಾಡಿಕೊಳ್ಳಲು ಕಡಿಮೆ ಬಡ್ಡಿಗೆ ಬ್ಯಾಂಕಿನಿಂದ ಸಾಲವನ್ನು ಒದಗಿಸಬೇಕು.
* ಓದಿದವರಿಗೆ ಮಾತ್ರವಲ್ಲದೆ ಓದದೇ ಇರುವವರಿಗೂ ಕೂಡ ಸಾಲ ಒದಗಿಸಬೇಕು. ಅವರ ಆರ್ಥಿಕತೆಗೆ ಅನುಗುಣವಾಗಿ ಬಡ್ಡಿಯ ದರವನ್ನು ಸಡಿಲಗೊಳಿಸಬೇಕು.
* ಎಲ್ಲರಿಗೂ ಹಸಿರು ಕಾರ್ಡು ಸಿಗುವಂತಾಗಬೇಕು.
* ಬಡವರ ಹೆಸರಿನಲ್ಲಿ ಉಳ್ಳವರು ಕೂಡ ಹಸಿರು ಕಾರ್ಡ್‌ನಿಂದ ಪಡೆಯುತ್ತಿರುವ ಸವಲತ್ತುಗಳನ್ನು ನಿಷೇಧಿಸಬೇಕು. ಯಾಕೆಂದರೆ ಇದು ಬಡವರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ.
* ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಹೆಚ್ಚು ಮಾಡಬೇಕು. ಇದನ್ನು ನಿರ್ವಹಿಸುವಂತೆ ನಿಷ್ಠಾವಂತ ಅಧಿಕಾರಿಗಳನ್ನು ನೇಮಿಸಬೇಕು. ಸಾರಿಗೆ ವ್ಯವಸ್ಥೆ ಇಲ್ಲದೆ ಹಳ್ಳಿಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸುಲಭವಾಗಿ ಬಂದು ಹೋಗಲು ಅವಕಾಶ ಕಲ್ಪಿಸಿಕೊಡಬೇಕು.
* ಗಣಿಗಾರಿಕೆ ಆರೋಗ್ಯ ಪೂರ್ಣವಾಗಿ ನಡೆಯುವಂತೆ ನೋಡಿಕೊಳ್ಳಬೇಕು.
* ಕೂಲಿಯಲ್ಲಿ ಸಮಾನತೆ ಬೇಕು. ಕೂಲಿಯನ್ನು ಹೆಚ್ಚಿಸಬೇಕು.
* ಗಣಿಗಾರಿಕೆಯಲ್ಲಿ ಸೇಫ್ಟಿ ಮೆಜರ್ಸ್ ಕೊಡಬೇಕು. ನಮ್ಮ ಆರೋಗ್ಯವನ್ನು ಗಣಿ ಯಜಮಾನರೇ ನೋಡಿಕೊಳ್ಳಬೇಕು. ವಸತಿ ಸೌಲಭ್ಯವನ್ನು ನಿರ್ಮಿಸಿಕೊಡಬೇಕು. ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು.
* ಕೆಲಸದ ಸ್ಥಳದಲ್ಲಿ ಶೌಚಾಲಯಗಳನ್ನು, ಬೇಬಿ ಕ್ರೆಷ್‌ಗಳನ್ನು (ಬಾಲವಾಡಿಗಳನ್ನು) ನಿರ್ಮಿಸಬೇಕು.
* ಕೃಷಿ ಗಣಿಗಾರಿಕೆಯಲ್ಲಿ ಯಂತ್ರಗಳ ಬಳಕೆಯಿಲ್ಲದಂತೆ ಮಾಡಬೇಕು.
* ಎಲ್ಲರಿಗೂ ಉದ್ಯೋಗ ಒದಗಿಸಬೇಕು.
* ಅನಕ್ಷರತೆಯನ್ನು ತೊಲಗಿಸಲು ಸೂಕ್ತ ಕ್ರಮ ಕೈಗೊಳ್ಳಬೇಕು.
* ರಾತ್ರಿ ಶಾಲೆಗಳನ್ನು ಸರಿಯಾಗಿ ನಡೆಸಬೇಕು.
* ಕಡ್ಡಾಯವಾಗಿ ಬರುವ, ಎಲ್ಲರೂ ಸೇರಿ ಪಾಠ ಹೇಳಿ ಕೊಡುವ ಉಪಾಧ್ಯಾಯರನ್ನು ನೇಮಿಸಬೇಕು. ಅವರ ಕೆಲಸವನ್ನು ನೋಡಿಕೊಳ್ಳಲು ಉನ್ನತ ಅಧಿಕಾರಿಗಳನ್ನು ನೇಮಿಸಬೇಕು.
* ಬಾಲಕಾರ್ಮಿಕರಿಗಾಗಿ ಊಟ, ವಸತಿ ಶಾಲೆಗಳನ್ನು ತೆರೆಯಬೇಕು.
* ಟೆಂಟ್ ಶಾಲೆಗಳನ್ನು ಹೆಚ್ಚಿಸಿ ಅಲ್ಲಿ ಊಟದ ವ್ಯವಸ್ಥೆಯನ್ನು ಎರಡು ಸಲಕ್ಕೆ ವಿಸ್ತರಿಸಬೇಕು. ದಕ್ಷತೆಯ ಟೀಚರ್ಸ್‌ಗಳನ್ನು ನೇಮಿಸಬೇಕು. ಮೇಲಾಧಿಕಾರಿಗಳು ಆಗಾಗ ಅಂತಹ ಸ್ಥಳಗಳಿಗೆ ಹೋಗಿ ಬರುತ್ತಿರುವ ಹಾಗೆ ಕ್ರಮ ಕೈಗೊಳ್ಳಬೇಕು.

* ದಲಿತ ಮಹಿಳೆಯರಿಗೆ ಕೃಷಿ ಯೋಗ್ಯವಾದ ಭೂಮಿಯನ್ನು ವಿತರಿಸಬೇಕು.
* ಜೀತದಲ್ಲಿರುವವರನ್ನು ಮುಕ್ತಿಗೊಳಿಸಬೇಕು.
* ದಲಿತ ಮಹಿಳೆಯ ಮೇಲೆ ನಡೆಯುವ ದಬ್ಬಾಳಿಕೆ, ಹಿಂಸೆ, ಅತ್ಯಾಚಾರಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ಇಂತಹ ಸಮಸ್ಯೆಗಳನ್ನು ಹಳ್ಳಿಯಲ್ಲಿಯೇ ನಿಭಾಯಿಸುವ ಹಾಗೆ ಪ್ರತಿಯೊಂದು ಹಳ್ಳಿಗಳಲ್ಲಿಯೂ ಇದಕ್ಕೆ ಸಂಬಂಧಿಸಿದ ಅಧಿಕಾರಿ / ಅಧಿಕಾರಿಣಿಯನ್ನು ನೇಮಿಸಬೇಕು.
* ದಲಿತರನ್ನು ಶೋಷಣೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು.
* ಕೆಲಸದ ಪೂರಕ ವಾತಾವರಣವನ್ನು ನಿರ್ಮಿಸಬೇಕು.
* ದಲಿತ ಮಹಿಳಾ ವಿರೋಧವಾಗಿ ಇರುವ ಸರ್ಕಾರ, ಖಾಸಗಿ ಕಾನೂನುಗಳನ್ನು ರದ್ದುಗೊಳಿಸಬೇಕು. ದಲಿತ ಮಹಿಳಾ ಅಭಿವೃದ್ಧಿಪರ ಕಾನೂನುಗಳನ್ನು ರೂಪಿಸಬೇಕು.
* ಒಳ ಮೀಸಲಾತಿಯನ್ನು ಜಾರಿಗೊಳಿಸಬೇಕು.
* ಎಲ್ಲಾ ಮಹಿಳೆಯರ ಆರೋಗ್ಯ ಹಕ್ಕುಗಳನ್ನು ಅದರಲ್ಲೂ ದಲಿತ ಮಹಿಳೆಯರ ಹಕ್ಕನ್ನು ರಕ್ಷಿಸಲು, ಕಾಯಲು ಮತ್ತು ಅದನ್ನು ಪ್ರೋತ್ಸಾಹಿಸಲು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಖಾಸಗಿ ಆರೋಗ್ಯ ಸಂಸ್ಥೆಗಳನ್ನು ನಿಯಂತ್ರಿಸುವ ಸಲುವಾಗಿ ಸ್ಥಾಪಿಸಬೇಕು.
* ಆರೋಗ್ಯ ಅಧಿಕಾರಿಗಳನ್ನು ನಿಯಂತ್ರಿಸಲು ಸೂಕ್ತ ಅಧಿಕಾರಿಗಳನ್ನು ನೇಮಿಸಬೇಕು. ಕಾನೂನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಯಾಗಬೇಕು.
* ಪ್ರತಿಯೊಂದು ಕ್ಷೇತ್ರದಲ್ಲಿಯೂ ಲೈಂಗಿಕ ವಿರೋಧಿ ಸಮಿತಿಯನ್ನು ಮಾಡುವಂತೆ ಕಡ್ಡಾಯಗೊಳಿಸಬೇಕು.
* ಪ್ರತಿಯೊಂದು ಕ್ಷೇತ್ರದಲ್ಲಿಯೂ ಜಾತಿಯ ಕಾರಣಕ್ಕಾಗಿ ಅಸ್ಪೃಶ್ಯತೆಯನ್ನು ಆಚರಿಸದಂತೆ ಕ್ರಮ ಕೈಗೊಳ್ಳಬೇಕು.
* ಇಂತಹ ಘಟನೆಗಳು ನಡೆದರೆ ಅದನ್ನು ಬಹಿರಂಗಗೊಳಿಸಿ ಅವರಿಗೆ ಕಠಿಣ ಶಿಕ್ಷೆ ವಿಧಿಸಬೇಕು.
* ಸಾರಾಯಿ ಅಂಗಡಿಯನ್ನು ನಿಷೇಧ ಮಾಡಬೇಕು. (ಇದು ಈಗಾಗಲೇ ನಿಷೇಧವಾಗಿರುವುದರಿಂದ ಹೆಚ್ಚಿನ ಹಣ ಕೊಟ್ಟು ವೈನ್ಸ್ ಶಾಪ್‌ಗಳಿಗೆ ಹೋಗಿ ಇನ್ನಷ್ಟು ದುಃಸ್ಥಿತಿಗೆ ಒಳಗಾಗಿದ್ದಾರೆ.)
* ಇದರಿಂದ ವೈನ್ಸ್ ಶಾಪ್‌ಗಳನ್ನು ರದ್ದುಗೊಳಿಸಬೇಕು.
* ದೇವದಾಸಿ, ಬಸವಿ, ಲೇಸಿ, ಪದ್ಧತಿಯನ್ನು ನಿರ್ಮೂಲ ಮಾಡಬೇಕು. ಇದು ಗೊತ್ತಾದ ಸಂದರ್ಭದಲ್ಲಿ ಜುಲ್ಮಾನೆಯನ್ನು ವಿಧಿಸಬೇಕು.
* ಪ್ರತಿಯೊಂದು ಹಳ್ಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಬೇಕು.
* ದಲಿತ ಮಹಿಳೆಯರೆಲ್ಲರಿಗೂ ವಸತಿ ವ್ಯವಸ್ಥೆಯನ್ನು ಕಲ್ಪಿಸಬೇಕು.
* ಎಲ್ಲರಿಗೂ ಕಡ್ಡಾಯವಾಗಿ ಶಿಕ್ಷಣ ಸಿಗಬೇಕು.

* ಜುಲೈ ೧೬ ರಿಂದ ಜುಲೈ ೨೩ ರವರೆಗೆ ಕರ್ನಾಟಕದಾದ್ಯಂತ ಮುಷ್ಕರ ನಡೆಸಿದ ಪೌರ ಕಾರ್ಮಿಕರ ಬೇಡಿಕೆಗಳು ಈ ಕೆಳಗಿನಂತಿತ್ತು.

ಅ. ಖಾಲಿ ಇರುವ ಹುದ್ದೆಗಳನ್ನು ಭರ್ತಿಮಾಡಬೇಕು.

ಆ. ಪೌರಕಾರ್ಮಿಕರ ವೃತ್ತಿಯಲ್ಲಿ ಖಾಸಗೀಕರಣವನ್ನು ತಡೆಯಬೇಕು. (ಟೆಂಡರ್ ರದ್ದು ಗೊಳಿಸಬೇಕು.)

ಇ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.

ಈ. ವೇತನವನ್ನು ಹೆಚ್ಚಿಸಬೇಕು.

ಉ. ಗುತ್ತಿಗೆ ಪೌರಕಾರ್ಮಿಕರನ್ನು (ದಿನಗೂಲಿ) ಖಾಯಂಗೊಳಿಸಬೇಕು.

ಊ. ಕೆಲಸದ ಸಂದರ್ಭದಲ್ಲಿ ಮಹಿಳೆಯರ ಮೇಲೆ ನಡೆಯುವ ಕಿರುಕುಳಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು.

ಋ. ಶಿಕ್ಷಣವನ್ನು ಪರಿಗಣಿಸದೆ ಅನುಭವದ ಆಧಾರದ ಮೇಲೂ ಬಡ್ತಿ ಕೊಡಬೇಕು.

ೠ. ಕಡ್ಡಾಯವಾಗಿ ಸೇಫ್ಟಿ ಮೆಜರ್ಸ್‌ಗಳನ್ನು, ಕೆಲಸಕ್ಕೆ ಸಂಬಂಧಿಸಿದ ಉಪಕರಣಗಳನ್ನು ನೀಡಬೇಕು.

ಬಹುಪಾಲು ಕ್ಷೇತ್ರಕಾರ್ಯದ ಮೇಲೆಯೇ ಈ ಮಹಾಪ್ರಬಂಧದ ಅಧ್ಯಯನ ಅವಲಂಬಿತವಾಗಿರುವುದರಿಂದ ವಕ್ತೃಗಳಿಂದ ಅಪಾರ ಸಹಾಯ ಪಡೆಯಲಾಗಿದೆ. ಅವರ ಸಹಾಯದಿಂದ ಈ ಪ್ರಬಂಧ ರಚನೆಯಾಗಿದೆ. ಇಲ್ಲಿ ಮಾತನಾಡುವವರೆಲ್ಲ ದಲಿತ ಮಹಿಳೆಯರು. ನಾನು ಅವರು ಹೇಳುವುದನ್ನು ನಿರೂಪಿಸುತ್ತಾ ವಿಶ್ಲೇಷಣೆಗೆ ಒಳಪಡಿಸಿದ್ದೇನೆ. ಆದ ಕಾರಣ ವಕ್ತೃಗಳ ಪರಿಚಯವನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ. ಜೊತೆಗೆ ಅಧ್ಯಯನಕ್ಕೆ ಗ್ರಂಥಾಲಯದಿಂದ ಪಡೆದುಕೊಂಡಿರುವ ಪುಸ್ತಕಗಳನ್ನು ಕೊನೆಯ ಭಾಗದಲ್ಲಿ ಕೊಡಲಾಗಿದೆ. ಬಳ್ಳಾರಿ ಜಿಲ್ಲೆಯ ದಲಿತ ಮಹಿಳೆಯರ ಸ್ಥಿತಿಗತಿಗಳನ್ನು ಅನುಲಕ್ಷಿಸಿ ದಲಿತ ಮಹಿಳಾ ಸಂಕಥನಾ ಎಂಬ ಮಹಾ ಪ್ರಬಂಧವನ್ನು ಸಾಮಾಜಿಕ, ಸಾಂಸ್ಕೃತಿಕ ಪರಿಧಿಯಲ್ಲಿ ಸಿದ್ಧಪಡಿಸಲಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದಿಂದ ಕೆಳಕಂಡ ಅಂಶಗಳು ಸ್ಪಷ್ಟವಾಗುತ್ತವೆ. ಇವು ಈ ಅಧ್ಯಯನದ ಫಲಿತಗಳು ಆಗಿವೆ.

* ಜಾತಿಯಿಂದ, ಲಿಂಗದಿಂದ, ವರ್ಗದಿಂದ ಶೋಷಣೆಗೆ ಒಳಗಾದ ಮಹಿಳೆಯರೇ ದಲಿತ ಮಹಿಳೆಯರು.
* ಇಡೀ ವ್ಯವಸ್ಥೆಯಲ್ಲಿಯೇ ಹೆಚ್ಚಾಗಿ ಶೋಷಣೆಗೆ ಒಳಗಾದವರೆಂದರೆ ಹೊಲೆಮಾದಿಗ ಮಹಿಳೆಯರು. ಹೊಲೆಯ ಮಹಿಳೆಗೆ ಹೋಲಿಸಿದರೆ ಮಾದಿಗ ಮಹಿಳೆ ಹೆಚ್ಚಿನ ಶೋಷಣೆಗೆ ಒಳಗಾಗಿದ್ದಾಳೆ.
* ಇಡೀ ವ್ಯವಸ್ಥೆಯಿಂದ ಕೀಳು ಎನಿಸಿಕೊಂಡ ಜಾಡಮಾಲಿತನವನ್ನು ಹೆಚ್ಚಾಗಿ ಹೊಲೆಮಾದಿಗ ಮಹಿಳೆಯರೇ ಮಾಡುತ್ತಿದ್ದಾರೆ.
* ಹೊಲೆಮಾದಿಗ ಮಹಿಳೆಯರಲ್ಲಿ ಸಾಮ್ಯತೆಗಳು ಕಂಡುಬಂದರೂ ಒಂದೊಂದು ವಿಶಿಷ್ಟ ವೃತ್ತಿಯನ್ನು, ವಿಧಾನವನ್ನು ಅನುಸರಿಸಿ ಪ್ರತ್ಯೇಕವಾದ ಜಾತಿಗಳಾಗಿ ಬೆಳೆದು ನಿಂತಿವೆ.

* ಈಗಿರುವ ಗ್ರಾಮ ದೇವತೆಗಳೆಲ್ಲಾ ಮೊದಲಿದ್ದ ದಲಿತ ಮಹಿಳೆಯರೇ ಆಗಿದ್ದಾರೆ. ಬಹುಪಾಲು ಈ ದೇವತೆಗಳು ಇರುವುದೆಲ್ಲಾ ದಲಿತರ ಪಾಲಿಗೇನೆ. ಈಗಲೂ ಜಾತ್ರೆ, ಉತ್ಸವ, ಆಚರಣೆಗಳನ್ನೆಲ್ಲ ದಲಿತರೇ ಮಾಡಿಕೊಂಡು ಬರುತ್ತಿರುವುದರಿಂದ ಅವರ ಕುಟುಂಬದಲ್ಲಿ ಮಾತೃಪ್ರಧಾನತೆಯ ಲಕ್ಷಣಗಳು ಕಾಣಿಸುತ್ತವೆ.

* ದಲಿತ ಪುರುಷ ಮೇಲ್ಜಾತಿಗಳಿಗೆ ವಿಧೇಯನಾಗಿ ನಡೆದುಕೊಳ್ಳುತ್ತಾನೆ. ಆದರೆ ತನ್ನ ಕುಟುಂಬದಲ್ಲಿರುವ ಮಹಿಳೆಯ ಮೇಲೆ ದಬ್ಬಾಳಿಕೆ ನಡೆಸುತ್ತಾನೆ. ಪಿತೃಪ್ರಧಾನ ಮೌಲ್ಯಗಳು ಜಾತಿಯ ಹಂಗಿಲ್ಲದೆ ವಿಸ್ತರಣೆಯಾಗಿವೆ.

* ದಲಿತ ಚಳುವಳಿಯಾಗಲಿ, ಮಹಿಳಾ ಚಳುವಳಿಯಾಗಲಿ ದಲಿತ ಮಹಿಳೆಯನ್ನು ಪ್ರಧಾನವಾಗಿ ಪರಿಗಣಿಸಿಲ್ಲ.

* ಜಿಲ್ಲೆಯಲ್ಲಿನ ಗಣಿಗಾರಿಕೆಯ ಪರಿಣಾಮದಿಂದ ದಲಿತ ಮಹಿಳೆ ಹೆಚ್ಚು ಶೋಷಣೆಗೆ ಒಳಗಾಗಿದ್ದಾಳೆ.

* ಜಾಗತೀಕರಣದಿಂದ ಗರಿಷ್ಠ ದುಷ್ಪರಿಣಾಮಗಳನ್ನು ಅನುಭವಿಸುತ್ತಿರುವವಳು ದಲಿತ ಮಹಿಳೆಯೇ ಆಗಿದ್ದಾಳೆ.

* ನಿಜವಾದ ಅಭಿವೃದ್ಧಿಯನ್ನು ಹೇಲೆತ್ತುವ ಮಹಿಳೆಯಿಂದಲೇ ಪರಿಭಾವಿಸಬೇಕಾಗಿದೆ.

* ಈ ಹಿನ್ನೆಲೆಯಲ್ಲಿ ದಲಿತ ಮಹಿಳಾ ಚಳುವಳಿ ರೂಪಗೊಳ್ಳುವ ಅನಿವಾರ್ಯತೆ ಇದೆ.

ಪ್ರಸ್ತುತ ಅಧ್ಯಯನವಾದ ದಲಿತ ಮಹಿಳಾ ಸಂಕಥನ ಎಂಬ ಸಂಶೋಧನೆಯನ್ನು ಈ ಕೆಳಗಿನ ಆರು ಅಧ್ಯಾಯಗಳಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ, ಸ್ವರೂಪವನ್ನು, ಬಳ್ಳಾರಿ ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಜನಸಂಖ್ಯೆಯನ್ನು ಅಧ್ಯಯನದ ವಿಧಿವಿಧಾನಗಳನ್ನು ಹಾಗೂ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯವಾದ ದಲಿತ ಮಹಿಳಾ ಪರಿಕಲ್ಪನೆಯಲ್ಲಿ ನಿಜವಾದ ದಲಿತ ಮಹಿಳೆ ಯಾರು ಎಂಬ ಹುಡುಕಾಟವನ್ನು ಮಾಡಿ ಸಮಾಜದಿಂದ ಬಹಿಷ್ಕೃತರಾದ ಕಟ್ಟಕಡೆಯರು, ಅಸ್ಪೃಶ್ಯರೆನಿಸಿಕೊಂಡ ಹೊಲೆಮಾದಿಗ, ಜಾಡಮಾಲಿ ಮಹಿಳೆಯರು ಅದರಲ್ಲಿಯೂ ಕೃಷಿಕೂಲಿ ಕಾರ್ಮಿಕ, ಜಾಡಮಾಲಿ ಮಹಿಳೆಯರೇ ನಿಜವಾದ ದಲಿತ ಮಹಿಳೆಯರೆಂಬುವುದನ್ನು ಚರ್ಚಿಸಲಾಗಿದೆ. ಸ್ತ್ರೀವಾದ, ಸ್ತ್ರೀವಾದದ ವಿವಿಧ ಪ್ರಸ್ಥಾನಗಳನ್ನು ವಿಶ್ಲೇಷಿಸಿಕೊಳ್ಳುತ್ತಾ, ಅವುಗಳ ಮಿತಿಗಳನ್ನು ಗುರುತಿಸಿಕೊಂಡು ದಲಿತ ಮಹಿಳಾವಾದವನ್ನು ಕಟ್ಟಿಕೊಳ್ಳಲಾಗಿದೆ. ಹೊಲೆಯ ಮಹಿಳೆ, ಮಾದಿಗ ಮಹಿಳೆ, ಜಾಡಮಾಲಿ ಮಹಿಳೆಯರ ಆತ್ಮಕಥೆಗಳನ್ನು ಪರಾಮರ್ಶೆಗೊಳಪಡಿಸಿ ಅವುಗಳ ಆಧಾರದ ಮೇಲೆ ದಲಿತ ಮಹಿಳಾವಾದದ ಸ್ವರೂಪವನ್ನು ರೂಪಿಸಿಕೊಳ್ಳಲಾಗಿದೆ. ಇದಕ್ಕೆ ತಾತ್ವಿಕ ಆಧಾರವಾಗಿ ಗಾಂಧಿ, ಅಂಬೇಡ್ಕರ್ ಹಾಗೂ ಫುಲೆಯವರ ಚಿಂತನೆಗಳನ್ನು ಕುರಿತು ಚರ್ಚಿಸಲಾಗಿದೆ. ಕೂಲಿಯಲ್ಲಿ ತಾರತಮ್ಯ, ದುಡಿಮೆ, ಆರ್ಥಿಕತೆ, ಜಾತಿ, ಲಿಂಗ, ಮಾನದಂಡಗಳಲ್ಲಿ ದಲಿತ ಮಹಿಳಾವಾದವನ್ನು ವಿಸ್ತಾರವಾಗಿ ಮಂಡಿಸಲಾಗಿದೆ.

ಮೂರನೆಯ ಅಧ್ಯಾಯವಾದ ದಲಿತ ಮಹಿಳಾ ಸಾಂಸ್ಕೃತಿಕ ರಚನೆಯಲ್ಲಿ ದಲಿತ ಮಹಿಳಾ ಸಂಸ್ಕೃತಿಯನ್ನು ಕುರಿತು ವಿವೇಚಿಸಲಾಗಿದೆ. ಇದನ್ನು ನಂಬಿಕೆ, ಸಾಹಿತ್ಯ, ಆಚರಣೆಗಳ ಮೂಲಕ ಗುರುತಿಸಲಾಗಿದೆ. ಮೂಲದ

ಪ್ರಕೃತಿಯ ಆರಾಧನೆಯಿಂದ ಪ್ರಾರಂಭವಾಗಿ ಇಂದಿನ ಗ್ರಾಮದೇವತೆಗಳ ವಿಕಾಸದ ಸ್ವರೂಪವನ್ನು, ಇದರಲ್ಲಿರುವ ದಲಿತ ಮಹಿಳೆಯ ಪಾತ್ರವನ್ನು ಕುರಿತು ಚರ್ಚಿಸಲಾಗಿದೆ. ಗ್ರಾಮ ದೇವತೆಗಳನ್ನು ಹೊಲೆಮಾದಿಗರಿಗೆ ಮಾತ್ರ ಮೀಸಲಾಗಿರಿಸಿ ಶಿಷ್ಟ ದೇವತೆಗಳನ್ನು ಮೇಲ್ವರ್ಗದವರು ಆಚರಿಸುತ್ತಿರುವುದರ ವ್ಯವಸ್ಥೆಯ ಕುತಂತ್ರಗಳನ್ನು, ಇದಕ್ಕೆ ಪ್ರತಿರೋಧವೆಂಬಂತೆ ದಲಿತ ಮಹಿಳೆಯರೇ ಆದ ಗ್ರಾಮದೇವತೆಗಳು ಒಡ್ಡುವ ಸವಾಲುಗಳನ್ನು ದಲಿತ ಮಹಿಳೆಯ ಅನನ್ಯತೆಯೆಂದು ಗುರುತಿಸಲಾಗಿದೆ.

ಶಿಷ್ಟ ದೈವಗಳಿಗೆ ಮೂಲ ಗ್ರಾಮ ದೈವಗಳಾಗಿವೆ. ಶಿಷ್ಟರು ಆಚರಿಸುವ ಆಚರಣೆಗಳೆಲ್ಲ ಮೂಲದಲ್ಲಿ ಹೊಲೆಮಾದಿಗರ ಮಹಿಳೆಯರೇ ಆಚರಿಸುತ್ತಿದ್ದರು. ಕೃಷಿಯನ್ನು ಕಂಡುಹಿಡಿದದ್ದು ಪ್ರಥಮವಾಗಿ ದಲಿತ ಮಹಿಳೆಯರೇ ಆಗಿದ್ದಾರೆ. ದ್ರಾವಿಡರಾದ ಹೊಲೆಮಾದಿಗ ಮಹಿಳೆಯರ ಎಲ್ಲಾ ಆಚರಣೆ, ನಂಬಿಕೆ, ವಿಧಿವಿಧಾನಗಳನ್ನು ವಲಸೆ ಬಂದ ಆರ್ಯರು ಕಸಿದು ತಮ್ಮದಾಗಿಸಿಕೊಂಡು ದಬ್ಬಾಳಿಕೆ ನಡೆಸಿದ ಹಂತಗಳನ್ನು ಅದನ್ನು ಎದುರಿಸಲು ದಲಿತ ಮಹಿಳೆ ಪಟ್ಟಪಾಡುಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಕೊನೆಗೆ ಎಲ್ಲವುಗಳನ್ನು ನಾಶಗೊಳಿಸುವ ಜಾಗತೀಕರಣಕ್ಕೆ ಕಿವಿಗೊಡದೆ ತಮ್ಮ ಮೂಲ ಸಂಸ್ಕೃತಿಯನ್ನು ಇಂದಿಗೂ ಉಳಿಸಿಕೊಂಡು, ಬೆಳೆಸಿಕೊಂಡು ಬಂದಿರುವ ವಿಧಾನಗಳನ್ನು ಜಿಲ್ಲೆಯಲ್ಲಿ ಆಚರಣೆಯಲ್ಲಿರುವ ಆಚರಣೆಗಳ ಮೂಲಕ ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವಾದ **'ದಲಿತ ಮಹಿಳಾ ಸಾಮಾಜಿಕ ರಚನೆ'**ಯಲ್ಲಿ ಆಳುವ ಶಕ್ತಿಯ ಪ್ರಭಾವ ಬಹುಮುಖಿಯಾದುದು. ಆಳುವ ವರ್ಗವು ರಾಜಕೀಯ, ಧಾರ್ಮಿಕ, ಆರ್ಥಿಕ, ನೈತಿಕ, ಭಾಷಿಕ ಪ್ರಭಾವಳಿಗಳ ಮೂಲಕ ದಲಿತ ಮಹಿಳೆಯ ಎಲ್ಲಾ ಶಕ್ತಿಗಳನ್ನು ನಿಯಂತ್ರಿಸುತ್ತದೆಂಬುವುದು ವಿಧಿತವಾದ ಸಂಗತಿ. ಸಾಂಸ್ಕೃತಿಕ, ರಾಜಕೀಯಶಾಹಿಯು ದಲಿತ ಮಹಿಳೆಯ ಮೇಲೆ ನಿರ್ಧಿಷ್ಟ ಮಾದರಿಯನ್ನು ಹೇರಿದಾಗ ಅದಕ್ಕೆ ಅವಳ ಪ್ರತಿಭಟನೆ ಯಾವ ಸ್ವರೂಪದ್ದು? ಎಂಬುವುದನ್ನು ದಲಿತ ಮಹಿಳೆಯ ಶೋಷಣೆಯ ಹಾದಿಯ ಹಿಂದಿನ ಸ್ಥಿತಿಯಿಂದ, ಇಂದಿನ ಸ್ಥಿತಿಯವರೆಗೆ ಕುರಿತು ಚರ್ಚಿಸಲಾಗಿದೆ. ಪುರೋಹಿತಶಾಹಿ ವ್ಯವಸ್ಥೆ, ಊಳಿಗಮಾನ್ಯಶಾಹಿ ವ್ಯವಸ್ಥೆ ಅಮಾನವೀಯ ಆಚರಣೆಗಳನ್ನು ರೂಪಿಸುವುದರ ಮೂಲಕ ದಲಿತ ಮಹಿಳೆಯ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಶೋಷಕ ನೆಲೆಗಳನ್ನು ಕುರಿತು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯವಾದ ದಲಿತ ಮಹಿಳಾ ಚಳುವಳಿ ಮತ್ತು ಸಬಲೀಕರಣದಲ್ಲಿ ದಲಿತ ಚಳುವಳಿ ದಲಿತ ಮಹಿಳೆಯನ್ನು ಹೇಗೆ ನೋಡಿದೆ? ದಲಿತ ಚಳುವಳಿ ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ? ದಲಿತ ಮಹಿಳಾ ಚಳುವಳಿಯ ಪ್ರತ್ಯೇಕತೆಯ ಅವಶ್ಯಕತೆವಿದೆಯೇ? ಇದ್ದರೂ ಅದು ಯಾವ ಸ್ವರೂಪದಲ್ಲಿರಬೇಕು? ಎಂಬ ಪ್ರಶ್ನೆಗಳನ್ನು ಹಾಕಿಕೊಂಡು ಕರ್ನಾಟಕದ ಅನೇಕ ಚಿಂತಕರ ಹಾಗೂ ದಲಿತ ಹೋರಾಟಗಾರರ ಅಭಿಪ್ರಾಯಗಳನ್ನು ಕಲೆ ಹಾಕಿ ಚರ್ಚೆಗೆ ಒಳಪಡಿಸಲಾಗಿದೆ. ದಲಿತ ಚಳುವಳಿ ಮತ್ತು ಮಹಿಳಾ ಚಳುವಳಿಗಳು ದಲಿತ ಮಹಿಳೆಯನ್ನು ತನ್ನ ಚಳುವಳಿಯ ಭಾಗವಾಗಿ ಯಾಕೆ ಪರಿಗಣಿಸಲಿಲ್ಲ. ಕಾರ್ಯಕ್ರಮ, ಸಮ್ಮೇಳನಗಳ ಸಂದರ್ಭದಲ್ಲಿ ಸಂಖ್ಯೆಗಾಗಿ ದಲಿತ ಮಹಿಳೆಯನ್ನು ಬಳಸಿಕೊಂಡಿದ್ದು, ದಲಿತ ಮಹಿಳೆಯನ್ನು ಪರಿಭಾವಿಸಿದ ರೀತಿ ವ್ಯಂಗ್ಯಾತ್ಮಕವಾದುದು. ದಲಿತ ಚಳುವಳಿ ದಲಿತ ಮಹಿಳೆಯ ವಿಷಯವಾದ ದೌರ್ಜನ್ಯ, ಮಾನಭಂಗ, ಅತ್ಯಾಚಾರ, ನೀರಿನ ಸಂಬಂಧೀ ಜಗಳಗಳಲ್ಲಿ ಭಾಗವಹಿಸುತ್ತಿತ್ತು. ಹೋರಾಟಗಳಿಗೆ ದಲಿತ ಮಹಿಳೆಯರನ್ನು ಕರೆಯುತ್ತಿತ್ತು. ಆದರೆ ಅಲ್ಲಿ ಅವಳಿಗೆ ಯಾವುದೇ ಅಧಿಕಾರವಿರಲಿಲ್ಲ. ಸಂಘಟನೆಯ

ವಿಷಯ ಚರ್ಚೆ ನಿರ್ಧಾರ ಮಾಡುವವರು ಎಲ್ಲರೂ ದಲಿತ ಪುರುಷರೇ ಆಗಿದ್ದರು. ದಲಿತ ಚಳುವಳಿ ಪ್ರಾರಂಭದಿಂದ ಇಂದಿನವರಿಗೂ ದಲಿತ ಚಳುವಳಿಯ ಮುಖ್ಯ ಪಾತ್ರದಲ್ಲಿ ದಲಿತ ಮಹಿಳೆ ಕಾಣಿಸಿಕೊಂಡಿಲ್ಲ ಎಂಬುವುದನ್ನು ನೋಡಿದರೆ ದಲಿತ ಚಳುವಳಿಯು ದಲಿತ ಮಹಿಳೆಯನ್ನು ಪರಿಭಾಷಿಸಿದ ಕ್ರಮ ಅರ್ಥವಾಗುತ್ತದೆ. ಇದನ್ನು ಕುರಿತು ದೀರ್ಘವಾಗಿ ಚರ್ಚಿಸಲಾಗಿದೆ.

ಇನ್ನು ಮಹಿಳಾ ಚಳುವಳಿ ಮೂಲದಿಂದಲೂ ಮೇಲ್ವರ್ಗದ ಮಹಿಳೆಯರಿಗಾಗಿಯೇ ರೂಪಗೊಂಡಿದ್ದು ಪ್ರಾರಂಭದಿಂದ ಇಂದಿನವರಿಗೂ ದಲಿತ ಮಹಿಳೆಯ ಸಮಸ್ಯೆ ಮಹಿಳಾ ಚಳುವಳಿಗೆ ಸಮಸ್ಯೆಯಾಗಿ ಕಾಣಲಿಲ್ಲ. ಮಹಿಳಾ ಚಳುವಳಿಗಳು ದಲಿತ ಮಹಿಳೆಯನ್ನು ಹೇಗೆ ನೋಡಿದೆ ಎಂಬುವುದನ್ನು ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ದಲಿತ ಮಹಿಳೆಯ ಸ್ಥಿತಿಗತಿಗಳನ್ನು ವಿವೇಚಿಸಿದರೆ ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ಇದೆ. ಹಾಗೆಯೇ ದಲಿತ ಮಹಿಳೆಯರ ಒಳ ಮೀಸಲಾತಿ ಮಾಡಬೇಕು ಎಂಬುವುದನ್ನು ಕಂಡುಕೊಳ್ಳಲಾಗಿದೆ. ಹಾಗೆಯೇ ದಲಿತ ಮಹಿಳೆಯರ ಸಮಸ್ಯೆ, ಸವಾಲುಗಳನ್ನು ವಿವರಿಸಿಕೊಳ್ಳಲಾಗಿದೆ.

ಅಧ್ಯಾಯ ಆರು ಸಮಾರೋಪವಾಗಿದ್ದು ಇಲ್ಲಿ ಒಟ್ಟು ಅಧ್ಯಯನದ ಸಾರಾಂಶವನ್ನು ಕುರಿತು ಹೇಳಲಾಗಿದೆ. ಕ್ಷೇತ್ರದಲ್ಲಿ ವಕ್ತೃಗಳು ಹೇಳಿದ ಬೇಡಿಕೆಯನ್ನು, ಅಧ್ಯಯನದ ಫಲಿತಗಳನ್ನು ಹೇಳಲಾಗಿದೆ.

ಅನುಬಂಧದಲ್ಲಿ ಕ್ಷೇತ್ರ ಕಾರ್ಯದಲ್ಲಿ ಬಳಸಿದ ಪ್ರಶ್ನಾವಳಿಯನ್ನು, ಜಿಲ್ಲೆಯ ನಕ್ಷೆಯನ್ನು, ಅಧ್ಯಯನಕ್ಕೆ ಬಳಸಿಕೊಂಡ ಆಕರ ಗ್ರಂಥಗಳನ್ನು, ವಕ್ತೃ ವಿವರವನ್ನು, ಅಧ್ಯಯನಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ನೀಡಲಾಗಿದೆ.

ಅನುಬಂಧ

೧. ಪ್ರಶ್ನಾವಳಿ

೨. ನಕ್ಷೆ

೩. ಗ್ರಂಥಸೂಚಿ

ಅ. ಉಲ್ಲೇಖಿತ ಗ್ರಂಥ ಸೂಚಿ

ಆ. ಪರಾಮರ್ಶನ ಗ್ರಂಥಸೂಚಿ

೪. ವಕ್ತೃ ವಿವರ

೫. ಪತ್ರಿಕಾ ವರದಿಗಳು

೬. ಛಾಯಾಚಿತ್ರಗಳು

೧. ಪ್ರಶ್ನಾವಳಿ

ಗಣಿಕೂಲಿ / ಜಾಡಮಾಲಿ / ಕೃಷಿಕೂಲಿ ಮಾಡುವ ಮಹಿಳೆಯರಿಗೆ ಸಂಬಂಧಿಸಿದಂತೆ

೧. ಹೆಸರು
೨. ವಯಸ್ಸು
೩. ವೈವಾಹಿಕ ಸ್ಥಿತಿ:
ಅವಿವಾಹಿತೆ: ವಿವಾಹಿತೆ: ವಿಧವೆ

೪. ತಂದೆ / ಗಂಡ / ಪೋಷಕರ / ಹೆಸರು
೫. ಜಾತಿ
೬. ಉಪಜಾತಿ
೭. ವಿದ್ಯಾರ್ಹತೆ
೮. ವೃತ್ತಿ
೯. ತಿಂಗಳ ಆದಾಯ
೧೦. ನಗರ ವಾಸಿಯೇ? ಗ್ರಾಮ ವಾಸಿಯೇ?
೧೧. ವಲಸಿಗರೇ? ಎಲ್ಲಿಂದ? ಕಾರಣ?
೧೨. ತಾವು ಎಂತಹ ಕುಟುಂಬಕ್ಕೆ ಸೇರಿದವರಾಗಿದ್ದೀರಿ?
೧೩. ಕುಟುಂಬದ ಸದಸ್ಯರ ಸಂಖ್ಯೆ
ಪುರುಷ: ಮಹಿಳೆ: ಮಕ್ಕಳು

೧೪. ಕುಟುಂಬದ ಸದಸ್ಯರೊಂದಿಗೆ ನಿಮ್ಮ ಸಂಬಂಧ?
೧೫. ನಿಮಗೆ ವಿವಾಹವಾದಾಗ ಎಷ್ಟು ವಯಸ್ಸು?
೧೬. ಗಂಡನು ಸಂಪಾದಿಸಿದ ದುಡಿಮೆ ಹಣ ಕುಟುಂಬದ ಖರ್ಚಿಗೆ ಬಳಸಲಾಗುತ್ತಿದೆಯೇ?
೧೭. ಶಾಶ್ವತ ಕೆಲಸಗಾರರೇ ಅಥವಾ ತಾತ್ಕಾಲಿಕ ಕೆಲಸಗಾರರೇ?
೧೮. ಕಾರ್ಮಿಕ ಸಂಘಟನೆಗಳಿವೆಯೇ?
೧೯. ಮಹಿಳಾ ಕಾರ್ಮಿಕ ಸಂಘಟನೆಗಳಿವೆಯೇ
೨೦. ಮಾಲಿಕ/ ಗುತ್ತಿಗೆದಾರ ಗಂಡಸರೇ? ಹೆಂಗಸರೇ?
೨೧. ನಿಮಗೆ ಕೊಡುವ ಕೂಲಿ ಎಷ್ಟು?
೨೨. ಮೊದಲು ಕೊಡುತ್ತಿದ್ದ ಕೂಲಿಗೂ ಈಗಿನ ಕೂಲಿಗೂ ವ್ಯತ್ಯಾಸವಿದೆಯೇ?
೨೩. ನೀವು ಕೆಲಸ ಮಾಡುವ ಅವಧಿ ಎಷ್ಟು?
೨೪. ನಿಮ್ಮ ಮನೆಯಲ್ಲಿ ಎಷ್ಟು ಜನ ಕೆಲಸಕ್ಕೆ ಹೋಗುತ್ತೀರಿ?
೨೫. ನೀವು ಮಾಡುವ ಕೆಲಸದಲ್ಲಿ ನಿಮಗೆ ತೃಪ್ತಿ ಇದೆಯೇ?
೨೬. ನಿಮಗೆ ಸಿಗುವ ಕೂಲಿಯಿಂದ ನೀವು ತೃಪ್ತರೇ?
೨೭. ಕೆಲಸದ ಸಂದರ್ಭದಲ್ಲಿ ನಿಮಗೆ ನಿಮಗೆ ಯಾವುದೇ ರೀತಿಯ ತೊಂದರೆಗಳಾಗುತ್ತವೆಯೇ
೨೮. ಸಾಮಾಜಿಕ ಭದ್ರತೆ ಇದೆಯೇ
೨೯. ಹೆಂಗಸರಿಗೂ- ಗಂಡಸರಿಗೂ ಕೊಡುವ ಕೂಲಿಯಲ್ಲಿ ವ್ಯತ್ಯಾಸವಿದೆಯೇ? ಎಷ್ಟು?
೩೦. ಅಧಿಕಾರಿಗಳಿಂದ ಯಾವುದೇ ರೀತಿಯ ಕಿರಿಕಿರಿಯಾಗುತ್ತಿದೆಯೇ?

೩೧. ಕೆಲಸ ಮಾಡಲು ಯಾವ ಯಾವ ಜಾತಿಯವರು ಬರುತ್ತಾರೆ?
೩೨. ಕೆಲಸ ಮಾಡುವ ಸ್ಥಳದ ಹತ್ತಿರ ಶಿಶು ವಿಹಾರ ವ್ಯವಸ್ಥೆ ಇದೆಯೇ?
೩೩. ಮನೆ ಯಾವ ಮಾದರಿಯಲ್ಲಿದೆ

ಗುಡಿಸಲು: ಅರೆಪಕ್ಕಾ: ಪಕ್ಕಾ: ಆರ್.ಸಿ.ಸಿ

೩೪. ಮನೆಯ ಒಡೆತನ

ಸ್ವಂತ: ಪಿತ್ರಾರ್ಜಿತ: ಗಂಡನ ಮನೆ: ತಾಯಿಯ ಮನೆ: ಬಾಡಿಗೆ / ಇತರೆ

೩೫. ಜಮೀನು ಇದೆಯೇ

ಒಣ: ನೀರಾವರಿ: ಇಲ್ಲ:

೩೬. ಮನೆಗೆ ವಿದ್ಯುಚ್ಛಕ್ತಿ ಇದೆಯೇ?
೩೭. ರೇಷನ್ ಕಾರ್ಡ್ ವ್ಯವಸ್ಥೆ ಇದೆಯೇ?
೩೮. ಮತದಾನದ ಹಕ್ಕು ಇದೆಯೇ?
೩೯. ನೀವು ಕೆಲಸ ಮಾಡುವ ಮಾಲೀಕರ ಕಡೆಯಿಂದ ಆಸ್ಪತ್ರೆಯ ಸೌಕರ್ಯವಿದೆಯೇ?
೪೦. ಆಸ್ಪತ್ರೆಯಲ್ಲಿ ಉಚಿತವಾಗಿ ನೋಡುತ್ತಾರೆಯೇ?
೪೧. ಆಸ್ಪತ್ರೆಯಲ್ಲಿ ಎಲ್ಲಾ ರೀತಿಯ ರೋಗಗಳಿಗೂ ಚಿಕಿತ್ಸಾ ಸೌಲಭ್ಯವಿದೆಯೇ
೪೨. ಈ ಕೆಲಸಕ್ಕೆ ಬರುವ ಮೊದಲು ಎಲ್ಲಿ ಕೆಲಸ ಮಾಡುತ್ತಿದ್ದೀರಿ?
೪೩. ಎಷ್ಟು ತಲೆಮಾರುಗಳಿಂದ ಈ ಕೆಲಸ ಮಾಡುತ್ತಿದ್ದೀರಿ? ಇದರ ಬಗ್ಗೆ ನಿಮಗೇನನಿಸುತ್ತೆ? ವಿವರವಾಗಿ ತಿಳಿಸಿ.
೪೪. ನೀವು ಮಾಡುವ ಕೆಲಸಕ್ಕೂ ನಿಮ್ಮ ಜಾತಿಗೂ ಇರುವ ಸಂಬಂಧದ ಬಗ್ಗೆ ನಿಮಗೇನನಿಸುತ್ತೆ? ವಿವರವಾಗಿ ತಿಳಿಸಿ.
೪೫. ಜಾತಿ ಕೆಲಸದ ಕಾರಣಕ್ಕೆ ಊರು/ ನಗರ/ ಸಮಾಜ ನಿಮ್ಮನ್ನು ಹೇಗೆ ನೋಡುತ್ತಿದೆ? ಇದರ ಬಗ್ಗೆ ನಿಮಗೇನನಿಸುತ್ತದೆ?
೪೬. ಹೆರಿಗೆ ರಜೆಯ ಸೌಲಭ್ಯವಿದೆಯೇ?
೪೭. ಗಣಿ/ ಕೃಷಿ/ ಜಾಡಮಾಲಿ ಕೆಲಸ ಮಾಡುವುದರಿಂದ ರೋಗಗಳು ಬರುತ್ತವೆಯೇ?
೪೮. ವಾರಕ್ಕೊಂದು ರಜೆಯ ವ್ಯವಸ್ಥೆ ಇದೆಯೇ?
೪೯. ಸಮಸ್ಯೆಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತೀರಿ?
೫೦. ಎಂದಾದರೂ ಮಾಲಿಕರ ವಿರುದ್ಧ ಸ್ಟ್ರೈಕ್‌ಗಳನ್ನು ಮಾಡಿದ್ದೀರಾ?
೫೧. ಲೇಬರ್ ಆಫೀಸರ್ ಬಂದಾಗ ಗುತ್ತಿಗೆದಾರರ ವರ್ತನೆ ಹೇಗಿರುತ್ತದೆ?
೫೨. ಕೆಲಸದ ಜಾಗದಲ್ಲಿ ಮಹಿಳೆಯರಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆ ಇದೆಯೇ?
೫೩. ಮಹಿಳೆಯರು ಬರೀ ದಿನಗೂಲಿಗಷ್ಟೇ ಕೆಲಸ ಮಾಡುತ್ತಾರೆಯೇ?
೫೪. ನಿಮ್ಮ ಕೂಲಿ ನೀವೇ ತೆಗೆದುಕೊಳ್ಳುತ್ತೀರಾ?
೫೫. ಬರುವ ಕೂಲಿಯಿಂದ ಕುಟುಂಬ ನಿರ್ವಹಣೆ ಆಗುತ್ತದೆಯೇ?
೫೬. ತಿಂಗಳ ಉಳಿತಾಯ ಎಷ್ಟು?
೫೭. ಆರೋಗ್ಯದ ಮೇಲೆ ಬೀರುವ ಪರಿಣಾಮಗಳೇನು?
೫೮: ಅಪಘಾತಗಳಾದರೆ ಧನ ಸಹಾಯ ಸಿಗುತ್ತದೆಯೇ?

೫೯. ಯಂತ್ರಗಳು ಬರುವುದರಿಂದ ನಿಮ್ಮ ಉದ್ಯೋಗಕ್ಕೆ ತೊಂದರೆಯಾಗಿದೆಯೇ?
೬೦. ವೈದ್ಯರ ಭೇಟಿ ಇದೇನಾ?
೬೧. ಗಣಿ/ ನಗರ ಸಭೆಗಳಲ್ಲಿ ಬೇರೆ ಬೇರೆ ಹುದ್ದೆಗಳಲ್ಲಿ ಮಹಿಳೆಯರು ಇದ್ದಾರೆಯೇ? ಅವರು ಯಾರು?
೬೨. ಗಾಡಿಗಳ ಓಡಾಟದಿಂದ ನಿಮಗೆ ಸಮಸ್ಯೆಯಾಗುತ್ತಿದೆಯೇ?
೬೩. ಧೂಳಿನಿಂದ ಯಾವುದೇ ರೀತಿಯ ದುಷ್ಪರಿಣಾಮಗಳಾಗುತ್ತಿವೆಯೇ?
೬೪. ಕೆಲಸದ ಸಂದರ್ಭದಲ್ಲಿ ಅಂಗ ರಕ್ಷಕ ಕವಚಗಳನ್ನು ಕೊಡುತ್ತಾರೆಯೇ?
೬೫. ಕಳೆದ ೧೦ ವರ್ಷಗಳಿಂದ ನಿಮ್ಮ ಜೀವನದಲ್ಲಿ ಏನು ಬದಲಾವಣೆಯಾಗಿದೆ?
೬೬. ಕುಟುಂಬ ಯೋಜನೆ ಮಾಡಿಸಿದ್ದೀರಾ? ಯಾರ ಆಸಕ್ತಿಯ ಮೇರೆಗೆ?
೬೭. ಎಷ್ಟು ವರ್ಷಕ್ಕೆ ನಿಮ್ಮ ಮಗಳಿಗೆ ವಿವಾಹ ಮಾಡುತ್ತೀರಿ?
೬೮. ಮದುವೆಗೆ ಖರ್ಚಾಗುವ ಅಂದಾಜು ಹಣ ಎಷ್ಟು?
೬೯. ಯಾರ ಹತ್ತಿರ ಸಾಲ ಮಾಡುತ್ತೀರಿ?
೭೦. ಮನೆಗೆ ಅಗತ್ಯವಾದ ವಸ್ತುಗಳನ್ನು ಖರೀದಿಸುವವರು ಯಾರು?
೭೧. ಸರಕಾರದಿಂದ ಯಾವುದಾದರೂ ಸೌಲಭ್ಯ ಸಿಕ್ಕಿದೆಯೇ?
೭೨. ನಿಮ್ಮ ಸಂಪಾದನೆಯಲ್ಲಿ ಹಣವನ್ನು ಕುಟುಂಬಕ್ಕಾಗಿ ಎಷ್ಟು ಖರ್ಚು ಮಾಡುತ್ತೀರಿ? ನಿಮ್ಮ ಗಂಡ ಎಷ್ಟು ಖರ್ಚು ಮಾಡುತ್ತಾನೆ?
೭೩. ನಿಮ್ಮ ಸ್ಥಾನಮಾನದ ಬದಲಾವಣೆಗೆ ಅಡ್ಡಿಯಾಗಿರುವ ಅಂಶಗಳು ಯಾವುವು?
೭೪. ನೀವು ದಲಿತರಿರುವೆಡೆ ವಾಸವಾಗಿದ್ದೀರಾ? ನೀವು ದಲಿತರೆಂದು ಗೊತ್ತಾದರೆ ನೆರೆಹೊರೆಯವರು ನಿಮ್ಮನ್ನು ಹೇಗೆ ನೋಡುತ್ತಾರೆ?
೭೫. ಜಮೀನು ನಿಮ್ಮ ಹೆಸರಿನಲ್ಲಿವೆಯೇ?
೭೬. ಯಾವ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಹಣ ವ್ಯಯ ಮಾಡುತ್ತೀರಿ?
೭೭. ನಿಮ್ಮ ಅನಕ್ಷರತೆಗೆ ಮುಖ್ಯ ಕಾರಣವೇನು?
೭೮. ಮೇಲ್ಜಾತಿಯ ಮಹಿಳೆಯರೊಂದಿಗೆ ನಿಮ್ಮ ಸಂಬಂಧ ಹೇಗಿದೆ?
೭೯. ನಿಮಗೆ ಅತ್ಯಾಚಾರ, ಅನ್ಯಾಯವಾದರೆ ಪೋಲಿಸ್ ಸ್ಟೇಷನ್‌ಗೆ ಹೋಗಿ ದೂರು ಸಲ್ಲಿಸುತ್ತೀರಾ?
೮೦. ಬಾಲ್ಯವಿವಾಹ ಮಾಡಿದರೆ ಸರಕಾರ ಶಿಕ್ಷೆ ವಿಧಿಸುತ್ತದೆ ಗೊತ್ತಿದೆಯೇ?
೮೧. ಜಾತಿಯತೆ ಇನ್ನೂ ಮುಂದುವರೆದಿದೆಯೇ?
೮೨. ಗ್ರಾಮಗಳಲ್ಲಿ ದುಡಿಯುವ ದಲಿತ ಮಹಿಳೆಯರ ಮೇಲಾಗುವ ದೌರ್ಜನ್ಯವನ್ನು ಯಾರು ಮಾಡುವರು? ಯಾರು ತಡೆಗಟ್ಟುವರು?
೮೩. ನೀವು ಮಧ್ಯಪಾನ ಸೇವಿಸುತ್ತೀರಾ?
೮೪. ನಿಮ್ಮ ಊರಿನ ಪ್ರಸಿದ್ಧ ದೇವರು ಯಾರು? ಅವುಗಳ ಆಚರಣೆಗಳನ್ನು ವಿವರವಾಗಿ ತಿಳಿಸಿ?
೮೫. ದಲಿತರಲ್ಲಿ ಮಹಿಳಾ ದೇವರುಗಳೇ ಹೆಚ್ಚಾಗಿದ್ದಾರೆ ಯಾಕೆ?
೮೬. ಇಂದಿನ ಸಂತರ ಬಗ್ಗೆ ಏನನ್ನಿಸುತ್ತದೆ?
೮೭. ಮೈ ಮೇಲೆ ದೇವರು, ದೆವ್ವ ಬರುವುದು ಯಾಕೆ?

ದಲಿತ ಮಹಿಳಾ ಚಳುವಳಿಗೆ ಸಂಬಂಧಿಸಿದ ಪ್ರಶ್ನಾವಳಿ


೧. ದಲಿತ ಚಳುವಳಿ ದಲಿತ ಮಹಿಳೆಯನ್ನು ಹೇಗೆ ಪರಿಭಾವಿಸಿದೆ?
೨. ದಲಿತ ಚಳುವಳಿಯಿಂದ ದಲಿತ ಮಹಿಳೆಯರಿಗೆ ಆಗಿರುವ ಪ್ರಯೋಜನವೇನು?
೩. ದಲಿತ ಮಹಿಳಾ ಚಳುವಳಿಯ ಅನಿವಾರ್ಯತೆ ಇದೆಯೇ? ಇಲ್ಲವೇ? ಯಾಕೆ?
೪. ದಲಿತ ಮಹಿಳಾ ಚಳುವಳಿ ಯಾವ ಸ್ವರೂಪದಲ್ಲಿರಬೇಕು?

ದೇವದಾಸಿಯರಿಗೆ ಸಂಬಂಧಿಸಿದ ಪ್ರಶ್ನಾವಳಿ

೧. ಹೆಸರು
೨. ವಯಸ್ಸು
೩. ವೃತ್ತಿ
೪. ಶಿಕ್ಷಣ
೫. ಊರು
೬. ಜಾತಿ
೭. ಮನೆಯಲ್ಲಿ ವಾಸಿಸುವವರ ಸಂಖ್ಯೆ ಎಷ್ಟು? ಹೆಣ್ಣು? ಗಂಡು?
೮. ಎಷ್ಟು ವಯಸ್ಸಿಗೆ ದೇವದಾಸಿ ಮಾಡಿದರು?
೯. ಯಾರು ಮಾಡಿದರು? ಯಾಕೆ ಮಾಡಿದರು? ಕಾರಣ ಕೊಡಿ?
೧೦. ಆಗ ನಿಮಗೇನನಿಸಿತ್ತು?
೧೧. ದೇವದಾಸಿ ಬಿಟ್ಟಾಗ ನಿಮ್ಮ ವಯಸ್ಸೆಷ್ಟು?
೧೨. ಗೆಳೆಯನ ಜೊತೆ ಜೀವನ ಪ್ರಾರಂಭಿಸಿದಾಗ ವಯಸ್ಸು ಎಷ್ಟಿತ್ತು?
೧೩. ಯಾವ ದೇವರಿಗೆ ಬಿಡಲಾಯಿತು? ಹೆಚ್ಚಾಗಿ ಯಾವ ದೇವರಿಗೆ ಬಿಡುತ್ತಾರೆ?
೧೪. ಅದೇ ದೇವರಿಗೆ ಯಾಕೆ ಬಿಡುತ್ತಾರೆ?
೧೫. ಈ ಪದ್ಧತಿ ಯಾವ ಯಾವ ಜಾತಿಗಳಲ್ಲಿದೆ?
೧೬. ಕೆಳಜಾತಿಗಳಲ್ಲಿಯೇ ಈ ಪದ್ಧತಿ ಹೆಚ್ಚಾಗಿ ಕಂಡು ಬರುತ್ತದೆ ಯಾಕೆ?
೧೭. ನಿಮ್ಮಲ್ಲಿ ಎಷ್ಟು ತಲೆಮಾರುಗಳಿಂದ ಈ ಪದ್ಧತಿ ಮಾಡಲಾಗುತ್ತಿದೆ?
೧೮. ದೇವದಾಸಿ ಬಗ್ಗೆ ನಿಮಗೇನನಿಸುತ್ತದೆ?
೧೯. ನಿಮ್ಮ ದೇವದಾಸಿ ಪದ್ಧತಿ/ವೃತ್ತಿಯ ಕುರಿತು ನಿಮ್ಮ ಅನುಭವವನ್ನು ಹೇಳುತ್ತೀರಾ?
೨೦. ದೇವದಾಸಿ ಪದ್ಧತಿ ಹೇಗೆ ಬಂತು ಎಂದು ನಿಮಗೆ ಗೊತ್ತಾ?
೨೧. 'ದೇವದಾಸಿ'ಗೆ ಸಂಬಂಧಿಸಿದಂತೆ ನಿಮ್ಮ ಅನಿಸಿಕೆ ಏನು?
೨೨. ದೇವದಾಸಿ ಪದ್ಧತಿ ಇನ್ನು ಮುಂದೆಯೂ ಇರಬೇಕಾ? ಬೇಡವಾ? ಯಾಕೆ? ಕಾರಣ ಕೊಡಿ?
೨೩. ಬೇರೆಯವರು ನಿಮ್ಮನ್ನು ಹೇಗೆ ನೋಡುತ್ತಾರೆ?
(ಕೆಳಜಾತಿ ಪುರುಷ/ ಮಹಿಳೆ/ ಮೇಲ್ಜಾತಿ ಪುರುಷ/ ಮಹಿಳೆ)

೨. ನಕ್ಷೆ

ಬಳ್ಳಾರಿ ಜಿಲ್ಲೆಯ ನಕಾಶೆ



೩. ಗ್ರಂಥಸೂಚಿ

ಅ. ಉಲ್ಲೇಖಿತ ಗ್ರಂಥಸೂಚಿ:

೧. ಸಂ. ಡಾ. ಟಿ.ಆರ್. ಚಂದ್ರಶೇಖರ್, ದಲಿತ ಅಧ್ಯಯನ, ೨೦೦೫, ಪ್ರಸಾರಂಗ, ಕ.ವಿ.ವಿ, ಹಂಪಿ.

೨. ಡಾ. ಕೆ.ಸರೋಜ, ಮಹಿಳೆ ಮತ್ತು ಆರೋಗ್ಯ, ೨೦೦೧, ಪ್ರಸಾರಂಗ, ಕ.ವಿ.ವಿ, ಹಂಪಿ.

೩. ಡಾ. ಶೈಲಜಾ ಹಿರೇಮಠ, ಪಾತರದವರು, ೧೯೯೯, ಪ್ರಸಾರಂಗ, ಕ.ವಿ.ವಿ, ಹಂಪಿ.

೪. ಡಾ. ಪುರುಷೋತ್ತಮ ಬಿಳಿಮಲೆ, ಚಲುವರಾಜು, ಹಂಪಿ ಜಾನಪದ, ೧೯೯೬, ಪ್ರಸಾರಂಗ, ಕ.ವಿ.ವಿ, ಹಂಪಿ.

೫. ಡಾ. ಜಗಜೀವನ್‌ರಾಮ, ಜಾತಿವ್ಯವಸ್ಥೆ, ೧೯೯೯, ಅನುಭವ ಪ್ರಕಾಶನ, ಗುಲ್ಬರ್ಗಾ.

೬. ಸಂ. ಡಾ.ಆರ್.ಸುನಂದಮ್ಮ, ಜನಪದ ಸಾಹಿತ್ಯ ಮಹಿಳಾ ಲೋಕ, ೧೯೯೭, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೭. ಡಾ. ಶೈಲಜಾ ಹಿರೇಮಠ, ಸ್ತ್ರೀಕಥನ, ಭುವನ ಪ್ರಕಾಶನ, ಹೊಸಪೇಟೆ.

೮. ಸಂ. ಡಾ.ಎ.ಎಂ. ರಾಜಶೇಖರಯ್ಯ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ೨೦೦೧, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೯. ಸಂ. ಹೀ.ಚಿ.ಬೋರಲಿಂಗಯ್ಯ, ಕರ್ನಾಟಕ ಜನಪದ ಕಲೆಗಳ ಕೋಶ, ೧೯೯೬, ಪ್ರಸಾರಂಗ, ಕ.ವಿ.ವಿ, ಹಂಪಿ.

೧೦. ಸಂ. ಹಲಸಂಗಿ ಗೆಳೆಯರು, ಹಲಸಂಗಿ ಹಾಡು, ೨೦೦೦, ಪ್ರಸಾರಂಗ, ಕ.ವಿ.ವಿ, ಹಂಪಿ.

೧೧. ಸಂ. ಡಾ. ವೀರೇಶ್ ಬಡಿಗೇರ್, ಹಳೆಯ ಲಾವಣಿಗಳು, ೨೦೦೦, ಪ್ರಸಾರಂಗ, ಕ.ವಿ.ವಿ. ಹಂಪಿ.

೧೨. ಮೂಲ: ಡಾ. ರಾಮಚಂದ್ರ ಚಿಂತಾಮಣ ಢೇರೆ, ಅನು: ವಿಠ್ಠಲರಾವ್ ಗಾಯಕವಾಡ, ಲಜ್ಜಾಗೌರಿ, ೨೦೦೩, ಪ್ರಸಾರಂಗ, ಕ.ವಿ.ವಿ, ಹಂಪಿ.

೧೩. ಡಾ. ಅರ್ಜುನ ಗೊಳಸಂಗಿ, ದಲಿತರ ಬದುಕು ಮತ್ತು ಸಂಸ್ಕೃತಿ, ೨೦೦೦, ವಿಮೋಚನಾ ಪ್ರಕಾಶನ, ಅಥಣಿ.

೧೪. ಸಂ. ಡಾ.ಎ.ಎಂ. ರಾಜಶೇಖರಯ್ಯ, ಡಾ.ಬಾಬಾಸಾಹೇಬ್ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ೧೯೯೫, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೫. ಪ್ರೊ.ಬಿ. ಶೇಷಾದ್ರಿ, ಬಳ್ಳಾರಿ ಜಿಲ್ಲೆಯಲ್ಲಿ ಕೈಗಾರಿಕೀಕರಣ ಮತ್ತು ಜನಾಂದೋಲನ, ೧೯೯೮, ಪ್ರಸಾರಂಗ, ಕ.ವಿ.ವಿ, ಹಂಪಿ.

೧೬. ಸಂ. ಡಾ.ಕೆ. ವೆಂಕಟೇಶ್, ಡಾ.ಬಿ. ಸರೋಜ, ಹೈದ್ರಾಬಾದ್ ಕರ್ನಾಟಕದ ವರ್ತಮಾನದ ತಲ್ಲಣಗಳು, ೨೦೦೬, ಪಲ್ಲವ ಪ್ರಕಾಶನ, ಬಳ್ಳಾರಿ.

೧೭. ಡಾ. ಸಿದ್ಧಲಿಂಗಯ್ಯ, ಗ್ರಾಮದೇವತೆಗಳು, ೨೦೦೫, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೧೮. ಸಂ. ಪ್ರೊ.ಎ.ವಿ.ನಾವಡ, ಸಿರಿಪಾಡ್ದನ, ೧೯೯೯, ಪ್ರಸಾರಂಗ, ಕ.ವಿ.ವಿ, ಹಂಪಿ.

೧೯. ಸಂ. ಮೊಗಳ್ಳಿಗಣೇಶ್, ದಲಿತ ಚಿಂತನೆ, ೨೦೦೨, ಪ್ರಸಾರಂಗ, ಕ.ವಿ.ವಿ, ಹಂಪಿ.

೨೦. ಡಾ. ಜೋಗನ್‌ಶಂಕರ್, ದೇವದಾಸಿ ಸಂಪ್ರದಾಯ, ೧೯೯೩, ವಿಮೋಚನಾ ಪ್ರಕಾಶನ, ಅಥಣಿ.

೨೧. ಡಾ. ಅಶ್ವಥ್‌ನಾರಾಯಣ, ಚರಿತ್ರೆ ಲೇಖನ ಪರಂಪರೆ, ೨೦೦೬, ದೂರಶಿಕ್ಷಣಕೇಂದ್ರ, ಕ.ವಿ.ವಿ, ಹಂಪಿ.

೨೨. ಡಾ. ಪುರುಷೋತ್ತಮ ಬಿಳಿಮಲೆ, ಹುಲಿಗೆಮ್ಮ, ೧೯೯೯, ಪ್ರಸಾರಂಗ, ಕ.ವಿ.ವಿ, ಹಂಪಿ.

೨೩. ಡಾ. ಹೀ.ಚಿ. ಬೋರಲಿಂಗಯ್ಯ, ಬುಡಕಟ್ಟು ದೈವಾರಾಧನೆ, ೨೦೦೦, ಪ್ರಸಾರಂಗ, ಕ.ವಿ.ವಿ, ಹಂಪಿ.

೨೪. ಪ್ರೊ.ಎ.ವಿ. ಕುಲಕರ್ಣಿ, ಜೀವವಿಕಾಸ, ೨೦೦೩, ಪ್ರಸಾರಂಗ ಕ.ವಿ.ವಿ, ಹಂಪಿ.

೨೫. ಸಂ. ಡಾ. ವಿರೂಪಾಕ್ಷಿ ಪೂಜಾರಹಳ್ಳಿ, ದಲಿತರು ಮತ್ತು ಚರಿತ್ರೆ, ೨೦೦೫, ಪ್ರಸಾರಂಗ ಕ.ವಿ.ವಿ, ಹಂಪಿ.

೨೬. ಸಂ. ಕೋಟಿಗಾನಹಳ್ಳಿ ರಾಮಯ್ಯ, ತಲಪರಿಗೆ, ೨೦೦೫, ಕರ್ನಾಟಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

೨೭. ಕಾಳೇಗೌಡ ನಾಗಾವಾರ, ಬೇಕಾದ ಸಂಗಾತಿ, ೧೯೮೦, ಪ್ರಸಾರಂಗ ಬೆಂಗಳೂರು ವಿ.ವಿ, ಬೆಂಗಳೂರು.

೨೮. ಡಾ. ಮೊಗಳ್ಳಿಗಣೇಶ್, ದಲಿತರು ಮತ್ತು ಜಾಗತೀಕರಣ, ೧೯೯೯, ಪ್ರಸಾರಂಗ ಕ.ವಿ.ವಿ, ಹಂಪಿ.

೨೯. ಸಂ. ರಾಜಾರಾಮ್ ಹೆಗಡೆ, ಭಾರತೀಯ ಚರಿತ್ರೆ ಆಯ್ದ ವಿಷಯಗಳು, ೨೦೦೬, ದೂರಶಿಕ್ಷಣ ಕೇಂದ್ರ, ಕ.ವಿ.ವಿ, ಹಂಪಿ.

೩೦. ಸಂ. ಡಾ. ಕೆ. ಮೋಹನಕೃಷ್ಣ ರೈ, ದಕ್ಷಿಣ ಭಾರತದ ಚರಿತ್ರೆ ಆಯ್ದ ವಿಷಯಗಳು, ೨೦೦೬, ದೂರಶಿಕ್ಷಣಕೇಂದ್ರ ಕ.ವಿ.ವಿ, ಹಂಪಿ.

೩೧. ಸಂ. ಡಾ.ಎಂ.ವಿ. ವಸು, ಕರ್ನಾಟಕ ಚರಿತ್ರೆ ಆಯ್ದ ವಿಷಯಗಳು, ೨೦೦೬, ದೂರಶಿಕ್ಷಣ ಕೇಂದ್ರ, ಕ.ವಿ.ವಿ, ಹಂಪಿ.

೩೨. ಕೆ. ಶಿವಪ್ಪ, ಬಳ್ಳಾರಿ ಜಿಲ್ಲೆಯ ಹೊಲೆಮಾದಿಗರ ಸಂಸ್ಕೃತಿ, ೨೦೦೪, ಸಾರಾ ಎಂಟರ್ ಪ್ರೈಸೆಸ್, ಮೈಸೂರು.

೩೩. ಡಾ. ಎಸ್.ಎನ್. ಶಿವರುದ್ರಸ್ವಾಮಿ, ಕರ್ನಾಟಕದ ಪ್ರೌಢ ಇತಿಹಾಸ ಮತ್ತು ಸಂಸ್ಕೃತಿ, ೨೦೦೪, ಪ್ರಾರಸ್ತ್ಯ ಪ್ರಕಾಶನ, ಮೈಸೂರು.

೩೪. ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಸಾಮ್ರಾಜ್ಯ ಮತ್ತು ಸಂಸ್ಥಾನ, ೨೦೦೪, ಪ್ರಸಾರಂಗ ಕ.ವಿ.ವಿ, ಹಂಪಿ.

೩೫. ಸಂ. ಪ್ರೊ.ಹೀ.ಚಿ. ರಾಮಚಂದ್ರೇಗೌಡ, ಜಾನಪದ ಗ್ರಹಿಕೆ: ಪರಿಕಲ್ಪನೆ, ೨೦೦೪, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೩೬. ಡಾ. ಆರ್. ಇಂದಿರಾ, ಮಹಿಳಾ ಸಮಾಜ ಮತ್ತು ಸಂಸ್ಕೃತಿ, ೨೦೦೨, ಪ್ರಸಾರಂಗ ಕ.ವಿ.ವಿ, ಹಂಪಿ.

೩೭. ಡಾ. ಎಂ. ಉಷಾ, ಮಹಿಳಾ ಚಳುವಳಿ ಮತ್ತು ಮಹಿಳಾ ವಿಷಯಗಳು, ೨೦೦೪, ಪ್ರಸಾರಂಗ ಕ.ವಿ.ವಿ, ಹಂಪಿ.

೩೮. ಡಾ. ಡಿ.ವಿ. ಪರಮಶಿವಮೂರ್ತಿ, ಕನ್ನಡಶಾಸನ ಶಿಲ್ಪ, ೧೯೯೯, ಪ್ರಸಾರಂಗ ಕ.ವಿ.ವಿ, ಹಂಪಿ.

೩೯. ಡಾ. ಯು.ಆರ್. ಅನಂತಮೂರ್ತಿ, ಬೆತ್ತಲೆ ಪೂಜೆ ಯಾಕೆ ಕೂಡದು? ೧೯೯೬, ಅಕ್ಷರ ಪ್ರಕಾಶನ, ಹೆಗ್ಗೋಡು.

೪೦. ಡಾ. ಮೊಗಳ್ಳಿ ಗಣೇಶ್, ಆದಿಮ, ೨೦೦೫, ಸಾರಾಂಗ ಪ್ರಕಾಶನ, ತಿಪಟೂರು.

೪೧. ಮೂಲ: ಡಿ.ಆರ್. ನಾಗರಾಜ್, ಅನು: ಎಂ.ಎಸ್. ಆಶಾದೇವಿ, ಉರಿಚಮ್ಮಾಳಿಗೆ, ೨೦೦೨, ವಸಂತ ಪ್ರಕಾಶನ, ಬೆಂಗಳೂರು.

೪೨. ಡಾ. ಮೊಗಳ್ಳಿಗಣೇಶ್, ದಲಿತ ಕಥನ, ೨೦೦೬, ಪ್ರಸಾರಂಗ ಕ.ವಿ.ವಿ, ಹಂಪಿ.

೪೩. ಡಾ. ಕೆ. ಮೋಹನ್‌ಕೃಷ್ಣರೈ, ಪ್ರಭುತ್ವ ಮತ್ತು ಜನತೆ, ೨೦೦೪, ಪ್ರಸಾರಂಗ ಕ.ವಿ.ವಿ, ಹಂಪಿ.

೪೪. ಡಾ. ಗಾಯಿತ್ರಿ ನವಾಡ, ಮಹಿಳಾ ಸಂಕಥನ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪೫. ರಾಹುಲ ಸಂಕೃತ್ಯಾಯನ, ಅನು: ಬಿ.ಎಂ. ಶರ್ಮಾ, ಓಲ್ಗಾಗಂಗಾ, ೨೦೦೨, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೬. ಮಲೆಪುರಂ ಜಿ. ವೆಂಕಟೇಶ್, ಶಾಸನಗಳಲ್ಲಿ ಅಸ್ಪೃಶ್ಯತೆ ಪರಿಕಲ್ಪನೆ (ಲೇಖನ).

೪೭. ಆರ್.ಎಸ್. ಶರ್ಮಾ, ಪ್ರಾಚೀನ ಭಾರತದಲ್ಲಿ ಶೂದ್ರರು, ೨೦೦೧, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೮. ಮೂಲ: ಸ್ವಾಮಿ ಧರ್ಮತೀರ್ಥ, ಅನು: ಭಗವಾನ್. ಹಿಂದೂ ಸಾಮ್ರಾಜ್ಯಶಾಹಿಯ ಇತಿಹಾಸ, ಮಹಿಮಾ ಪ್ರಕಾಶನ, ಮೈಸೂರು.

೪೯. ಅನು: ಎ.ವಿ. ನರಸಿಂಹಮೂರ್ತಿ, ವೇದಯುಗ ಭಾಗ-೧, ೧೯೯೭, ಭಾರತೀಯ ವಿಧ್ಯಾಭವನ, ಬೆಂಗಳೂರು.

೫೦. ಅನು: ಎ.ವಿ. ನರಸಿಂಹಮೂರ್ತಿ, ವೇದಯುಗ ಭಾಗ-೨, ೧೯೯೭, ಭಾರತೀಯ ವಿಧ್ಯಾಭವನ, ಬೆಂಗಳೂರು.

೫೧. ಗೋರೂರು ರಾಮಸ್ವಾಮಿ ಅಯ್ಯಂಗಾರ್, ಹಳ್ಳಿಯ ಹಾಡುಗಳು, ೧೯೩೪, ರಾಮಚಂದ್ರ ಸ್ಮಾರಕ ಗ್ರಂಥಮಾಲೆ, ಗೋರೂರು.

೫೨. ಗುಂಡ್ಮಿ ಚಂದ್ರಶೇಖರ ಐತಾಳ, ಮುದ್ದುಂಟೆ ಜನನ ಮರಣಕ್ಕೆ, ೧೯೭೬, ಆನಂದ ಪ್ರಕಾಶನ, ಮಂಗಳೂರು.

೫೩. ಸಂ. ಎಸ್.ಕೆ. ಕರೀಮ್‌ಖಾನ್, ಕನ್ನಡ ಜನಪದ ಗೀತೆಗಳು, ೧೯೮೭, ಮೈಸೂರು.

೫೪. ಚಿದಾನಂದ ಮೂರ್ತಿ ಎಂ, ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ೧೯೮೫, ಪ್ರಸಾರಂಗ ಕ.ವಿ.ವಿ, ಧಾರವಾಡ.

೫೫. ಸಂ. ಶಿವಾರೆಡ್ಡಿ, ಕುವೆಂಪು ಸಮಗ್ರ ನಾಟಕಗಳು, ೨೦೦೫, ಪ್ರಸಾರಂಗ ಕ.ವಿ.ವಿ, ಹಂಪಿ.

೫೬. ಸಂ. ಡಾ.ಎಂ. ಎನ್. ಸುಂಕಾಪುರ, ಜೋಗತಿ ಹಾಡು, ಕನ್ನಡ ಅಧ್ಯಯನ ಪೀಠ, ಧಾರವಾಡ.

೫೭. ಎಸ್.ಎಸ್. ಹಿರೇಮಠ, ಜಾತ್ರೆಗಳು ಭಾಗ-೨, ೧೯೯೩, ಸಮತಾ ಪ್ರಕಾಶನ, ಹೊಸಪೇಟೆ.

೫೮. ನಮ್ಮ ಅಸ್ಥಿತ್ವವು ಪ್ರಮುಖವಾಗುವ ಜಗತ್ತು, ೨೦೦೨, ಸಿ.ಎಚ್.ಸಿ, ಬೆಂಗಳೂರು.

೫೯. ಚಿದಾನಂದಮೂರ್ತಿ ಎಂ, ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೬೬, ಮೈಸೂರು.

೬೦. ಕೃಷ್ಣಮೂರ್ತಿ ಹನೂರು, ಜನಪದ ಮತ್ತು ಬುಡಕಟ್ಟು ಗೀತೆಗಳು, ೧೯೯೮, ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೧. ಡಾ. ಅರವಿಂದ ಮಾಲಗತ್ತಿ, ದಲಿತ ಮಾರ್ಗ, ೨೦೦೨, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೬೨. ಡಿ.ಎಸ್. ವೀರಯ್ಯ, ದಲಿತ ಚಿಂತನ ವೈಚಾರಿಕ ಲೇಖನಗಳ ಸಂಕಲನ, ೨೦೦೫, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೬೩. ದಾಸನೂರು ಕೂಸಣ್ಣ, ರೈತರ ಆತ್ಮಹತ್ಯೆ ಮತ್ತು ದಲಿತರ ಸವ ಬ್ರಾಹ್ಮಣಿಕೆ? ೨೦೦೫, ಮಾತಂಗ ಪ್ರಕಾಶನ, ಮೈಸೂರು.

೬೪. ಸಂ. ತುಳಸಿ ವೇಣುಗೋಪಾಲ್, ಕನಕ ಹಾ.ಮಾ, ಮಿತ್ರ ವೆಂಕಟ್ರಾಜ್, ಜೋಗಸೆಯಲ್ಲಪ್ಪು ಬೆಳಕು ತುಂಬಿ, ೨೦೦೨, ಸ್ಮಾರೋ ಪ್ರಕಾಶನ, ಮುಂಬೈ.

೬೫. ಚೆನ್ನಕ್ಕ ಹೆಲಿಗಾರ, ಕರ್ನಾಟಕ ಶಾಸನಗಳಲ್ಲಿ ಮಹಿಳೆ, ೧೯೯೩, ಪ್ರಸಾರಾಂಗ, ಕರ್ನಾಟಕ ವಿ.ವಿ, ಧಾರವಾಡ.

೬೬. ಸಂ. ವಿನೋದ ಪಾಟೀಲ, ಬಳ್ಳಾರಿ ಜಿಲ್ಲೆಯ ಶಾಸನಗಳು, ಕರ್ನಾಟಕ ಶಾಸನ ಸಂಪುಟ-೨.

ಇಂಗ್ಲೀಷ್ ಗ್ರಂಥಗಳು

1. Sri I.P.D. Salappa, Report of the Committee on the Improvement of living and working conditions of sweepers and scavengers, 1976, Report. Bangalore.
2. Tharstan, Cast and Tribe in Southern India, 1987, Asia educational services, New Delhi.
3. Frazer Sir Jamesg 1911-15 The Golder Bough Vol 8, The Spristes of the corn and the wild
4. Abbe J.A. Dubais and H.K. Beachampes, Hindu manners, customs and ceremonies, 1928, clare Don Press Oxperd.
5. K.S. Singh, Volume 26, part 2.

ಪತ್ರಿಕೆಗಳು

ದಿನ ಪತ್ರಿಕೆಗಳು	ವಾರಪತ್ರಿಕೆಗಳು	ಮಾಸಪತ್ರಿಕೆ	ತ್ರೈಮಾಸಿಕ	ಅರ್ಧವಾರ್ಷಿಕ
ಪ್ರಜಾವಾಣಿ	ಅಗ್ನಿ	ಸಂವಾದ	ಸಖಿ	ಮಹಿಳಾ ಅಧ್ಯಯನ
ವಿಜಯ ಕರ್ನಾಟಕ	ಲಂಕೇಶ್	ಭಂಗಿಬಂಧು		
ಕನ್ನಡ ಪ್ರಭ		ಸ್ಲಂ ಜಗತ್ತು		
		ಅನ್ವೇಷಣೆ		
		ದನಿ		
		ಅಚಲ		
		ಸಮಾಜವಾದಿ		
		ಹೊನ್ನಾರು		
		ಜಾಗೃತಿ		
		ಹೊಸತು		
		ಮಾನಸ		
		ದಿಕ್ಸೂಚಿ		
		ಸಮರ		
		ಪಂಚಮ		

ಆ. ಪರಾಮರ್ಶನ ಗ್ರಂಥಸೂಚಿ

ಕನ್ನಡ ಕೃತಿಗಳು

೧. ಒಡಲುರಿ, ಅಂಬೇಡ್ಕರ್ ಯುಗ ಘೋಷಣೆ, ೨೦೦೦, ಅಂಬೇಡ್ಕರ್ ಯುಗ ಸಮಿತಿ, ತುಮಕೂರು.

೨. ಒಡೆಯರ್ ಡಿ. ಹೆಗ್ಗಡೆ, ಎನ್. ಅನ್ನಪೂರ್ಣೇಶ್ವರಿ, ಮಹಿಳಾ ಅಧ್ಯಯನಗಳು ಆರ್ಥಿಕ ನೆಲೆಗಳು ಮತ್ತು ಆಯಾಮಗಳು, ೨೦೦೩, ಮಾನವಾಭಿವೃದ್ಧಿ ಅಧ್ಯಯನ ಕೇಂದ್ರ ಮೈಸೂರು.

೩. ಬಸವರಾಜ ಕಲ್ಗುಡಿ, ಅನುಭಾವ: ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ೨೦೦೧, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೪. ಸಂ. ಡಾ. ಅರವಿಂದಮಾಲಗತ್ತಿ, ಜಾನಪದ ತತ್ವಗಳು, ೧೯೯೯, ಪ್ರಸಾರಂಗ ಮೈಸೂರು ವಿ.ವಿ, ಮೈಸೂರು.

೫. ಇಂಗ್ಲೀಷ್ ಮೂಲ: ಜೆರಾಲ್ಡಿನ್ ಪೋರ್ಚ್, ಅನು: ಡಾ. ಎಚ್.ಎಸ್. ಶ್ರೀಮತಿ, ಆಧುನಿಕ ಭಾರತದಲ್ಲಿ ಮಹಿಳೆ, ೨೦೦೧, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೬. ಕರ್ನಾಟಕ ಕನ್ನಡಿ, ೧೯೯೯, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೭. ಸಂ. ಡಾ.ಪಿ. ಮಹಾದೇವಯ್ಯ, ದಲಿತರ ಭಾಷೆ ಮತ್ತು ಸಮಾಜ, ೨೦೦೬, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೮. ರಹಮತ್ ತರೀಕೆರೆ, ಸಾಂಸ್ಕೃತಿಕ ಅಧ್ಯಯನ, ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೯. ಸಂ. ಡಾ. ಎ.ಎಂ. ರಾಜಶೇಖರಯ್ಯ, ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು, ೧೯೯೯, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೦. ಡಿ. ಆರ್. ನಾಗರಾಜ್, ಅಲ್ಲಮಪ್ರಭು ಮತ್ತು ಶೈವ ಪ್ರತಿಭೆ, ೨೦೦೧, ಅಕ್ಷರ ಪ್ರಕಾಶನ, ಹೆಗ್ಗೋಡು.

೧೧. ಡಾ. ವಸು, ಮೌಖಿಕ ಇತಿಹಾಸ, ೨೦೦೪, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೧೨. ಸಂ. ಡಾ. ಜೆ. ಸೋಮಶೇಖರ್, ಅಭಿಮುಖಿ, ೨೦೦೫, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೩. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ೧೯೯೫, ಪ್ರಸಾರಾಂಗ, ಕ.ವಿ.ವಿ, ಹಂಪಿ.

೧೪. ಡಾ.ಕೆ.ಎಲ್.ಗೋಪಾಲಕೃಷ್ಣಯ್ಯ, ಪುರಾಣ, ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೧೫. ಸಂ. ಡಾ.ಪಿ. ಮಹಾದೇವಯ್ಯ, ದಲಿತರು ಮತ್ತು ಪರ್ಯಾಯ ರಾಜಕಾರಣ, ೨೦೦೫, ಪ್ರಸಾರಾಂಗ, ಕನ್ನಡ ವಿ.ವಿ, ಹಂಪಿ-ವಿದ್ಯಾರಣ್ಯ.

೧೬. ಎಸ್. ಚಂದ್ರಶೇಖರ್, ಅಂಬೇಡ್ಕರ್ ಮತ್ತು ಗಾಂಧಿ, ೧೯೯೨, ಅಕ್ಷರ ಪ್ರಕಾಶನ, ಹೆಗ್ಗೋಡು.

೧೭. ಡಾ. ಎಚ್.ಎಮ್. ಹೇಮಲತಾ, ಮಹಿಳಾ ಅಧ್ಯಯನ ಭಾಗ-೧, ೨೦೦೪, ಡಿ.ವಿ.ಕೆ ಮೂರ್ತಿ, ಮೈಸೂರು.

೧೮. ರಂಗರಾಜ ವನದುರ್ಗ, ದಲಿತ ಸಂವೇದನೆ, ೨೦೦೪, ಸಿ.ವಿ.ಜಿ ಪಬ್ಲಿಕೇಷನ್ಸ್, ಬೆಂಗಳೂರು.

೧೯. ಸಂ. ಸೀಮಿಚಂದ್ರ, ಮಹಿಳಾ ಲೋಕ, ೨೦೦೫, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨೦. ಎಲ್.ಜಿ. ಮೀರಾ, ಸ್ತ್ರೀಸಂವೇದನೆಯಲ್ಲಿ ಕನ್ನಡ ಕಥನ, ೨೦೦೪, ಶಕ್ತಿ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಬೆಂಗಳೂರು.

೨೧. ಮೊಗಳ್ಳಿಗಣೇಶ್, ಶತಮಾನ, ೨೦೦೦, ಲೋಹಿಯಾ ಪ್ರಕಾಶನ, ಬಳ್ಳಾರಿ.

೨೨. ಡಾ. ಎಚ್.ಎಮ್. ಹೇಮಲತಾ, ಮಹಿಳಾ ಅಧ್ಯಯನ ಭಾಗ-೨, ೨೦೦೪, ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು.

೨೩. ಮೂಲ: ಡಾ. ಅಶ್ವಿನಿ ಧೋಂಗಡೆ, ಕನ್ನಡಕ್ಕೆ ಡಾ. ವಿಠ್ಠಲರಾವ್ ಗಾಯಕ್ವಾಡ್ ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು, ೨೦೦೧, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೨೪. ಮೂಲ: ವಿಲಿಯಂ ಎಫ್, ಆಗ್ಬರ್ನ್ ಮೇಯರ್ ಎಫ್, ನಿಮ್ಕಾಫ್, ಅನು: ಡಿ.ಎಚ್. ಮಲ್ಲಿನಾಥಯ್ಯ, ಸಮಾಜಶಾಸ್ತ್ರ ಕೈಪಿಡಿ, ೧೯೮೪, ಪ್ರಸಾರಾಂಗ, ಮೈಸೂರು ವಿ.ವಿ, ಮೈಸೂರು.

೨೫. ಸಂ. ಅಗ್ರಹಾರ ಕೃಷ್ಣಮೂರ್ತಿ, ಡಿ.ಆರ್. ನಾಗರಾಜ್, ಸಂಸ್ಕೃತಿ ಕಥನ, ೨೦೦೨, ಕನ್ನಡ ಪುಸ್ತಕ ಪ್ರಾಧಿಕಾರ,ಬೆಂಗಳೂರು.

೨೬. ಪ್ರೊ.ಎ.ವಿ.ನಾವಡ, ಮೌಖಿಕ ಕಾವ್ಯ ಸಂಯೋಜನ ಪ್ರಕ್ರಿಯೆ, ೨೦೦೨, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೨೭. ಮೊಗಳ್ಳಿ ಗಣೇಶ್, ದೇಶೀ, ೧೯೯೭, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೨೮. ಸಂ. ಅಮರೇಶ್ ನುಗಡೋಣಿ, ಕನ್ನಡ ಅಧ್ಯಯನ ಸಂಪುಟ ೧೨, ಸಂಚಿಕೆ-೨, ಜುಲೈ, ಡಿಸೆಂಬರ್. ೨೦೦೬ ಹಾಗೂ ಸಂಪುಟ ೧೩, ಸಂಚಿಕೆ ೧ ಜನವರಿ-ಜೂನ್ ೨೦೦೭, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೨೯. ಸಂಶೋಧಕ: ಗಂಗಾಧರ, ಗದಗ, ಉತ್ತರ ಕರ್ನಾಟಕದ ಸಮಾಗಾರರು, (ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ) ಧಾರವಾಡ, ವಿ.ವಿ, ಧಾರವಾಡ.

೩೦. ವಿಭಿನ್ನ ನೆಲೆಗಳು, ವಿಭಿನ್ನ ರಾಜಕೀಯ: ಜೆಂಡರ್ ಹಾಗೂ ಅನನ್ಯತೆಗಳು, ನವಂಬರ್, ೨೦೦೫, ಹೆಂಗಸರ ಹಕ್ಕಿನ ಸಂಘ, ಬೆಂಗಳೂರು.

೩೧. ಸಂ. ನ. ರವಿಕುಮಾರ, ದೇಶೀ ದರ್ಶನಗಳು, ೧೯೯೯, ಅಭಿನವ ಪ್ರಕಾಶನ, ಬೆಂಗಳೂರು.

೩೨. ಸಂ. ಡಾ. ಚಕ್ಕೆರೆ ಶಿವಶಂಕರ್, ಸಹ್ಯಾದ್ರಿಯ ಸೂರ್ಯ, ೨೦೦೪, ಕನ್ನಡ ಸಾಹಿತ್ಯ ಪರಿಷತ್ತು. ಬೆಂಗಳೂರು.

೩೩. ಮೂಲ: ವಂದನಾಶಿವ, ಕನ್ನಡಕ್ಕೆ -ಮಾಧವ ಐತಾಳ್, ಬತ್ತದ ಚಿಲುಮೆ, ೧೯೯೫, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೩೪. ಸಂ. ರಹಮತ್ ತರೀಕೆರೆ, ಅಕ್ಕಮಹಾದೇವಿ ವಚನಗಳು, ಸಾಂಸ್ಕೃತಿಕ ಮುಖಾಮುಖಿ, ೨೦೦೫, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೩೫. ಸಂ. ಡಾ. ಅರ್ಜುನ ಗೊಳಸಂಗಿ, ಕನ್ನಡ ದಲಿತ ಸಾಹಿತ್ಯ ಸಮಾಲೋಚನ, ೨೦೦೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೩೬. ಸಂ. ಡಾ. ಎಚ್.ಎಸ್. ಶ್ರೀಮತಿ, ಮಹಿಳಾ ಅಧ್ಯಯನ, ಸಂಪುಟ-೪, ಸಂಚಿಕೆ-೩, ಜನವರಿ ೨೦೦೩, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೩೭. ಸಂ. ಡಾ. ಶೈಲಜಾ ಹಿರೇಮಠ, ಮಹಿಳಾ ಅಧ್ಯಯನ, ಸಂಪುಟ-೮, ಸಂಚಿಕೆ-೧, ಜನವರಿ ೨೦೦೩, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೩೮. ಸಂ. ಡಾ.ಕೆ. ವೆಂಕಟೇಶ್, ಅಂಬೇಡ್ಕರ್ ಒಂದು ಮರುವ್ಯಾಖ್ಯಾನ, ೨೦೦೫, ಸಂಸ್ಕೃತಿ ಪ್ರಕಾಶನ, ಸುಭಾಷ್ ಭರಣಿ ಸಾಂಸ್ಕೃತಿಕ ವೇದಿಕೆ ಬಳ್ಳಾರಿ.

೩೯. ಪಿ. ಮಹಾದೇವಯ್ಯ, ಬಳ್ಳಾರಿ ಜಿಲ್ಲೆಗೆ ತೆಲುಗರ ವಲಸೆ, ೧೯೯೯, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ-ವಿದ್ಯಾರಣ್ಯ.

೪೦. ಎಮ್.ಸಿ. ರಾಜ್ ದಲಿತತ್ವ, ಅಂಬೇಡ್ಕರ್ ಸಂಪನ್ಮೂಲಕೇಂದ್ರ, ರೆಡ್ಸ್ ತುಮಕೂರು.

೪೧. ಡಾ. ರಾಜಾರಾಮ ಹೆಗಡೆ, ಭಾರತೀಯ ಇತಿಹಾಸ, ಸಮಾಜ ಮತ್ತು ಸಂಸ್ಕೃತಿ, ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೪೨. ಲೋಹಾದ್ರಿಯ ಮಡಿಲು, ಸ್ಮರಣಸಂಚಿಕೆ, ೨೦೦೪, ಕನ್ನಡಸಾಹಿತ್ಯ ಪರಿಷತ್ತು, ಸಂಡೂರು.

೪೩. ದೇವಿಪ್ರಸಾದ್ ಚಟ್ಟೋಪಾಧ್ಯಾಯ, ಮಾತೆಯರು ಮಾನ್ಯರಾಗಿದ್ದಾಗ, ೨೦೦೩, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೪೪. ಬೆಂ.ಮ.ಪಾ. ಗುತ್ತಿಗೆ ಪೌರಕಾರ್ಮಿಕರ ಸಂಘದ ಚಟುವಟಿಕೆಗಳ ವಾರ್ಷಿಕ ವರದಿ, (೨೦೦೧- ೨೦೦೨).

೪೫. ಡಾ. ಸಿದ್ಧಲಿಂಗಯ್ಯ, ಜನಸಂಸ್ಕೃತಿ, ೨೦೦೭, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೪೬. ಅಮರೇಶ ನುಗಡೋಣಿ, ಹೈದರಾಬಾದ್ ಕರ್ನಾಟಕದ ಹಾಡುಪಾಡು, ೨೦೦೩, ಕನ್ನಡ ವಿ.ವಿ, ಹಂಪಿ-ವಿದ್ಯಾರಣ್ಯ.

೪೭. ಕಪ್ಪು ಪತ್ರ-ಸುಳ್ಳು ಭರವಸೆಗಳು ಮತ್ತು ಶೋಷಿತ ದಲಿತರು, ದಲಿತ ಮಾನವ ಹಕ್ಕುಗಳ ರಾಷ್ಟ್ರೀಯ ಚಳುವಳಿ, ಸಿಕಿಂದರಾಬಾದ್.

೪೮. ಮೂಲ: ಎಮ್.ಸಿ. ರಾಜ್, ಕನ್ನಡಕ್ಕೆ ಎಂ.ಎಸ್. ಗಂಗೂ, ದಲಿತ ಚಳುವಳಿ ಮತ್ತು ದಲಿತತ್ವ, ೨೦೦೧, ಅಂಬೇಡ್ಕರ್ ಸಂಪನ್ಮೂಲಕೇಂದ್ರ, ತುಮಕೂರು.

೪೯. ಪ್ರೊ. ಬಿ. ಕೃಷ್ಣಪ್ಪ, ಪ್ರೊ.ಬಿ. ಕೃಷ್ಣಪ್ಪ ಚಿಂತನೆಗಳು-ಬರಹಗಳು, ೧೯೯೯, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೫೦. ಸಂ. ಡಾ.ಎಚ್.ಎಸ್. ಶ್ರೀಮತಿ ಬಳಗ, ಹೆಣ್ಣು ಮತ್ತು ಭಾಷೆ, ೨೦೦೭, ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿ.ವಿ, ಹಂಪಿ-ವಿದ್ಯಾರಣ್ಯ.

೫೧. ಸಂ. ಡಾ. ಶಿವಾನಂದ ಎಸ್. ವಿರಕ್ತಮಠ, ಮಹಿಳಾ ಅಧ್ಯಯನ, ಸಂಪುಟ-೬, ಸಂಯುಕ್ತ ಸಂಚಿಕೆ ೧-೨, ಜನವರಿ-ಡಿಸೆಂಬರ್-೨೦೦೪, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೫೨. ಮೂಲ: ರೊಮಿಲ ಥಾಪರ್ ಹರ್ಬನ್ಸ್ ಮುಖಿಯ ಮತ್ತು ಬಿಪನ್ ಚಂದ್ರ ಕನ್ನಡಕ್ಕೆ ಕೆ. ಎಲ್. ಗೋಪಾಲಕೃಷ್ಣರಾವ್, ಕೋಮುವಾದ ಹಾಗೂ ಭಾರತೀಯ ಇತಿಹಾಸ ಲೇಖನ, ೧೯೯೮, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೩. ಡಾ. ಮೊಗಳ್ಳಿ ಗಣೇಶ್, ಮೌಖಿಕ ಕಥನ, ೨೦೦೬, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೫೪. ಟಿ.ಆರ್. ಚಂದ್ರಶೇಖರ್, ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ, ೨೦೦೧, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೫೫. ಮೂಲ: ಲೆನಿನ್, ಅನು: ಕೆ.ಎಲ್. ಗೋಪಾಲಕೃಷ್ಣರಾವ್, ಲೆನಿನ್ ಮಹಿಳೆಯರ ವಿಮೋಚನೆಯ ಕುರಿತು, ೧೯೮೦, ಕನ್ನಡ ಭಾಷಾಂತರ ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ.

೫೬. ಡಾ. ಯು.ಬಿ. ಅಶೋಕ್‌ಕುಮಾರ್, ಕೃಷಿಕೂಲಿಕಾರರ ಬದುಕು: ಬವಣೆ, ೨೦೦೧, ಚೇತನಾ ಬುಕ್‌ಹೌಸ್, ಮೈಸೂರು.

೫೭. ಪ್ರೊ.ಬಿ. ಸುರೇಂದ್ರರಾವ್, ಇತಿಹಾಸ ಮತ್ತು ಸಮಾಜ, ೨೦೦೫, ಪ್ರಸಾರಾಂಗ, ಕ.ವಿ.ವಿ, ಹಂಪಿ-ವಿದ್ಯಾರಣ್ಯ.

೫೮. ಡಾ. ಮಂಜುನಾಥ ಬೇವಿನಕಟ್ಟಿ, ಕನ್ನಡ ಜನಪದ ಸಂಬಿಕೆಗಳ ಅಧ್ಯಯನ (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೧೯೯೩, ಮೈಸೂರು, ವಿ.ವಿ, ಮೈಸೂರು.

೫೯. ಡೊಮಿನಿಕ್.ಡಿ, ಕರ್ನಾಟಕದ ಜಾತಿಗಳ ಸಾಂಸ್ಕೃತಿಕ ಪ್ರತಿನಿಧೀಕರಣ ಮತ್ತು ವಸಾಹತುಶಾಹಿ ಅನುಭವ (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ೨೦೦೫, ಮಂಗಳೂರು. ವಿ.ವಿ, ಮಂಗಳೂರು.

೬೦. ಮೂಲ: ಮಧುಕೇಶ್ವರ್, ಅನು: ಎಚ್.ಎಮ್. ಹೇಮಲತಾ ಭಾರತದ ಮಹಿಳೆಯರ ಬದುಕು ಮತ್ತು ಹೋರಾಟ, ೧೯೯೬, ಸಮತಾ ಅಧ್ಯಯನ ಕೇಂದ್ರ, ಮೈಸೂರು.

೬೧. ಕೆ. ಶಿವಚಿತ್ತಪ್ಪ, ಎಂ. ಚೌಡೇಗೌಡ, ಮಹಿಳೆ ಮತ್ತು ಅಭಿವೃದ್ಧಿ, ೨೦೦೫, ಚಿನ್ಮಯಿ ಪ್ರಕಾಶನ, ಮೈಸೂರು.

೬೨. ಬಡವರ ಬೆವರಿನಲ್ಲಿ ಸ್ವಚ್ಛವಾಗುವ ಬೆಂಗಳೂರು ಗುತ್ತಿಗೆ ಪೌರಕಾರ್ಮಿಕರ ಬೆಂಬಲ ಗುಂಪಿನ ಸತ್ಯಶೋಧನಾ ವರದಿ ಭಾಗ-೨.

೬೩. ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಅಧಿನಿಯಮ, ೧೯೮೯ ಹಾಗೂ ನಾಗರೀಕ ಹಕ್ಕುಗಳ ಸಂರಕ್ಷಣಾ ಅಧಿನಿಯಮ, ೧೯೫೫, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

೪. ವಕ್ತೃ ವಿವರ

ಕ್ರ. ಸಂ.	ತಿಳುವಳಿಕೆ ಕೊಟ್ಟವರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ವಿವಾಹದ ಮಟ್ಟ	ಶೈಕ್ಷಣಿಕ ಮಟ್ಟ	ತಿಂಗಳ ವರಮಾನ	ಭೂಮಿ		ವಲಸಿಗರೇ- ಎಲ್ಲಿಂದ	ಮನೆ ಮಾದರಿ
										ಹಿಡುವಳಿ ಒಣ	ನೀರಾವರಿ		
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩	೧೪
೦೧	ಜ್ಯೋತೆಮ್ಮ	ಹೆಣ್ಣು	೩೫	ಮಾದಿಗ	ಮನೆಗಳಲ್ಲಿ ಕೆಲಸ ಮಾಡುವುದು	ಅನಂತಶಯನ ಗುಡಿ	ವಿಧವೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೦೨	ಎಲ್ಲಮ್ಮ	ಹೆಣ್ಣು	೫೫	ಮಾದಿಗ	ಸ್ತ್ರೀಶಕ್ತಿ ಗುಂಪಿನ ಮೂಲಕ ಮನೆಗಳಲ್ಲಿ ಕಸ ತೆಗೆದುಕೊಳ್ಳುವುದು	ಅನಂತಶಯನ ಗುಡಿ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೦೩	ಯಮನೂರಮ್ಮ	ಹೆಣ್ಣು	೫೫	ಚಲುವಾದಿ	ಜಾಡಮಾಲಿ ಗುತ್ತಿಗೆ	ಬಳ್ಳಾರಿ	ಗಂಡ ಬಿಟ್ಟಿದ್ದಾನೆ	ಇಲ್ಲ	೫೦೦	ಇಲ್ಲ	ಇಲ್ಲ	ಸ್ಥಳೀಯರು	ಸೀಟು ಮನೆ
೦೪	ಹುಲಿಗೆಮ್ಮ	ಹೆಣ್ಣು	೩೩	ಮಾದಿಗ	ಜಾಡಮಾಲಿ ಕೆಲಸ	ಬಳ್ಳಾರಿ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಸೀಟು ಮನೆ
೦೫	ಸರು ಅಕ್ಕ	ಹೆಣ್ಣು	೩೫	ಮಾದಿಗ	ಗಣಿಯಲ್ಲಿ ಕಲ್ಲು ಜರಡಿ ಹಿಡಿಯುವುದು	ಪಾಪಿನಾಯಕನ ಹಳ್ಳಿ	ವಿಧವೆ	ಇಲ್ಲ	ಗೊತ್ತಿಲ್ಲ	ಒಂದು	ಇಲ್ಲ	ಸ್ಥಳೀಯರು	ಚಪ್ಪಡಿಮನೆ
೦೬	ಸಂಕ್ಲಮ್ಮ	ಹೆಣ್ಣು	೨೪	ಮಾದಿಗ	ಮನೆ ಕೆಲಸ	ಬಳ್ಳಾರಿ	ಗಂಡ ಬಿಟ್ಟಿದ್ದಾನೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಹೌದು ಕೂಡ್ಲಿಗಿಂದ	ಗುಡಿಸಲು

ಕ್ರ. ಸಂ.	ತಿಳುವಳಿಕೆ ಕೊಟ್ಟವರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ವಿವಾಹದ ಮಟ್ಟ	ಶೈಕ್ಷಣಿಕ ಮಟ್ಟ	ತಿಂಗಳ ವರಮಾನ	ಭೂಮಿ		ವಲಸಿಗರೇ- ಎಲ್ಲಿಂದ	ಮನೆ ಮಾದರಿ
										ಹಿಡುವಳಿ ಒಣ	ನೀರಾವರಿ		
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩	೧೪
೦೭	ಹನುಮಕ್ಕ	ಹೆಣ್ಣು	೨೧	ಮಾದಿಗ	ವಿದ್ಯಾರ್ಥಿನಿ	ದಣಾಪುರ	ಇಲ್ಲ	ಟಿ.ಸಿಎಚ್	ಇಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗೌರ್ಮೆಂಟ್ ಮನೆ
೦೮	ಹುಲಿಗೆಮ್ಮ	ಹೆಣ್ಣು	೩೮	ಮಾದಿಗ	ಇಲ್ಲ- ಕಾಯಿಲೆ	ದಣಾಪುರ	ವಿಧವೆ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗೌರ್ಮೆಂಟ್ ಮನೆ
೦೯	ಸಣ್ಣ ದುರುಗಮ್ಮ	ಹೆಣ್ಣು	೬೮	ಮಾದಿಗ	ಕೃಷಿಕೂಲಿ	ದಣಾಪುರ	ದೇವದಾಸಿ	ಇಲ್ಲ	ಇಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೧೦	ಅಂಜಿನಮ್ಮ	ಹೆಣ್ಣು	೨೧	ಮಾದಿಗ	ವಿದ್ಯಾರ್ಥಿನಿ	ದಣಾಪುರ	ಇಲ್ಲ	ಟಿ.ಸಿಎಚ್	ಇಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗೌರ್ಮೆಂಟ್ ಮನೆ
೧೧	ಹೊನ್ನೂರಮ್ಮ	ಹೆಣ್ಣು	೬೯	ಮಾದಿಗ	ಪಾರ್ಕ್‌ನಲ್ಲಿ ನೀರು ಬಿಡುವುದು	ದಣಾಪುರ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಕೆಂಚನ ಹಳ್ಳಿಯಿಂದ	ಗುಡಿಸಲು
೧೨	ಹುಲಿಗೆಮ್ಮ	ಹೆಣ್ಣು	೩೬	ಮಾದಿಗ	ಕೃಷಿಕೂಲಿ	ದಣಾಪುರ	ದೇವದಾಸಿ	ಇಲ್ಲ	ಇಲ್ಲ	ಇಲ್ಲ	೦.೫	ಸ್ಥಳೀಯರು	ಗೌರ್ಮೆಂಟ್ ಮನೆ

ಕ್ರ. ಸಂ.	ತಿಳುವಳಿಕೆ ಕೊಟ್ಟವರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ವಿವಾಹದ ಮಟ್ಟ	ಶೈಕ್ಷಣಿಕ ಮಟ್ಟ	ತಿಂಗಳ ವರಮಾನ	ಭೂಮಿ		ವಲಸಿಗರೇ- ಎಲ್ಲಿಂದ	ಮನೆ ಮಾದರಿ
										ಹಿಡುವಳಿ	ನೀರಾವರಿ		
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩	೧೪
೧೩	ಈರಣ್ಣ	ಪುರುಷ	೪೨	ಚಲುವಾದಿ	ಕೃಷಿಕೂಲಿ	ಭಜಂಗ ನಗರ	ಆಗಿದೆ	ಇಲ್ಲ	೫೦೦	೨	ಇಲ್ಲ	ಸ್ಥಳೀಯರು	ಸೀಟು ಮನೆ
೧೪	ಗಾಳೆಮ್ಮ	ಹೆಣ್ಣು	೩೩	ಮಾದಿಗ	ಗಣಿ ಕೂಲಿ	ಸಂಡೂರು	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಕೊಪ್ಪಳದಿಂದ	ಟಾರ್ಪಲ್ ಗುಡಿಸಲು
೧೫	ಹುಲಿಗೆಮ್ಮ	ಹೆಣ್ಣು	೨೦	ಮಾದಿಗ	ಗಣಿ ಕೂಲಿ	ಕಾರಿಗನೂರು	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಗದಗದಿಂದ	ಟಾರ್ಪಲ್ ಗುಡಿಸಲು
೧೬	ಎಲ್ಲಮ್ಮ	ಹೆಣ್ಣು	೨೮	ಹೊಲೆಯ	ಗಣಿ ಕೂಲಿ	ಕಾರಿಗನೂರು	ಆಗಿದೆ	ಇಲ್ಲ	ಗೊತ್ತಿಲ್ಲ	೨	ಇಲ್ಲ	ಗದಗದಿಂದ	ಟಾರ್ಪಲ್ ಗುಡಿಸಲು
೧೭	ಮಂಜುಳ	ಹೆಣ್ಣು	೩೫	ಮಾದಿಗ	ಹಾಲು ಮಾರುವುದು	ಸಂಗನ ಕಲ್ಲು	ಆಗಿದೆ	ಇಲ್ಲ	ಗೊತ್ತಿಲ್ಲ	೦.೫	ಇಲ್ಲ	ಸ್ಥಳೀಯರು	ಗುಡಿಸಲು
೧೮	ಮಂಗಮ್ಮ	ಹೆಣ್ಣು	೨೫	ಮಾದಿಗ	ಜಾಡಮಾಲಿ	ಕೂಡ್ಲಿಗಿ	ಆಗಿದೆ	ಇಲ್ಲ	೧, ೫೦೦	ಇಲ್ಲ	ಇಲ್ಲ	ರಾಯಲ ಸೀಮ	ಗೌರ್ಮೆಂಟ್ ಮನೆ
೧೯	ಹೊನ್ನೂರಮ್ಮ	ಹೆಣ್ಣು	೨೯	ಹೊಲೆಯ	ಜಾಡಮಾಲಿ	ಕೂಡ್ಲಿಗಿ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು

ಕ್ರ. ಸಂ.	ತಿಳುವಳಿಕೆ ಕೊಟ್ಟವರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ವಿವಾಹದ ಮಟ್ಟ	ಶೈಕ್ಷಣಿಕ ಮಟ್ಟ	ತಿಂಗಳ ವರಮಾನ	ಭೂಮಿ		ವಲಸಿಗರೇ- ಎಲ್ಲಿಂದ	ಮನೆ ಮಾದರಿ
										ಹಿಡುವಳಿ	ನೀರಾವರಿ		
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩	೧೪
೨೦	ನಾಗಮ್ಮ	ಹೆಣ್ಣು	೩೮	ಚಲುವಾದಿ	ನಾಟಕ	ಮರಿಯಮ್ಮನಹಳ್ಳಿ	ದೇವದಾಸಿ	ಇಲ್ಲ	೧೫೦೦	ಇಲ್ಲ	ಇಲ್ಲ	ಸ್ಥಳೀಯರು	ಸೀಟು ಮನೆ
೨೧	ಕಣಿಕೆಮ್ಮ	ಹೆಣ್ಣು	೩೨	ಮಾದಿಗ	ಜಾಡಮಾಲಿ	ಮರಿಯಮ್ಮನಹಳ್ಳಿ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಆಂಧ್ರ-ಅನಂತಪುರ	ಸೀಟು ಮನೆ
೨೨	ಪೋಲೆರಮ್ಮ	ಹೆಣ್ಣು	೪೨	ಚಲುವಾದಿ	ಕೃಷಿಕೂಲಿ	ಸಿರುಗುಪ್ಪ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಸೀಟು ಮನೆ
೨೩	ಗಾಳೆಮ್ಮ	ಹೆಣ್ಣು	೫೮	ಚಲುವಾದಿ	ಕೃಷಿಕೂಲಿ	ಸಿರುಗುಪ್ಪ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೨೪	ಗಾಳೆಮ್ಮ	ಹೆಣ್ಣು	೩೮	ಚಲುವಾದಿ	ಕೃಷಿಕೂಲಿ	ಹಡಗಲಿ	ಗಂಡ ಬಿಟ್ಟಿದ್ದಾನೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೨೫	ಹಂಪಮ್ಮ	ಹೆಣ್ಣು	೪೮	ಮಾದಿಗ	ಕೃಷಿಕೂಲಿ	ಹಡಗಲಿ	ವಿಧವೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೨೬	ಸಂಕ್ಲಮ್ಮ	ಹೆಣ್ಣು	೩೨	ಮಾದಿಗ	ಗಣಿಕೂಲಿ	ಹೊಸಪೇಟೆ	ವಿಧವೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು

ಕ್ರ. ಸಂ.	ತಿಳುವಳಿಕೆ ಕೊಟ್ಟವರು	ಲಿಂಗ	ವಯಸ್ಸು	ಜಾತಿ	ಉದ್ಯೋಗ	ಊರು	ವಿವಾಹದ ಮಟ್ಟ	ಶೈಕ್ಷಣಿಕ ಮಟ್ಟ	ತಿಂಗಳ ವರಮಾನ	ಭೂಮಿ		ವಲಸಿಗರೇ-ಎಲ್ಲಿಂದ	ಮನೆ ಮಾದರಿ
										ಒಡ್ಡುಭೂಮಿ	ನೀರಾವರಿ		
೦೧	೦೨	೦೩	೦೪	೦೫	೦೬	೦೭	೦೮	೦೯	೧೦	೧೧	೧೨	೧೩	೧೪
೨೭	ಕೊಟ್ರಮ್ಮ	ಹೆಣ್ಣು	೧೮	ಮಾದಿಗ	ಗಣಿಕೂಲಿ	ಕುಡತಿನಿ	ಆಗಿದೆ	ಇಲ್ಲ		ಇಲ್ಲ	ಇಲ್ಲ	ಸ್ಥಳೀಯರು	ಗುಡಿಸಲು
೨೮	ಹುಚ್ಚಮ್ಮ	ಹೆಣ್ಣು	೧೫	ಮಾದಿಗ	ಗಣಿಕೂಲಿ	ಕುಡತಿನಿ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಕೂಡ್ಲಿಗಿಂದ	ಗುಡಿಸಲು
೨೯	ಪೂವಮ್ಮ	ಹೆಣ್ಣು	೪೨	ಮಾಲ	ಗಣಿಕೂಲಿ	ತೋರಣಗಲ್ಲು	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಗಂಗಾವತಿಯಿಂದ	ಗುಡಿಸಲು
೩೦	ಅಲವೇಲು ಮಂಗಮ್ಮ	ಹೆಣ್ಣು	೩೫	ಮಾಲ	ಮನೆಕೆಲಸ	ಹೊಸಪೇಟೆ	ಆಗಿದೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಗುಂತಕಲ್ಲಿಂದ	ಗುಡಿಸಲು
೩೧	ರತ್ನಮ್ಮ	ಹೆಣ್ಣು	೪೮	ಮಾದಿಗ	ಮನೆಕೆಲಸ	ಹೊಸಪೇಟೆ	ಗಂಡ ಬಿಟ್ಟಿದ್ದಾನೆ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಅನಂತಪುರದಿಂದ	ಗುಡಿಸಲು
೩೨	ರೇಣುಕಮ್ಮ	ಹೆಣ್ಣು	೩೮	ಬೆಸ್ತರು	ಮನೆಕೆಲಸ	ಹೊಸಪೇಟೆ	ದೇವದಾಸಿ	ಇಲ್ಲ	ಗೊತ್ತಿಲ್ಲ	ಇಲ್ಲ	ಇಲ್ಲ	ಸ್ಥಳೀಯರು	ಚಪ್ಪಡಿಮನೆ

ವೇತನದಲ್ಲೇಕೆ ತಾರತಮ್ಯ?





→ [illegible]
27. ನವೆಂಬರ್. 2005

ಕಲ್ಲು ಗಣಿಗಾರಿಕೆಯಲ್ಲಿ ದಲಿತ ಮಹಿಳೆಯರು

ಭೂಮಿ ಬಂಧು ಅಕ್ಟೋಬರ್ ೨೦೦೫



ಭೂಮಿ ಬಂಧು ಅಕ್ಟೋಬರ್ ೨೦೦೫



ಶ್ರೇಣಿ ಬಂಧು ನವೆಂಬರ್ ೨೦೦೫



ಶ್ರೇಣಿ ಬಂಧು ನವೆಂಬರ್ ೨೦೦೫



ಆಂಧ್ರಪ್ರದೇಶದಲ್ಲಿ ಇಂದಿಗೂ ಕೈಯಲ್ಲಿ ಮನುಷ್ಯರ ಮಲವನ್ನು ಬಾಚಿ ಎತ್ತುತ್ತಿರುವ ಮಹಿಳೆಯನ್ನು ಚಿತ್ರದಲ್ಲಿ ಕಾಣಬಹುದು.



[illegible]ಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿ ಎದುರು ಜಿಲ್ಲಾಧಿಕಾ[illegible] ಆಗಮನಕ್ಕೆ ಕಾದು [illegible] ನೂರಾರು [illegible]ವದಾಸಿಯರು.

[illegible]ಲ್ಲಾಧಿಕಾರಿಗೆ ದೇವದಾಸಿಯರ ಮನವಿ 22.7.07.

ಪ್ರಮಾಣಪತ್ರ ನೀಡಲು ಒತ್ತಾಯ

ಜಾವಾಣಿ ವಾರ್ತೆ

[illegible]ಸಪೇಟೆ: ರಾಜ್ಯದ ಎಲ್ಲ ದೇವದಾಸಿಯರ ಸಮೀಕ್ಷೆ ನಡೆಸಿ [illegible] ಪತ್ರ ನೀಡಬೇಕೆಂಬ ಬೇಡಿಕೆ ಸೇರಿದಂತೆ ಹಲವು [illegible]ಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ [illegible]ದಾಸಿಯರ ವಿಮೋಚನಾ ಸಂಘ ತಾಲ್ಲೂಕು ಘಟಕದ [illegible] ಶನಿವಾರ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಿದರು.

[illegible] ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಪ್ರತಿಯೊಂದು [illegible]ಲ್ಲಿ ದೇವದಾಸಿಯರು ಇದ್ದಾರೆ. ಆದರೆ ಈವರೆಗೆ [illegible] ಗುರುತಿಸುವ ಕಾರ್ಯವಾಗಿಲ್ಲ. ಇದರಿಂದ ಅವರಿಗೆ [illegible]ದಿಂದ ದೊರೆಯಬೇಕಾದ ಪರಿಶಿಷ್ಟರ ಚೀಟಿ, ವಾಸಿಸಲು [illegible]ದೊರೆಯದೆ ಕೂಲಿ ಕೆಲಸ [illegible]

[illegible]ರ ಜಿಲ್ಲೆಯಲ್ಲಿರುವ ದೇವದಾಸಿಯರನ್ನು ಗುರುತಿಸಿ [illegible]ದಯ ಪಡಿತರ ಚೀಟಿ ನೀಡಬೇಕು. ಪ್ರತಿ ದೇವದಾಸಿ[illegible] ಎರಡು ಎಕರೆ ಜಮೀನು ನೀಡಬೇಕು. ಅದಕ್ಕಾಗಿ [illegible] ಭೂಮಿ ಯೋಜನೆ ಜಾರಿಗೊಳಿಸಬೇಕು. ಹೈನುಗಾರಿಕೆ [illegible] ಶೇ 75 ರಷ್ಟು ಸಬ್ಸಿಡಿಯಲ್ಲಿ ಸಾಲ ನೀಡಬೇಕು [illegible] 25 ರಷ್ಟು ಹಣಕ್ಕೆ ಬಡ್ಡಿ ಇಲ್ಲದೇ 40 ಸಾವಿರ [illegible]ಗೆ ಸಾಲ ನೀಡುವ ವಿಶೇಷ ದೇವದಾಸಿಯರು ಸಾಲ [illegible] ಜಾರಿಗೆ ತರಬೇಕು. ದೇವದಾಸಿ ಮಕ್ಕಳಿಗೆ ಯಾವುದೇ [illegible]ಲ್ಲದೆ ವಸತಿ ನಿಲಯ ಹಾಗೂ ವಸತಿ ಶಾಲೆಗೆ ಸೇರ[illegible]ಡಿಸಬೇಕು. ಉನ್ನತ ಹಂತದವರೆಗೆ ಉಚಿತ ಶಿಕ್ಷಣ [illegible]. ದೇವದಾಸಿ ಮಹಿಳೆಯರ ಕುಟುಂಬ ಕಲ್ಯಾಣ ನಿಧಿ [illegible]ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳ ಮನವಿಯನ್ನು [illegible] ಕುಂದುಕೊರತೆಗಳ ಸಭೆಯಲ್ಲಿ ನೂರಾರು ದೇವದಾಸಿ ಮಹಿಳೆಯರು ಜಿಲ್ಲಾಧಿಕಾರಿ ಅರವಿಂದ ಶ್ರೀವಾಸ್ತವ ಅವರಿಗೆ ನೀಡಿದರು.

ದೇವದಾಸಿ ವಿಮೋಚನಾ ಸಂಘದ ಅಧ್ಯ[illegible] ಸೇರಿದಂತೆ ತಾಲ್ಲೂಕಿನ ನೂರಾರು ದೇವ[illegible] ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಸುಸ್ತಾದ ಜನರು: ನೂರಾರು [illegible]. ಅಂಗನವಾಡಿ ಕಾರ್ಯಕರ್ತೆಯರು ಅಲ್ಲದೇ ಅನೇಕ [illegible] ಬೆಳಿಗ್ಗೆಯಿಂದ ಜಿಲ್ಲಾಧಿಕಾರಿಗಳ ಆಗಮನಕ್ಕಾ[illegible] ಕಾದು ಸುಸ್ತಾದರು.

ಸಾರ್ವಜನಿಕರ ಕುಂದುಕೊರತೆಗಳ ಸಭೆಗೆ [illegible] ಬೆಳಿಗ್ಗೆ 10.30ಕ್ಕೆ ಬರಬೇಕಿತ್ತು ಮಧ್ಯಾಹ್ನ [illegible]ವರೆಗೆ ಬರದೇ ಇದ್ದಾಗ ಬೇಸರಗೊಂಡ ದೇ[illegible]. ಅಂಗನವಾಡಿ ಕಾರ್ಯಕರ್ತೆಯರು, ಅಖಿಲ ಭಾರತ [illegible]ವಾದಿ ಮಹಿಳಾ ಸಂಘಟನೆ, ಎಸ್‌ಎಫ್‌ಐ, ವಿವಿಧ [illegible]ನೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು [illegible]ಪೇಟೆ ನಗರಾಭಿವೃದ್ಧಿ ಕಚೇರಿ ಎದುರು ಕು[illegible] ಜಿಲ್ಲಾಧಿಕಾರಿಗಳ ವಿಳಂಬದ ಬಗ್ಗೆ ಅಸ[illegible] ವ್ಯಕ್ತಪಡಿಸಿದರು.

3.15 ರ ಸುಮಾರಿಗೆ ಬಂದ ಜಿಲ್ಲಾ[illegible]ಗಳಿಗೆ ಬೆಳಿಗ್ಗೆಯಿಂದ ಕಾಯ್ದು ಕುಳಿತಿರುವುದನ್ನು ಗಮ[illegible] ನಂತರ ತಮ್ಮ ಮನವಿಗಳನ್ನು ನೀಡಿದರು.

ಈ ಸಂದರ್ಭದಲ್ಲಿ ತಹಸೀಲ್ದಾರ್ ಪ್ರಜ್ಞಾ [illegible]

244

ಮಲ ಹೊರುವ ಪದ್ಧತಿ ನಿರ್ಮೂಲನೆಗೆ ನೀಡಿದ್ದ ಹಣ ಖರ್ಚೇ ಆಗಿಲ್ಲ

ನವದೆಹಲಿ ಮೇ ೧೯. ಮಲ ಹೊರುವ ಪದ್ಧತಿಯ ಸಂಪೂರ್ಣ ನಿರ್ಮೂಲನೆಗೆಂದು ನೀಡಲಾಗಿರುವ ೩೨೫ ಕೋಟಿ ರೂಪಾಯಿಯಷ್ಟು ಹಣ ರಾಜ್ಯ ಸರ್ಕಾರಗಳ ಬಳಿ ಖರ್ಚಾಗದೆ ಕೊಳೆಯುತ್ತ ಬಿದ್ದಿದೆ ಎಂದು ಬಿ.ಕೆ. ಹರಿಪ್ರಸಾದ್ ರಾಜ್ಯಸಭೆಯಲ್ಲಿ ದೂರಿದ್ದಾರೆ.

ಬಹು ದೊಡ್ಡ ಸಾಮಾಜಿಕ ಕಳಂಕವಾಗಿರುವ ಈ ಅನಿಷ್ಟವನ್ನು ತೊಲಗಿಸುವ ತುರ್ತಾಗಲಿ, ಬದ್ಧತೆಯಾಗಲಿ ಸಂಬಂಧಪಟ್ಟ ಮಂತ್ರಾಲಯಕ್ಕೆ ಇಲ್ಲವೆಂದು ಅವರು ಆಕ್ಷೇಪ ಪ್ರಕಟಿಸಿದ್ದಾರೆ.

ಮಲ ಹೊರುವವರಿಗೆ ಬೇರೆ ಉದ್ಯೋಗ ಒದಗಿಸುವ ಮತ್ತು ಶುಷ್ಕ ಪಾಯಿಖಾನೆಗಳ ನಿರ್ಮಾಣವನ್ನು ನಿಷೇಧಿಸುವ ೧೯೯೩ರ ಕೇಂದ್ರ ಕಾಯಿದೆ ಜಾರಿಗೆ ರಾಜ್ಯ ಸರ್ಕಾರಗಳು ಸಾಕಷ್ಟು ಆಸಕ್ತಿ ತೋರುತ್ತಿಲ್ಲ. ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

೨೦೦೭ರ ಅಂತ್ಯದೊಳಗೆ ಈ ಪದ್ಧತಿಯ ನಿರ್ಮೂಲನೆ ಆಗಬೇಕೆಂದು ಯೋಜನಾ ಆಯೋಗ ತನ್ನ ರಾಷ್ಟ್ರೀಯ ಕ್ರಿಯಾಯೋಜನೆಯನ್ನೇ ನೀಡಿ ಗಡುವು ನಿಗದಿ ಮಾಡಿದೆ.

ಆದರೆ ಈ ಅಮಾನವೀಯ ದಾಸ್ಯದಿಂದ ಮುಕ್ತರಾಗಲು ಕಾಯುತ್ತಿರುವ ನತದೃಷ್ಟರ ಅಧಿಕೃತ ಸಂಖ್ಯೆ ೬.೭೬ ಲಕ್ಷವಾದರೆ. ಅನಧಿಕೃತ ಸಂಖ್ಯೆ ೧೩ ಲಕ್ಷ ಎಂದು ಪ್ರಸಾದ್ ತಿಳಿಸಿದ್ದಾರೆ. (ಕನ್ನಡ ಪ್ರಭ)



7.07

7.07

ದಿನನಿತ್ಯದ ಶಿಲುಬೆ ಯಾತನೆಯಲ್ಲಿ ದಲಿತ ಕ್ರೈಸ್ತರು

150 ದಲಿತ ಕುಟುಂಬಗಳು ನಡುಬೀದಿಯಲ್ಲಿ

...ಗಶೆಟ್ಟಿಹಳ್ಳಿಯ ಭೂಪಸಂದ್ರ ಹತ್ತಿರ ಇರುವ ...ಬೇಡ್ಕರ್ ಸ್ಲಂ, 150 ದಲಿತ ಕುಟುಂಬಕ್ಕೆ ...ರಿದ ಬಡವರು ಸುಮಾರು 40-...ವರ್ಷಗಳಿಂದ ಕುಂಟೆಯ ಪ್ರದೇಶ ಇನಾಮ್ತಿ...ಗದಲ್ಲಿ ಗುಡಿಸಲು ಹಾಕಿಕೊಂಡು ವಾಸ ...ಡುತ್ತಿದ್ದರು.

ಸ್ಲಂ ಜಗತ್ತು 4.07

ಧೈರ್ಯ ತುಂಬುವ ಕೆಲಸವನ್ನು ಸತತವಾಗಿ ನಡೆಸುತ್ತಿದ್ದಾರೆ.

ಏನು ತಿಳಿಯದ ಅಮಾಯಕರು ಎದುರು ಮಾತನಾಡಿದರೆ ಹೊಡೆದು ಓಡಿಸುವುದು. ಲಕ್ಷ್ಮಮ್ಮ ಹೇಳುವಂತೆ ಎಲ್ಲಾ ಜನರು ಕೇಳಬೇಕು, ಇವಳು ಎಲ್ಲಿಗೆ ಕರೆಯುತ್ತಾಳೆಯೋ ಅಲ್ಲಿಗೆ ಬರಬೇಕು...

ಬಿ.ಡಿ.ಎಯಿಂದ ಕೆಟ್ಟ ಸುದ್ದಿ ಬಂತು. ಈ ಸ್ಲಂ ಜಾಗ ಖೋಡೆಸ್ ಕಂಪನಿಗೆ ಸೇರಿದ್ದು ನೀವು ಖಾಲಿ ಮಾಡಿ ಎಂದು ವಿಷಯ ತಿಳಿದ ತಕ್ಷಣ ಸ್ಲಂ ಜನರು ಬಿ.ಡಿ.ಎ ಕಛೇರಿ ಮುಂದೆ ಧರಣಿ ಮಾಡಬೇಕಾಯಿತು. ಈ ಸಂದರ್ಭದಲ್ಲಿ ಬಿ.ಡಿ.ಎ ಅಧಿಕಾರಿ ಆಯುಕ್ತರು ಸ್ಲಂ ಎತ್ತಂಗಡಿ...

ಧರಣಿ ಸತ್ಯಾಗ್ರಹ

ಬಿಜಾಪುರ, ಏ ೧೬. ತಾಲೂಕಿನ ಸಾರವಾಡ ಗ್ರಾಮದ ಪರಿಶಿಷ್ಟ ಕುಟುಂಬದ ಮಲ್ಲಿಕಾರ್ಜುನ ಬಟಗಿ ತನ್ನ ತಾಯಿ, ಹೆಂಡತಿ ಹಾಗೂ ಮಕ್ಕಳ ಸಮೇತ ಜಿಲ್ಲಾಧಿಕಾರಿ ಮುಂದೆ ೯ ದಿನಗಳಿಂದ ನಿರಂತರವಾಗಿ ಧರಣಿ ಸತ್ಯಾಗ್ರಹ ಕೈಗೊಂಡಿದ್ದಾರೆ.

'ನ್ಯಾಷನಲ್ ಜಿಯೋಗ್ರಫಿಕ್' ಕಂಡ
ಭಾರತದ ಅಸ್ಪೃಶ್ಯರು

1ನೇ ಪುಟದಿಂದ



[illegible] ದಲಿತರ ಗುಡಿ[illegible]ಗಳು
[illegible]



[illegible]ತಂತ್ರಜ್ಞಾನದಲ್ಲಿ ಇನ್ನಿಲ್ಲದ ಯಶಸ್ಸು ಕಾಣುತ್ತಿರುವ
[illegible]ರತದ ಅಸ್ಪೃಶ್ಯರು ತಮ್ಮ ತುತ್ತಿನ ಚೀಲ ತುಂಬಿಸಿ
[illegible] ಅತ್ಯಂತ ಅನೈರ್ಮಲ್ಯ ವಾತಾವರಣದಲ್ಲಿ ಚರ್ಮ
ಹದ ಮಾಡುವುದು ತಪ್ಪದ ಕಾಯಕ



[illegible]ಡಿಯುವ ನೀರಿಗೂ 'ಮುಟ್ಟ'ನ ಸೋಂಕು

ಕೃಪೆ: ಸಂವಾದ ಜುಲೈ 2003

ಕಂಪ್ಲಿ: ಪೌರಸೇವಾ ನೌಕರರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಂಪ್ಲಿ: ಸ್ಥಳೀಯ ಪುರಸಭೆ ಪೌರನೌಕರರು ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಮಂಗಳವಾರ ಪಟ್ಟಣದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಪುರಸಭೆ ಕಚೇರಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ಡಾ. ರಾಜ್‌ಕುಮಾರ್ ರಸ್ತೆ ಮೂಲಕ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಸಮ್ಮಿಶ್ರ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು.

ನಂತರ ಪುರಸಭೆ ಕಚೇರಿಯಲ್ಲಿ ಸಮಾವೇಶಗೊಂಡು ಮುಖ್ಯಮಂತ್ರಿಗಳಿಗೆ ಬರೆದಿರುವ ಮನವಿ ಪತ್ರವನ್ನು ಕಂದಾಯ ಇಲಾಖೆ ಅಧಿಕಾರಿ ನಾಗಭೂಷಣ ಅವರಿಗೆ ಸಲ್ಲಿಸಿದರು. ಸ್ಥಳೀಯ ಪೌರ ಸೇವಾ ನೌಕರರ ಸಂಘದ ಅಧ್ಯಕ್ಷ ಬಿ. ರುದ್ರಪ್ಪ, ಕಾರ್ಯದರ್ಶಿ ಶ್ರೀಖಂಡೆ ರುಕ್ಮಣ, ಎಸ್. ಸೋಮಶೇಖರ, ಎಸ್. ಚಿದಾನಂದಪ್ಪ, ಜಿ. ಸತ್ಯನಾರಾಯಣ, ಎನ್. ನಜೀರ್ ಅಹ್ಮದ್, ಕೆ. ಮಹದೇವ, ಎಂ. ಸಲಿಂಭಾಷ, ಎಸ್. ನಿಜಲಿಂಗಪ್ಪ, ಪಿ. ಬಸವರಾಜ್ ಇನ್ನು ಮುಂತಾದವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು. ಸಿ.ಐ.ಟಿ.ಯು ಜಿಲ್ಲಾ ಮುಖಂಡ ಬೈರೆಡ್ಡಿ ತಿರುಪಾಲ್ ಮತ್ತು ಇತರ ಪ್ರಗತಿಪರ ಸಂಘಟನೆಗಳು ಬೆಂಬಲ ವ್ಯಕ್ತಪಡಿಸಿದ್ದರು.

ಉಚಿತ ಊಟ: ಮುಷ್ಕರ ನಿರತ ಪುರಸಭೆ ಪೌರ ನೌಕರರಿಗೆ ಕಂಪ್ಲಿ ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಇಟ್ಟಗಿ ಬಸವ ಮಂಗಳವಾರ ಉಚಿತ ಊಟದ ವ್ಯವಸ್ಥೆ ಮಾಡಿದರು. ಇದಕ್ಕಾಗಿ ಪೌರ ಕಾರ್ಮಿಕರು ಅಭಿನಂದನೆ ತಿಳಿಸಿದರು.

ಪ್ರತಿಭಟನಾಕಾರರನ್ನು ಬಾಯಿ ಮುಚ್ಚಿಸಲು ಉಚಿತ ಊಟ ಒದಗಿಸುವುದು. ಅಧಿಕಾರಿಗಳ ಕುತಂತ್ರದ ಅಟ್ಟಹಾಸವನ್ನು ತೋರಿಸು ತ್ತದೆಯಲ್ಲವೇ?

ದಲಿತ ಮುಖ್ಯ ಶಿಕ್ಷಕಿಂ[illegible] ಪಾಠ ಕೇಳಿದ ಮಕ್ಕಳಿ[illegible] ಗಂಜಲ ಪ್ರೋಕ್ಷಣೆ!

ನಾಗ್ಪುರ ಏ. ೨೪- ದಲಿತ ಮುಖ್ಯೋಪಾ[illegible] ಯಿನಿಯ ಬೋಧನೆ ಕೇಳಿದ ವಿದ್ಯಾರ್ಥಿಗಳಿಗೆ [illegible] ಅಧ್ಯಾಪಕರು ಹಸುವಿನ ಗಂಜಲ ಪ್ರೋಕ್ಷಣೆ ಮ[illegible] 'ಶುದ್ಧೀಕರಿಸಿದರು'!

ಬೆಚ್ಚಿ ಬಿದ್ದಿರಾ? ಅಸ್ಪೃಶ್ಯತೆ ಇನ್ನೂ ಜೀವಂತವಾ[illegible] ಎಂಬುದಕ್ಕೆ ಉದಾಹರಣೆ ಎಂಬಂತೆ, ಉತ್ತರಪ್ರದೇ[illegible] ಸರ್ಕಾರಿ ಶಾಲೆಯೊಂದರಲ್ಲಿ ಈ ಘಟನೆ ನಡೆದಿದೆ.

ಘಟನೆ ವಿವರ: ಉ. ಪ್ರದೇಶದ ಬಂದಾ[illegible] ಜಿಲ್ಲೆಯ ಶಾಲೆಯೊಂದರಲ್ಲಿ ದಲಿತ ಮಹಿಳೆಯೊಬ್ಬ[illegible] ಮುಖ್ಯ ಶಿಕ್ಷಕಿಯಾಗಿದ್ದರು. ಅವರು ವರ್ಗವಾದಾಗ [illegible] ಜಾಗಕ್ಕೆ ಮುಖ್ಯೋಪಾಧ್ಯಾಯರಾಗಿ ಸೇರಿದ ಶರ[illegible] ಕಾಯ್ಕಡೆ ನೇಮಕಗೊಂಡರು. ಹುದ್ದೆ ವಹಿಸಿದ ತಕ್ಷ[illegible] ಕಾಯ್ಕಡೆ ಶಾಲೆಯ ಮಕ್ಕಳಿಗೆಲ್ಲಾ ಗಂಜಲ ಪ್ರೋಕ್ಷ[illegible] 'ಶುದ್ಧೀಕರಣ' ಮಾಡಿದರು. ಈ ಆರೋಪದ ಮೇ[illegible] ಕಾಯ್ಕಡೆಯನ್ನು ಬಂಧಿಸಲಾಗಿದೆ. (ಪಿಟಿಐ. ಕನ್ನಡ ಪ್ರಭ[illegible]

ಬಳ್ಳಾರಿ : ಸಂವಾದ.

ಹೊಸಪೇಟೆ ಪ್ರೇಮ ನಗರ ಕೊಳಗೇರಿಯಲ್ಲಿ ಭೂಮಾಲೀಕರ ಅಟ್ಟಹಾಸ

ಹೊಸಪೇಟೆ ನಗರದ ಬಹುತೇಕ ಸ್ಲಂಗಳಲ್ಲಿ 10ನೇ ವಾರ್ಡ್ ಪ್ರೇಮನಗರ ಕೊಳಗೇರಿಯು ಬಹಳ ಹಿಂದುಳಿದ ಸ್ಲಂ. ಇಂತಹ ಸ್ಲಂಗೆ ಈವರೆಗೂ ತಿರುಗಿ ನೋಡದ ಭೂಮಾಲೀಕರು ಎರ[illegible]ಹಂತ[illegible]ಲಜ್ಯೋತಿ ಯೋಜನೆ [illegible] ರಸ್ತೆ ಅಚ್ಚುಕಟ್ಟಾದ [illegible] ಇವೆಲ್ಲವ[illegible]ನೋಡಿ ಇದು ನನ್ನ [illegible] ಇದ್ದರ[illegible]ನನ್ನ ಒಡೆತನವಿದೆ ಎ[illegible]ದಿಂದ ಸುಂದರವಾಗಿ ನಿರ್ಮಿ[illegible]ಗಳ ಮೇಲೆ ಕಾಂಪೌಂಡ್ ಕಾಮಗಾರಿಯನ್ನು 10-3-2006ರಲ್ಲಿ ಆರಂಭಿಸಿಯೇ ಬಿಟ್ಟರು. ಇದೇ ದಿನದಂದು ವಿಷಯ ತಿಳಿದ ಹೊಸಪೇಟೆ ಸ್ಲಂ ಜನಜಾಗೃತಿ ಆಂದೋಲನ ಸಮಿತಿಯು ಪ್ರೇಮನಗರ ಕೊಳಗೇರಿಯ ನಿವಾಸಿಗಳೊಂದಿಗೆ, ರಸ್ತೆ ಹಾಗೂ ಚರಂಡಿಗಳ ಮೇಲೆ ಭೂಮಾಲೀಕರು ನಿರ್ಮಿಸುತ್ತಿರುವ ಕಟ್ಟಡದ ಕಾಮಗಾರಿಯನ್ನು ನಿಲ್ಲಿಸುವಂತೆ ಸಂಬಂಧಿತ ಎಲ್ಲಾ ಮೇಲಾಧಿಕಾರಿಗಳು, ಕೆಳದರ್ಜೆಯ ಅಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿ, ಕಟ್ಟಡದ ಕಾಮಗಾರಿ ನಿಲ್ಲಿಸಲೆತ್ನಿಸಿ (ಮಡ್ಡಿ, ಚಲಕಿ, ಸಿಮೆಂಟ್ ಇಟ್ಟಿಗೆ) ಸಾಮಗ್ರಿ ಬಿಸಾಡಿದ ಆರೋಪದ ಮೇಲೆ ಪೋಲಿಸ್ ಠಾಣೆಯ ಮೆಟ್ಟಿಲನ್ನು ಏರಿದ ನಮ್ಮ ನಿರಂತರ ಹೋರಾಟದ ಫಲವಾಗಿ 16-3-2006 ರಂದು ಕಟ್ಟಡದ ಕಾಮಗಾರಿ ನಿಲ್ಲಿಸುವಂತೆ ಪೌರಾಯುಕ್ತರು ತಡೆಯಾಜ್ಞೆ ಹೊರಡಿಸಿದರು.ಇದರಿಂದ ತಣ್ಣಗಾದ ಭೂಮಾಲಿಕ ಕಾಶೀನಾಥ ಎಂಬುವವನು ಸ್ಲಂಜನರನ್ನು ಎದುರಿಸಲಾಗದೇ, ಒಳಗಿಂದೊಳಗೆ ನಾರಾಯಣಪ್ಪ ಎಂಬ ವ್ಯಕ್ತಿಗೆ ಈ ಜಮೀನನ್ನು ಮಾರಿ ಹಣ ಹಾಗೂ ರೌಡಿಗಳ ಬಲದ ಮೇಲೆ ಕಾಂಪೌಂಡ್ ಕಟ್ಟಿಯೇ ಬಿಟ್ಟ. ಇದನ್ನು ತಡೆಯಲು ಕಿರುನೀರಿನ ಸರಬರಾಜು ಅಂತ ಒಂದು ನೀರಿನ ಟ್ಯಾಂಕನ್ನು ಕಟ್ಟಿಸಿ ಆ ಸ್ಲಂನ ಜನರಿಗೆ ನೀರಿನ ವ್ಯವಸ್ಥೆಯನ್ನು ಮಾಡಿದ್ದರು.

ಮಾನವೀಯತೆ ಮರೆತ ಭೂಮಾಲೀಕ ನಾರಾಯಣಪ್ಪ ಜಗದೀಶ್ ಪುರೋಹಿತ ಎಂಬ ಇನ್ನೋರ್ವ ವ್ಯಕ್ತಿಗೆ ಈ ಟ್ಯಾಂಕ್ ಇರುವ ಜಾಗವನ್ನು ಮಾರಿಬಿಟ್ಟದ್ದ ಯಾರದೋ ಜಾಗ ದೇವರು ದಿಂಡರ ಜಾತ್ರೆ ಎಂದು ಇವರು ರಾತ್ರೋರಾತ್ರಿ ಆ ನೀರಿನ ಟ್ಯಾಂಕನ್ನು ಧ್ವಂಸ ಮಾಡಿ ಚರಂಡಿಯನ್ನು ಒಳ ಮಾಡಿಕೊಂಡು ಭವ್ಯವಾದ ಕಟ್ಟಡವನ್ನು ಕಟ್ಟಿಯೇ ಬಿಟ್ಟಿದ್ದಾರೆ. ನೋಡು ನೋಡುತ್ತಿದ್ದಂತೆಯೇ ರಸ್ತೆ ಚರಂಡಿಗಳು ಮಾಯವಾಗಿಯೇ ಬಿಟ್ಟವು. ಇದರಿಂದ ಈ ಪ್ರದೇಶದ ಸುಮಾರು 3500 ಜನ ಪರದಾಡುವಂತಾಯಿತು. ಈಗ ಮತ್ತೆ ಶುರುವಾಯ್ತು ಸ್ಲಂ ಸಮಿತಿಯ ಹೋರಾಟ. ಸಮಿತಿಯು ಸ್ಲಂಗೆ ಸಂಬಂಧಿಸಿದಂತೆ ಈ ಹಿಂದಿನ ದಾಖಲಾತಿಗಳು, ಫೋಟೋ ಎಲ್ಲವನ್ನೂ ಒಂದು ಕಡೆ ದಾಖಲಿಸಿ ಪತ್ರಕರ್ತರನ್ನು ಕರೆದು ನಡೆದ ಅಕ್ರಮದ ಬಗ್ಗೆ ತಿಳಿಸಿತು. ಈ ಹೋರಾಟವನ್ನು ಅರಿತ ಭೂಮಾಲೀಕರು ಹೆಸರಿಗೆ ಜನಪ್ರತಿನಿಧಿಗಳೆಂದು ಕರೆಸಿಕೊಳ್ಳುವ, ಸಮಸ್ಯೆಗೆ ಸಂಬಂಧಿಸಿದವರನ್ನು ಕರೆಸಿ ಪಂಚಾಯ್ತಿ ಮಾಡಿಸಿ ಒಂದು ರೀತಿಯ ಬೆದರಿಕೆ ಹಾಕುವ (ಸೂಚನೆ) ರೀತಿಯಲ್ಲಿ ಅವರಿಗೆ ಅನುಕೂಲ ವಾಗುವ ರೀತಿಯಲ್ಲಿ ಜನರನ್ನು ಒಪ್ಪಿಸಿದರು.

ಇದನ್ನು ಅರಿತ ಸಮಿತಿಯು ಪ್ರೇಮ ನಗರ ಸ್ಲಂನ [illegible] ಭೇಟಿ ಮಾಡಿ ಈ ಅಕ್ರಮ ಕಟ್ಟಡ ನಿರ್ಮಾ[illegible] ಕಾಮಗಾರಿಯ ವಾಸ್ತವವನ್ನು ವಿವರಿಸಿದೆವು. ಪರಿಸ್ಥಿತಿ ಅರಿತ ಅವರು ಆ ಕೂಡಲೇ ಭೂ[illegible]ಮಾಲೀಕರಿಗೆ ನೋಟೀಸ್ ಜಾರಿಗೊಳಿಸಿದರು. ಹಂತ ಹಂತದ ಹೋರಾಟ ನಡೆದು, ನಗರಸಭ[illegible] ಸದಸ್ಯರ ಆಡಳಿತ ಕೊನೆಗೊಂಡು ಜಿಲ್ಲಾಧಿಕಾರಿಗ[illegible] ಅಧಿಕಾರಕ್ಕೆ ಬರುವ ಸುಸಂದರ್ಭ[illegible] ನಿರೀಕ್ಷೆಯಲ್ಲಿದ್ದ ನಮಗೆ ಜಿಲ್ಲಾಧಿಕಾರಿಗ[illegible] ಕುಂದುಕೊರತೆ ಸಭೆಯದ್ದೇ ಅವಕಾಶ ಎದುರು ನೋಡುವಂತಾಯಿತು.

9-2-2007ರಂದು ನೀರಿನ ಟ್ಯಾಂಕ್ ಒಡೆದು ಕಟ್ಟಡ ಕಟ್ಟಿದ ಜಗದೀಶ್ ಪುರೋಹಿತ್ ಎಂಬಾತನಿಗೆ ನೋಟೀಸ್ ಜಾರಿಗೊಳಿಸಲು ಪೌರಾಯುಕ್ತರನ್ನು ಕೇಳಲಾಗಿ ಅದು ಕೂಡ ಫಲಿಸಿದೆ. ಒಟ್ಟಾರೆ ಪ್ರೇಮನಗರ ಕೊಳಗೇರಿಯಲ್ಲಿ ಭೂಮಾಲೀಕರ ಅಟ್ಟಹಾಸ ಇಷ್ಟರಮಟ್ಟಿಗೆ ನಿಗ್ರಹವಾಗಿದೆ. ಮುಂದಿನ ದಿನಗಳಲ್ಲಿ ಏನಾಗುತ್ತದೋ ಎಂಬುದು ನಗರಸಭೆಯಲ್ಲಿ ನಡೆಯುವ ಜಿಲ್ಲಾಧಿಕಾರಿಗಳ ಕುಂದುಕೊರತೆ ಸಭೆಯಲ್ಲಿ ತಿಳಿಯಲಿದೆ. ಅಲ್ಲಿಯವರೆಗೂ ಬೇರೆ ದಾರಿಯಿಲ್ಲದೇ ಸ್ಲಂಜನರೆಲ್ಲರೂ ಕಾದು ನೋಡಬೇಕಿದೆ.

ಸ್ಲಂ ಜಗತ್ತು.

ದೇವದಾಸಿ ಪ್ರಕರಣ: ಅಧಿಕಾರಿಗಳ ಮೇಲೆ ಕ್ರಮ

ಪ್ರಜಾವಾಣಿ ವಾರ್ತೆ

ಹೊಸಪೇಟೆ: ಹೊಸದಾಗಿ ದೇವದಾಸಿ ಪ್ರಕರಣ ಪತ್ತೆಯಾದಲ್ಲಿ ಆಯಾ ಜಿಲ್ಲೆಯ ಸಮಾಜ ಕಲ್ಯಾಣ ಉಪನಿರ್ದೇಶಕರನ್ನು ಮತ್ತು ಸಿಡಿಪಿಒ ಗಳನ್ನು ನೇರ ಹೊಣೆ ಮಾಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವ ಎಚ್.ಕೆ. ಕುಮಾರಸ್ವಾಮಿ ತಿಳಿಸಿದರು.

ತಾಲ್ಲೂಕಿನ ನಾಗೇನಹಳ್ಳಿ ಗ್ರಾಮದ ಬಾಲ ದೇವದಾಸಿ ಅಂಬಿಕಾ ಮನೆಗೆ ಶನಿವಾರ ರಾತ್ರಿ ಭೇಟಿ ನೀಡಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪದ್ಧತಿ ಬಗ್ಗೆ ಜನರಲ್ಲಿ ಜಾಗೃತಿ ಇಲ್ಲ. ಅದಕ್ಕೆ ದೇವದಾಸಿ ಪದ್ಧತಿ ಚಾಲ್ತಿಯಲ್ಲಿದೆ. ಜನರಲ್ಲಿ ಜಾಗೃತಿ ಮೂಡಿಸಲು ಕಾರ್ಯಕ್ರಮ ಹಾಕಿಕೊಳ್ಳುವಂತೆ ಅಧಿಕಾರಿಗಳಿಗೆ ಆದೇಶ ಹೊರಡಿಸಲಾಗಿದೆ ಎಂದರು.

ಬಡತನ, ಅನಕ್ಷರತೆ, ಮೂಢನಂಬಿಕೆ, ಕಂದಾಚಾರಗಳು ದೇವದಾಸಿ ಪದ್ಧತಿಗೆ ಕಾರಣವಾಗಿದೆ. ಅಂಗನವಾಡಿ ಕಾರ್ಯಕರ್ತೆಯರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಗಳು ಜನರಿಗೆ ತಿಳಿವಳಿಕೆ ಮೂಡಿಸುವುದರ ಜತೆಗೆ ನಿಯಂತ್ರಣಕ್ಕೆ ಹೆಚ್ಚಿನ ಕಾಳಜಿವಹಿಸಬೇಕು. ಇನ್ನು ಮುಂದೆ ದೇವದಾಸಿ ಪದ್ಧತಿಯ ಹೊಸ ಪ್ರಕರಣಗಳು ಪತ್ತೆಯಾದರೆ, ಅಧಿಕಾರಿಗಳನ್ನೇ ಹೊಣೆ ಮಾಡಲಾಗುತ್ತದೆ ಎಂದು ಹೇಳಿದರು.

ಸಮಾಲೋಚನೆ: ಬಾಲ ದೇವದಾಸಿ ಪದ್ಧತಿಗೆ ಒಳಗಾದ ಬಗ್ಗೆ ಪತ್ರಿಕೆಯಲ್ಲಿ ವರದಿ ಬಂದ ಹಿನ್ನೆಲೆಯಲ್ಲಿ ಅಂಬಿಕಾಳ ಜತೆ ಸುದೀರ್ಘ ಸಮಾಲೋಚನೆ ನಡೆಸಿ ಹೇಳಿಕೆ ಪಡೆದುಕೊಂಡಿದ್ದೇನೆ. ಅವಳು ದೇವದಾಸಿ ಆಗಿರುವುದನ್ನು ಅಲ್ಲಗಳೆದಿದ್ದಾಳೆ ಎಂದರು.

ಅವಳು ದೇವದಾಸಿ ಅಲ್ಲ ಎಂದ ಮೇಲೆ ಅವಳಿಗೇಕೆ ಆಶ್ರಯ ಮನೆ, ಪಡಿತರ ಚೀಟಿ, ಉಚಿತ ಶಿಕ್ಷಣ ಸೌಲಭ್ಯ, ಉದ್ಯೋಗ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದ್ದಾರೆ ಎಂಬ ಪತ್ರಕರ್ತರ ಪ್ರಶ್ನೆಗೆ , ಅವಳ ಮನೆಯ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ಬಡ ದಲಿತ ಬಾಲಕಿಯಾಗಿರುವುದರಿಂದ ವಿಶೇಷ ಗಮನ ಹರಿಸಿ ಸೌಲಭ್ಯ ನೀಡಲಾಗಿದೆ ಎಂದು ಉತ್ತರಿಸಿದರು.

ಇಂತಹ ನೂರಾರು ಬಡ ದಲಿತ ಮಕ್ಕಳು ಜಿಲ್ಲೆಯಲ್ಲಿವೆ. ಅವರಿಗಿಲ್ಲದ ಕಾಳಜಿ ಇವಳಿಗೇಕೆ ಎಂದರೆ, ಅಂತಹ ಮಕ್ಕಳ ಬಗ್ಗೆ ಬೆಳಕಿಗೆ ಬಂದರೆ ಅವರಿಗೂ ಸೌಲಭ್ಯ ಒದಗಿಸಲು ಸರ್ಕಾರ ಸಿದ್ಧವೆಂದ ಅವರು, ದೇವದಾಸಿ ಪಟ್ಟಿಯಲ್ಲಿರದ ಇನ್ನೂ 28 ದೇವದಾಸಿಯರು ನಾಗೇನಹಳ್ಳಿಯಲ್ಲಿ ಗುರುತಿಸಲಾಗಿದೆ. ಅವರೆಲ್ಲಾ ಅವಿದ್ಯಾವಂತರಾಗಿದ್ದು, ಅವರಿಗೆ ಸರ್ಕಾರದ ಆಶ್ರಯ, ಉದ್ಯೋಗಿನಿ, ಅಮೃತ ಯೋಜನೆ, ದೇವದಾಸಿ ಪುನರ್ವಸತಿ ಸೌಲಭ್ಯ ಯೋಜನೆಯಡಿ ಸಹಾಯ ಮಾಡಲಾಗುತ್ತದೆ ಎಂದರು.

ಗ್ರಾಮದಲ್ಲಿ 600 ಮನೆಗಳಿದ್ದು, ಅದರಲ್ಲಿ 200 ಮನೆಗಳು ದಲಿತರಿಗೆ ಸೇರಿವೆ. ಗ್ರಾಮದ ಜನರ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ನಡೆಸುವಂತೆ ತಹಶೀಲ್ದಾರರಿಗೆ ಸೂಚನೆ ನೀಡಲಾಗಿದೆ. ಸದ್ಯದಲ್ಲಿಯೇ "ಮಾದರಿ ಗ್ರಾಮ" ಯೋಜನೆಯಡಿ ಎಲ್ಲ ಸೌಲಭ್ಯ ನೀಡಿ ಗ್ರಾಮವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಭಾಗ್ಯಲಕ್ಷ್ಮಿ ಯೋಜನೆಗಾಗಿ 166 ಕೋಟಿ ರೂಗಳನ್ನು ತೆಗೆದಿರಿಸಲಾಗಿದೆ. ಮಕ್ಕಳ ದಾಖಲಾತಿ ಮಾಡು ಪ್ರಕ್ರಿಯೆಯನ್ನು 12 ತಿಂಗಳಿನಿಂದ 15 ತಿಂಗಳಿಗೆ ವಿಸ್ತರಿಸಲಾಗಿದ್ದು, ಈಗಾಗಲೇ ಒಂದುವರೆ ಲಕ್ಷ ಫಲಾನುಭವಿಗಳನ್ನು ಗುರುತಿಸಲಾಗಿದೆ ಎಂದರು.

ಕೊಪ್ಪಳ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಯು. ಬಸವರಾಜ್, ಹೊಸಪೇಟೆ ಸಿಡಿಪಿಒ ಹಾವಿಕರ್ ಉಪಸ್ಥಿತರಿದ್ದರು.

ಬಜೆಟ್‌ನಲ್ಲಿ ಪ್ರತ್ಯೇಕ ಹಣ ನಿಗದಿಪಡಿಸಲು ಆಗ್ರಹ

ದೇವದಾಸಿಯರ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಮಲಾಪುರ: ಹೊಸಪೇಟೆ ತಾಲ್ಲೂಕಿನ ಸಾವಿರಾರು ದೇವದಾಸಿ ಮಹಿಳೆಯರು ಶನಿವಾರ ಪ್ರತಿಭಟನಾ ಪ್ರದರ್ಶನ ನಡೆಸಿ ತಮ್ಮನ್ನು ತೀವ್ರ ರೀತಿಯ ಅನ್ಯಾಯಕ್ಕೊಳಗಾದರೆಂದು ಪರಿಗಣಿಸಿ, ಪ್ರತ್ಯೇಕ ಹಣವನ್ನು ಬಜೆಟ್‌ನಲ್ಲಿ ನಿಗದಿಪಡಿಸಬೇಕು ಹಾಗೂ ಎಲ್ಲಾ ರೀತಿಯ ಉದ್ಯೋಗ ನೀಡಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ರಾಜ್ಯ ದೇವದಾಸಿ ಮಹಿಳೆಯರ ವಿಮೋಚನಾ ಸಂಘ ಶನಿವಾರ ಹೊಸಪೇಟೆಯಲ್ಲಿ ಬೃಹತ್ ಪ್ರತಿಭಟನಾ ಮೆರವಣಿ ಆಯೋಜಿಸಿತ್ತು.

ತಾಲ್ಲೂಕು ಕಚೇರಿಯ ಮುಂದೆ ವಾರದಿಂದ ಕುಳಿತಿದ್ದ ಧರಣೆ ಸ್ಥಳದಿಂದ ಹೊರಟ ಮೆರವಣಿಗೆಯು ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿ ಅಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟು. ನಂತರ ಉಪ ವಿಭಾಗಾಧಿಕಾರಿ ಬಿ.ಪಿ. ಅಡ್ನೂರ್ ಅವರಿಗೆ ಮನವಿ ಸಲ್ಲಿಸಿತು. ಈ ಪ್ರತಿಭಟನಾ ಮೆರವಣಿಗೆಯಲ್ಲಿ ಹೊಸಪೇಟೆ ನಗರ ಸೇರಿದಂತೆ ತಾಲ್ಲೂಕಿನ ವಿವಿಧ ಗ್ರಾಮಗಳಿಂದ ಎರಡು ಸಾವಿರಕ್ಕೂ ಅಧಿಕ ದೇವದಾಸಿಯರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮೆರವಣಿಗೆಯನ್ನು ಉದ್ಘಾಟಿಸಿದ ಕೃಷಿ ಕೂಲಿಕಾರರ ಸಂಘದ ರಾಜ್ಯ ಮುಖಂಡ ಮಾತನಾಡಿ, ಸರ್ಕಾರವು ಮೂರು ತಿಂಗಳಲ್ಲಿ ದೇವದಾಸಿ ಗಣತಿ ಕಾರ್ಯ ನಡೆಸಿ ಪ್ರತಿಯೊಬ್ಬ ದೇವದಾಸಿ ಮಹಿಳೆಗೆ ಪ್ರಮಾಣ ಪತ್ರ ನೀಡಬೇಕು. ಸ್ವಂತ ಉದ್ಯೋಗ ನಡೆಸಲು ಅನುಕೂಲ ಮಾಡಿಕೊಡಬೇಕು. ದೇವದಾಸಿ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಹಾಗೂ ಉದ್ಯೋಗವಕಾಶ ನೀಡಬೇಕು ಎಂದು ಆಗ್ರಹಿಸಿದರು.

ಉಪ ವಿಭಾಗಾಧಿಕಾರಿ ಕಚೇರಿ ಬಳಿ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ದೇವದಾಸಿ ಮಹಿಳೆಯರ ವಿಮೋಚನಾ ಸಂಘದ ತಾಲ್ಲೂಕು ಅಧ್ಯಕ್ಷೆ ಕೆ. ನಾಗರತ್ನಮ್ಮ, ಗೌರವಾಧ್ಯಕ್ಷ ಎ. ಕರುಣಾನಿಧಿ, ಕಾರ್ಯಾಧ್ಯಕ್ಷ ಎಲ್. ಮಂಜುನಾಥ ಮಾತನಾಡಿ, ಸರ್ಕಾರವು ದೇವದಾಸಿ ವಿಮೋಚನೆಗೆ ಸರಿಯಾದ ಕಾರ್ಯಕ್ರಮ ರೂಪಿಸಿಲ್ಲ. ತಕ್ಷಣ ಪುನರ್ ಸಮೀಕ್ಷೆ ನಡೆಸಿ ಎಲ್ಲಾ ದೇವದಾಸಿಯರಿಗೆ ವಯಸ್ಸಿನ ಮಿತಿ ಹಾಕದೆ ಮಾಸಿಕ 750 ರೂ. ಮಾಸಾಶನ ನೀಡಬೇಕು ಎಂದು ಒತ್ತಾಯಿಸಿದರು.

ದೇವದಾಸಿಯರ ಮದುವೆ: ದೇವದಾಸಿಯರನ್ನು ಮದುವೆಯಾದವರಿಗೆ 1ಲಕ್ಷ ರೂ. ಪ್ರೋತ್ಸಾಹಧನ ಘೋಷಿಸಬೇಕು ಎಂದರು.

ಇದರಲ್ಲಿ ಶೇ.50ರಷ್ಟು ಹಣವನ್ನು ದೇವದಾಸಿ ಮಕ್ಕಳ ಹೆಸರಲ್ಲಿ ಬ್ಯಾಂಕಿನಲ್ಲಿ ಠೇವಣಿ ಇರುವಂತೆ ಕ್ರಮ ಕೈಗೊಳ್ಳಬೇಕು ಎಂಬ ಬೇಡಿಕೆ ಸೇರಿ ಒಟ್ಟು 12ಬೇಡಿಕೆಗಳನ್ನು ಉಪ ವಿಭಾಗಾಧಿಕಾರಿ ಬಿ.ಪಿ. ಅಡ್ನೂರ್ ಅವರಿಗೆ ಸಲ್ಲಿಸಲಾಯಿತು.

ಮನವಿ ಸ್ವೀಕರಿಸಿದ ಅಡ್ನೂರ್, ಸರ್ಕಾರದ ಗಮನಕ್ಕೆ ಈ ವಿಷಯ ತರುವುದಾಗಿ ತಿಳಿಸಿದರು.

ಈ ಹೋರಾಟದ ನೇತೃತ್ವವನ್ನು ಸಂಘದ ಪ್ರಧಾನ ಕಾರ್ಯದರ್ಶಿ ದುರ್ಗಾಕೋಟೆ ಹಾಗೂ ಎಸ್‌ಎಫ್‌ಐ ಹಾಗೂ ಡಿವೈಎಫ್‌ಐ ಮತ್ತು ಸಿಐಟಿಯು ಸಂಘಟನೆಗೆ ಸೇರಿದ ಭಾಸ್ಕರ ರೆಡ್ಡಿ, ಸುರೇಶ ಚವ್ಹಾಣ್, ಕೆ. ರಮೇಶ, ಜಿ.ವಿ. ರಮೇಶ್, ಹುಳ್ಳಿ ಪ್ರಕಾಶ್ ಮತ್ತಿತರರು ವಹಿಸಿದ್ದರು.

ನೂರಾರು ಅಂಬಿಕಾಗಳು: ಅಪ್ರಾಪ್ತ ವಯಸ್ಸಿನಲ್ಲಿಯೇ ದೇವದಾಸಿ ಪದ್ಧತಿ ಅನಿಷ್ಟಕೂಪಕ್ಕೆ ಬಿದ್ದಿರುವ ಹೊಸಪೇಟೆ ತಾಲ್ಲೂಕಿನ ನೂರಾರು 'ಅಂಬಿಕಾ'ಗಳು 'ನಾವು ದೇವದಾಸಿಯರು. ನಮಗೂ ಉದ್ಯೋಗಾವಕಾಶ ನೀಡಿ, ಈ ಅನಿಷ್ಟ ಪದ್ಧತಿಯಿಂದ ಮುಕ್ತಿ ಮಾಡಿ' ಎಂದು ಆಗ್ರಹಿಸಿದರು.



ದಲಿತ ಜೀತಗಾರ್ತಿ

ಸೆಪ್ಟೆಂಬರ್, 13, 2003 ವಿಶ್ವ ಯೋಧಾ

ಮನುಷ್ಯನ ಹೊಲಿಗೆ ಇನ್ನು ಜೀವಂ

...ಲೆಗೆ ಹೋಗುವುದು ಪ್ರಥಮವಾಗಿತ್ತು, ...ಂದು ನಂಬಿದ್ದೆವು. ಆದರೆ ವಾಸ್ತವವಾಗಿ ...ಲ್ಲಿತ್ತು. ಆಟಪಾಠದಲ್ಲಿ, ನೀರು ಕುಡಿಯು ಆರಾಮವಾಗಿರಲೆಂದೋ, ಅಥವಾ ... ನಮ್ಮಿಬ್ಬರನ್ನು

ಜಾತಿಯ ನಮ್ಮ ಕ್ಲಾಸಿನ ಮಕ್ಕಳು ನಾವು ದೂರದಿಂದಲೇ

ಮಹಾರಾಯ? ಇದ...

...ಿದ್ದ ಶಾಲೆ. ಸರಕಾರ ...ಿದೆಯೆಂದು ಮಾರ ...ಿಗೆ ಬರಹೇಳಿದರು. ...ಯಲ್ಲಿಯೇ ಅಂಗಡಿ ...ಕ್ಷಣರು. ಸುಮಾರು ...ನರ ಮನೆಯನ್ನು ...ು.

...ಲು ನಮ್ಮ ಪಾಲಿನ ...ಗೆ ಹೊಂದಿಕೊಳ್ಳದೆ ...ಕೊಂಡು ಹೋಗ ...ಸಲ ಮಕ್ಕಳ ಅಪ ...



ಮ... ದ... ದ... ಅ... ಹ... ತ... ಹ... ಹ... ದ...

ಅ... ತ... ವ...

ಲಂಕೇಶ್ ವಿಶೇಷಾಂಕ 2006



ಹೊಸಪೇಟೆಯಲ್ಲಿ ಶನಿವಾರ ಪೌರಸೇವಾ ನೌಕರರು ತಮ್ಮ ಬೇಡಿಕೆಗಳ ಈಡೇರಿಕೆಗೆ ಸರ್ಕಾರದ ಮೇಲೆ ಒತ್ತಡ ತರಬೇಕೆಂದು ಒತ್ತಾಯಿಸಿ ಶಾಸಕ ಎಚ್.ಆರ್. ಗವಿಯಪ್ಪ ಅವರ ಮನೆ ಮುಂದೆ ಧರಣಿ ನಡೆಸಿದರು

22. 7. 07.
ಪ್ರಜಾವಾಣಿ.

ಶಾಸಕ ಎಚ್.ಆರ್. ಗವಿಯಪ್ಪ ಅವರ ಮನೆ ಮುಂದೆ ಪ್ರತಿಭಟನೆ

ಶೀಘ್ರ ಬೇಡಿಕೆ ಈಡೇರಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಹೊಸಪೇಟೆ: ತಮ್ಮ ಬೇಡಿಕೆಗಳನ್ನು ಆದಷ್ಟು ಬೇಗ ಇತ್ಯರ್ಥಗೊಳಿಸಲು ವಿಧಾನಸಭೆಯಲ್ಲಿ ಧ್ವನಿ ಎತ್ತಬೇಕೆಂದು ಒತ್ತಾಯಿಸಿ ಶಾಸಕ ಎಚ್.ಆರ್. ಗವಿಯಪ್ಪ ಅವರ ಮನೆ ಮುಂದೆ ಪೌರಸೇವಾ ನೌಕರರು ಶನಿವಾರ ಧರಣಿ ನಡೆಸಿದರು.

ಜುಲೈ 16ರಿಂದ ಅನಿರ್ದಿಷ್ಟ ಕಾಲ ಮುಷ್ಕರ ಆರಂಭಿಸಲಾಗಿದ್ದು. ನೌಕರರ ಎಲ್ಲ ಬೇಡಿಕೆಗಳನ್ನು ಸರ್ಕಾರ ಈಡೇರಿಸಲು ಮುಂದಾಗುತ್ತಿಲ್ಲ. ನಮ್ಮ ಎಲ್ಲ ಬೇಡಿಕೆಗಳಿಗೆ ಪರಿಹಾರ ದೊರೆಯುವವರೆಗೆ ಹೋರಾಟ ಮುಂದುವರಿಸಲಾಗುತ್ತದೆ ಎಂದು ಪ್ರತಿಭಟಕಾರರು ತಿಳಿಸಿದರು.


ನಗರಾಭಿವೃದ್ಧಿ ಸಚಿವರು ರಾಜ್ಯ ಸಂಘದ ಪದಾಧಿಕಾರಿಗಳ ಜತೆ ಚರ್ಚೆ ನಡೆಸಿ ಐದನೇ ವೇತನ ಆಯೋಗ ಜಾರಿಗೆ ಆದೇಶಿಸಿದ್ದಾರೆ. ಇನ್ನು ಕೆಲವು ಬೇಡಿಕೆಗಳ ಈಡೇರಿಕೆಗೆ ಭರವಸೆ ನೀಡಿದ್ದಾರೆ. ಸರ್ವೋಚ್ಚ ನ್ಯಾಯಾಲಯದ ಪರತ್ತಿಗೆ ಒಳಪಡದ ದಿನಗೂಲಿ ನೌಕರರನ್ನು ಕಾಯಂಗೊಳಿಸಿ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವ ಅಧಿಕಾರವನ್ನು ಮುಖ್ಯಮಂತ್ರಿಗಳಿಗೆ ನೀಡಿದ್ದಾರೆ.

ಅದೇ ರೀತಿ ಇನ್ನೊಂದು ಪ್ರಮುಖ ಬೇಡಿಕೆಯಾದ ಸ್ವಚ್ಛತೆಗೆ ಟೆಂಡರ್ ಕೊಡುವ ಪದ್ಧತಿ ರದ್ದುಗೊಳಿಸಬೇಕೆಂಬುದನ್ನು ಈಡೇರಿಸಲು ಸಚಿವರು ಕಾಲಾವಕಾಶ ಕೋರಿದ್ದಾರೆ. ಕೂಡಲೇ, ತಾವುಗಳು ಈ ಬೇಡಿಕೆ ಸೇರಿದಂತೆ ಭರವಸೆ ನೀಡಿದ ಎಲ್ಲ ಬೇಡಿಕೆಗಳನು ಶೀಘ್ರಗತಿಯಲ್ಲಿ ಇತ್ಯರ್ಥಗೊಳಿಸಲು ಸರ್ಕಾರ ಹಾಗೂ ಮುಖ್ಯಮಂತ್ರಿಗಳ ಮೇಲೆ ಒತ್ತಡ ತರಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಮನವಿಯನ್ನು ಪೌರಸೇವಾ ನೌಕರರ ಸಂಘದ ಜಿಲ್ಲಾಧ್ಯಕ್ಷ ಎಸ್. ಅಜಿತ್‌ಸಿಂಗ್ ಶಾಸಕರ ಪರವಾಗಿ ಅವರು ಆಪ್ತ ಸಹಾಯಕರಿಗೆ ನೀಡಿದರು. ನೌಕರರ ಸಂಘದ ಆನಂದಕುಮಾರ್, ಗುರುಪ್ರಸಾದ್, ತಾಲ್ಲೂಕು ಅಧ್ಯಕ್ಷ ಓಬಳೇಶಪ್ಪ, ಜಿ. ನೀಲಕಂಠ, ದೇವೇಂದ್ರಪ್ಪ, ಕೆ ಹೊನ್ನೂರಮ್ಮ, ಲಕ್ಷ್ಮಮ್ಮ, ಪೆದ್ದಕ್ಕ ಸೇರಿದಂತೆ ನೂರಾರು ನೌಕರರು ಧರಣಿಯಲ್ಲಿ ಪಾಲ್ಗೊಂಡಿದ್ದರು.



...ಲಪಲ್ಲಿಯ ದಲಿತರ ಕಗ್ಗೊಲೆ



...ಪತ್ತೆಯತ್ತ ರೈತ



ಸಂ ಜನರ ಜಾಗದಲ್ಲಿ ನಡೆಯುತ್ತಿರುವ ಕಾಮಗಾರಿ

ಲಂಕೇಶ್ 18.4.07.

ಸ್ಲಮ್ ದಲಿತರ ನೆತ್ತಿಯ ಮೇಲೆ ತೂಗುಕತ್ತಿ

ಹೆಚ್ಚುಕಡಿಮೆ ಅರ್ಧಶತಮಾನ ಮಂಡ್ಯವನ್ನು ಆಳಿದ ಮಾಜಿ ಶಾಸಕ ಆತ್ಮಾನಂದನ ಕುಟುಂಬ ಮಂಡ್ಯವನ್ನೆಲ್ಲಾ ಹಿಂಡಿ, ಹೀರಿ ಕೊಬ್ಬಿ ಹೋಯಿತು. ಮಂಡ್ಯ ಅವನತಿಯತ್ತ ಸಾಗಿದರೆ ಆತ್ಮಾನಂದನ ಕುಟುಂಬ ಅಭಿವೃದ್ಧಿಯತ್ತ ಸಾಗಿತು–ಇದು ಅವರದರ ನಡುವಿರುವ ತಾರ್ಕಿಕ ಸಂಬಂಧ. ಈ ಕುಟುಂಬವು ತಮ್ಮ ಆಳ್ವಿಕೆಯ ಅವಧಿಯಲ್ಲಿ ಬರೋಬ್ಬರಿ 35 ಸ್ಲಮ್‌ಗಳನ್ನು ಮಂಡ್ಯಕ್ಕೆ ಕೊಡುಗೆಯಾಗಿ ನೀಡಿತು! ಅಂತಹ ಕೊಳಗೇರಿಗಳಲ್ಲಿ ಆರ್‌ಟಿಓ ಕಚೇರಿ ಎದುರಿನ ದಲಿತರ ಸ್ಲಮ್ಮೂ ಒಂದು. ~~[illegible]~~

ಲಂಕೇಶ್ 18.4.2007

ಹಂದಿ ಕಾಯುವ ಚಿಣ್ಣರು



ಪ್ರಜಾವಾಣಿ 10.6.2007.



ಪ್ರಜಾವಾಣಿ 10.6.2007

ಗೌಡರ ಮನೆಯಲ್ಲಿ ಜೀತಕ್ಕಿರುವ ಮಗು

ಹಸುಗೂಸು ಸಾವು

ಕಂಪ್ಲಿ, ಮೇ ...೧೮– ಕುರುಗೋಡಿನ ...
...ೀ ಎಂಬುವವರು ಇಲ್ಲಿ ಬುಧವಾರ ಮಾರಾಟ...
...ಯತ್ನಿಸಿದ ಹಸುಗೂಸು ಗುರುವಾರ ಮೃತಪಟ್ಟಿ...
ಮಗುವನ್ನು ಮಾರಲು ಯತ್ನಿಸಿದ ಹುಸೇ...
...ಹಿಳೆಯರು ಮತ್ತು ಪೊಲೀಸರು ಬುದ್ಧಿವಾ...
...ರೂರಿಗೆ ಹೊರಡಲು ಸಹಕರಿಸಿ ಬಸ್ ಹತ್ತಿ...
...ರೆ ಕಂಪ್ಲಿಯಿಂದ ಸ್ವಲ್ಪ ದೂರ ಹೋಗಿ ಬಸ...
...ಳಿದು ... ಂದಿದ್ದಳು. ಕೂಸಿಗೆ ಎದೆ ...
... ...ತಪಟ್ಟಿ... ದು ...ಸೇನ...

೬ ಫೋಟೊ ಚಿತ್ರಗಳು



ದಲಿತ ವಾಡ್ಯೆಯ ಗುಡಿಸಲು



ಕಬ್ಬು ಹೊರೆಯನ್ನು ಹೊತ್ತು ಹೋಗುತ್ತಿರುವುದು



ಕಬ್ಬು ಕಡಿಯುತ್ತಿರುವುದು.



ಕಳೆ ತೆಗೆಯುತ್ತಿರುವುದು



ಮೈನಿಂಗ್ ಕಲ್ಲನ್ನು ಪುಡಿ ಮಾಡುತ್ತಿರುವುದು.



ಡಿಗ್ಗಿಂಗ್ ಮಾಡಿದ ಹೊಂಡವನ್ನು ಜರಡಿಹಿಡಿಯುತ್ತಿರುವುದು.



ಹೊಂಡವನ್ನು ಪುಡಿ ಮಾಡಲು - ಮಷಿನ್ ಗಳು
ತಯಾರಾಗುತ್ತಿರುವುದು.



ಡಿಗ್ಗಿಂಗ್ ಮಾಡುತ್ತಿರುವುದು.

ಕೃಪೆ: ಸ್ವತಃ.



ತರಕಾರಿ ಮಾರುತ್ತಿರುವುದು



ಹೂಗಳು ಮಾರುತ್ತಿರುವುದು.



ಬಿಂದಿಯನ್ನು ತಲೆಗೆ ಸಾಗಿಸುತ್ತಿರುವುದು.



ಹಾಲು ಮಾರಾಟ



ಕಸ ಬಾಚುತ್ತಿರುವ ಜಾಡಮಾಲಿ ಮಹಿಳೆ



ಚಿಂದಿ ಆಯುತ್ತಿರುವುದು.



ಲಾರಿಗೆ ಕಸ ತುಂಬುತ್ತಿರುವ ಜಾಡಮಾಲಿ ಮಹಿಳೆಯರು



ಕಸ ತೆಗೆಯುತ್ತಿರುವ ಜಾಡಮಾಲಿ ಮಹಿಳೆ.









ಶ್ರೀ ಶಕ್ತಿ ಸಂಘದ ಮಹಿಳೆ ಮನೆ ಮನೆಯಿಂದ ಕಸ ಸಂಗ್ರಹಿಸಿದು
ಕೊಂಡು ಹೋಗುತ್ತಿರುವ ಮಹಿಳೆ



ನಿಂಬೆಹಣ್ಣು ಮಾರುತ್ತಿರುವುದು.



ಹಣ್ಣು ಮಾರುತ್ತಿರುವುದು



ಚಿಂದಿ ಆಯುತ್ತಿರುವುದು